ನೇಮಿಚಂದ್ರ ಕವಿಕೃತ

ನೇಮಿನಾಥ ಪುರಾಣಂ

ಗದ್ಯಾನುವಾದ : ಆರ್. ವಿ. ಕುಲಕರ್ಣಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ನೇಮಿಚಂದ್ರ ಕವಿಕೃತ

ನೇಮಿನಾಥ ಪುರಾಣಂ

ಗದ್ಯಾನುವಾದ

ಆರ್. ವಿ. ಕುಲಕರ್ಣಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮

NEMICHANDRA KAVIKRITA NEMINATHA PURANAM -
Original with prose rendering by: R.V. Kulakarni
Published by : Kannada Sahitya Parishat
Pampa Mahakavi Road, Chamarajapet, Bangalore - 560 018
Pages : 378+viii; Price : **80-00,** 2001

ಮುದ್ರಣದ ವರ್ಷ : ೨೦೦೧

ಬೆಲೆ : ಎಂಬತ್ತು ರೂಪಾಯಿಗಳು

© ಹಕ್ಕುಗಳನ್ನು ಕಾಯ್ದಿರಿಸಿದೆ

ಪ್ರಕಟಣ ಸಮಿತಿ

ಅಧ್ಯಕ್ಷರು
ಎನ್. ಬಸವಾರಾಧ್ಯ

ಸಂಚಾಲಕರು
ಡಾ. ಸಿ. ವೀರಣ್ಣ

ಸದಸ್ಯರು

ಡಾ. ಕೆ.ವಿ. ಚಂದ್ರಣ್ಣಗೌಡ
ಬಿ.ಎನ್. ಸತ್ಯನಾರಾಯಣರಾವ್
ಅ.ರಾ. ಮಿತ್ರ
ಎಲ್ಲೇಗೌಡ ಬೆಸಗರಹಳ್ಳಿ
ಬಿ.ಆರ್. ಪೋಲೀಸ್ ಪಾಟೀಲ
ಶಾಂತಾದೇವಿ ಮಾಳವಾಡ
೬೮ನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಭಾಷೆ, ಸಂಸ್ಕೃತಿ, ನಾಡು-ನುಡಿಯ ಸಂರಕ್ಷಣೆ, ಸಂವರ್ಧನೆಗಾಗಿ ಶ್ರಮಿಸುತ್ತಿರುವ ಏಕೈಕ ಸಂಸ್ಥೆ. ಸುಮಾರು ೮೫ ವರ್ಷಗಳ ದೀರ್ಘಕಾಲದ ಇತಿಹಾಸವಿರುವ ಪರಿಷತ್ತು ಅನೇಕ ರೀತಿಗಳಲ್ಲಿ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿದೆ. ಅವುಗಳಲ್ಲಿ ಅತ್ಯುತ್ತಮ ಸಾಹಿತ್ಯ ಕೃತಿಗಳ ಪ್ರಕಟಣೆ ಕಾರ್ಯ ಪ್ರಧಾನವಾದುದಾಗಿದೆ. ಈ ಹಿಂದಿನ ಹಲವಾರು ಮಹನೀಯರ ಪ್ರಯತ್ನದ ಫಲವಾಗಿ ಸುಮಾರು ೧೦೦೦ ಕೃತಿಗಳನ್ನು ಪರಿಷತ್ತು ಹೊರತಂದಿದೆ. ಈ ಕೃತಿಗಳು ಸಾಹಿತ್ಯ ಕ್ಷೇತ್ರದ ಎಲ್ಲ ಪ್ರಕಾರಗಳಿಗೂ ಸಂಬಂಧಿಸಿವೆ.

ನೇಮಿಚಂದ್ರ ಹನ್ನೆರಡನೆಯ ಶತಮಾನದ ಉತ್ತರಾರ್ಧದಲ್ಲಿದ್ದ ಪ್ರತಿಭಾಶಾಲಿ ಕವಿಗಳಲ್ಲೊಬ್ಬ. ಈತ ತನಗಿಂತ ಪ್ರಾಚೀನ ಕವಿಗಳಾಗಿದ್ದ ಒಂದನೆಯ ಗುಣವರ್ಮ (೯೦೦), ಪಂಪ (೯೪೨-೪೫), ಪೊನ್ನ (೯೫೦), ರನ್ನ, (೯೯೩-೧೧೦೭) ರ ಮಾರ್ಗಾನುಯಾಯಿಯಾಗಿದ್ದು ಅವರಂತೆ ಆಗಮಿಕ

ಹಾಗೂ ಲೌಕಿಕ 'ಪ್ರಕಾರ'ಗಳಿಗೆ ಸಂಬಂಧಿಸಿದ 'ನೇಮಿನಾಥ ಪುರಾಣ' ಹಾಗೂ 'ಲೀಲಾವತಿ'ಗಳನ್ನು ಬರೆದಿದ್ದಾನೆ. ಈತನ ನೇಮಿನಾಥಪುರಾಣ ಅಪೂರ್ಣವಾಗಿದ್ದು ಲನೆಯ ಆಶ್ವಾಸದವರೆಗೂ ಕೃತಿ ಲಭ್ಯವಿದೆ.. ಹೀಗಾಗಿ ಈ ಕೃತಿಗೆ 'ಅರ್ಧನೇಮಿ ಪುರಾಣ' ಎಂಬ ಹೆಸರು ಪ್ರಚಲಿತದಲ್ಲಿದೆ.

ನೇಮಿಚಂದ್ರ ತನ್ನ ಕೃತಿಗಳಲ್ಲಿ ಹೆಸರಿನ ವಿನಃ ಮತ್ತಾವ ಸಂಗತಿಗಳನ್ನೂ ತಿಳಿಸಿಲ್ಲ. ಕೃತಿಗಳ ಅಂತ್ಯದಲ್ಲಿ ಕಾಲ ಸೂಚನೆಯಿಲ್ಲ. ಕನ್ನಡದ ಪ್ರಾಚೀನ ಕವಿಗಳಲ್ಲಿ ಯಾರನ್ನು ಸ್ತುತಿಸಿಲ್ಲ. ಕೇವಲ ಪ್ರಾಕೃತ-ಸಂಸ್ಕೃತ ಭಾಷೆಗಳಲ್ಲಿ ಕೃತಿ ರಚಿಸಿರುವ ಗೃಧ್ರ ಪಿಂಛಾಚಾರ್ಯ, ಕೊಂಡ ಕುಂದಾಚಾರ್ಯ, ಕವಿ ಪರಮೇಶ್ವರ (ಕವಿ ಪರಮೇಷ್ಠಿ), ವೀರಸೇನ, ಜಿನಸೇನ ಹಾಗೂ ಗುಣಭದ್ರದೇವರನ್ನು ಉಲ್ಲೇಖಿಸಿದ್ದಾನೆ.

ನೇಮಿಚಂದ್ರ ಕನ್ನಡ-ಸಂಸ್ಕೃತ-ಪ್ರಾಕೃತ ಮೊದಲಾದ ಭಾಷೆಗಳಲ್ಲಿ ನಿಷ್ಣಾತ. ಈತನಿಗೆ 'ಚತುರ್ಭಾಷಾ ಕವಿಚಕ್ರವರ್ತಿ' ಎಂಬ ಬಿರುದಿರುವ ಸಂಗತಿ ಗಮನಾರ್ಹ. ಈತ ಸಾಹಿತ್ಯ-ವ್ಯಾಕರಣ -ಸ್ಯಾದ್ವಾದಗಳಲ್ಲಿ ಪೂರ್ಣ ಪರಿಣತಿ ಹೊಂದಿದ್ದನು. ಅಲ್ಲದೆ ಸಂಗೀತ-ನೃತ್ಯಗಳ ಬಗೆಗೆ ಇವನಿಗೆ ಖಚಿತ ಜ್ಞಾನವಿತ್ತು.

ಈತ ಕನ್ನಡದಲ್ಲಿ 'ನೇಮಿನಾಥ ಪುರಾಣ'ವನ್ನು ಬರೆಯುವ ವೇಳೆಗೆ ಗುಣವರ್ಮನ (ಸು. ೯೦೦) 'ಹರಿವಂಶ' ಚಾವುಂಡರಾಯನ (೯೭೮), 'ತ್ರಿಷಷ್ಟಿ ಲಕ್ಷಣ ಮಹಾಪುರಾಣ' (ಚಾವುಂಡರಾಯ ಪುರಾಣ) ಹಾಗೂ ಕರ್ಣಪಾರ್ಯನ (ಸು. ೧೧೪೦) 'ನೇಮಿನಾಥ ಪುರಾಣ'ಗಳು ರಚಿತವಾಗಿದ್ದವು. ಇವುಗಳ ಪ್ರಭಾವ ಈತನ ಕೃತಿಯ ಮೇಲಾಗಿರುವ ಸಾಧ್ಯತೆಗಳಿವೆ. ಅಲ್ಲದೆ ಇವನ ಕಿರಿಯ ಸಮಕಾಲೀನನಾದ ರುದ್ರಭಟ್ಟ 'ಜಗನ್ನಾಥ ವಿಜಯ'ವನ್ನು ಚಂಪೂವಿನಲ್ಲಿ ರಚಿಸಿದ್ದಾನೆ.

ಪ್ರೊ. ಕೆ.ಜಿ. ಕುಂದಣಗಾರರು "ಈತ ಲೀಲಾವತಿ ಬರೆಯುವಲ್ಲಿ ಸಂಸ್ಕೃತದ 'ಬಾಣಾಸುರಾಖ್ಯಾನ', ಸ್ವಪ್ನವಾಸವದತ್ತ' (ಭಾಸಕೃತ), 'ಕಾದಂಬರಿ' (ಬಾಣಕೃತ); ವಿಕ್ರಮೋರ್ವಶೀಯ (ಕಾಳಿದಾಸಕೃತ) ಗಳ ಪರಿಣಾಮವಿದೆಯೆಂದು" ತಿಳಿಸಿದ್ದಾರೆ. ಅಲ್ಲದೆ ಡಾ. ಆ. ನೇ ಉಪಾಧ್ಯೆಯವರು "ನೇಮಿಚಂದ್ರನ ಲೀಲಾವತಿಯಲ್ಲಿ ಪ್ರಾಕೃತ ಭಾಷೆಯ ಕೃತಿ 'ಲೀಲಾವಈ' ಯ ಪ್ರಭಾವ ಆಗಿದೆಯೆಂದು" ಹೇಳಿರುವರು. ಡಾ. ಅವಳೀಕರರು ರಾಜಶೇಖರ (೯ ನೇ ಶತಮಾನ) ನ ಪ್ರಾಕೃತ ಸಟ್ಟಕ 'ಕರ್ಪೂರಮಂಜರಿ' ಹಾಗೂ 'ಲೀಲಾವತಿ'ಯಲ್ಲಿ ಬರುವ 'ಮಾಯಾಭು ಜಂಗನ' ಪ್ರಸಂಗವನ್ನು ಹೋಲಿಸಿ ರಾಜಶೇಖರನ ಪ್ರಭಾವವನ್ನು ಖಚಿತಗೊಳಿಸಿರುವರು. ಡಾ. ಕೆ. ಮಹಾಲಿಂಗಭಟ್ಟರು ಸುಬಂಧುವಿನ 'ವಾಸವದತ್ತೆ' ಯೊಡನೆ ನೇಮಿಚಂದ್ರನ 'ಲೀಲಾವತಿ'ಯ ತೌಲನಿಕ ಅಭ್ಯಾಸ ಮಾಡಿದ್ದಾರೆ.

ನೇಮಿಚಂದ್ರ ತನ್ನ ಕೃತಿದ್ವಯಗಳನ್ನು ರಟ್ಟರಾಜ ಲಕ್ಷ್ಮಣದೇವ (೧೧೬೫- ೧೧೯೦) ಹಾಗೂ ಹೊಯ್ಸಳ ವೀರಬಲ್ಲಾಳನ (೧೧೭೩-೧೨೨೦) ಪ್ರಧಾನಮಂತ್ರಿ ಹಾಗೂ ಸಜ್ಜೆವಳ್ಳ ಪದ್ಮನಾಭದೇವನ ಆಶ್ರಯ ಹಾಗೂ ಪ್ರೇರಣೆಗಳಿಂದ ರಚಿಸಿದ್ದಾನೆ. ಹೀಗಾಗಿ ಈತನ ಕಾಲವನ್ನು ಸುಮಾರು ೧೧೮೦ ಎನ್ನಬಹುದು.

ಈತನನ್ನು ಪಾರ್ಶ್ವ (೧೨೦೫), ಜನ್ನ (೧೨೦೯), ಕಮಲಭವ (೧೨೩೫), ಮಧುರ (೧೩೮೫), ಮಂಗರಸ (೧೫೦೯), ಬಾಹುಬಲಿ (೧೫೬೦) ತಮ್ಮ ಕೃತಿಗಳಲ್ಲಿ ಸ್ತುತಿಸಿದ್ದಾರೆ. ದೇವಚಂದ್ರ (೧೭೭೦-೧೮೪೧) ಈತನ ಕೃತಿಯು ಬಗಗೆ ಪ್ರಸ್ತಾಪಿಸಿದ್ದಾನೆ. ಈತನಿಗೆ ಕಲಾಕಾಂತ, ಕವಿರಾಜಮಲ್ಲ, ಕವಿಧವಳ, ಶೃಂಗಾರ ಕಾರಾಗೃಹ, ಸಾಹಿತ್ಯ ವಿದ್ಯಾಧರ, ಭಾರತೀ ಚಿತ್ತಚೋರ, ಚತುರ್ಭಾಷ ಕವಿಚಕ್ರವರ್ತಿ, ವ್ವಾಗ್ವಲ್ಲ ಕೀ ವೈಣಿಕ ಇತ್ಯಾದಿ ಬಿರುದುಗಳಿವೆ.

ನೇಮಿಚಂದ್ರನ ನೇಮಿನಾಥ ಪುರಾಣ ೨೨ನೆಯ ತೀರ್ಥಂಕರನಾದ ನೇಮಿನಾಥನ ಚರಿತೆ. ಇದರಲ್ಲಿ ಹರಿವಂಶ-ಕುರುವಂಶಗಳ ಕಥೆ ಒಂದರಲ್ಲೊಂದು ಕೂಡಿದೆ. ನೇಮಿನಾಥ ಪುರಾಣದಲ್ಲಿ ಜೈನಪರಂಪರೆಯ ಮಹಾಭಾರತದ ಕಥೆ ನಿರೂಪಣೆಗೊಂಡಿದೆ. ಇದರೊಡನೆ ಭಾಗವತದ ಕೃಷ್ಣ ಚರಿತೆಯು ಸಮಾವೇಶವಾಗಿದೆ. ಅಲ್ಲದೆ ನೇಮಿನಾಥನ ಕಾಲದ ವಾಸುದೇವ, ಪ್ರತಿವಾಸುದೇವ, ಕಾಮದೇವರುಗಳಾದ ಕೃಷ್ಣ-ಶಿಶುಪಾಲ, ವಸುದೇವ-ಪ್ರದ್ಯುಮ್ನರ ಕಥೆಗಳೂ ಬಂದಿವೆ.

ನೇಮಿನಾಥ ಪುರಾಣದ ಪದ್ಯಗಳನ್ನು ಮಲ್ಲಿಕಾರ್ಜುನ (೧೨೪೫) 'ಸೂಕ್ತಿ ಸುಧಾರ್ಣವ'ದಲ್ಲೂ ಸಾಳ್ವ (೧೪೮೫) 'ರಸರತ್ನಾಕರ' ದಲ್ಲೂ ಹಾಗೂ ಭಟ್ಟಾಕಳಂಕ (೧೬೦೪) 'ಕರ್ನಾಟಕ ಶಬ್ದಾನುಶಾಸನ'ದಲ್ಲೂ ಉಲ್ಲೇಖಿಸಿದ್ದಾರೆ. ಈತನ ವರ್ಣನಾ ಕೌಶಲ್ಯದ ಬಗೆಗೆ ವಾಮನ ಪ್ರಸಂಗ ಪ್ರತ್ಯಕ್ಷ ಸಾಕ್ಷಿಯಾಗಿದೆ.

ಮಧುರಕವಿ 'ಧರ್ಮನಾಥಪುರಾಣ'ದಲ್ಲಿ ಜನ್ನನೊಡನೆ ಈತನನ್ನು ಸೇರಿಸಿ "ನೇಮಿಜನ್ನಿಗರಿರ್ವರೆ ಕರ್ಣಾಟ ಕೃತಿಗೆ ಸೀಮಾಪುರುಷರ್' ಎಂದು ಕೈವಾರಿಸಿದ್ದಾನೆ. ಈ ಬಗೆಗೆ ಡಾ. ರಂ ಶ್ರೀ. ಮುಗಳಿ ಅವರ ಅಭಿಪ್ರಾಯ ಗಮನಾರ್ಹ. ಅವರಂತೆ 'ಮಾತಿನಲ್ಲಿ ಸತ್ಯಾಂಶವಿದೆಯಾದರೂ ನೇಮಿಯ ಮಟ್ಟಿಗೆ ಅದು ಅತ್ಯುಕ್ತಿ. ಪಂಪ, ರನ್ನರ ಸೀಮೆಯನ್ನು ಅವನು ಮುಟ್ಟಲಿಲ್ಲ. ಸೀಮೆಯ ಸನಿಯಕ್ಕೆ ಇದ್ದರೂ ಅಲ್ಲಿ ನಿಲ್ಲಲಿಲ್ಲ' ಎಂದಿದ್ದಾರೆ.

ಎನ್. ಬಸವಾರಾಧ್ಯ
ಅಧ್ಯಕ್ಷರು

7

ಪರಿವಿಡಿ

೧. ಪ್ರಥಮಾಶ್ವಾಸಂ	.....	೧
೨. ದ್ವಿತೀಯಾಶ್ವಾಸಂ	.....	೩೭
೩. ತೃತೀಯಾಶ್ವಾಸಂ	.....	೬೮
೪. ಚತುರ್ಥಾಶ್ವಾಸಂ	.....	೧೧೦
೫. ಪಂಚಮಾಶ್ವಾಸಂ	.....	೧೬೪
೬. ಷಷ್ಠಾಶ್ವಾಸಂ	.....	೨೧೩
೭. ಸಪ್ತಮಾಶ್ವಾಸಂ	.....	೨೫೨
೮. ಅಷ್ಟಮಾಶ್ವಾಸಂ	.....	೨೯೧
೯. ಪದ್ಯಗಳ ಅಕಾರಾದಿ	.....	೩೪೨
೧೦. ಶಬ್ದಕೋಶ	.....	೩೫೪
೧೧. ಜೈನ ಪಾರಿಭಾಷಿಕ ಶಬ್ದಗಳು	....	೩೬೮
೧೨. ವ್ಯಕ್ತಿ ನಾಮಗಳು	....	೩೭೧
೧೩. ಸ್ಥಳ ನಾಮಗಳು	....	೩೭೬

ನೇಮಿಚಂದ್ರ ಕವಿಕೃತ

ನೇಮಿನಾಥ ಪುರಾಣಂ

ಪ್ರಥಮಾಶ್ವಾಸಂ

* ಶ್ರೀಯಂ ಶ್ವೇತಾತಪತ್ರಂ ಪ್ರಥಿತ ವಿಭವಮಂ ಚಾಮರಂ ಬೋಧಮಂ ವಾ-
ಕ್ಛೀಯೂಷಂ ಪೆರ್ಮೆಯಂ ಭಾಸುರಸುರಪಟಹಂ ಶಕ್ತಿಯಂ ಸಿಂಹಪೀಠಂ
ಸ್ವಾಯತ್ತಂ ಮಾಳ್ಪಿನಂ ಭಾವಳಯ ವಿಲಸಿತಾಶೋಕಮಂದಾರವರ್ಷ
ಚ್ಛಾಯಾಚ್ಛನ್ನಾಂಗನಾದ್ಯಂ[೧] ತ್ರಿಭುವನ ವಿನುತಂ ನೇಮಿ ರಕ್ಷಿಕ್ಕೆ ನಮ್ಮಂ ೧

ಲೀಳಾಘ್ರಾ[೨]ತೈಕ ಮಲ್ಲೀಮುಕುಳಮೆನಿಸೆ ನಾಸಾಗ್ರದೊಳ್ ಪಾಂಚಜನ್ಯಂ
ವ್ಯಾಳಂ ಶಯ್ಯಾತಳಂ ಪೂಗಣೆಯದೊ[೩]ಣೆ ಧೃತಂ ಕರ್ವುವಿಲ್ಲಾಗೆ ಶಾರ್ಙ್ಗಂ
ಹೇಳಾಕೃಷ್ಟಂ [೪]ಸುಕೃಷ್ಟಂ[೪] ಹರಿಮದಹರನಪ್ಪಂತೆ ಕಂದರ್ಪದರ್ಪ
ವ್ಯ [೫]ಳೋಡ[೫] ಕ್ರೀಡೆಗಾದಂ ಕುಡುಗೆಮಗೆ ಮಹೋತ್ಸಾಹಮಂ ನೇಮಿನಾಥಂ ೨

ವಿಮಳಜ್ಞಾನಾಳಿನಾಳಂ ಸುಖಮಯ ಮಕರಂದಾಕರಂ ಮುಕ್ತಪಾಪ
ಭ್ರಮರಂ ಸಂಸಕ್ತ ಸೂಕ್ಷ್ಮೋಜ್ವಳಗುಣಮವಗಾಹಾವಹಂ ಭದ್ರಮುನ್ನಿ
ದ್ರಮಪಾರಂ ಪಾವನಪ್ರಸ್ತುತಗತಿ ಭುವನಾಗ್ರಸ್ಥಿತಂ ತೋರ್ಕೆ ನಿತ್ಯಂ
ನಮ[೬]ಗಿಂತ[೬]ತ್ಯಂತ ಲಕ್ಷ್ಮೀಲಲಿತಲಪನಮಂ ಸಿದ್ಧನೀರೇಜಷಂಡಂ ೩

೧. ಬೆಳ್ಗೊಡೆ ಶೋಭೆಯನ್ನೂ, ಚಾಮರವು ಯಶೋವೈಭವವನ್ನೂ, ವಚನಾಮೃತವು ಜ್ಞಾನವನ್ನೂ, ಶೋಭಿಸುವ ದೇವದುಂದುಭಿಗಳು ಘನತೆಯನ್ನೂ, ಸಿಂಹಾಸನವು ಸಾಮರ್ಥ್ಯವನ್ನೂ ಒಳಪಡಿಸಿಕೊಂಡಿರಲಾಗಿ ಪ್ರಭಾಮಂಡಲದಿಂದಲೂ, ಅಶೋಕವೃಕ್ಷ ಹಾಗೂ ಮಂದಾರ ವೃಕ್ಷಗಳ ಛಾಯೆಯಿಂದಲೂ ಕಂಗೊಳಿಸುವ ದೇಹವುಳ್ಳ ತ್ರಿಲೋಕ ಪೂಜ್ಯರಾದ ನೇಮಿನಾಥನು ನಮ್ಮನ್ನು ಕಾಪಾಡಲಿ.

೨. ಪಾಂಚಜನ್ಯವೆಂಬುದು ಮೂಗಿನ ತುದಿಗಿಟ್ಟುಕೊಂಡು ಆಘ್ರಾಣಿಸುವ ಒಂದು ಮಲ್ಲಿಗೆ ಹೂವೆನಿಸಿತು; ಸರ್ಪವಾಗಿದ್ದುದು ಹಾಸುಗೆಯಾಯಿತು; ಶಾರ್ಙವೆಂಬ ಬಿಲ್ಲನ್ನು ಮನ್ಮಥನ ಕೈಯಲ್ಲಿರುವ ಕಬ್ಬಿನ ಬಿಲ್ಲಿನಂತೆ ಲೀಲಾಜಾಲವಾಗಿ ಏರಿಸಿ ಹೆದೆಯನ್ನು ಪೂರ್ಣಾವಧಿಯಾಗಿ ಎಳೆದು ಬಿಟ್ಟನು. ಈ ರೀತಿಯಾಗಿ ಕೃಷ್ಣನ ಗರ್ವವನ್ನೂ, ಕಾಮನ ದರ್ಪವನ್ನೂ ಭಂಗಿಸುವುದು ಯಾವನಿಗೆ ಒಂದು ಆಟವಾಯಿತೊ ಅಂತಹ ನೇಮಿನಾಥನು ನಮಗೆ ಯಥೇಚ್ಛವಾಗಿ ಉತ್ಸಾಹವನ್ನೀಯಲಿ.

೩. ಪರಿಶುದ್ಧವಾದ ಸಮಸ್ತಜ್ಞಾನವೆಂಬ ನಾಳವುಳ್ಳ, ಆನಂದವೆಂಬ ಮಕರಂದಕ್ಕೆ

---

* ಪಂಚಗುರುಭ್ಯೋ ನಮಃ (ಕ, ಮ), ಶ್ರೀ ನೇಮಿಜಿನೇಶ್ವರನೇ ಗತಿ (ಕಾ)

॥ಶ್ಲೋಕ॥ ಶ್ರೀಮತೇ ನೇಮಿನಾಥಾಯ ನಮಸ್ಸ್ಯಾದ್ವಾದಸಿಂಧವೇ
ಯಸ್ಮಿನ್ನುದಿತಬೋಧೇಂದೌ ತ್ರೈಲೋಕ್ಯಂ ಲಕ್ಷಣಾಯತೇ ॥ (ಕ, ಮ)

೧ ದೊಂ (ಮ). ದಂ (ಕಾ, ಪ), ೨ ವ್ರಾ (ಕ), ೩ ನೊ (ಕ), ೪ ಸಪುಷ್ಪಂ (ಕ, ಮ, ಪ). ೫ ಲೀಢ (ಕಾ), ಳೋಳ (ಪ). ೬ ಗಿನ್ನ (ಕಾ).

ಆಚಾರಂ ಬಸದಾಗಿ ಸದ್ಗುಣಗಣಂ ಮುಂತಾಗಿ ಮಂತ್ರಕ್ರಿಯಾ
ಳೋಚಂ ನಿರ್ವ್ಯಭಿಚಾರಮಾಗೆ ಜಿನರಾಜಪ್ರಾಜ್ಯಸಾಮ್ರಾಜ್ಯದೊಳ್
[೧]ಸಾಚಿ[೧]ವ್ಯೋಚಿತ ಭಾಗ್ಯಲಕ್ಷ್ಮಿ ತಮಗೇಕಚ್ಛತ್ರಮಾಯ್ತೆಂದುಮಂ
ಬಾಚಾರ್ಯರ್ನಮಗೀವರಕ್ಕೆ ನಯನಿಕ್ಷೇಪಪ್ರಮಾಣಂಗಳಂ ೪

ಪುಸಿಯಂ ಪೊರ್ದದಿರಾರ್ತಮಂ ಬಿಸುಡು ಸಂಸಾರಕ್ಕೆ ಪೇಸೊಳ್ಪನ
ರ್ಚಿಸು ನೀಂ ದರ್ಶನಶುದ್ಧನಾಗು ದುರಘವ್ಯೂಹಕ್ಕೆ ಬೋಧಾಸಿಯಂ
ಮಸೆ ಲೇಸಾಗಿ ದಯಾತರಂಗಿಣಿ[೨]ಯೊಳೋ[೨]ಲಾಡೆಂದುಪಾಧ್ಯಾಯರೋ
ದಿಸಿ ಕೆಯ್ಗನ್ನಡಿಯಂದದಿಂ ಬೆಳಗುಗಂದಂದಿಂಗೆ ಮಚ್ಚಿತ್ತಮಂ ೫

ಶ್ರೋತ್ರಂಗಳ್ ಪರಮಾಗಮಕ್ಕೆ ಮತಿ ಸಮ್ಯಗ್ದರ್ಶನಜ್ಞಾನಚಾ
ರಿತ್ರಂಗಳ್ಗೆ ದಯಾವಲೋಕನಕೆ ಕಣ್ಗಳ್ಮಾಱುವೋದಂತೆ ಚಿ
ನ್ಮಾತ್ರಕ್ಕಂ ಪರಭಾವದೊಳ್ಪೊರೆಯದಿರ್ಪೇಕಾಂತಶಾಂತಂ ಕ್ಷಮಾ
ಪಾ[೩]ತ್ರಂ ಸಾಧುಸುಧಾಂಶುವಂಶಮೆಮಗೀಗತ್ಯಂತ ಸಂಶುದ್ಧಿಯಂ ೬

ನೆಲೆಯಾದ, ಪಾಪಾಗಳೆಂಬ ಭ್ರಮರಗಳಿಂದ ದೂರವಾದ, ಸೂಕ್ಷ್ಮವೂ ಉಜ್ವಲವೂ ಆದ ಗುಣಗಳೆಂಬ ಕೇಸರಗಳನ್ನು ಹೊಂದಿದ (ಮುಕ್ತಜೀವದಲ್ಲಿ ಅನೇಕ ಸಿದ್ಧಜೀವಿಗಳು ಸಂಕ್ರಮಿಸಲು ಅವಕಾಶವಿರುವ) 'ಅವಗಾಹ'ವೆಂಬ ಗುಣವನ್ನುಳ್ಳ ಸುಂದರವೂ, ವಿಕಸಿತವೂ, ಅನಂತವೂ, ಪವಿತ್ರಗತಿಯನ್ನುಳ್ಳುದೂ, ನಿತ್ಯವೂ ಆಗಿ ಮೂರುಲೋಕಗಳ ನೆತ್ತಿಯ ಮೇಲೆ ಶೋಭಿಸುವ ಸಿದ್ಧರೆಂಬ ಕಮಲ ಸರೋವರವು ನಮಗೆ ಮೋಕ್ಷಲಕ್ಷ್ಮಿಯ ಸುಂದರಮುಖವನ್ನು ತೋರಿಕೊಡಲಿ.

೪. ಆಚಾರವು ನಿತ್ಯ ಶುದ್ಧವಾಗಿ, ಸದ್ಗುಣಗಳು ಮಿಗಿಲಾಗಿ ಸಲಹೆ ಕೊಡುವ ಹಾಗೂ ಆಲೋಚಿಸುವ ಕ್ರಿಯೆ ನಿರ್ದೋಷವಾಗಿ ಇರುವುದರಿಂದ ಅರ್ಹಂತನ ಮಹಾಸಾಮ್ರಾಜ್ಯದಲ್ಲಿ ಸಚಿವಪಾದದ ಭಾಗ್ಯ ತಮಗೆ ಏಕಸ್ವಾಮ್ಯವಾಯಿತೆಂಬಂತಿರುವ ಆಚಾರ್ಯರು ನಮಗೆ ನಯ ನಿಕ್ಷೇಪ ಪ್ರಮಾಣಗಳನ್ನು ಅನುಗ್ರಹಿಸಲಿ.

೫. "ಸುಳ್ಳಿನ ಸಹವಾಸ ಮಾಡಬೇಡ, ಕಳವನ್ನು ತೊರೆದು ಬಿಡು, ಸಂಸಾರಕ್ಕೆ ಹೇಸಿಕೊ, ಒಳ್ಳೆಯತನ (ಸಜ್ಜನಿಕೆ)ಯನ್ನು ಗೌರವಿಸು, ಸಮ್ಯಗ್ದರ್ಶನದಿಂದ ನಿರ್ಮಲನಾಗು, ಪಾಪಗಳನ್ನು ಕತ್ತರಿಸಲು ಜ್ಞಾನಖಡ್ಗವನ್ನು ಮಸೆದುಕೊ, ದಯಾಸಮುದ್ರದಲ್ಲಿ ಚೆನ್ನಾಗಿ ಓಲಾಡು" ಎಂದು ತಿಳಿಹೇಳಿ ಉಪಾಧ್ಯಾಯರು ಕೈಗನ್ನಡಿಯಂತೆ ನನ್ನ ಚಿತ್ತವನ್ನು ಮೇಲಿಂದ ಮೇಲೆ ಬೆಳಗುತ್ತಿರಲಿ.

೬. ಶ್ರೇಷ್ಠವಾದ ಧರ್ಮಶ್ರವಣಕ್ಕೆ ಕಿವಿಗಳೂ, ಸಮ್ಯಗ್ದರ್ಶನ ಜ್ಞಾನ ಚಾರಿತ್ರಗಳಿಗೆ ಚಿತ್ತವೂ, ದಯಾದೃಷ್ಟಿಗೆ ಕಣ್ಣುಗಳೂ ಮೀಸಲಾದುವೊ ಏನೊ ಎಂಬಂತೆ ಅನ್ಯಕ್ಕೆ ಎರಗದಿರುವ ಏಕಾಂತವೂ, ಶಾಂತವೂ ಕ್ಷಮೆಯ ನೆಲೆಯೂ ಆಗಿರುವ ಸಾಧುಗಳೆಂಬ ಚಂದ್ರರು ನಮಗೆ ಪರಮ ಪರಿಶುದ್ಧಿಯನ್ನು ದಯಪಾಲಿಸಲಿ.

---

೧ ಶೌಚಿ (ಕ, ಮ), ಶೌಚ (ಪ), ೨ ಯಲೋ (ಕ,ಮ). ೩ ಕ್ಷಾ (ಕ),

ಆಯತಿಯಂ ನಿಮಿರ್ಚುವರುಹಂತರ ಕೇವಲಬುದ್ಧಿ ಸಿದ್ಧರಾ
ತ್ಮಾ[೧]ಯತಬೋಧಸಿದ್ಧಿ ವರಸೂರಿಗಳುತ್ತಮವೃತ್ತಿ ಸಂದುಪಾ
ಧ್ಯಾಯರೆ ಪಾವನಪ್ರತಿಭೆ ಸಾಧುಗಳಿರ್ದ ವಿಶುದ್ಧದರ್ಶನಾ
ಮ್ನಾಯಮತಿ ಪ್ರಕರ್ಷಮೆಮಗೀಗೆ ಸಮಸ್ತಮತಿಪ್ರಕಾಶಮಂ ೭

ಜವದಿಂ ಪಾಪದ ಪಿಂಡಿನಂತಳಿಕುಳಂ ಬಿಟ್ಟೋಡೆ ಕೊಟ್ಟಗ್ರ ಪ
ಲ್ಲವ ಘಾತಕ್ಕೆ ಸಮಸ್ತಯಕ್ಷತಿಳಕಂ ಸರ್ವಾಹ್ಣನಾರ್ದೇಜೆ ತೋ
ಱುವುದುಂ ಗಂಧಗಜೋತ್ತಮಂ ತುಟಿದು ಕಿಟ್ಟೀ[೨]ಡಾಡುಗಾನಂದಚಂ
ದ್ರವಿರು[೩]ದ್ಧಸ್ಥಿತಿಯಂ ವಿಶುದ್ಧ ಜಿನಧರ್ಮದ್ರೋಹಪಂಕೇಜಮಂ ೮

ನ[೪]ಲುನಗೆಯಂ ಶುಭಂಕರನೊಳಲ್ಲುಗುತುಂ ಕಡೆಗಣ್ಣೊಳಿತ್ತ ಜ
ಕ್ಕುಲಿಸುತುಮಾ ಪ್ರಭಾಕರನನೆಯ್ದೆ ಕೊನರ್ತು ತಳಿರ್ತು ಪೂತು ಕಾ
ಯ್ತಲಸದೆ ಕಲ್ಪಪಾದಪದ ತಣ್ಣೆಳಲಲ್ಲಿ ವಸಂತಲಕ್ಷ್ಮಿಯೋ
ಲ್ಪೆಲಸಿದ ಯಕ್ಷಿಯ [[೫]ಕ್ಷಿಯೆ] ಮಗೀಗೊಲವಿಂದೆ ದಯಾವಲೋಕನಂ ೯

ಸ್ಫುಟವಾದಂ ಪವಣಾಗೆ ಜಾತ್ಯಭಿನಯಂ ಚೆಲ್ವಾಗೆ ಸದ್ದರ್ಶನಂ
ದಿಟಮಾಗುತ್ತಿರೆ ಕೂಡೆ ಕೋಮಳ ಪದೋಪನ್ಯಾಸಮುದ್ದಂಡ ವಾ
ಕ್ಪಟುಗಳ್ ಸೋಲೆ ವಿಭೂಷಣಂ ತೊಳಗೆ ತತ್ಸ್ಯಾದ್ವಾದವಿದ್ಯಾನಟೀ
ಲಟಹಂ ರಂಜಿಸುತಿರ್ಕೆ ತಾರ್ಕಿಕಮುಖಾಂಭೋಜಾತರಂಗಾಗ್ರದೊಳ್ ೧೦

೭. ಮಹಿಮೆಯನ್ನುಂಟುಮಾಡುವ ಅರ್ಹಂತರ ಕೇವಲ ಜ್ಞಾನ, ಸಿದ್ಧರು ಆತ್ಮೀಕರಿಸಿಕೊಂಡಿರುವ ಬೋಧಸಿದ್ಧಿ, ಅರ್ಥವನ್ನೂ ವಿವರಿಸಿ ಹೇಳುವ ಪ್ರಾಜ್ಞರ ವ್ಯಾಖ್ಯಾನ, ಪ್ರಸಿದ್ಧವಾದ ಉಪಾಧ್ಯಯರ ಪೂಜ್ಯ ಪ್ರತಿಭಾಶಕ್ತಿ, ಸಾಧುಗಳಿರುವ ಶುದ್ಧ ದರ್ಶನ ಇವೆಲ್ಲವನ್ನೂ ಒಳಗೊಂಡ ಆಗಮ ಸಂಪ್ರದಾಯವು ನಮ್ಮ ಚಿತ್ತಕ್ಕೆ ಸಮಸ್ತ ಪ್ರಕಾಶವನ್ನು ಒದಗಿಸಲಿ.

೮. ಪಲ್ಲವಗಳಿಂದ ಹೊಡೆಯಲಾಗಿ ಪಾಪದ ಸಮೂಹದಂತೆ ದುಂಬಿಗಳ ಹಿಂಡು ಓಡಿಹೋದ ಮೇಲೆ ಯಕ್ಷೋತ್ತಮನಾದ ಸರ್ವಾಹ್ಣನು ಮೇಲೇರಿ ಕುಳಿತು ತೋರಿ ಕೊಟ್ಟೊಡನೆ ಶ್ರೇಷ್ಠವಾದ ಗಂಧಗಜವು ಆನಂದ ಚಂದ್ರನಿಗೆ ವೈರಿಯಾದ ಜಿನಧರ್ಮ ದ್ರೋಹವೆಂಬ ಕಮಲವನ್ನು ಕಿತ್ತು ಬಿಸಾಡುವುದು.

೯. ಶುಭಂಕರನ ಮೇಲೆ ನಲ್ನಗಯನ್ನು ಸೂಸುತ್ತಲೂ, ಪ್ರಭಾ (ಪ್ರಭಂ?) ಕರನನ್ನು ಕಡೆಗಣ್ಣೋಟದಿಂದಲೆ ಸಂತೋಷ ಪಡಿಸುತ್ತಲೂ, ಚಿಗುರು, ತಳಿರು, ಹೂಹಣ್ಣುಗಳಿಂದ ತುಂಬಿದ ಕಲ್ಪವೃಕ್ಷದ ತಂಪಾದ ನೆಳಲಲ್ಲಿ ವಸಂತಲಕ್ಷ್ಮಿಯಂತೆ ಕುಳಿತಿರುವ ಕೂಷ್ಮಾಂಡಿ ಯಕ್ಷಿಯ ಕಣ್ಣುಗಳು ನಮಗೆ ದಯಾದೃಷ್ಟಿಯನ್ನು ಅನುಗ್ರಹಿಸಲಿ, (ಪ್ರಭಾಕರ-ಶುಭಂಕರರು ಜೈನಸಿದ್ಧಾಂತದ ವಿದ್ವಾಂಸರು, ಪೂರ್ವಭವದಲ್ಲಿ ಅಗ್ನಿಲೆಯಾಗಿದ್ದ ಈ ಯಕ್ಷಿಗೆ ಅವರಿಬ್ಬರೂ ಮಕ್ಕಳಾಗಿದ್ದರು).

೧೦. [ಈ ಪದ್ಯದಲ್ಲಿ ನೃತ್ಯ ಹಾಗೂ ವಾದಗಳೆರಡನ್ನೂ ಶ್ಲೇಷೆಯಿಂದ

---

೧ ದಾ (ಕ, ಪ), ೨ ಟ್ಟಾ (ಮ). ೩ ಶು (ಮ). ೪ ಒ (ಕ, ಪ), ೫ ಕ್ಷರೆ (ಕ, ಶಾ, ಮ).

ಸಕಳಾಘೌಘಪತಂಗವಧ್ಯಶಿಲೆಯೊಳ್ ತತ್ಕೇವಲಜ್ಞಾನ ದೀ
ಪಿಕೆಯೊಳ್ ಮಂಗಳಕಾರಣಪ್ರಭೆಯೊಳಂತಾರ್ಧ್ವಾಂತವಿಚ್ಛಿತ್ತಿಗು
ತ್ಸುಕನೆಂ ಶುದ್ಧಮನಾತ್ಮಪಾತ್ರ ಗತಮಂ ಸುಸ್ನಿಗ್ಧಮಂ ಚಿತ್ತವ
ರ್ತಿಕೆಯಂ ಪತ್ತಿಸಿ ರಾಗದಿಂ ಬೆಳಗುವೆಂ ಬೋಧಾಮಳಜ್ಯೋತಿಯಂ ೧೧

ಜೀವನಮಂ ಜಳನಿಧಿಯೊಳ್
ತೀವಿದ ಮುಗಿಲಂತೆ ಜಿನವಚೋಮೃತಮಂ ಭ
ವ್ಯಾವಳಿಗೆ ಕಱೆದ ಗಣಧರ
ದೇವರ್ದಯೆಗೆಯ್ಗೆ ನಮಗೆ ಸಕಲಶ್ರುತಮಂ ೧೨

ಇದು ಚೋದ್ಯಂ ಜಿನಸಮಯದ
ಮೊದಲಿಗರೆನಿಸಿರ್ದ ಗೃದ್ಧಪಿಂಛಾಚಾರ್ಯ
ರ್ಮುದದಮೊದವೆ ಬರೆದ ತತ್ತ್ವಾ
ರ್ಥದ ಸೂತ್ರದ ವೃತ್ತಿಯಾದುದಱಿದವರ್ಗೆಲ್ಲಂ ೧೩

ವರ್ಣಿಸಲಾಗಿದೆ. ಒಂದನೆಯ ಅರ್ಥವನ್ನು ನೃತ್ಯಕ್ಕೂ ಎರಡನೆಯದನ್ನು ವಾದಕ್ಕೂ ಅನ್ವಯಿಸಿಕೊಳ್ಳಬೇಕು] ಸ್ಪಷ್ಟವಾದ 'ವಾದ' (೧ವಾದ್ಯಧ್ವನಿ. ೨ ತರ್ಕ) ಸಮರ್ಪಕವಾಗಿರಲು 'ಜಾತ್ಯಭಿನಯ' (೧. ಮೇಲ್ಮಟ್ಟದ ಅಭಿನಯ. ೨. ವರ್ಗಾನ್ವಯವಾದ ವಿಶ್ಲೇಷಣೆ) ಚೆಲುವಾಗಲು 'ಸದ್ದರ್ಶನ' (೧. ಉತ್ತಮವಾದ ದೃಷ್ಟಿವಿನ್ಯಾಸ. ೨. ಸಮ್ಯಗ್ದರ್ಶನ) ಪರಿಣಾಮಕಾರಿಯಾಗುತ್ತಿರಲು, ಕೋಮಲವಾದ 'ಪದೋಪನ್ಯಾಸ' (೧. ಹೆಜ್ಜೆಯಿಡುವ ವಿಲಾಸ. ೨. ಪದಪ್ರಯೋಗಗಳಿಂದ ಕೂಡಿದ ಉಪನ್ಯಾಸ) ದಿಂದ ವಾಕ್ಪಟುಗಳು ಸೋಲುವಂತೆ ಅಲಂಕಾರಗಳು ಮಿಗಿಲಾದ ಸ್ಯಾದ್ವಾದವಿದ್ಯೆಯೆಂಬ ನಟಿಯ ಬೆಡಗು ತಾರ್ಕಿಕರ ಮುಖಕಮಲವೆಂಬ ನೃತ್ಯರಂಗದಲ್ಲಿ ರಂಜಿಸುತ್ತಿರಲಿ.

೧೧. ಸಮಸ್ತ ಪಾಪಗಳೆಂಬ ಪತಂಗಗಳನ್ನು ಸುಟ್ಟುಹಾಕುವ, ಹಾಗೂ ಶುಭಕರವಾದ ಪ್ರಭೆಯುಳ್ಳ, ಕೇವಲ ಜ್ಞಾನವೆಂಬ ದೀಪಿಕೆಯಿಂದ ನನ್ನ ಒಳಗಿರುವ ಕತ್ತಲೆಯನ್ನು ಕಳೆದುಕೊಳ್ಳಲು ನಾನು ಉತ್ಸುಕನಾಗಿದ್ದೇನೆ. ನಿರ್ಮಲ ಹೃದಯವೆಂಬ ಪಣತಿಯಲ್ಲಿ ಸ್ನೇಹ ಸಮೃದ್ಧವಾದ ಚಿತ್ತವೆಂಬ ಬತ್ತಿಯನ್ನು ಹೊತ್ತಿಸಿ, ಜ್ಞಾನಜ್ಯೋತಿಯನ್ನು ಸಂತೋಷದಿಂದ ಬೆಳಗುವೆನು.

೧೨. ಮಳೆಗರೆದು ಕಡಲಲ್ಲಿ ನೀರನ್ನು ತುಂಬಿದ ಮೋಡಗಳಂತೆ ಭವ್ಯಜನಕ್ಕೆ ಜಿನವಾಣಿಯ ಅಮೃತವನ್ನು ಮಳೆಗರೆಯುವ ಗಣಧರದೇವರು ನಮಗೆ ಸಮಸ್ತ ಶ್ರುತಜ್ಞಾನವನ್ನು ಅನುಗ್ರಹಿಸಲಿ.

೧೩. ಜಿನಧರ್ಮಕ್ಕೆ ಮೊದಲಿಗರೆನಿಸಿದ ಗೃದ್ಧಪಿಂಛಾಚಾರ್ಯರು ಬರೆದ ತತ್ತ್ವಾರ್ಥಸೂತ್ರದ ವೃತ್ತಿಯೆ ಬಲ್ಲವರಿಗೆಲ್ಲ ಮಾರ್ಗದರ್ಶಕವಾಯಿತು. ಇದು ಸೋಜಿಗ (?).

ಧೈರ್ಯನಿಧಿ [೧]ಕುಂದ[೧]ಕುಂದಾ
ಚಾರ್ಯರ ಚರಣಂಗಳೊಲಿದು ನೆಲಮುಟ್ಟದ ತಾ
ತ್ಪರ್ಯಮನಱಿದೆಂ ನಿಜ ಸೌ
ಕರ್ಯಮದೆಂದಿರ್ಪುದೆ[೨]ನ್ನ ಮನದೊಳೆ ಸತತಂ ೧೪

ಜಿನರ ಪುರಾಣಂಗಳೊಳೊಂ
ದನೆ ಬರೆದೊಡೆ ಬರೆದೆವೆಂಬರೀ ಭುವನಂ ಜೇ
ಯೆನೆ ಬರೆದಿರಿಸಿದರಿರ್ಪ
ತ್ತುನಾಲ್ಕುಮಂ ಪೊಗೞೆ ಸುಕವಿಪರಮೇಶ್ವರರಂ ೧೫

ಸುಕವಿಪರಮೇಷ್ಠಿಗಳ ನಾ-
ಟ[೩]ಕವೆನಿಸಿದ ಭುವನವಂದ್ಯವರವಿದ್ಯಾತೀ
ರ್ಥಕರತ್ವಪುಣ್ಯಲಕ್ಷ್ಮಿ ಗ್ರೆ
ಸಕಲಶ್ರುತದೇವಿ ಯಕ್ಷಿ ಯಕ್ಷಂ ಬ್ರಹ್ಮಂ ೧೬

ಕುಂದದಿವರ್ಪೇೞ್ದೋದಿಂ
ಗೊಂದು ಮೊಗಂ ನೆಱೆಯದೆಂದು ಬಹುಮುಖನಾದಂ
ಸಂದ ಪಿತಾಮಹನೆನೆ ಸಲೆ
ಸಂದರ್ಜಿನಸೇನ ವೀರಸೇನಾಚಾರ್ಯರ್ ೧೭

ನೆಱೆಯಲ್ಮಹಾಪುರಾಣಮು
ನಜೆವಳವಡೆ ಪೇೞ್ದ ವದನಮಿರೆ ತಮಗೊಲ್ದಾ
ನೆಱಗೆ ಗುಣಭದ್ರದೇವರ
ಮಿಱುಪಂಘ್ರಿಗಳಿತ್ತವೆನಗೆ ಕವಿತೆಯನಣಕಂ ೧೮

೧೪. ಧೈರ್ಯಶಾಲಿಗಳಾದ ಕುಂದಕುಂದಾಚಾರ್ಯರ ಪಾದಗಳು ನೆಲವನ್ನು ಮುಟ್ಟದೆ ಇರುವುದೇಕೆಂಬುದರ ಮರ್ಮವನ್ನು ನಾನು ಅರಿತೆನು. ಅದು ನನ್ನ ಮನದಲ್ಲಿ ಸದಾ ನೆಲಸಿರುವುದು.

೧೫. ಜಿನಪುರಾಣಗಳಲ್ಲಿ ಒಂದನ್ನೇ ಬರೆದರೂ 'ಓಹೊ! ನಾನು ಬರೆದು ಬಿಟ್ಟೆನು ಎಂದು ಜನರು ಅಹಂಕರಿಸುವರು. ಈ ಲೋಕವೆಲ್ಲ ಹೊಗಳುವಂತೆ ಇಪ್ಪತ್ತು ನಾಲ್ಕು ಜಿನಪುರಾಣಗಳನ್ನೂ ಕವಿ ಪರಮೇಶ್ವರರು ಬರೆದಿಟ್ಟರು.

೧೬. ಸುಕವಿಗಳಾದ ಪರಮೇಷ್ಠಿಗಳ ನಾಟಕವೆನಿಸಿದ ಲೋಕಪೂಜ್ಯವಾದ ವಿದ್ಯಾತೀರ್ಥಕರತ್ವಪುಣ್ಯವೆಂಬ ಲಕ್ಷ್ಮಿಗ್ರೆ ಸಕಲ ಶ್ರುತದೇವಿಯೆ ಯಕ್ಷಿ, ಬ್ರಹ್ಮನೇ ಯಕ್ಷ.

೧೭. ನಿರಂತರವಾಗಿ ಇವರು ಹೇಳಿದುದನ್ನು ಓದಲು ತನಗೆ ಒಂದೇ ಮುಖ ಸಾಲದೆಂದು ಆ ಬ್ರಹ್ಮನು ನಾಲ್ಮೊಗನಾದನೊ ಏನೊ ಎಂಬಂತೆ ಜಿನಸೇನ-ವೀರಸೇನಾಚಾರ್ಯರು ಪ್ರಸಿದ್ಧರಾದರು.

೧೮. ತಮ್ಮ ಬಾಯಿಯಿಂದ ಮಹಾಪುರಾಣವನ್ನು ಜ್ಞಾನೋದಯವಾಗುವಂತೆ

೧ ಕುಂಡ (ಕ), ಕೊಂ (ಮ), ೨ ವೆ (ಕಾ, ಮ, ಪ). ೩ ರ್ದ (ಮ)

ಕಲಿಕಾಲದ ಜಿನರಂ ನ
ಮ್ರಲೋಕರಂ ಪುಷ್ಪದಂತಮಲಧಾರಿಗಳಂ
ಬಲಗೊಂಡು ಪಾಡಿ ಮಾಡುವೆ
ನಲಘು ಗುಣಸ್ತವನಪುಣ್ಯಪುಷ್ಪಾಂಜಲಿಯಂ ೧೯

ಲಪನಂ ಕಾರುಣ್ಯಮಂ ಕನ್ನಡಿಸೆ ಸಹಜ ಸಂಶುದ್ಧಿಯಂ ಮಾನಸಂ ತಾ[೧]
ನು[೧]ಪದೇಶಂಗೆಯ್ಕೆ ಸತ್ತ್ವಾವಳಿಗಭಯಸುಧಾಸಾರಮಂ ಸೂಸೆ ನೋಟಂ
ತಪಮಾವೈ[೨]ಧವ್ಯದೀಕ್ಷಾವಿಧಿಯೆನೆ ರತಿಗಾರ್ತೀಯೆ ಸಂದಿರ್ದ ಯೋಗೀಂ
ದ್ರಪದಾಂಭೋಜಂಗಳೊಳ್ ರಂಜಿಸುಗೆ ಮಧುರಮದ್ವಾಕ್ಯಪುಷ್ಪೋಪಹಾರಂ ೨೦

ಒಳಗಾದಳ್ ಶ್ರುತದೇವಿ ನೇಮಿಗೆ ಗುಣಶ್ರೀಮದ್ಗುಣಸ್ತೋತ್ರಮಂ
ಗಳಮಂತ್ರಂಗಳಿನಾಕೆಗೀ ಜಿನಕಥಾನಾಂದೀಮುಖಂ ಮುಖ್ಯಮಂ
ಗಳಮರ್ಹತ್ಪತಿ ಮಂಗಳಂ ಸಕಳ ಸಿದ್ಧರ್ಮಂಗಳಂ ಸಾಧುಮಂ
ಗಳಮರ್ಹನ್ಮುಖಚಂದ್ರಚಂಚದಮೃತಂ ಧರ್ಮಂ ಮಹಾಮಂಗಳಂ ೨೧

ಪರಮತಮತ್ತಹೈಹಯಮುಖಚ್ಯುತೆ ವಿಶ್ರುತಜೈನಶಾಸನಾ
ಮರಭುವನಪ್ರತಿಷ್ಠಿತೆ[೩] ವೃಷಾನುಭವೋಚಿತೆ ವತ್ಸಲತ್ವದಿಂ
ತೊರೆದ ಕುಚಂಬೊಲೊಪ್ಪುವ ಚತುರ್ವಿಧಭಾಷೆಯೊಳಂ ಸರಸ್ವತೀ
ಸುರಭಿ ನಿರಂತರಂ ಕಱೆಗೆ ಕಾಮಿತಮಂ ಕವಿರಾಜಮಲ್ಲನಾ ೨೨

ಹೇಳಿದ ಗುಣಭದ್ರ ದೇವರಿಗೆ ನಾನು ತಲೆಬಾಗಲಾಗಿ, ಅವರ ತೇಜಸ್ವಿಯಾದ ಪಾದಗಳು ನನಗೆ ಅತಿಶಯವಾದ ಕಾವ್ಯಶಕ್ತಿಯನ್ನು ದಯಪಾಲಿಸಿದುವು.

೧೯. ಕಲಿಕಾಲದ ಜಿನರೂ, ಲೋಕವಂದಿತರೂ ಆದ ಪುಷ್ಪದಂತ ಮಲಧಾರಿಗಳನ್ನು ಮೆಚ್ಚಿ ಸ್ತೋತ್ರರೂಪವಾದ ಪವಿತ್ರ ಪುಣ್ಯಾಂಜಲಿಯನ್ನು ಅವರಿಗೆ ಅರ್ಪಿಸುವೆನು.

೨೦. ದಯಾಪೂರ್ಣತೆಯನ್ನು ಬಿಂಬಿಸುವ ಕಣ್ಣು, ಸಹಜನಿರ್ಮಲತೆಯನ್ನು ಬೋಧಿಸುವ ಮನಸ್ಸು, ಸರ್ವಜೀವಾವಳಿಗೆ ಅಭಯಾಮೃತವನ್ನು ಮಳೆಗರೆಯುವ ದೃಷ್ಟಿ, ಕಾಮನ ಹೆಂಡತಿಗೆ ವೈಧವ್ಯ ದೀಕ್ಷೆಯನ್ನು ಕೊಡುವ ತಪಸ್ಸು-ಇವುಗಳನ್ನೊಡಗೊಂಡ ಮುನೀಂದ್ರರ ಪಾದಗಳಲ್ಲಿ ನನ್ನ ವಚನದ ಪುಷ್ಪಹಾರವು ಶೋಭಿಸುತ್ತಿರಲಿ.

೨೧. ನೇಮಿಗೆ ಶ್ರುತದೇವಿ ಅಧೀನಳಾದಳು, ಆಕೆಗೆ ಈ ಜಿನಕಥಾರಂಭ ಪ್ರಸಂಗದಲ್ಲಿ (ಕಾವ್ಯ) ಗುಣಗಳಿಂದ ಶ್ರೀಮಂತವಾದ ಗುಣಸ್ತೋತ್ರದ ಶುಭಮಂತ್ರಗಳಿಂದ ಮಂಗಳವನ್ನು ಹಾಡುತ್ತೇನೆ. ಅರ್ಹಂತರಿಗೆ ಮಂಗಳ; ಸಕಲ ಸಿದ್ಧರಿಗೆ ಮಂಗಳ; ಸಿದ್ಧರಿಗೆ ಮಂಗಳ; ಸಾಧುಗಳಿಗೆ ಮಂಗಳ; ಅರ್ಹಂತನ ಮುಖಚಂದ್ರದಿಂದ ಸೂಸುವ ಧರ್ಮಾಮೃತಕ್ಕೆ ಮಹಾಮಂಗಳ.

೨೨. ಅನ್ಯಮತಗಳಿಂದ ಸೊಕ್ಕಿದ ಕಾರ್ತವೀರ್ಯಾರ್ಜುನರ ಮುಖಗಳಿಂದ ದೂರವಾಗಿ, ಆನಂದದಾಯಕವಾದ ಜೈನಶಾಸನವೆಂಬ ಸ್ವರ್ಗಲೋಕದಲ್ಲಿ ಪ್ರತಿಷ್ಠಿತವಾದ

೧ ಕಣ್ಣು (ಕ, ಮ). ೨ ಮಂ (ಕ), ಮುಂ (ಮ) ೩ ತ (ಪ).

ಸಮನಿಸೆ ಪಡೆದವು ಜಿನಮುಖ
ಕಮಲಂಗಳ್ವರಸರಸ್ವತೀ ಸೌರಭಮಂ
ತಮಗೆಱಪ ನೇಮಿಚಂದ್ರ
ಭ್ರಮರಂಗುಟಿದಂತಿರದನವೇಗೆಯ್ದಪುದೋ (ವೋ?) ೨೩

ನೇಮಿಗೆ ಸಮಂತಭದ್ರ
ಸ್ವಾಮಿಯ ಸಮವಿಷಮ ಕವಿತೆಯ[1]ಕಲಂಕನ ವಿ
ದ್ಯಾಮಹಿಮೆ ಪೂಜ್ಯಪಾದ
ಸ್ವಾಮಿಯ ವಾಣೀವಿಳಾಸಮೀಗಭಿಮತಮಂ ೨೪

ಕವಿಕುಲಪತಿ ನೇಮಿಗೆ ತ
ನ್ನ ವಾಣಿಯಂ ಕುಡುಗೆ ನೇಮಿನಾಥಂ ತನಗೊ
ಪ್ಪುವ ತೊಡವಂ ಮಾಡಿಸಿದಂ
ಸುವರ್ಣಕಾಱಂಗೆ ಪೊನ್ನನಿಕ್ಕುವ ತೆಱದಿಂ ೨೫

ರುಚಿರಕಳಾಧರನಿಂ ನೇ
ಮಿಚಂದ್ರನಿಂ ಸತ್ಕವೀಶಚೂಡಾಮಣಿಯಿಂ
ಶುಚಿಪದಶಶಿಕಾಂತೋಪಲ
ನಿಚಯಂ ರಸಮೊಸರುತಿರ್ಪುದೇನಚ್ಚರಿಯೋ ೨೬

'ವೃಷ'ದ (೧. ವೃಷಭದ. ೨. ಧರ್ಮದ) ಅನುಭವಕ್ಕೆ ಯೋಗ್ಯಳಾದ ಸರಸ್ವತಿಯೆಂಬ ಕಾಮಧೇನು ವಾತ್ಸಲ್ಯದಿಂದ ತೊರೆದ ಮೊಲೆಗಳಂತೆ ಶೋಭಿಸುವ ನಾಲ್ಕು ಭಾಷೆಗಳಲ್ಲಿಯೂ ಕವಿರಾಜಮಲ್ಲನಾದ ನೇಮಿಚಂದ್ರನಿಗೆ ಅಭೀಷ್ಟವನ್ನು (ಹಾಲಿನಂತೆ) ಕರೆಯಲಿ (ಜಮದಗ್ನಿಋಷಿಯ ಬಳಿಯಿದ್ದ ಕಾಮಧೇನುವನ್ನು ಬಲಾತ್ಕಾರದಿಂದ ಎಳೆದೊಯ್ಯಲು ಕಾರ್ತವೀರ್ಯನು ಪ್ರಯತ್ನಿಸಿದಾಗ ಅದು ಅದೃಶ್ಯವಾಗಿ ಸ್ವರ್ಗವನ್ನು ಸೇರಿತೆಂದು ಪುರಾಣದ ಕಥೆಯಿದೆ).

೨೩. ತಮಗೆ ಬಂದೆರಗಿದ ನೇಮಿಚಂದ್ರನೆಂಬ ತುಂಬಿಗೆ ಜಿನಮುಖವೆಂಬ ಕಮಲಗಳು ಸರಸ್ವತೀರೂಪವಾದ ಪರಿಮಳವನ್ನೂ ಸಮೃದ್ಧವಾಗಿ ನೀಡಿದುವು.

(ಕೊನೆಯ ಚರಣದ ಅರ್ಥ ಸ್ಪಷ್ಟವಾಗಿಲ್ಲ.)

೨೪. ಸಮಂತಭದ್ರಸ್ವಾಮಿಗಳ ಸಮವಿಷಮ ಕವಿತ್ವವೂ, ಅಕಲಂಕದೇವರ ವಿದ್ಯಾಮಹಿಮೆಯೂ, ಪೂಜ್ಯಪಾದಸ್ವಾಮಿಗಳ ವಾಗ್ವಿಲಾಸವೂ ನೇಮಿಚಂದ್ರನಿಗೆ ತಂತಮ್ಮ ಗುಣಗಳನ್ನು ಅನುಗ್ರಹಿಸಲಿ.

೨೫. ತನಗೆ ಒಪ್ಪುವಂತಹ ಆಭರಣವನ್ನು ಮಾಡಿಸಿಕೊಳ್ಳುವವನು, ಅದನ್ನು ತಯಾರಿಸುವ ಅಕ್ಕಸಾಲಿಗೆ ಚಿನ್ನವನ್ನು ಕೊಡುತ್ತಾನೆ. ಅದೇ ಮೇರೆಗೆ (ತನ್ನ ಚರಿತ್ರೆಯನ್ನು ರಚಿಸುವ) ಕವಿರಾಜ ನೇಮಿಗೆ ನೇಮಿನಾಥ ತೀರ್ಥಂಕರನು ತನ್ನ ವಾಣಿಯನ್ನು ನೀಡಲಿ.

೨೬. ಕಲಾಸಂಪತ್ತಿನ ಸೊಗಸಿನಿಂದ 'ಕಲಾಧರ'ನೂ ಸತ್ಕವಿಗಳಲ್ಲಿ ಶ್ರೇಷ್ಠನೂ ಆದ ನೇಮಿಯೆಂಬ ಚಂದ್ರನಿಂದ ಪರಿಶುದ್ಧವಾದ ಪದಗಳೆಂಬ ಚಂದ್ರಕಾಂತ ಶಿಲೆಗಳು ರಸವನ್ನು ಒಸರುವುದು ಸಹಜವೇ, ಅದರಲ್ಲಿ ಆಶ್ಚರ್ಯವೇನು?

---

೧ ಮ(ಕ, ಮ).

ಈ ಕೇವಣಿಪನೆ ಜೈನ[೧] ಕ
ಥಾಕಾರಪರಾರ್ಘ್ಯರತ್ನಮಂ ನೇಮಿ ವಚಃ
ಶ್ರೀಕಟಕಂ ರತ್ನತ್ರಯ
ದೈಕಟಕಂ ಕಾಂತಶಬ್ದರುಚಿಕಾಂಚನದೊಳ್ ೨೭

ರಸಮೋ ರಸಾಯನಮೊ ಕೃ[೨]ತಿ
ವಸಂತಮೋ ಕಿವಿಗಳಮೃತಮೋ ನೇಮಿಯ ವಾಕ್
ಪ್ರಸರಮದಱಿಸಕದಿಂ ನಿ
ಪ್ಪೊಸತಾದುದು ಜಗಕೆ ನೇಮಿನಾಥಪುರಾಣಂ ೨೮

ಪರಿಭಾವಿಸೆ ಪೂರ್ವಾಪರ
ವಿರೋಧಮಿಲ್ಲದುದೆ ತಾಂ ಪುರಾಣಮದಂ ಮಾ [ಂ]
ಕರಿಸುವೊಡೇ ‘ನಿಟಿ’ಗಾಱರ
ಪರಪಿದ ಮಾತುಂ ಪುರಾಣಮಕ್ಕೆಮಗೇನೋ ೨೯

ಪ್ರಣುತ ಜಿನಚರಿತಮಂ ಲ
ಕ್ಷಣಮಿಲ್ಲದ ಕುಕವಿ ಕಬ್ಬದೊಳ್ಕಟ್ಟೆ ಮಹಾ
ಮಣಿಯಂ ಕರ್ಬೊನ್ನೊಳೆ ಕೇ
ವಣಿಸಿದ ತೆಱನಕ್ಕುಮಲ್ಲದಕ್ಕುಮೆ ಶುಭದಂ ೩೦

೨೭. ಸರಸ್ವತಿಯ ಕೈಗಡಗವೆನಿಸಿದವನೂ, ರತ್ನತ್ರಯದ ನಿರ್ಮಲ ಕಡಗವನ್ನು ತೊಟ್ಟವನೂ ಆದ ನೇಮಿಯ ಇಕ್ಷೊ ಜೈನಕಥೆಯೆಂಬ ಅಮೂಲ್ಯರತ್ನವನ್ನು ಸುಂದರವಾದ ಶಬ್ದರೂಪದ ಚಿನ್ನದಲ್ಲಿ ಕುಂದಣಿಸುವನು.

೨೮. ನೇಮಿಯ ವಾಣಿಯೆಂಬುದು ರಸವೊ, ಮಧುರವಾದ ರಸಾಯನವೊ, ಶ್ರುತಿ ಭೂಷಣವೊ, ಕರ್ಣಾಮೃತವೊ ಎನಿಸುವಂತಹುದು. ಅದರಿಂದಾಗಿ ನೇಮಿನಾಥ ಪುರಾಣವು ಜಗತ್ತಿನ ಹೊಚ್ಚಹೊಸತಾಗಿರುವುದು.

೨೯. ಚೆನ್ನಾಗಿ ಯೋಚಿಸಿ ನೋಡಿದಾಗ ಪೂರ್ವಾಪರವಿರೋಧವಿಲ್ಲದುದೇ ಪುರಾಣವೆನಿಸುತ್ತದೆ. ಹಾಗಲ್ಲವೆನ್ನುವುದಾದರೆ (ಪುರಾಣವನ್ನು) ಅಲ್ಲಗಳೆವವರು ಹರಡುವ ಮಾತೇ ಪುರಾಣವಾಗಲಿ, ಅದನ್ನು ತೆಗೆದುಕೊಂಡು ನಾವೇನು ಮಾಡೋಣ? (ಕರ್ಣನ ಹಾಗು ಪಾಂಡವರ ವಿಷಯದಲ್ಲಿ ಸಮುದ್ರಮಥನ ಮೊದಲಾದುವುಗಳ ವಿಷಯದಲ್ಲಿ ಜೈನೇತರ ವಿವರಣೆಗಳನ್ನೂ ಈ ಮಾತು ಸೂಚಿಸುತ್ತದೆ).

೩೦. ಪೂಜ್ಯವೂ ಪ್ರಸಿದ್ಧವೂ ಆದ ಜಿನಚರಿತ್ರೆಯನ್ನೂ ಲಕ್ಷಣವನ್ನರಿಯದ ಕುಕವಿಯೊಬ್ಬನು ಕಾವ್ಯವೆಂದು ರಚಿಸಿದರೆ, ಅತ್ಯಂತ ಶ್ರೇಷ್ಠವಾದ ರತ್ನವನ್ನು ಕಬ್ಬಿಣದಲ್ಲಿ ಕೂಡಿಸಿದಂತಾಗುವುದೇ ವಿನಾ ಅದೇನು ಶುಭಕರವಾದೀತೆ?

---

೧ + ಸು (ಕ), ೨ ಶ್ರು (ಕ). ೩ ಗಿಳಿ (ಕ), ನಿಲೆ (ಮ).

ಕಡು ಕಂಪಂ ಪಿಡಿಕೆಯ್ಸಬರ್ಕುಮೆ ಬಳಲ್ದೈತಂದ ತೆಂಗಾಳಿಯಂ
ಪಿಡಿಯಲ್ಬರ್ಕುಮೆ ತೃಷ್ಣೆ[೧]ಯೊಳ್[೧] ಕುಡಿತೆಯಂ ಕೊಂಡಚ್ಚವೆಳ್ದಿಂಗಳಂ
ಕುಡಿಯಲ್ಬರ್ಕುಮೆ ಕೊರ್ವಿತೆಂದು ತರುಣೀಸಂಭೋಗಸೌಖ್ಯಂಗಳಂ
ನುಡಿಯಲ್ಬರ್ಕುಮೆ ಬಾರ [ದಿ][೨]ಂತುಟು[೩] ವಲಂ ಕಾವ್ಯಾಮೃತಾಸ್ವಾದನಂ ೩೧

ಕಮಳಕ್ಕಾವಗಮಲ್ತು ಲಕ್ಷ್ಮಿಯಿರವಾಸ್ಯಾಬ್ಜಕ್ಕಮುಂಟಗ್ಗದಿಂ
ಪಮರ್ದಿಂಗೊಚ್ಚತಮಲ್ತು ಮತ್ತಿವರ ವಾಕ್ಪೀಯೂಷಪೂರಕ್ಕಮುಂ
ಟಮರರ್ಗರ್ಪಿತಮಲ್ತು ಸೌಖ್ಯಮಿವರೀ ಸಂಸೇವ್ಯಕಾವ್ಯಂಗಳಂ
ಸಮಸಂದಾಲಿಸುವರ್ಗಮುಂಟೆನಿಪರೀಗೊಳ್ಪಂ ಕವೀಂದ್ರೋತ್ತಮರ್ ೩೨

ಕುವಳಯದ[೪]ಲರಂ ಕೌಮುದಿ
ಯ ವಿಭವಮಂ ಕಂಡಕೊಂಡು ಕೊನೆವಂ ಕವಿಯೋ
ರವಿಯೋ ರವಿಕಾಣದುದಂ
ಕವಿ ಕಾಣ್ಬನೆನಿಪ್ಪ ವಚನಮೇಂ ತಪ್ಪುಗುಮೋ ೩೩

ಶ್ರೀಯನೊಲಿಸುವೊಡೆ ತಾಂ ಕವಿ
ನಾಯಕನೆನಿಸುವೊಡೆ ತನ್ನ ಕೃತಿ ಕಲ್ಪಾಂತ
ಸ್ಥಾಯಿಯೆನಿಸುವೊಡೆ ಬಲ್ಲರ
ಬಾಯಂ ಪೊಕ್ಕೋದಿ ಕಲ್ಗೆ ಕಪಿ ಸಕಲಮುಮಂ ೩೪

೩೧. ಅತಿಶಯವಾದ ಸುವಾಸನೆಯನ್ನು ಹಿಡಿದಿಡಲು ಸಾಧ್ಯವೇ? ಸೋತು ಬರುವ ಮೆಲುಗಾಳಿಯನ್ನು ಹಿಡಿದಿಡುವುದು ಸಾಧ್ಯವೇ? ನೀರಡಿಕೆಯಾಯಿತೆಂದು ಬೊಗಸೆಯೊಡ್ಡಿ ಬೆಳ್ದಿಂಗಳನ್ನು ಕುಡಿಯುವುದು ಸಾಧ್ಯವೇ? ಮಿಗಿಲಾಯಿತೆಂದು ಯುವತೀ ಸಂಭೋಗದ ಸೌಖ್ಯಗಳನ್ನು ನುಡಿದು ತೋರುವುದು ಸಾಧ್ಯವೆ? ಎಂದೂ ಸಾಧ್ಯವಾಗದು. ಕಾವ್ಯಾಮೃತದ ಆಸ್ವಾದನವೂ ಹಾಗೆಯೆ.

೩೨. ಲಕ್ಷ್ಮಿಗೆ ಸದಾ ನಿವಾಸವಾಗುವ ಭಾಗ್ಯ ಕಮಲಕ್ಕೆ ಇಲ್ಲ; ಆದರೆ ಇವರ ಮುಖಕಮಲಕ್ಕೆ ಅದು ಉಂಟು; ಅತ್ಯಧಿಕವಾದ ಸವಿ ಅಮೃತಕ್ಕೆ ಮಾತ್ರ ಮೀಸಲಾಗಿಲ್ಲ; ಇವರ ವಚನಾಮೃತಪ್ರವಾಹಕ್ಕೂ ಆ ಸವಿಯುಂಟು; ಸೌಖ್ಯವೆಂಬುದು ದೇವತೆಗಳಿಗೆ ಮಾತ್ರ ಸೀಮಿತವಲ್ಲ; ಇವರ ಆಪ್ಯಾಯಮಾನವಾದ ಕಾವ್ಯಗಳನ್ನು ಚಿತ್ತಗೊಟ್ಟು ಕೇಳುವವರಿಗೂ ಆ ಸೌಖ್ಯವುಂಟು - ಹೀಗೆ ಮಹಿಮಾವಂತರಾದ ಕವೀಂದ್ರರು ನಮಗೆ ಅನುಗ್ರಹವುಂಟುಮಾಡಲಿ.

೩೩. (ರಾತ್ರಿ ಅರಳುವ) ಕುವಲಯದ ವಿಕಾಸವನ್ನು ಬೆಳ್ದಿಂಗಳ ವೈಭವವನ್ನೂ ಕಂಡು ಮೆಚ್ಚಿ ಹೊಗಳುವವನು ಕವಿಯೋ ರವಿಯೋ ರವಿ ಕಾಣದುದನ್ನು ಕವಿ ಕಾಣುವನೆಂಬ ಮಾತು ಅದೇನು ಸುಳ್ಳಾದೀತೆ?

೩೪. ಲಕ್ಷ್ಮಿಯನ್ನು ಒಲಿಸಬೇಕಾಗಿದ್ದರೆ, ತಾನು ಕವಿಶ್ರೇಷ್ಠನಾಗಿಬೇಕಿದ್ದರೆ, ತನ್ನ ಕಾವ್ಯವು ಕಲ್ಪಾಂತದವರೆಗೆ ಉಳಿಯಬೇಕಾಗಿದ್ದರೆ, ಕವಿಯು ಬಲ್ಲವರ ಬಳಿ ಹೋಗಿ ಎಲ್ಲವನ್ನೂ ಕಲಿತುಕೊಳ್ಳಬೇಕು.

---

೧ ಯಿಂ (ಮ), ೨. ದೆ (ಕ, ಮ) ೩. ಟೆ (ಮ) ೪. ವ (ಕ, ಮ)

ಬಗೆಗೊಂಡೋದದೆ ಕೇಳದೆಲ್ಲ ಕಲೆಯಂ ಕಾವ್ಯಜ್ಞ[1]ರಿಂ ಕ[1]ಲ್ಲದ
ಬ್ಬಗದಿಂ ಕಟ್ಟಿದ ಕೆಟ್ ಕನ್ನಡದ ಕಾಳ್ಗಬ್ಬಂಗಳಂ [2]ಬಟ್ಟ[3] ಸಾ
ಮಿಗಳಂ ಕೇಳಿಸಿ ತಾಮೆ ತಮ್ಮ ಮನದೊಳ್ಸರ್ವಜ್ಞರೆಂದಿರ್ಪ ಕ
ಬ್ಬಿಗರುಂ ಕಬ್ಬಿಗರೆಂಬ ಲೆಕ್ಕದೊಳಗೇಂ ಭೂಭೃತ್ಸಭಾಭೂಷಣಂ[4] ೩೫

ನವರಸ ಪೂರ[4]ದೊಳ್ ಲಲಿತಬಿಂಬಿತ ಸರ್ವಪದಾರ್ಥದೊಳ್ಮಹಾ
ಕವಿಕುಳಸೇವ್ಯದೊಳ್ ಲಸದಳಂಕೃತಿಕಂಜನಿವಾಸದೊಳ್ ಜನೋ
ತ್ಸವಕರದೊಳ್ ಸರಸ್ವತಿ ಮನೋಮುದದಿಂ ಜಲಕೇಳಿಯಾಡುವಳ್
ಪುವಿಮಳ ನವ್ಯಕಾವ್ಯಕಮಳಾಕರದೊಳ್ ಕವಿರಾಜಮಲ್ಲನಾ ೩೬

ಧರೆ ಲೇಸೆಂಬಾಸೆಗಾಱಂ ಪರಪುರುಷ ಗುಣಾನ್ವೇಷದೊಳ್, ಸಯ್ಪುಗಾಱಂ
ಸಿರಿಯೊಳ್ ಕಟ್ಟಣ್ಮುಕಾಱಂ ವಿತತವಿತರಣೋತ್ಸಾಹದೊಳ್, ಗೆಲ್ಲಕಾಱಂ
ಪರವಾದಿವ್ರಾತದೊಳ್, ಬಿತ್ತರಿಪ ತುರಿಪಕಾಱಂ ಮಹಾಧರ್ಮದೊಳ್ಮ
ಚ್ಚರಕಾಱಂ ಭಾವಕೋತ್ಪಾದಕ ರಸಿಕ ಕವಿಸ್ತೋಮದೊಳ್ ನೇಮಿಚಂದ್ರಂ ೩೭

೩೫. ಚಿತ್ತಗೊಟ್ಟು ಓದದೆ, ಕೇಳದೆ, ಕಾವ್ಯಜ್ಞರಿಂದ ಕಲಿಯದೆ, ಸುಮ್ಮನೆ ಪ್ರಯಾಸ ಪಟ್ಟು ರಚಿಸಿದ ತಮ್ಮ ಕೆಟ್ಟ ಕನ್ನಡ ಕಾಡು ಕಾವ್ಯಗಳನ್ನು ಮುಖಸ್ತುತಿಕಾರರಿಗೆ ಓದಿ ಹೇಳಿ, ತಾವೆ ಸರ್ವಜ್ಞರೆಂದು ಭಾವಿಸಿಕೊಳ್ಳುವ ಕವಿಗಳು ರಾಜಸಭಾ ಭೂಷಣರಾದ ಕವಿಗಳ ಲೆಕ್ಕಕ್ಕೆ ಬರುವುದುಂಟೆ?

೩೬. ಹೊಸನೀರಿನಿಂದ ಸಮೃದ್ಧವಾಗಿ ತುಂಬಿ, ಸರ್ವವಸ್ತುಗಳನ್ನು ಚೆಲುವಾಗಿ ಪ್ರತಿಬಿಂಬಿಸುತ್ತ, ಮಹಾಜಲಪಕ್ಷಿಗಳಿಗೆ ಆಪ್ಯಾಯಮಾನವಾಗಿ, ಚೆಲುವಾದ ಕಮಲಗಳಿಂದ ಅಲಂಕೃತವಾಗಿ ಜನಾನಂದಕರವಾಗಿರುವ ಸರೋವರದಂತೆ, ಶೃಂಗಾರಹಾಸಾದಿ ನವರಸಗಳಿಂದ ಸಮೃದ್ಧವಾಗಿ ಸುಂದರವಾದ ಪಾದಗಳಲ್ಲಿ ಬಗೆಬಗೆಯಾದ ಅರ್ಥಗಳನ್ನು ಸೊಗಸಾಗಿ ಬಿಂಬಿಸುತ್ತ, ರಸಜ್ಞರಾದ ಮಹಾವಿದ್ವಾಂಸರಿಗೆ ಪ್ರಿಯವೆನಿಸುವ, ಹಾಗೂ ಸೊಗಸಾದ ಅಲಂಕಾರಗಳಿಗೆ ಆಶ್ರಯವಾಗಿಯೂ ಜನಾನಂದಕರವಾಗಿಯೂ ಇರುವ ಕವಿರಾಜಮಲ್ಲಕೃತಕಾವ್ಯವೆಂಬ ನವೀನ ಕಮಲಸರೋವರದಲ್ಲಿ ಸರಸ್ವತಿಯು ಸಂತೋಷದಿಂದ ಜಲಕ್ರೀಡೆಯಾಡುವಳು (ನವರಸ, ಪದಾರ್ಥ, ಕವಿ, ಅಲಂಕೃತ ಎಂಬ ಪದಗಳು ಶ್ಲೇಷೆಯಿಂದ ಸರೋವರದಂತೆ ಕಾವ್ಯಕ್ಕೂ ಅನ್ವಯಿಸುತ್ತವೆ)

೩೭. ನೇಮಿಚಂದ್ರನು ಲೋಕವೆಲ್ಲ ಮೆಚ್ಚುವಂತೆ ಅನ್ಯರಲ್ಲಿ ಒಳ್ಳೆಯ ಗುಣಗಳನ್ನು ಕಂಡುಕೊಳ್ಳುವುದರಲ್ಲಿ ಆಸೆಕಾರನು; ಶ್ರೀಮಂತಿಕೆಯಲ್ಲಿ; ಪುಣ್ಯಾವಂತನು; ಧಾರಾಳವಾಗಿ ದಾನಮಾಡುವ ಉತ್ಸಾಹದಲ್ಲಿ ಮಹಾವೀರನೆನಿಸಿದನು; ಪರಮತವಾದಿಗಳೊಡನೆ ವಾದದಲ್ಲಿ ವಿಜಯಶಾಲಿ; ಮಹಾಧರ್ಮವಿಷಯದಲ್ಲಿ ತುಂಬ ಉತ್ಸುಕನಾದವನು; ಭಾವೋತ್ಪಾದಕರಾದ ರಸಿಕ ಕವಿ ಸಮೂಹದಲ್ಲಿ ಸ್ಪರ್ಧಾಳುವಾಗುವವನು.

---

೧. ರೊಕ್ಕ (ಳ್ಕ?) (ಕಾ). ೨. ಬಂಟ (ಕಾ, ಮ) ೩. ಣಾ (ಕಾ, ಮ), ೪ ರ್ಣ(ಕ) ರ್ವ (ಮ).

ಜಗಕೆ ಜಿನೇಂದ್ರರುಕ್ತಿಯೆ ಸರಸ್ವತಿಯಾಕೆಗೆ ರಮ್ಯರೂಪು ಚಿ
ತ್ತಗುಣ ವಿಳಾಸಮಿಲ್ಲೆನ[1]ಲೆವೇಡಿವನುತ್ತಮ ಕಾವ್ಯದೊಳ್ ಮೊಗಂ
ನಗೆಮೊಗಮಿಲ್ಲಳಂಕೃತಿಯಳಂಕೃತಿ ಭಾವಗತಂ ರಸಂ ರಸಂ
ಬಗೆ ಬಗೆ ಮಾತು ಮಾತು ಸತಿ ಭಾರತಿಕೊಳ್ಗೆ ವಿದೇಶಿಕಾಜಿನೊಳ್ ೩೮

ಚರಿತ[2] ಪುರಾಣದೊಳ್ಮಣಿಗಳಂ ಸರವೇಱಿಪವೋಲ್ ಭವಾವಳೀ
ಸ್ಮರಣಕಥಾ[3]ಭವಂ[3]ಗಳನದಾರ್ಬರೆವರ್ಸರವೇಱಿಪಂದದಿಂ
ಸಿರಿಗಳನೀ ಮಹಾಕಥೆಗಳಂ ಪ್ರಥಿತಂಗಳನೊಂದೆ ಕಾವ್ಯದೊಳ್
ಬರೆದನಿದೇಂ ಸಮಗ್ರನೊ[4] ಕವೀಶ್ವರರೊಳ್ ಕವಿರಾಜಕುಂಜರಂ ೩೯

[5]ಎಂದೆಂದು ಪರಸೆ[5] ಗುರುಜನ
ಮೊಂ[6]ದೊಂದನೆ ಪೊಗೞಿ ಬುಧಜನಂ ಜಿನಕಥೆಯೊ
ಳ್ಪೊಂದಿಸಿ ವಸುದೇವಾಚ್ಯುತ
ಕಂದರ್ಪರ ಕಥೆಗಳ[7]ನಿತುಮಂ ವಿರಚಿ[8]ಸುವೆಂ[8] ೪೦

ಈ ರಸವತ್ಕೃತಿಯೊಳಹಂ
ಕಾರ ಜರಾಸಂಧ ಕಾಮ ನೇಮಿಕುಮಾರ
ಶ್ರೀರಮಣರ್ಧೀರರ್ ಧೃತ
ಧೀರ ಲಲಿತಧೀರ ಶಾಂತ ಧೀರೋದಾತ್ತರ್ ೪೧

೩೮. ಜಗತ್ತಿಗೆ ಜಿನೇಂದ್ರರ ವಾಣಿಯ ಸರಸ್ವತಿ. ಆಕೆಗೆ ಮನೋಹರವಾದ ರೂಪವೂ, ಚಿತ್ತಗುಣವೂ ವಿಲಾಸವೂ ಇಲ್ಲವೆಂದು ನುಡಿಯಬೇಡ. ಈ ಕವಿಯ ಉತ್ತಮವಾದ ಕಾವ್ಯದಲ್ಲಿ 'ಮೊಗ' (ನಾಂದೀಮುಖ)ವೆ ಆಕೆಯ ನಗೆಮೊಗ; ಶಬ್ದಾರ್ಥಲಂಕಾರಗಳೆ ಆಕೆಯ ಅಲಂಕಾರಗಳು; ಭಾವನಿಷ್ಠವಾದ ರಸವೆ ಆಕೆಯ ರಸ (ಸೌಂದರ್ಯ); ಕಾವ್ಯದ 'ರೀತಿ'ಯೆ ಆಕೆಯ ರೀತಿ; ಈತನ ಉಕ್ತಿಗಳೆ ಆಕೆಯ ಮಾತು. ಸೊಗಸುಗಾರನಾದ ಈ ಕವಿಯಿಂದ ಸರಸ್ವತಿಯು ಇವೆಲ್ಲವನ್ನೂ ಪಡೆಯಲಿ.

೩೯. ಚರಿತ ಪುರಾಣದಲ್ಲಿ ಭವಾವಳಿಗಳನ್ನು ಸ್ಮರಣ ಕಥೆಗಳನ್ನೂ ಸೊಗಸಾಗಿ ಹೊಂದಿಸಿ ರತ್ನಗಳ ಸರವನ್ನೂ ಕಟ್ಟಿದಂತೆ ಮನೋಹರವಾಗಿ ಬರೆಯುವವರು ಯಾರು? ಸುಂದರವಾದ ಹಾಗೂ ಪ್ರಶಸ್ತವಾದ ಈ ಮಹಾಕಥೆಗಳೆಲ್ಲವನ್ನೂ ಮಾಲೆ ಕಟ್ಟಿದ ಹಾಗೆ ಒಂದೇ ಕಾವ್ಯದಲ್ಲಿ ಹದವಾಗಿ ಹೊಂದಿಸಿ ಬರೆದ 'ಕವಿರಾಜಕುಂಜರ'ನೆಂಬ ಬಿರುದುಳ್ಳ ಕವಿ ಕವಿಗಳಲ್ಲೆಲ್ಲ ಎಂತಹ ಸಮಗ್ರನಾಗಿರುವನು!

೪೦. ಹೀಗೆಂದು ಹಿರಿಯರು ಆಶೀರ್ವದಿಸಿ, ಬಲ್ಲವರು ಒಂದೊಂದು ಗುಣವನ್ನೂ ವಸುದೇವನ, ಕೃಷ್ಣನ, ಮನ್ಮಥನ ಕಥೆಗಳೆಲ್ಲವನ್ನೂ ಈ ಜಿನಕಥೆಯಲ್ಲಿ ಹೊಂದಿಸಿ ಬರೆಯುವೆನು.

೪೧. ರಸಮಯವಾದ ಈ ಕಾವ್ಯದಲ್ಲಿ ಚಿತ್ರಿತರಾದ ಜರಾಸಂಧ, ಕಾಮ, ನೇಮಿ

---

೧ ನೆ (ಕಾ), ೨ ತೆ (ಮ), ೩ ವಲಂ (ಕಾ). ೪ ನೊ (ಪ). ೫ ಇಂದೆಂದೆ ಪರಸಿ (ಕಾ), ೬ ಮಂ (ಕ, ಮ, ಪ), ೭ ಳಿ (ಕಾ), ೮ ಸಿದೆಂ (ಕಾ).

ಒಡವುಟ್ಟಿದ ಕೌಸ್ತುಭಮಣಿ
ಯೊಡನಿರಲಾಗೆಂದ ಬಿಟ್ಟು ವಿಷ್ಣುವಿನುರಮಂ
ಬಿಡುವೆ[1]ಸರ್ಗೆ ಪದ್ಮನಾಭನ
ಬೆಂಡಂಗಿನುರದಲ್ಲಿ ಲಕ್ಷ್ಮಿ ಸಲೆ ನೆಲಸಿರ್ಪಳ್ ೪೨

ವದನಂ ಚಂದ್ರಪ್ರಭಂ ವಿಕ್ರಮಭುಜಮಜಿತಂ ಪಾಣಿ ಪದ್ಮಪ್ರಭಂ ಸಂ
ಪದೆಮೆಂದುಂ ವರ್ಧಮಾನಂ ಗುಣತತಿ ವಿಮಲಂ ತನ್ನ ಪೆಂಪೊಂದನಂತಂ
ಹೃದಯಂ ಸ್ವಾಧೀನಧರ್ಮಂ ಮತಿ ಪುರುಚರಿತಂ ಶೀತಳಂ ಸುವ್ರತಂ ತಾ
ನದಱಿಂ ಪ್ರತ್ಯಕ್ಷ ತೀರ್ಥೇಶ್ವರನೆನೆ ನೆಗೞ್ದಂ ಪದ್ಮನಾಭಪ್ರಧಾನಂ ೪೩

ಆ ಪದ್ಮನಾಭದೇವಂ
ಶ್ರೀಪತಿಪುಣ್ಯಪ್ರಭಾವದಿಂ ನೇಮಿಯ ವಿ
ದ್ಯಾಪೃಥುಳಜಳಧಿಭವಕೃತಿ
ರೂಪದ ಕೌಸ್ತುಭಕೆ ಸುಭಗವಲ್ಲಭನಾದಂ ೪೪

ನಾಥ, ಕೃಷ್ಣರು (ಅನುಕ್ರಮವಾಗಿ) ಧೀರ, ಧೀರಲಲಿತ, ಧೀರಶಾಂತ ಹಾಗೂ ಧೀರೋದೋತ್ತ ನಾಯಕರಾಗಿರುವರು.

೪೨. ಒಡಹುಟ್ಟಿದ ಕೌಸ್ತುಭಮಣಿಯೊಂದಿಗೇ ಇರಲಾಗದು ಎಂದು ವಿಷ್ಣುವಿನ ವಕ್ಷಸ್ಥಳವನ್ನು ಬಿಟ್ಟುಬಂದು (ವಿಷ್ಣುವಿನ ಹೆಸರನ್ನು ಹೊಂದಿರುವ) ಪದ್ಮನಾಭ (ಪ್ರಧಾನ)ನ ಬೆಡಗಿನ ಎದೆಯಲ್ಲಿ ಲಕ್ಷ್ಮಿ ನೆಮ್ಮದಿಯಿಂದ ನೆಲಸಿರುವಳು.

೪೩. ಈತನ ಮುಖವು 'ಚಂದ್ರಪ್ರಭ' (ಚಂದ್ರನಂತೆ ಕಾಂತಿಮಯವಾದುದು); ಪರಾಕ್ರಮವು 'ಅಜಿತ' (ಸೋಲಿಲ್ಲದುದು); ಕೈಗಳು 'ಪದ್ಮಪ್ರಭ' (ಕೆಂದಾವರೆಗಳ ಶೋಭೆಯನ್ನು ಹೊಂದಿರುವ); ಸಂಪತ್ತು ಎಂದೆಂದಿಗೂ 'ವರ್ಧಮಾನ' (ಹೆಚ್ಚುತ್ತಲೇ ಇರುವುದು); ಗುಣಗಳು 'ವಿಮಲ' (ಪರಿಶುದ್ಧವಾದುವು); ಈತನ ಘನತೆ 'ಅನಂತ' (ಕೊನೆಯಿಲ್ಲದುದು); ಹೃದಯವು 'ಧರ್ಮ'ವನ್ನು ಒಳಪಡಿಸಿಕೊಂಡಿರುವುದು; ಬುದ್ಧಿ 'ಪುರು' (ಮೇಲಾದ) ಚಾರಿತ್ರ್ಯವುಳ್ಳುದು; 'ಶೀತಳ' (ತಂಪಾದುದು)ವೂ 'ಸುವ್ರತ' (ಸದ್ವ್ರತ ನಿಷ್ಠ)ವೂ ಆಗಿದೆ. ಹೀಗೆ ತೀರ್ಥಂಕರಾಂಕಿತ ಪದಗಳಿಗೆ ಯೋಗ್ಯನಾಗಿ ಪದ್ಮನಾಭ ಪ್ರಧಾನನು ಪ್ರತ್ಯಕ್ಷ ತೀರ್ಥಂಕರನೊ ಎನೊ ಎಂಬಂತೆ ವರ್ತಿಸುತ್ತಾನೆ. (ಚಂದ್ರಪ್ರಭ, ಅಜಿತ, ಪದ್ಮಪ್ರಭ, ವರ್ಧಮಾನ, ವಿಮಲ, ಅನಂತ, ಧರ್ಮ, ಪುರು, ಶೀತಳ, ಸುವ್ರತ - ಎಂಬವು ಬೇರೆ ಬೇರೆ ತೀರ್ಥಂಕರರ ಹೆಸರುಗಳು)

೪೪. ಶ್ರೀಪತಿಯ ಪುಣ್ಯಪ್ರಭಾವದಿಂದಾಗಿ ನೇಮಿಚಂದ್ರ ಕವಿಯ ವಿಸ್ತಾರವಾದ ವಿದ್ಯಾಸಮುದ್ರದಲ್ಲಿ ಹುಟ್ಟಿಬಂದ ಕಾವ್ಯವೆಂಬ ಕೌಸ್ತುಭರತ್ನಕ್ಕೆ ಆ ಪದ್ಮನಾಭ ಪ್ರಧಾನನ ಒಪ್ಪುವ ಒಡೆಯನಾದನು.

---

೧ ವಿ (ಪ).

ಬೆಲೆಯಿಂದಕ್ಕುಮೆ ಕೃತಿ ಗಾ
ಮಿ[೧]ಲ ಭುವನದ ಭಾಗ್ಯದಿಂದಮಕ್ಕುಂ ನೋೞ್ಪಂ
ಬೆಲೆಗೊಟ್ಟು ತಾರ ಮಧುವಂ
ಮಲಯಾನಿಳನಂ ಮನೋಜನಂ ಕೌಮುದಿಯಂ ೪೫

ಕವಿ ಕಾಂಚನಕಣಿಕೆಗೆ ಮಾ
ಱುವನೇಕೆಯೊ ಮರುಳನ[೨]ಳಿಗೆ ಮಾಣಿಕಮಂ ಮಾ
ಱುವ ತೆಱದಿನೀ ಚತುರ್ದಶ
ಭುವನಮೆ ಬೆಲೆಯೆನಿಪ ಕೃತಿಯನಮಳಾಕೃತಿಯಂ ೪೬

ಎಣಿ[೩]ಸದೆ[೩] ಗುಣಮಂ ಕಾಜಿನ
ಮಣಿಯಂ ಮಾಱುವವೊಲಹಹ ನಿನಗಂ ತನಗಂ
ಪಣಕೆ ಕೃತಿಯೆಂಬ ಚಿಂತಾ
ಮಣಿಯಂ ಮಾಱುವನ ಬುದ್ಧಿಗಾಂ ಬೆಱಗಾದೆಂ ೪೭

ಒಡವೆ ತನಗಪ್ಪೊಡೆಂತಾ
ದೊಡಮಾದಪುದಿನ್ನದರ್ಕೆ ಕಬ್ಬಂಬೇೞ್ದುಂ
ಜಡಮತಿಗಳ ಕರ್ಚ[೫]ದ ಕಾ
ಲ್ವಿಡಿಯಲ್ವೇೞ್ಕುಮೆ ಬುಧಂಗೆ ವಿದ್ವತ್ಸಭೆಯೊಳ್ ೪೮

ನಿಧಿ ದೊರೆಕೊಂಡೊಡಂ ಜ[೪]ರಗುಗರ್ಚುವರೇ ಮಿಗೆ ಮುಗ್ಧರುಂ ಸುಧಾಂ
ಬುಧಿ ದೊರೆಕೊಂಡೊಡೇನೊಱವುದೋಡುವರೇ ಸಕಲಾರ್ಥಸಂಭವಾ
ವಧಿ ಜಿನರಾಜರಾಜಿತ ಕಥಾಕಥನಂ ದೊರೆಕೊಂಡೊಡಂ ಪಣ
ಕ್ಕಧಮರನಣ್ಣ ಬಣ್ಣಿಪರೆ ಚಾರುವಿಚಾರಪರರ್ಕವೀಶ್ವರರ್ ೪೯

೪೫. ಅಯ್ಯೊ, ಹುಚ್ಚಪ್ಪಾ, ಕಾವ್ಯಕೃತಿ ಬೆಲೆಯಿಂದಾಗುವುದೆ? ಲೋಕದ ಪುಣ್ಯದಿಂದ ಮಾತ್ರ ಅದು ಹುಟ್ಟಿಬರುವುದು. ವಸಂತಕಾಲವನ್ನು, ಮಲಯಮಾರುತವನ್ನೂ ಮನ್ಮಥನನ್ನೂ ಬೆಳ್ದಿಂಗಳನ್ನೂ ಬೆಲೆಕೊಟ್ಟು ಕೊಂಡು ಬಾ, ನೋಡೋಣ.

೪೬. ದಡ್ಡನೊಬ್ಬನು ಮಾಣಿಕ್ಯ ರತ್ನವನ್ನು ಮಜ್ಜಿಗೆಗೆ ಮಾರಿಕೊಳ್ಳುವಂತೆ, ಕವಿಯಾದವನು ಹದಿನಾಲ್ಕು ಲೋಕಗಳಿಗೆ ಬೆಲೆಯಾಗತಕ್ಕ ತನ್ನ ಪರಿಶುದ್ಧ ಕಾವ್ಯಕೃತಿಯನ್ನು ಚಿನ್ನದೊಂದು ತುಂಡಿಗೆ ಮಾರಿಕೊಳ್ಳುವುದೇಕೊ?

೪೭. ಗುಣವನ್ನು ಗಣಿಸದೆ ಕಾಜಿನ ಮಣಿಯನ್ನು ಮಾರುವಂತೆ, ಅಯ್ಯೊ, ಕಾವ್ಯಕೃತಿಯೆಂಬ ಚಿಂತಾರತ್ನವನ್ನು ಇವನಿಗೆ ಅವನಿಗೆ ಎಂದು ಹಣಕ್ಕೆ ಮಾರುವವನ ಬುದ್ಧಿಯನ್ನು ಕಂಡು ನಾನು ಬೆರಗಾದೆನು.

೪೮. ಒಡವೆಯನ್ನೂ (ಧನವನ್ನು) ಸಂಪಾದಿಸುವುದೆ ಉದ್ದೇಶವಾಗಿದ್ದರೆ ಹೇಗಾದರೂ (ಬೇರೆ ಮಾರ್ಗದಿಂದ) ಸಂಪಾದಿಸಬಹುದು. ಅದಕ್ಕಾಗಿ ಕಾವ್ಯವನ್ನು ರಚಿಸಿ ವಿದ್ವಜ್ಜನರ ಸಭೆಯಲ್ಲಿ ಮೂರ್ಖಜನರ ಅಶುದ್ಧವಾದ ಕಾಲುಗಳನ್ನು ಹಿಡಿಯುವ ಅವಸ್ಥೆ ಬುದ್ಧಿವಂತನಿಗೆ ಬರಬೇಕೆ?

೪೯. ಹೇರಳವಾದ ಹಣದ ನಿಧಿ ದೊರಕಿದ ಮೇಲೆ, ಎಂತಹ ದಡ್ಡರು ಕೂಡ,

---

೧ ವಿ (ಕ). ೨ ನೆ (ಕಾ), ೩ ಸಿದ (ಕ), ಸದ (ಮ). ೪. ಬ್ಬ (ಕಾ) ೫. ಬ (ಕ),

ಇದನಱಿದು ನೇಮಿಚಂದ್ರಂ
ವಿದಗ್ಧ ವಿದ್ಯಾಧರೇಂದ್ರನಖಿಳಕಲಾ ಕೋ
ವಿದನುಚಿತ [೧]ಸಬುಧ[೧] ವಿದ್ಯಾ
ಸದನಂ ಕವಿಚಕ್ರವರ್ತಿ ಭುವನಾಭರಣಂ ೫೦

ಸುಕರಕವಿಶೇಖರಂ ತಾ
ರ್ಕಿಕತಿಲಕಂ ಮಾನಮೇರು ಜಿನಶಾಸನದೀ
ಪಕನಕಳಂಕಂ ಭಾವು[೨]ಕ
ಮುಕುರಂ ಕವಿರಾಜಮಲ್ಲನಪ್ರತಿಮಲ್ಲಂ *೫೧

ಪರಮಾರ್ಥಂ ನೇಮಿನಾಮಗ್ರಹಣಮೆ ಪರಮೈಶ್ವರ್ಯದಂತತ್‌ತ್ರಿಲೋಕೀ
ಗುರು ಪುಣ್ಯಶ್ಲೋಕ ಸಂಕೀರ್ತನಮೆ ತನಗೆನಿಪ್ಪಾತನೈಶ್ವರ್ಯವಿನ್ನೇ
ವಿರಿದೋ ಪೇೞೆಂದು ಪಾಪಕ್ಷಯಮನ[೩]ಯ ಲ[೩]ತಾಕಂದಮಂ ಭಕ್ತಿಯಿಂದಂ
ಹರಿವಂಶಕ್ಷತ್ರಚೂಡಾಮಣಿಯ ಚರಿತಮಂ ಪೇೞಲುದ್ಯುಕ್ತನಾದಂ ೫೨

ನಿಯತ ಪ್ರಾಲೇಯದೀಪ್ತಿದ್ಯುಮಣಿ ಭಗಣದೀಪ್ರೋಜ್ವಳಾಕೃತ್ರಿಮಾತ್ಮೋ
ದಯಮಪ್ಪಾಕಾಶಮೆಂಬಾಗಸವಳಿಕಿನನಂತೈಕ ಸಂಶುದ್ಧ ಸಿದ್ಧಾ
ಲಯದೊಳ್ ಸಾಮರ್ಥ್ಯದಿಂ ಮುಟ್ಟದೆ ನತಭುವನರ್ಸಿದ್ಧರೇೞೆರ್ದ ಪೀಠ
ತ್ರಯಮೆಂಬಂತಿರ್ಪುದವ್ಯಾಹತ ಜಿನಪತಿ ಬೋಧಾವಲೋಕಂ ತ್ರಿಲೋಕಂ ೫೩

ಮರಳು ಸೋಸಿ ಚಿನ್ನದ ಕಣಗಳನ್ನು ಆರಿಸಲು ಹೋಗುವರೆ? ಅಮೃತ ಸಮುದ್ರವೆ ದೊರೆತಾಗ ಮತ್ತೆ ಒರತೆ ತೋಡುವರೆ? ಹೀಗಿರುವಾಗ ಸಕಲಾರ್ಥ ಸಂಪನ್ನವಾದ ಜಿನೇಂದ್ರನ ಕಥೆ ಹೇಳುವ ಭಾಗ್ಯ ದೊರೆತಾಗ ವಿಚಾರವಂತರಾದ ಕವೀಂದ್ರರು ಹಣ ಪ್ರಾಪ್ತಿಗಾಗಿ ಅಧಮರನ್ನು ಹೊಗಳಿ ಹಾಡುವರೆ?

೫೦. ಇದನ್ನು ತಿಳಿದು, ಪ್ರಾಜ್ಞ ಪಂಡಿತವರೇಣ್ಯನೂ ಸಮಸ್ತ ಕಲಾಪ್ರವೀಣನೂ ಶಬ್ದವಿದ್ಯೆಗೆ ಆಶ್ರಯನೂ ಕವಿಚಕ್ರವರ್ತಿಯೂ ಲೋಕಭೂಷಣನೂ

೫೧. ಸಹಜ ಕವಿಗಳಲ್ಲಿ ಅಗ್ರೇಸರನೂ ತಾರ್ಕಿಕ ಶಿರೋಮಣಿಯೂ, ಅಭಿಮಾನಶಾಲಿಯೂ, ಜಿನಶಾಸನದೀಪಕನೂ, ನಿಷ್ಕಲಂಕನೂ ರಸಿಕದರ್ಪಣನೂ ಅದ್ವಿತೀಯನಾದ ಕವಿರಾಜಮಲ್ಲನೂ (ಆದ ನೇಮಿಚಂದ್ರನು)

೫೨. ನೇಮಿನಾಥನ ನಾಮೋಚ್ಚರಣೆಯೇ ಪರಮೈಶ್ವರ್ಯವನ್ನು ನೀಡುವುದು. ಹೀಗಿರುವಾಗ ಆ ತ್ರಿಲೋಕಗುರುವಿನ ಪುಣ್ಯಸ್ತೋತ್ರವನ್ನು ಮಾಡುವವನ ಐಶ್ವರ್ಯ ಇನ್ನೆಷ್ಟು ಹಿರಿದಾಗಿರಬೇಡ! ಹೀಗೆಂದುಕೊಂಡು ಪಾಪನಾಶಕವೂ, ಸೌಭಾಗ್ಯ ಲತೆಯ ಬೀಜಗೆಡ್ಡೆಯೂ ಆದ ಹರಿವಂಶ ರಾಜಶ್ರೇಷ್ಠನ ಚರಿತ್ರೆಯನ್ನು ಹೇಳಲು ತೊಡಗಿದನು.

೫೩. ಚಂದ್ರಸೂರ್ಯ ನಕ್ಷತ್ರಗಳೆಂಬ ದೀಪಗಳಿಂದ ಸತತವಾಗಿ ಉಜ್ವಲ ರೂಪವನ್ನು ಹೊಂದಿರುವ ಸ್ವಯಂಭೂ ಆಕಾಶವೆಂಬ ಸ್ಫಟಿಕಶಿಲೆಯ ಅನಂತವೂ ಪರಿಶು

---

೧ ಶಬ್ದ (ಕಾ), ೨ ವ (ಮ) * ಈ ಪದ್ಯವು 'ಕಾ' ಪ್ರತಿಯಲ್ಲಿ ಇಲ್ಲ. ೩ ಲಯ (ಕಾ).

ಅಂತೆ[೧]ಸೆದಿ[೧]ರ್ಪುದಧೋಲೋ-
ಕಂ ತಿರ್ಯಗ್ಲೋಕಮೂರ್ಧ್ವಲೋಕಮದವಱೊಳ್
ಕಾಂತಮೆನಿಸುವುದು ನರಲೋ
ಕಂ ತನುಭೃತ್ಪುಣ್ಯಪಾಪ ಸಸ್ಯಕ್ಷೇತ್ರಂ ೫೪

ವ|| ಆ ಮಧ್ಯಮ ಲೋಕದ ಮಧ್ಯಪ್ರದೇಶದೊಳ್

ಅಂಬುಧಿಯೊ[೨]ಳುದಿರ್ದು[೨] ತೇಂ[೩]ಕುವು[೩]
ದುಂಬರ ಜಂಬುವಿನ ದೋರೆವಣ್ಣವೊಲೆಸೆಗುಂ
ಜಂಬೂದ್ವೀಪಂ ಮಂದರ
ಮಂ ಬಲವರ್ಪರುಣಕಿರಣದಿಂ ಕಟ್ತಲೆಯಿಂ ೫೫

ವ|| ಆ ಶರಧಿಸರೋವರಕ್ಕಲಂಕಾರಮಾದ ಜಂಬೂದ್ವೀಪಮೆಂಬ ಕಮಲ[೪] ಕರ್ಣಿಕೆಯಂತೆ

ಎನಗುರ್ವೀಧರವೈರಿ ಬಂಧು[೫] ಜಯದರ್ದೇವರ್ಕಳೆನ್ನಲ್ಲಿ ಕ
ಲ್ಗನಕಂ ಪಾಱುವ ಪಕ್ಕಿ ಭಾನು ಮರನೆಲ್ಲಂ ಬಂದ ಮಂದಾರಮಾ
ವ ನಗಂ ಮತ್ಸಮಮೆಂದು ಬೀಗಿ ಬಳೆದಂತಿರ್ಕುಂ ಜಿನಸ್ನಾನ ಪಾ
ವನವಾ ನಿರ್ಜರ ನಿರ್ಝರೋಜ್ವಲಮಣಿ ಶ್ರೀಕಂದರಂ ಮಂದರಂ ೫೬

ದ್ಧವೂ ಆದ ಸಿದ್ಧಾಲಯದಲ್ಲಿ ಲೋಕಪೂಜ್ಯರಾದ ಸಿದ್ಧರು ಸ್ಪರ್ಶವಾಗದಂತೆ ಏರಿಕುಳಿತಿರುವ ಪೀಠತ್ರಯಗಳೊ ಏನೊ ಎಂಬಂತೆ ತ್ರಿಲೋಕಗಳು ನಿಂತಿವೆ.

೫೪. ಹೀಗೆ ಶೋಭಿಸುವ ಅಧೋಲೋಕ, ಭೂಲೋಕ ಮತ್ತು ಊರ್ಧ್ವಲೋಕಗಳಲ್ಲಿ ದೇಹಿಗಳಿಗೆ ಪುಣ್ಯಪಾಪ ಸಂಪಾದನೆಯ ಕ್ಷೇತ್ರವೂ, ಸಸ್ಯಕ್ಷೇತ್ರವೂ ಆದ ಮನುಷ್ಯಲೋಕವು ಚೆಲುವಾಗಿರುವುದು.

ವ|| ಆ ಮಧ್ಯ ಲೋಕದ ನಟ್ಟ ನಡುವೆ -

೫೫. ಮಂದರ ಪರ್ವತವನ್ನು ಪ್ರದಕ್ಷಿಣವಾಗಿ ಸುತ್ತಿ ಬರುತ್ತಿರುವ ಕೆಂಬೆಳಕಿನಿಂದಲೂ ಕತ್ತಲೆಯಿಂದಲೂ ಬಣ್ಣಗೊಂಡ ಜಂಬೂದ್ವೀಪವು, ಕಡಲಲ್ಲಿ ಉದಿರಿಬಿದ್ದು ತೇಲಾಡುತ್ತಿರುವ ನೇರಿಳೆಯ ದೋರೆಗಾಯಂತೆ ಕಂಗೊಳಿಸುವುದು.

ವ|| ಆ ಸಮುದ್ರವೆಂಬ ಸರೋವರಕ್ಕೆ ಜಂಬೂದ್ವೀಪವೆಂಬುದು ತಾವರೆಯಾಗಿರುವುದು. ಅದರ ನಡುವಿನ ಕರ್ಣಿಕೆಯಂತೆ -

೫೬. "(ಪರ್ವತ ವೈರಿಯಾದ) ಇಂದ್ರನು ನನಗೆ ಬಂಧುವಾಗಿರುವನು; ದೇವತೆಗಳು ಜಯದಾತರು; ನನ್ನಲ್ಲಿರುವ ಕಲ್ಲೆಲ್ಲ ಚಿನ್ನ; ಹಾರುವ ಹಕ್ಕಿ ಸೂರ್ಯ; ಮರಗಳಲ್ಲಿ ಮಂದಾರ. ಹೀಗಿರುವ ನನಗೆ ಸರಿದೊರೆಯಾದ ಬೆಟ್ಟ ಇನ್ನಾವುದು?" ಎಂದು ಹೆಮ್ಮೆಯಿಂದ ಉಬ್ಬಿ ಬೆಳೆದಂತೆ ತೋರುವ ಮಂದರಗಿರಿಯು ಜಿನಾಭಿಷೇಕದಿಂದ ಪವಿತ್ರವಾಗಿ, ದೇವಗಂಗೆಯಿಂದಲೂ ಉಜ್ವಲವಾದ ರತ್ನಗಳಿಂದ ಬೆಳಗುವ ಕಂದರಗಳಿಂದಲೂ ರಮ್ಯವಾಗಿರುವುದು.

---

೧ ನಿಸಿ (ಕ, ಮ), ೨. ಳಿರ್ದು (ಕ), ೩ ಕ ಉ (ಕಾ), ೪ + ದ (ಕ), ೫ ಡು (ಕ, ಮ).

ಅದಱಿಯೆ[೧] ಪೂರ್ವಾಪರದೊಳ್
ವಿದೇಹವೆರಡಿರ್ಪುವವಱೊಳೊಂದೊಂದಱೊಳಂ
ಪದಿನಾಱು ನಾಡು ಚಂದ್ರನ
ಪದಿನಾಱುಂ ಕ[೨]ಳೆವೊಲ[೩]ಖಿಳ[೩]ಜನ ಸುರ[೩]ಸೇವ್ಯಂ ೫೭

ಪರಭೃತ ಭೃಂಗ ಕೀರ ಕಳಹಂಸೆಗಳಲ್ಲದೆ ಕಾಕ ಘೂಕ ಭೀ-
ಕರ ಖಗಮಿಲ್ಲ ಮೇಲ್ಮರಗಳಲ್ಲದೆ ಕೀಟ್ಮರನಿಲ್ಲ ಹಸ್ತಿ ಕ
ತ್ತುರಿ ಮಿಗಮಲ್ಲದುಗ್ರ ಮೃಗಮಿಲ್ಲ(ಯ)[೪]ಮಲ್ಲದೆ ಪಾಪಮಿಲ್ಲ ಭಾ
ಸುರ ಜಿನಧರ್ಮಮಲ್ಲದೆ ಕುಧರ್ಮದ ವಾರ್ತೆಯುಮಿಲ್ಲ ದೇಶದೊಳ್ ೫೮

ಋತ[೫]ಮೆಸೆದಿರ್ಪ ನಿಸ್ಪೃಹತೆಯಿರ್ಪ ದಯಾಗುಣಮಿರ್ಪ ಶೋಭಮಿ
ರ್ಪತಿಶಯ ತೋಷಮಿರ್ಪ ಮತಮಿರ್ಪೆಡೆಯೊಳ್ ಪುಸಿಯಿರ್ಪ ಚೌರ್ಯಮಿ
ರ್ಪತಿವಧೆಯಿರ್ಪ ಪಾರದರಮಿರ್ಪ ಪರಿಗ್ರಹ ಕಾಂಕ್ಷೆಯಿರ್ಪ ಕು
ತ್ಸಿತ ಮತಮಿರ್ಪುದಲ್ತು ಬೆಳಗಿರ್ಪೆಡೆಯೊಳ್ತಮಮೆಂದುಮಿರ್ಪುದೇ ೫೯

ಅಸದಳಮಾಗಿ ಸಂದ ಜಿನಶಾಸನ ವರ್ತನೆಯಿಂ ಜಿನಾಗಮಂ
ಬೆಸಸಿದ ಭಂಗಿಯಿಂ ನೆಗಬ್ದ ಶಾಂತಿಕದಿಂ ಸಿರಿ ತುಳ್ಕಿ ಸಂತಸಂ
ಪಸರಿಸೆ ಕೈಯೊಳಂ ಕಳದೊಳಂ [೬]ಬೆಳೆ[೬]ದೊಟ್ಟುವ ಧಾನ್ಯವರ್ಗದಿಂ
ಪುಸಿಪುಸಿ [ಗಿ][೭]ಟ್ಟೆಯಿಟ್ಟೇಳ್ದಿ ಬಱಿಂ ಬಱಿಕಾದುದು ತನ್ಮಹೀತಳಂ ೬೦

೫೭. ಅದರ ಪೂರ್ವ-ಪಶ್ಚಿಮಗಳಲ್ಲಿ ಎರಡು ವಿದೇಹಗಳಿರುವುವು. ಅವುಗಳೊಳಗೆ ಪ್ರತಿಯೊಂದರಲ್ಲಿ ಚಂದ್ರನ ಹದಿನಾರು ಕಲೆಗಳಂತೆ - ಸರ್ವಜನರಿಗೂ ಆನಂದಕರವಾದ ಹದಿನಾರು ನಾಡುಗಳಿರುವುವು.

೫೮. ಆ ದೇಶಗಳಲ್ಲಿ ಕೋಗಿಲೆ, ದುಂಬಿ, ಗಿಳಿ, ಕಳಹಂಸಗಳುಂಟಲ್ಲದೆ ಕಾಗೆ, ಗೂಗೆ ಮೊದಲಾದ ಭಯಾನಕ ಪಕ್ಷಿಗಳಿಲ್ಲ; ಉತ್ತಮವಾದ ಮರಗಳುಂಟೆ ವಿನಾ ಕ್ಷುದ್ರ ವೃಕ್ಷಗಳಿಲ್ಲ; ಆನೆಗಳೂ ಕಸ್ತೂರಿಮೃಗಗಳೂ ಉಂಟಲ್ಲದೆ ಹಿಂಸ್ರವಾದ ಮೃಗಗಳಿಲ್ಲ; ಧರ್ಮಾನುಚರಣೆಯುಂಟೆ ಹೊರತು ಪಾಪಾಚಾರವಿಲ್ಲ; ಮೇಲೆನಿಸಿದ ಜಿನಧರ್ಮವಿದೆಯೆ ಹೊರತು, ಕುಧರ್ಮದ ಸುದ್ದಿ ಕೂಡ ಇಲ್ಲ.

೫೯. ಸತ್ಯ, ನಿಸ್ಪೃಹತೆ, ದಯಾಗುಣ, ಶುಭ, ಅತ್ಯಂತ ಸಂತೋಷ, ಉತ್ತಮವಾದ ಮತ ಇವೆಲ್ಲ ಇರತಕ್ಕ ಈ ಪ್ರದೇಶದಲ್ಲಿ ಸುಳ್ಳು, ಕಳವು, ಅತಿಹಿಂಸೆ, ಹಾದರ, ಪರಿಗ್ರಹದ (ತನಗೆ ಬೇಕೆಂದು ಸುಖಸಾಮಗ್ರಿಗಳ ಸಂಗ್ರಹಣ)ದ ಆಸೆ, ದುಷ್ಟಮತ ಇಂತಹವು ಇರಲಾರವು. ಬೆಳಕಿರುವಲ್ಲಿ ಕತ್ತಲೆಯೆಂದಾದರೂ ಇರಬಲ್ಲುದೆ?

೬೦. ಅತಿಶಯವಾಗಿ ನೆಲಗೊಂಡ ಜಿನಶಾಸನದಿಂದಲೂ, ಜಿನಧರ್ಮಾನುಸಾರವಾಗಿ ನಡೆಯುವ ಶಾಂತವರ್ತನೆಯಿಂದಲೂ ತುಂಬಿ ತುಳುಕುವ ಐಶ್ವರ್ಯದಿಂದಲೂ ಹಬ್ಬಿದ ಸಂತೋಷದಿಂದಲೂ, ಕ್ಷೇತ್ರಗಳಲ್ಲಿ ಹಾಗೂ ಕಣಗಳಲ್ಲಿ ಬೆಳೆದೊಟ್ಟಿ

೧ ಯ (ಕಾ, ಕ), ೨. ಲೆಯೊಳ (ಕ, ಮ), ೩. ಜನಪದ (ಮ,) ನಿರ್ಜರ (ಪ), ಜನಪುರ (ಕ), ೪. ಱ (ಪ), ೫ ತು (ಕ, ಕಾ), ೬ ಬಗೆ (ಕ), ೭ ವಿ (ಕ, ಕಾ, ಮ).

ವ|| ಆ ವಿದೇಹಂಗಳೊಳಪರವಿದೇಹಮೆ ದೇಹಮಾಗೆ

ಮೇದಿನಿ ಬೆಂಗೆ ಬಿಟ್ಟ ಮುಡಿಯಂತೆಸೆದಿರ್ಪುದು ಪುಷ್ಪಿತಂ ತಟೀ
ಪಾದಪ ವೀಥಿ ಪಂತಿಗುರುಳಂತಿರೆ ಸಂಚಳ ಮೀನಸಂಚಯಂ
ಪೂದುೞುಗಲ್ತಡಂ ತೊಡರ್ದು ತೋರ್ಪವೊಲೊಪ್ಪಿರೆ ಕೊಂಕವೆತ್ತ ಸೀ
ತೋದೆ ಸಡಿಲ್ದು ನೀಳ್[೧]ಶಿರದಿಂ ನಿಱಿಗೊಂಡು ಬಟಿಲ್ದ ಭಂಗಿಯಿಂ ೬೧

ತೆರೆ ಪಲ್ಲೆನೆ ಪಲ್ಲವತರು
ಪರಿವೃತ ದರಿಯಧರಮೆನೆ ಪರಾಗದ ಕಂಪಂ
ಪರಪುವೆಲರ್ನುಱುಸುಯ್ಯೆನೆ
ಧರಣಿಯ ಬಾಯ್ದೆಱೆಯ ತೆಱದಿನಾ ತೊಱೆ ಚೆಲ್ವಿಂ ೬೨

ವ|| ಆ ತೊಱೆಯ ಬೆಡಂಗುವಡೆದ ಬಡಗಣ ತೆಂಕಣ ತಡಿಯೊಳ್ ಬಾಂದೊಱೆಯ ತಡಿಯ ಪದಿನಾಱುಂ ಸಗ್ಗಂಗಳಂತಿರ್ಪ ಪದಿನಾಱುಂ ನಾಟ್ಕಳೊಳಗೆ ಬಡಗಣ ತಡಿಯ ವಪ್ರೆ ಸುವಪ್ರೆ ಮಹಾವಪ್ರೆ ವತ್ಸಕಾವತಿ ಗಂಧೆ[೨] ಸುಗಂಧೆ ಗಂಧಿಳೆ ಗಂಧಮಾಳಿನಿಯೆಂಬ ನಾಟ್ಗಳೊಳಗೆ

ರುವ ಧಾನ್ಯಸಮೃದ್ಧಿಯಿಂದಲೂ ಶೋಭಿಸುವ ಆ ಭೂಮಿಯಲ್ಲಿ ಸುಳ್ಳಿಗೆ ಅವಕಾಶವಿಲ್ಲ; ಕೊಳ್ಳ ಸುಲಿಗೆಗಳ ಸುದ್ದಿಯಿಲ್ಲ; ಬರಗಾಲಕ್ಕೆ ಯಾವಾಗಲೂ ಬರಗಾಲವೇ (ಬರ ಎಂದಿಗೂ ಇಲ್ಲ)

ವ|| ಆ ವಿದೇಹಗಳಲ್ಲಿ ಪಶ್ಚಿಮ ವಿದೇಹವೆ ತನ್ನ ದೇಹವಾಗಲು -

೬೧. ಅತ್ತಿಂದಿತ್ತ ಚಲಿಸುವ ಮೀನುಗಳೆ ಸುಳಿಗುರುಳಾಗಿ ದಂಡೆಗುಂಟ ಸಾಲಾಗಿ ನಿಂತ ಮರಳಸಾಲು ಹೂದುಂಬಿದ್ದರಿಂದ, ಹೂಮುಡಿದುಕೊಂಡು ಬೆನ್ನಿಗೆ ಇಳಿಬಿಟ್ಟ ಮುಡಿಯಂತೆ ಅಂಕುಡೊಂಕಾಗಿ ಸೀತೋದಾ ನದಿ ಕಂಗೊಳಿಸಲಾಗಿ, ಭೂದೇವಿ ಬಳಲಿ ತನ್ನ ನೀಳವಾದ ಕತ್ತನ್ನು ಬಾಗಿದಂತೆ ಕಂಗೊಳಿಸುವುದು.

೬೨. (ಆ ನದಿಯ) ತೆರೆಗಳ ಹಲ್ಲುಗಳು, (ಕೆಂಪಾದ) ಚಿಗುರೆಲೆಗಳಿಂದ ತುಂಬಿದ ಕಂದರವೆ ತುಟಿ, ಪುಷ್ಪಪರಾಗದ ಪರಿಮಳವನ್ನು ಹರಡುತ್ತಿರುವ ಗಾಳಿಯೆ ಉಸಿರು ಆಗಲಾಗಿ ಇದೇನು ಭೂದೇವಿಯ ಬಾಯಿಯೊ ಏನೊ ಎಂಬಂತೆ ಆ ನದಿ ಚೆಲುವಾಗಿ ತೋರುವುದು.

ವ|| ಆ ನದಿಯ ಸುಂದರವಾದ ಉತ್ತರ - ದಕ್ಷಿಣ ತೀರದಲ್ಲಿ, ಆಕಾಶ ಗಂಗಾ-ತೀರದ ಹದಿನಾರು ಸ್ವರ್ಗಗಳಂತೆ ಹದಿನಾರು ನಾಡುಗಳುಂಟು. ಉತ್ತರ ತಟದ ವಪ್ರೆ, ಸುವಪ್ರೆ, ಮಹಾವಪ್ರೆ, ವತ್ಸಕಾವತಿ, ಗಂಧೆ, ಸುಗಂಧೆ, ಗಂಧಿಳೆ, ಗಂಧಮಾಳಿನಿ ಎಂಬ ನಾಡುಗಳಲ್ಲಿ -

---

೧ ಳ್ದ (ಪ), ೨ ಧಿ (ಕಾ),

ತಿಳಿಗೊಳನಬ್ಜಗಂಧಿಯದಱಾರಮೆ ಚಂಪಕಗಂಧಿ ಕಾನನಂ
ಮಳಯಜಗಂಧಿ ಕೇಳಿ ನಗಸಾನು ಮೃಗೋದ್ಭವಗಂಧಿ ಕೆಯ್ವೊಲಂ
ಕಳಮ ಕದಂಬ ಗಂಧಿಯೆನೆ ಸಾರಸುಖಾ[೧]ಮರ[೨]ಗೇಹಗಂಧಿ ಗಂ
ಧಿಳ ವಿಷಯಂ ಸಮಸ್ತ ವಿಷಯಂಗಳ ವಲ್ಲಭನಪ್ಪುದೊಪ್ಪದೇ ೬೧

ಮದನಂಗುಪ್ಪರವಟ್ಟಮಾಗದ ತಳಿರ್ಕಾಮಂಗೆ ಕೋದಂಡಮಾ
ಗದ ಕರ್ವಂಗಭವಂಗೆ ಭಂಗುರಧನುರ್ಜ್ಯಾಲೇಖೆ ತಾನಾಗದು
ನ್ಮದ ಭೃಂಗಾವಳಿ ಚಿತ್ತಜಂಗೆ ಜಗಮಂ ಗೆಲ್ದೀವ ಬಾಣಂಗಳಾ
ಗದ ಪೂಗಳ್ಮಱಿದಾಗವೆಂಬ ವಿವಿಧೋದ್ಯಾನಂಗಳಾ ದೇಶದೊಳ್ ೬೨

ಎಳಸುತ್ತಿರ್ಕುಂ ಪಿಕಾ[೩]ಳಾಪೆಯರೆ[೩] ಕಳಿಕೆಗೌತ್ಸುಕ್ಯದಿಂದಂ [೪]ಶುಕಶ್ಯಾ[೪]
ಮಳೆಯರ್ ಮಾಂಗಾಯ್ಗೆ ಭೃಂಗಾಳಿಕೆಯ[೫]ರರಲ್ಗೆ[೫] ಚಂಚಚ್ಚಕೋರಾಕ್ಷಿಯರ್ತಾ
ಮೆಳ[೬]ನೀರ್ಬೆಳದಿಂಗಳೊಳ್ಬೆಂಚೆಗೆ ಸಮದಮರಾಳಾಂಗನಾಯಾನೆಯರ್ ಪೂ
ಗೊಳಕುದ್ಯಾನಂಗಳೊಳ್ ಬರ್ಹಿಣ ಕಚಭರೆಯರ್ಕೇಳಿ ಮೇಳಕ್ಕೆ ನಿಚ್ಚಂ ೬೩

ಎಳನೀರಂ ಜಿನಮಜ್ಜನಕ್ಕೆ ಜಿನಪಾದಾಬ್ಜಕ್ಕೆ ಪೂವಂ ಫಳಾ
ವಳಿಯಂ ಪೂಜೆಗೆ ತೋರಣಕ್ಕೆ ತಳಿರಂ ತಾಮಿತ್ತು ಪುಣ್ಯಪ್ರಭಾ
ಫಲಮಂ ಪೇಱಿದ ನಾಡನಂದನವನಂ ಸಗ್ಗಕ್ಕೆ ಪೋದಂತೆ ಕ
ಣ್ಗೊಳಿಕುಂ ನಂದನಮಲ್ಲದಂದು ಬನಕಂ ಸಗ್ಗಕ್ಕಮೇಂ ಸಮ್ಮದಂ ೬೪

೬೧. ತಿಳಿನೀರಿನ ಕೊಳಗಳೆಲ್ಲ ಕಮಲಗಂಧಿಗಳು, ತೋಟಗಳೆಲ್ಲ ಚಂಪಕಗಂಧಿಗಳು, ಕಾಡುಗಳೆಲ್ಲ ಮಲಯದ (ಶ್ರೀಗಂಧ) ಗಂಧಿಗಳು, ಬೆಟ್ಟದ ಶಿಖರಗಳು ಕಸ್ತೂರಿ ಗಂಧಿಗಳು ಹೊಲಗದ್ದೆಗಳು ಬತ್ತದ ಸುಗಂಧವುಳ್ಳುವು- ಗಂಧಿಳ ನಾಡು ಸ್ವರ್ಗಲೋಕ ಸದೃಶವಾಗಿದ್ದುದರಿಂದ ಎಲ್ಲ ನಾಡುಗಳಲ್ಲಿ ಅದು ಶ್ರೇಷ್ಠವೆನಿಸಿರುವುದು ಸರಿಯಲ್ಲವೆ?

೬೨. ಮನ್ಮಥನಿಗೆ ವಿತಾನ ವಸ್ತ್ರವಾಗದ ತಳಿರು, ಕಾಮನ ಕೈಯ ಬಿಲ್ಲಾಗದ ಕಬ್ಬು, ಆತನ ಬಿಲ್ಲಿಗೆ ಚೆಲುವಾದ ಹೆದೆಯಾಗದ ದುಂಬಿಗಳು, ಮದನನಿಗೆ ಜಗತ್ತನ್ನೆ ಗೆದ್ದು ಕೊಡುವ ಬಾಣಗಳಾದ ಹೂಗಳು ತಮ್ಮಲ್ಲಿ ಎಂದಿಗೂ ಹುಟ್ಟಲಾರವೆಂಬ ಹೆಮ್ಮೆ ಯುಂಟು ಆ ದೇಶದ ಎಲ್ಲಾ ಉದ್ಯಾನಗಳಿಗೆ.

೬೩. ಕೋಕಿಲಕಂಠೆಯರು ಮೊಗ್ಗುಗಳನ್ನೂ, ಶ್ಯಾಮಲೆಯರಾದ ಚೆಲುವೆಯರು ಮಾವಿನಕಾಯಿಗಳನ್ನೂ, ಭೃಂಗಕುಂತಳೆಯರು ಹೂಗಳನ್ನೂ, ಚಕೋರನ ಮನೆಯವರು ಎಳನೀರೆಂಬ ಬೆಳ್ದಿಂಗಳ ಬೆಂಚೆಯನ್ನೂ, ಹಂಸಗಮನೆಯರು ಹೂಗೊಳಗಳನ್ನೂ, ನವಿಲಿನ ಸೋಗೆಯಂತೆ ಮುಡಿಯುಳ್ಳ ಸೊಬಗೆಯರು ಕುಣಿದಾಟವನ್ನು ಬಯಸಿ ನಿತ್ಯವೂ ಅಲ್ಲಿಯ ತೋಟಗಳಿಗೆ ಉತ್ಸುಕರಾಗಿ ಬರುವರು.

೬೪. ತಮ್ಮ ಎಳನೀರನ್ನು ಜಿನಾಭಿಷೇಕಕ್ಕೂ ಹೂಗಳನ್ನು ಜಿನನ ಪಾದಪೂಜೆಗೂ, ಹಣ್ಣುಗಳನ್ನು ನೈವೇದ್ಯಕ್ಕೂ ತಳಿರನ್ನು ತೋರಣಕ್ಕೂ ನೀಡಿ- ಹೀಗೆ ಗಳಿಸಿದ

---

೧ ಚಾ (ಕಾ), ೨ ಳ (ಪ). ೩ ಳಿ ಪ್ರತತಿ (ಕ), ಳಾಪೆಯಿರೆ (ಕಾ), ೪ ಕಾವ್ಯಾ (ಕ), ೫ ರಲಗೆ (ಕ), ಲರಗೇ (ಕಾ), ೬ ಳೆ (ಕ, ಮ),

ವ|| ಎನೆ ಸೊಗಯಿಸುವ ಸುಗಂಧಿ[೧]ಳ ವಿಷಯಕ್ಕೆ ಭೂಷಣಮಾಗಿ

ಮುತ್ತಿನ ತೋರಣಂ ಗಜದ ನೆತ್ತಿಯ ಮುತ್ತುಗಳೆಲ್ಲ ಪಲ್ಗಳೊ
ಳ್ಪತ್ತಿದ ಪೋಲ್ವೆಯಂ ಪಡೆವ ಗೋಪುರ ಪಂಚಕ[೨]ಮಾಸ್ಯ[೨] [೩]ಮಾಗೆ[೩] ಮೆ
ಯ್ವೆತ್ತಿರೆ ಪಾಯ್ದು ಕುಂಭಿನಿಯ ಮೇಲೆ ಸುಧಾಧವಳಂ ಪ್ರತಾಪಮಂ
ಪೊತ್ತುದದೊಂದು ಸಿಂಹಪುರಮೆಂಬ ಪುರಂ ಜ[೪]ನಘೋಷಗರ್ಜಿತಂ ೬೭

ಸುರತದ ಸುಗ್ಗಿ ಕಾಮನ ಸರಲ್ಗಳ ಪೂವಿನ ಪೊಳ್ತು ಮುತ್ತಿನಾ
ಭರಣದ ಜೊನ್ನಮವ್ವಳಿಪ ನೀಳದ ಕಾಳದ ಮರ್ವು [೫]ಬೇಟ[೫]ದೊಂ
ದುರಿಗಳ ಬೆಟ್ಟ ಬೇಸಗೆ ಸುರಾಗರಸಂಗಳಕಾರಮುಂಬು ತ
ತ್ಪುರವರದಲ್ಲಿ ಸಾತ್ವಿಕದ ಮೆಯ್ನಡುಕಂಗಳ ಮಾಗಿಯಾಗಳುಂ ೬೮

ವ|| ಆ ಪುರದ ಪರಮೇಶ್ವರನ ಪರಮ ಪುರುಷೋತ್ತಮಾವತಾರನವಾರಪಾರ ಗಂಭೀರನಪಾರ ಪುರುಷಾರ್ಥಪ್ರಸೂ [ತ][೬] ಶೀತಳ ನಭಸ್ಥಳ ತಿಳಕ ತುಷಾರಕರ ಶಿಶಿರ ಶರದಭ್ರವಿಭ್ರಮ ದಶದಿಶಾಮುಖಮಂಡಲ ಮಂಡನೀಭೂತ ವಿಶದಯಶಃ ಪ್ರಹಾಸನನರ್ಹದ್ದಾಸನೆಂಬೊಂ

ಪುಣ್ಯಪ್ರಭಾವದಿಂದ ಸ್ವರ್ಗಕ್ಕೆ ಹೋದ ಈ ನಾಡಿನ ತೋಟವೆ ಇಂದ್ರನ ನಂದನವಾಯಿತೊ ಏನೊ! ಹಾಗಲ್ಲವಾದರೆ ಬನಕ್ಕೂ ಸ್ವರ್ಗಕ್ಕೂ ಏನು ಸಂಬಂಧ?

ವ|| ಹೀಗೆ ಕಂಗೊಳಿಸುವ ಸುಗಂಧಿಳನಾಡಿಗೆ ಅಲಂಕಾರವಾಗಿ -

೬೭. ಆನೆಯ ಮೇಲೆ ಆಕ್ರಮಣಮಾಡಿ ಸೀಳಿದಾಗ ಅದರ ನೆತ್ತಿಯ ಮುತ್ತುಗಳೆಲ್ಲ ತನ್ನ ಹಲ್ಲುಗಳಿಗೆ ಅಂಟಿಕೊಂಡುವೊ ಏನೊ ಎಂಬ ಹಾಗಿರುವ ಸಿಂಹಮುಖಕ್ಕೆ ಸದೃಶವಾದ ಐದು ಗೋಪುರಗಳಿಂದಲೂ ಸಿಂಹ ಗರ್ಜನೆಯಂತಿರುವ ಘನವಾದ ಘೋಷಣೆಗಳಿಂದಲೂ ಕೂಡಿ ಧವಳ ಪ್ರತಾಪವನ್ನುಳ್ಳ ಸಿಂಹಪುರವೆಂಬ ಪಟ್ಟಣವಿರುವುದು.

೬೮. ಸುರತಕ್ರೀಡೆಯ ಸುಗ್ಗಿ, ಕಾಮಬಾಣಗಳ ಸಂಧ್ಯಾಕಾಲ, ಮುತ್ತಿನಾಭರಣಗಳ ಬೆಳ್ದಿಂಗಳು, ನೀಲರತ್ನದ ಕತ್ತಲೆ, ವಿರಹಾಗ್ನಿ, ಹೊತ್ತಿ ಉರಿಯುವ ಬೇಟದ ಬೇಸಗೆ, ರಾಗರಸದ ಮುಂಗಾರು, ಸಾತ್ತ್ವಿಕವಾದ ಮೈನಡುಕದ ಚಳಿಗಾಲ - ಇವು ಅಲ್ಲಿ ಸದಾಕಾಲವೂ ಇರುವುವು.

ವ|| ಪುರುಷೋತ್ತಮನ ಅಪರಾವತಾರನೆನಿಸುವವನೂ ಅಪಾರ ಸಮುದ್ರದಂತೆ ಗಂಭೀರನೂ ಪುರುಷಾರ್ಥದಿಂದ ಗಳಿಸಿದ ತನ್ನ ಧವಳ ಯಶೋವಿಸ್ತಾರದಿಂದ ಚಂದ್ರನನ್ನೂ ಶರತ್ಕಾಲದ ನಿರ್ಮಲ ಮೇಘಗಳನ್ನೂ ಅಲಂಕರಿಸಿದವನೂ ಆದ ಅರ್ಹದ್ದಾಸನೆಂಬವನು ಆ ಪುರಕ್ಕೆ ಅಧಿಪತಿಯಾಗಿರುವನು.

---

೧ ಧ (ಕಾ), ೨ ಶೂನ್ಯ (ಕಾ), ೩ ತೂಗ್ರ (ಮ), ೪ ಘ (ಕಾ), ೫ ಬೆಟ್ಟ (ಕ), ೬ ತಾ (ಕ, ಕಾ, ಮ).

ಮದನಂ ರೂಪಿಂಗೆ ದಾಸಂ ಮನೆಗೆ ನೃ[೧]ಪನ ಪುಣ್ಯೋದಯಂ ದಾಸನರ್ಕಂ
ಮದವತ್ತೇಜಂಗೆ ದಾಸಂ ವಿಧುವದನಯಶಃಶ್ರೀಗೆ ದಾಸಂ ಕೃತಾಂತಂ
ಕದನಕ್ರೋಧಕ್ಕೆ ದಾಸಂ ಗುರುಭುಜಕೆ ಜಯಂ ದಾಸನೆಂದಂದಂದಿಂ ನಾ
ರ್ಪದೆದರ್ಹದ್ದಾಸ ಭೂಪಂಗರಸರೆಸಕದಿಂದಾಸೆಯಿಂ ದಾಸರಾದರ್ ೧೯

ಪೂಸಲ್ಮೆಯ್ಗರ್ಹದಂಘ್ರಿದ್ವಯ ಪರಿಚಯ ಪೂತೋ[೨]ತ್ತಮಂ ದಿವ್ಯಗಂಧಂ
ಸೇಸಿಕ್ಕಲ್ಗಂಧಶಾಲ್ಯಕ್ಷತಶತ[೩]ಮನಿಶಂ ಪುಷ್ಪದಾಮಂ ತುಱುಂಬಲ್
ಸೀಸಕ್ಕಿಂಬಾದುದೆಂಬಂದೆಲೆ ಕುಳವಟಿಯಿಂ ಬಂದ ದಾಸತ್ವಮರ್ಹ
ದ್ದಾಸಂಗೇನಣ್ಣ ನಾಟ್ಟಿ[೪]ರ್ತನಮೆ ಸಕಳ ಪೃಥ್ವೀಪತಿ ಪ್ರಾರ್ಥನೀಯಂ ೨೦

ಜಿನಪತಿಯ ಪೆರ್ಮೆಗವನೊ
ರ್ವನೆ ದಾಸನೆ ದಾಸರ[೫]ಲ್ಲದವರಾರ್ ಜಗದೊಳ್
ಜಿನನುಂಡೊ[೬]ಲ್ಲದೆ ಬಿಸುಟಿಂ
ದ್ರನರೇಂದ್ರಾದ್ಯಖಿಳರಾಜ್ಯಸು[೭]ಖ[೮]ಮುಣ್ಬ[೯]ವರೊಳ್ ೨೧

ನಿರ್ಹಾಸಂ ಕುಚಕಂಜಕುಟ್ಮಲಯುಗಂ ಮುಗ್ಧಾನನಂ ವರ್ಜಿತಾಂ
ತರ್ಹಾಸಂ ಕುಸುಮಚ್ಯುತಂ ಕಚಭರಂ ಕರ್ಣಂ ಕನತ್ಕರ್ಣಿಕಾ
ಬರ್ಹಭ್ರಷ್ಟಮೆನಲ್ಕೆ ಶೋಕತಪ[೮]ಮಂ ನಿಃಕೋಶ ನಿರ್ಗ್ರಂಥಮಿ
ರ್ದರ್ಹದ್ದಾಸನ ಖಡ್ಗಮೀವುದು ರಿಪುಸ್ತ್ರೀಯರ್ಗೆ ತಾ[೧೦] ರುಣ್ಯದೊಳ್ ೨೨

೧೯. ಆತನ ರೂಪಕ್ಕೆ ಮನ್ಮಥನು ದಾಸ, ಮನೆಗೆ ಪುಣ್ಯೋದಯವು ದಾಸ, ತೇಜಸ್ಸಿಗೆ ಸೂರ್ಯನು ದಾಸ, ಯಶೋವೈಭವಕ್ಕೆ ಚಂದ್ರನು ದಾಸ, ಯುದ್ಧಕೋಪಕ್ಕೆ ಯಮನೇ ದಾಸ, ಮಹಾಬಾಹುಗಳಿಗೆ ಗೆಲವು ದಾಸ - ಹೀಗೆ ಇವರೆಲ್ಲರಿಂದ ದಾಸತ್ವವನ್ನು ಸಂಪಾದಿಸಿದುದನ್ನು ಕಂಡು ಭೂಮಿಯ ಅರಸರು ತಾವಾಗಿ ಅರ್ಹದ್ದಾಸನಿಗೆ ದಾಸ (ಅಧೀನ)ರಾದರು.

೨೦. ಅರ್ಹದ್ದಾಸನು ಲೇಪಿಸಿಕೊಳ್ಳುವದು ಅರ್ಹಂತನ ಪಾದಪೂಜೆಯಿಂದ ಪವಿತ್ರವಾದ ದಿವ್ಯಗಂಧ; ಶೇಷಾಕ್ಷತೆಗಳು ಗಂಧಶಾಲಿಯ ಅಕ್ಷತೆಗಳು; ತಲೆಗೆ ಮುಡಿದುಕೊಳ್ಳುವುದು ಅರ್ಹಂತನ ನಿರ್ಮಾಲ್ಯವಾದ ಹೂಮಾಲೆಗಳು ರಾಜರೆಲ್ಲ ಹಂಬಲಿಸುವಂತಹ ಈ (ದೇವ) ದಾಸತ್ವವು ಕುಲಪರಂಪರಾಗತವಾಗಿ ಅರ್ಹದ್ದಾಸನಿಗೆ ಬಂದಿರುವುದು ಸಾಮಾನ್ಯವೆ?

೨೧. ಅರ್ಹಂತನ ಘನತೆಗೆ ಅವನೊಬ್ಬನೆ ದಾಸನೆ? ಜಿನೇಂದ್ರನು ತಾನುಂಡು ಒಲ್ಲೆನೆಂದು ಬಿಸಾಕಿದ ಇಂದ್ರಪದವಿ, ರಾಜ್ಯಪದವಿ, ಮೊದಲಾದ ಸೌಖ್ಯಗಳನ್ನು ಉಣ್ಣುವವರಲ್ಲಿ ಆತನಿಗೆ ದಾಸರಲ್ಲದವರು ಯಾರು?

೨೨. ಕುಚಕುಟ್ಮಲಗಳು ನಿಸ್ತೇಜವಾಗಿವೆ; ಮುಗ್ಧಮುಖಗಳಲ್ಲಿ ನಗೆಯೆಂಬುದಿಲ್ಲ; ತಲೆಗೂದಲು ಹೂ ಮುಡಿಯದು; ಹೊಳೆಯುವ ಓಲೆ ಕಿವಿಯಿಂದ ಹೊರಟು ಹೋಗಿದೆ.

---

೧ ದ್ರು (ಕ). ೨ ರೋ (ಕಾ, ಮ), ೩ ರ (ಕಾ), ೪ ಕ (ಕಾ), ೫ ನ (ಕ), ೬ ಡ (ಕಾ), ೭ ಮು (ಕ) ೮ ಮೆಂಬಿ (ಕಾ), ೯ ಮ (ಪ), ೧೦ ಕಾ (ಕ),

ಜಿನದತ್ತೆಯೆಂಬಳಾ ಭೂ
ಪನ ಕುಲವಧು ತನ್ನ ದಾಸನೆಂದೊಸೆದು ಕರಂ
ಜಿನನಿತ್ತ ಪುಣ್ಯಲಕ್ಷ್ಮಿಯ
ನನುಕರಿಸುವಳೆಸೆಯೆ ಸಿರಿಯೊಳಂ ಶೀಲದೊಳಂ ೨೩

ಮೊಲೆಬಿಣ್ಪಿಂ ಮುಱಿದಪುದೀ
ಲಲನೆಯ ಬಡನಡುವಿದೆಂದು ಕುಸುಮಶರಂ ಕೆ
ಯ್ವೊಲದಾಂಕೆಗೊಟ್ಟ ನೀಲದ
[೧]ಸಲ[೧]ಗೆಯಿದೆನೆ ರೋಮರಾಜಿ ರಾಜಿಸಿ ತೋರ್ಕುಂ ೨೪

ಅಲರಾಗಿ ನಿರೀಕ್ಷಿಸಿ ಕಾ
ದಲಸಂ[೨] ಮುಗುಳಾಗಿ ಸೋಂಕಿದೆಡೆಯೊಳ್ ಕಾಮಂ
ಗಲಸದೆ ಸರಳಾಗಿ ಪಳಂ
ಚಲೆವುದು [೩]ತೊಳಪ[೩]ವಳಪಾಂಗಮಲರ್ಗಳ ಪಾಂಗಂ ೨೫

ಪೋ ವ್ರತಮಾವ ಪೆಂಡಿರೊಳಮಿರ್ದೊಡಮೇನೊ ವಿಳಾಸಮಾಂತ ನಿ
ತ್ಯವ್ರತಮಾಕೆಯೊಳ್ ಸೊಬಗುವೆತ್ತ ಗುಣವ್ರತ ಮಾಜಗದ್ ವಿಳಾ
ಸವ್ರತಿ ಕೊಂಡ ದೇಶವಿರತಿವ್ರತಮಾ ನೃಪನೆತ್ತಿದೇಕ ಪ
ತ್ನೀವ್ರತಮೆಯ್ದೆ ಸೂಚಿಸವೆ ಕಾಂತೆಯ ರೂಪಿನ ಪೆಂಪಿನೊಲ್ಮೆಯಂ ೨೬

ಶತ್ರುಗಳ ಸ್ತ್ರೀಯರಿಗೆ ಈ ಅವಸ್ಥೆಯೇಕಾಯಿತು? ಒರೆಗಳಚಿ ಬಂದ ಅರ್ಹದ್ದಾಸನ ಖಡ್ಗವು ಕರುಣೆಯಿಂದ ಇವರಿಗೆ ಶೋಕ ತಪಸ್ಸಿನ ದೀಕ್ಷೆ ನೀಡಿದೆ.

೨೩. ಆ ಅರಸನ ಧರ್ಮಪತ್ನಿ ಜಿನದತ್ತೆಯೆಂಬುವಳು. ತನ್ನ ಭಕ್ತನೆಂದು ಜಿನನು ಅರ್ಹದ್ದಾಸನಿಗೆ ಅನುಗ್ರಹಿಸಿದ ಪುಣ್ಯಲಕ್ಷ್ಮಿಗೆ ಈಕೆ ಶೋಭೆಯಲ್ಲಿಯೂ, ಶೀಲದಲ್ಲಿಯೂ ಸದೃಶಳಾಗಿರುವಳು

೨೪. ಮೊಲೆಗಳ ಭಾರಕ್ಕೆ ಈ ಚೆಲುವೆಯ ತೆಳುನಡು ಮುರಿದು ಹೋದೀತೆಂದು ಶಂಕಿಸಿ, ಕಾಮನು ಆನಿಕೆಯಾಗಿ ನಿಲ್ಲಿಸಿದ ನೀಲರತ್ನದ ಶಲಾಕೆಯೊ ಏನೊ ಎಂಬಂತೆ ಆಕೆಯ ಹೊಕ್ಕುಳ ಮೇಲಿನ ರೋಮರೇಖೆ ಕಂಗೊಳಿಸುವುದು.

೨೫. ತನ್ನ ಕಾಂತನನ್ನು ನೋಡುವಾಗ ಅರಳಿದ ಹೂವಾಗಿ, ಸ್ಪರ್ಶಸುಖ ಪಡೆಯುವಾಗ ಮೊಗ್ಗಾಗಿ, ವರ್ತಿಸುವ ಆಕೆಯ ಉಜ್ವಲವಾದ ಕುಡಿನೋಟವು ಕಾಮನ ಬಾಣವಾಗಿ ಹೂವಿನ ಬೆಡಗನ್ನು ಸೋಲಿಸುವುದು.

೨೬. ವ್ರತ ಯಾವ ಸ್ತ್ರೀಯರಲ್ಲಿದ್ದರೇನು ಪ್ರಯೋಜನ? ಜಿನದತ್ತೆಯಲ್ಲಿ ನಿತ್ಯವಾಗಿರುವುದು ವಿಲಾಸದ ವ್ರತ. ಹೀಗೆ ನಿತ್ಯವಿಲಾಸವರಿಯದ ಆಕೆ ಕೈಕೊಂಡ ದೇಶವಿರತಿಯೆಂಬ ಗುಣವ್ರತ ಹಾಗೂ ಆಕೆಯ ಪತಿಯು ಪಾಲಿಸುತ್ತಿರುವ ಏಕಪತ್ನೀವ್ರತ-ಇವು ತಾವೇ ಜಿನದತ್ತೆಯ ರೂಪದ ಅಗ್ಗಳಿಕೆಯನ್ನೂ ಪ್ರೇಮದ ಘನತೆಯನ್ನು ಸೂಚಿಸುವುದಿಲ್ಲವೆ?

---

೧ ಪಲ (ಮ), ಸಲಿ (ಕ). ೨ ನ (ಕ), ೩ ಪೊಳೆವ (ಕಾ, ಮ),

ವ|| ಅಂತು

ಮಂದಾರಮೊಂದು ಪುಟ್ಟುವ
ಮಂದರಮುಂ ವಾರ್ಧಿವೇಲೆಯುಂ ಮಾಣಿಕಮೊ
ಲ್ದೊಂದೊಗೆವ ರೋಹಣಾಚಳ
ಮುಂ ಧ[೧]ರೆಯುಂ ದೊರೆಗೆವಂದ ಪತಿಯುಂ ಸತಿಯುಂ ೭೭

ವ|| [೨]ಅಂತಿಷ್ಟ[೨] ವಿಷಯ ಕಾಮಭೋಗಂಗಳನನುಭವಿ[೩]ಸುತ್ತುಮಿ[೩]ರ್ಪಿನದೊಂದು ದಿವಸಂ

ಮುನಿಚರ್ಯಾಕಾಲಮೀ ಧಾರ್ಮಿಕಜ[೪]ನಗೃಹಮಂ ಪುಣ್ಯಮೆಯ್ದುರ್ಪ ಕಾಲಂ
ಜಿನದತ್ತಾದೇವಿ ದಾನಂಗುಡುವ[೫]ಬವಸೆಯೊಳ್ಗಾಲಮೀ ಕಾಲಮಾರುಂ
ಮನೆಯೊಳ್ ಸೂನಂಗಳಂ ಸಂಧಿಸದಿರಿಮಿರಿ[೬]ಮಾಚಾರದಿಂದೆಂದು ಪೃಥ್ವೀ
ಜನಕೆಲ್ಲಂ ಸಾಱುವಂತೇನೊಗೆದುದೋ ಮಿಗೆ ಮಧ್ಯಾಹ್ನ ಶಂಖಪ್ರಣಾದಂ ೭೮

ಸದಮಳ ಪಾತ್ರಕ್ಷೇತ್ರದೊ
ಳಿದು ಬಿತ್ತುವ ಪದದ ಪೊೞ್ತು ಗೃಹಮೇಧಿಗದೇ
ವುದೊ ಮಧ್ಯಾಹ್ನದ ಪೊೞ್ತಿ
ಲ್ಲದ ಪೊೞ್ತುಂ ಬಂಜೆವೊೞ್ತು ತಾನದು ಪೊೞ್ತೇ ೭೯

೭೭. ಮಂದಾರಕ್ಕೆ ಜನ್ಮಭೂಮಿಯಾದ ಮಂದರಗಿರಿ ಹಾಗೂ ಸಮುದ್ರವಲಯಕ್ಕೂ, ಮಾಣಿಕದ ಜನ್ಮಸ್ಥಾನವಾದ ರೋಹಣಗಿರಿ ಹಾಗೂ ಭೂಮಿಗೂ ಆ ಗಂಡ ಹೆಂಡತಿ ಸರಿಸಮಾನವಾಗಿರುವರು.

ವ|| ಹೀಗಿರುವ ದಂಪತಿಗಳು ಸುಖಭೋಗಗಳನ್ನು ಅನುಭವಿಸುತ್ತ ಇರುವಾಗ ಒಂದು ದಿನ-

೭೮. "ಇದು ಮುನಿಗಳು ಚರಿಗೆಗೆ ಬರುವ ಸಮಯ; ಧಾರ್ಮಿಕ ಜನರ ಮನೆಗೆ ಪುಣ್ಯ ನಡೆದು ಬರುವ ಸಮಯ; ಜಿನದತ್ತಾದೇವಿ ದಾನೋದ್ಯೋಗದಲ್ಲಿ ತೊಡಗಿರುವ ಸಮಯ; ಈ ಹೊತ್ತಿನಲ್ಲಿ ಯಾರೂ ಮನೆಯಲ್ಲಿ ಒಲೆ, ಬೀಸುಕಲ್ಲು, ಬೆಂಕಿ ಮೊದಲಾದ ಪಂಚಸೂನಗಳನ್ನು ಮುಟ್ಟಕೂಡದು" ಎಂದು ಲೋಕದ ಜನಕ್ಕೆಲ್ಲ ಡಂಗುರ ಹೊಡೆಯುವುದೂ ಏನೊ ಎಂಬಂತೆ ಮಧ್ಯಾಹ್ನ ಸೂಚಕ ಶಂಖ ಮೊಳಗಿತು.

೭೯. ಉತ್ತಮ ಪಾತ್ರವೆಂಬ ಕ್ಷೇತ್ರದಲ್ಲಿ (ದಾನವೆಂಬ ಬೀಜವನ್ನು) ಬಿತ್ತುವುದಕ್ಕೆ ಯೋಗ್ಯವಾದ ಸಮಯವೆಂದರೆ ಮಧ್ಯಾಹ್ನದ ಸಮಯವೇ. ಗೃಹಸ್ಥನಿಗೆ ಫಲಪ್ರದವಾಗುವ ಈ ಕಾಲವೇ ಸುಕಾಲ. ನಿಷ್ಫಲವಾದ ಕಾಲದಿಂದ ಏನು ಪ್ರಯೋಜನ?

---

೧ ದೊ (ಕಾ, ಮ) ೨ ಇಷ್ಟ (ಕಾ), ೩ ಸಿ (ಕ), ಸುತ್ತಿ (ಮ), ೪ ಜಿ (ಕ), ೫ ಬೆ (ಕ, ಮ), ೬ ಸಿಡೆತಿಮಿರೆ (ಕ).

ವ|| ಆದಂ ಕೇಳ್ದು ಕಾರಮೊಟಿಗಂ ಕೇಳ್ದ ನವಿಲಂತೆ ನಲಿದು ಯತಿ[೧]ಗಳ ಪಾವನ ಪದಪದ್ಮಂಗಳಂಗಣಮಂ ಮೆಟ್ಟಿ ಪವಿತ್ರಂ ಮಾಟ್ಪಿ ಪೊೞ್ತಾದುದೆಂದು ಬೇಗಮಬ್ಬೆಗಳಂ ವಂದಿಸಿ ಬಸದಿಯಂ ಪೊಱಮಟ್ಟರಮನೆಯ ಬಾಗಿಲ್ವಾಡದೊಳ್ ವಿಭವಂಬೆರಸು ಬಂದಿರ್ದಳನ್ನೆಗಂ

ಹರಿಯುಂ ಕರಿಯುಂ ಪುಲಿಯುಂ
ಹರಿಣೆಯುಮೊಂದಾಗಿ ಮಚ್ಚಿ ಬೆಚ್ಚದೆ ಬೆನ್ನೊ
ಳ್ಬರೆ ಗಡಣದೊಳಾ ನಗರ
ಕ್ಕರಣ್ಯದಿಂ ಚರಿಗೆಗೊಟ್ಟಂಗಜಮಲ್ಲಂ ೮೦

ಪೆಗಲೊಳ್ದಕ್ಷಿಣ ಹಸ್ತಮೊಪ್ಪೆ ಸಪಿನಂ ವಾಮಂ ಕರಂ ತಾಗೆ ಗುಂ
ಡಿಗೆಯಂ ದೃಷ್ಟಿಯುಗಪ್ರಮಾಣ ಪಥ[೨]ದೊಳ್ಮತ್ತೆತ್ತಲುಂ ಸೂ[೩]ಸದೊ[೩]
ಲ್ಬುಗೆ ನಿಷ್ಪಂದಮೆನಲ್ಕಪೂರ್ವತನುಕಣ್ಣಂ ಮುಟ್ಟುವಂತೊಯ್ಯನೊ
ಯ್ಯಗೆ[೪] ಕಾಲ್ಗಳ್ನೆಲ ಮುಟ್ಟೆ ಚಂದ್ರಗತಿಯಿಂ ಬಂದಂ ಮುನೀಂದ್ರೋತ್ತಮಂ ೮೧

ಒಂದುಂ ಪ್ರಾಣಿಗೆ ಭಯಮುಂ
ದಂದುಗಮುಂ ನೋವುಮೆಯ್ದೆ ಬಾರದ ತೆಱದಿಂ
ಬಂದಂ ಚರಿಗೆಗೆ ಬನದಿಂ
ಮಂದಾನಿಲನಂತೆ ಕುಕ್ಕುಟಾಸನದೇವಂ ೮೨

ವ|| ಆ ಶಂಖಧ್ವನಿಯನ್ನು ಕೇಳಿ, ಮಳೆಗಾಲದ ಗುಡುಗನ್ನು ಕೇಳಿದ ನವಿಲಿನಂತೆ ಜಿನದತ್ತೆಯು ಹರ್ಷಿಸಿ, ಮುನಿಗಳ ಪಾದಸ್ಪರ್ಶದಿಂದ ಮನೆಯ ಅಂಗಳ ಪವಿತ್ರವಾಗುವ ಕಾಲವಾಯಿತೆಂದು ಅರಿತು, ಆರ್ಯರಿಗೆ ನಮಸ್ಕರಿಸಿ, ಬಸದಿಯಿಂದ ಹೊರಬಂದು ಅರಮನೆಯ ಬಾಗಿಲ ಬಳಿಗೆ ವೈಭವದಿಂದ ಬಂದಳು; ಅಷ್ಟರಲ್ಲಿ -

೮೦. ಆನೆಗಳೊಡನೆ ಸಿಂಹಗಳೂ, ಜಿಂಕೆಯೊಡನೆ ಹುಲಿಗಳೂ ಒಂದನ್ನೊಂದು ಸ್ನೇಹಗೊಂಡು ನಿರ್ಭಯವಾಗಿ ಕೂಡಿಕೊಂಡು ತಮ್ಮನ್ನು ಹಿಂಬಾಲಿಸಿ ಬರುತ್ತಿರಲಾಗಿ ಮನ್ಮಥ ವಿಜಯಿಯಾದ ಯತಿಯು ಕಾಡಿನಿಂದ ಹೊರಟು ಚರಿಗೆಗಾಗಿ ನಗರಕ್ಕೆ ಬಂದನು.

೮೧. ಬಲಗೈಯನ್ನು ಹೆಗಲ ಮೇಲಿಟ್ಟು, ಎಡಗೈಯಲ್ಲಿ ಕಮಂಡಲುವನ್ನು ಹಿಡಿದುಕೊಂಡು, ಕಣ್ಣುಗಳನ್ನು ದಾರಿಯ ಮೇಲಲ್ಲದೆ ಬೇರೆಡೆಗೆ ಎಲ್ಲಿಯೋ ಹೊರಳಿಸದೆ, ಮೆಲ್ಲಮೆಲ್ಲಗೆ ಹೆಜ್ಜೆಯಿಡುತ್ತಾ ಚಂದ್ರಗತಿಯಿಂದ ಆ ಮುನೀಂದ್ರನು ಬಂದನು.

೮೨. ಒಂದು ಪ್ರಾಣಿಗೆಕೂಡ ಅಂಜಿಕೆಯಾಗಲಿ, ಅನಾನುಕೂಲವಾಗಲಿ, ನೋವಾಗಲಿ ಎಷ್ಟೂ ಒದಗದಂತೆ ಎಚ್ಚರ ವಹಿಸಿ ತಂಗಾಳಿ ಬಂದ ಹಾಗೆ ಕುಕ್ಕುಟಾಸನದೇವನು ಚರಿಗೆಗೆ ಬಂದನು

---

೧. ಯು (ಮ), ೨ರ (ಕ), ದ (ಮ), ೩ ಸೆದೂ (ಕಾ), ೪ ನೆ (ಮ),

ಬಟೆಸಂದು [೧]ಮುದದೆ[೧] ಕಂಪಿಂ
ಗೆಬಿಲೆ ಮನಂ ಮೇಗೆ[೨] ನೆಗೆದ ಮಲಧಾರಿಗೆ ಮೆಯ್
ನೆಬಿಲಾದಳಿತತಿ ಪೀಲಿಯ
ತ[೩]ಟೆ[೩]ಯಂಬರದಲ್ಲಿ ಬರ್ಪ ತೆಱನಾಯ್ತಾಗಳ್ ೮೩

ಅಡಿಗೆಱಪ ಜನಕ್ಕಾಗಳೆ
ಕುಡಲೆ ಸಹಸ್ರಾಕ್ಷಪದವಿಯಂ ಮುನಿ ಕೆಯ್ಯೊಳ್
ಪಿಡಿದಿರ್ಪಂತೆವೊಲೆಸೆದ
ತ್ತಿಡಿದೊಪ್ಪುವ ಪಲವು ಕಣ್ಣ ಪೀಲಿಯ ಕುಂಚಂ ೮೪

ಕಾಣಲ್ಬಾರದ ಸೂಕ್ಷ್ಮ[೬]
ಪ್ರಾಣಿಗಳಂ ನೋಡಿ ನಡೆಯಲೆಂದಾ ಜೀವ
ತ್ರಾಣನ ಕಾಲಂ[೪] ಕಣ್ಗಳೆ
ಮಾಣಿಕದಂತಾದುವೆನಿಸಿ ತೊಳಗಿದುವುಗುರ್ಗಳ್ ೮೫

ಮುನಿಪತಿಯ ತೋರ್ಪ ಬ[೫]ರಿಯೆಲು
ವಿನ ಪು[೬]ದುವಿಂ[೬] ಬೂದಿವಾಱುತಿರ್ಪಿರವಿಂ ಕಾ
ಮನ ಸುಟ್ಟ ಕಾಡಿದೆನೆ ಕ
ರ್ಗನೆ ಗನಿತುದು ಮಲದ ಮಸಿಯ ಮಸಕ[೭]ದಿನಂಗಂ ೮೬

೮೩. ಪರಿಮಳಕ್ಕೆ ಮನಸೋತು ಮೇಲಕ್ಕೆ ನೆಗೆದ ದುಂಬಿಗಳ ಹಿಂಡು ಸಂತೋಷದಿಂದ ಯತಿಯೊಡನೆಯೆ ಸಾಗಿ ಬರುತ್ತಿರಲಾಗಿ ಮಲಧಾರಿಯತಿಯ ಮೈಗೆ ನೆಳಲಾಗುವಂತೆ ನವಿಲುಗರಿಯ ಕೊಡೆಯೊಂದು ಅಂತರಿಕ್ಷದಲ್ಲಿ ನಡೆದು ಬರುತ್ತಿದೆಯೊ ಏನೊ ಎಂಬಂತೆ ಕಂಗೊಳಿಸಿತು.

೮೪. ಪಾದಕ್ಕೆ ಎರಗಿದ ಜನರಿಗೆ ತಟ್ಟನೆ ಸಹಸ್ರಾಕ್ಷ (ಇಂದ್ರ)ನ ಪದವಿಯನ್ನು ಕೊಡಲೆಂದು ಮುನಿಯು ಅದನ್ನು ಕೈಯಲ್ಲಿ ಹಿಡಿದಿರುವನೊ ಏನೊ ಎಂಬಂತೆ, ಆತನ ಕೈಯಲ್ಲಿರುವ ಹಲವು ಕಣ್ಣಿನ ನವಿಲುಗರಿಯ ಕುಂಚ ಕಂಗೊಳಿಸಿತು.

೮೫. (ಮೇಲಿನಿಂದ) ಕಾಣಲಾರದ ಸೂಕ್ಷ್ಮಜೀವಿಗಳನ್ನು ನೋಡಿ ನಡೆಯಬೇಕೆಂದು ಆ ಜೀವರಕ್ಷಕನ ಕಾಲುಗಳು ತಾವೇ ಮಾಣಿಕ್ಯದಂತಹ ಕಣ್ಣುಗಳನ್ನು ತಾಳಿದುವೊ ಏನೊ ಎಂಬಂತೆ ಆತನ ಕಾಲುಗುರುಗಳು ಥಳಥಳಿಸಿದುವು.

೮೬. ಆ ಮುನೀಂದ್ರನ ಮೈಯಲ್ಲಿ ಎದ್ದು ಕಾಣುವ ಬರಿಮೂಳೆಗಳೂ, ಬೂದಿ ಹಾರುತ್ತಿರುವ ಸ್ಥಿತಿಯೂ, ಇದ್ದಿಲಂತೆ ಕೂಡಿಬಿದ್ದ ಮೈಯಮೇಲಿನ ಕಪ್ಪುಮಲವನ್ನೂ ನೋಡಿದರೆ ಇದೇನೋ ಕಾಮನನ್ನು ಸುಟ್ಟ ಕಾಡೋ ಏನೋ ಎಂದೆನಿಸುವುದು.

---

೧ ಮುಂದೆ (ಕ, ಮ), ೨ ಲೆ (ಕ, ಮ), ೩ ಕ, (ಕ). ೪ ಲ್ಗ (ಕ, ಮ). ೫ ಪಿ (ಕಾ), ೬ ದಿಮಿ (ಕ), ದಿಲಿಂ (ಘ), ೭ ಳ (ಕ, ಮ),

ಉಲಿವ ದಯಾತರಂಗಿಣಿಯ ಪಾವಸೆ ಕರ್ಬುರ ಕಾಯದೀಪಕ
ಜ್ಜಲಮುಮರ್ದಪ್ಪಿಕೊಂಡ ಶ[೧]ಮಲಕ್ಷ್ಮಿಯ ಮೆಯ್ಯ ಮೃಗೋದ್ಭವಂ ತಪೋ
ನಲ ನವಧೂಮಲೇಖೆಧೃತಿಪರ್ವತಲಗ್ನಘನಾಳಿ ಪಾಱೆ ಪೋ
ಗಲೆ ಪೊಱಮಟ್ಟ[೨] ಪಾಪಮೆನಿಸಿತ್ತು ಮಲಂ ಮಲಧಾರಿದೇವನಾ ೮೭

ವ॥ ಅಂತು ತನ್ನ ಪುಣ್ಯಮೆ ಬರ್ಪಂತು ಬರ್ಪ ಪರಮ ಋಷಿಯರಂ ಕಂ[೩]ಡಿದಿರೊಳ್ ಬರ್ಪ[೩] ನಿಧಾನಮಮಂ ಕಂಡಂತೆ ಕೃತಾರ್ಥೆಯಾಗಿ

ನ[೪]ಡೆಮಡಿ ಗಂಧವಕ್ಷತೆ ಫಲಾವಳಿ ಪೂವಿನ ಮಾಲೆ ಮುತ್ತು ಕ
ನ್ನಡಿ ಕಲಶಂ ವಿಳಾಸಿನಿಯರರ್ಚನೆ ಮಂಗಳಗೀತ ಭೇರಿ ಬೆ
ಳ್ಗೊಡೆ ಗುಡಿ ತೋರಣಂ ತೊಡಿಗೆ ಸೀಗುರಿ ಚಾಮರಮೆಂಬವೊಪ್ಪಮಂ
ಕುಡೆ ಜಿನದತ್ತೆಯೇಂ ನಡೆದಳೋ ನಿಲಿಸಲ್ಮಲಧಾರಿದೇವನಂ ೮೮

*ವ॥ ಆ ಪ್ರಸ್ತಾವದೊಳ್

ಮಱೆದುಮದೊರ್ಮೆ ಲೌಕಿಕದ ವಾರ್ತೆಯನಾಡದ[೫] ಕೆತ್ತ ಬಾಗಿಲಂ
ತೆಱೆಯದ[೬] ಭಾನುಮಸ್ತಮಿತನಾದೊಡೆ ಪೋಗದೆ ಮೆಯ್ಯನೊರ್ಮೆಯುಂ
ತುಱಿಸದ[೭] ಕುಕ್ಕುಟಾಸನಕೆ ಸೋಲದ ಗಂಡವಿಮುಕ್ತ[೮] ವೃತ್ತಿಯುಂ
ಮ[೯]ಱೆಯದ ಘೋರದುರ್ಧರ ತಪಶ್ಚರಣಂ ಮಳಧಾರಿದೇವನಾ ೮೯

೮೭. ದಯಾನಿದಿಯ ಮೇಲೆ ತೇಲುವ ಹಾವಸೆ, ದೇಹವೆಂಬ ದೀಪದ ಕಾಡಗೆ, ಪ್ರೀತಿಯಿಂದ ತಬ್ಬಿಕೊಂಡ ಶಮವೆಂಬ ಲಕ್ಷ್ಮಿಯ ಅಂಗಲೇಪವಾದ ಕಸ್ತೂರಿ, ತಪೋಗ್ನಿಯ ಹೊಗೆಯ ಲೇಖೆ, ಧೈರ್ಯ ಪರ್ವತಕ್ಕೆ ಅಂಟಿಕೊಂಡು ಮೋಡಗಳ ಸಮೂಹ, ಹಾರಿಹೋಗಲೆಂದು ಹೊರಟ ಪಾಪ- ಎಂಬಂತಿತ್ತು ಮಲಧಾರಿದೇವನ ಮೈಯಮಲ.

ವ॥ ಹೀಗೆ ತನ್ನ ಪುಣ್ಯವೆ ನಡೆದು ಬರುವಂತೆ ಬರುತ್ತಿರುವ ಮಹಾಋಷಿಗಳನ್ನು ಕಂಡು, ಎದುರಿಗೆ ಬರುವ ನಿಧಿಯನ್ನು ಕಂಡಂತೆ, ಕೃತಾರ್ಥಳಾಗಿ-

೮೮. ಹಾಸುವ ಹಡದಿ, ಗಂಧ, ಅಕ್ಷತೆ, ಫಲಗಳು, ಹೂಮಾಲೆ, ಮುತ್ತು, ಕನ್ನಡಿ, ಕಳಸ, ವಿಳಾಸಿನಿಯರ ನೃತ್ಯ, ಮಂಗಳಗೀತ, ಭೇರಿ, ಶ್ವೇತಛತ್ರ, ಧ್ವಜ, ತೋರಣ, ಆಭರಣ, ಸೀಗುರಿ, ಚಾಮರ ಮೊದಲಾದುವುಗಳಿಂದ ಶೋಭಿಸುತ್ತ ಜಿನದತ್ತೆಯು ಮಲಧಾರಿದೇವನನ್ನು ಚರಿಗೆಗೆ ನಿಲ್ಲಿಸಲೆಂದು ಉತ್ಸುಕತೆಯಿಂದ ನಡೆದಳು.

ವ॥ ಆ ಸಮಯದಲ್ಲಿ -

೮೯. "ಮರೆತು ಕೂಡ ಒಮ್ಮೆಯೂ ಲೌಕಿಕದ ವಿಷಯವನ್ನು ನುಡಿಯದ, ಮುಚ್ಚಿದ ಬಾಗಿಲನ್ನು ತೆರೆಯದ, ಸೂರ್ಯಾಸ್ತದ ನಂತರ (ಚರಿಗೆಗೆ) ಹೋಗದ, ತನ್ನ ಮೈಯನ್ನು ಒಮ್ಮೆಯೂ ತುರಿಸಿಕೊಳ್ಳದ, ಕುಕ್ಕುಟಾಸನಕ್ಕೆ ಬೇಸರಮಾಡಿಕೊಳ್ಳದ,

---

೧ ಸ (ಕ, ಪ), ೨ ಟ್ಟು (ಮ). ೩ ಡೇಳ್ತರ್ಪ (ಕ, ಮ), ೪ ಕ (ಕಾ, ಮ), * ಈ ವಚನವು 'ಕಾ' ಪ್ರತಿಯಲ್ಲಿಲ್ಲ. ೫ ದೆ (ಕಾ) ೬ ದೆ (ಕಾ), ೭ ದೆ (ಕ, ಕಾ), ೮ ಕ್ತಿ (ಕ, ಮ) ೯ ಮೆ (ಕ, ಮ).

ಮುನಿಪಂ ಚರ್ಯೆಗೆ ಪೋಗುತಿರ್ಪ ಪದದೊಳ್ಮೆಯ್ಯಲ್ಲಿ ಪತ್ತಿರ್ದ ಪು
ಟ್ತಿ[೧]ನ ಪೋರಿಂ[೧] ಪೊಱಮಟ್ಟು ಪೋದ ಮಧುಪಂ ತನ್ನಿಂದೆ ತಾನಾಗಿ ಬ
ರ್ಪಿನಮೇೞೆಂಟು ದಿನಂಬರಂ ಕರುಣದಿಂ ಕೆಯ್ಯಿಕ್ಕಿಕೊಂಡಿರ್ದ ಯೋ
ಗನಿಯೋಗಂ ಮಲಧಾರಿದೇವ ಮುನಿಪಂಗಕ್ಕುಂ ಪೆಱರ್ಗಕ್ಕುಮೇ ೯೦

ವ॥ ಎಂದೋದುವ ಮಂಗಳ ಪಾಠಕರ್ಗೆ ಮಂಗಳಭೂಷಣಂಗಳಂ ಮೆಚ್ಚುಗೊಟ್ಟು ತಚ್ಚರಣಕಮಲಂಗಳಂ ವಿಮಲವಿಲೋಚನ ಮರೀಚಿಚ್ಛಟಾ[೩] ಚಂದನ ಚರ್ಚೆಗಳಿನರ್ಚಿಸುತ್ತು ಮಿದಿರ್ವಂದು

ಅಱಿಯದೆ ಗೆಯ್ದನೆನ್ನಿನಿಯನಾತನ[೪] ಮಾಡಿದ ದುರ್ವಿನೀತಿಯಂ
ಮಱೆಯೆನ[೫]ಗಟ್ಟಿಱೆಂ ಪುರುಷ ಭೈಕ್ಷಮನಿಕ್ಕು ದಯಾಪರತ್ವಮಂ
ಮೆಱೆ ಮಱುವಾ[೬]ತು ಬೇಡಗಡಿವೆಂದು ಮನೋಜನ ಕಾಂತೆ[೭]ಕೂರ್ತು[೭] ಬಂ
ದೆಱಗುವ ಪಾಂಗಿನಿಂದೆಱಗಿದಳ್ಮಲಧಾರಿಯ ಪಾದಪದ್ಮದೊಳ್ ೯೧

ವ॥ ಅಂತು ನಿಧಾನಕ್ಕೆಱಗುವ ದೀಪವರ್ತಿ[೮]ಯಂತೆಱಗಿ[೮] ತುಱುಗಿದರ್ಚನೆಗಳಿಂದರ್ಚಿಸಿ ಗುರುಭಕ್ತಿಪೂರ್ವಕಂ ಬಂದಿಸಿ ನಿರ್ಮಲಮಪ್ಪ ನಿಮ್ಮಡಿಗಳೆಂಬರುಣಾಂಬುಜಗಳೆನ್ನ ಸದನಸರೋವರ ದೊಳೊಂದು ಸಿರಿಯಂ ನಿಲಿಪ[೯]ಲ್ವೇಟ್ಕು[೯]ಮೆಂದು ದರಹಸಿತವದನಾರವಿಂದೆಯಾಗಿ

ಗಂಡವಿಮುಕ್ತವೃತ್ತಿಯನ್ನು ಮರೆಯದ ಕಠೋರವಾದ ತಪಶ್ಚರಣವನ್ನು ಆಚರಿಸುವವನು ಮಲಧಾರಿದೇವನು.

೯೦. ಈ ಮುನೀಂದ್ರನು ಚರಿಗೆಗೆ ಹೋಗುವ ಹೊತ್ತಿನಲ್ಲಿ ಈತನ ಮೈಯಲ್ಲಿ ಹತ್ತಿಕೊಂಡಿದ್ದ ಹುತ್ತಿನ ಬಾಯಿಯಿಂದ ಒಂದು ದುಂಬಿ ಹೊರಕ್ಕೆ ಹೊರಟು ಹೋಯಿತು; ಅದು ತಾನಾಗಿ ಮರಳಿ ಬಂದು ಹುತ್ತಿನಲ್ಲಿ ಸೇರುವುದಕ್ಕೆ ಏಳೆಂಟು ದಿನ ಹಿಡಿಯಿತು. ಅಲ್ಲಿಯವರೆಗೆ ಈ ಮುನಿ ದಯಾಪರನಾಗಿ ನಿಶ್ಚಲನಾಗಿ ತಪೋಯೋಗದಲ್ಲಿ ಅದೇ ಸ್ಥಾನದಲ್ಲಿ ಉಳಿದುಬಿಟ್ಟನು. ಇಂತಹ ಯೋಗ ಸಾಮರ್ಥ್ಯ ಮಲಧಾರಿದೇವನಿಗಲ್ಲದೆ ಇನ್ನಾರಿಗಾದರೂ ಸಾಧ್ಯವೇ?"

ವ॥ ಹೀಗೆಂದು ಹೊಗಳುವ ಮಂಗಳಪಾಠಕರಿಗೆ ಮಂಗಳಾಭರಣಗಳನ್ನು ಮೆಚ್ಚಾಗಿ ಕೊಟ್ಟು, ಆ ಮುನಿಯ ಪಾದಕಮಲಗಳನ್ನು ತನ್ನ ನಿರ್ಮಲವಾದ ಕಣ್ಬೆಳಕೆಂಬ ಗಂಧಲೇಪನದಿಂದ ಸತ್ಕರಿಸುತ್ತ, ಇದಿರುಗೊಂಡು-

೯೧. "ನನ್ನ ಗಂಡನು ತಿಳಿಯದೆ ಮಾಡಿದ ತಪ್ಪನ್ನು ಮರೆತುಬಿಟ್ಟು, ನನಗೆ ಪುರುಷಭಿಕ್ಷೆಯನ್ನು ಅನುಗ್ರಹಿಸು, ನಿನ್ನ ದಯಾಮಯತೆಯನ್ನು ತೋರು. ಇಲ್ಲವೆನ್ನ ಬೇಡ ಸ್ವಾಮಿ" ಎಂದು ಕಾಮನ ಹೆಂಡತಿ ಭಕ್ತಿಯಿಂದ ಬಂದು ನಮಸ್ಕರಿಸುವಂತೆ, ಜಿನದತ್ತೆಯು ಮಲಧಾರಿ ಮುನಿಯ ಪಾದಕಮಲಗಳಿಗೆ ಎರಗಿದಳು.

ವ॥ ನಿಧಿಯನ್ನು ಹೂಳಿದ ಸ್ಥಾನದೆಡೆಗೆ ಬಾಗುವ ದೀಪದ ಕುಡಿಯಂತೆ, ಬಾಗಿ ಹೇರಳವಾದ ಪೂಜಾದ್ರವ್ಯಗಳಿಂದ ಅರ್ಚಿಸಿ, ಭಕ್ತಿಪೂರ್ವಕವಾಗಿ ನಮಸ್ಕರಿಸಿ "ನಿರ್ಮಲ

---

೧ ತ್ತಿ (ಕ, ಮ). ೨ ದಿಂ (ಪ). ೩ ಟ (ಕ, ಮ) ೪ ನು (ಕ). ೫ ಮೆ (ಕ, ಮ). ೬ ಮಾ (ಕ, ಮ). ೭ ಬೆಚ್ಚಿ (ಕ, ಮ) ೮ ಯ ತೆಱದಿಂ (ಕ). ೯ ಲೆ ವೇಟ್ಕು (ಕಾ).

ನಿಲಿಸುವೊಡೆ ನಿನ್ನ ಪುರುಷಂ
ನಿಲಿಸುಗೆ ಮೇಣ್ನಿನ್ನ[1] ಪುತ್ರ[2]ರುಳ್ಳೊಡವ[2]ರ್ಮೇ
ಣ್ನಿಲಿಸುಗೆ ಪೆಂಡಿರ ಕೆಯ್ಯೊಳ್
ನಿಲಲಱಿವರೆ ಪೇೞಿಮಬ್ಬ ಗಂಡವಿಮುಕ್ತರ್ ೬೨

ವ॥ ಎಂದು ಪರಮ ಋಷಿಯರ್ಪರಸಿ ಪೋಪುದುಮಾ ಮಹಾಭಾಗ್ಯೆಗೆ ಭೋಗಾಂತರಾಯಂ ಮಾಡಿದ ನೋವುಂ ಮಕ್ಕಳ್ಪಡೆಯದ ನೋವುಂ ಅಟಿಲನೊದವಿಸೆ ಮನಮಿಕ್ಕಿ ಮನ್ಯು[3] ಮಿಕ್ಕು ಮಗುಳ್ದು ಬರ್ಪಾಗಳ್ಮೊಗಂ ಮುರಿದು ಮೊಲೆಯೂಡಲಡ್ಡ ಸಾರ್ಚಿದ ಪುಲ್ಲೆ ಇರ್ದಂತೆ ಪರಿಚಯಕ್ಕೆ ಪರಿತಂದು ಕಡೆವಾಯವಾಲಂ ತೊಡೆಯೊಳ್ತಡೆಗಾಲ್ತೊಡೆದು ಕೊಣಕಿಡುವ ಕೊಣಸುಗಳಂ ಪಿಡಿದು ಮುದ್ದಾಡಿಸುತ್ತುಂ ತಾಯ ಬಾಯ ಕುಡುಕಂ ಕೊಂಡು ನೇವುರದ ನುಣ್ಚರಕ್ಕೆ ಮರಳ್ದ ಮರಾಳಬಾಳಕಂಗಳ ಮೊಗದೊಳ್ ಮುಗುಳ್ನಗೆವಾಲಂ ಚೆಲ್ಲಿ ಚೆಲ್ಲವಾಡುತ್ತುಂ ನವಿಲ್ವಾಣತಿಯ ಬೆನ್ನನೇಱಿ ಮಂಡೆಯ ಚೆಂಡಿಕೆಯಂ ಕರ್ಚಿ ಸೆಳೆವ ಸೋಗೆಯ ಮಱಿಯ ಮುದ್ದುತನಮಂ ಮುದ್ದು ಗುಣಂಗಳ ಬೆಳಗೆಂಬೆಳೆಮಿಂಚಿನ ಗೊಂಚಲಿಂ ಮುಂಡಾಡುತ್ತುಂ ಮುನಿ[4]ಯಾಡಿದ[4] ಮಾತಿಂ ಮೊಳೆತುದೆನಿಪ ಪುತ್ರದೋಹಳದಿಂ ಸಮನಿಸಿದುದ್ದೀಪನಭಾವವೆಂಬ ಮರ್ದಿನ ಮೞೆಯಿಂ ಮಡಲ್ತು ನನೆ ಕೊನೆಯೋಗೆ ರಾಜಾಂಗಣದ ಕೆಲದ ಕುಲಚೈತ್ಯಾಲಯಮಂ ಬಳಸಿದ ಬನದೊಳಗಣ ಮಲ್ಲಿಕಾಮಂಟಪದ ಮುಂದಣ ತವ[5]ಂಗದ ಲೋವೆಯ ಮುತ್ತಿನ ಮತ್ತವಾರಣದೊಳ್ ಕುಳ್ಳಿರ್ದು ಕಳಾಧರೆಯೆಂಬ ಕೆಳದಿಗಿಂತೆಂದಳ್

ವಾದ ನಿಮ್ಮ ಪಾದಕಮಲಗಳು ನನ್ನ ಮನೆಯೆಂಬ ಸರೋವರದಲ್ಲಿ ನಿಂತು ಒಂದು ಶೋಭೆಯನ್ನು ಒದಗಿಸಬೇಕು" ಎಂದು ಮೆಲ್ನಗೆಯೊಡನೆ ಆಕೆ ನುಡಿಯಲಾಗಿ-

೬೨. "ನನ್ನನ್ನು ನಿಲ್ಲಿಸಿಕೊಳ್ಳುವುದಾದರೆ ನಿನ್ನ ಗಂಡ ಬಂದು ನಿಲ್ಲಿಸಲಿ. ಅಥವಾ ನಿನಗೆ ಪುತ್ರರಿದ್ದರೆ ಅವರು ಬಂದು ನಿಲ್ಲಿಸಲಿ. ತಾಯಿ, ಗಂಡವಿಮುಕ್ತರು ಹೆಂಗಸರ ಪ್ರಾರ್ಥನೆಗೆ ನಿಲ್ಲುವುದುಂಟೆ?"

ವ॥ ಎಂದು ನುಡಿದು ಹರಿಕೆಯಿತ್ತು ಆ ಮುನಿಶ್ರೇಷ್ಠರು ಹೊರಟುಹೋದರು. ಮುನಿಗಳಿಗೆ ಭೋಜನವಿಲ್ಲದಂತೆ ಮಾಡಿದೆನೆಂಬ ವ್ಯಥೆಯೂ ತನಗೆ ಮಕ್ಕಳಿಲ್ಲವೆಂಬ ವ್ಯಥೆಯೂ ಒಮ್ಮಲೆ ತೀವ್ರವಾಗಿ, ದುಃಖವುಕ್ಕಿ ಆಕೆ ಮರಳಿ ಬರುತ್ತಿರುವಾಗ, ಮುಖವನ್ನು ಹೊರಳಿಸಿ ಮರಿಗೆ ಮೊಲೆಯುಣಿಸುವ ಜಿಂಕೆಯ ಬಳಿಬಂದು ಕಟಬಾಯಿಯ ಹಾಲನ್ನು ತಾಯ ತೊಡಗೆ ಒರಸಿ ನೆಗೆದಾಡುವ ಮರಿಗಳನ್ನು ಹಡೆದು ಮುದ್ದಾಡುತ್ತ ತಾಯಿಯ ಬಾಯಿಯಿಂದ ಕುಟುಕನ್ನು ತೆಗೆದುಕೊಂಡು, ನೂಪುರದ ಇಂಪಾದ ಧ್ವನಿಗೆ ಮರುಳಾಗಿ ಬಂದ ಹಂಸದ ಮರಿಗಳನ್ನು ಕಂಡು ಮುಗುಳ್ನಗೆಯ ಹಾಲನ್ನು ಚೆಲ್ಲಿ ವಿನೋದಗೊಳಿಸುತ್ತ, ಬಾಣತಿಯಾದ ನವಿಲಿನ ಬೆನ್ನೇರಿ ಅದರ ಜುಟ್ಟನ್ನು ಕಚ್ಚಿ ಎಳೆಯುತ್ತಿರುವ ಮರಿನವಿಲಿನ ಮುದ್ದುತನವನ್ನು ತನ್ನ ಮುದ್ದಾದ ಗುಣಗಳ ಬೆಳಗೆಂಬ ಎಳೆಯ ಮಿಂಚಿನ ಗೊಂಚಲಿಂದ ಮುಂಡಾಡುತ್ತ; ಮುನಿಯ ಮಾತಿನಿಂದ ಅಂಕುರಿಸಿದ ಪುತ್ರದೋಹಳದ ಉದ್ದೀಪನಭಾವವೆಂಬ ಅಮೃತವೃಷ್ಟಿಯಿಂದ ಚಿಗಿತು, ಹಬ್ಬಿ ವಿಸ್ತಾರ

೧ ನಗೆ (ಕಾ, ಮ). ೨ ನುಳ್ಳೊಡವಂ (ಕಾ). ೩ ನು (ಕ). ೪ ಯ (ಕಾ, ಮ) ೫ ದ (ಕ).

ಇವೆ ಬಾಯ್ದೆಱೆಯಿಂ ಮುತ್ತುಂ
ಪವಳಮುಮೀಯಸಿಯ ನುಡಿಯೆ ಸುರಿದಪುವೆಂಬಂ
ತೆವೊಲಬಲೆ ನುಡಿಯೆ ಪಲ್ಗಳ
ಛವಿಯುಂ ತುಟಿದಳಿರ ಕೆಂಪುಮೇಂ ಕೆದಱಿದುದೋ ೯೩

ಒಡನೆಯ ಚಕ್ರವಾಕಿ ಪೊಸವಾಣತಿ ಕೋಗಿಲೆಯಿಮೊ[೧]ಜೆಲಿಂದು ಕೇ
ಳ್ಗಡ ಗಿಳಿವೆಣ್ಗೆ[೨] ಪೊತ್ತಿನೊಳಗೆಯ್ದೆ ನವಿಲ್ತ[೩]ನೆ ತೀವಿ ಮಕ್ಕಳಂ
ಪಡೆದುದ ನೋಡ ಸಾರಿಕೆಯ ಚೊಚ್ಚಲ ಶಾಬಕಮೋದಿದಪ್ಪುದೀ
ನಡೆದುದೆ ತಾಯ ಬೆನ್ನೊಳೆ ತಳರ್ನಡೆಯಿಂ ಕಳಹಂಸ ಪೋತಕಂ ೯೪

ಎನ್ನೋರಗೆಯಂಗನೆಯ
ರ್ಕನ್ನಡಿಯಂ ನೋಡುವಂದದಿಂ ನೋಡಿದಪ
ರ್ಪೊನ್ನ [೪]ಶಶಿ[೪]ಯಂತೆ ಮಿಸುಗುವ
ರನ್ನದ ಮೊಳೆಯಂತೆ ತೊಳಪ ಮಕ್ಕಳ ಮೊಗಮಂ ೯೫

ಮರ್ವಿನ ಭಾಗ್ಯದಿಂ ಹಿಮಕರಾಭ್ಯುದಯಂ ತಡವಾದ ಕೇಡಿನಾ
ಶಾರ್ವರಿ ಲೋಕಮಂ ಪೊರೆವ ಸಸ್ಯಸಮುದ್ಭವದೊಳ್ ವಿಳಂಬಮಾ
ದುರ್ವರೆ ಮಿಕ್ಕ ಮೌಕ್ತಿಕಭವಂ ವ್ಯವಧಾನಮನಾಳ್ದ[೫]ಶು[೬]ಕ್ತಿಯಾ[೭]
ನೊ[೮]ರ್ವಳೆ ಕಾಲದೊಳ್ಫಲಕೆ ಬಾರದ ವಲ್ಲರಿಯಾದೆನೇಕೆಯೋ ೯೬

ವಾಗಲು ಅರಮನೆಯ ಅಂಗಳದಲ್ಲಿ ಬಸದಿಯ ಸುತ್ತಲಿರುವ ತೋಟದ ಮಲ್ಲಿಗೆಯ ಮಂಟಪದ ಮುಂದಿನ ಜಗಲಿಯ ಮುತ್ತಿನ ಮಂಡಪದಲ್ಲಿ ಕುಳಿತು ಕಳಾಧರೆಯೆಂಬ ಸತಿಯೊಡನೆ ನುಡಿಯತೊಡಗಿದಳು.

೯೩. ಈ ಕೋಮಲೆಯ ಮಾತು ಬಾಯಿಂದ ಮುತ್ತುಗಳನ್ನು ಹವಳಗಳನ್ನು ಸುರಿಯುತ್ತಿರುವುದೊ ಏನೊ ಎಂಬಂತೆ ಆಕೆಯ ಹಲ್ಲುಗಳ ಕಾಂತಿಯೂ ತುಟಿಯ ಕೆಂಪೂ ಮನೋಹರವಾಗಿ ಹರಡಿದುವು.

೯೪. "ಇಕೋ! ಚಕ್ರವಾಕಿ ಹೊಸಬಾಣಂತಿ; ಕೋಗಿಲೆಗೆ ಇಂದು ಈರಿಲು (ಹೆತ್ತವಳಿಗೆ ಹನ್ನೊಂದನೆಯ ದಿನ ಮಾಡಿಸುವ ಮಂಗಳ ಸ್ನಾನ); ಹೆಣ್ಣು ಗಿಳಿಗೆ ದಿನ ತುಂಬಿ ಪ್ರಸವ ಕಾಲ ಬಂದಿದೆ; ನವಿಲು ಮಕ್ಕಳನ್ನು ಹೆತ್ತಿದೆ ನೋಡು, ಸಾರಿಕೆಯ ಚೊಚ್ಚಿಲ ಮರಿ ಚೆಲುವಾಗಿ ನುಡಿಯುತ್ತಿದೆ. ಇಗೊ ಇಲ್ಲಿ ಕಳಹಂಸದ ಮರಿ ತನ್ನ ತಾಯಿಯ ಹಿಂದೆ ಹಿಂದೆ ದಟ್ಟಡಿಯಿಡುತ್ತ ನಡೆಯುತ್ತಿದೆ.

೯೫. ನನ್ನ ಓರಗೆ ವಯದ ಸ್ತ್ರೀಯರೆಲ್ಲ ಚಿನ್ನದ ಸಸಿಯಂತೆ ರತ್ನದ ಚಿಗುರಂತೆ ಕಾಂತಿಯುಕ್ತವಾದ ತಮ್ಮ ಮಕ್ಕಳ ಮುಖವನ್ನು ಕನ್ನಡಿ ನೋಡುವಂತೆ ನೋಡುತ್ತಿರುವರು.

೯೬. ಕತ್ತಲೆಯ ಭಾಗ್ಯಕಾಲದಲ್ಲಿ (ಕೃಷ್ಣ ಪಕ್ಷದಲ್ಲಿ) ಚಂದ್ರೋದಯ ತಡವಾದ

---

೧ ಯೇ (ಕಾ). ೨ ಣ್ಣೆ (ಕ). ೩. ಲ್ಮ (ಕಾ) ೪ ಸಸಿ (ಮ). ೫ [ಳ್ದ] ೬ ಸೂ (ಕ), ಶ (ಕಾ) ೭ ಯ (ಕ) ೮ ನ್ನೋ (ಕ).

ಪರಿಕಿಪೊಡಿದೆನ್ನ ತನುವ
ಲ್ಲರಿ ವಲ್ಲರಿಯಂತೆ ಪುಷ್ಪವತಿಯಾಗಿಯುಮೊ
ಪ್ಪಿರೆ ಫಳಕೆ ಬಾರದಂತಿದು
ಸುರಯಿ[1]ಯೊ ಸಂಪಗೆಯೊ ಮೊಲ್ಲೆಯೋ ಮಲ್ಲಿಗೆಯೋ ೯೭

ಕಾಳಿಗ ನಾಗನಂತೆ ಮುಡಿ ಬಂದುದು ತುಂಗಕಟೀತಟಂಬರಂ
ಬಾಳೆಗಳಂತೆ ಕಣ್ಬರಿದು ಬಂದುದು ಕೆನ್ನೆವರಂ ತೊಳಪ್ಪಿ[2]ನಂ
ತೋಳ ಮೊದಲ್ವರಂ ಮಸಕದಿಂ ಮೊಲೆ ಬಂದುವಿದೆನ್ನ ಬೆಂಬರಂ
ಬಾಳಕಗರ್ಭಮಪ್ಪ ಬಸಿಱೀಕೆಯೊ ಬಾರದು ವಾರಿಜಾನನೇ ೯೮

ವನಿತೆ ಮೊಲೆವಾಲ ಬಂಬ
ಲ್ವನಿಗಳೊ ನಸುನಗೆಯು[3] ಮೊಳೆಗಳೋ ಪೊಳೆದಪುವೆಂ
ಬಿನಮೊಗೆದ ಪಲ್ಲಿನೊಪ್ಪುವ
ತನಯನ ನಗೆಮೊಗಮನೆಂದು ಪೇೞ್ಕಂಡಪೆನೋ ೯೯

ನಿಱೆಯ ಸೆಱಂಗನೋಸರಿಸಿ ಕೆಂದಳದಿಂದಮೆ ಕ[4]ರ್ಚಿಕೊಂಡು ತೂ
ಪಿಱಿದೊಗೆದ[5]ಬ್ಬಿಱಿಂದೊಗೆದ ಪೆರ್ಮೊಲೆಯಂ ಬೆರಳಿಂದವುಂಕಿ ಬಾ
ಯ್ದೆಱೆಗಿದಿರೀಯೆ ಪಾಲ್ಪೊರೆದ ನುಣ್ಬೆರಲಂ ಮೊಲೆಗೆ[6]ತ್ತು ಪೀರ್ದು ಕ
ಣ್ದೆಱೆಯದ ಕಂದನೆಂದೆನಗೆ ಕಣ್ದೆ[7]ಱೆಯಿಪ್ಪನೊ ಮಂದಹಾಸಮಂ ೧೦೦

ರಾತ್ರಿಯಂತೆ, ಲೋಕಕ್ಕೆ ಜೀವನಾಧಾರವಾದ ಸಸ್ಯೋತ್ಪತ್ತಿ ತಡವಾದ ಕ್ಷೇತ್ರದಂತೆ, ಮುತ್ತಾಗುವ ಭಾಗ್ಯವನ್ನು ಇನ್ನೂ ಪಡೆಯದಿರುವ ಚಿಪ್ಪಿನಂತೆ ನಾನೊಬ್ಬಳೆ ಏಕೆ ಹೀಗೆ ಕಾಲಕ್ಕೆ ಸರಿಯಾಗಿ ಫಲಕ್ಕೆ ಬಾರದ ಬಳ್ಳಿಯಾದೆನೊ?

೯೭. ಬಳ್ಳಿಯಂತಹ ಈ ನನ್ನ ಶರೀರ ಪುಷ್ಪವತಿಯಾಗುತ್ತಿದ್ದರೂ, ಫಲವತಿಯಾಗುವುದಿಲ್ಲವಲ್ಲ! ಇದೇನು ಸುರಗಿಯೊ, ಸಂಪಗೆಯೊ, ಮೊಲ್ಲೆಯೊ, ಮಲ್ಲಿಗೆಯೊ?

೯೮. ಕಾಳಿಂಗ ನಾಗನಂತೆ ನಿತಂಬದವರೆಗೆ ಮುಡಿ ಬೆಳೆದು ಬಂದಿತು; ಬಾಳೆ ಮೀನಂತೆ ಇರುವ ಕಣ್ಣು ಕೆನ್ನೆಯವರೆಗೆ ಹೊಳೆಯುವಂತೆ ವಿಸ್ತಾರವಾಯಿತು; ತೋಳ ಸಂಧಿಯವರೆಗೆ ಮೊಲೆಗಳು ಬೆಳೆದು ಬಂದುವು. ಮಗುವಿಗೆ ಆಲಯವಾಗುವ ಬಸಿರೇಕೆ ಬಾರದೋ ನನಗೆ?

೯೯. ಮೊಲೆಹಾಲ ಹನಿಗಳೊ, ವೆಲ್ನಗೆಯ ಮೊಳಕೆಗಳೊ ಎಂಬಂತೆ ಹೊಳೆಯುವ ಎಳೆಯ ಹಲ್ಲುಗಳಿಂದ ಒಪ್ಪುವ ಮಗನ ನಗುಮೊಗವನ್ನು ನಾನೆಂದು ಕಂಡೇನು? ಹೇಳು ಸಖಿ.

೧೦೦. ಸೀರೆಯ ಸೆರಗನ್ನು ಸರಿಸಿ ಅಂಗೈಯಿಂದಲೆ (ಮಗುವನ್ನು ಎತ್ತಿಕೊಂಡು, ನೆತ್ತಿಯ ಮೇಲೆ ಊದಿ, ಅಕ್ಕರತೆಯಿಂದ ತೊರೆದ ತೋರ ಮೊಲೆಯನ್ನು ಬೆರಳಿಂದ

---

೧ ಗಿ (ಕ, ಪ). ೨ ರ್ಪಿ (ಕ). ೩ ಯೊ (ಕ). ೪ ಬೆ (ಕಾ, ಮ). ೫ ವ (ಕಾ) ೬ ಗಿ (ಕ, ಮ) ೭ ಣ್ಗೆ (ಕ).

[೧]ಬಱಿದಿರ್ದ[೧] ಮೊಲೆಯನೊಲ್ಲದೆ
ಸೆಱೆವಿಡಿದಿನ್ನೊಂದು ಮೊಲೆಯ ಮೇಲ್ಕೈ[೨]ಅಲ್ದಿ[೨]ರ್ದ
ನ್ನೆಱೆಯನ ಕರಕಿಸಲಯಮಂ
ಕಿಱುಮಗನೆಂದಳ್ತು[೩] ನೂಂಕಿ ಮೊಲೆಯುಂಡಪನೋ ೧೦೧

ಜಪ್ಪಲಿಸಿ [೪]ನಗುತೆ ನೂಂಕಿ[೪] ಕೆ
ಲಕ್ಕಾರಮನುಣುತೆ ಮೊಲೆಯ[೫]ನೊಲಿದೆ[೫]ನ್ನ ಕುಚಾ
ಗ್ರಕ್ಕೆ ತಳತಳಿಸಿ ತೊಳಗುವ
ಮಕ್ಕಳ ಮಾಣಿಕವದೆಂದು ತೊಡವಾದಪುದೋ ೧೦೨

ಇದಿರ್ವರೆ ಗೆಜ್ಜೆಗಳುಲಿ[೬]ಗೊಡ[೬]
ವಿದ ಕಂಕಣದುಲಿಗಳೆಸೆಯೆ ಬರ್ಪಾತ್ಮಜನಂ
ಮದಧಿಪನೆನ್ನಂ ತರ್ಕೈ
ಸಿದ ತೋಳಂ ತೆಗೆದದೆಂದು ತಬ್ಕೈಸುಗುಮೊ ೧೦೩

ನಮಗೋದಲಿಟ್ಟ ದಿವಸಮೆ
ಕುಮರಂ ತೋರ್ಪಂತೆ ತನ್ನ ಮತಿಯಂ ಸಿದ್ಧಂ
ನಮಸಿದ್ಧಂ ನಮಸಿದ್ಧಂ
ನಮಯೆಂದೆಂದೆನ್ನ ಮುಂದೆ [೭]ಬರೆ[೭]ದೋದುಗುಮೋ ೧೦೪

ಅಮುಕಿ ಕೂಸಿನ ಬಾಯಿಗೆ ಹಿಡಿಯಲಾಗಿ, ಹಾಲು ಮೆತ್ತಿಕೊಂಡ ನನ್ನ ಮೆದುವಾದ ಬೆರಳನ್ನೆ ಮೊಲೆಯೆಂದು ಭ್ರಮಿಸಿ ಅದನ್ನೇ ಚೀಪುತ್ತ ಕಣ್ಣು ತೆರೆಯದೆ ಕಂದನು ಹೀಗೆ ನನಗೆ ಮೇಲುನಗೆ ಹುಟ್ಟಿಸುವ ಕಾಲ ಎಂದು ಬಂದೀತು?

೧೦೧. ಉಂಡು ತೆರವಾದ ಮೊಲೆಯನ್ನು ಒಲ್ಲದೆ, ಇನ್ನೊಂದು ಮೊಲೆಯನ್ನು ಉಣ್ಣಬೇಕೆಂದು ಬಯಸುವಾಗ, ಅದನ್ನು ಸೆರೆಹಿಡಿದಿದ್ದ ನನ್ನ ಪತಿಯ ಮೃದುವಾದ ಕೈಯನ್ನು ಅಳುತ್ತ ನೂಕಿ ನನ್ನ ಕಂದನು ಅದನ್ನು ಉಣ್ಣುವ ಸಂದರ್ಭ ನನಗೆ ಎಂದು ಒದಗೀತು?

೧೦೨. ಮೋಹಕವಾಗಿ ನಗುತ್ತ, ನನ್ನ ಕೊರಳ ಹಾರವನ್ನು ಆಚೆಗೆ ತಳ್ಳಿ ಮೊಲೆಯುಣ್ಣುತ್ತ ನನ್ನ ಮೊಲೆದುದಿಗೆ ಮಾಣಿಕದಂತೆ ಅಲಂಕಾರವಾಗುವ ಮಗು ನನಗೆ ಎಂದಾದೀತು?

೧೦೩. ಗೆಜ್ಜೆಗಳ ನಾದದೊಡನೆ ಕೈಗಡಗಗಳ ನುಣ್ದನಿಗಳನ್ನು ಹೊಮ್ಮಿಸುತ್ತ ನಮ್ಮ ಮುದ್ದುಮಗನು ಎದುರಿಗೆ ಬರಲಾಗಿ, ನನ್ನನ್ನು ಅಪ್ಪಿದ ತೋಳನ್ನು ತೆಗೆದು ನನ್ನ ಪತಿ ಆ ಮಗುವನ್ನು ಅಪ್ಪಿಕೊಳ್ಳುವ ದಿನ ಎಂದು ಬಂದೀತು?

೧೦೪. ಓದುವುದಕ್ಕೆ ತೊಡಗಿಸಿದ ದಿನವೆ, ತನ್ನ ಬುದ್ಧಿಯನ್ನು ತೋರುವಂತೆ

೧ ಇಱಿದಿಱಿದು (ಕ). ೨ ಅದಿ (ಕ), ಱಿ (ಕಾ). ೩ ಳುತೆ (ಕಾ). ೪ ನೂಂಕಿ ನಗುತೆ (ಕ, ಮ). ೫ ನುಣುತೆ (ಕ, ಮ). ೬ ವಿಂದೊದ (ಮ), ಪಂಗೊದ (ಕಾ), ೭ ಯೆಂ (ಕಾ).

ಮೊಲೆವೆಣ್ಣಿನಿಪೆನಗೆಂದುಂ
ನಿಲಲೊಲ್ಲದೆ ತೊಲಗಿ ಪೋಪ ಗಂಡವಿಮುಕ್ತ
ಮಲಧಾರಿ ಸ್ವಾಮಿಗಳಂ
ನಿಲಿಸುವ ಸತ್ಪುತ್ರನೆನಗದೆಂದಾದಪನೋ ೧೦೫

ವ|| ಗರ್ಭದ ಬಯಕೆಯಂತಿರ್ಕೆ ಗರ್ಭಮನೆ ಬಯಸುವಂತಾದುದೆಂದ ಜಿನದತ್ತೆಗೆ ಕಳಾಧರೆ ಇಂತೆಂದಳ್

ನಂದನರೆನ್ನಯ ಪರೆಯದ
ಸೌಂದರಿಯರ್ಗಾದರಾಗರೆನಗೆನ್ನದಿರಿ
ನ್ನೊಂದಿರುಳೊಳ್ ತಡೆದುದಯಿಪ
ನೊಂದಿರುಳೊಳು ತಡಯದುದಯಿಪಂ ತುಹಿನಕರಂ ೧೦೬

ವ|| ಇದನಾಚಾರ್ಯರಂ ಬೆಸಗೊಳ್ವಂ ಬಿಜಯಂಗೆಯ್ಯಿಮೆನೆ ಬಸದಿಗೆ ಪೋಗಿ ದೇವರುಮನಾಚಾರ್ಯರುಮಂ ಬಂದಿಸಿ ಬೞಿಯಂ ನಿಮಿತ್ತ[1] ಜ್ಯೋತಿಗಳ್ಗೆ ಕೆಯ್ಗಳಂ ಮುಗಿದು

ಎ[2]ಮ್ಮ ಕುಲಕ್ಕೆ ವೀತ[3]ವೃಜಿನಂ ಜಿನರಾಜನೆ [4]ದೈವ[4]ಮಾಗಿಯುಂ
ನಿಮ್ಮಡಿಯನ್ನರುಂ ಗುರುಗಳಾಗಿಯುಮುತ್ತಮ ಪಾತ್ರದಾನದೊಳ್
ಸಮ್ಮದ ಶೀಲನಪ್ಪ ಜಿನಶಾಸನ ದೀಪಕನಪ್ಪ ಲಕ್ಷ್ಮಿಯೊಳ್
ಸಮ್ಮತನಪ್ಪ ಪುತ್ರನೆನಗಾಗದ ಕಾರಣಮೇಂ ಮುನೀಶ್ವರಾ ೧೦೭

"ಸಿದ್ಧಂ ನಮಸಿದ್ಧಂ ನಮಸಿದ್ಧಂ ನಮ" ಎಂದು ಕುಮಾರನು ನನ್ನ ಮುಂದೆ ಬರೆದು ತೋರುವ ದಿನ ಎಂದು ಬಂದೀತು?

೧೦೫. ಹೊಲೆಹೆಣ್ಣೆನಿಸುವ ನನ್ನ ಪ್ರಾರ್ಥನೆಗೆ ನಿಲ್ಲದಹೋದ ಗಂಡವಿಮುಕ್ತ ಮಲಧಾರಿ ಸ್ವಾಮಿಗಳನ್ನು (ಚರಿಗೆಗೆ) ನಿಲ್ಲಿಸಿಕೊಳ್ಳುವ ಸತ್ಪುತ್ರನು ನನಗೆ ಎಂದು ಜನಿಸುವನೋ!

ವ|| ಬಸಿರಾದ ಮೇಲಿನ ಬಯಕೆ ಒತ್ತಟ್ಟಿಗಿರಲಿ, ಬಸಿರನ್ನೆ ಬಯಸುವಂತಾಯಿತಲ್ಲವೆ" ಎಂದು ನುಡಿದ ಜಿನದತ್ತೆಗೆ ಕಳಾಧರೆ ಹೀಗೆಂದಳು -

೧೦೬. "ನನ್ನ ಓರಗೆಯ ಚೆಲುವೆಯರಿಗೆಲ್ಲ ಮಕ್ಕಳಾದರು; ನನಗೊಬ್ಬಳಿಗೆ ಆಗಲಿಲ್ಲ ಎಂದು ಕೊರಗಬೇಡಿ. ಒಂದು ರಾತ್ರಿ ಚಂದ್ರನು ತಡವಾಗಿ ಹುಟ್ಟಿದರೆ, ಇನ್ನೊಂದು ರಾತ್ರಿ ಬೇಗನೆ ಹುಟ್ಟಿಯೆ ಹುಟ್ಟುತ್ತಾನೆ.

ವ|| ಈ ವಿಷಯವನ್ನು ಆಚಾರ್ಯರಿಂದ ಕೇಳಿ ತಿಳಿಯೋಣ. ದಯಮಾಡಿಸಿ" ಹೀಗೆನ್ನಲು ಬಸದಿಗೆ ಹೋಗಿ, ದೇವರಿಗೂ ಆಚಾರ್ಯರಿಗೂ ನಮಸ್ಕಾರ ಮಾಡಿ, ಆನಂತರ ಆ ನಿಮಿತ್ತ ಜ್ಯೋತಿಗಳಿಗೆ ಕೈಮುಗಿದು -

೧೦೭. "ಮುನೀಶ್ವರಾ, ನಮ್ಮ ವಂಶಕ್ಕೆ ಪಾಪದೂರನಾದ ಜಿನೇಂದ್ರನೆ ಕುಲದೈವವಾಗಿದ್ದು, ಪೂಜ್ಯರಾದ ನೀವೆ ಗುರುಗಳಾಗಿದ್ದರೂ, ಉತ್ತಮ ಪಾತ್ರಕ್ಕೆ ದಾನ ಮಾಡು

---

೧ ತ್ಯ (ಕ). ೨ ನ (ಮ). ೩ ರ (ಕ). ೪ ದೆಯ್ವ (ಕಾ).

ವ|| ಎಂದ ಜಿನದತ್ತೆಗೆ ಮುಗುಳ್ನಗೆ ನಗುತ್ತುಮವರಿಂತೆಂದರ್

ತಪದಿಂ ಗುಣದಿಂ ಪುಣ್ಯಮ
ನುಪಾರ್ಜಿಪರ್ಪಲಬರಾ[1]ದುವ[1]ವರ್ಗೆಂದೀ ಭೂ
ಮಿಪ ದಿವಿಜಭವನಮವರ
ಲ್ಲಿ ಪುಟ್ಟದಿನ್ನೆಲ್ಲಿ ಪುಟ್ಟುವರ್ಪುತ್ರವತೀ ೧೦೮

ಇನಿತೇಕೆ ನಿಮ್ಮ ಮಱುಕಂ
ತನಯಂ ನಿನಗಾಗಲೆಂದು ತಪಮಂ ಮಾೞ್ಪಾ
ತನ ಮಱುಕಮೆ ಸಾಲದೆ ಪೇ
ೞಿನನಂ ಪೂರ್ವಾಸೆ ಪಡೆಯಲೇಂ ಮಱುಗುಗುಮೆ ೧೦೯

*ದಾನದ ಧರ್ಮದ ಫಳದಿಂ
ಮಾನವತಿ ತಾನೆ ಪೋಗಿ ಪುಟ್ಟದೆ ಸುರಸಂ
ತಾನಕ್ಕೆ ಬಯಸಿ ನಾಕವಿ
ಮಾನದ ಪಾಸುಗಳ ಪೊರೆಗಳೇಂ ಬಯಸುಗುಮೋ ೧೧೦

ವ|| ಇದನೀಗಳಂತೆ ನಿನ್ನರಸನರ್ಹದ್ದಾಸನುಂ ಬೆಸಗೊಂಡೊಡೆ ಪೇೞ್ದೆವು ಪೋಗಿ ಬೆಸಗೊಳ್ಳೆಂಬುದುಂ ಮಹಾಪ್ರಸಾದಮೆಂದು ಪೊಡವಟ್ಟು ಪೋಗುತ್ತುಮೆ ಕಳಾಧರೆಯಂ ದೇವನನೊಡಗೊಂಡು ಬಾಯೆಂದು ಕಳಿಪಿ ತಾನಂತವುರಮಂ ಪೊಕ್ಕು ವಿಳಾಸನಿಳಯದೊಳಗಣ ಮಣಿಮಂಚದ ಕೆಲದ ಕಾಂಚನವಿಷ್ಟರದೊಳ್ ಪರಿವಿಷ್ಟೆಯಾಗಿರ್ದಳನ್ನೆಗಂ

ವಂತಹ, ಜಿನಧರ್ಮ ದೀಪಕನಾದ, ಐಶ್ವರ್ಯಾದಿ ಪತಿಯಾಗುವ ಪುತ್ರನನ್ನು ಪಡೆಯುವ ಭಾಗ್ಯ ನನಗೇಕೆ ಬಾರದಾಗಿದೆ?"

ವ|| ಎಂದು ನುಡಿದ ಜಿನದತ್ತೆಗೆ ಮುಗುಳ್ನಗುತ್ತ ಅವರು ಹೀಗೆ ನುಡಿದರು -

೧೦೮. "ತಪಸ್ಸಿನಿಂದಲೂ ಗುಣದಿಂದಲೂ ಪುಣ್ಯವನ್ನು ಗಳಿಸಿಕೊಂಡವರು ಹಲವರಾದರು. ಅವರಿಗಾಗಿಯೆ ಸ್ವರ್ಗಸಮಾನವಾದ ಈ ದಿವ್ಯವಾದ ರಾಜಭವನ ವಾಯಿತು. ಪುತ್ರರು ಹುಟ್ಟುವುದು ಈ ರಾಜರಲ್ಲಿ ಅಲ್ಲದೆ, ಇನ್ನೆಲ್ಲಿ ಹುಟ್ಟುವರು, ತಾಯಿ?

೧೦೯. ನೀವು ಇಷ್ಟೇಕೆ ಮರುಗುವಿರಿ? ನಿಮಗೆ ಮಗನಾಗಬೇಕೆಂದು ತಪಸ್ಸು ಮಾಡುತ್ತಿರುವಾತನ ಮರುಗೆ ಸಾಲದೆ? ಹೇಳು ತಾಯಿ, ಸೂರ್ಯನನ್ನು ಹಡೆಯಬೇಕೆಂದು ಪೂರ್ವದಿಕ್ಕು ಮರುಗುವುದುಂಟೆ?

೧೧೦. ದಾನದ ಧರ್ಮದ ಫಲದಿಂದ ಪುಣ್ಯದ ಜೀವ ತಾನೆ ಹೋಗಿ ಸ್ವರ್ಗದಲ್ಲಿ ಹುಟ್ಟುವುದಿಲ್ಲವೆ? ದೇವನೊಬ್ಬನು ತನ್ನಲ್ಲಿ ಹುಟ್ಟಬೇಕೆಂದು ಸ್ವರ್ಗದ ಉಪಪಾದ ಶಯ್ಯೆ ಏನಾದರೂ ಬಯಸುವುದೆ?

ವ|| ಇದನ್ನು ಈಗ ಸ್ವಲ್ಪ ಮುಂಚೆ ನಿನ್ನಂತೆ ಬಂದು ಕೇಳಿದ ಅರ್ಹದ್ದಾಸನಿಗೂ ಹೇಳಿದೆವು. ಹೋಗಿ ಕೇಳಿಕೊ" ಹೀಗೆನ್ನಲಾಗಿ "ಅನುಗೃಹೀತಳಾದೆನೆಂದು" ನಮಸ್ಕರಿಸಿ ಹೋಗುತ್ತಲೆ ರಾಜನನ್ನು ಕರೆದುಕೊಂಡು ಬಾರೆಂದು ಕಳಾಧರೆಯನ್ನು ಕಳಿಸಿ, ಜಿನದ

---

೧ ದರ (ಪ). * ಈ ಪದ್ಯವು ಕ ಮತ್ತು ಪ ಪ್ರತಿಗಳಲ್ಲಿ ಇಲ್ಲ.

ಪ್ರಿಯನ ಬರವು[೧]ಂತೆ ಚಿತ್ತ
ಪ್ರಿಯವಾ[೨]ತನೆ ಬಂದಪಂ ಮನಸ್ತಾಪಮನತಿ
ಶಯದಿಂ ಬಂದಾಱಿಪವೊಲ್
ನಯವೇಱೆ ಬೆಮರ್ತ ಮೆಯ್ಗೆ ದಕ್ಷಿಣಪವನಂ ೧೧೧

ವ॥ ಎಂಬಿನಮಿನಿಯಳ ಮೊಗದ[೩]ತ್ತಲೆ ಕಣ್ಣಾಗಿ ಬರುತ್ತುಮರಸಂ ತನ್ನೊಳಿಂತೆಂದಂ

ಕಿಱಿದನು[೪]ರಾಗ[೪]ಮಂ [೫]ಕಿಱಿ[೫]ದು ದುಮ್ಮನಮಂ ಕಿಱಿದೊಂದು ಹಾಸಮಂ
ಕಿಱಿದ[೬]ಟೆಯಟ್ಕೆಯಂ ಕಿಱಿದು ಸಂತಸಮಂ ಕಿಱಿದೊಂದು [೭]ಖೇದ[೭]ಮಂ
ಸೆಱೆವಿಡಿದೆನ್ನ ವಲ್ಲಭೆಯ ಮುದ್ದುಮೊಗಂ ವ್ಯಭಿಚಾರ[೮]ವಿಭ್ರಮಂ[೮]
ಮೆಱೆದಪುದೋ ದಿನಾಗಮದ ರಾತ್ರಿವಿರಾಮದ ಪದ್ಮದಂದದಿಂ ೧೧೨

ವ॥ ಎಂದು ಬಗೆಯುತ್ತುಂ ಬಂದರಸಂ ಸಿರಿಮಂಚಮನಳಂಕರಿಸಿ ಕುಳ್ಳಿರ್ಪುದುಂ ಕಳಾಧರೆ ಮಣಿಮಯಮಾದ ಪೀಠಂ ಬೆಟ್ಟಿತ್ತೆಂಬಂತಿ[೯]ರಗಲೆ[೯] ನೂಂಕಿ ಮೆಲ್ಲಿದುವಪ್ಪ ತನ್ನ ನುಣ್ದೊಡೆಗಳನರಸನ ಪಾದಪಲ್ಲವಕ್ಕೆ ಸಾರ್ಚಿಪಾಣಿಪಲ್ಲವಂಗಳಿಂ ಪಿಡಿಕೈಸುತ್ತುಮಿರ್ಪುದುಮರಸನಿಂತೆಂದಂ

ಅರಸನ ನುಡಿ ಮುನ್ನಮೆ ಕ
ರ್ಣರಸಾಯನ[೧೦]ಮದ[೧೦]ಱ ಮೇಲೆ ಸುತಲಾಭಕಥಾಂ
ತ[೧೧]ರಸಮೆನೆ ಸರಸಿಜಾಸ್ಯೆಗೆ
ಮರುಗಂ ಪೂತತ್ತು ಕರ್ಪುರ ಪಣ್ತುದು ಪೆಱತೇಂ ೧೧೩

ತ್ತೆಯು ಅಂತಃಪುರವನ್ನು ಸೇರಿ, ವಿಲಾಸಗೃಹದ ರತ್ನಮಂಚದ ಬಳಿಯಿದ್ದ ಚಿನ್ನದ ಆಸನದಲ್ಲಿ ಕುಳಿತುಕೊಂಡಳು.

೧೧೧. ಪ್ರಿಯನ ಆಗಮನ ಮನಕ್ಕೆ ಪ್ರಿಯವಾದುದು. ಆತನೇ ಬರುವನು. ಬೆವರಿದ ಮೈಯನ್ನು ತಂಗಾಳಿ ಬಂದು ಆರಿಸುವಂತೆ, ಆತನ ತನ್ನ ಮನಸ್ತಾಪವನ್ನು ಆರಿಸುವನು.

ವ॥ ಹೀಗೆಂದುಕೊಳ್ಳುವಷ್ಟರಲ್ಲಿ ಪ್ರಿಯೆಯತ್ತಲೆ ಕಣ್ಣಾಗಿ ಬರುತ್ತಿದ್ದ ಅರಸನು ತನ್ನಲ್ಲಿಯೇ ಹೀಗೆಂದುಕೊಂಡನು -

೧೧೨. "ನಸು ಅನುರಾಗ, ನಸು ದುಗುಡ, ಕಿರಿಯದೊಂದು ನಗೆ, ಕಿರಿದೊಂದು ವ್ಯಥೆ, ಒಂದಿಷ್ಟು ಸಂತೋಷ, ಒಂದಿಷ್ಟು ಖೇದ ಇವೆಲ್ಲವನ್ನೂ ಸೆರೆಹಿಡಿದ ನನ್ನ ಪ್ರಿಯೆಯ ಮುದ್ದು ಮುಖವು ರಾತ್ರಿ ಕಳೆದು ಅದೇ ಬೆಳಗಾಗುವ ಹೊತ್ತಿನ ತಾವರೆಯಂತೆ ಮನೋಹರವಾಗಿರುವುದು"

ವ॥ ಹೀಗೆ ಯೋಚಿಸುತ್ತ ಬಂದ ಅರಸನು ಮಂಚದ ಮೇಲೆ ಸೊಗಸಾಗಿ ಕುಳಿತೊಡನೆ ಕಳಾಧರೆ ಬಂದು ರತ್ನಮಯವಾದ ಪಾದಪೀಠ ಬಿರುಸಾಗುವುದೆಂದು ಅದನ್ನು ಆಚೆಗೆ ತಳ್ಳಿ ಮೃದುವಾದ ತನ್ನ ತೊಡೆಗಳನ್ನು ಅರಸನ ಪಾದಗಳಿಗೆ ಪೀಠವಾಗಿಟ್ಟು, ಚಿಗುರಿನಂತೆ ಮೆದುವಾದ ತನ್ನ ಕೈಗಳಿಂದ ಒತ್ತುತ್ತಿರುವಾಗ, ಅರಸನು ನುಡಿಯತೊಡಗಿದನು.

೧೧೩. ಅರಸನ ಮಾತು ಮೊದಲೆ ಕಿವಿಗೆ ಅಮೃತವಾದುದು; ಅಲ್ಲದೆ ಈಗ

---

೧ ಪ (ಕ, ಮ, ಪ). ೨ ನಾ (ಕ) ೩ ವ (ಕ). ೪ ಮಾನ (ಕ). ೫ ನೆಱೆ (ಮ). ೬ ಯ (ಕ). ೭ ದುಃಖ (ಮ). ೮ ವಿಭ್ರಮ (ಕಾ). ೯ ರಲೆ (ಕ, ಮ, ಪ). ೧೦ ವಾದ (ಮ). ೧೧ ಕ (ಮ).

ಆರಸಿಯ ವಕ್ತ್ರಪದ್ಮಮಿನಿತೇಕೆಯೊ ಮಾಗಿಯ ಪದ್ಮದಂದದಿಂ
ಕೊರಗಿದುದಿಂತಿದೇಕೆ ಮಧುವಂ ನೆಱೆ ಕಾಱೆದ ನೆಯ್ದಿಲಂದದೊಳ್
ನೆರೆದುವು ನೀಳ್ದ ಕಣ್ಬೊಣ[1]ರ್ಗಳೊಲ್ಲದೆ ತಂಬುಲಮಂ ಪ್ರವಾಳದಂ
ತಿರೆ ಪೊಳೆದಪ್ಪುದೊಪ್ಪುವರುಣಾಧರಮೇಕೆಯೊ ಪೇೞ್ಕಳಾಧರೆ ೧೧೪

ಬಾಡಿದ ದೇವಿಯ ತನುಲತೆ
ಬಾಡಿಸುದುದು ನೋಡಿ ಬಾಡುವೆನ್ನಯ ಮೊಗಮಂ
ಬಾಡಿ ಬಸವಳಿದು [2]ಶಶಿ[2]ಯಂ
ಬಾಡಿಸಿದುತ್ಪಳಿನಿಯಂತೆ ಮುನ್ನೇಸಱೆನೊಳ್ ೧೧೫

ನೇ[3]ರ್ವಡಿಸಿ ಪಿಡಿದ ಕರಿ[4]ಯೆಳ[4]
ನೀರ್ವೊ[5]ವಂ[6] ಚುಂಬಿಸುತ್ತ ನಾರಿಯ ನಾಣಿಂ
ಸಾರ್ವ ಮೊಗಂ ಕಳ್ತಲೆಯಂ
ಪೀರ್ವಮೃತಕರಂಬೊಲೋಪವಂ[7] ನುಡಿಯಲೊಡಂ ೧೧೬

ವ|| ಎಂದರಸಂಗೆ ಕಳಾಧರೆ ಇಂತೆಂದಳ್

ಮಲಧಾರಿಸ್ವಾಮಿಗಳಂ
ನಿಲಿಸಲ್ವೋದಲ್ಲಿ ದೇವಿಗವರಿಂತೆಂದರ್
ನಿಲಿಸುಗೆ ನಿನ್ನಯ ಪುರುಷಂ
ನಿಲಿಸುಗೆ ಮೇಣ್ನಿನ್ನ ಪುತ್ರನು[8]ಳ್ಳೊಡೆ ಸಾಧ್ವೀ[9] ೧೧೭

ಪುತ್ರಪ್ರಾಪ್ತಿಯ ಸಮಾಚಾರ ಬೇರೆ ಎಂದ ಮೇಲೆ, ಅದನ್ನು ಕೇಳುವ ಕುತೂಹಲದಿಂದ ಜಿನದತ್ತೆಗೆ ಮರುಗ ಹೂತಂತಾಯಿತು, ಕಬ್ಬು ಹಣ್ಣು ಬಿಟ್ಟಂತಾಯಿತು. ಅಲ್ಲದೆ ಏನು?

೧೧೪. "ಕಳಾಧರೆಯೆ, ರಾಣಿಯ ಮುಖಕಮಲವು ಚಳಿಗಾಲದ ತಾವರೆಯಂತೆ ಇಷ್ಟೊಂದು ಬಾಡಿರುವುದೇಕೆ? ಮಕರಂದವನ್ನು ಸುರಿಸುವ ನೈದಿಲೆಗಳಂತೆ ಅಗಲವಾದ ಕಣ್ಣುಗಳೆರಡೂ ನೀರು ತುಂಬಿದುವೇಕೆ? ಹವಳದಂತಿರುವ ಈ ತುಟಿಗಳು ತಾಂಬೂಲ ವನ್ನು ತಿರಸ್ಕರಿಸಿರುವುದೇಕೆ? ಹೇಳು.

೧೧೫. ಅರುಣೋದಯ ಕಾಲದಲ್ಲಿ ಕಾಂತಿಹೀನವಾಗಿ ತಾನೂ ಬಾಡಿ, ಚಂದ್ರ ನನ್ನೂ ಬಾಡಿಸುವ ಉತ್ಪಲಿನಿಯ ಹಾಗೆ ರಾಣಿಯ ಬಾಡಿದ ಬಳ್ಳಿ ಮೈ ನನ್ನ ಮುಖವನ್ನು ಬಾಡಿಸಿತು.

೧೧೬. ಕೈಯಲ್ಲಿ ಹಿಡಿದುಕೊಂಡು ಕರಿಯ ತಾವರೆಯನ್ನು ಚುಂಬಿಸುತ್ತ, ಇರುವ ಈಕೆಯ ಮುಖವು ನಾನು ಮಾತಾಡುತ್ತಲೆ ನಾಚಿಕೆಯಿಂದ ಕೆಳಬಾಗಲು, ಕತ್ತಲೆಯನ್ನು ಹೀರುವ ಚಂದ್ರನಂತೆ ಆಯಿತು"

ವ|| ಹೀಗೆಂದ ಅರಸನಿಗೆ ಕಳಾಧರೆ ಹೇಳಿದಳು -

೧೧೭. "ಮಲಧಾರಿ ಸ್ವಾಮಿಗಳು ಚರಿಗೆಗೆ ನಿಲ್ಲಿಸಹೋದಾಗ ನಿನ್ನ ಗಂಡನಾಗಲಿ,

---

೧ ಲ (ಕ). ೨ ಸಸಿ (ಕಾ, ಮ). ೩ ನೀ (ಕ, ಪ). ೪ ಯಳೆ (ಕ), ಯೆಳೆ (ಮ), ೫ ರ್ವೋ (ಕಾ). ೬ ವುಂ (ಪ). ೭ ನ (ಕ, ಪ). ೮ ರು (ಕ, ಪ). ೯ ಲ್ವೆಂ (ಕ, ಮ, ಪ).

ವ|| ಎಂಬಾ ಮುನಿವೃಂದಾರಕವಚನದಿನಾದ ಪುತ್ರದೋಹಳದಾಹಂ ದೇಹಮಂ ಕರಗಿಸೆ ಕರಮಱಲ್ದುಱುತುಂ[1] ಕೆ[2]ರೆಯುತುಮುಣ್ಣದೆ ಕುಡಿಯದಾರ್ಸಂತಯ್ಸಿದೊಡಂ ಸಂತಮಿರದಿರ್ದಪಳದೇಕೆನೆ

ಮುನಿ ಭಾಸ್ಕರನಿಂದಮೆ ಬ[3]
ದಿರ್[4]ನಿಯ ಮನಃಸೂರ್ಯಕಾಂತದೊಳ್ಪುಟ್ಟಿದ ನಂ
ದನದೋಹಳದಹನಂ ದೇ
ವನ ವಾಕ್‌ಚಂದ್ರಿಕೆಯಿನಲ್ಲದೇನಾಱುಗುಮೇ ೧೧೮

ವ|| ಎಂಬುದುಮರಸನರಸಿಗಿಂತೆಂದಂ

ಎನ್ನ ವಿಷಾದಮಲ್ಲದೆ ವಿಚಾರಿಸೆ ನಿನ್ನ ವಿಷಾದ[5]ಮಲ್ತಿ[5]ದೇ
ಕೆನ್ನತಿ[6] ಭಿನ್ನಮಾಯ್ತು ಮಹಿಭಾರದಿನೆನ್ನ ಭುಜಂ ತನೂಜನೊ
ರ್ವನ್ನಿನಗಾದೊಡಾ ಪೊಱೆಯನೆತ್ತಿ ಸುತಾದ್ರಿಗೆ ಬರ್ದೆನೆಂದು ತೋ
ಳ[7]ನ್ನಿಮಿರ್ದಪ್ಪೆನುದ್ವೆಗಮಿದೆನ್ನದೊ ನಿನ್ನದೊ ಪೇೞ್ಮನಃಪ್ರಿಯೇ ೧೧೯

ಅರ್ಣವವೃತ ಭೂಭರಮಂ
ನಿರ್ಣಯಿಸುವ ಪುತ್ರನಲ್ಲಿ ಗತಿವಡೆಯಲೆ[8] ಪೋ
ಪರ್ಣರಪರಪುತ್ರಸ್ಯ ಗ
ತಿರ್ನಾಸ್ತಿಯೆನಿಪ್ಪ ವಾಕ್ಯಮಾಯ್ತಾದುದಱಿಂ ೧೨೦

ಅಥವಾ ನಿನಗೆ ಮಗನಿದ್ದರೆ ಅವನಾಗಲಿ ನಿಲ್ಲಿಸಲಿ ಎಂದು ದೇವಿಗೆ ಅವರು ನುಡಿದರು.

ವ|| ಮುನಿಗಳ ಈ ಮಾತಿನಿಂದ ಉಂಟಾದ ಪುತ್ರದೋಹಳದ ತಾಪವು ದೇಹವನ್ನು ಕರಗಿಸಲಾಗಿ, ಅತಿಶಯ ದುಃಖದಿಂದ ಅಳುತ್ತ ಬಂದು, ಉಣ್ಣದೆ, ಕುಡಿಯದೆ, ಯಾರೂ ಹೇಳಿದರೂ ಸಮಾಧಾನವಾಗದೆ, ಹೀಗೆ ಆಗಿರುವಳು ಏಕೆಂದರೆ -

೧೧೮. ಮುನಿಯೆಂಬ ಸೂರ್ಯನಿಂದಾಗಿ ಮನಸ್ಸೆಂಬ ಸೂರ್ಯಕಾಂತಶಿಲೆಯಲ್ಲಿ ಹುಟ್ಟಿದ ಪುತ್ರದೋಹಳವೆಂಬ ಬೆಂಕಿ, ದೇವಾ, ನಿನ್ನ ಮಾತಿನ ಬೆಳ್ದಿಂಗಳಿಂದಲ್ಲದೆ ಆರುವುದುಂಟೆ?"

ವ|| ಹೀಗೆನ್ನಲಾಗಿ ರಾಜನು ರಾಣಿಗೆ ಹೀಗೆಂದನು -

೧೧೯. "ಮನದನ್ನೆಯೆ, ವಿಚಾರಿಸಿ ನೋಡಿದರೆ ಇದು ನನ್ನ ವಿಷಾದವಲ್ಲದೆ ನಿನ್ನದಲ್ಲ. ಏಕೆಂದರೆ ಈ ಭೂಮಿಯ ಭಾರವನ್ನು ಹೊತ್ತು ಹೊತ್ತು ನನ್ನ ಭುಜ ನುಗ್ಗಾಯಿತು. ನೀನೊಬ್ಬ ಮಗನನ್ನು ಹೆತ್ತೆಯೆಂದರೆ ಆ ಹೊರೆಯನ್ನೆತ್ತಿ ಮಗನೆಂಬ ಗಿರಿಯ ಮೇಲೆ ಅದನ್ನು ಇರಿಸಿ, ಬದುಕಿದೆನೆಂದು ನನ್ನ ತೋಳನ್ನು ನೀವಿಕೊಳ್ಳುವೆನು.. ಈಗ ಹೇಳು, (ಪುತ್ರಕಾಂಕ್ಷೆಯ) ಉದ್ವೇಗ ನಿನ್ನದೋ ಅಥವಾ ನನ್ನದೊ?

೧೨೦. ಸಮುದ್ರ ಪರೀತವಾದ ಭೂಮಿಯ ಭಾರವನ್ನು ನಿತ್ತರಿಸುವ ಮಗನಿಲ್ಲ

---

೧ ತ್ತುಂ (ಕ, ಮ). ೨ ಕ (ಮ), ೩ ಬು (ಕಾ), ೪ ದ್ಧಿ (ಕಾ). ೫ ವಲ್ಲಿ (ಮ), ದಲ್ಲಿ (ಕ). ೬ ವಿ (ಮ). ೭ ಳ್ಳ (ಕ). ೮ ದೆ (ಕ, ಮ).

ವ|| ಸದ್ಧರ್ಮಲಾಭಮುಂ ಸತ್ಪುತ್ರಲಾಭಮುಮುಭಯ [೧]ಭವಹಿತಕರ[೧] ಮೆರಡುಮಂ ಪಡೆಯದನೆರಡಱಿಂ ಕೆಟ್ಟ[೨]ನೆರ[೨]ಡಿಲ್ಲದಾನುಮಿದನೆ ಚಿಂತಿಸಿ ಸೊಡರಿರ್ದಂತೆ ಕಟ್ಟಿಲೆಯಂ ತೊಡುವುದು ಮೂರ್ಖಂಗಮೊಳಗಾಗಿಲೆಂದು ಪೋಗಿ ನಮ್ಮ ಕುಲಗುರುಗಳಪ್ಪ ನಿಮಿತ್ತಜ್ಯೋತಿಗಳ ಚರಣನಖ ಜ್ಯೋತಿಗಳ್ಗೆ ಕಟ್ಟಲೆಯಂ ಕಳೆಯೆಂದೆಱಗುವಂತೆಱಗಿ ಬೆಸಸಿಮೆಂದು ಬೆಸಗೊಂಡೊಡೆ ದತ್ತಾವಧಾನರಾಗಿ ನಮೋಸ್ತುಗಳ್[೩]ನಿ[೩]ಮಿತ್ತಮಂ ನಿಶ್ಚಯಿಸಿ ನೋಡಿ

ಹರಿವಂಶೋದಿತ ವಿಕ್ರಮಂ ವಿವಿಧ ವಿದ್ಯಾತೀರ್ಥಹಂಸಂ ಸುಧಾ
ಕರಶೀಲಂ ವಸುದೇವ ಕೇಳಿನಿಳಯಂ ನಾನಾ ನಯೋಪಾಯ ಭಾ
ಸುರ ಭಾಗ್ಯೋದಯ ಪದ್ಮನಾಭನಿಭರಾಮಾಕಾರಮಂತ್ರಂ ನಿಜಾ
ಚರಿತೋಚ್ಚಾರಿತ ನೇಮಿನಾಥಚರಿತಂ ಸೌಜನ್ಯಜನ್ಮವ್ರತಂ ೧೨೧

ವ|| ಇದು ಮೃದುಪದಬಂಧಬಂಧುರ ಸರಸ್ವತೀಸೌಭಾಗ್ಯ[೪]ಭ್ಯಂಗ[೪] ಭಂಗಿನಿ ನಿಧಾನ[೫] ದೀಪವರ್ತಿ [೬]ಚತುರ್ಭಾಷಾ[೬] ಕವಿಚಕ್ರವರ್ತಿ ನೇಮಿಚಂದ್ರ ಕೃತಮುಂ ಶ್ರೀಮತ್ಪ್ರತಾಪ ಚಕ್ರವರ್ತಿ ವೀರಬಲ್ಲಾಳದೇವ ಪ್ರಸಾದಾಸಾಧಿತ ಮಹಾಪ್ರಧಾನ [೭]ಪದವೀವಿರಾಜಿತ[೭] ಸೆಜ್ಜೆವಳ್ಳ ಪದ್ಮನಾಭದೇವ ಕಾರಿತಮಪ್ಪ ನೇಮಿನಾಥಪುರಾಣದೊಳ್ ಪ್ರಥಮಾಶ್ವಾಸಂ

ದಿದ್ದರೆ ಅರಸರು ಸದ್ಗತಿಯನ್ನು ಪಡಯದೆ ಹೋಗುವರು. ಪುತ್ರನಿಲ್ಲದವನಿಗೆ ಸದ್ಗತಿಯೂ ಇಲ್ಲ ಎಂಬ ಮಾತು ಅದಕ್ಕೆ ಹುಟ್ಟಿತು.

ವ|| ಸದ್ಧರ್ಮ ಪ್ರಾಪ್ತಿಯೂ, ಸತ್ಪುತ್ರ ಪ್ರಾಪ್ತಿಯೂ ಇಹಪರಗಳೆರಡಕ್ಕೂ ಹಿತಕರವಾಗುತ್ತವೆ. ಇವೆರಡನ್ನೂ ಪಡೆಯದವನು ಇಹಪರವೆರಡಕ್ಕೂ ಬಾಹಿರನಾಗುವನು. ನಾನೂ ಇದನ್ನೇ ಯೋಚಿಸಿದ್ದೇನೆ. ದೀಪವಿದ್ದಾಗಲೂ ಕತ್ತಲೆಯನ್ನು ಅನುಭವಿಸುವುದು ಮೂರ್ಖನಲ್ಲಿ ಕೂಡ ಕಾಣದ ವಿಷಯವೆಂದು ತಿಳಿದು ನಮ್ಮ ಕುಲಗುರುಗಳಾದ ನಿಮಿತ್ತ ಜ್ಯೋತಿಗಳ ಪಾದದುಗುರುಗಳೆಂಬ ಜ್ಯೋತಿಗಳಿಗೆ ಕತ್ತಲೆಯನ್ನು ಕಳೆಯಿರಿ ಎಂದು ಎರಗುವಂತೆ ಎರಗಿ, ಅವರನ್ನು ಕೇಳಿಕೊಂಡೆನು, ಆ ಪೂಜ್ಯರು ಚಿತ್ತಗೊಟ್ಟು ನಿಮಿತ್ತವನ್ನು ಸರಿಯಾಗಿ ಪರಾಮರ್ಶಿಸಿ ನೋಡಿ ಹೀಗೆಂದರು -

೧೨೧. "ಹರಿವಂಶ ಸಂಭವನೂ ಉದಿತೋದಿತ ಪರಾಕ್ರಮವುಳ್ಳವನೂ ವಿವಿಧ ವಿದ್ಯಾಪ್ರವೀಣನೂ, ಚಂದ್ರನಂತೆ ತಂಪೆರೆಯುವವನೂ, ಐಶ್ವರ್ಯಕ್ಕೆ ಆಶ್ರಯನಾದವನೂ, ಅನೇಕ ಬಗೆಯ ನಯೋಪಾಯಗಳುಳ್ಳವನೂ, ಭಾಗ್ಯವಂತನೂ ವಸುದೇವನಂತೆ ಮನೋಹರವಾದ ರೂಪವನ್ನೂ ಮಂತ್ರಶಕ್ತಿಯನ್ನು ಹೊಂದಿದವನೂ ಆಚರಣೆಯಿಂದ ನೇಮಿಸಿದರೆ ನೇಮಿನಾಥನಿಗೆ ಸರಿಸಮನೆನಿಸುವವನೂ ಸೌಜನ್ಯ ಹುಟ್ಟುಗುಣವಾಗಿರುವವನೂ

|| ಪ್ರಥಮಾಶ್ವಾಸಂ ||

---

೧ ವಹಿತಮ (ಕಾ). ೨ ನೆಂದೆರ (ಕ, ಮ). ೩ ಳೆನಿ (ಕಾ). ೪ ವ್ಯಂಗ್ಯ (ಪ). ೫ ನಾ (ಕಾ, ಮಾ) ೬ X (ಕಾ) ೭ X (ಕ).

ದ್ವಿತೀಯಾಶ್ವಾಸಂ

ಶ್ರೀರಮಣೀಪ್ರಿಯನತಿ ಗಂ
ಭೀರಂ ಭುವನೈಕದಾನಿ ಧೀರೋದಾತ್ತಂ
ಸಾರಸ್ವತಪಾರಂ ಶೃಂ
ಗಾರಾಮೃತಸೇತು ಸುಕವಿಕಂಠಾಭರಣಂ ೧

ವಿನಯನಿಧಿ ಭಾಗ್ಯವಂತಂ
ಜಿನಶಾಸನದೀಪಕಂ ಪ್ರತಾಪಿ ಸುವಿಜ್ಞಾ
ತನಯನುದಾತ್ತಂ ತಡೆಯದೆ
ನಿನಗಾದಪನೆಂದು ಬೆಸಸಿದರ್ವನಜನಮುಖೀ ೨

ಕರತಳದ ಮುತ್ತನಱಿವಂ
ತಿರೆ ಮುನಿಪಂ ಚಿಹ್ನ ಲಕ್ಷಣಾಂಗ[೧]ಸ್ವಪ್ನ[೧]
ಸ್ವರ ಭೌಮ ವ್ಯಂಜನಮಂ
ತರಿಕ್ಷಮೆಂಬೀ ನಿಮಿತ್ತಮೆಂಟುಮನಱಿವರ್ ೩

ವ|| ಮತ್ತ[೨]ಮವರಿ[೨]ದಕ್ಕೊಂದು [೩]ಕೂನು[೩]ಮಂ ಪೇೞ್ದರ್ ನಿನ್ನ ಮೊಲೆಗೆಲದೊಳ್ ಚಿನ್ನದಗಲದ ಪೊನ್ನಬಣ್ಣದ ಮತ್ತಿ ಮತ್ತೆನಿಸದೆ ಮೂಡಿದುದು ಗಡ ತೋಱೆಂದು ನೋಡುವಾಗಳ್

೧. ಐಶ್ವರ್ಯಾಧಿಪತಿಯೂ, ಗಂಭೀರನೂ, ಲೋಕೈಕದಾನಿಯೂ, ಧೀರೋದಾತ್ತನೂ ಸಾರಸ್ವತ ವಿದ್ಯಾಪಾರಂಗತನೂ ಶೃಂಗಾರಾಮೃತಕ್ಕೆ ಸೇತುವೆನಿಸುವವನೂ ಸತ್ಕವಿಗಳಿಗೆ ಕಂಠಾಭರಣನೂ

೨. ಅತ್ಯಂತ ವಿನಯಶಾಲಿಯೂ ಭಾಗ್ಯಶಾಲಿಯೂ ಜಿನಶಾಸನವನ್ನು ಬೆಳಗುವವನೂ ಪ್ರತಾಪಿಯೂ ಪ್ರಾಜ್ಞನೂ ಉದಾತ್ತ ಗುಣವುಳ್ಳವನೂ ಎನಿಸುವ ಮಗನು ನಿನಗೆ ಹುಟ್ಟುವನೆಂದು ಅವರು ಹೇಳಿದರು.

೩. ಚಿಹ್ನ, ಲಕ್ಷಣ, ಅಂಗ, ಸ್ವಪ್ನ, ಸ್ವರ, ಭೌಮ, ವ್ಯಂಜನ ಮತ್ತು ಅಂತರಿಕ್ಷ ಎಂಬ ಎಂಟೂ ನಿಮಿತ್ತಗಳನ್ನು ಆ ಮುನೀಂದ್ರರು ಅಂಗೈಯಮುತ್ತಿನಂತೆ ಸ್ಪಷ್ಟವಾಗಿ ಅರಿತು ನೋಡಬಲ್ಲರು.

ವ|| ಮತ್ತು ಇದಕ್ಕೊಂದು ಗುರುತನ್ನೂ ಅವರು ಹೇಳಿದರು. ನಿನ್ನ ಮೊಲೆಯ ಪಕ್ಕದಲ್ಲಿ ಒಂದು ಚಿನ್ನದ ನಾಣ್ಯದಷ್ಟು ಅಗಲವಾದ ಹೊಂಬಣ್ಣದ ಮತ್ತಿ ಮೂಡಿರುವುದಂತೆ ತೋರಿಸು ನೋಡೋಣ" ಎಂದು ನೋಡುವಾಗ -

---

೧ ದ ಕಲೆ ಸು (ಕ). ೨ ಮ (ಕ). ೩ ಕುಱುಹು (ಮ)

ಉತ್ತುಂಗ ಕುಚಾದ್ರಿಯ ಪೊ
ಮ್ಮತ್ತಿಯ ಮೊಳೆ ಮೊಳೆತ ಜರಗಿನಂತಿರೆ ಕಾಣ
ಲ್ಪೆತ್ತ ಸತಿಗಾಯ್ತು ಸುತನಂ
ಪೆತ್ತಂತಪ್ಪೊಂದು ಸಂತಸಂ ತತ್ ಕ್ಷಣದೊಳ್ ೪

ಪಡೆಯಲರಿದೆನಿಸುವಜಿನಂ
ಪಡೆದಂ ಜಿನನೆಂಬ ಭವ್ಯಚಿಂತಾಮಣಿಯಂ
ಪಡೆದಂ ಮಗನೆನ[೧]ಗಹನಾಂ[೧]
ಪಡೆಯದುದಿನ್ನೊಂದುಮುಂಟೆ ನಮಗೆ ಮೃಗಾಕ್ಷೀ ೫

ವ|| ನೆಲನಂ ಪೊಯ್ದ ಕೆಯ್ ತಪ್ಪುಗುಮಾಚಾರ್ಯರ ವಚನಂ ತಪ್ಪದು ಧರ್ಮ[೨]ತತ್ಪ[೨]ರೆಯಾಗಿರೆಂದರಸನಷ್ಟಾಹ್ನಿಕಮನೆತ್ತಿಕೊಂಡಿತ್ತ ಮಹೇಂದ್ರ[೩]ನುಂ ಮಾಡಲಾಱದ ಮಹಾಮಹಿಮೆಯಂ ಮಾಡುತ್ತುಮಿರ್ದನತ್ತಲ್

ಗುಡಿಯಿಂ ತೋರಣದಿಂ ಕ
ನ್ನಡಿಯಿಂ ಕಳಶದಿನನೇಕ ಚಾಮರದಿಂ ಬೆ
ಳ್ಗೊಡೆಯಿಂ [೪]ಮುಡಿ[೪]ಯಿಂ ಮುತ್ತಿನ
ಕಡೆಯಿಂದರ್ಚಿಸಿದಳರಸಿ ಚಂದ್ರಪ್ರಭನಂ[೫] ೬

೪. ಉನ್ನತವಾದ ಕುಚದಬಳಿ ಮೊಳೆತ ಹೊಮ್ಮತ್ತಿಯು ಬೆಟ್ಟದ ಬಳಿ ಮೊಳೆದ ಚಿನ್ನದಂತಿರಲಾಗಿ ಅದನ್ನು ಕಂಡ ಜಿನದತ್ತೆಗೆ ತಾನಾಗಲೆ ಮಗನನ್ನು ಹೆತ್ತೆನೆಂಬಷ್ಟು ಸಂತೋಷವಾಯಿತು.

೫. "ಗಳಿಸಲಸಾಧ್ಯವಾದ ಧರ್ಮವನ್ನು ಗಳಿಸಿದವನೂ ಜಿನನೆಂಬ ಚಿಂತಾಮಣಿಯನ್ನು ಪಡೆದವನೂ ನನಗೆ ಮಗನಾಗುವನು. ಹರಿಣಾಕ್ಷೀ, ಈ ಲಾಭವಾದ ಮೇಲೆ ನಮಗೆ ದೊರೆಯದೆ ಇರುವ ಭಾಗ್ಯವಾವುದು?

ವ|| ನೆಲಕ್ಕೆ ಬಡಿದ ಕೈ ತಪ್ಪಿದರೂ ತಪ್ಪೀತು, ಆದರೆ ಆಚಾರ್ಯರ ಮಾತು ಎಂದಿಗೂ ತಪ್ಪಲಾರದು. ನೀನು ಧರ್ಮದಲ್ಲಿ ತೊಡಗಿರು" ಎಂದು ನುಡಿದು ಅರಸನು ಅಷ್ಟಾಹ್ನಿಕಪೂಜೆಯನ್ನು ಕೈಕೊಂಡು ಮಹೇಂದ್ರನು ಕೂಡ ಮಾಡಲಾರದಷ್ಟು ವೈಭವದಿಂದ ಆ ಪೂಜೆಯನ್ನು ಮಾಡುತ್ತಿದ್ದನು. ಇತ್ತ -

೬. ಧ್ವಜಗಳಿಂದಲೂ ತೋರಣದಿಂದಲೂ ಕನ್ನಡಿಯಿಂದಲೂ ಕಳಶದಿಂದಲೂ ಹಲವಾರು ಚಾಮರಗಳಿಂದಲೂ ಶ್ವೇತಚ್ಛತ್ರದಿಂದಲೂ ಕಿರೀಟದಿಂದಲೂ ಮುತ್ತಿನ ರಂಗವಲ್ಲಿಯಿಂದಲೂ ಅರಸಿಯು ಚಂದ್ರಪ್ರಭಜಿನನನ್ನು ಅರ್ಚಿಸಿದಳು.

---

೧ ಗಹನಂ (ಮೆ) ೨ ಪ (ಕ, ಮ). ೩ + ದತ್ತನುಂ (ಮ) ೪ ಮಡಿ (ಕ, ಪ), ನುಡಿ (ಮ) ೫ ನಾ (ಕ)

ಮಳಯಜದಿಂ ಮಲ್ಲಿಗೆಯಿಂ
ದೆಳಮುತ್ತಿಂ ಮಗಮಗಿಪ್ಪ ಕರ್ಪೂರದಿಂದು
ತ್ಪಳಲೋಚನೆಯರ್ಚಿಸಿದ
ಳ್ತೊಳತೊಳತೊಳಗುತ್ತುಮಿರ್ಪ ಚಂದ್ರಪ್ರಭನಂ[೧] ೭

ಕಳಹಂಸೆಯ ಕರ್ಪೂರದ
ಮಳ[೨]ಯರುಹ[೨]ದ ಬೆಳ್ಪನಿಳಿಪ ಜಿನರಾಜನ ಮೆ
ಯ್ವೆಳಗಿನ ಸುರಭಿಯ ಪಾಲಿಂ
ಪುಳಕಿತ ತನುಪುತ್ರ[೩]ನೀಪ್ಸೆಯಿಂ[೩]ದಂ ಮಿಂದಳ್ ೮

* ಸಂಗಳಿಸಿದ ಚಂದ್ರಪ್ರಭ
ನಂಗಪ್ರಭೆ ಪಾರ್ಶ್ವಜಿನತನುಪ್ರಭೆಯೆಂಬಾ
ಗಂಗೆಯ ಜಗುನಿಯ ಸೊಗಯಿಪ
ಸಂಗಮದೊಳ್ ಪುತ್ರಕಾಮ್ಯದಿಂದಂ ಮಿಂದಳ್ ೯

ವ|| ಬೞಿಯಮಾ ಬಳವಿರೋಧಿ ಪೂಜಿತನ ಪದಪಯೋಜಂಗ[೪]ಳಿಗೆ[೪] ಬೇಱಿ ಬೇಱಿ ಪೆಱಿನೊಸಲನೆಱಗಿಸಿ

ಸಲಿ[೫]ಯಿಸು[೫] ಬಿನ್ನಪಮಂ ಮ
ತ್ಕುಲಪಾಲಕ ಚಂದ್ರನಾಥ ನಿನ್ನ ಸುಧಾ ನಿ
ರ್ಮಲಮೆನಿಸಿದ ದೇಹದ್ಯುತಿ
ಮೊಲೆವಾಲಕ್ಕೆನ್ನ ಸುತಚಕೋರಂಗೆ ಜಿನಾ ೧೦

೭. ಶ್ರೀಗಂಧ, ಮಲ್ಲಿಗೆ ಹೂ, ಮುತ್ತು, ಗಮಗಮನಿಸುವ ಕಪ್ಪುರಗಳಿಂದ ಕಮಲ ನೇತ್ರೆಯಾದ ಜಿನದತ್ತೆಯು ಉಜ್ವಲವಾದ ಚಂದ್ರಪ್ರಭಮೂರ್ತಿಯನ್ನು ಪೂಜಿಸಿದಳು.

೮. ಹಂಸಪಕ್ಷಿಯ, ಕಪ್ಪುರದ ಶ್ರೀಗಂಧದ ಧವಳಕಾಂತಿಯನ್ನು ಸೋಲಿಸುವ ಜಿನೇಂದ್ರನ ಮೈ ಬೆಳಗೆಂಬ ಅಮೃತದ ಹಾಲಿನಿಂದ ರೋಮಾಂಚಿತೆಯಾಗಿ ಆ ರಾಣಿ ಪುತ್ರಾಪೇಕ್ಷೆಯಿಂದ ಮಿಂದಳು.

೯. ಚಂದ್ರಪ್ರಭನ ಮೈಕಾಂತಿಯೆಂಬ ಗಂಗಾಪ್ರವಾಹ ಹಾಗೂ ಪಾರ್ಶ್ವನಾಥನ ಅಂಗಕಾಂತಿಯೆಂಬ ಯಮುನಾ ಪ್ರವಾಹ - ಈ ಎರಡರ ಸುಂದರ ಸಂಗಮದಲ್ಲಿ ಪುತ್ರಾಪೇಕ್ಷೆಯಿಂದ ಆಕೆ ಮಿಂದಳು.

ವ|| ಅನಂತರ ಇಂದ್ರವಂದಿತನಾದ ಜಿನನ ಪಾದಕಮಲಗಳಿಗೆ ಚಂದ್ರಸದೃಶವಾದ ತನ್ನ ಹಣೆಯನ್ನು ಬಾಗಿ ಬಾಗಿ ಹೀಗೆ ಪ್ರಾರ್ಥಿಸಿದಳು-

೧೦. "ನನ್ನ ಕುಲಸ್ವಾಮಿಯಾದ ಚಂದ್ರನಾಥನೆ, ನನ್ನ ಪ್ರಾರ್ಥನೆಯನ್ನು ಈಡೇರಿಸು. ಅಮೃತದಂತೆ ನಿರ್ಮಲವಾಗಿರುವ ನಿನ್ನ ದೇಹಕಾಂತಿ ನನ್ನ ಪುತ್ರನೆಂಬ ಚಕೋರಪಕ್ಷಿಗೆ ಹಾಲಾಗಿ ನನ್ನ ಮೊಲೆಗಳನ್ನು ತುಂಬಲಿ"

---

೧ ನಾ (ಕ, ಮ) ೨ ಯರ್ಹ (ಕ, ಕಾ). ೩ ಕಾವ್ಯದಿಂ (ಕ, ಪ). * ಈ ಪದ್ಯವು ಕ, ಪ ಪ್ರತಿಗಳಲ್ಲಿ ಇರುವುದಿಲ್ಲ. ೪ ಳ್ಗುರೆ (ಪ) x (ಕ) ೫ ಸೀ (ಕಾ) ಸುಗೆ (ಮ).

ವ|| ಅಂತು ಜಿನಪೂಜಾಮಹೋ[೧]ತ್ಸವ[೧]ಂಗಳಂ ಪುತ್ರೋತ್ಸವ ನಿಮಿತ್ತಮಾ ಜಿನದತ್ತೆ ಮಾಡು[೨]ತ್ತುಮಿ[೨]ರ್ಪಿನಮೊಂದು ದಿವಸಂ

ಪಾಯ್ವ ಕುಚಂಗಳಂ ಮಿ[೩]ಡಿದು ನೋಡಿ ಕವುಂಕುಳನೆತ್ತಿ ಕಂಪನಾ
ರಯ್ವುದುಮೊತ್ತುತುಂ ಮೊಡವಿಯಂ ಮೊಗಮಂ ಮೃಗನೇತ್ರೆ ದರ್ಪಣ
ಕ್ಕುಯ್ವುದುಮೆಲ್ಲವಂ ಕಳೆದು ಮಾಣಿಕಮಂ ಕನಕಂಗಳಿಂದ ಕೆಯ್
ಗೆಯ್ವುದುಮಂದು ಕೆಯ್ಗೆ ಸೆಳೆಯಂ ಸಖಿ ಕೊಟ್ಟಳಿದೇಂ ಪ್ರಗಲ್ಭೆಯೋ ೧೧

ತೊಳಗುವ ಮೆಯ್ಗಳೊಳ್ ತಿಮಿರ್ದ[೪] ಕುಂಕುಮದಿಂ ತೆಗೆದುಟ್ಟ ಮುಳ್ಳಿ[೫]ನಿಂ
ದಳವಡೆ ತೊಟ್ಟ ಪೊಂದುಡುಗೆಯಿಂ[೬] ಚಳಕೋಮಳ ಹಸ್ತಶಾಖೆಯೊಳ್
ಸೆಳೆಸೆಳೆಗೊಂಬಿನಂತೆ ಪೊಳೆವೊಂದು ವಿಳಾಸದಿನಗ್ಗಳಂ ತಳಿ
ರ್ತೆಳಲತೆಯಂತೆ ತೋಱುವರುಣಾಧರೆ ಪುಷ್ಪಿತೆಯಪ್ಪುದೊಪ್ಪದೇ ೧೨

ಚಿಕುರಂ ಪ್ರಜ್ವಲಿಪಿಂದ್ರನೀಲನಿಕರಂ ಬಾಯ್ವಿದ್ರುಮಂ ಛಾ[೭]ಯೆ ಮಾ
ರಕತಚ್ಛಾಯೆ ನಖಾಳಿ ವಜ್ರಮಮಳಂ ದಂತೋತ್ಕರಂ ವ್ಯಕ್ತ ಮೌ
ಕ್ತಿಕಮಾ[೮]ಗಲ್ಕೆ[೮] ಪರಾರ್ಥ್ಯಮಾಗೆ ನೆಗಟ್ದಾ ಪೆಣ್ಮಾಣಿಕಂ ಮಾಣಮಾ
ಣಿಕಗೆಂಟೆಂದೊಡೆ ಮಾಣ್ದನಂದರಸನಾ ಸ್ತ್ರೀಮಾಯೆಯಂ ಮೀರ್ವ[೯]ರಾರ್ ೧೩

ವ|| ಹೀಗೆ ಪುತ್ರಲಾಭಕ್ಕಾಗಿ ಆ ಜಿನದತ್ತೆ ಜಿನಪೂಜಾ ಮಹೋತ್ಸವವನ್ನು ಮಾಡುತ್ತ ಇರುವಾಗ ಒಂದು ದಿನ -

೧೧. ತನ್ನ ಸೊಕ್ಕುತ್ತಿರುವ ಮೊಲೆಗಳನ್ನು ಮಿಡಿದು ನೋಡಿ, ಕಂಕುಳನ್ನೆತ್ತಿ ವಾಸನೆ ನೋಡುವುದು, ಮುಖದ ಮೇಲಿನ ಮೊಡವೆಗಳನ್ನು ಒತ್ತುತ್ತಾ ಕನ್ನಡಿಯಲ್ಲಿ ನೋಡಿಕೊಳ್ಳುವುದು, ರತ್ನಾಭರಣಗಳನ್ನೆಲ್ಲ ಕಳಚಿ, ಚಿನ್ನದ ತೊಡವುಗಳಿಂದ ಮಾತ್ರ ಅಲಂಕರಿಸಿಕೊಳ್ಳುವುದು - ಜಿನದತ್ತೆಯ ಈ ಚೇಷ್ಟೆಗಳನ್ನು ಕಂಡು ಅವಳ ಸಖಿ ಅವಳ ಕೈಗೊಂದು ಸೆಳೆಯನ್ನು ಕೊಟ್ಟಳು. ಆ ಸಖಿ ಎಂತಹ ಇಂಗಿತಜ್ಞೆ!

೧೨. ಕಾಂತಿಮಯವಾದ ಅಂಗಾಂಗಗಳಲ್ಲಿ ತೊಡೆದುಕೊಂಡ ಕುಂಕುಮ ದಿಂದಲೂ, ಉಟ್ಟುಕೊಂಡ ಕೆಂಬಣ್ಣದ ವಸ್ತ್ರದಿಂದಲೂ, ಒಪ್ಪುವಂತೆ ಧರಿಸಿದ ಚಿನ್ನದ ಆಭರಣಗಳಿಂದಲೂ ಸೆಳೆಹಿಡಿದು ಚಲಿಸುವ ಕೈಯಿಂದಲೂ ಕೋಮಲವಾದ ಶಾಕೆಯಂತೆ ಬಳುಕುವ ವಿಲಾಸದಿಂದಲೂ ಚಿಗುರಿದ ಎಳೆಯ ಬಳ್ಳಿಯಂತೆ ತೋರುವ ಚೆಂದುಟಿಯ ಚೆಲುವೆಗೆ ಪುಷ್ಪತೆಯಾಗುವುದೂ ಒಂದು ಶೋಭೆಯೆ ಅಲ್ಲವೆ?

೧೩. ತಲೆಗೂದಲು ಉಜ್ವಲವಾದ ಇಂದ್ರನೀಲ, ತುಟಿ, ಹವಳ, ಛಾಯೆ ಪಚ್ಚದ ಛಾಯೆ, ಉಗುರುಗಳು ವಜ್ರ, ನಿರ್ಮಲವಾದ ಹಲ್ಲುಗಳು ಅಚ್ಚ ಮುತ್ತು - ಹೀಗೆ ಶ್ರೇಷ್ಠರತ್ನಾನ್ವಿತಮಾದ ಆ ಸ್ತ್ರೀರತ್ನವು ತಾನು 'ಹೊರಗೆ' ಅರಸನು ಎಂದೊಡನೆ ಅವಳಿಂದ ದೂರವಾದನು. ಸ್ತ್ರೀ ಮಾಯೆಯನ್ನು ಮೀರುವವರಾರು?

---

೧ ತ್ಸಾಹಂ (ಕ) ೨ ತ್ತಿ (ಕಾ) ೩ ಪಿ (ಕಾ) ೪ ರ್ದು (ಕ) ೫ ತ್ತಿ (ಕ) ೬ ಯಂ (ಕ, ಮ) ೭ ಮಚ್ಛಾ (ಕ) ೮ ಗಿಕ್ಕೆ (ಕಾ) ೯ ರು (ಮ)

ಅಸಿಯ ಸೆಳೆ ತಳದೊಳತಿ ರಂ
ಜಿಸೆ ಪುರ್ವೌವ್ವಳಿಸೆ ಪತ್ತೆಸಾರ್ವವರಂ ತ
ರ್ಜಿಸಿ ಕಾಮನ ಪಡಿಯಱತಿವೊ
ಲೆಸೆದಳ್ ಪೊಸದೇಸೆ[೧]ಕಾರ್ತಿ ಪೊಸಕಿಟ್ಟ[೨]ಳದೊಳ್ ೧೪

ವ॥ ಅಂತು ರಜಸ್ವಲೆಯಾಗಿ ಚತುರ್ಥ[೩]ದಿನದೊಳ್[೩] ಬಿಸಿಲಂ ಕಳೆದು ಬೆಳದಿಂಗಳಂ [೪]ತುಡುವ[೪] ಗಗನಲಕ್ಷ್ಮಿಯಂತೆ ಕೆಂಪಿನ ಪಸದನಮಂ ಕಳೆದು ತಲೆ ನೀರ್ಮಿಂದು ಬೆಳ್ವಸದನಂಗೆಯ್ಯೆ[೫]

ನನೆಗಣೆಯಿಂ[೬] ಸ್ಮರಂ ಪಡೆದ [೭]ಪೂಗೊಳದಂತೆ[೭] ವೊಲಿರ್ದುದಚ್ಚ ಮಿಂ
ಚಿನ ಸುಲಿಪಲ್ಗಳಚ್ಚ ಬಿಳಿದೆಂಬಿನಮುಟ್ಟ ದುಕೂಲಮಚ್ಚಗಂ
ಪಿನ ಸಿರಿಕಂಡದಣ್ಪು ತೊಳಪಚ್ಚ ಬೆಳಂತಿಗೆಯೋಲೆಯಚ್ಚ ಮು
ತ್ತಿನ ತೊಡವಚ್ಚ ಮಲ್ಲಿಗೆಯ ಸೋರ್ಮುಡಿ ಸೋಮಸಮಾನವಕ್ತ್ರೆಯಾ ೧೫

ಸುದತಿಯ ದಿವ್ಯಗಂಧತನು ಚಂದನ ಶಾಖೆಯೊಳಂಗಜಾಹಿಯಿ
ಕ್ಕಿದ ಹೆರೆಯಂತಿರುಟ್ಟ ದುಗುಲಂ ಕುಚಕೋಕಯುಗಂಗಳಡ್ಡಗ[೮]
ರ್ಚಿದ ಬಿಸದಂತೆ ಹಾರಲತೆ ಕಣ್ಗೆ ಕರಂ ಸುಲಿಪಲ್ಲಪಂಕ್ತಿಯೊ
ಪ್ಪಿದುದು ಸುಧಾಂಶುಬಿಂಬಮೆ[೯]ಳಮುತ್ತನೆ ಮುಕ್ಕುಳಿಸಿರ್ದುದೆಂಬಿನಂ ೧೬

೧೪. ಸೆಳೆಗೋಲು ಕೈಯಲ್ಲಿ ತುಂಬ ಚೆಲುವಾಗಿ, ಹುಬ್ಬುಗಳು ಹತ್ತಿರ ಬರುವವರನ್ನು ಗದರಿಸುತ್ತಿರಲು, ಕಾಮನ ಪ್ರತೀಹಾರಿಯೊ ಏನೊ ಎಂಬಂತೆ ಮುಟ್ಟಿನ ಆರಂಭ ಕಾಲದಲ್ಲಿ ಆ ಬೆಡಗಿ ಕಂಗೊಳಿಸಿದಳು

ವ॥ ಹೀಗೆ ಮುಟ್ಟಾಗಿ ನಾಲ್ಕನೆಯ ದಿನದಂದು, ಬಿಸಿಲನ್ನು ಕಳಚಿ ಬೆಳ್ದಿಂಗಳನ್ನು ಉಡುವ ಆಕಾಶ ಲಕ್ಷ್ಮಿಯಂತೆ ಕೆಂಪಿನ ಅಲಂಕರಣಗಳನ್ನು ಕಳಚಿ ಎರೆದುಕೊಂಡು ಬೆಳ್ಳನೆಯ ವಸ್ತ್ರಾಲಂಕಾರಗಳನ್ನು ಆಕೆ ಧರಿಸಿದಳು.

೧೫. ಅಚ್ಚ ಮಿಂಚಿನಂತಿರುವ ಹಲ್ಲುಗಳು, ಬೆಳ್ಳಬೆಳಗಿನಂತೆ ಉಟ್ಟಿರುವ ಬಿಳಿಯ ಸೀರೆ, ಪರಿಶುದ್ಧವಾದ ಶ್ರೀಗಂಧ ಪರಿಮಳದ ಲೇಪನ, ಥಳಥಳಿಸುವ ಬಿಳಿಯ ಓಲೆಗಳು, ಅಚ್ಚ ಮುತ್ತಿನ ಆಭರಣಗಳು, ಅಚ್ಚ ಮಲ್ಲಿಗೆಯನ್ನು ಮುಡಿದುಕೊಂಡ ಬಿಡು ಜಡೆ - ಇವುಗಳಿಂದ ಶೋಭಿಸುವ ಆ ಚಂದ್ರಮುಖಿಯನ್ನು ನೋಡಿದರೆ- ಮನ್ಮಥನು ತನ್ನ ಹೂಬಾಣಗಳಿಂದ ನಿರ್ಮಿಸಿದ ಹೂಗೊಳವೆ ಪ್ರಫುಲ್ಲವಾಗಿ ನಿಂತಂತೆ ಎನಿಸಿತು.

೧೬. ಆ ಸುಂದರಿಯ ದಿವ್ಯದೇಹವೆಂಬ ಚಂದನದ ಕೊಂಬೆಯಲ್ಲಿ ಕಾಮಸರ್ಪ ಕಳಚಿದ ಹೆರೆಯೊಏನೊ ಎಂಬಂತೆ ಆಕೆಯುಟ್ಟ ಬಿಳಿಯ ರೇಷ್ಮೆ ಸೀರೆಯೂ, ಮೊಲೆಗಳೆಂಬ ಚಕ್ರವಾಕಗಳೆರಡು ಕಚ್ಚಿಕೊಂಡು ಅಡ್ಡಲಾಗಿ ಹಿಡಿದ ತಾವರೆಯ ನಾಳವೆ ಇದು ಎಂಬಂತಿರುವ ಮುತ್ತಿನ ಹಾರವೂ ಚಂದ್ರಬಿಂಬವು ಎಳೆಯ ಮುತ್ತುಗಳನ್ನು ಮುಕ್ಕುಳಿಸಿತೋ ಏನೋ ಎಂಬಂತೆ ತೋರುವ ಹಸನಾದ ಹಲ್ಲುಗಳೂ ತುಂಬ ಮನೋಹರವಾಗಿ ಕಂಡುವು

---

೧ ಶಿ (ಕ) ೨ ಲ್ದ (ಪ) ೩ ದೊಳು (ಕ, ಮ). ೪ ತೊಡುವ (ಕಾ), ತುಡುಕುವ (ಕ) ೫ ಯ್ದು (ಕ) ೬ ಯಂ (ಕ, ಮ, ಪ) ೭ ಪೆಣ್ಗಳದಂತೆ (ಕ), ಪೆಣ್ಣಲರಂತೆ (ಮ) ಪೊನ್ಗೊಳದಂತೆ (ಪ) ೮ ಕ (ಕ). ೯ ದೆ (ಮ).

ಮಿಗೆ ವಿರಹಿ ಕರಿಗಳಂ ಪೊ[1]
ಯ್ದುಗಿದಂಗಜನಸಿಯೊಳಡರೆ ಪತ್ತಿದ ಪೊಸ ಮು
ತ್ತುಗಳೆನೆ ಸೋರ್ಮುಡಿಯೊಳ್ ಮ
ಲ್ಲಿಗೆಯ ಸರಂ ಕಣ್ಗೆವಂದುದಾ ಕಾಮಿನಿಯಾ ೧೭

ವ|| ಎಂಬಿನಂ ಕೆಯ್ಗೆಯ್ದು ಕಾಂತನ ಸೂಟ್ಗೆವರೆ ಸಮರತ ಸಮನಂತರ [2]ಸಮಯ[2]ದೊಳ್

ಅತಿಶಯ ಸಮಾಧಿ[3]ವಾದಕ[3]
ಯತಿಜನ ಘನನಿನದಮೊದವೆ ಬಂದುದು ಚಿಂತಾ
ಗತಿ ಜಿನಹಂಸಂ ತನ್ನೃಪ
ಸತಿಯಮಳಿನ ಗರ್ಭಮಾನಸಕ್ಕತಿ ಜವದಿಂ ೧೮

ವ|| ಆ ಪ್ರಸ್ತಾವದೊಳ್ ಕಾಮಕೇಳೀ ವಿನೋದದಿಂ ಶ್ರಮಂಬೆತ್ತು ಸುಖಸುಪ್ತೆ[4]ಯಾಗಿ

ಭಾನುವನಿಂಗಡಲಂ ಮದ
ದಾನೆಯನದಟಲೆವದೊಂದು ಕೇಸರಿಯಂ ಸಂ
ತಾನದ ಪೂವಿನ ಸರಮಂ
ಸ್ನಾನಂಗೆಯ್ವುತ್ತುಮಿರ್ಪ ಸಿರಿಯಂ ಕಂಡಳ್ ೧೯

ವ|| ಕಂಡು ತನ್ನ ನಿದ್ರೆಯೊಡನೆ ಕಟ್ತಲೆ ಪರೆಯುತ್ತುಂ ಕ[5]ಣ್ಮಲ[5]ರೊಡನೆ ಕಮಲದಳವಲರೆ

೧೭. ವಿರಹಿಗಳೆಂಬ ಆನೆಗಳನ್ನು ನೆತ್ತಿಯ ಮೇಲೆ ಇರಿದು ಹಿರಿದು ಕೊಂಡಕಾಮನ ಖಡ್ಗಕ್ಕೆ ಅಂಟಿಕೊಂಡ ಹೊಸ ಮುತ್ತುಗಳೊ ಏನೊ ಎಂಬಂತೆ ಆ ಕಾಮಿನಿಯ ಬಿಡುಮುಡಿಯಲ್ಲಿದ್ದ ಮಲ್ಲಿಗೆಯ ಸರ ಕಂಗೊಳಿಸಿತು.

ವ|| ಹೀಗೆ ಅಲಂಕರಿಸಿಕೊಂಡು ಪತಿಯ ಸಮಾಗಮಕ್ಕೆ ಬಂದು, ಸಮರತಿಯನ್ನು ಅನುಭವಿಸಿದಳು. ಅನಂತರದ ಸಮಯದಲ್ಲಿ -

೧೮. ಅತಿಶಯವಾದ 'ಸಮಾಧಿವಾಹಕ (?)' ಮುನಿಗಳೆಂಬ ಮೇಘಗಳ ಧ್ವನಿಯಾದೊಡನೆ ಚಿಂತಾಗತಿಯೆಂಬ ಜಿನಹಂಸವು ಅತ್ಯಂತ ತ್ವರಿತವಾಗಿ ಆ ಅರಸಿಯ ಗರ್ಭವೆಂಬ ಮಾನಸ ಸರೋವರಕ್ಕೆ ಬಂದಿತು.

ವ|| ಆ ಸಮಯದಲ್ಲಿ ಸುರತಕ್ರೀಡೆಯಿಂದ ಬಳಲಿ, ಸುಖನಿದ್ರೆಯಲ್ಲಿದ್ದ ಅರಸಿಯು-

೧೯. ಸೂರ್ಯನನ್ನೂ ಕ್ಷೀರ ಸಮುದ್ರವನ್ನೂ ಮದವೇರಿದ ಆನೆಯನ್ನೂ ಆರ್ಭಟಿಸುವ ಸಿಂಹವನ್ನೂ ಸಂತಾನ ಪುಷ್ಪಗಳ ಹಾರವನ್ನೂ ಸ್ನಾನ ಮಾಡುತ್ತಿರುವ ಲಕ್ಷ್ಮಿಯನ್ನೂ (ಕನಸಿನಲ್ಲಿ ಕಂಡಳು)

ವ|| ಆ ಬಳಿಕ ನಿದ್ದೆಯೊಡನೆ ಕತ್ತಲೆಯೂ ಕಳೆದು, ಕಣ್ಣುಗಳೊಡನೆ ತಾವರೆಗಳೂ ಅರಳಲಾಗಿ, ತನ್ನ ಪಿಂಡುಗಂಕಣದೊಡನೆ ಸಾರಸಪಕ್ಷಿಗಳೂ ಉಲಿಯಲಾಗಿ, ತನ್ನ

---

೧ ಪಾ (ಕಾ) ೨ ಸಮಯ ಸಮಯ (ಕಾ) ೩ ವಾಹಕ (ಕಾ). ೪ ಪ್ತಿ (ಕ, ಮ). ೫ ಲ್ಮರ (ಕ).

ತನ್ನ ಪಿಂಡುಗಂಕಣದೊಡನೆ ಕೊಳರ್ವಕ್ಕಿಗಳುಲಿಯೆ ತನ್ನ ಮನೋರ[1]ಥೋದಯ[1]ದೊಡನೆ ರವಿರಥೋದಯುಮಾಗೆ ಮಂಗಳಗೇ[2]ಯಸ್ತುತಿಯುಂ[2] ತಾಗೆ ಸಜ್ಜೆಯ[3]ನುಜ್ಜುಗದಿನೆಬ್ಬಿ[4] ಶೃಂಗಾರಗೇಹದೊಳ್ ಶೃಂಗಾರಂಗೆಯ್ವುತ್ತುಮಿರ್ದಳನ್ನೆಗಂ

ಹರಿಣಿ।। ಎಡದ ಕರದೊಳ್ಗಂಧಂ ಪೂಮಾಲೆ ಸಿರ್ಪಿನ ಸೇಸೆ ಪೊಂ
ಬಡಲಿ[5]ಗೆಯೊಳೊಂದೊಂದಂ ಚೆಲ್ವಾಗೆ ಗಂಧಜಳಂಗಳಂ
ಪಿಡಿದ ಕಳಸಂ ಕೆಯ್ಯೊಳ್ಮತ್ತೊಂದಜಿೞ್ಗೆ ಶೋಭೆಯಂ
ಪಡೆಯೆ ಪದಪಿಂದೊರ್ವಂ ಬಂದಂ ಪ್ರಗಲ್ಭ ಪುರೋಹಿತಂ ೨೦

ವ।। ಬಂದು ದೇವರ ಬರಮಂ ಕಾಣ್ಬಂತೆ ತನ್ನ ಬರಮಂ ಕಂಡಿದಿರೆಬ್ಬು[6] ಕೆಯ್ಗಳಂ ಮುಗಿದ ರಾಜವಲ್ಲಭೆಯ ಮುಂದೆ ನಿಂದು

*ಲಕ್ಷ್ಮೀ ತವಪ್ರಥಮ ಪುಣ್ಯಫಲಂ ಪ್ರಸೂತಾಂ
ಶೀತಾಂಶುಲಾಂಛನವತಾಂ ವಿತತಿರ್ನ[7]ಖಾನಾಂ
ಖುಜ್ಮಂಜರೀಚರಣಪಲ್ಲವಘುಲ್ಲಕಾನಾಂ
ಶೋಭಾಜ[8]ನಂ ಜಿ[8]ನಪತೇಃ ಫಲಿನಸ್ಯ[9] ನಿತ್ಯಂ ೨೧

ಮನೋರಥದೊಂದಿಗೆ ಸೂರ್ಯನ ರಥವೂ ಉದಯವಾಗಲು, ಮಂಗಳಸ್ತುತಿಯ ಗೀತೆ ಕೇಳಿ ಬರಲಾಗಿ ಜಿನದತ್ತೆಯು ಲಗು ಬಗೆಯಿಂದ ಹಾಸುಗೆ ಬಿಟ್ಟೆದ್ದು ಶೃಂಗಾರಗೃಹದಲ್ಲಿ ತನ್ನನ್ನು ಅಲಂಕರಿಸಿಕೊಳ್ಳುತ್ತಿದ್ದಾಗ -

೨೦. ಸುವಾಸನೆಯ ಹೂಮಾಲೆ, ಶೇಷಾಕ್ಷತೆಗಳನ್ನೊಡಗೊಂಡ ಸಿಂಪುಗಳಿಂದೊಪ್ಪುವ ಹೊನ್ನ ಹರಿವಾಣವನ್ನು ಎಡಗೈಯಲ್ಲಿಯೂ ಗಂಧದ ನೀರು ತುಂಬಿದ ಕಲಶವನ್ನು ಇನ್ನೊಂದು ಕೈಯಲ್ಲಿಯೂ ಹಿಡಿದುಕೊಂಡ ಪುರೋಹಿತನೂ ಉತ್ಸಾಹದಿಂದ ಬಂದನು.

ವ।। ದೇವರನ್ನೆ ಕಂಡಂತೆ ತನ್ನನ್ನು ಕಂಡು ಎದುರಿಗೆ ಎದ್ದು ಬಂದು ಕೈಮುಗಿದು ರಾಣಿಯ ಮುಂದೆ ನಿಂತು ಆ ಪುರೋಹಿತನು -

೨೧. ಫಲಪ್ರದನಾದ ಜಿನಪತಿಯ ಪಾದಪಲ್ಲವಗಳಿಗೆ ಚಂದ್ರಬಿಂಬಗಳಂತೆ ಶೋಭೆಯನ್ನುಂಟುಮಾಡುತ್ತಿರುವ ಆತನ ಶ್ರೇಷ್ಠವಾದ ಕಾಲುಗುರುಗಳ ಕಾಂತಿಯೆಂಬ ಪುಷ್ಪಗುಚ್ಛವು ನಿನ್ನ ಶ್ರೇಯಸ್ಸಿಗಾಗಿ ಪ್ರಥಮ ಪುಣ್ಯಫಲವನ್ನು ಅನುಗ್ರಹಿಸಲಿ*

---

೧ ಥ (ಕ, ಮ). ೨ ಯಂ (ಕಾ). ೩ ಯಿ (ಮ). ೪ ದುರ್ (ಕ, ಮ). ೫ ಲ (ಕ). ೬ ದುರ್ (ಮ), ದ್ದು (ಕ). * + ಆಶೀರ್ವಾದ (ಕ, ಕಾ, ಮ). ೭ ತೆ (ಪ). ೮ ನರ್ಜಿ (ಪ). ೯ ಶ್ಚ (ಪ).

* ಶ್ಲೋಕವನ್ನು ಈ ಕೆಳಗಿನಂತೆ ತಿದ್ದಿಕೊಳ್ಳಲಾಗಿದೆ:

ಲಕ್ಷ್ಮ್ಯಾ ತವ ಪ್ರಥಮ ಪುಣ್ಯಫಲಂ ಪ್ರಸೂತಾಂ
ಶೀತಾಂಶು ಲಾಂಛನವತಾಂ ವಿತತಿರ್ನಖಾನಾಂ ।
ಸ್ರಜ್ಮಂಜರೀ ಚರಣಪಲ್ಲವ ತಲ್ಲಜಾನಾಂ
ಶೋಭಾಜನಿರ್ಜಿತಪತೇಃ ಫಲಿನಸ್ಯ ನಿತ್ಯಂ ॥

ವ ॥ ಎಂದೋದಿ ಗಂಧೋದಕಮುಮಂ ಸಿದ್ಧಸೇಸೆ[೧]ಯುಮಂ[೧] ಕುಡೆ ಕೊಂಡು [೨]ಕುಳ್ಳಿರಲ್ಕುಡಿಸಿ[೨] ತನ್ನ ಕಂಡ ಕನಸುಗಳನನುಕ್ರಮದಿಂ ಪೇಟಿ ಕೇಳ್ದು

ಭಾನುವಿನಂತೆ ತೇಜದೊಡೆಯಂ ಕಡಲಂತೆ ಗಭೀರನಾನೆಯಂ
ತಾನತಲೋಕದಾನಪತಿ ಕೇಸರಿಯಂತೆ ಪರಾಕ್ರ[೩]ಮಾರ್ಥಿ[೩] ಸಂ
ತಾನದ ಪೂವಿನಂತೆ ಲಲಿತಂ ಸಿರಿಯಂತೆ ಸಮಗ್ರಭಾಗ್ಯನು
ತ್ತಾನ ಯಶೋತ್ತಮಂ ನಿನಗೆ ಪುಟ್ಟಿದಪಂ ಕುಲರತ್ನಭೂಷಣಂ ೨೨

ವ॥ ಎಂದು ಸ್ವಪ್ನಫಲಮಂ ಪೇಳ್ದು ಪುರೋಹಿತನಂ ಮಣಿಕುಂಡಲಾದಿಗಳಿನರ್ಚಿಸಿ ಪಂಚಪರಮೇಶ್ವರರ ಪೂಜಾಪ್ರಭಾವ ತತ್ಪರೆಯಾಗಿರೆ ಕೆಲವಾನುದಿವಸದಿಂ

ಸೆಳೆನಡುವನುಡಿವ ಭರದಿಂ
ಬಳೆವಂತಿರೆ ಬಳೆಯೆ ಮೊಲೆಗಳವಱಿಯೆ ಚಲದಿಂ
ಬಳೆವಂತೆ ಬಳೆಯೆ ನಡುವು
ಮ್ಮಳಿಸಿದವೋಲ್ಕರ್ಗಿಕೊಂಡುವವಱ ಮೊಗಂಗಳ್ ೨೩

ನೆಗೆದ ಪಯೋಧರದ್ವಯದೊಳಾಕೆಯ ಗರ್ಭದ ರಾಜಪುತ್ರನಾ
ರೊಗಿಸುವ ಪಾಲ್ಗಳಂ ಮಡಗಿ[೪] ಮುದ್ರಿಸಿದಂತೆ ವಿಧಾತ್ರನೊಯ್ಯಗೊ[೫]
[೬]ಯ್ಯಗೆ[೬] ಕುಚ ಚೂ [ಚು][೭] ಕಂಗಳೊಳೆ ಕಣ್ಗಳೊಳಂಗನೆಯೆಚ್ಚಕೊಳ್ವ ಕಾ
ಡಿಗೆ[೮]ಯುದಿರ್ದಂತೆ ಕರ್ಪುರ್ಗ ಕವದಿಂದಡಿಯಿಟ್ಟುದು ಭೃಂಗಭಾಸುರಂ ೨೪

ವ॥ ಎಂದು ಶ್ಲೋಕವನ್ನು ಪಠಿಸಿ ಗಂಧಜಲವನ್ನು ಸಿದ್ಧಶೇಷೆಯನ್ನು ನೀಡಿದನು. ಅವುಗಳನ್ನು ಸ್ವೀಕರಿಸಿ, ಅವನಿಗೆ ಕುಳ್ಳಿರಲು ಆಸನವನ್ನು ಕೊಡಿಸಿ, ಜಿನದತ್ತೆಯು ತಾನು ಕಂಡ ಕನಸುಗಳನ್ನು ಕ್ರಮವಾಗಿ ಹೇಳಿದಳು. ಅದನ್ನು ಕೇಳಿ-

೨೨. "ಸೂರ್ಯನಂತೆ ತೇಜಸ್ವಿಯೂ ಸಮುದ್ರಂತೆ ಗಂಭೀರನೂ ಆನೆಯಂತೆ ಆಶ್ರಿತರಿಗೆ ದಾನಕೊಡುವವನೂ ಸಿಂಹದಂತೆ ಪರಾಕ್ರಮಶಾಲಿಯೂ ಸಂತಾನವೃಕ್ಷದ ಹೂವಿನಂತೆ ಸುಂದರನೂ ಲಕ್ಷ್ಮಿಯಂತೆ ಸಕಲ ಸೌಭಾಗ್ಯವಂತನೂ ಅತ್ಯಧಿಕ ಯಶೋವಂತನೂ ನಿಮ್ಮ ವಂಶಕ್ಕೆ ರತ್ನದಂತೆ ಭೂಷಣನೂ ಎನಿಸುವ ಪುತ್ರನನ್ನು ನೀನು ಹಡೆಯುವೆ"

ವ॥ ಎಂದು ಸ್ವಪ್ನಫಲವನ್ನು ತಿಳಿಸಿದ ಪುರೋಹಿತನಿಗೆ ರತ್ನಕುಂಡಲ ಮೊದಲಾದವುಗಳಿಂದ ಸತ್ಕಾರ ಮಾಡಿ ಕಳಿಸಿ, ಜಿನದತ್ತೆಯು ಪಂಚಪರಮೇಷ್ಠಿಗಳ ಪೂಜಾಕಾರ್ಯದಲ್ಲಿ ತೊಡಗಿದಳು. ಹೀಗೆ ನಡೆಯುತ್ತಿರಲು ಕೆಲವು ದಿನಗಳಾದ ಮೇಲೆ-

೨೩. ಬಳುಕುವ ನಡುವನ್ನು ಮುರಿದು ಬಿಡುವ ರಭಸದಿಂದ ಹೊರಟಿವೆಯೊ ಏನೊ ಎಂಬಂತೆ ತೋರವಾಗಿ ಮೊಲೆಗಳು ಬೆಳೆಯತೊಡಗಿದವು; ಅದನ್ನು ಕಂಡು ಛಲದಿಂದ ಅವಳ ನಡುವೂ (ಬಸಿರೂ) ಬೆಳೆಯತೊಡಗಲಾಗಿ ಅದನ್ನು ಕಂಡು ಚಿಂತೆಯಿಂದ ಮುಖ ಕಪ್ಪಿಟ್ಟುವೊ ಏನೊ ಎಂಬಂತೆ ಮೊಲೆದುದಿಗಳು ಕಪ್ಪೇರಿದುವು.

೨೪. ಆಕೆಯ ಗರ್ಭದಲ್ಲಿರುವ ರಾಜಪುತ್ರನು ಉಣ್ಣಲೆಂದು ಹಾಲನ್ನು ತುಂಬಿ

---

೧ ಯಂ (ಕ). ೨ ಕುಳ್ಳಿರಿಸಲ್ಕೂಡಿ (ಕ), ಕುಳ್ಳಿರಿಸಲ್ಕುಡಿಸಿ (ಮ). ೩. ಮ ಮೂರ್ತಿ (ಕ) ೪. ದಿ (ಕ). ೫ ನೊ (ಕ, ಮ). ೬ ಯ್ಯನೆ (ಕ, ಮ). ೭ ಚ (ಕ, ಕಾ, ಮ). ೮ ಯುಡಿದ (ಕಾ), ಯದಿರ್ದ (ಮ).

ವ॥ ಅಂತುಮಲ್ಲದೆ

ಬಿದಿ ಪಚ್ಚೆಯ ಕಾವಿ[1]ನ ನೀ
ಲದ ಕಳಸದ ಸವಡಿಗೊಡೆಯನಾ ವನಿತೆಯ ಗ
ರ್ಭದ ಬಾಳಂಗೆತ್ತಿದನೆನಿ
ಸಿದುದು ಸರೋಮಾಳಿ ಕುಚಯುಗಂ ಕೃಷ್ಣಮುಖಂ ೨೫

ಕಾಟ್ಟುರವೇಟಿ ಪಾಲಮಯಮುಂ ಜಸಮುಂ ಜಿನಮಜ್ಜನಂಗಳಂ
ಮಾಟ್ಟಿ ಜಿನೇಂದ್ರ ಪೂಜೆಯನೆ[2] ಮಾಟ್ಟಿ ಜಿನಾಲಯ ಸಂಕುಳಂಗಳಂ
ಮಾಟ್ಟಿ ಜಿನಪ್ರತಿಷ್ಠೆಯನೆ ಮಾಟ್ಟಿ ಚತುರ್ವಿಧಮಪ್ಪ ದಾನಮಂ
ಮಾಟ್ಟಿ ಬ[3]ಯಂಕೆ[3]ಯಾಯ್ತು ಜಿನದತ್ತೆಗೆ ಭವ್ಯನ ಮೇರುಗರ್ಭದೊಳ್ ೨೬

ಜಿನತೀರ್ಥಾತಿಶಯಮುಮಂ
ಜಿನಜನನೀಗರ್ಭದೋಹಳಾತಿಶಯಮುಮಂ
ಜಿನಧರ್ಮಾತಿಶಯಮುಮಂ
ಜಿನದತ್ತಾದೇವಿ ಕೇಳಲಟ್ಟೆ[4]ಗೆಯಾದಳ್ ೨೭

ಬ್ರಹ್ಮನು ಮುದ್ರೆ ಹಾಕಿದನೆಂಬಂತೆ, ಆಕೆ ಕಣ್ಣಿಗೆ ಲೇಪಿಸಿಕೊಳ್ಳುವ ಕಾಡಿಗೆ ಉದುರಿ ಉದುರಿ ತಮ್ಮಲ್ಲಿ ಕೂಡಿ ಬಿದ್ದಿತೆಂಬಂತೆ ಆಕೆಯ ಮೊಲೆದುದಿಗಳಲ್ಲಿ ಕ್ರಮೇಣ ದುಂಬಿಯಂತೆ ಚೆಲುವಾದ ಕಪ್ಪು ವರ್ಣ ಹೆಜ್ಜೆಯಿಟ್ಟಿತು.

ವ॥ ಅಷ್ಟೇ ಅಲ್ಲದೆ-

೨೫. ಪಚ್ಚದ ಕಾವನ್ನೂ ನೀಲರತ್ನದ ಕಳಸವನ್ನೂ ಹೊಂದಿದ ಎರಡು ಕೊಡೆಗಳನ್ನು ಆ ಸ್ತ್ರೀ ಗರ್ಭದಲ್ಲಿಯ ಕುಮಾರನಿಗೆಂದು ಬ್ರಹ್ಮನು ಅಳವಡಿಸಿ ನಿಲ್ಲಿಸಿದನೊ ಏನೊ ಎಂಬಂತೆ ಆಕೆಯ ಹೊಕ್ಕುಳಿಂದ ಮೇಲೆ ಹೊರಟ ರೋಮದ ಸಾಲು ಹಾಗೂ ಅದರ ಮೇಲೆ ಕಪ್ಪು ಚೂಚುಕದ ಮೊಲೆಗಳೂ ಕಂಗೊಳಿಸಿದುವು.

೨೬. ಹಾಲು ಹಾಗೂ ಯಶಸ್ಸು ಮಹಾಪೂರವಾಗಿ ಹೊಮ್ಮುವಂತೆ ಜಿನಾಭಿಷೇಕವನ್ನು ಮಾಡಬೇಕೆಂಬ, ಜಿನೇಂದ್ರ ಪೂಜೆಯನ್ನು ಮಾಡಬೇಕೆಂಬ, ಅನೇಕಾನೇಕ ಬಸದಿಗಳನ್ನು ನಿರ್ಮಿಸಬೇಕೆಂಬ, ಜಿನಪ್ರತಿಷ್ಠೆ ಮಾಡಬೇಕೆಂಬ, (ಆಹಾರ, ಅಭಯ, ಔಷಧ ಹಾಗೂ ಶಾಸ್ತ್ರ ದಾನವೆಂಬ) ನಾಲ್ಕು ಬಗೆಯ ದಾನ ಮಾಡಬೇಕೆಂಬ ಬಯಕೆಗಳು ತನ್ನ ಬಸಿರಲ್ಲಿ ಭವ್ಯ ಕುಮಾರನನ್ನು ತಾಳಿದ ಜಿನದತ್ತೆಗೆ ಉಂಟಾದುವು.

೨೭. ಜಿನತೀರ್ಥಗಳ ಮಹಿಮೆಯನ್ನೂ ಜಿನಮಾತೆಯಾಗುವವಳ ಬಸಿರ ಬಯಕೆಗಳ ಅತಿಶಯವನ್ನೂ ಜಿನಧರ್ಮದ ಅತಿಶಯರನ್ನೂ ಕೇಳುವುದರಲ್ಲಿ ಜಿನದತ್ತೆ ಅನುರಕ್ತೆಯಾದಳು.

---

೧ ಲಿ (ಮ). ೨ ವ (ಕ). ೩ ಯಕ್ಕೆ (ಕಾ) ೪ ರ್ಥಿ (ಕ, ಮ).

ವ|| ಅಂತು ಬಯಸಲ್ ತಕ್ಕ ಬಯಕೆಗಳಿಂ ನವಮಾಸಂ ತೀವೆ

ಮಣಿಮಯ ಪುತ್ರಿಕೆ ಚಿಂತಾ
ಮಣಿಯಂ ಲತೆ ಪಾರಿಜಾತಮಂ [೧]ಕನ್ನಡಿ[೧] ಪೂ
ರ್ವಣ [೨]ಶಶಿ[೨]ಯಂ ದೀಪಿಕೆ ದಿನ
ಮಣಿಯಂ ಪಡೆವಂತೆ ಪಡೆದಳಾ ಸತಿ ಸುತನಂ ೨೮

ಆ ಜಯಪತಿ ಪುಟ್ಟಲೊಡಂ
ತೇಜಮನಿಂಬಿಟ್ಟು ಬಂದು ಪೊಡೆವಟ್ಟ[೩] ಸುಹೃ
ದ್ರಾಜಕಮಗಿ[೪]ದಾತಂಗಪ
ರಾಜಿತನೆಂದಿ[೫]ಟ್ಟುದ[೫]ಮರ್ದಿನೊಸರಂ ಪೆಸರಂ ೨೯

ಮಂದಸಿನೊಳೆ ಮಾಣಿಕಮಿ
ರ್ಪಂದದಿನತಿಶಯ[೬]ಮರಾಳವಾಳೋ[೬]ದರದೊಳ್
ಮಂದಾರದ [೭]ಸಸಿ[೭]ಯೆಸೆದಿ
ರ್ಪಂದದಿನಭಿಮಾನಮೇರು ತೊಟ್ಟಿಲೊ[೮]ಳೆಸೆದಂ[೮] ೩೦

ತೂಗುವ ತೊಟ್ಟಿಲೊಳಾಡಿದ
ನಾ ಗುಣನಿಧಿ ಪೊಳೆದು ಪಾಜೆ ಪೆಜಗಾದೆಂ ಚಿಂ
ತಾಗತಿ [೯]ಖಚರನೆನೆಂದು[೯] ನ
ಭೋಗತಿಯಂ ನಭದೊಳಾಡಿ ತೋಜುವ ತೆಜದಿಂ ೩೧

ವ|| ಹೀಗೆ ಯೋಗ್ಯವಾದ ಬಸಿರ ಬಯಕೆಗಳೊಡನೆ, ಒಂಬತ್ತು ತಿಂಗಳು ತುಂಬಲಾಗಿ,

೨೮. ರತ್ನದ ಪುತ್ತಳಿ ಚಿಂತಾಮಣಿಯನ್ನೂ ಬಳ್ಳಿ ಪಾರಿಜಾತ ಪುಷ್ಪವನ್ನೂ ಕನ್ನಡಿ ಪೂರ್ಣಚಂದ್ರನನ್ನೂ ದೀವಿಗೆ ಸೂರ್ಯನನ್ನೂ ಹೆತ್ತಂತೆ ಆ ಸತಿ ಮಗನನ್ನು ಹೆತ್ತಳು.

೨೯. ಆ ಜಯಶಾಲಿ ಪುತ್ರನು ಹುಟ್ಟಿದೊಡನೆ, ತಮ್ಮ ಪರಾಕ್ರಮವನ್ನು ತೊರೆದು ಬಂದು ನಮಸ್ಕರಿಸಿ ಮಿತ್ರರಾಜಮಂಡಳಿಯು ಆತನಿಗೆ ಅಪರಾಜಿತ ಎಂಬ ಒಂದು ಅಮೃತಸೂಸುವ ಹೆಸರನ್ನು ಇಟ್ಟಿತು.

೩೦. ಪೆಟ್ಟಿಗೆಯಲ್ಲಿರುವ ಮಾಣಿಕದಂತೆ, ದೇವಲೋಕದ ಮಡಿಯಲ್ಲಿರುವ ಮಂದಾರವೃಕ್ಷದ ಸಸಿಯಂತೆ, ಅಭಿಮಾನದಲ್ಲಿ ಮೇರುಗಿರಿ ಸಮಾನನಾದ ಆ ಕುಮಾರನು ತೊಟ್ಟಿಲಲ್ಲಿ ಶೋಭಿಸಿದನು.

೩೧. ಪೂರ್ವಭವದಲ್ಲಿ ಚಿಂತಾಗತಿ ಎಂಬ ಖೇಚರನಾಗಿ ನಾನು ಹೀಗೆಯೆ ಅಂತರಿಕ್ಷದಲ್ಲಿ ಹಾರಿ ಆಟವಾಡುತ್ತಿದ್ದೆನೆಂದು ತೋರುವ ಹಾಗೆ ಆ ಗುಣವಂತನು ತೂಗುವ ತೊಟ್ಟಿಲಲ್ಲಿ ಆಡಿದನು.

---

೧ ಕಂವಡಿ (ಕಾ). ೨ ಸಸಿ (ವ), ೩ ಟ್ಟು (ಕ). ೪ ನಿ (ಕ). ೫ ಟರ (ಕ). ೬ ಮದಾಳನಾಳೋ (ಕಾ), ಮರಾಳವಾಳಾ (ಮ), ೭ ಶಶಿ ೮ ಳಿರ್ದಂ (ಮ, ಕಾ). ೯ ಖೇಚರನೆಂದು (ಕಾ), ಖಚರನೆಯೆಂದು (ಕ).

ನಡೆಗಲ್ವಂದೆ ತಳರ್ನಡೆ
ನಡೆ[೧]ಯಿಸಿ[೧]ದಂ ನೃಪಕುಮಾರ[೨]ನೆಳೆ[೨]ಯಂ [೩]ಬಲ್ಪಿಂ[೩]
ನುಡಿಗಲ್ವಂದೆ ತೊದಳ್ನುಡಿ
ನುಡಿಯಿಸಿದಂ ತನಗೆ ಸೋ[೪]ಲ್ತ ವಾಕ್ಕನ್ನಿಕೆಯಂ ೩೨

ಗರ್ವಾರಿಗೆ ಷಟ್ತ್ರಿತ್ಯಯ
ನಿರ್ವಾಹಂ ಛಂದದೊಳ್ ಸ್ವರಜ್ಞಾನಂ ಗಾಂ
ಧರ್ವದೊಳನುಭವಚರಮಾ
ಯುರ್ವೇದದೊಳಾದುದಿನ್ನರಾರ್ ನೃಪತನಯರ್ ೩೩

ವೀರಶ್ರೀಯಂ [೫]ನಿಡು[೫]ದೋಳ್
ಕೂರಿ[೬]ಸಿದುದು ಕೈದು[೭]ಗಲ್ತು[೭] ಜಸವೆಣ್ಣಂ ದಿ
ಗ್ವಾರಣಮನೇಱಿ[೮]ಸಿತ್ತು[೮] ಗ
ಜಾರೂಢಪ್ರೌಢಿ ರಾಜರಾಜಾತ್ಮಜನಾ ೩೪

ಆ [೯]ಕುವ[೯]ರಂಗೆ ಬಾ[೧೦]ಜನೆ ಲಿಪಿವ್ರಜದೊಳ್ ಪದಸಿದ್ಧಿಪಾಟವಂ
ವ್ಯಾಕರಣಂಗಳೊಳ್ ಮತಿಯಳಂಕೃತಿಯೊಳ್, ಪರಪಕ್ಷದೂಷಣಾ
ಳೋಕನದುರ್ಕು ತರ್ಕದೊಳಭಿಜ್ಞತೆಯಾಗಮದೊಳ್ ಪ್ರಸನ್ನ ಲೀ
ಲಾ ಕವಿತಾಗುಣಂ ಸಕಲ ಭಾಷೆಯೊಳಾದುದು ತಜ್ಞರಂಜನಂ ೩೫

೩೨. ಆ ರಾಜಪುತ್ರನು ನಡಗೆ ಕಲಿಯುತ್ತಿರುವಾಗಲೆ ತನ್ನ ಬಲದಿಂದ ಭೂಮಿಯನ್ನು ನಡುಗಿಸಿದನು, ಮಾತು ಕಲಿಯುತ್ತಿರುವಂತೆಯೆ ತನಗೆ ಮನಸೋತ ಸರಸ್ವತಿಯನ್ನು ತೊದಲ್ನುಡಿಗೆ ತೊಡಗಿಸಿದನು.

೩೩. ಗರ್ವರಹಿತನಾದ ಆ ಕುಮಾರನಿಗೆ ಛಂದಸ್ಸಿನಲ್ಲಿ ಷಟ್ತ್ರಿತ್ಯಯ ಪ್ರಯೋಗ ಪರಿಣತಿಯೂ ಗಾಂಧರ್ವ ವಿದ್ಯೆಯಲ್ಲಿ ಸ್ವರ ಜ್ಞಾನವೂ ಆಯುರ್ವೇದದಲ್ಲಿ ಅನುಭವಚಲಗ (?)ವೂ ಪ್ರಾಪ್ತವಾದುವು. ರಾಜಪುತ್ರರಲ್ಲಿ ಇವನಂತಹನು ಇನ್ನಾವನುಂಟು?

೩೪. ಆ ರಾಜಕುಮಾರನ ದೀರ್ಘವಾದ ತೋಳು ಶಸ್ತ್ರಾಭ್ಯಾಸದಿಂದ ವೀರಶ್ರೀಯನ್ನು ಒಲಿಸಿಕೊಂಡಿತು; ಆತನ ಆನೆ ಸವಾರಿಯ ಪ್ರೌಢಿ ಯಶಸ್ಸನ್ನು ದಿಗ್ಗಜಗಳ ಮೇಲೆ ಸವಾರಿ ಮಾಡಿಸಿತು.

೩೫. ಅನೇಕ ಲಿಪಿಗಳಲ್ಲಿ ಓದುವ ಕೌಶಲವೂ ವ್ಯಾಕರಣಗಳಲ್ಲಿ ಪದಸಿದ್ಧಿಯ ಜಾಣ್ಮೆಯೂ ಅಲಂಕಾರಶಾಸ್ತ್ರದಲ್ಲಿ ಪಾಂಡಿತ್ಯವೂ ತರ್ಕದಲ್ಲಿ ಪರಪಕ್ಷದವರ ದೋಷಗಳನ್ನು ಕಂಡುಹಿಡಿಯುವ ಉತ್ಸಾಹವೂ ಆಗಮದಲ್ಲಿ ಉತ್ತಮವಾದ ತಿಳಿವಳಿಕೆಯೂ ಸಕಲ ಭಾಷೆಗಳಲ್ಲಿ ಸಹಜವಾಗಿ ಕವಿತ್ವ ಮಾಡುವ ಗುಣವೂ ತಜ್ಞರು ಮೆಚ್ಚುವಂತೆ ಆ ಕುಮಾರನಿಗೆ ಪ್ರಾಪ್ತವಾಯಿತು.

---

೧ ಯೆಸೆ (ಕ, ಮ). ೨ ನೆಗೆ (ಮ). ನಗೆ (ಕ), ೩ ಬಿಣ್ಪಿಂ (ಕ, ಮ). ೪ ಪೋ (ಕ). ೫ ನಿಡಿ (ಕಾ). ೬ ಡಿ (ಮ). ೭ ಗೆತ್ತು (ಕಾ). ೮ ಸುತ್ತ (ಕಾ), ಸುತ್ತು (ಮ). ೯ ಕೊಮ (ಕಾ). ೧೦ ಬಾ (ಕಾ).

ವ॥ ಅಂತು ಸಕಳ ಶಾಸ್ತ್ರ ಶ[೧]ಸ್ತ್ರಾಭ್ಯಸನ ತ್ರಾಣಶ್ರೇಣಿಕರ್ಷಣ ನಿರತಿಶಯ ನಿಶಿತ[೨]ಪ್ರಗಲ್ಭ[೨] ಪರಾಕ್ರಮ[೩]ನುಮಚಿರಾರೂಢ ಯೌವನನುಮಪ್ಪ ಮಗನಂ ಕಂಡು ತದೀಯ ಪಾಣಿಪಲ್ಲವಮನನುರೂಪ ಕನ್ಯಕಾಕರಕಿಸಲಯದೊಳ್ಗೊಡರ್ಚಲ್ ಬಗೆದು ಭಗವದರ್ಹತ್ಪೂಜಾ[೪]ಪೂರ್ವಕಮರ್ಹದ್ದಾಸನ ಪೂರ್ವನಿವಾಸನಂ[೪] ಪೂರ್ವಭವ ಪ್ರೇಮಪ್ರೇರಿತಮತಿಯಪ್ಪ ಪ್ರೀತಿಮತಿಯೆಂಬ ರಾಜಕುಮಾರಿಯೊಡನೆ ಮಹೋತ್ಸವದಿಂ ಮದುವೆ ಮಾಡೆ[೫]

ಅಂಗಜ ಮಂತ್ರಸಿದ್ಧಿವಡೆದಂತಿರೆ ಮೀಂಬೊಣ[೬]ರಾಗಿ [೭]ಜಾಳ್ವ[೭]ಜಾ
ಳಂಗಳ ಸಿಲ್ಕುಗಂಡು[೮]ವು ಕುಮಾರಿಯ ಕಣ್ಮಱಿದುಂಬಿಯಾಗಿ ಸೊ[೯]
ರ್ಕಿಂಗೆ ಸರೋಜದೊಂದು ಸವಿಗಂಡು[೧೦]ವು ಬಾಳಚಕೋರಮಾಗಿ ಬೆ
ಳ್ದಿಂಗಳ ಸುಗ್ಗಿಗಂಡು[೧೧]ವು ಕುಮಾರನ ಕಾಂತಿ ಮುಖೇಕ್ಷಣಂಗಳೊಳ್ ೩೬

ತುಱುಗೆವೆ ನಿಂದು ನೋಡೆ ಕಡೆಗಣ್ಣಿದಿರ್ಗೊಳ್ವ[೧೨]ಳಿ ಪಾ[೧೨]ಡೆ ಪೊಕ್ಕು ಸೈ
ಪೆಱಗಿದಿರ್ಗೊಳ್ವ ಸೋಂಕು ನಳಿತೋಳಿದಿರ್ಗೊಳ್ವ ತೊಡಂಕಿನಪ್ಪು ಬಾ
ಯ್ದೆಱೆಯಿದಿರ್ಗೊಳ್ವ ಚುಂಬನಮಲಂಪಿದಿರ್ಗೊಳ್ವ[೧೩]ಗಿ ಮೇರೆ[೧೩]ದಪ್ಪಿ ಕಾ
ಳ್ಗೊಱೆಯಿದಿರ್ಗೊಳ್ವ ಲಲ್ಲೆಯಿದಿರ್ಗೊಂಡುದು ಕೂಟದ ಕಾಯ್ಪಿ[೧೪]ನೋಪರಾ ೩೭

ವ॥ ಅದಲ್ಲದೆಯುಂ

ವ॥ ಹೀಗೆ ಸಮಸ್ತ ಶಾಸ್ತ್ರಗಳಲ್ಲಿಯೂ ಶಸ್ತ್ರಾಭ್ಯಾಸದಲ್ಲಿಯೂ ಪರಿಣತನಾಗಿ, ಅತ್ಯಂತ ಪರಾಕ್ರಮವನ್ನು ಪಡೆದು, ನವಯೌವನವನ್ನು ತಾಳಿದ ಮಗನನ್ನು ನೋಡಿ ಆತನಿಗೆ ಅನುರೂಪಳಾದ ಕನ್ಯೆಯೊಡನೆ ಮದುವೆ ಮಾಡಬೇಕೆಂದು ಯೋಚಿಸಿ, ಭಗವಂತನಾದ ಅರ್ಹಂತನಿಗೆ ಪೂಜೆ ಮಾಡಿ ಅರ್ಹದ್ದಾಸನು ಪ್ರೀತಿಮತಿಯೆಂಬ ರಾಜಪುತ್ರಿಯೊಡನೆ ಮಹೋತ್ಸವದಿಂದ ಮದುವೆ ಮಾಡಿದನು.

೩೬. ಆ ಕುಮಾರಿಯ ಕಣ್ಣುಗಳು ಜೊತೆ ಮೀನುಗಳಾಗಿ ಆ ಕುಮಾರನ ಕಾಂತಿಮಯ ನೇತ್ರಗಳೆಂಬ ಬಲೆಯಲ್ಲಿ ಸಿಕ್ಕಿಕೊಂಡುವು; ಮರಿದುಂಬಿಯಾಗಿ ತಾವರೆಯ ಒಂದು ಮಾದಕವಾದ ಸವಿಯನ್ನು ಅವನ ಕಣ್ಣುಗಳಲ್ಲಿ ಕಂಡುಕೊಂಡುವು; ಚಕೋರಪಕ್ಷಿಯ ಮರಿಗಳಾಗಿ, ಬೆಳ್ದಿಂಗಳ ಸುಗ್ಗಿಯನ್ನು ಪಡೆದುಕೊಂಡುವು.

೩೭. ದಟ್ಟವಾದ ರೆಪ್ಪೆಗೂದಲಿನ ಕಣ್ಣುಗಳೆರಡೂ ಎದುರುಗೊಳ್ಳುವ ಮೋಹ, ಸುಖವನ್ನು ಎದುರುಗೊಳ್ಳುವ ಸ್ಪರ್ಶ, ಕೋಮಲವಾದ ತೋಳುಗಳು ಎದುರುಗೊಳ್ಳುವ ಬಿಗಿಯಪ್ಪುಗೆ, ಬಾಯಿ ಎದುರುಗೊಳ್ಳುವ ಚುಂಬನ, ಸಂತೋಷವನ್ನೆದುರುಗೊಳ್ಳುವ ಉದ್ರೇಕ, ಮಿತಿಮೀರಿದ ರಾಗರಭಸದಲ್ಲಿ ಮೊರೆಯೆದುರುಗೊಳ್ಳುವ ಲಲ್ಲೆ - ಹೀಗೆ ಆ ಪ್ರಿಯ ದಂಪತಿಗಳನ್ನು ರತಿ ಎದುರುಗೊಂಡಿತು.

ವ॥ ಅಷ್ಟೇ ಅಲ್ಲದೆ -

---

೧ ಶಾ (ಕಾ) ೨ ಪ್ರಜ್ಞ (ಮ). ೩ ನುಂ (ಕ, ಮ, ಪ). ೪ X (ಕಾ) ೫ ಡಿ (ಕ, ಮ) ೬ ನ (ಮ). ೭ ಬಾಳ (ಪ), ಬಾಳ್ವ (ಕ). ೮ ಡ (ಕ) ೯ ಸಿ (ಮ). ೧೦ ಡ (ಕ) ೧೧ ಡ (ಕ). ೧೨ ಡಿಪಾ (ಕಾ), ಳಿಪಾ (ಮ). ೧೩ ದುಮಿರ (ಕ). ೧೪ ಯ್ಪು (ಕ, ಪ), ಯ್ಪ (ಮ).

ಅರಮಗನಿರ್ಪನೋಲಗದೊಳೋಲಗ[1]ಕಾರ್ತಿಯರಟ್ಟಿಗಿಟ್ಟ ಕ
ರ್ಪೂರದ ಪರಲ್ಗೆ ಬಿರ್ದರಲ್ಗೆ ಸೂಸಿದ ಕುಂಕುಮರೇಣುಗೊಕ್ಕ ಕ
ತ್ತುರಿಯ ರಜಕ್ಕೆ ಪಾಯಲೆಡೆಯಿಲ್ಲದ [2]ಕಂಪು[2]ಕೆರಳ್ಚಿ[3] ದರ್ಪಕಂ
ತಿರಿಪುವ ಚಕ್ರದಂತೆ ತಿರಿಯುತ್ತಿರೆ ಮೇಲೆ ಮದಾಳಿಮಾಳೆಗಳ್ ೩೮

ಕನಕಾಂಗಚ್ಛವಿ ಪದ್ಮರಾಗಚರಣಂ ನೀಳಾಳಕಂ ಜಾತಿವ
ಜ್ರನಖಂ ಮೌಕ್ತಿಕಕಾಂತಿದಂತನಿಕರಂ ಬಾಳಪ್ರವಾಳಾಧರಂ
ವನಿತಾಸಂಕುಲಮೊಪ್ಪೆ ಕಣ್ಣ ಬೆಳಗಿಂ ಕಣ್ಗೊಪ್ಪುಗುಂ ಕಾಮದೇ
ವನ ಭಂಡಾರದ ಬಾಗಿಲಂ ತೆಱಿದವೋಲ್ ಭೂಪಾಲಕೇಳೀಗೃಹಂ ೩೯

ವ॥ ಅದಂ ಕಂಡರ್ಹದ್ದಾಸದೇವಂ ಕಾಮದೇವಂಗೆ ಪಟ್ಟಂಗಟ್ಟಿ ಕೊಟ್ಟ ರಾಗರಾಜ್ಯಕ್ಕೆ ತೆಲ್ಲಂಟಿಯಾಗಿ[4]

ಮುದದೆಸೆ[5]ದಿರ್ಪ ಬದ್ದವಣಮುದ್ದವಣಂ[6]ರಿಚಿ[6] ಪಾಟವಾ[7]ಟಮೆ
ತ್ತಿದ ಗುಡಿತೋರಣಂ ಸಸಿ ಮೊ[8]ಸರ್ಪಸೆ ಸೇಸೆ ವಿಳಾಸಿನೀಜನಂ
ಚದುಕಮಿವೊಡ್ಡುಗಟ್ಟೆ ಮದಮಂ ರಿಪುವಾರಣಮೆ[9]ತ್ತಿ ಕಟ್ಟೆ[10] ಕ
ಟ್ಟಿದನಪರಾಜಿತಂಗೆ ಪರಮೋತ್ಸವದಿಂ ಯುವರಾಜಪಟ್ಟಮಂ ೪೦

೩೮. ರಾಜಕುಮಾರನ ಓಲಗಶಾಲೆಯಲ್ಲಿ ಸೇವಕಿಯರು ಇಟ್ಟ ಕರ್ಪೂರದ ಹರಳಿಗೂ, ಬಿದ್ದ ಹೂವಿಗೂ, ಸೂಸಿದ ಕಸ್ತೂರಿಯ ದೂಳಿಗೂ ಮೋಹಗೊಂಡು ಮುಗಿಬಿದ್ದು ಸೊಕ್ಕಿದ ದುಂಬಿಗಳು ಹಾರಾಡುವುದಕ್ಕೆ ಅವಕಾಶವಿಲ್ಲದಂತಾಗಿ, ಕಾಮನು ತಿರುಗಿಸುವ ಕರಿಯದೊಂದು ಚಕ್ರವೊ ಏನೊ ಎಂಬಂತೆ ಮೇಲೆ ತಿರುಗುತ್ತಿದ್ದುವು.

೩೯. ಚಿನ್ನದಂತಹ ದೇಹಕಾಂತಿ, ಮಾಣಿಕ್ಯದಂತಹ ಪಾದಗಳು, ಇಂದ್ರನೀಲ ದಂತಹ ತಲೆಗೂದಲು, ಉತ್ತಮ ವಜ್ರಗಳಂತಹ ಉಗುರು, ಮುತ್ತಿನಂತೆ ಕಾಂತಿಯುಕ್ತವಾದ ಹಲ್ಲುಗಳು, ಎಳೆಯ ಹವಳದಂತಹ ತುಟಿ, ಹೀಗೆ ರತ್ನಮಯವಾಗಿರುವ ಸ್ತ್ರೀಯರ ಕಣ್ಣಬೆಳಗಿನಿಂದ ಆ ರಾಜನ ಕ್ರೀಡಾಗೃಹವು ಕಾಮರಾಜನ ಭಂಡಾರದ ಬಾಗಿಲನ್ನು ತೆರೆದಿಟ್ಟಂತೆ ಕಂಗೊಳಿಸುತ್ತಿತ್ತು.

ವ॥ ಅದನ್ನು ಕಂಡ ಅರ್ಹದ್ದಾಸನು, ಮನ್ಮಥನಿಗೆ ಪಟ್ಟಕಟ್ಟಿಕೊಟ್ಟ ಶೃಂಗಾರರಾಜ್ಯಕ್ಕೆ ಉಡುಗೊರೆಯಾಗಿ-

೪೦. ಉತ್ಸಾಹದಿಂದ ನುಡಿಯುವ ಮಂಗಲವಾದ್ಯಗಳು, ಋಕ್ಕುಗಳು, ಹಾಡು, ಕುಣಿತ ಎತ್ತಿದ ಧ್ವಜ ತೋರಣಗಳು ಸಸಿಗಳ ಜಾಗು, ಮೊಸರು ಶೇಷಾಕ್ಷತೆ, ವಿಳಾಸಿನಿ ಯರು, ಮಂಟಪ ಇವೆಲ್ಲ ಅತಿಶಯವಾಗಿ ಸಂದಣಿಸಲಾಗಿ, ಶತ್ರುರಾಜರ ಆನೆಗಳು ಮದವನ್ನು ಉಡುಗಿಸಿಕೊಂಡು ಕುಗ್ಗಲಾಗಿ ಅಪರಾಜಿತನಿಗೆ ಮಹೋತ್ಸವದಿಂದ ಯುವರಾಜ ಪಟ್ಟವನ್ನು ಕಟ್ಟಿದನು.

---

೧ ಗಿ (ಕಾ). ೨ ಕರ್ಪು (ಕ). ೩ ಳ್ಚೆ (ಕ), ಳ್ವ (ಕಾ) ಳ್ದು (ಪ). ೪ ಗೆ (ಕಾ, ಮ). ೫ ಸ (ಮ). ೬ ರುಚಿ (ಮ), ರಿಚಿ (ಕಾ). ೭ ಮೇ (ಕ), ೮ ಯೊ (ಕ), ೯ ನೆ (ಕ, ಪ). ೧೦ ಟ್ಟಿ (ಕ).

ಒಂದಡಿಯಿಟ್ಟುದು ಸಿರಿ ನೃಪ
ನಿಂದಪರಾಜಿತನೊಳೆಸೆವ ಪೊಸ ಜವ್ವನದೊಳ್
ಬಂದ ಬಸಂತದೊಳಡಿಯಿಡು
ವಂದದಿನು[೧]ತ್ಪಳ[೧]ದೊ[೨]ಳಿರ್ದ[೨] ಸಿರಿ ಸರಸಿಜದೊಳ್ ೪೧

ವ॥ ಅಂತು ಸುತವಿಭಕ್ತರಾಜ್ಯಭಾರನುಂ ಕಾಲವಿಭಕ್ತ ವಯೋಭಾರನುಮಾಗಿ ಪಂಜರದಿಂದರೆನುಸುಳ್ದ ಶಕುಂತನಂತೆ ಭೂಕಾಂತನಿರ್ಪಿನಮೊಂದು ದಿವಸಂ

ತಂದಿಳೆ[೩]ಗಜಿನೆಂಬಮರ್ದಿನ
ತಂದಲನುಗುಳುತ್ತುಮೊಂದು ಜಳಧರ ಪಟಳಂ
ಬಂದುದೆನೆ ಸಮವಸರಣಂ
ಬಂದುದು ಭೋರೆಂದು ವಿಮಲವಾಹನ ಜಿನನಾ[೪] ೪೨

ನೀಲದ ನೆಲಗಟ್ಟಂ ಮಣಿ
ಧೂಳೀಸಾಳಂ ಪ್ರಲಂಬ ಪಲ್ಲವಮೆಸೆಗುಂ
ಭೂಲಲನೆಗೆ ಬಿದಿಯೆತ್ತಿದ
ಪೀಲಿಯ ಕೊಡೆಯಂತೆ ಸಮವಸೃ[೫]ತಿ ಜಿನಪತಿಯಾ ೪೩

ವ॥ ಆ ಸಮವಸರಣಕ್ಕರ್ಹದ್ದಾಸನುಂ ವಂದನಾಭಕ್ತಿ ನಿಮಿತ್ತಂ ಪುತ್ರ ಮಿತ್ರಸಮೇತನಾಗಿ ಪೋಗಿ ವಿಮಲವಾಹನ ಜಿನಪತಿಯಂ ಪ್ರದಕ್ಷಿಣಂಗೆಯ್ದು ಪೂಜಿಸಿ ಪೊಡೆ[೬]ವಟ್ಟು ಧರ್ಮಮಂ

೪೧. ಉತ್ಪಲದಲ್ಲಿ ಇದ್ದ ಲಕ್ಷ್ಮಿ ವಸಂತಕಾಲದಲ್ಲಿ ಕೆಂದಾವರೆಗೆ ಕಾಲಿಟ್ಟ ಹಾಗೆ ಅರ್ಹದ್ದಾಸನಲ್ಲಿದ್ದ ರಾಜ್ಯಭಾರ ಹೊಸ ಯೌವನದ ಅಪರಾಜಿತನಲ್ಲಿ ಒಂದು ಹೆಜ್ಜೆಯಿಟ್ಟಿತು.

ವ॥ ಹೀಗೆ ಮಗನಿಗೆ ರಾಜ್ಯಭಾರದ ಕೆಲಭಾಗವನ್ನು ವಹಿಸಿಕೊಟ್ಟು, ವಯೋಭಾರದಿಂದ ಹಣ್ಣಾದ ಅರ್ಹದ್ದಾಸರಾಜನು ಪಂಜರದಿಂದ ಅರ್ಧಮರ್ಧ ಹೊರ ಬರುತ್ತಿರುವ ಪಕ್ಷಿಯಂತೆ ಇರಲಾಗಿ ಒಂದು ದಿವಸ -

೪೨. ಧರ್ಮವೆಂಬ ಅಮೃತದ ಮಳೆಯನ್ನು ಭೂಮಿಗೆ ಕರೆಯುತ್ತ ಬಂದ ಒಂದು ಮೇಘಮಂಡಲವೋ ಏನೋ ಎಂಬಂತೆ ವಿಮಲವಾಹನ ಜಿನನ ಸಮವಸರಣ ಮಂಡಪವು ಅಲ್ಲಿಗೆ ಬಂದಿತು.

೪೩. ನೀಲರತ್ನದ ನೆಲಗಟ್ಟಿನಿಂದಲೂ, ರತ್ನದ ಪ್ರಾಕಾರದಿಂದಲೂ, ದೀರ್ಘವಾದ ತಳಿರ ತೋರಣದಿಂದಲೂ ಶೋಭಿಸುವ ಆ ಸಮವಸರಣ ಮಂಡಪವು, ಬ್ರಹ್ಮನು ಭೂದೇವಿಯ ತಲೆಯ ಮೇಲೆ ಎತ್ತಿ ಹಿಡಿದ ನವಿಲುಗರಿಯಕೊಡೆಯೆಂಬಂತೆ ಕಂಗೊಳಿಸಿತು.

ವ॥ ಆ ಸಮವಸರಣಕ್ಕೆ ಅರ್ಹದ್ದಾಸನು ವಂದನಾಭಕ್ತಿನಿಮಿತ್ತವಾಗಿ ಪುತ್ರನನ್ನೂ ಮಿತ್ರರನ್ನೂ ಒಡಗೊಂಡು ಹೋಗಿ, ವಿಮಲವಾಹನ ಜಿನನನ್ನು ಪ್ರದಕ್ಷಿಣ ಪೂರ್ವಕವಾಗಿ ಪೂಜಿಸಿ, ನಮಸ್ಕರಿಸಿ, ಅವರಿಂದ ಧರ್ಮಬೋಧವನ್ನು ಕೇಳಿ ತಿಳಿದು, ಸಂಸಾರದಲ್ಲಿ

---

೧ ತ್ಸವ (ಕ). ೨ ಳಲರ್ದ (ಕಾ). ೩ ಐ (ಕಾ) ೪ ನಂ (ಮ). ೫ ಶ್ರು (ಮ), ಶೃ (ಕಾ) ೬ ಡ (ಕಾ, ಮ).

ಕೇಳ್ದು ಸಂಸಾರಶರೀರನಿರ್ವೇಗದಿಂ ಬೇಗಮಪರಾಜಿತಂಗೆ ರಾಜ್ಯಮಂ ಕೊಟ್ಟಯ್ನೂರ್ವರರಸುಮಕ್ಕಳ್ವೆರಸು ತಪೋಂಗನಾಲಿಂಗಿತನಾದನದಕ್ಕೆ ಪುರುಡಿಸಿದಂತೆ ಜಿನದತ್ತೆಯುಂ ಸಂಯಮು[೧]ದತ್ತಚಿತ್ತೆ[೧] [೨]ಯಾದಳ[೨]ಪರಾಜಿತನುಂ ಸಮ್ಯಗ್ದರ್ಶನಾದಿ ಸ್ರಾವಕವ್ರತಂಗಳಿನಳಂಕೃತನಾಗಿ ಪೊಱಲ್ಗೆವಂದು [೩]ಪರಿಜನದ ಮನಕ್ಕೆವಂದು[೩]ತಂತ್ರಾವಾ[೪]ಪದೊಳ್ [೫]ಭರಂಗೆಯ್ದು[೫] ಪೃಥ್ವೀಪಾಲನಮನಪ್ಪುಕೆಯ್ಯೆ

ತೀಡುವ ಗಾಳಿಯುಂ ಸೆ[೬]ಳೆಯಲಣ್ಮ[೭]ದು ಮೇಲು [೮]ದನಂಜಿ ಪಣ್ಗಳಂ
ಕೋಡಗಮಿಕ್ಕಿದಲ್ಲದೆ ಕರ್ದುಂಕದು ಪೆಂಡಿರ[೯] ಪೊನ್ನ ಮಾಲೆಯಂ
ಸೂಡಿಯೆ ಬಟ್ಟೆವೋಪರ[೧೦]ದಿದನ್ಯರಥಾಂಗಿಕೆಯೊಳ್ ರಥಾಂಗಮುಂ
ಕೂಡದೆನಿಪ್ಪುದಾಜ್ಞೆಯಪರಾಜಿತ ಭೂಪನ ರಾಜ್ಯಲಕ್ಷ್ಮಿಯಾ ೪೪

ನರಪತಿಯಾಜ್ಞೆಗೆ ಬಿಸಿಲೋ
ಸರಿಸಿರ್ದುದು ಕೊಲ್ಲದಂಧಕಾರಮನೆನೆ ಕೆಂ
ಬರಲ ರುಚಿ ನೀಲರುಚಿಯೊಳ್
ಬೆರಸಿರ್ಪುದು ದೇಶದೊಳಗೆ ತನ್ನೃಪಸುತನಾ ೪೫

ತಲ್ಲಣಿಸಿ ನೆಗಟ್ದಿ[೧೧] ಪಾಣ್ಬರ
ಮಲ್ಲನ ತೇಜಕ್ಕೆ ತನ್ನ ಕರಮಂ ವಸುಧಾ
ವಲ್ಲಭನ ದೇಶದೊಳ್ ದಿನ
ವಲ್ಲಭನಿಡಲಣ್ಮ[೧೨]ನನುದಿನಂ ಕುಮುದಿನಿಯೊಳ್ ೪೬

ವೈರಾಗ್ಯ ತಾಳಿ, ತಡಮಾಡದೆ ಅಪರಾಜಿತನಿಗೆ ರಾಜ್ಯವನ್ನು ಕೊಟ್ಟು ಐನೂರು ರಾಜಕುಮಾರರೊಡನೆ ತಪೋದೀಕ್ಷೆಯನ್ನು ಸ್ವೀಕರಿಸಿದನು. ಅದಕ್ಕೆ ಸ್ಪರ್ಧಿಸುವಂತೆ ಜಿನದತ್ತೆಯು ಕೂಡ ವ್ರತ, ಸಮಿತಿ, ಗುಪ್ತಿ ಮೊದಲಾದ ಸಂಯಮವಿಧಿಗೆ ಮನಸ್ಸುಗೊಟ್ಟಳು. ಅಪರಾಜಿತನು. ಸಮ್ಯಗ್ದರ್ಶನವೇ ಮೊದಲಾದ ಶ್ರಾವಕವ್ರತಗಳನ್ನು ಸ್ವೀಕರಿಸಿ ಪಟ್ಟಣಕ್ಕೆ ಮರಳಿ ಬಂದು, ಪರಿಜನಕ್ಕೆ ಮೆಚ್ಚಿಗೆಯವನಾಗಿ ಸ್ವರಾಷ್ಟ್ರ - ಪರರಾಷ್ಟ್ರಗಳ ಸಂಬಂಧದಲ್ಲಿ ಮನಗೊಟ್ಟು ವ್ಯವಹರಿಸುತ್ತ ರಾಜ್ಯಭಾರವನ್ನು ನಡೆಯಿಸುತ್ತಿರಲಾಗಿ

೪೪. ಅಪರಾಜಿತರಾಜನ ಶಾಸನ ಎಷ್ಟು ನ್ಯಾಯನಿಷ್ಠುರವಾಗಿತ್ತೆಂದರೆ, - ಬೀಸುವ ಗಾಳಿ ಕೂಡ ಆತನಿಗೆ ಅಂಜಿಕೊಂಡು (ಅವನು) ಹೊದೆದುಕೊಂಡ ಉತ್ತರೀಯವನ್ನು ಸೆಳೆಯದು; ಕೈಯೆತ್ತಿ ನೀಡಿದಲ್ಲದೆ ಕೋತಿ ಹಣ್ಣನ್ನು ಕಚ್ಚದು; ಸ್ತ್ರೀಯರು ಚಿನ್ನದಾಭರಣಗಳನ್ನು ನಿರ್ಭಯವಾಗಿ ಧರಿಸಿಕೊಂಡೆ ಪ್ರಯಾಣ ಮಾಡುವರು; ಚಕ್ರವಾಕ ಪಕ್ಷಿ ಕೂಡ ತನ್ನವಳನ್ನು ಬಿಟ್ಟು ಇನ್ನೊಂದು ಚಕ್ರವಾಕಿಯೊಡನೆ ಬೆರೆಯದು.

೪೫. ಅರಸನ ಅಪ್ಪಣೆಗೆ ಹೆದರಿಕೊಂಡು ಬಿಸಿಲು ಕತ್ತಲೆಯನ್ನು ಕೊಲ್ಲದೆ, ಹಿಮ್ಮೆಟ್ಟಿತೊ ಏನೊ ಎಂಬಂತೆ ಆ ರಾಜಕುಮಾರನ ದೇಶದೊಳಗೆ ಮಾಣಿಕ್ಯದ ಕಾಂತಿ ನೀಲರತ್ನದ ಕಾಂತಿಯಲ್ಲಿ ಬೆರೆತುಕೊಂಡಿರುವುದು.

೪೬. "ಪಾಣ್ಬರ ಮಲ್ಲ" (ಹಾದರಿಗರನ್ನು ದಂಡಿಸುವವನು) ಎನಿಸಿದ ಆ

೧ ದತ್ತೆ (ಕ, ಪ). ೨ ಯಾಗಳ (ಮ), ಯುಂ (ಕ) ೩. X (ಕಾ). ೪ ದಾ (ಕಾ) ೫ X (ಕಾ), ೬. ಪೆ (ಕಾ) ೭ ಮ್ಮ (ಕ), ೮ ಲ್ವು (ಕ) ೯ ರ (ಕ) ೧೦ ಳ (ಕ, ಮ). ೧೧ ಟ್ಟಿ (ಕ, ಮ). ೧೨ ಮ್ಮ (ಕ).

ವ॥ ಎನಿಪಗ್ಗಳವೊಗಟಿಕ್ತೆಗೆ ನೆಲೆಯಾಗಿ [೧]ಪ್ರೀತಿ[೧]ಮತಿ ಪ್ರೇಮಪರವಶಾಪಾಂಗನಪರಾಜಿತಂ ರಾಜ್ಯಲಕ್ಷ್ಮೀವಿರಾಜಿತನಾಗಿರ್ಪನ್ನೆಗ [೦] ವಿಮಲವಾಹನನುಮರ್ಹದ್ದಾಸನುಂ ನಿರ್ಮೂಲಿತ ಕರ್ಮರಾಗಿ

ಎರಡಳಿಯೆಕ್ಕೆಯ ಪೂವಿನೊ
ಳಿರಲೊಲ್ಲದೆ ಬಿಟ್ಟು ಪಾಱೆ ಪಿರಿದೆನಿಸಿದ ಪಾ
ದರಿಯ ತುದಿಗೊಂಬಿನಿಂಬಿನ
ಬಿರಿಮುಗುಳೊಡನೆಱಗುವಂತೆ ಮುಕ್ತಿಗೆ ಸಂದರ್ ೪೭

ಅವರಿರ್ವರುಮೊರ್ವಳೆ ಮು
ಕ್ತಿವಧುಗೆ ಕಡುಗೂರ್ತು ಕೂಡಿ ಪೋದಡಮದನೆಂ
ದವರಾರೆಱಗಿದುದವರ್ಗೀ
ಭುವನಜನಂ ಸಮೆದುದಕ್ಕೆ ಶಾಸ್ತ್ರಮುಮುಂಟೇ ೪೮

ವ॥ ಆ ಪ್ರಸ್ತಾವದೊಳ್

ಜನಪಂ ತದ್ಯಜನಕ್ಕೆ ಪೋಪ ಸುರಭೇರೀನಾದಮಂ ಕೇಳ್ದಿದೇ
ನೆನೆ ಪೋದಂ ಗಡ ಮುಕ್ತಿಗರ್ಹನೊಡನರ್ಹದ್ದಾಸನುಂ ಕೇಳಿಮೆಂ
ದೆನೆ ಮಾತಿಂದಮೆ ಮುನ್ನಮುನ್ನತಗುರುಶ್ರೀಪಾದಮಂ ಮರ್ಚಿ ಬಿ
ನ್ನನೆ ಪೋದಂತಿರೆ ಮೂರ್ಛೆವೋದನರಸಂ ವ್ಯಾಮೋಹಮೇಗೆಯ್ಯದೋ ೪೯

ರಾಜಪುತ್ರನ ತೇಜಸ್ಸಿಗೆ ಹೆದರಿ ಆತನ ರಾಜ್ಯದಲ್ಲಿ ಸೂರ್ಯನು ಕುಮುದಿನಿಯ ಮೇಲೆ ಕೈಯಿಡಲಾರನು.

ವ॥ ಹೀಗೆ ಅತಿಶಯವಾದ ಹೊಗಳಿಕೆಗೆ ಪಾತ್ರನಾಗಿ, ಪ್ರೀತಿಮತಿಯ ಪ್ರೇಮದಲ್ಲಿ ಪರವಶನಾದ ಅಪರಾಜಿತನು ರಾಜ್ಯೈಶ್ವರ್ಯದಿಂದ ಶೋಭಿಸುತ್ತಿರುವಾಗ ವಿಮಲ ವಾಹನನೂ, ಅರ್ಹದ್ದಾಸನೂ ಕರ್ಮವನ್ನು ಸಂಪೂರ್ಣವಾಗಿ ನಾಶಗೊಳಿಸಿಕೊಂಡು -

೪೭. ಎಕ್ಕೆಯ ಹೂವಿನಲ್ಲಿದ್ದ ಎರಡು ದುಂಬಿಗಳು ಅಲ್ಲಿ ಇರಲೊಲ್ಲದೆ ಅಲ್ಲಿಂದ ಹಾರಿ ಎತ್ತರವಾದ ಪಾದರಿ ಮರದ ತುದಿಗೊಂಬೆಯಲ್ಲಿ ಸೊಗಸಾಗಿರುವ ಬಿರಿಮೊಗ್ಗಿಗೆ ಎರಗುವ ಹಾಗೆ, (ಭೂಲೋಕವನ್ನು ಬಿಟ್ಟು ಹೋಗಿ) ಮುಕ್ತಿಯನ್ನು ಹೊಂದಿದರು.

೪೮. ಅವರಿಬ್ಬರೂ ಒಬ್ಬಳೇ ಮುಕ್ತಿಕನ್ಯೆಗೆ ಕಡುಮೋಹದಿಂದ ಜೊತೆಯಾಗಿ ಕೂಡಿಹೋದರು. ಅದನ್ನು ಆಡಿಕೊಂಡವರಾರು? ಅವರಿಗೆ ಈ ಲೋಕದ ಜನವೆಲ್ಲ ಬಾಗಿ ವಂದಿಸುವರು. ಈ ಆಚರಣಕ್ಕೆ ಶಾಸ್ತ್ರವೂ ಉಂಟೆ?

ವ॥ ಆ ಸಮಯದಲ್ಲಿ -

೪೯. ಅವರಿಬ್ಬರ ಪೂಜೆಗೆಂದು ನುಡಿವ ದೇವ ದುಂದುಭಿಗಳ ನಾದವನ್ನು ಕೇಳಿ ಇದೇನೆಂದ ಅಪರಾಜಿತನಿಗೆ "ವಿಮಲವಾಹನ ಜಿನನೊಡನೆ ಅರ್ಹದ್ದಾಸನು ಮುಕ್ತಿಗೆ ಸಂದನು" ಎಂದು ಜನರು ತಿಳಿಸಿದರು. ಹೀಗೆನ್ನಲು ಮಾತಿಗಿಂತ ಮುಂಚಿತವಾಗಿ

---

೧ ಪೃಥ್ವೀ (ಕ, ಮ).

ವ॥ ಇನಿಸಾನುಂ ಬೇಗಕ್ಕೆ ಮೂರ್ಛೆ ತಿಳಿದುಂ ಮೋಹಮೂರ್ಛೆ ತಿಳಿಯದಿರೆ ತಳ[1]ವೆಳಗಾಗಿ ತನ್ನೊಳ್ತಾನೆ ಬಗೆದು

ನೆಲೆಮಾಡಂಗಳನೇಱಿ ನೋೞ್ಪ ತೆಱದಿಂ ನಿಶ್ರೇಣಿಯಂ ಕಾಂಚನಾ
ಚಲದಿಂ ನಾಕಮನೇಱಿ ನೋೞ್ಪೆನಡರ್ವೆಂ ಗ್ರೈವೇಯಕಕ್ಕೆಯ್ದುವೆಂ
ಲಲಿತಾನುತ್ತರೆಗಳ್ಗೆ ಪೋಪೆನದಱಿಂ ಸರ್ವಾರ್ಥಸಂಸಿದ್ಧಿಗಂ
ಬಲಗೊಳ್ವೆಂ ಬೞಿಕೆನ್ನ ಸದ್ಗುರುಗಳಂ ಸನ್ಮೋಕ್ಷದೊಳ್ ಮೋಕ್ಷದೊಳ್ ೫೦

ವ॥ ಇದು ನಿ[2]ನಗಿ[2]ನ್ನೇೞನೆಯ ಭವಕ್ಕಾದಪುದೆಂದಾಕಾಶವಚನಮನವಕರ್ಣಿಸಿ ಮತ್ತಮಿಂತೆಂದಂ

ವಿಧುವೊಂದು ಪೊೞ್ತು ವರವಾ
ರಿಧಿಯಲ್ಲಿಗೆ ಪೋಪುದಾಗಿ ಸುಖಮಿರ್ಕುಂ[3] ವಾ
ರಿಧಿ ಮುಕ್ತಿಗೆ ಪೋದೊಡೆ ಪೇೞ್
ವಿಧು ಪೆಱಗೆಂತಿರ್ಕುಮೆಂತು ಸೈರಿಸಲಾರ್ಕುಂ ೫೧

ತಂದೆ ತಪಕ್ಕೆ ಪೋದೊಡೊಳಗಂ [4]ಪೊಱಗಂ[4] ಸುಡುತಿರ್ಪ[5] ತಾಪಮಂ
ನಂದಿಸುತಿರ್ದುದಿನ್ನೆವರಮೆನ್ನ ಮನಂಗೊಳುತಿರ್ಪ ತದ್ವಚ
ಶ್ಚಂದನದಣ್ಪುಮೆನ್ನ ತನುವಾರ್ವಿನ [6]ಮಿಕ್ಕೆಮ[6]ತತ್ಪದಾರ್ಚನಾ
ಚಂದನದಣ್ಪುಮಿನ್ನೆನಗೆ ಸಾಯದೆ ಸೈರಿಸುವಾಸೆಯಾವುದೋ ೫೨

ಶ್ರೇಷ್ಠನಾದ ತನ್ನ ತಂದೆಯ ಪೂಜ್ಯ ಪಾದಗಳನ್ನು ಮೆಚ್ಚಿ, ಅವರ ಹಿಂದೆಯೆ ತಾನೂ ಹೊರಟು ಬಿಟ್ಟನೊ ಏನೊ ಎಂಬಂತೆ ಅರಸನು ಮೂರ್ಛೆ ಹೋದನು. ವ್ಯಾಮೋಹ ಮಾಡದಿರುವುದು ಯಾವುದು?

ವ॥ ಸ್ವಲ್ಪ ಹೊತ್ತಿನಲ್ಲಿ ಮೂರ್ಛೆಯಿಂದ ಎಚ್ಚೆತ್ತನಾದರೂ ಆತನ ಮೋಹದ ಮೂರ್ಛೆ ಇನ್ನು ನಿವಾರಣೆಯಾಗದೆ ಕಳವಳಿಸುತ್ತ ತನ್ನಲ್ಲಿ ತಾನೆ ಹಾಗೆ ಯೋಚಿಸಿದನು-

೫೦. "ಉಪ್ಪರಿಗೆಗಳನ್ನು ಏರಿ ನೋಡುವಂತೆ ಮೇರುಗಿರಿಯನೇರಿ ಸ್ವರ್ಗವನ್ನು ಹೊಕ್ಕು ನೋಡುವೆನು; ಗ್ರೈವೇಯಕಕ್ಕೆ ಹೋಗುವೆನು; ಅನುತ್ತರೆಗಳಿಗೂ ಹೋಗುವೆನು; ಅಲ್ಲಿಂದ ಮೇಲೆ ಸರ್ವಾರ್ಥಸಿದ್ಧಿಗೂ ಹೋಗಿ ಪ್ರದಕ್ಷಿಣೆ ಹಾಕಿ ಮೋಕ್ಷದಲ್ಲಿರುವ ನನ್ನ ಹಿರಿಯರನ್ನು ಕಾಣುವೆನು"

ವ॥ ಆಗ "ಇದು ನಿನಗೆ ಇನ್ನೂ ಏಳನೆಯ ಜನ್ಮದಲ್ಲಿ ಸಾಧ್ಯವಾಗುವುದು" ಎಂದು ಆಕಾಶವಾಣಿಯಾಯಿತು. ಅದನ್ನು ಕೇಳಿ ಆತನು ಹೀಗೆಂದನು -

೫೧. ಚಂದ್ರನು ಒಂದು ಹೊತ್ತು ಸಮುದ್ರಕ್ಕೆ ಹೋಗುವುದಾದರೆ ನೆಮ್ಮದಿಯಿಂದ ಇರಬಹುದು. ಆದರೆ ಸಮುದ್ರವೆ ಮುಕ್ತಿಗೆ ಹೋಗಿಬಿಟ್ಟರೆ ಚಂದ್ರನು ಹೇಗೆ ಹಿಂದೆ ಉಳಿದಾನು? ಹೇಗೆ ಸಹಿಸಿಕೊಂಡಾನು?

೫೨. ತಂದೆಯು ತಪಕ್ಕೆ ಹೋದಾಗ ನನ್ನ ಒಳಗನ್ನೂ ಹೊರಗನ್ನೂ ಸುಡುತ್ತಿರುವ

೧. ಳೆ (ಕಾ. ೨ X (ಕಾ) ೩ ರ್ಕರ (ಕ, ಪ), ರ್ಕಂ (ಮ), ೪ X (ಕಾ). ೫ + ವಿಮೋಹ (ಕಾ). ೬. ಮಿಕ್ಕಿನ (ಕಾ), ಮಿಕ್ಕವರ (ಮ).

ಪೂಜ್ಯರುಮೇಕೆ ಪೇೞ್ವಿಸುಗೆದಪುವರಾ ಪುರುಷಾರ್ಥಸಂಗ್ರಹ[೧]
ಪ್ರಾಜ್ಯಮಿದೆನ್ನದಾಂ ಪಿರಿದುಮೊಲ್ಲದೊಡಂಬಡೆ ಬೇಡಿಕೊಂಡು ಸಾ
ಮ್ರಾಜ್ಯಮನಿತ್ತವೋಲೆನಗೆ ತನ್ನ ಜಗತ್ರಯ ಪೂಜ್ಯಮಂ ತಪೋ
ರಾಜ್ಯಮ[೨]ನೊಲ್ತು[೨]ದಂ ಕುಡದೆ ಪೋಪುದು ಮಜ್ಜನಕಂಗೆ ಮಾರ್ಗಮೇ ೫೩

ಬರವೇೞ್ವತ್ತಿಯನೆಯ್ದೆ ಪೂಡಿ ತರವೇೞ್ತೇರೆಲ್ಲಮಂ ಪಣ್ಣವೇೞ್
ಕರಿಯಂ ಭೋಂಕ[೩]ನೆ ಕಟ್ಟವೇೞ್ ಕುದುರೆಯಂ ಸೂಳೈಸವೇೞ್ಭೇರಿಯಂ
ಭರದಿಂದಂ[೪]ನಡೆದಿಂದೆ ಧಾತ್ರಿ ಬಿಡುವಂತೀ ಸ್ಥೈರ್ಯಮಂ ಶೌರ್ಯಮಂ
ಸುರರಾಜಂ ಬಿಡುವಂತು ಬೀಡುವಿಡುವೆಂ ದೇವಾಚಳಪ್ರಸ್ಥದೊಳ್ ೫೪

ವ॥ ಎಂದಾಸ್ಥಾನದಿನೆೞ್ದ[೫]ನ್ನ ಪೆತ್ತ ತಂದೆಯುಮಂ ಜಾಣಂಬೆತ್ತ ತಂದೆಯುಮಂ ಕಂಡು ಪರಕೆಗೊಂಡಲ್ಲದಾಹಾರಂಗೊಳ್ಳೆನೆಂದಪರಾಜಿತನಮರಗಿರಿಗೆತ್ತಿ ನಡೆಯೆ ಪಡೆಯ ಪದಘಟ್ಟಣೆಯಿಂ ಪೊಡವಿಯಿಂ [೬]ನೆಗೆ[೬]ದ ಕುಂಕುಮದ ಪುಡಿಯಂತಪ್ಪ ಪುಡಿ ಕಣ್ಣಂ ಪುಗೆ ಪುರಂದರಂ [೭]ಪರಿ[೭] ನಿಮೀಲಿತನಯನನಾಗಿ ಬೆರ್ಚಿ ಬೆಗಡುಗೊಂಡಿದೇನೆಂದು ಬಗೆದು ನೋಡಿ ನಸುನಕ್ಕು ಕುಬೇರನಂ [೮]ಬರಿಸಿ[೮] ಬೆಸಸೆ

ತಾಪವನ್ನು ಆತನ ಮನೋಹರವಾದ ವಚನವೆಂಬ ಗಂಧದ ಲೇಪ. ಈವರೆಗೆ ಆರಿಸುತ್ತಿತ್ತು. ಅದು ಹಾಗಿರಲಿ. ಈಗ ಆತನು ಪಾದಪೂಜೆಯ ಗಂಧಲೇಪನವೂ ಕೂಡ ಇಲ್ಲದಂತಾಯಿತಲ್ಲವೆ. ಇನ್ನು ಸಾಯದೆ ಅದನ್ನು ಸಹಿಸಿಕೊಳ್ಳುವ ಆಸೆಯುಂಟೆ?

೫೩. ಪೂಜ್ಯರು ಅದೇಕೆ ಕ್ರಮ ತಪ್ಪುವರು? ಪುರುಷಾರ್ಥಗಳಲ್ಲಿ ಶ್ರೇಷ್ಠವಾದ ಮೋಕ್ಷವೆ ಶ್ರೇಷ್ಠವೆನ್ನದೆ, ನಾನು ಒಲ್ಲೆನೆಂದರೂ ಅಸಮಾಧಾನ ತೋರಿದರೂ ಒಡಂಬಡು ವಂತೆ ಬೇಡಿಕೊಂಡು ಈ ಸಾಮ್ರಾಜ್ಯವನ್ನು ನನಗೆ ಕೊಟ್ಟರು. ಲೋಕತ್ರಯಕ್ಕೆ ಪೂಜ್ಯವಾದ ತಪೋರಾಜ್ಯವನ್ನು ನಾನು ಮೆಚ್ಚಿದ್ದರೂ ಅದನ್ನು ನನಗೆ ನೀಡದೆ ಹೋಗುವುದು ನನ್ನ ತಂದೆಗೆ ಯೋಗ್ಯವೇ?

೫೪. ಕಾಲಾಳುಗಳ ಪಡೆಯನ್ನು ಬರಹೇಳು; ರಥಗಳೆಲ್ಲವನ್ನೂ ಹೂಡಿ ತರಲು ಹೇಳು; ಆನೆಗಳನ್ನು ಸಜ್ಜುಗೊಳಿಸಲು ಹೇಳು; ಕುದುರೆಗಳನ್ನು ಸಿದ್ಧಪಡಿಸಲು ಹೇಳು; ಭೇರಿಗಳನ್ನು ಬಾರಿಸಲು ಹೇಳು. ಈ ಭೂಮಿ ನಡುಗುವಂತೆ, ದೇವೇಂದ್ರನು ಧೈರ್ಯ ಗೆಡುವಂತೆ ಇಂದೇ ಹೊರಟು ಮೇರುಗಿರಿಯಲ್ಲಿ ಠಾಣ್ಯ ಹೂಡುವೆನು."

ವ॥ ಎಂದು ಆಸ್ಥಾನದಿಂದ ಎದ್ದು, "ನನ್ನ ಹೆತ್ತ ತಂದೆಯನ್ನು ಜ್ಞಾನ ಪಡೆದ ತಂದೆಯನ್ನೂ ಕಂಡು ಅವರಿಂದ ಆಶೀರ್ವಾದ ಪಡೆಯುವವರೆಗೆ ನಾನು ಆಹಾರವನ್ನು ತೆಗೆದುಕೊಳ್ಳುವುದಿಲ್ಲ" ಎಂದು ಅಪರಾಜಿತನು ಮೇರುಪರ್ವತಕ್ಕೆ ಸೇನಾ ಸಮೇತನಾಗಿ ಧಾಳಿಯಿಡಲೆಂದು ಹೊರಟನು. ಆ ಸೈನ್ಯದ ಪಾದಾಘಾತದಿಂದೆದ್ದ ಧೂಳು ಕುಂಕುಮದ ಹುಡಿಯಂತೆ ತನ್ನ ಕಣ್ಣುಗಳಲ್ಲಿ ಹೊಗಲಾಗಿ ಇಂದ್ರನು ಕಣ್ಣು ಮುಚ್ಚಿಕೊಂಡು,

---

೧ ಹಂ (ಮ, ಪ). ೨ ನೋವು (ಕಾ) ೩. ಕೆ (ಕಾ) ೪ ದಾ (ಕಾ). ೫ ರ್ದುಯೆ (ಕ, ಮ). ರ್ದೆ (ಮ). ೬ ನಡೆ (ಮ). ೭ ದರ (ಮ), x (ಕಾ). ೮ ಕರಸಿ (ಕ, ಮ).

ನಂಬಿಸಲೆಂದು ಮಾಗಿಯೊಳೆ ಮಾಟದ ಮಲ್ಲಿಗೆವೂಗಳಂ ಮರು
ಳ್ದುಂಬಿಗೆ ತೋರ್ಪವೋಲ್ವಿಕಳನಾದಪರಾಜಿತ ರಾಜಶೇಖರಂ
ಗಂಬರದೊಳ್ಸಭಾಸಹಿತಮಾ ಜಿನರಾಜ ಮಹರ್ಷಿರಾಜರಂ
ಶಂಬರನಂತೆ ಮಾಯೆಯೊಳೆ ತೋಱಿದನಾ ಧ[೧]ನದ್ಯೈ[೧]ಂದ್ರಜಾಲಿಗಂ ೫೫

ವ|| ಅ[೨]ದನ[೨]ಪರಾಜಿತಂ ಕಂಡು ಕೃತಾರ್ಥನಾದೆನೆಂದು ಬಂದಿಸಿ ಬಂದು ಪರಿಣಾಮದಿಂ ಪಾಡಿ[೩]ಸಿ ತನ್ನ ಗುರುಗಳ ರೂಪನೆ ಕರುವಿಡಿಸುವ ಕಡಯಿಸುವ ಕಂಡರಿಸುವ ಬೆಸನೆ ಬಸನಮಾಗೆ[೪]

ಜಿನನ ಮತವೆನ್ನ ಮನಮು[೫]ದು
ಜಿನನಾಕೃತಿಯೆನ್ನ ನಯನ[೬]ಕದು[೭] ಪರಮಾರ್ಥಂ
ಜಿನನ ನುಡಿಯೆನ್ನ ಕಿವಿಯದು
ಜಿನನಡಿಗಳಿವೆನ್ನ ನೊಸಲದೇಂ ವಿಸ್ಮಯಮೋ ೫೬

ವ|| ಎಂದು ತ[೮]ನ್ಮಯ[೮] ತನ್ಮನೋರೂಪನಾಗಿ ಸುಖದಿನಿರೆ

ನನೆಯಿಂ[೯] ಷಟ್ಪದ ಧೂಪ ಧೂಮಲತೆಯಂ ಚೂತಂ ಫಲವ್ರಾತಮಂ
ಪನಸಂ ಕುಟಲ್ಮ ದೀಪಿಕಾಪ್ರಕರಮಂ ಚಾಂಪೇಯಮಂ ಪೊತ್ತು ತ
ಣ್ಬನಿಯಂ ಚಂದನಗಂಧಮಂ ಮಲೆಯರಲ್ತಂದೀಯೆ ಬಂದತ್ತು ಫಾ
ಲ್ಗುನ ನಂದೀಶ್ವರಮರ್ಹದೀಶ್ವರನ ಪೂಜೋತ್ಸಾಹದಿಂ ಬರ್ಪವೋಲ್ ೫೭

ಭಯವಿಸ್ಮಯಗಳಿಂದ ಇದೇನೆಂದು ಧ್ಯಾನಿಸಿ ನೋಡಿ, ತಿಳಿದು ನಸುನಕ್ಕು, ಕುಬೇರನನ್ನು ಕರೆಯಿಸಿಕೊಂಡು ಅವನಿಗೆ ಅಪ್ಪಣೆ ಮಾಡಿದನು. ಆಗ

೫೫. ಚಳಿಗಾಲದಲ್ಲಿ ಹೂವಿಗೆ ಹಾತೊರೆದ ಮರುಳು ತುಂಬಿಗೆ ಮಾಯದ ಮಲ್ಲಿಗೆ ಹೂಗಳನ್ನು ತೋರಿಸಿದ ಹಾಗೆ, ವ್ಯಾಮೋಹದಿಂದ ಮರುಳನಾದ ಅಪರಾಜಿತ ರಾಜನಿಗೆ ಸಭಾಸಹಿತನಾದ (ವಿಮಲವಾಹನ) ಜಿನನನ್ನೂ ಮಹರ್ಷಿಯಾದ (ಅರ್ಹದ್ದಾಸ) ರಾಜನನ್ನೂ ಕುಬೇರನೆಂಬ ಇಂದ್ರಜಾಲಿಗನು ಮಾಯೆಯಿಂದ ತೋರಿಸಿದನು.

ವ|| ಅದನ್ನು ಕಂಡು, ಅಪರಾಜಿತನು ತಾನು ಕೃತಕೃತ್ಯನಾದೆನೆಂದು ವಂದಿಸಿ, ಮರಳಿ ಬಂದು, ತನ್ನ ತಂದೆಯ. ರೂಪವನ್ನು ವಿಗ್ರಹವಾಗಿ ಎರಕಹೊಯ್ಯುವ, ಕೆತ್ತುವ, ಕಂಡರಿಸುವ ಉದ್ಯೋಗವೆ ಮುಖ್ಯವಾಗಿ-

೫೬. "ಜಿನನ ಮತಕ್ಕೆ ನನ್ನ ಮನ; ಜಿನನ ರೂಪಕ್ಕೇ ನನ್ನ ಕಣ್ಣು, ಜಿನನ ನುಡಿಗೇ ನನ್ನ ಕಿವಿ, ಜಿನನ ಪಾದಗಳಿಗೇ ನನ್ನ ಹಣೆ - ಇದರಲ್ಲಿ ವಿಸ್ಮಯವೇನು?"

ವ|| ಎಂದು ಅದರಲ್ಲಿ ಮನಸ್ಸನ್ನು ತೊಡಗಿಸಿಕೊಂಡು ಸುಖದಿಂದ ಇರುತ್ತಿರಲು-

೫೭. ಫಾಲ್ಗುಣ ನಂದೀಶ್ವರಕ್ಕೆ ಅರ್ಹಂತನ ಪೂಜೋತ್ಸವಕ್ಕೆ ಉತ್ಸಾಹದಿಂದ ಬರುತ್ತಿರುವುದೊ ಏನೊ ಎಂಬಂತೆ ಮಾವಿನಲ್ಲಿ ಹೂಗಳನ್ನೂ ದುಂಬಿಗಳೆಂಬ ಧೂಪದ

---

೧ ತ (ಕಂ). ೨ ದೇ (ಕಾ, ಮ). ೩ x (ಕಾ, ಕ, ಪ). ೪ ರಿ (ಕಾ, ಮ). ೫ ಗಿ (ಕ, ಮ). ೬ ದ (ಕ, ಮ), ವ (ಪ), ೭ ಕಡು (ಕ), ದದು (ಕಾ), ವದು (ಪ). ೮ ನ್ನಯ (ಕ), ನ್ನಯೆ (ಪ). ೯ ಯಂ (ಕಾ).

ಪಿಡಿಗಿಕ್ಕಿತ್ತು ಮೃಣಾಳಮಂ ವನಗಜಂ ಪೊಕ್ಕತ್ತು ತುಂಡಾಗ್ರದಿಂ
ದೊಡೆ[೧]ದಂಭೋಜದ ಮೊಗ್ಗೆಯಂ ಮಧುಕರಂ ಧಾರಾಗೃಹಕ್ಕಾಗಿ ಸ
ಯ್ತಡಿಯೆತ್ತಿತ್ತು ನವಿಲ್ಮರಾಳಿ ಪರಿಕಾಲೊಳ್ ಕಾಲನಿಟ್ಟತ್ತು ನೀ
ರ್ಗುಡಿಯಲ್ಬೇಡಿದುದಂದು ಪಂಜರಶುಕಂ ಶುಷ್ಕೀಭವತ್ತಾಲುಕಂ ೫೮

ವ|| ಆ ಪರ್ವತಕ್ಕಪೂರ್ವ ಪುರಂದರನತಿ ಪ್ರೀತಿಮತಿ ಪ್ರಮುಖಾಂತಃ ಪುರಪರೀತನಾಗಿ ಪೋಗಿ ಮನೋಹರೋದ್ಯಾನದೊಳಗೆ ನಿಜ ಜನಕಂ ಮಾಡಿಸಿದ ತ್ರಿಭುವನತಿಳಕಮೆಂಬ ಪೊನ್ನ ಬಸದಿಯಂ ಬಳವಿರೋಧಿ ಪೊಂಬೆಟ್ಟಮಂ ಬಲಗೊಳ್ವಂತೆ ಬಲಗೊಳ್ಳುತ್ತುಮಿರ್ಪಾಗಳ್

ಇದು ಬಾನಿಂ ಬರ್ಪ ಪೊಮ್ಮೀಂಬೊಣರ ತೆಱನಿದಲ್ತೊಂದು ಮೇಣ್ಮಿಂಚು ಮಿಂಚ
ಲ್ತದಿವರ್ಚಂದ್ರಾರ್ಕರೇನೀ ಯುಗಳಮಿೞಿವ ಚಂದ್ರಾರ್ಕರೇ ಖೇಚರದ್ವಂ
ದ್ವದ ಕೆಯ್ತಂ ಖೇಚರದ್ವಂದ್ವಮೆ ಪುಸಿ ಪೊಸತೀ ಚಾರಣದ್ವಂದ್ವಮೆಂದು
ರ್ವಿದಲಂಪಿಂ ನೋಡೆ ಭೂಪಂ ಗಗನದಿನಿೞಿದರ್ಚಾರಣರ್ಚಾರು ರೂಪರ್ ೫೯

ದೊರೆಗಿ[೨]ಡೆ ತಮ್ಮ ವಿಯೋಗದೊ
ಳರಸಂಗಾದೞಲನಾಱಿಸಲ್ಕ್ತಿಯಿ[೩]ನಾ
ಗುರುಯುಗಳಮಿೞಿದು ಬಂದಂ
ತಿರೆ ನಭದಿಂದಿೞಿದು ಬರ್ಪ ಚಾರಣಯುಗಮಂ[೪] ೬೦

ಹೊಗೆಯನ್ನೂ ಹಲಸಿನಲ್ಲಿ ಫಲವನ್ನೂ ಸಂಪಗೆಯಲ್ಲಿ (ಹೂಗಳೆಂಬ) ದೀಪಗಳನ್ನೂ ತಂಪಾದ ಹನಿಗಳನ್ನೂ ಚಂದನದ ಗಂಧ (ವಾಸನೆ)ಯನ್ನೂ ಎತ್ತಿಕೊಂಡು ಮಲಯದ ಗಾಳಿ ಬಂದಿತು.

೫೮. ಕಾಡಾನೆಯು ತಾವರೆಯ ನಾಳವನ್ನು ತಂದು ತನ್ನ ಪ್ರೇಯಸಿಗೆ ಕೊಟ್ಟಿತು; ತಾವರೆಯ ಮೊಗ್ಗನ್ನೂ ಒಡೆದು ದುಂಬಿ ಅದರ ಒಳಕ್ಕೆ ಸೇರಿತು; ನವಿಲು ಧಾರಾಗೃಹಕ್ಕೆ ಹೆಜ್ಜೆಯಿಟ್ಟಿತು; ಹಂಸಿ ಕಾಲುವೆಯಲ್ಲಿ ಕಾಲಿಟ್ಟಿತು; ಪಂಜರದಲ್ಲಿದ್ದ ಗಿಳಿ ಗಂಟಲೊಣಗಿ ನೀರು ಬೇಕೆಂದು ಬೇಡಿತು.

ವ|| ಆ ಪರ್ವತಕ್ಕೆ ನವೀನ ಇಂದ್ರನಂತಿರುವ ಅಪರಾಜಿತನೂ ಅತಿ ಪ್ರಿಯಳಾದ ಪ್ರೀತಿಮಾಲೆಯು ಮೊದಲಾದ ಅಂತಃಪುರಸ್ತ್ರೀಯರೂ ಕೂಡಿಕೊಂಡು ಹೋಗಿ, ಮನೋಹರೋದ್ಯಾನದಲ್ಲಿ ತಮ್ಮ ತಂದೆ ಕಟ್ಟಿಸಿದ್ದ ತ್ರಿಭುವನ ತಿಳಕವೆಂಬ ಚಿನ್ನದ ಬಸದಿಯನ್ನು ಮೇರುಪರ್ವತಕ್ಕೆ ಪ್ರದಕ್ಷಿಣೆ ಹಾಕುವ ಇಂದ್ರನಂತೆ, ಬಲಗೊಳ್ಳುತ್ತ (ಪ್ರದಕ್ಷಿಣೆ ಹಾಕುತ್ತ) ಇರುವಾಗ -

೫೯. "ಇದೇನು ಎರಡು ಚಿನ್ನದ ಮೀನುಗಳು ಇಳಿದು ಬರುವಂತಿದೆ! ಅಥವಾ ಮಿಂಚೊ? ಮಿಂಚಲ್ಲ. ಇವರು ಸೂರ್ಯ ಚಂದ್ರರಿರಬಹುದೆ? ಅಥವಾ ಇಬ್ಬರು ಖೇಚರರಿರುವ ಹಾಗಿದೆಯಲ್ಲ! ಛೇ! ಖೇಚರರಲ್ಲ, ಇವರಿಬ್ಬರೂ ಚಾರಣರೆ ಸರಿ" ಎಂದು ಅತ್ಯಂತ ಸಂತೋಷದಿಂದ ಅರಸನು ನೋಡುತ್ತಿರುವಂತೆಯೆ ಇಬ್ಬರು ಸುಂದರರಾದ ಚಾರಣರು ಆಕಾಶದಿಂದ ಇಳಿದು ಬಂದರು.

೬೦. ತಮ್ಮ ಅಗಲಿಕೆಯಿಂದ ಮಗನಿಗಾದ ಅತ್ಯಧಿಕ ದುಃಖ ತಾಪವನ್ನು

---

೧ ಗೆ (ಮ). ೨ ಗೆ (ಕ). ೩ ಯ (ಕ, ಪ). ೪ ಳಂ (ಕ, ಪ).

ವ॥ ವಿನಮಿತವಮೌಳಿಮರೀಚಿಮಂಜರೀನೀರಾಜನದಿನಪರಾಜಿತನಿದಿರ್ಗೊಂಡು ಮನೋಮಣಿಪೀಠದೊ[೧]ಳ್ ಮೇಣಾಂಕ ಮಣಿಪೀಠದೊ[೧]ಳಂ ಮೋಹ[೨]ವ್ಯಕ್ತ[೨] ಭಕ್ತಿಯಿಂ ಕುಳ್ಳಿರೆ ಕುಳ್ಳಿರಿಸಿದಾಗಳ್

ಎಲೆಯೊಳ್ ಸುತ್ತಿದ ಮಲ್ಲಿಗೆ
ಯಲರಂ ಕಂಪಿಂದಮಳಿಯ [೩]ಮೂಗ[೩]ಱಿವವೊಲಾ
ಲಲಿ[೪]ತನ ಮನಮಱಿ[೪]ದುದು ಕ
ಣ್ಮಲರಱಿಯದೆ ಮೋಹವಶದಿನಾ ಚಾರಣರಂ ೬೧

ವ॥ ಅಂತು ಕಟ್ಟಿಲೆಯೊಳ್ ಕಣ್ಣಱಿಯದೆ ಪೋದೊಡಮಿನಿಯರಂ ಮನಕ್ಕೆ ಸೋಂಕಱಿಪುವಂತೆ ಮೋಹಮಱಿಪಿದ ಮನದ ಬೆಚ್ಚ ಬಱಿಯಱಿವು ಬಱಿಯ ಬೆಱಗನೆ ನೋಟದೊಳ್ ನಾ [೦]ಟ[೫]ಸಿ ಕಿಱಿದು ಬೇಗಂ ಬೆಱಗಾಗಿರ್ದುಮಿರಲಾಱದೆ ಭಾವಕ[೬]ಮುಖ[೬]ಮುಕುರಂ ಮುಕುಳಿತ ಕರಕಮಳನಾಗಿ ನಿಮ್ಮಡಿಗಳಂ ಕಾಣಲೊಡನೆಯೆನ್ನ ಮನಮನಾಳ್ದಲಂಪುಮುಟ್ಕಿರುಂ [೭]ನಿಮ್ಮನೆ[೭]ಲ್ಲಿಯಾನುಂ ಕಂಡಱಿವಂತಾದಪುದೆಲ್ಲಿ ಕಂಡೆಂ[೮] ಬೆಸಸಿಮೆನೆ ಮನಂಗೊಂಡಾ ಮುನಿಗಳೊಳಗೆ ಮುಖ್ಯರಪ್ಪ ಮುನಿಗಳ್ ಕೆಯ್ಗಳೊಳಗೆ ಬಲಗೆಯ್ ಬೆಸಕ್ಕೆವರ್ಪಂತೆ ಬೆಸಸಲ್ತಗುಳ್ದರದೆಂತೆನೆ

ಆರಿಸಲೆಂದು ಆ ಹಿರಿಯರಿಬ್ಬರೂ ತಾವೇ ಇಳಿದು ಬಂದರೊ ಏನೊ ಎಂಬಂತೆ ಇಳಿದು ಬಂದ ಆ ಇಬ್ಬರೂ ಚಾರಣರನ್ನು

ವ॥ ತನ್ನ ಬಾಗಿಸಿದ ಕಿರೀಟರತ್ನಗಳ ನೀರಾಜನದಿಂದ ಅಪರಾಜಿತನು ಸ್ವಾಗತಿಸಿ, ತನ್ನ ಮನಸ್ಸಿನ ರತ್ನಪೀಠದಲ್ಲಿಯೂ, ಅಲ್ಲಿಯ ರತ್ನಪೀಠಗಳಲ್ಲಿಯೂ ಭಕ್ತಿಯಿಂದ ಕುಳ್ಳಿರಿಸಿದಾಗ -

೬೧. ಎಲೆಯಲ್ಲಿ ಸುತ್ತಿಟ್ಟಿದ್ದರೂ ಮಲ್ಲಿಗೆಯ ಹೂವನ್ನು ಅದರ ಪರಿಮಳದಿಂದ ದುಂಬಿಯ ಮೂಗು ಸಹಜವಾಗಿ ಅರಿತುಕೊಳ್ಳುವಂತೆ, ಕಣ್ಣು ಅರಿಯದಿದ್ದರೂ ಆ ಕುಮಾರನ ಮನಸ್ಸು ಆ ಚಾರಣರಿಬ್ಬರನ್ನೂ ಅರಿತುಕೊಂಡಿತು.

ವ॥ ಕತ್ತಲೆಯಲ್ಲಿ ಪ್ರಿಯರು ಕಣ್ಣಿಗೆ ಕಾಣದೆ ಇದ್ದರೂ ಅವರ ಸ್ಪರ್ಶ ಮನಕ್ಕೆ ಅವರ ಇರವನ್ನು ತಿಳಿಸಿಕೊಡುವಂತೆ, ಮೋಹವು ಗುರುತಿಸಿ ತಿಳಿದುಕೊಂಡು ಮನಸ್ಸಿನಲ್ಲಿ ಮೂಡಿಸಿದ "ಇವರು ಯಾರೊ ನನ್ನ ಆಪ್ತ ಸಂಬಂಧಿಕರು" ಎಂಬ ಭಾವ ನೋಟದಲ್ಲಿ ಕೇವಲ ಬೆರಗನ್ನು ತುಂಬಿತು. ಸ್ವಲ್ಪ ಸಮಯ ಹೀಗೆ ಬೆರಗಿನಲ್ಲಿದ್ದು, ಹಾಗೆ ಸುಮ್ಮನೆ ಇರಲಾರದೆ ಆತನು ಕೈಮುಗಿದು 'ಪೂಜ್ಯರೆ, ನಿಮ್ಮನ್ನು ಕಂಡೊಡನೆ ನನ್ನ ಮನಸ್ಸಿನಲ್ಲಿ ಸಂತೋಷವೂ ಪ್ರೇಮವೂ ತುಂಬಿ ಬಂದಿವೆ. ನಿಮ್ಮನ್ನು ಎಲ್ಲಿಯೊ ಕಂಡು ತಿಳಿದಂತೆ ಎನಿಸುವುದು. ಎಲ್ಲಿ ಕಂಡೆನು? ದಯವಿಟ್ಟು ತಿಳಿಸಿ" ಎಂದನು. ಎರಡು ಕೈಗಳಲ್ಲಿ ಬಲಗೈಯೆ ಯಾವಾಗಲೂ ಕೆಲಸಕ್ಕೆ ಮುಂದಾಗುವಂತೆ, ಆ ಇಬ್ಬರು ಮುನಿಗಳಲ್ಲಿ ಮುಖ್ಯರಾದ ಒಬ್ಬರು ಆತನ ಬೇಡಿಕೆಗೆ ಉತ್ತರವಾಗಿ ವಿವರಿಸತೊಡಗಿದರು. ಅದು ಹೀಗೆ -

---

೧ x (ಕಾ) ೨ ವೆತ್ತ (ಮ). ೩ ಮೊಗಮ (ಕಾ). ೪ ತಮನಮಱಿಯ (ಕ). ೫ ಟ (ಪ). ೬ (ಕ, ಕಾ,). ೭ ನಿಂತುವೆ (ಕ, ಪ). ೮ ಡಿರಿ (ಕಾ).

ಸೊಡರವೊಲಿರ್ಕುಂ ಕಾಡಿಗೆ
ಗುಡಿಯೆನೆ ಮುಗಿಲೆಳಸಿ ಬಳಸಿ ಬೀೞೆ ಪತಂಗಂ
ಕಡು ಬೆಳಗಿ ಪುಷ್ಕರಾರ್ಧದ
ಪಡುವಣ ದೆಸೆ ಮುಂದುಗೊಂಡ ಮಂದರಶೈಲಂ ೬೨

ಮಂದರಶೈಲದ ಪಡುವಲ್
ನಂದನಮಳಕಾಳಿ ಕೊಳನೆ ಪೊಕ್ಕುೞ್ [೧]ಕೆಱೆ ಕಣ್[೧]
ಕುಂದಂ ಕುಚಮೆನೆ ವಸುಧಾ
ಸುಂದರಿಯ ಸುದೇಹಮೆನಿಪುದಪರವಿದೇಹಂ ೬೩

ಅಪರವಿದೇಹೋದ್ಭವೆ ನೀ
ಳಪರ್ವತಂ ಘನ[೨]ಗು [ಹಾ] ದಶಾಸ್ಯಂ[೨] ಸೆಱೆಗೆ
ಯ್ಯೆ ಪಯೋನಿಧಿಯಂ ಪುಯ್ಯ
ಲ್ಚಿ ಪಾಯ್ದ ಸೀತೋದೆ ಸೀತೆಯಂತೆವೊಲೆಸೆಗುಂ ೬೪

ಭಯದಾಯಿ ವಜ್ರಿಯೇಂ ವ
ಜ್ರಿಯ[೩] ಮುತ್ತನುಮಕ್ಕೆ ಬರ್ಕೆ ಕಾದಪೆನೆಂದ
ದ್ರಿಯ ತಲೆಯೊಳಿಟ್ಟ ವಾರಾ
ಸಿಯ ಕೆಯ್ಯೆನೆ ರಯ್ಯಮಾದುದಾ ನದಿ ನೀಳ್ದಿಂ ೬೫

ಆ ತೊಱೆಯ ಬಡಗ ತಡಿಯೊಳ್
ಪೂತೊಱಗಿದ ಗಿಡಗಳಿಂದೆ ಕಾಯ್ತೊಱಗಿದ ಭೂ
ಜಾತದೊದವಿಂದೆ ಸಿರಿಕರ
ಮೋತೆಱಗಿದ ವಿಷಯಮುಂಟು ಗಂಧಿಲವಿಷಯಂ ೬೬

೬೨. "ಸುತ್ತಲೂ ಬಂದು ಬಂದು ಆವರಿಸುವ ಮೋಡಗಳ ಮಂಡಲವು ಕಾಡಗೆ ಕುಡಿಯಂತಿರಲಾಗಿ, ಮುಳುಗುತ್ತಿರುವ ಸೂರ್ಯನನ್ನು ತುದಿಯಲ್ಲಿ ಹೊಂದಿರುವ ಮಂದರ ಗಿರಿಯು ದೀಪದ ಕುಡಿಯಂತೆ ಕಂಗೊಳಿಸುವುದು.

೬೩. ಮಂದರಗಿರಿಯ ಪಶ್ಚಿಮಕ್ಕೆ ತೋಟಗಳೆ ತಲೆಗೂದಲಾಗಿ, ಸರೋವರವೆ ಹೊಕ್ಕುಳಾಗಿ, ಕೆರೆಗಳೆ ಕಣ್ಣಾಗಿ, ಬೆಟ್ಟಗಳೆ ಮೊಲೆಗಳಾಗಿ ಭೂದೇವತೆಯ ಸುಂದರ ದೇಹವೆ ಇದೆಂಬಂತೆ ಅಪರ ವಿದೇಹವಿರುವುದು.

೬೪. ಆಳವಾದ ಗುಹೆಗಳುಳ್ಳ ನೀಲಪರ್ವತವೆಂಬ ರಾವಣನು ತನ್ನನ್ನು ಸೆರೆಹಿಡಿಯಲಾಗಿ ಸಮುದ್ರಕ್ಕೆ ಹುಯ್ಯಲಿಡುತ್ತ ಓಡುವ ಸೀತೆಯೋ ಏನೊ ಎಂಬಂತೆ ಅಪರ ವಿದೇಹದಲ್ಲಿ ಹುಟ್ಟಿದ ಸಿತೋದಾನದಿ ಕಂಗೊಳಿಸುವುದು.

೬೫. ಇಂದ್ರನ ಭಯವೆ? ಇಂದ್ರನೇಕೆ, ಅವನ ಮುತ್ತಾತ ಬಂದರೂ ನಾನು ನಿನ್ನನ್ನು ಕಾಪಾಡುವೆನೆಂದು ಸಮುದ್ರವು ಪರ್ವತದ ತಲೆಯ ಮೇಲಿಟ್ಟ ಕೈಯೋ ಎಂಬಂತೆ ನೀಳವಾದ ಆ ನದಿ ರಮ್ಯವಾಗಿರುವುದು.

೬೬. ಆ ನದಿಯ ಉತ್ತರ ತೀರದಲ್ಲಿ ಹೂವಿನ ಭಾರದಿಂದ ಬಾಗಿದ

೧ ಕರ್ಣಂ (ಕ), ಕೆೞೆಕರ್ಣಂ (ಮ). ೨ ಗುಹೋದರಾಸ್ಯಂ (ಕ, ಪ). ಗುಹೋದಶಾಸ್ಯ (ಕಾ, ಮ). ೩ ಯೆ (ಕ, ಮ).

ಕೆಳೆಗೊಂಡಿರ್ಪುವು ಕೇಳಿಮಾ ವಿಷಯದೊಳ್ ಕಾಮಾಗ್ನಿಯುಂ ನಂದನಾ
ವಳಿಯುಂ ಕಾಮಕರೇಣುವುಂ ಕಮಳಮುಂ ಕಾಮಾಂಧರಕಾರಂಗಳುಂ
ತೊಳಗುತ್ತಿರ್ಪ ಸುಧಾಂಶುಬಿಂಬರುಚಿಯುಂ ಕಾಮಾಹಿಯುಂ ಶೀತಲಾ
ನಿಳನುಂ ಕಾಮನಿಕಾಮರಾಗರಸಮುಂ ತೃಷ್ಣಾಗ್ನಿಯುದ್ರೇಕಮುಂ ೬೭

ನುಡಿವಂತಿರ್ಪುವು ಕೀರ ಕೋಕಿಲ ಕಲಧ್ವಾನಂಗಳಿಂ ಕಣ್ಗಳಂ
ಬಿಡುವಂತಿರ್ಪುವರಲ್ವರಲ್ದುಱುಗಲಿಂದಲ್ಲೊಕ್ಕ ಪೂವಿಂದೆ ಕಾ
ಲಿಡಲಿಂಬಿಲ್ಲದೆ ಮೆಟ್ಟಲಾಗದಿವನೆಂಬಂತಂಘ್ರಿಪವ್ರಾತಮುಂ
ನಡೆಯಂ ನೀಗಿಯೆ ನಿಂದುವೇಂ ಪ್ರಚುರಮೋ ಜೈನವ್ರತಂ ದೇಶದೊಳ್ ೬೮

ಎನಿಸಿದ ನಾಡ ನಟ್ಟನಡುವಿರ್ಪುದು ಪುಣ್ಯದ ಪುಂಜದಂತೆ ಪೂ
ವಿನ ಕೊಳನೊಂದು ನಟ್ಟನಡುವಿರ್ಪ ಸಿತಸ್ಮಿತಪದ್ಮದಂತೆ ಬೆ
ಳ್ಪನೆ ನಭದೊಂದು ನಟ್ಟನಡುವಿರ್ಪ ಸುಧಾಕರಬಿಂಬದಂತೆ ಸಂ
ಜನಿತ ಸಮಸ್ತ ಪರ್ವತ ಯಶೋವಿಜಯಂ ವಿಜಯಾರ್ಧಪರ್ವತಂ ೬೯

ಅರವಿಂದಾಕರರೇಣು ಪಿಂಜ[೧]ರತೆಯಂ[೧] ಪೆಣ್ಣಂಚೆಗಳ್ [೨]ಬೇಗದೊಳ್[೨]
ಪೊರೆದಂಭೋದದ ಕಪ್ಪನುದ್ಗತ ನಖಾನೀಕಂ ಚರತ್ಖೇಚರೀ
ಚರಣಾಲಕ್ತಕರಾಗಮಂ ತೊಡೆಯಲೆಮ್ಮೊಳ್ಪಾಯ್ದುವೋ[೩]ತಾರಕಾಂ
ಕುರ ತಾರಾಧಿಪ ತಾರಳಪ್ರಭೆಗಳಿಂ ತಾರಾಚಳಪ್ರಸ್ಥದೊಳ್ ೭೦

ಗಿಡಗಳಿಂದಲೂ, ಕಾಯಿಗಳ ಭಾರದಿಂದ ಬಾಗಿದ ಮರಗಳಿಂದಲೂ ಸಮೃದ್ಧವಾಗಿ, ಲಕ್ಷ್ಮಿಯೆ ಒಲಿದು ಬಂದು ನೆಲಸಿದ 'ಗಂಧಿಲ'ವೆಂಬ ರಾಜ್ಯವುಂಟು.

೬೭. ಕಾಮದ ಬೆಂಕಿಯೊಡನೆ ತೋಟಗಳ ಸಾಲುಗಳೂ ಕಾಮವೆಂಬ ಆನೆಯೊಡನೆ ಕಮಲಗಳೂ ಕಾಮದ ಅಂಧಕಾರದೊಡನೆ ಉಜ್ವಲವಾದ ಚಂದ್ರಬಿಂಬದ ಕಾಂತಿಯೂ ಕಾಮಸರ್ಪದೊಡನೆ ತಂಗಾಳಿಯೂ ಕಾಮದ ಸಮೃದ್ಧ ರಾಗ ರಸದೊಡನೆ ಕೃಷ್ಣೆಯ ದಾಹವೂ ಒಂದಕ್ಕೊಂದು ಸ್ನೇಹಗೊಂಡು ಆ ರಾಜ್ಯದಲ್ಲಿ ಇರುವುವು.

೬೮. ಗಿಳಿ - ಕೋಗಿಲೆಗಳ ಸುಸ್ವರದಿಂದ ನುಡಿಯುತ್ತಿರುವಂತೆ, ಅರಳು ಹೂಗಳಿಂದ ಕಣ್ಣುಬಿಟ್ಟು ನೋಡುತ್ತಿರುವಂತೆ, ಅಲ್ಲಿ ಚೆಲ್ಲಿದ ಹೂಗಳ ಹರವಿನಿಂದಾಗಿ ಹೆಜ್ಜೆಯಿಡಲು ಅವಕಾಶವಿಲ್ಲದೆ ಇವುಗಳನ್ನು ತುಳಿಯಕೂಡದೆಂದು ನಿರ್ಧರಿಸಿ ಅಲ್ಲಿಯ ಮರಗಳು ಕೂಡ ನಡೆಯನ್ನು ಕಳೆದುಕೊಂಡು ನಿಂತಲ್ಲಿಯೆ ನಿಂತುವು. ಎಂದರೆ ಆ ದೇಶದಲ್ಲಿ ಜೈನವ್ರತಾಚರಣೆಯ ಘನತೆ ಎಂತಹದು!

೬೯. ಹೂಗೊಳದ ನಟ್ಟನಡುವಿನ ಒಂದು ಬೆಳ್ದಾವರೆ ಹೂ ಅರಳಿ ನಿಂತಂತೆ, ಬೆಳ್ಳನೆಯ ಆಕಾಶದ ನಡುವೆ ಚಂದ್ರನ ಬಿಂಬ ನಿಂತಂತೆ, ಆ ನಾಡಿನ ನಟ್ಟನಡುವೆ ಸಕಲಪರ್ವತಗಳನ್ನು ತನ್ನ ಯಶಸ್ಸಿನಿಂದ ಮೀರಿದ ವಿಜಯಾರ್ಧಪರ್ವತವು ಪುಣ್ಯದ ರಾಶಿಯಂತೆ ನಿಂತಿರುವುದು.

೭೦. ಕಮಲಸರೋವರಗಳಿಂದ ಹರಡಿದ ಪರಾಗದ ಹೊಂಬಣ್ಣವೂ ಮೋಡಗಳ

---

೧ ತೆಯಿರಲ್ (ಕ), ತೆಯರಲ್ (ಮ), ರತೆಯಿಂ (ಪ). ೨ ಬೇಗದೊಳ್ (ಕ, ಪ). ೩ ಮೋ (ಕ, ಮ).

ಗಂಗೆ [1]ಬಿಟಿ[1]ಲ್ದವೊಲ್ನೆಲಕೆ ಬೆಳ್ಳಿಯ ಬೆಟ್ಟದ ಬಳ್ಳಿವೆಳ್ಪು ಬೆ
ಳ್ಳಂ[2]ಗೆಡೆ[2]ದೊಪ್ಪೆ ತಪ್ಪಿ[3]ಲ ಫಲಾರು[4]ಣದರ್ಧ ತಟಾಕ ಸಂಕುಳಂ
ತಿಂಗಳ ತೋಂಟದಂತೆ ಬಳೆದೊಪ್ಪುವ ನೇರೆಯ ಕೆಯ್ಗಳಚ್ಚವೆ
ಳ್ದಿಂಗಳ ಕೆಯ್ಗಗಳಂತೆ ನಡೆನೋೞ್ಪರ ಕಣ್ಗೆ ಕರಂ ಮನೋಹರಂ ೭೧

ಪನಸಾಮ್ರಾತಕ ಮಾತುಳುಂಗ ಕದಳೀ ಖರ್ಜೂರ ನಾರಂಗ ಪೀ
ತನ ಜಂಬೂ ಸಹಕಾರ ದಾಡಿಮ ಫಲವ್ರಾತಂಗಳಿಂದಾಗಳುಂ
ತನಿಗಂಪಂ ಮೊಗೆದೆತ್ತಿ ತೀಡುವೆಲರೊ[5]ಂದಿಂಪಿಂಗೆ ಪೊಂಗೂರ್ತು ಮೆ
ಲ್ಲನೆಬಾಯಂ ಪೊಳಕುತ್ತೆ ನೋೞ್ಪರಮರರ್ತಾರಾಚಳೋದ್ಯಾನಮಂ[6] ೭೨

ಎರಲಿಂದೆ ಪಾಱಿದಾ ವನ
ತರುನಿಕರದ ಕುಸುಮರೇಣು ಪರಮಾಣುಗಳಿಂ
ಸುರಲೋಕದ ವನವಾಯ್ತೆಂ
ದರಗಿಳಿಯೋದು[7]ವುವು[7] ನಗದ ವನವರ್ಣನಮಂ ೭೩

ಸಲ್ಗೆಯೊಳಲ್ಲಿಯ ಕೋಡುಂ
ಗಲ್ಗಳ್ ಖೇಚರತೆವಡೆದು ಪಾಱುವ ತೆಱದಿಂ
ಮೆಲ್ಗಾಳಿಯೊಲೆಯೆ ಬಿಳಿಯ ಮು
ಗಿಲ್ಗಳ್ ಪಾಱುವುವು ಖಚರ ಗಿರಿವನ[8]ತಟದೊಳ್ ೭೪

ಛಾಯೆಯಿಂದಾದ ಕಪ್ಪುಬಣ್ಣವೂ ಅಲ್ಲಿ ನಡೆದಾಡುವ ಖೇಚರಿಯರ ಅಂಗಾಲುಗಳಿಂದಾದ ಅಲತಿಗೆಯ ಕೆಂಪು ಕಲೆಗಳೂ ಬೆಟ್ಟಕ್ಕೆ ಅಂಟಿಕೊಂಡಿದ್ದುವು. ಇವೆಲ್ಲವನ್ನೂ ತೊಳೆದು ಬಿಡಲೆಂದು ಹೊರಟುವೊ ಏನೊ ಎಂಬಂತೆ, ತಮ್ಮ ಉಗುರುಗಳನ್ನು ಎತ್ತಿಕೊಂಡು ನಕ್ಷತ್ರ ಚಂದ್ರರ ಪ್ರಭೆಯುಳ್ಳ ಹೆಣ್ಣಂಚೆಗಳು ಆ ಬೆಟ್ಟದ ಮೇಲೆ ಹಾಯ್ದು ಹಾಯ್ದು ಹೋಗುವುವು.

೭೧. ಆಕಾಶಗಂಗೆ ಆಯಾಸಗೊಂಡು ನೆಲಕ್ಕೆ ಬಂದು ಒರಗಿದಳೊ ಏನೊ ಎಂಬಂತೆ ಬೆಟ್ಟದ ಧವಳ ಪ್ರಭೆ ಒಪ್ಪಲಾಗಿ, ಅದರ ತಪ್ಪಲಲ್ಲಿ ಹಣ್ಣುಗಳ ಛಾಯೆಯಿಂದ ಕೆಂಪಾದ ತಟಾಕಗಳೂ ಚಂದ್ರನೆ ಬೆಳಸಿದ ಬೆಳುದಿಂಗಳ ತೋಟಗಳಂತೆ ಬೆಳ್ಳಗೆ ಶೋಭಿಸುವ ನೇರೆ ಭತ್ತದ ಗದ್ದೆಗಳೂ ನೋಡುವವರ ಕಣ್ಣಿಗೆ ಮನೋಹರವಾಗಿರುವುವು.

೭೨. ಹಲಸು, ಅಮಟೆ, ಮಾದಳ, ಬಾಳೆ, ಕಜ್ಜೂರ, ಕಿತ್ತಳೆ, ನೇರಿಳೆ, ಮಾವು, ದಾಳಿಂಬೆ, ಹಣ್ಣುಗಳ ಗೊಂಚಲುಗಳಿಂದ ಮಧುರವಾದ ಸುಗಂಧವನ್ನೆತ್ತಿಕೊಂಡು ಬೀಸುವ ಗಾಳಿಯ ಹಿತಕ್ಕೆ ಮೈಸೋತು ಬಾಯಿ ಚಪ್ಪರಿಸುತ್ತ ದೇವತೆಗಳು ಬೆಳ್ಳಿಯ ಬೆಟ್ಟದ ಉದ್ಯಾನವನ್ನು ನೋಡುವರು.

೭೩. ಇಲ್ಲಿಯ ಗಿಡಮರಗಳ ಹೂವಿನ ಪರಾಗಕಣಗಳು ಗಾಳಿಯಿಂದ ಹಾರಿ ಹೋಗಿ ದೇವಲೋಕದ ಹೂದೋಟವಾಯಿತೆಂದು ಅರಗಿಳಿಗಳು ಆ ಬೆಟ್ಟದ ವನವನ್ನು ಬಣ್ಣಿಸಿ ನುಡಿವುವು.

೭೪. ಆ ಬೆಟ್ಟದ ಕೋಡುಗಲ್ಲುಗಳೆ ಆಕಾಶಗಮನ ಶಕ್ತಿಯನ್ನು ಗಳಿಸಿ

೧ ಬಟಿ (ಕ, ಪ), ಬಟಿ (ಮ). ೨ ಗಿಡಿ (ಕ). ೩ ತ್ಫ (ಕ). ೪ ಗು (ಕ). ೫ ರಿಂ (ಕ). ೬ ದೊಳ್ (ಕ, ಪ). ೭ ವದು (ಕಾ). ೮ ರ (ಮ).

ನಡೆವುವು ನಭಕ್ಕೆ ಮಿಂಚುವ
ನಿಡು ಮುಗಿಲಮರಿಯರ ಕಣ್ಗೆ ಕುಡಲೆಂ[೧]ದಗದೊಳ್[೧]
ಬಿಡದೋದುವ ಖೇಚರಿಯರ
ಕಡೆಗಣ್ಗಳ ಬೆಳಗನೇಱಿ ಪೇ[೨]ಱಿದ ತೆಱದಿಂ ೭೫

ಕಡು ನೆರೆದ ಖಚರಿಯರ್ ನೀ
ರಡಿ[೩]ಸಲೊಡಂ ಕರಿಯ ಕಿಱಿಯ ಮುಗಿಲಂ ಖಚರರ್
ಪಿಡಿದು ಪೊರೆಯೆತ್ತಿ ಮಿಂಚಿನ
ಪುಡಿ[೪]ಕೆಗಳಂ ತೆಱದ ತೆಱದೆ ತೋರ್ಪುದು ನಗದೊಳ್ ೭೬

ಜಿನಬಾಳಕನೆನೆ ಮಧ್ಯಂ
ದಿನದಿನನವ್ಯಕ್ತ ಭಗಣನಯನಸಹಸ್ರಂ
ಜಿನನ ಸವನಕ್ಕೆ ಗಗನೇಂ
ದ್ರನೇಱಿದೈರಾವತಂಬೊಲಿರ್ಪು[೫]ದಗೇಂದ್ರಂ ೭೭

ಜಿನರಾಜಂ ಕಾಮನಂ ಮರ್ದಿಸಿದ ಬಿರಿದಿನೊಳ್ ವಿಕ್ರಮಂದಪ್ಪದಿಂಪುಂ
ದನಿಯುಂ ಕೈಕೊಳ್ವಿನಂ ಬೀಣೆಯ ಕಳರವಮುಂ ತತ್ಕಥಾನಾಟಕಾಲೋ
ಕನ ಸುಪ್ರಸ್ತಾವದೊಳ್ ಪಾಡುವ ಖಚರಿಯರಂಗಸ್ಥಿತಂ ಕೇಳ್ದು ಕೇಳ್ದೊ
ಯ್ಯನೆ ಲಜ್ಜಾಭಾರದಿಂ ಕುತ್ತಿದ ತಲೆಯನಣಂ ಕುತ್ತುವಂತೆತ್ತಲಾಱಿಂ ೭೮

ಹಾರಾಡುತ್ತಿವೆಯೊ ಏನೊ ಎಂಬಂತೆ ಮೇಲಗಾಳಿಗೆ ಬಿಳಿಯ ಮೋಡಗಳು ಆ ಗಿರಿವನದ ಅಂಚಿನಲ್ಲಿ ಹಾರಾಡುವುವು.

೭೫. ಈ ಬೆಟ್ಟದಲ್ಲಿ ನಿರಂತರವಾಗಿ ಸಂಚರಿಸುವ ಖೇಚರಿಯರ ಕುಡಿನೋಟದ ಕಾಂತಿಯನ್ನು ದೇವಲೋಕದ ಕನ್ಯೆಯರಿಗೆ ಮುಟ್ಟಿಸಿ ಬರಲೆಂದು ಹೇರಿಕೊಂಡು ಹೊರಟಿವೆಯೊ ಏನೊ ಎಂಬಂತೆ ಮಿಂಚುವ ದೊಡ್ಡ ದೊಡ್ಡ ಮೋಡಗಳು ಆಕಾಶದಲ್ಲಿ ಏರಿಹೋಗುವುವು.

೭೬. ಆಕಾಶದಲ್ಲಿ ನೆರೆದ ಖೇಚರಿಯರು ನೀರಡಿಸಲಾಗಿ, ಖೇಚರಪುರುಷರು ಚಿಕ್ಕದೊಂದು ಕರಿಯ ಮೋಡವನ್ನು ಹಿಡಿದು, ಅದರ ಕವಚವನ್ನು ಸುಲಿದು ಮಿಂಚಿನ ಪುಡಿಕೆಗಳನ್ನು ತೆರೆಯುತ್ತಿರುವರೊ ಏನೊ ಎಂಬಂತೆ ಮಿಂಚುವ ಕರಿಮೋಡಗಳು ಬೆಟ್ಟದ ಮೇಲೆ ಕಂಗೊಳಿಸುವುವು.

೭೭. ಮಧ್ಯಾಹ್ನದ ಸೂರ್ಯನು ಜಿನನಂತಿರಲಾಗಿ ಅವ್ಯಕ್ತವಾದ ಸಹಸ್ರನಕ್ಷತ್ರಗಳೆ ಕಣ್ಣಾಗಿರುವ ಆಕಾಶವೆಂಬ ಇಂದ್ರನು ಆ ಜಿನನ ಅಭಿಷೇಕಕ್ಕೆಂದು ಏರಿ ಬಂದ ಐರಾವತವೊ ಏನೊ ಎಂಬಂತೆ ಆ ಮಹಾಪರ್ವತವು ಕಂಗೊಳಿಸುವುದು.

೭೮. ಜಿನೇಂದ್ರನು ಕಾಮನನ್ನು ಮರ್ದಿಸಿದ ಪ್ರಸಂಗವನ್ನು ಕ್ರಮತಪ್ಪದೆ, ಇಂಪಾದ ಧ್ವನಿಯಿಂದಲೂ ವೀಣೆಯ ಮಧುರನಾದದ ಸಂಗತಿಯಿಂದಲೂ ಒಡಗೂಡಿ ಖೇಚರಿಯರು

೧ ದಾಗಳ್ (ಕ, ಪ). ೨ ತೋ (ಕ, ಪ). ೩ ಡ (ಕಾ), ೪ ಡು (ಕಾ). ೫ ರ್ದು (ಕ).

ಸ್ಮರರಾಗಾಮೃತಮಂ ತುಳುಂಕಿ ಖಚರೇನೇತ್ರತ್ರಿಭಾಗೇಕ್ಷಣಂ
ಪರಮಾನಂದಮನೆಂದುಮೀಯೆ ಜಿನಪೂಜಾಲೋಕನಂ ಪುಣ್ಯದಿಂ
ದೆರಡುಂ ನಾಕದ ಮೋಕ್ಷದಿ[1]ವ ಸುಖಮೊಂದಾದಂತೆ ತಾರಾದ್ರಿಗಾ
ದೆರಡುಂ ಪಕ್ಕದೊಳೊಪ್ಪಿ ತೋರ್ಪುವೆರಡುಂ ವಿದ್ಯಾಧರಶ್ರೇಣಿಗಳ್ ೭೯

ವ॥ ಅವಱೊಳುತ್ತರ ಶ್ರೇಣಿಗಲಂಕಾರಮಾಗಿ

ದೀಪ್ರ ಸುವರ್ಣವಪ್ರವಿಪುಳಪ್ರಭೆಗಳ್ ಬಳೆದುಂಟುಮಾಡೆ ಸೂ
ರ್ಯಪ್ರಭೆಯುಕ್ಕಿದುಕ್ಕನಿರುಳುಂ ಪಗಲುಂ ಶರದಭ್ರಶುಭ್ರ ಸೌ
ಧಪ್ರಭೆಗಳ್ ಶಶಿಪ್ರಭೆಯ ಮಾಡಿದ ಮಾಟಮನುಂಟುಮಾಡೆ ಸೂ
ರ್ಯಪ್ರಭಮೆಂಬುದೊಂದು ಪೊಱಲುಂಟು ಪೊಱಲ್ ಕೃತಕೌತುಕಂಗಳಿಂ ೮೦

ಗಿರಿಶಿಖರದೊಳಾಡುವ ಖೇ
ಚರಿಯರ್ಪುರವರದ ಪೊನ್ನ ಕೋಂಟೆಯನಿರದ
ೞ್ತರಿವಟ್ಟು ಸೂರ್ಯಬಿಂಬದ
ಪರಿವೇಷಮೆ ಗೆತ್ತು ನೋಡುವರ್ನಡುವಗಲೊಳ್ ೮೧

ನಾಟಕವಾಗಿ ಪ್ರದರ್ಶಿಸುತ್ತಿರಲಾಗಿ ಹಾಡುವ ಖೇಚರಿಯರ ಅಂಗದಲ್ಲಿ ಅಡಗಿಕೊಂಡಿದ್ದ ಮನ್ಮಥನು ಅದನ್ನು ಕೇಳಿ ಕೇಳಿ ನಾಚಿಕೆಯಿಂದು ಬಾಗಿದ ತನ್ನ ತಲೆಯನ್ನು ಮತ್ತು ಎತ್ತಲಾರನು.

೭೯. ಶೃಂಗಾರರಸವನ್ನು ತುಳುಕುವ ಖೇಚರಿಯರ ಕುಡಿನೋಟವೂ, ಜಿನಪೂಜಾ ದರ್ಶನವೂ ಪರಮಾನಂದವನ್ನು ಯಾವಾಗಲೂ ನೀಡುತ್ತಿರಲಾಗಿ, ಸ್ವರ್ಗದ ಸುಖ ಹಾಗೂ ಮೋಕ್ಷದ ಸುಖಗಳೆರಡೂ ಪುಣ್ಯದಿಂದ ಒಂದಾದಂತೆ ಆ ಬೆಳ್ಳಿ ಬೆಟ್ಟದ ಎರಡೂ ಪಕ್ಕಗಳಲ್ಲಿ ಎರಡು ವಿದ್ಯಾಧರ ಶ್ರೇಣಿಗಳು ಕಂಗೊಳಿಸುವುವು.

ವ॥ ಅವುಗಳಲ್ಲಿ ಉತ್ತರ ಶ್ರೇಣಿಗೆ ಭೂಷಣವಾಗಿ -

೮೦. ಚಿನ್ನದ ಪ್ರಾಕಾರದಿಂದ ಹೊಮ್ಮುವ ಉಜ್ವಲವಾದ ಪ್ರಭೆಗಳು ಅತಿಶಯವಾದ ಸೂರ್ಯಪ್ರಭೆಯನ್ನೂ ಹಗಲಿರುಳೂ ಶರನ್ಮೇಘಗಳಂತೆ ಪರಿಶುಭ್ರವಾದ ಸೌಧಗಳು ಹರಡುವ ಚಂದ್ರಪ್ರಭೆಯನ್ನು ಸೂಸುತ್ತಿರುವ ಸೊಬಗನ್ನು ಹೊಂದಿ ಸೂರ್ಯಪ್ರಭವೆಂಬ ಕೌತುಕಮಯವಾದ ಪಟ್ಟಣವುಂಟು.

೮೧. ಪರ್ವತದ ಶಿಖರದಲ್ಲಿ ಆಡುವ ಖೇಚರಿಯರು ಆ ಪಟ್ಟಣದ ಚಿನ್ನದ ಕೋಟೆಯನ್ನು "ಇದು ಸೂರ್ಯಬಿಂಬದ ಸುತ್ತಲಿರುವ ಪ್ರಭಾಮಂಡಲವೇ" ಎಂದು ಭ್ರಮಿಸಿ ಮಧ್ಯಾಹ್ನದ ಸಮಯದಲ್ಲಿ (ಹೀಗೆ ಕಾಣುವುದಲ್ಲಾ, ಏಕೆ? ಎಂದು) ಆಶ್ಚರ್ಯದಿಂದ ನೋಡುವರು.

---

೧ ದೀ (ಕಾ, ಮ).

ಬಿಳಿಯ ಮನೆಯೆನಿಸಿ ತಮ್ಮಯ
ಬೆಳಗಿಂ ಪೊಟಿಲುಟಿದ ಮನೆ ಸಮುಜ್ವಲ ರಜತಾ
ಚಳಮಿಕ್ಕಿದ ತತ್ತಿಗಳೆನೆ
ತೊಳತೊಳತೊಳ[೧]ಗುವುವು[೧] ಸೌಧಸದನಾವಳಿಗಳ್ ೮೨

ಅದನಾಳ್ವಂ ಸದನಂ ಜಸಕ್ಕೆ ಮದನಂ ಕಾಂತಾಜನಕ್ಕುಲ್ಲಸ
ದ್ವದನಂ ನೀತಿವಿಲೋಚನಕ್ಕೆ ಮದಮುದ್ಯದ್ವಿಕ್ರಮೇಭಕ್ಕಿರಂ
ಮದಮುಗ್ರಾರಿಗೆ ಸಮ್ಮದಂ [ಸಿ[೨]] ರಿಗೆ ಸಂಸ್ತುತ್ಯೋದಯಂ ವಾಗ್ವಧೂ
ಹೃದಯಂ ಜಾತದಯಂ ಖಗಾದ್ರಿಶರಭಂ ಸೂರ್ಯಪ್ರಭಂ ಸುಪ್ರಭಂ ೮೩

ಜಗಳಂಬೊಕ್ಕವರೊಳ್ ಕೆಲರ್ ಪೆಟಿವರಾಗಿರ್ದರ್ಜವಂಗೆಟ್ಟು ಪಾ
ಱುಗಳನ್ಯಾದ್ರಿಗೆ ಪಾಜಿ ಪೋಗಿ ಕೆಲಬರ್ ಬೆಳ್ದಿಂಗಳಂ ಪೀರ್ವ ಪ
ಕ್ಕಿಗಳಂತಿರ್ಪರಳುರ್ಕೆಗೆಟ್ಟು ಕೆಲಬರ್ ಸೂರ್ಯಪ್ರಭಂಗಳ್ಕಿ ಗೂ
ಗೆಗಳಂತಿರ್ಪರದಭ್ರ ಗಹ್ವರ ತಮೋಗಮಗ್ನ[೩]ಖಗಾಧೀಶ್ವರರ್ ೮೪

ಅಪ್ರತಿ[೪]ರಥ[೪] ತೇಜಕ್ಕೆ ಖ
ಗಪ್ರಭುಗಳ ಕಣ್ಗಳಿಂದುಮೇಽನಳ್ಕು[೫]ಮೆ ಸೂ
ರ್ಯಪ್ರಭನ ತೊಳಪ ಕರವಾ
ಳಪ್ರಭೆಗಳ್ಕುವುವು ಕಣ್ಗಳಂ ಖಗಕರಣಂ ೮೫

೮೨. ಬಿಳಿಯ ಮನೆಗಳೆನಿಸಿ, ಪಟ್ಟಣದ ಇತರ ಮನೆಗಳನ್ನೂ ತಮ್ಮ ಪ್ರಭೆಯಿಂದ ಬೆಳಗುವ ಸಾಲು ಸಾಲಾದ ಉಪ್ಪರಿಗೆಯ ಸೌಧಗಳು ಇವೇನು ಉಜ್ವಲವಾದ ಬೆಳ್ಳಿ ಬೆಟ್ಟವಿಕ್ಕಿದ ತತ್ತಿಗಳೊ ಏನೊ ಎಂಬಂತೆ ಥಳಥಳಿಸುವುವು.

೮೩. ಯಶಸ್ಸಿಗೆ ಆಶ್ರಯನೂ ಕಾಂತಾಜನಕ್ಕೆ ಮನ್ಮಥನೂ ನೀತಿಗೆ ಕಣ್ಣಾದವನೂ ಮಹಾಪರಾಕ್ರಮವೆಂಬ ಆನೆಗೆ ಮದದಂತಿರುವವನೂ ಪ್ರಬಲ ಶತ್ರುಗಳಿಗೆ ಸಿಡಿಲಾಗಿರುವವನೂ ಐಶ್ವರ್ಯಲಕ್ಷ್ಮಿಗೆ ಸಂತೋಷವುಂಟುಮಾಡುವವನೂ ಸ್ತುತ್ಯನೂ ಅಭ್ಯುದಯಪರನೂ ಸರಸ್ವತಿಯನ್ನು ಒಲಿಸಿಕೊಂಡವನೂ ಜನ್ಮತಃ ದಯಾವಂತನೂ ವಿಜಯಾರ್ಧ ಪರ್ವತ ಶರಭನೂ ಎನಿಸಿದ ಸೂರ್ಯಪ್ರಭನು ಆ ಪಟ್ಟಣವನ್ನು ತೇಜಸ್ವಿಯಾಗಿ ಆಳುತ್ತಿರುವನು.

೮೪. ಸೂರ್ಯಪ್ರಭನೊಡನೆ ಯುದ್ಧಕ್ಕೆ ಬಂದ ಖೇಚರರಾಜರಲ್ಲಿ ಕೆಲವರು ಹೆದರಿಕೊಂಡು ಬೇರೆ ಬೆಟ್ಟಗಳಿಗೆ ಹಾರಿ ಹೋಗಿ ಅಲ್ಲಿ ಹೆಳವರಾಗಿ ಕುಳಿತರು; ಕೆಲವರು ತೇಜಗೆಟ್ಟು ಬೆಳ್ದಿಂಗಳನ್ನು ಕುಡಿದು ಬದುಕುವ ಚಕೋರ ಪಕ್ಷಿಗಳಂತಾಗಿರುವರು; ಕೆಲವರು ಈತನೆದುರಿಗೆ ಬರಲು ಬೆಟ್ಟದ ಎತ್ತರದಲ್ಲಿರುವ ಗುಹೆಗಳನ್ನು ಹೊಕ್ಕು ಕತ್ತಲಲ್ಲಿಯೆ ಅಡಗಿಕೊಂಡಿರುವರು.

೮೫. ಅಸಮಾನ ರಥನೆನಿಸಿದ ಸೂರ್ಯನ ತೇಜಕ್ಕೆ ಖೇಚರರಾಜರ ಕಣ್ಣಿಂದಾದರೂ ಅಳುಕುವುದುಂಟೆ? ಸೂರ್ಯಪ್ರಭನ ಖಡ್ಗ ಪ್ರಭೆಗೆ ಮಾತ್ರ ಅವರು ಕಣ್ಣುಗಲು ಅಳುಕುವುವು.

---

೧ ಗಿದುವು (ಕಾ). ೨ ಗಿ (ಕ, ಕಾ, ಮ) ೩ ವಾಗ (ಕ). ೪ ಮದ (ಮ). ೫ ನುಣ್ಮು (ಕ, ಮ).

ಆ ಗಗನಚರನ ಜಗದೊ
ಳ್ಮೆಗಿಲ್ಲದ ವಿಕ್ರಮಕ್ಕೆ ರಿಪುಖಗಪತಿಗಳ್
ಕೂಗಡಗಿ ಬೀತ ಮಾವಿನ
ಕೋಗಿಲೆಯೊಳ್ (ಲ್) ಕೊಂಬುಗೊಂಡು ಕುಂಬುತ್ತಿರ್ಪರ್ ೮೬

ವ|| ಆ ಮಹಾರಾಜನೆಂಬ ಮಹಾ ವರಾ[1]ಹನ ದೋರ್ದಂಡಮೆಂಬ ದಾಡೆಯಂ ನೆರ್ಮಿ

ಕುಂತಳಪಜ್ತೆ ಬಂದ ಬನದಂತಿರೆ ಪೆರ್ಮೊಲೆ ಪರ್ವತಂಗಳೆಂ
ಬಂತಿರೆವಕ್ತ್ರಮಬ್ಜವನದಂತಿರೆ ತನ್ನುಡೆ[2] ವಾರ್ಧಿಸುತ್ತಿಕೊಂ
ಡಂತಿರೆ ಕಾಮನಾಳ್ವರಸನಂತಿರೆ ಮೆಯ್ವೆಳಗಾತನೊಂದು ತೇ[3]
ಜಂ ತೊಳಪಂತರೀಕ್ಷಣಕೆ ಧಾರಿಣಿ ಧಾರಿಣಿಯಂತಿರೊಪ್ಪುಗುಂ ೮೭

ತಲ್ಲಲನೆಯ ಲುಳಿತಾಳಕ
ಮೆಲ್ಲಂ ನಿಜಕಾಂತಿಯಿಂದಮದಟಲೆಯೆ ಕರಂ
ತಲ್ಲಣಿಸಿಸೋಲ್ತು ನೀಲಂ
ಪುಲ್ಲಂ ಕರ್ಚಿದುದು ಭೀತಿ ಬಾಟಿಸದಾರಂ ೮೮

ಅಂತೆನಿಸಿದ ಸೂರ್ಯಪ್ರಭ
ಕಾಂತಂಗಂ ನೆಗಟ್ದಿ ಧಾರಿಣೀಕಾಂತೆಗಮಾ
ದಂ ತನಯನಚಿಂತ್ಯಗುಣಂ
ಚಿಂತಾಗತಿಯೆಂಬೊನಖಿಳ ವಿದ್ಯಾಳಂಬಂ ೮೯

೮೬. ಆ ಖೇಚರರಾಜನ ಅತ್ಯಧಿಕರಾದ ಪರಾಕ್ರಮವನ್ನು ಕಂಡು ಆತನ ಶತ್ರುಗಳಾದ ಖೇಚರ ಪತಿಗಳು, ಒಣಗಿದ ಮಾಮರದಲ್ಲಿ ಕಂಠಶಕ್ತಿಯಿಲ್ಲದೆ ಕುಳಿತುಕೊಂಡ ಕೋಗಿಲೆಯಂತೆ ಕೊರಗುತ್ತಿರುವರು.

ವ|| ಆ ಮಹಾರಾಜನೆಂಬ ಮಹಾವರಾಹನ ಬಲಿಷ್ಠ ತೋಳೆಂಬ ಕೋರೆಯನ್ನು ಆಶ್ರಯಿಸಿ -

೮೭. ತನ್ನ ತಲೆಗೂದಲು ವನಗಳ ಸಾಲಿನಂತೆ, ತೋರ ಮೊಲೆಗಳು ಪರ್ವತಗಳಂತೆ, ಮುಖರು ತಾವರೆಗೊಳದಂತೆ, ಉಡುವ ಸೀರೆ, ಸುತ್ತುವರಿದ ಸಮುದ್ರದಂತೆ, ಕಾಮನು ತನ್ನ ಅರಸನಂತೆ, ಮೈಕಾಂತಿ ಆತನ ಒಂದು ತೇಜದಂತೆ ಇರಲಾಗಿ ಧಾರಿಣಿಯೆಂಬ ಆತನ ರಾಣಿ ಧಾರಿಣಿ (ಭೂದೇವಿ)ಯಂತೆ ಶೋಭಿಸುವಳು.

೮೮. ಆ ಚೆಲುವೆಯ ಚಂಚಲವಾದ ಮುಂಗುರುಳುಗಳು ತಮ್ಮ ಉಜ್ವಲವಾದ ಕಾಂತಿಯಿಂದ ಧಿಕ್ಕರಿಸಲಾಗಿ, ಕಳವಳಿಸಿ ಸೋಲೊಪ್ಪಿಕೊಂಡು ನೀಲರತ್ನವು ಹುಲ್ಲು ಕಚ್ಚಿತು. (ನೀಲ ರತ್ನಕ್ಕೆ 'ತೃಣಗ್ರಾಹಿ' ಎಂಬ ಹೆಸರೂ ಉಂಟು. ಹುಲ್ಲು ಕಚ್ಚುವುದು ಶರಣಾಗತಿಯ ಲಕ್ಷಣ.)

೮೯. ಹೀಗೆ ಖ್ಯಾತನಾದ ಸೂರ್ಯಪ್ರಭನಿಗೂ ಧಾರಿಣಿಗೂ ಗುಣವಂತನಾದ ಹಾಗೂ ಸಮಸ್ತ ವಿದ್ಯೆಗಳಿಗೆ ನೆಲೆಯಾದ ಚಿಂತಾಗತಿಯೆಂಬ ಮಗನು ಹುಟ್ಟಿದನು.

---

೧ ಗಾ (ಮ). ೨ ಡಿ (ಕ). ೩ ರೋ (ಕಾ).

ಅಮೃತಾಂಶುಗೆ ಕಳೆ ಸಿರ್ಪಿಂ
ಗೆ ಮೌಕ್ತಿಕಂ ಪುಟ್ಟಿತೆನಿಸದೆಸೆದಿರೆ ಪುಟ್ಟಿ
ತ್ತಮೃತಾರ್ಣ[1]ವಕ್ಕೆ ಕಲ್ಪ
ದ್ರುಮವೆನಿಸಿದರಾ ಖಗೇಂದ್ರನುಂ ತತ್ಸುತನುಂ ೬೦

ಮೇಗೆನಿಸಿ ಜಗನ್ಮಂಗಳ
ನಾಗಲೊಡಂ ಧಾರಿಣೀಸುತಂ ನೆಗಟ್ದಾ ಚಿಂ
ತಾಗತಿಗೆ ತೇಜದಿಂ ಮುಂ
ತಾಗಿರಲಾದಿತ್ಯ ಸೋಮರನುಚರರಾದರ್ ೬೧

ಅಭಿನವ ಜಲಧರತತಿಗಳ್
ನಭಕ್ಕೆ ನೆಗೆ[2]ವುವು[2] ಖಗಾದ್ರಿಯ [3]ಶೆಯಿಂ ಸೂರ್ಯ
ಪ್ರಭತನಯನತುಳಭುಜಬಲ
ವಿಭವಂ ಪೊಡೆಸೆಂಡುವೊಯ್ದ ಬೆಟ್ಟಂಗಳವೋಲ್ ೬೨

ಕರುಣಿಸುವುದೆನ್ನ ತೇಜ
ಸ್ಫುರಣೆಗೆ ನೀನೆಂದು ಬೆರ್ಚಿ ಬೆಸಕೆಯ್ವವೊಲೇಂ
ಕರುಮಾಡಕ್ಕೋಲಗಿಪನೊ
ಖರಕರನಾ ಖಚರಚಕ್ರವರ್ತಿಯ ಸುತನಾ[4] ೬೩

೬೦. ಚಂದ್ರನಲ್ಲಿ ಹುಟ್ಟಿದ ಒಂದು ಕಳೆ ಅಥವಾ ಚಿಪ್ಪಿನಲ್ಲಿ ಹುಟ್ಟಿದ ಒಂದು ಮುತ್ತು ಎಂದೆನಿಸದೆ ಅಮೃತ ಸಮುದ್ರದಲ್ಲು ಹುಟ್ಟಿದ ಒಂದು ಕಲ್ಪವೃಕ್ಷವೆಂಬಂತೆ ಆ ರಾಜನೂ ಆತನ ಮಗನೂ ಇದ್ದರು.

೬೧. ಧಾರಿಣೀದೇವಿಯ ಮಗನಾದ ಚಿಂತಾಗತಿಯು ತನ್ನ ಅತಿಶಯವಾದ ತೇಜದಿಂದ ಜಗನ್ಮಂಗಳನಾಗಲು ಅವನ ಮುಂದೆ ತಮ್ಮ ತೇಜ ಹೀನವೆಂದು ಅರಿತು ಸೂರ್ಯಚಂದ್ರರು ಅವನನ್ನು ಹಿಂಬಾಲಿಸುವ ಸೇವಕರೆನಿಸಿದರು.

೬೨. ಚಿಂತಾಗತಿ ಕುಮಾರನು ಅಸಾಮಾನ್ಯನಾದ ತೋಳ್ಬಲದಿಂದ ಹೊಡೆ ಚೆಂಡಾಟಕ್ಕೆ ತೂರಿದ ಬೆಟ್ಟಗಳೊ ಏನೊ ಎಂಬಂತೆ ಹೊಸ ಮೋಡದ ಹಿಂಡುಗಳು ವಿಜಯಾರ್ಧಪರ್ವತದ ಶಿಖರದಿಂದ ಆಕಾಶಕ್ಕೆ ನೆಗೆಯುವುವು.

೬೩. ನನ್ನ ತೇಜಸ್ಸು ಹಬ್ಬುವುದಕ್ಕೆ ಒಂದಿಷ್ಟು ಅನುಗ್ರಹ ಮಾಡೆಂದು ಭಯ ಭಕ್ತಿಯಿಂದ ಸೇವೆ ಮಾಡುತ್ತಿರುವಂತೆ ಸೂರ್ಯನು ಆ ಖೇಚರ ಚಕ್ರವರ್ತಿಯ ಪುತ್ರನ ಉಪ್ಪರಿಗೆಯನ್ನು ಬೆಳಗುವನು.

---

೧ ರ್ಣ (ಕ). ೨ ವವು (ಕ, ಮ, ಪ). ೩ ಯೆ (ಕಾ, ಮ). ೪ ನಂ (ಕಾ, ಮ).

ಸಂತ[೧]ಸಮಂ ಕೀರ್ತಿಯ ಬೆಳ
ಗಂ ತೃಪ್ತಿಯನಮರಫಣಿ ನರಾಳಿಗೆ ಕುಡುವೀ
ಚಿಂತಾಗತಿಯೆ ಜಗತ್ತ್ರಯ
ಚಿಂತಾಮಣಿಯೆನ್ನದೆಂಬನಿನ್ನೇನೆಂಬಂ ೯೪

ಘನಕೇಶಂ ದರಹಾಸವರ್ಷಿ[೨]ವದನಂ ತಾಂಬ್ರಾಧರಂ ಲೋಳಲೋ
ಚನಮಾಜಾನು ವಿಳಂಬಿ ಬಾಹು ಸುವಿಶಾಳೋರಸ್ಥಳಂ ತಪ್ತ ಕಾಂ
ಚನವರ್ಣಂ ತನುಮಧ್ಯನಾತನ[೩]ತನುಪ್ರಾಯಂ ನವಾರೂಢ ಯೌ
ವನಮೇನೋಡಿಸಿದತ್ತೊ ಮುಗ್ಧ ಖಚರೀನೇತ್ರತ್ರಿಭಾಗಂಗಳಂ ೯೫

ಮಿಂಚಿನ ತಟ್ಟಿಯಂ[೪] ಬಳಸಿದಂತಿರೆ ಕಣ್ಗಳ ಮಿಂಚು ಮೇಗೆ ಪೂ
ಗೊಂಚಲ ಪಂದರಂ ಪಡೆಯೆ ಪೆಂಡಿರ ವಕ್ತ್ರಸಹಸ್ರಕಾಂತಿ ಚ
ಲ್ಲಂ ಚಳಯಂಗುಡುತ್ತುಮಿರೆ ರಾಗರಸಾಮೃತದಿಂ ವಿನೋದಮಂ
ವಂಚಿಸದೋಲಗಂಗುಡುವನಂಬರದೊಳ್ ಖಚರೇಂದ್ರನಂದನಂ ೯೬

ರಸಮಂ ಸೂಸೆ ಮುಖೇಂದು ಕೆಯ್ ಮದನನಂ ಕೆಯ್ವೀಸೆ ಬೆಳ್ದಿಂಗಳಂ
ಪೊಸತಂ ಪುಟ್ಟಿಸೆ ದೃಷ್ಟಿ ಮೆಯ್ ಪೊಳೆವ ಮಿಂಚಂ ಪೋಲೆ ಚೆಲ್ವಾಗಿ ಬ
ಣ್ಣ ಸರಂ ಕಾಬ್ಬುರಮೇಟಿ ಕಾಕಳಿ ನಭೋರಂಗಾಗ್ರದೊಳ್ನಿಚ್ಚಲಾ
ಡಿಸುವಂ ಪಾಡಿಸುವಂ ವಿಯಚ್ಚರಿಯರಂ ವಾ[೫]ಗ್ಗೇಯ[೫] ವಿದ್ಯಾಧರಂ ೯೭

೯೪. ದೇವ, ನಾಗ, ಭೂಜನಕ್ಕೆಲ್ಲ ಸಂತೋಷವನ್ನು ಕೀರ್ತಿಯ ಬೆಳಕನ್ನೂ ಒದಗಿಸುವ ಚಿಂತಾಗತಿಕುಮಾರನನ್ನು ಮೂಲೋಕದ ಚಿಂತಾಮಣಿಯೆಂದಲ್ಲದೆ ಇನ್ನೇನೆಂದು ಹೆಸರಿಸೋಣ?

೯೫. ದಟ್ಟವಾದ ತಲೆಗೂದಲು, ನಸುನಗೆ ಸೂಸುವ ಮುಖ, ಕೆಂದುಟಿ, ಚಂಚಲವಾದ ಕಣ್ಣುಗಳು, ಮೊಳಕಾಲವರೆಗೆ ಬರುವ ನೀಳವಾದ ತೋಳು, ವಿಸ್ತಾರವಾದ ಎದೆ, ಪುಟವಿಟ್ಟ ಚಿನ್ನದಂತಹ ಮೈಬಣ್ಣ, ತೆಳುವಾದ ನಡು - ಇವುಗಳಿಂದ ಪ್ರತಿ ಮನ್ಮಥನಂತಿರುವ ಆ ಕುಮಾರನಿಗೆ ಹೊಸ ಯೌವನವೂ ಪ್ರಾಪ್ತವಾಯಿತೆಂದರೆ, ಮುಗ್ಧ ಖೇಚರಯುವತಿಯರ ಕಣ್ಣುಗಳು ಅವನ ಮೇಲೆ ಎಷ್ಟು ಬಗೆಯಾಗಿ ಎಷ್ಟೊಂದು ಹರಿದಾಡಿರಬೇಡ!

೯೬. ಕಣ್ಣುಗಳ ಮಿಂಚು, ಮೇಲೊಂದು ಮಿಂಚಿನ ವಿಲಾಸವನ್ನು ಕಟ್ಟಿದಂತಿರಲಾಗಿ, ಸ್ತ್ರೀಯರ ಸಾವಿರಾರು ಮುಖಗಳ ಕಾಂತಿಯು ಹೂಗೊಂಚಲಿನ ಹಂದವವನ್ನೇ ನಿರ್ಮಿಸಲಾಗಿ, ಸರಸ ವಿಲಾಸವು ರಾಗರಸದಿಂದ ಚಳಿಯ ಕೊಡುತ್ತಿರಲಾಗಿ ಆ ಖೇಚರ ರಾಜಪುತ್ರನು ಆಕಾಶದಲ್ಲಿ ವಿನೋದದಿಂದ ಓಲಗ ನಡೆಯಿಸುವನು.

೯೭. ಮುಖಚಂದ್ರನು 'ರಸ'ವನ್ನು ಸೂಸಲಾಗಿ, ಕೈ ಮನ್ಮಥನನ್ನೂ 'ಸ್ಪರ್ಧಿಸಲು ಬಾರೆ'ದು ಬೀಸಿ ಕರೆಯುವಂತಿರಲಾಗಿ, ಕಣ್ಣುಗಳು ಹೊಸದೊಂದು ಬೆಳ್ದಿಂಗಳನ್ನು

೧ ತೊ (ಕಾ). ೨ ರ್ಷ (ಕ, ಪ). ೩ ನು (ಕ) ೪ ಯೇಂ (ಕ). ೫ ಗೆಯ್ಯೆ (ಕ, ಪ).

ಇವನೆಮ್ಮಾಳ್ದನನಿಕ್ಕಿ ಸಾಧುವಿನವೋಲ್ ತಾನಲ್ಲದಂತಿಲ್ಲಿ [1]ಪೊ
ಕ್ಕಿಡಿದಿರ್ಪಂ ಜಿನನೆಂದು ಪೊಂಬಸದಿಯಂ ಪುಷ್ಪಾಸ್ತ್ರಸೇನಾಳಿಳ ಮು
ತ್ತುವವೋಲ್ಪೆಂಡಿರ ತಂಡಮೊಪ್ಪೆ ಬಲಗೊಂಡಷ್ಟಾಹ್ನಿಕಾರ್ಚಾಮಹೋ
ತ್ಸವಮಂ ಮಾಡುವನಿಂದ್ರನಾಗಿ ಮುದದಿಂ ವಿದ್ಯಾವಧೂವಲ್ಲಭಂ ೯೮

ವ॥ ಇದು ಮೃದುಪದಬಂಧ ಬಂಧುರ ಸರಸ್ವತೀ ಸೌಭಾಗ್ಯಭ್ಯಂಗ ಭಂಗಿನೀ ನಿಧಾನದೀಪವರ್ತಿ ಚತುರ್ಭಾಷಾ ಕವಿಚಕ್ರವರ್ತಿ ನೇಮಿಚಂದ್ರಕೃತಮುಂ ಶ್ರೀಮತ್ಪ್ರತಾಪ ಚಕ್ರವರ್ತಿ ವೀರಬಲ್ಲಾಳದೇವ ಪ್ರಸಾದಾಸಾಧಿತ ಮಹಾಪ್ರಧಾನ ಪದವೀವಿರಾಜಿತ ಸೆಜ್ಜೆವಳ್ಳ ಪದ್ಮನಾಭಕಾರಿತಮಪ್ಪ ನೇಮಿನಾಥ ಪುರಾಣದೊಳ್ ದ್ವಿತೀಯಾಶ್ವಾಸಂ

ಹುಟ್ಟಿಸುತ್ತಿರಲಾಗಿ, ಮೈ ಹೊಳೆಯುವ ಮಿಂಚನ್ನು ಹೋಲುತ್ತಿರಲಾಗಿ, ಮೃದುವಾದ ಸುಸ್ವರದ ಗಾಯನ ಮಹಾಪೂರದಂತೆ ಹೊಮ್ಮುತ್ತಿರಲಾಗಿ ವಾಗ್ಗೇಯವು ವಿದ್ಯನಿಪುಣ ನಾದ ಆ ಕುಮಾರನು ಪ್ರತಿನಿತ್ಯವೂ ಖೇಚರಿಯರನ್ನೂ ಆಕಾಶರಂಗಸ್ಥಳದಲ್ಲಿ ಕುಣಿಸಿ, ಹಾಡಿಸುವನು.

೯೮. "ನಮ್ಮ ಒಡೆಯನಾದ ಕಾಮನನ್ನು ಇಕ್ಕಿ ಮೆಟ್ಟಿ, ತಾನೇನೂ ಅರಿಯದ ಸಾಧುವೆಂಬಂತೆ ಇಲ್ಲಿ ಬಂದು ಅಡಗಿಕೊಂಡಿರುವ ಜಿನನು ಇವನೇ" ಎಂದು ಚಿನ್ನದ ಬಸದಿಯನ್ನು ಮುತ್ತಿದ ಕಾಮನ ಸೈನ್ಯವೊ ಏನೊ ಎಂಬಂತೆ ಸ್ತ್ರೀ ಸಮೂಹವು ಒಪ್ಪುತ್ತಿರಲಾಗಿ, ಬಸದಿಗೆ ಪ್ರದಕ್ಷಿಣೆ ಹಾಕಿ ವಿದ್ಯಾಧಿಪತಿಯಾದ ಆ ಕುಮಾರನು ಅಷ್ಟಾಹ್ನಿಕ ಮಹೋತ್ಸವವನ್ನು ನೆರವೇರಿಸುವನು.

॥ ದ್ವಿತೀಯಾಶ್ವಾಸ ಮುಗಿಯಿತು ॥

---

೧ ನಾಳೀಯ (ಕ).

ತೃತೀಯಾಶ್ವಾಸಂ

ಶ್ರೀಯನಗಲುರದ ಮುತ್ತೆನೆ
ಕೇಯೂರಂ ಬೀರ ಸಿರಿಯ ಕಣ್ಬೆಳಗೆನೆ ಕೆಂ
[೧]ಬಾಯ ಚೆಲುವ[೧]ಜನ ಸತಿ[೨]ಯೆನೆ[೨]
ಜೀಯೆನಿಸಿದನಮಳಮೂರ್ತಿ ಕೀರ್ತಿಪತಾಕಂ ೧

ಸಲೆ ಚಿಂತಾಗತಿ ತನ್ನಚಿಂತ್ಯ ಮಹಿಮಾವಷ್ಟಂಭ ವಿದ್ಯಾಸಮು
ಜ್ವಲ ತೇಜಃಪ್ರಭೆಯಿಂದೆ ತನ್ನ ರುಚಿಮತ್ತಾರಾದ್ರಿಯಂ ಕಾಂಚನಾ
ಚಲಮಂ ಮಾಡಿಯೆ ಕಾಂಚನಾಚಲಮುಮಂ ತಾರಾದ್ರಿಯಂ ಮಾಡಿದಂ
ನೆಲೆಗೊಂಡೊಪ್ಪುವ ಕೀರ್ತಿ ಕೌಮುದಿಯಿನಿನ್ನೇನೆಂಬ ಸಾಮರ್ಥ್ಯಮೋ ೨

ರಾಗಕ್ಕೊಡವುಟ್ಟುವವೋಲ್
ಭೋಗಮುಮುಪಭೋಗಮುಂ ಶುಭೋದಯದಿಂ[೩] ಚಿಂ
ತಾಗತಿಗಾದರ್ಕೆೞ ಮ
ನೋಗತಿಯುಂ ಚಪಳಗತಿಯುಮೆಂಬನುಜಾತರ್ ೩

ವ॥ ಅಪ್ಪುದುಮಾಸುರಮಪ್ಪಾ[೪] ಸಿರಿಯನೊರ್ವನೆ ನಿರ್ವಂದದಿನಂತವಂ ತವೆಯುಣಲಾಱದೆ ಬಹುರೂಪಿಣೀವಿದ್ಯೆಯಿಂ ಮತ್ತೆರಡು ರೂಪಾದಂತೆ ತಮ್ಮಂದಿರಿರ್ವರ್ವೆರಸು ಚಿಂತಾಗತಿ ಖೇಚರ[೫]ರಾಜ್ಯ

೧. ಲಕ್ಷ್ಮಿಯೇ ವಿಶಾಲವಕ್ಷದ ಮುತ್ತಾಗಿ, ವೀರಶ್ರೀಯ ಕಣ್ಬೆಳಗೇ ತೋಳಿನ ಕೇಯೂರವಾಗಿ, ಸರಸ್ವತಿಯ ಪೀಠವೇ ತನ್ನ ಚೆಲುವ ಮುಖವಾಗಿ ಇರುವ ಆ ನಿರ್ಮಲ ಮೂರ್ತಿಯ ಕೀರ್ತಿಶಾಲಿಯಾಗಿದ್ದನು.

೨. ಆ ಚಿಂತಾಗತಿಯು ತನ್ನ ಅತಿಶಯವಾದ ವಿದ್ಯೆ ಹಾಗೂ ಮಹಿಮೆಯೆಂಬ ಚಿನ್ನದ ಕಾಂತಿಯಿಂದ ಆ ಬೆಳ್ಳಿ ಬೆಟ್ಟವನ್ನು ಚಿನ್ನದ ಬೆಟ್ಟವಾಗಿ ಪರಿವರ್ತಿಸಿದನು; ತನ್ನ ಸ್ಥಿರವಾದ ಕೀರ್ತಿಯೆಂಬ ಬೆಳ್ದಿಂಗಳಿಂದ ಚಿನ್ನದ ಬೆಟ್ಟವನ್ನು ಬೆಳ್ಳಿಬೆಟ್ಟವಾಗಿ ಮಾರ್ಪಡಿಸಿದನು. ಇದೆಂತಹ ಸಾಮರ್ಥ್ಯ!

೩. ರಾಗಕ್ಕೆ ಭೋಗ ಹಾಗೂ ಉಪಭೋಗಗಳು ಒಡಹುಟ್ಟುಗಳಾಗಿ ಬರುವಂತೆ, ಪುಣ್ಯವಶದಿಂದ ಮನೋಗತಿ ಹಾಗೂ ಚಪಳಗತಿ ಎಂಬ ಇಬ್ಬರು ಅವನಿಗೆ ತಮ್ಮಂದಿರಾದರು.

ವ॥ ಅತ್ಯಧಿಕವಾದ ಆ ಸಂಪತ್ತನ್ನೆಲ್ಲ ತಾನೊಬ್ಬನೆ ಭೋಗಿಸಲಾರದೆ, ಬಹುರೂಪಿಣೀ ವಿದ್ಯೆಯಿಂದ ಇನ್ನೆರಡು ರೂಪಗಳನ್ನು ಧರಿಸಿದನೊ ಏನೊ ಎಂಬಂತೆ

---

೧ ಬಾಯುಮ (ಪ), ಬಾಯಮ (ಮ), ಬಾಯವ (ಕ), ೨ ಯೆಂದೆನೆ (ಕ, ಮ, ಪ). ೩ ಮುಂ (ಕಾ). ೪ ಪ್ಪ (ಕ). ೫ ರಂ (ಮ).

[೧]ಮನನುಭವಿಸುತ್ತು[೧] ಮಿ[೨]ರ್ಪಿನಮಾ ಶ್ರೇಢಿ[೩]ಯರಿಂದಮ ಪುರವನಾಳ್ವ[೪]ರಿಂಜಯ ಖಚರಪತಿಗಮಾತನ ಸತಿಯಜಿತಸೇನಾದೇವಿಗಂ ವಿಳಾಸವತಿಯೆಂಬ ಮಗಳಾಗಿ

ರತಿಯಂ ರೂಪಿಂಗೆ ಮೆಚ್ಚಳ್ ಸಿರಿಗೆ ಸಿರಿಯುಮಂ ಪುಲ್ಗೆ ಕೈಕೊಳ್ಳಳಾ ಭಾ
ರತಿಯಂ ವಿದ್ಯಾಗುಣಕ್ಕೊಂದಡಕೆಗಮೆಣಿಸಲ್ಕೇಳಿಮುತ್ಸೇಕಮಂ ಪಾ
ರ್ವತಿಯಂ ತನ್ನೊಂ[೫]ದು ಪೆಂಪಿಂಗರೆಗವಡಿಕೆಗಂ[೬] ಕೊಳ್ಳಲೇವೇಟ್ಟಿನುದ್ಧ್ವ[೭]
ತ್ತ್[೮]ತೆಯಂ ಸೌಭಾಗ್ಯಸಂಪತ್ತಿಗೆ ಖಗನ ಮಗಳ್ ರಂಭೆಯಂ ಸಿಂಬೆಯೆಂಬಳ್ ೪

ತೊಡರ್ದೀ ಗಾಣದ ಗೂಳಿಯಂತೆ ತಿರಿಯುತ್ತಿಂತಿರ್ಪ[೯]ರೇ ಮೆಟ್ಟಿದೊಂ
ದೆಡೆಯಂ ಮೆಟ್ಟಿ ತರಸ್ವಿಗಳ್ ಬಡಗಣಿಂ ತೆಂಕಣ್ಗೆ ಮೇಣ್ತೆಂಕಣಿಂ
ಬಡಗಣ್ಗಾಯೆರಡಿರ್ಕೆ[೧೦] ಮೇಣ್ಪಡುವಣಿಂ ಮೂಡಣ್ಗೆ ತಾಂ ಪಾಜಿಲಾ *
ರ್ಪೊಡೆ ಬಂದೆನ್ನೊಡವಾಜುಗೆಂದು ನುಡಿವಳ್ಮತ್ತಾಕೆ ಮಾರ್ತಂಡನಂ ೫

ಗಂಡರ ಕೇಡಂ [೧೧]ಕೇಳಿರೆ[೧೧]
[೧೨]ಪೆಂಡಿರ[೧೨] [೧೩]ಮಾತಂತದಿರ್ಕೆ[೧೩] ಖ[೧೪]ಚರರ[೧೫]ವಳ್ಗೇಂ
ಭಂಡಂ ಬಾಂಬರಿಯೊಳ್ ಮಾ*
ರ್ತಂಡನುಮಂ ಪುಲ್ಲ ಕಡ್ಡಿಗಂ ಕೈಕೊಳ್ಳಳ್ *೬

ಚಿಂತಾಗತಿಯು ಇಬ್ಬರೂ ತಮ್ಮಂದಿರೊಡನೆ ಖೇಚರ ರಾಜ್ಯಸುಖವನ್ನು ಅನುಭವಿಸುತ್ತಿದ್ದನು. ಆ ಶ್ರೇಢಿಯ ಅರಿಂದಮವೆಂಬ ಪುರವನ್ನಾಳುವ ಅರಿಂಜಮನೆಂಬ ಖೇಚರರಾಜನಿಗೂ ಆತನ ಹೆಂಡತಿಯಾದ ಅಜಿತಸೇನಾದೇವಿಗೂ ವಿಳಾಸವತಿಯೆಂಬ ಮಗಳಿದ್ದಳು.

೪. ಆಕೆ. ರತಿಯ ರೂಪವನ್ನು ಮೆಚ್ಚಳು; ಲಕ್ಷ್ಮಿಯ ಸಿರಿಯನ್ನು ಹುಲ್ಲುಕಡ್ಡಿಗೂ ನಿಕೃಷ್ಟವಾಗಿ ಕಡೆಗಣಿಸುವಳು; ವಿದ್ಯಾಗುಣದಲ್ಲಿ ಸರಸ್ವತಿಗೆ ಒಂದು ಅಡಕೆಯ ಬೆಲೆಯನ್ನು ನೀಡಳು; ಆಕೆಯ ದರ್ಪವೆಂತಹುದೆಂದು ಕೇಳಿ. ತನ್ನ ಘನತೆಯ ಮುಂದೆ ಪಾರ್ವತಿಯ ಘನತೆಗೆ ಒಂದು ಅರ್ಧ ಕವಡೆಯ ಬೆಲೆಯೂ ಇಲ್ಲವೆಂದೆಣಿಸುವಳು; ಸೌಭಾಗ್ಯ ಸಂಪತ್ತಿನಲ್ಲಿ ರಂಭೆಯನ್ನು 'ಇವಳೇನು? ಒಂದು ಸಿಂಬೆ!' ಎಂದೆನ್ನುವಳು. ಅವಳ ಬಿಂಕವನ್ನು ಏನೆಂದು ಬಣ್ಣಿಸಲಿ?

೫. ನಿಜವಾಗಿ ವೇಗಶಾಲಿಗಳಾದವರು ಗಾಣಕ್ಕೆ ಹೂಡಿದ ಎತ್ತಿನಂತೆ ತುಳಿದ ಹಾದಿಯನ್ನೇ ತುಳಿಯುತ್ತ, ಉತ್ತರದಿಂದ ದಕ್ಷಿಣಕ್ಕೂ, ದಕ್ಷಿಣದಿಂದ ಉತ್ತರಕ್ಕೂ ಸುಮ್ಮನೆ ತಿರುಗುತ್ತಿರುವರೆ? ಆ ಎರಡೂ ದಿಕ್ಕುಗಳು ಒತ್ತಟ್ಟಿಗಿರಲಿ. ಪಶ್ಚಿಮದಿಂದ ಪೂರ್ವಕ್ಕೆ ಹಾರುವ ಸಾಮರ್ಥ್ಯವಿದ್ದರೆ ಬಂದು ನನ್ನೊಡನೆ ಸ್ಪರ್ಧಿಸಲಿ ಎಂದು ಆಕೆ ಸೂರ್ಯನಿಗೆ ಸವಾಲು ಎಸೆಯುವಳು.

---

೧ + ಸುಖ (ಮ). ೨ ತ್ತಿ (ಕಾ). ೩ ಣಿ (ಕಾ). ೪ + ಮ (ಕಾ), + ಳು (ಕ, ಮ). ೫ ಮ್ಮೊಂ (ಮ). ೬ ಯಂ (ಕ). ೭ ದ್ಧ್ವ (ವ) X (ಕ). ೮ ದ್ಧ (ಕ, ಮ). ೯ ರ್ಪಿ (ಕಾ). ೧೦ ಕ್ಕೆ (ಕ, ಮ). * ಈ ಪದ್ಯಗಳು ಕಾ, ಮ ಪ್ರತಿಗಳಲ್ಲಿ ಹಿಂದುಮುಂದೆ ಆಗಿವೆ. ೧೧ ಪೆಂಡಿರ (ಕ). ೧೨ ತಂಡದ (ಕ), ತಂಡಂ (ಪ). ೧೩ ಮಾಡುತಿರಿರ್ಕೆಮ (ಪ). ೧೪ ಖೇ (ಕ). ೧೫ ನ (ಕ).

ಮೇಗಿಲ್ಲಿನ್ನೀಕೆಗಾರುಂ ಗಗನಗತಿಯೊಳೆಂಬೊಂದೆ ಹೃದ್ಗರ್ವಮೇ ವಿ
ದ್ಯಾಗರ್ವಂ ಪ್ರಾಯಗರ್ವಂ ಕುಲದ ಚಲದ ಗರ್ವಂ ಕಳಾಪ್ರೌಢಿ ಗರ್ವಂ
ಶ್ರೀಗರ್ವಂ ರೂಪಗರ್ವಂ ಪ್ರಬಳ ಸಹಜ ಸೌಭಾಗ್ಯಗರ್ವಂ ಜಯಕ್ರೀ
ಡಾಗರ್ವಂ ಕೂಡೆ[೧] ವಿದ್ಯಾಧರಿಗೆ ಪಡೆದುವೇೞ[೨]ಂಟು ಸೊರ್ಕಿಂಗೆ ಸೊರ್ಕಂ ೭

ಗಾಡಿಗೆ ಮರು[೩]ಳ್ದು ತನ್ನಂ
ಬೇಡಲೆ ಸಲೆ ಬಂದ ಖಚರರಂ ಗತಿಯೊಳ್ಕೀ
ೞ್ಮಾಡಿ ಕೊಱಚಾಡಿ ಕಿವಿಗಳ[೪]
ನಾಡಿಸಿ ಬಿಡುವಳ್ವಿನೋದಮಿದು ಖೇಚರಿಯಾ ೮

ಅಮರಗಿರಿ ಶಿಖರದಿಂ ಪು
ಷ್ಪಮಾಲೆಯಂ ಬಿಟ್ಟು ಮೂಮೆ ಬಲಗೊಂಡಾ ಶೈ
ಲಮನವಳೆ[೫]ಳೆ ಮುಟ್ಟದ ಮು
ನ್ನಮೆ ಮಾಲೆಯನೈದಿ ಪಿಡಿವಳೆನ್ನದೊ[೫] ವೇಗಂ ೯

ಬಾಳ[೬]ಕರ[೭]ಮು[೮]ಂತೆ ಪಾಱುಂ
ಬಾಳಂ ಮಸೆವಂತೆ ಪಾಱುತನಮಿಂತಾಯ್ತಾ
ಕೇಳಿನ್ನೇನುಮ[೯]ನೆನ್ನಂ[೯]
ಗಾಳಿಗೆ ಗಱೆ ಮೂಡಿ[೧೦]ತೆಂದು[೧೦] ಮೋನಂಗೊಳ್ವಂ[೧೧] ೧೦

೬. ಅವಳೊಡನೆ ಸ್ತ್ರೀಯರು ಸ್ಪರ್ಧಿಸುವ ಮಾತಂತೂ ದೂರವೆ ಉಳಿಯಿತು. ಇನ್ನು ಗಂಡುಗಳ ಪಾಡನ್ನು ಕೇಳುವುದೆ? ಆಕಾಶಗಮನದಲ್ಲಿ ಸೂರ್ಯನನ್ನು ಒಂದು ಹುಲ್ಲುಕಡ್ಡಿಗೆ ಸಮನಲ್ಲವೆಂಬುವಳ ಮುಂದೆ, ಖೇಚರರು ಯಾವ ಲೆಕ್ಕಕ್ಕೆ ಬಂದಾರು?

೭. ಆಕಾಶಗಮನದಲ್ಲಿ ತನ್ನನ್ನು ಮೀರುವವರಾರೂ ಇಲ್ಲವೆಂಬ ಗರ್ವ, ವಿದ್ಯಾಗರ್ವ, ಯೌವನ ಗರ್ವ, ಕುಲದಗರ್ವ, ಚಲದ ಗರ್ವ, ಕಲಾಪ್ರಾವಿಣ್ಯದ ಗರ್ವ, ಸಿರಿಯ ಗರ್ವ, ರೂಪಗರ್ವ, ಅಧಿಕವಾದ ಸಹಜ ಸೌಭಾಗ್ಯಗರ್ವ, ಜಯಕ್ರೀಡಾಗರ್ವ - ಇವೆಲ್ಲವೂ ಕೂಡಿ ಆ ಖೇಚರಿಗೆ ಮೊದಲೇ ಇದ್ದ ಸೊಕ್ಕಿಗೆ ಇನ್ನೂ ಏಳೆಂಟು ಸೊಕ್ಕುಗಳನ್ನು ಒದಗಿಸಿದುವು.

೮. ತನ್ನ ಚೆಲುವಿಗೆ ಮರುಳಾಗಿ ಮದುವೆಯಾಗಲು ಬಂದ ಖೇಚರನನ್ನು ಆಕೆ ಗತಿ ಸ್ಪರ್ಧೆಯಲ್ಲಿ ಹಿಂದೆ ಹಾಕಿ, ಹೀಯಾಳಿಸಿ, ಅಪಮಾನಗೊಳಿಸಿಬಿಡುವಳು. ಇದು ಆಕೆಗೊಂದು ವಿನೋದವಾಗಿತ್ತು.

೯. ಮೇರುಪರ್ವತದ ತುತ್ತತುದಿಯಿಂದ ಒಂದು ಹೂಮಾಲೆಯನ್ನು ಆಕೆ ಕೈಬಿಡುವಳು; ಅದು ನೆಲ ಮುಟ್ಟುವುದರೊಳಗಾಗಿ ಆ ಪರ್ವತವನ್ನು ಮೂರುಸಲ ಪ್ರದಕ್ಷಿಣೆಗೊಂಡು ಕೆಳಗೆ ಹಾರಿ ಬಂದು ಆ ಮಾಲೆಯನ್ನು ಅಂತರಿಕ್ಷದಲ್ಲಿಯೆ ಹಿಡಿಯುವಳು. ಎಂದ ಮೇಲೆ ಆಕೆಯ ವೇಗವೆಂತಹುದು!

೧೦. ಈ ಬಾಲೆ ಖೇಚರಿಯಾಗಿರುವುದರಿಂದ ಮೊದಲೆ ಹಾರಾಡಬಲ್ಲವಳು,

---

೧ ಡಿ (ಕಾ, ಮ). ೨ ರ (ಕ, ಮ, ಪ). ೩ ನ (ಕಾ, ಮ). ೪ ಳಿ (ಕ). ೫ ದು (ಕ, ಮ). ೬ ಳೆ (ಕಾ). ೭ ರ (ಕಾ, ಮ). ೮ ಮುಂ (ಕಾ, ಮ, ಪ). ೯ ನೇನಂ (ಕ, ಪ). ೧೦ ದಂತೆ (ಕ, ಪ). ೧೧ ಳ್ವಂ (ಕ, ಪ).

ವ|| ಅಂತು ಖಚರಲೋಕ ಕೋಳಾಹಳಮಾದ ತನ್ನ ಮಗಳ ಗಗನ ಗಮನವೇಗಾತಿಶಯ ಮುಮನಭಿನವ ಯೌವನಾತಿಶಯಮುಮನೆಂತಪ್ಪರುಮಂ ಮೆಚ್ಚದ ರೂಪಾತಿಶಯಮುಮನರಿಂಜಯಂ ಕಂಡು ಕೇವಣಿಸ[1]ದ ಮಾಣಿಕಮುಂ ಕುಡದ ಕೂಸುಮಿನ್ನಾ[2]ಒಗಸುಗುಂ[2] ನಾಲ[3]ಗೆಯುಮನ್ನಲ್ಲನು ಮನೊಲ್ಲದ ಪಣ್ಣ ಸವಿಯುಂ ಪೆಣ್ಣ ರೂಪುಮೇಂ[4] ಬಾಟ್ಟಿ ವಸಂತಮಾಳಿ[5] ನೆರೆಯದ ಚೂತಲತೆಯುಂ ಕಾಂತನೊಳ್ನೆರೆಯದ ತನುಲತೆಯುಂ ಸಹಜಸೌಂದರ್ಯಮುಳ್ಳೊಡಮೆನಿತೊಪ್ಪಲಾರ್ಪುದೆಂದಂಬರಗತಿ ಸ್ವಯಂಬರಮಂ ಮಾಡಲ್ಮನಂದಂದು ವಿಜಯಾರ್ಧಪರ್ವತಾ[6]ಗ್ರವನದೊಳಗೆ ನಳನಳಿಸುವ ಕೆಂದಳಿರ ಕಾವಣಂಗಳುಮಂ ಮಿಳಿರ್ವ ಮಲ್ಲಿಕಾ[7]ಮಂಡ[8]ಪಂಗಳುಮಂ ಬಳ್ವಳೆ ಬ[9]ಳೆದ ಬಾಳಚೂತದ ಬಾಳ್ಗೊಂಪಂಗಳುಮಂ ಲಲಿತಲತಾನಿಲಯಮುಮನೊಳಗು ಮಾಡಿ ಪಲವುಂ ನೆಲೆಯ ಚೌಪಳಿಕೆ[10] ಗಳನಿಕ್ಕಿಸಿ ಕಾಯ್ತ ಬಳ್ಳಿ ಕೌಂಗಿನ ಪಸುರವಂದರುಮಂ ಪಣ್ತ ಮಧುರದ್ರಾಕ್ಷೆಯ ಬಾಳ್ವಂದರುಮನಿರ್ಕೆಲ ದೊಳಿಕ್ಕಿ[11] ನಡೆ ಪೂವಿನ ಪಂದರುಮಂ ವಿವಾಹವೇದಿಕೆಯುಮಂ ಸಮೆಯಿಸಿ ಖಚರಕುಮಾರರೆಲ್ಲಂ ವಿಳಾಸವ[12]ತೀಸ್ವ[12]ಯಂಬರಕ್ಕೆ ಪೂವಿನ ಮಾಲೆಯುಂ ಪಿಡಿದು ತಡೆಯದೆ ಬರ್ಪುದೆಂದುಭಯ ಶ್ರೇಢಿ[13]ಯೊಳಂ ಗೋಸಣಣೆಯಿಡಿಸಲೊಡನೆ

ಖಡ್ಗವನ್ನು ಮಸೆದಂತೆ ಹಾರುವ ವೇಗವೊಂದು ಇವಳಿಗೆ ಪ್ರಾಪ್ತವಾಗಿದೆ ಎಂದಾಗ ನಾನು ಇನ್ನೇನೆಂದು ಹೇಳಲಿ? ಬೀಸುತ್ತಿರುವ ಗಾಳಿಗೆ ಈಗ ರೆಕ್ಕೆಗಳೂ ಮೂಡಿದುವೆಂದು ಹೇಳಿ ಸುಮ್ಮನಾಗಬೇಕಷ್ಟೆ?

ವ|| ಹೀಗೆ ಖೇಚರ ಜಗತ್ತಿನಲ್ಲಿ ಕೋಲಾಹಲವುಂಟುಮಾಡಿದ ತನ್ನ ಮಗಳ ಗಗನಗಮನದ ವೇಗಾತಿಶಯವನ್ನೂ ಆಕೆಯ ಯೌವನಾತಿಶಯವನ್ನೂ ಎಂತಹವರನ್ನೂ ಕೂಡ ಮೆಚ್ಚದ ರೂಪಾತಿಶಯವನ್ನೂ ಕಂಡು ಅರಿಂಜಯರಾಜನು "ಕುಂದಣಕ್ಕೆ ಬಾರದ ಮಾಣಿಕವೂ ಮದುವೆ ಕಾಣದ ಯುವತಿಯೂ ಯಾರಿಗೆ ಇಷ್ಟವಾದಾವು? ನಾಲಗೆಯ ನೊಲ್ಲದ ಹಣ್ಣಿನ ಸವಿಯೂ ನಲ್ಲನನ್ನು ಒಲ್ಲದ ಹೆಣ್ಣಿನ ರೂಪವೂ ಏನು ಪ್ರಯೋಜನ? ವಸಂತದೊಡನೆ ಸಂತೋಷ ಪಡದ ಭೂತಲತೆಯೂ, ಕಾಂತನೊಡನೆ ಬೆರೆಯದ ದೇಹಲತೆಯೂ ಎಷ್ಟೇ ಸಹಜ ಸೌಂದರ್ಯವುಳ್ಳುವಾದರೂ ಒಪ್ಪಲಾರವು" ಎಂದು ಯೋಚಿಸಿ ಸ್ವಯಂವರವನ್ನು ಏರ್ಪಡಿಸಲು ನಿರ್ಧರಿಸಿದನು. ಆ ಮೇರೆಗೆ ವಿಜಯಾರ್ಧ ಪರ್ವತದ ಅಗ್ರವನದಲ್ಲಿ ಕೋಮಲವಾದ ಕೆಂದಳಿರುಗಳ ಮಂಟಪಗಳನ್ನೂ ಸೊಗಸಾದ ಮಲ್ಲಿಗೆ ಮಂಟಪಗಳನ್ನೂ ಚೆನ್ನಾಗಿ ಬೆಳೆದ ಎಳಮಾವಿನ ಕುಂಜಗಳನ್ನೂ ಚೆಲುವಾದ ಬಳ್ಳಿ ಮಂಟಪಗಳನ್ನೂ ಒಳಗೊಂಡು, ಹಲವಾರು ಉಪ್ಪರಿಗೆಗಳ ನಿವಾಸಗಳನ್ನು ನಿರ್ಮಿಸಿ, ಕಾಯಿಗಳಿಂದ ತುಂಬಿದ ಬಳ್ಳಿಯಡಕೆಯ ಹಸುರುಹಂದರವನ್ನೂ ಹಣ್ಣು ತುಬಿದ ದ್ರಾಕ್ಷಾಲತೆಗಳ ಹಂದರವನ್ನು ಎರಡೂ ಪಕ್ಕಗಳಲ್ಲಿ ಇಡಿಸಿ, ನಡುವೆ ಹೂವಿನ ಹಂದರ ವನ್ನೂ ಮದುವೆ ಜಗಲಿಯನ್ನೂ ಮಾಡಿಸಿ, "ಖೇಚರ ಕುಮಾರರೆಲ್ಲರೂ ವಿಳಾಸವತಿಯ ಸ್ವಯಂವರಕ್ಕೆ ಹೂಮಾಲೆಯನ್ನು ಹಿಡಿದುಕೊಂಡು ಕೂಡಲೆ ಭರಬೇಕು" ಎಂದು ಉಭಯಶ್ರೇಢಿಗಳಲ್ಲಿ ಡಂಗುರವಿಟ್ಟು ಪ್ರಕಟಿಸಿದನು.

---

೧ ಸಿ (ಕ, ಮ). ೨ ಗೊಗಸುಗು (ಕ). ೩ ರ್ಬ (ಕ, ಮ, ಪ). ೪ ಮೇ (ಕಾ). ೫ ಳಿ (ಮ), ಲಿ (ಕಾ). ೬ ತದ (ಕಾ). ೭ ಕಾಂತ (ಕಾ). ೮ ಟ (ಕ). ೯ ಬೆ (ಪ). ೧೦ ಗೆ (ಕಾ). ೧೧ + ಸಿ (ಪ) ೧೨ ತಿಯರೆಯ್ದೆ (ಕ, ಮ, ಪ). ೧೩ ಣೆ (ಕಾ, ಮ).

ಬಿರುದಂಕಂ ಸಂದ ವಿದ್ಯಾಧರಿಯ ಮನಮದಂ ಸಾಧಿ[1]ಸಲ್ ಚಂದ್ರನೊರ್ವಂ
ಸ್ಮರನೊರ್ವಂ ಚೈತ್ರನೊರ್ವಂ ನೆಱಿ[2]ಯದೆ ನೆರೆದೇಂ ಬಂದುದೋ ಚಂದ್ರಸೈನ್ಯಂ
ಸ್ಮರಸೈನ್ಯಂ ಚೈತ್ರಸೈನ್ಯಂ ಪಿರಿದುಮೆನಿಸಿ ಬಂ[3]ದತ್ತು ವಿದ್ಯಾಧರೌಘಂ
ಸುರಭಿಶ್ರೀಖಂಡಶುಭ್ರಂ ಮೃಗಮದಮಳಿನಂ ಮಲ್ಲಿಕಾಮೋದ[3]ವಾಹಂ ೧೧

ಪನಿಯಂ ನುಂಗುತೆ ತುಂಬಿ ಚಾದಗೆ ಚಳದ್ಗಂಧಾನಿಳಂ ಪಾಯ್ದು ಝು
ಲ್ಲನೆ ಜಂಝಾನಿಳನಾಗೆ ಖೇಚರ ಚಮೂಹಸ್ತಾಗ್ರಮಾಳೌಘ ಮೇ
ಘ ನಿಕಾಯಂಗಳಿನೇಂ ಬಟ[4]ಲ್ದೆಜಿಗಿತೋ ರೂಪ್ಯಾದ್ರಿಯೊಳ್ಪುಷ್ಪ ನೀ
ರನವಾ[5]ಸಾರ[6]ದಿ ನಿಂದು[7] ಸಾನುತರುಗಳ್ತೇಂಕಾಡುತಿರ್ಪನ್ನೆಗಂ ೧೨

ವII ಅಲ್ಲಿಗಾ ಚಿಂತಾಗತಿಯುಂ ತನ್ನ ತಮ್ಮಂದಿ[8]ರ್ವೆರಸು ಬಂದಿರ್ದನಾಗಳಾ ವಿದ್ಯಾಧರಿ ನೆರೆದ ವಿದ್ಯಾಧರರ್ಗೆ ಬಹುರೂಪಿಣೀ ವಿದ್ಯೆಯಂ ತಾಳ್ದಿದಂತೆ

ಸಮದಾಳೋಕನದಿಂ ಸಮುನ್ನತ ಕುಚದ್ವಂದ್ವಂಗಳಿಂ ಸ್ಮೇರ ಚಾ
ರು ಮುಖಶ್ರೇಣಿಗಳಿಂ ಬಟಲ್ಮುಡಿಗಳಿಂ ವಿದ್ಯುನ್ಮಯಂ ಚಕ್ರವಾ
ಕಮಯಂ ಚಂದ್ರಮಯಂ ಮಯೂರಮಯಮೆಂಬಂತಭ್ರಮೇನೆಂಬ ವಿ
ಭ್ರಮದಿಂ ಬಂದರೊ ಸುತ್ತಿಮುತ್ತಿ ಸಖಿಯರ್ಸಾಸಿರ್ವರಾ ಕನ್ಯೆಯಂ ೧೩

೧೧. ಸರ್ವಶ್ರೇಷ್ಠಳೆಂದು ಪ್ರಸಿದ್ಧಳಾದ ಆ ವಿದ್ಯಾಧರಿಯ ಮನವನ್ನು ಗೆದ್ದುಕೊಳ್ಳುವುದಕ್ಕೆ ಒಬ್ಬ ಚಂದ್ರನಿಗೆ, ಒಬ್ಬ ಮನ್ಮಥನಿಗೆ ಅಥವಾ ಒಬ್ಬ ವಸಂತನಿಗೆ ಸಾಧ್ಯವಾಗದೆಂದು ಚಂದ್ರಸೈನ್ಯ, ಕಾಮಸೈನ್ಯ, ವಸಂತಸೈನ್ಯಗಳು ಒಂದಾಗಿ ಬಂದುವೊ ಏನೊ ಎಂಬಂತೆ ಶ್ರೀಗಂಧದಿಂದಲೂ ಕಸ್ತೂರಿಯಿಂದಲೂ ಮಲ್ಲಿಗೆಯ ಪರಿಮಳದಿಂದಲೂ ಗಮಗಮಿಸುವ ವಿದ್ಯಾಧರರು ಸಮೂಹವಾಗಿ ನೆರೆದರು.

೧೨. ಆ ಖೇಚರ ಕುಮಾರರು ಕೈಯಲ್ಲಿ ಹಿಡಿದುಕೊಂಡು ಬಂದ ಪುಷ್ಪ ಮಾಲೆಗಳಿಂದ ಹೊಸ ಮಳೆಯಂತೆ ಮಕರಂದ ಸುರಿಸುರಿದು ದುಂಬಿಗಳು ಉಂಡುಂಡು ದಣಿದುವು; ಸುಳಿಗಾಳಿ (ಆ ಮಕರಂದದ ಹನಿಗಳನ್ನು ಹೊತ್ತುಕೊಂಡು) ಮಳೆಗಾಳಿಯೆನಿಸಿತು. ವಿಜಯಪರ್ವತದ ಶಿಖರಗಳು ಅದರಲ್ಲಿ ಮುಳುಗಾಡಿದುವು;

ವII ಚಿಂತಾಗತಿಯೂ ತನ್ನ ತಮ್ಮಂದಿರೊಡನೆ ಅಲ್ಲಿಗೆ ಬಂದಿದ್ದನು. ಹೀಗೆ ಸೇರಿದ ಹಲವಾರು ವಿದ್ಯಾಧರರಿಗೆ, ಆ ವಿದ್ಯಾಧರಿ ಬಹುರೂಪಿಣೀ ವಿದ್ಯೆಯಿಂದ ತನ್ನ ಹಲವಾರು ರೂಪಗಳನ್ನು ನಿರ್ಮಿಸಿ ತೋರುವಳೊ ಏನೊ ಎಂಬಂತೆ -

೧೩. ಬಿಂಕದ ನೋಟದಿಂದಲೂ ಉನ್ನತವಾದ ಮೊಲೆಗಳಿಂದಲೂ, ನಗುಮೊಗದ ಸಾಲುಗಳಿಂದಲೂ ಬಿಡುಮುಡಿಗಳಿಂದಲೂ ಸ್ವಯಂವರದ ಮಂಡಪವೆಲ್ಲ ಮಿಂಚುಗಳಿಂದ, ಚಕ್ರವಾಕಗಳಿಂದ, ಚಂದ್ರರಿಂದ, ನವಿಲುಗಳಿಂದ ತುಂಬಿ ಹೋಯಿತೆಂದು ಭ್ರಮೆ ಹುಟ್ಟಿಸುತ್ತ ಸಾವಿರದ ಸಖಿಯರು ಆ ವಿದ್ಯಾಧರ ಕನ್ಯೆಯ ಸುತ್ತಮುತ್ತ ಬಂದು ನಿಂತರು.

---

೧ ರಿ (ಕ, ಪ). ೨ ದೆಯ್ದೆ (ಕಾ). ೩ (ಕ). ೪ ಟಿ (ಕಾ, ಮ). ೫ ಪಾ (ಕ,ಮ). ೬ ವದಿಂದು (ಮ), ವದೊಂದು (ಕಾ). ೭ + ರಿರ್ವ (ಕ).

ಪೊದೆಯಿಸಿದದ್ವಣಂಬೊಲಿರೆ ಸುತ್ತಿದ ಸತ್ತಿಗೆ ಡಿಂಡಿಮಸ್ವನಂ
ಕೆದಱೆ ಬೆಡಂ [ಗ[೧]]ನಿಟ್ಟ ತಿಳಕಂ ತಿಮಿರೊಪ್ಪಮನೀಯೆ ಕೂರ್ಪು ಕುಂ
ದದ ಕಡೆಗಣ್ಣ ಗೇಣ್ ಪೊಳೆಯೆ [೨]ಪಿಲ್ಲಿಸೆ[೨] ಕಟ್ಟಿ ಕಳಕ್ಕೆ ವರ್ಪ ದ
ರ್ಪದ ಕುಸುಮಾಸ್ತ್ರನಂಕಮೆನೆ ಖೇಚರಿ ಬಂದಳದೊಂದು ದೇಸೆ[೩]ಯಿಂ ೧೪

ವ॥ ಬಂದರ್ಚಿಸಿರ್ದ ಗತಿಯುದ್ಧ[೪]ಶಿಲಾಪಟ್ಟಮಂ ಮೆಟ್ಟಿ ಮಟ್ಟಮಾಗಿ ಪೂಮಾಲೆಯಂ ಪಿಡಿದಾಲೀಢ ಸ್ಥಾನ[೫]ಮಂಕೆಯ್ಕೊಂಡು ನಿಲ್ವುದುಮಾಕೆಯ ಕೆಳದಿ ಚಂದ್ರಲೇಖೆಯೆಂಬಳಂಬರಚರ ಕುಮಾರರ್ಗಿಂತೆಂದಳೀ ಕುಮಾರಿಯೊಡನೀ ಗಿರಿಯಿಂ[೬] ಮೇರುಗಿರಿಗೆ ಪಾಱೆ ಜಿನಪತಿ ಸವನ ಸುಧಾಸಿಂಧು ಸಲಿಲಫೇನಪಿಂಡ ಪಾಂಡುರಮಪ್ಪ ಪಾಂಡುಕವನಮಂ ಬಲಗೊಂಡಲ್ಲಿಯ ಜಿನಪ್ರತಿಮೆಯ ಪಾದಪದ್ಮಂಗಳನೆರಡುಂ ಕೆಯ್ಯ ಬಾಸಿಗಂಗಳಿನರ್ಚಿಸಿ ಮುನ್ನಮರ್ಚಿಸಿರ್ದ ಮಂದಾರಮಾಲೆಯಂ ಕಳೆದುಕೊಂಡೀಕೆಯಂ ಮಿಕ್ಕು ಬಂದ ಮಹಾ[೭]ಭಾಗನೀ[೭] ಪೂವಿನ ಪಂದರೊಳೀ ಪಂಕಜಮುಖಿಯೊಳ್ಮದುವೆ ನಿಲ್ವ[೮]ನೆಂಬುದುಮೆಮಗೆ ತಮ[೯]ಗೆಂಬ ವಿದ್ಯಾಧರರಂ [೧೦]ನೀಮನ್ನೆಗ[೧೦]ಮಿರಿಯೆಂದು ತಾನುಮೊರ್ಮೆ ತನ್ನ ತಮ್ಮಂದಿರಾಕೆಗೆ ಸೋಲ್ತು ಸಿಗ್ಗಾಗಿ ಬಂದ ಪರಿಭವಮಂ ಪರಿಭಾವಿಸಿ ಚಿಂತಾಗತಿಯುಂ ಗತಿಯುದ್ಧ ಶಿಳಾತಳ[೧೧] ಪ್ರತ್ಯಾಲೀಢಸ್ಥಾನ[೧೨]ಮಂ ಕಳೆದುಕೊಂಡು

೧೪. ಸುತ್ತ ಹಿಡಿದ ಛತ್ರಿಕೆ ಹೊದಿಸಿದ ಹರಿಗೆಯಂತಿರಲು, ಡಿಂಡಿಮ ಧ್ವನಿ ಹೊಮ್ಮುತ್ತಿರಲು, ಬೆಡಗಿನಿಂದ ಇಟ್ಟುಕೊಂಡ ಹಣೆಬೊಟ್ಟು ಹಾಗು, ಲೇಪಿಸಿಕೊಂಡ ಅಂಗರಾಗಗಳು, ಶೋಭೆಯನ್ನು ಹೆಚ್ಚಿಸುತ್ತಿರಲು, ಹರಿತವಾದ ಕುಡಿಗಣ್ಣೋಟದ ಕಠಾರಿಯನ್ನು ಝಳಪಿಸುತ್ತ ಬಿಂಕದಿಂದ ಕಣಕ್ಕೆ ಬರುವಕಾಮನ ಬಿರುದಾಳೊ ಏನೊ ಎಂಬಂತೆ ಆ ಖೇಚರಿ ಬೆಡಗಿನಿಂದ ಬಂದಳು.

ವ॥ ಹಾಗೆ ಬಂದು, ಅರ್ಚನೆಗೊಂಡ ಗತಿಯುದ್ಧದ ಶಿಲಾಪಟ್ಟವನ್ನು ಮೆಟ್ಟಿ, ಹೂಮಾಲೆಯನ್ನು ಹಿಡಿದುಕೊಂಡು ಆಲೀಢಸ್ಥಾನಕದಿಂದ (ಬಲಗಾಲನ್ನು ಚಾಚಿ, ಎಡಗಾಲನ್ನು ಸಂಕೋಚಿಸಿ ಹಿಂದಿಟ್ಟು) ನಿಂತಳು. ಆಕೆಯ ಸಖಿಯಾದ ಚಂದ್ರಲೇಖೆಯಂಬುವಳು ಖೇಚರ ಕುಮಾರರಿಗೆ ಹೀಗೆಂದಳು, "ಈ ಕುಮಾರಿಯೊಡನೆ ಈ ಪರ್ವತದಿಂದ ಮೇರುಪರ್ವತಕ್ಕೆ ಹಾರಿ, ಜಿನೇಂದ್ರಾಭಿಷೇಕಾಮೃತದ ನೊರೆಯಿಂದ ಬೆಳ್ಳಗಾಗಿರುವ ಪಾಂಡುಕವನವನ್ನು ಪ್ರದಕ್ಷಿಣೆಗೊಂಡು ಅಲ್ಲಿರುವ ಜಿವನವಿಗ್ರಹದ ಪಾದಕಮಲಗಳನ್ನು ಎರಡೂ ಕೈಯ ಹೂಮಾಲೆಗಳಿಂದ ಅರ್ಚಿಸಿ, ಈ ಮೊದಲೆ ಆ ಪಾದಗಳಿಗೆ ಏರಿಸಿಟ್ಟಿರುವ ಮಂದಾರಮಾಲೆಯನ್ನು ತೆಗೆದುಕೊಂಡು ಈಕೆಯನ್ನು ಹಿಮ್ಮೆಟ್ಟಿಸುವ ವೇಗದಿಂದ ಯಾವ ಮಹಾಭಾಗ್ಯಶಾಲಿಯು ಇಲ್ಲಿಗೆ ಬಂದು ಮುಟ್ಟುವನೊ, ಆತನೇ ಈ ಹೂವಿನ ಹಂದರದಲ್ಲಿ ಈ ಚಂದ್ರಮುಖಿಯನ್ನು ಮದುವೆಯಾಗುವೆನು". ನಾಮುಂದೆ ತಾಮುಂದೆ ಎಂದು ಮುಂಬರಿವ ವಿದ್ಯಾಧರರನ್ನು 'ಕೊಂಚ ತಾಳಿ' ಎಂದು ತಡೆದು, ತನ್ನ ತಮ್ಮಂದಿರು ಈ ಮೊದಲೆ ಒಮ್ಮೆ ಆಕೆಯೊಡನೆ ಸ್ಪರ್ಧೆಯಲ್ಲಿ ಸೋತು ಬಂದುದನ್ನು ನೆನೆದು, ಚಿಂತಾಗತಿಯು ಗತಿಯುದ್ಧ ಶಿಲಾಪಟ್ಟದಲ್ಲಿ ಪ್ರತ್ಯಾಲೀಢ ಸ್ಥಾನಕದಿಂದ (ಎಡಗಾಲನ್ನು ಮುಂದಕ್ಕೆ ಚಾಚಿ ಬಲಗಾಲನ್ನು ಸಂಕೋಚಿಸಿ ಹಿಂದಿಟ್ಟುಕೊಂಡು) ನಿಂತನು.

---

೧ ಗ (ಕ, ಕಾ, ಮ), ೨ ಪೆಲ್ಲಿಸಿ (ಕಾ) ಪೆಲ್ಲಿಸೆ (ಮ). ೩ ಸಿ (ಕ) ೪ ಗ (ಕ), ೫ + ಕ (ಕಾ). ೬ ಯಂ (ಕ)., ಯೆ (ಕಾ), ೭ ಭಾಗಗೀ (ಕ), ಭಾಗಿನೀ (ಕಾ). ೮ ಳ್ಕೆ (ಕಾ). ೯ ವ (ಕ). ೧೦ ಗಿಮ್ಮನೆಗ (ಕ). ೧೧ + ದೊಳ (ಕ, ಮ, ಪ). ೧೨ + ಕ (ಕಾ).

ನಿಲ್ತತನು ನಿಂದ ನಿಲವಂ
ಪೋಲ್ತಾತನ ಗಾಡಿಗಿವಳ ಕಣ್ಣುಂ ಮನಮುಂ
ಸೋಲ್ತುವು ಘನಪಥಗತಿಯೊಳ್
ಸೋಲ್ತಪಳಿವಳೆಂದು ಸೂಚಿಪಂತೆವೊಲಾಗಳ್ ೧೫

ನೋಡಿರೆ ಕೇಳ್ದವರೆಲ್ಲಂ
ನೋಡಲ್ಬಯಸುವ ವಿವೇಕವಿದ್ಯಾಧರನಂ
ನೋಡಿದ ಕಣ್ಗಳ್ಪಿಱಗಂ[೧]
ನೋಡ[೨]ವೆ ವೀಕ್ಷಣ [೩]ವಿದಗ್ಧ[೩]ವಿದ್ಯಾ[೪]ಧರಿಯಾ[೪] ೧೬

ವ|| ಅಂತು ವಿಳಾಸವತಿಯುಂ ಕೆಳರ್ದು ಗತಿಯುದ್ಧಕ್ಕೆ ಕಳನನೇಱೆ ನಿಲ್ವು ದುಂ ಉಭಯ ಪಕ್ಷದೊಳ್ಪೊಳ್ಳೈಸುವ ದುಂದುಭಿಗಳ ಪೊಡೆವ [೫]ಪಡಹ[೫] ಢಕ್ಕೆಗಳ ಬೊಬ್ಬಿಱೆವ ಖೇಚರರ ಕಳಕಳಿಸುವ ಖೇಚರಿಯರ ತುಮುಳ ರವದೊ[೬]ಳ್ ತೊ[೬]ಡರ್ದು ಪರಿವಂತೆ ಮನದೊಳ್ ಮಚ್ಚರಿಸಿ ಪಾಱುವಂತೆ ನುಸುಳುಂ[೭] ನೊಪ್ಪುಮನಪ್ಪುಕೆಯ್ದು

ನಸುಮ[೮]ಸುಳ್ದಂಗಗೇಖೆ ಪೊಱಮ[೯]ಟ್ಟಿಡೆಗಾ[೯]ಲ್ ಪೊಱವಾಱ ಮೇಲೆ ಪ
ತ್ತಿಸಿದ ಮಡಂ ಕರದ್ವಯದಿ [೧೦]ನಿರ್ದೆ[೧೦]ಸೆಗೆ[೧೧]ತ್ತಿದ ಮಾಲೆ [೧೨]ಮುಂದ[೧೨]ನಂ
ಕಿಸುವ ಮುಖೇಂದುಮು[೧೩] ಚಲ[೧೪] ನುಗೆಯ್ದು[೧೪] ಕುಚಂ ಮುರಿ[೧೫]ದೇಱ್ವ[೧೫] ಭಂಗಿ ಕ
ಣ್ಗೆಸೆದಿರೆ ಪಾಱಿದಳ್ ಪೊಳೆದು ಖೇಚರಿ ಮಿಂಚಿನ ಬೊಂಬೆಯೆಂಬಿನಂ ೧೭

೧೫. ಮನ್ಮಥನೇ ಬಂದು ನಿಂತಂತಿರುವ ಆತನ ಚೆಲುವಿಗೆ ಇವಳ ಕಣ್ಣು ಮನವೂ ಸೋತು ಹೋಗಿ, ಆಕಾಶಮಾರ್ಗದ ಗತಿಯುದ್ಧದಲ್ಲಿಯೂ ಇವಳು ಸೋಲುವಳೆಂಬುದನ್ನು ಸೂಚಿಸಿದುವು.

೧೬. (ಈತನ) ರೂಪಿನ ಅತಿಶಯವನ್ನು ಕೇಳಿದವವೆಲ್ಲ ಕಣ್ಣಾರೆ ನೋಡ ಬಯಸುವ ವಿವೇಕಪೂರ್ಣನಾದ ಈ ವಿದ್ಯಾಧರನನ್ನು ಕಂಡ ಮೇಲೆ ಆ ವಿದ್ಯಾಪರಿಣತ ವಿದ್ಯಾಧರೆಯ ಕಣ್ಣುಗಳು ಹಿಂದಕ್ಕೆ ಬಾರದಾದುವು.

ವ|| ವಿಳಾಸವತಿಯೂ ಹುರುಪಿನಿಂದ ಗತಿಯುದ್ಧಕ್ಕೆ ಕಣವನ್ನೇರಿ ನಿಲ್ಲಲಾಗಿ, ಸ್ಪರ್ಧಾಳುಗಳುಗಳಿಬ್ಬರ ಪಕ್ಷಗಳಲ್ಲಿ ಬಾರಿಸುವ ದುಂದುಭಿ- ಢಕ್ಕೆಗಳ ಹಾಗೂ ಬೊಬ್ಬಿಡುವ ವಿದ್ಯಾಧರ - ವಿದ್ಯಾಧರಿಯರ ಕೋಲಾಹಲ ಧ್ವನಿಯಿಂದ ಬಿಡಿಸಿಕೊಂಡು ಹೋಗುವಂತೆ, ಮನದಲ್ಲಿ ಈರ್ಷ್ಯೆಗೊಂಡು ಹಾರುವಂತೆ, ವೇಗವನ್ನು ಲಘುತ್ವವನ್ನೂ ಅಳವಡಿಸಿಕೊಂಡು-

೧೭. ನಸುವೆ ಮರೆಯಾದ ದೇಹರೇಖೆ, ಚಾಚಿದ ಕಾಲು, ನಿತಂಬದ ಮೇಲೆ ಹತ್ತಿಕೊಂಡ ಹಿಮ್ಮಡಿ ಎರಡೂ ಕೈಯಲ್ಲಿ ಎತ್ತಿ ಹಿಡಿದ ಮಾಲೆ, ಮುಂದಕ್ಕೆ ಚಾಚಿಕೊಂಡ ಮುಖ, ಮುಂಬರಿಯಲು ಹವಣಿಸುತ್ತಿರುವ ಮಾಲೆ, ಮುರಿದೇಳುವ ಭಂಗಿ, ನಯನ ಮನೋಹರವಾಗಿ ವಾಲಿ, ಆ ಖೇಚರಿ ಮಿಂಚಿನ ಬೊಂಬೆಯಂತೆ ಹಾರಿದಳು.

---

೧ ರಂ (ಕ, ಕ, ಪ.), ೨ ಡು (ಕ, ಮ). ೩ ವಿವೇಕ (ಕಾ). ೪ ಧರನಾ (ಕ). ೫ ಪಡ (ಕಾ) ೬ ಳಗೊ (ಕಾ). ೭ ಳು (ಕಾ). ಳುಂ (ಮ) ೮ ಮು (ಕಾ) ೯ ಟ್ಟಿರೆಗೊ (ಕ. ಪ). ೧೦ ಬಿದ್ದೆ (ಕ). ೧೧ ದೆ (ಕ). ೧೨ ಮಂಡ (ಕ), ಯುಂದ (ಮ). ೧೩ ಮಂ (ಕ). ೧೪ ನಗೆಯ್ದು (ಕ), ನುಗೆಯ್ದು (ಮ). ೧೫ ಕಲ್ಪ (ಕ, ಪ), ದೆಕಲ್ಪ (ಮ),

ಸಱೆಗಲ್ಲಂ ದಬ್ಬುಕದಿಂ
ದಿಱಿದಡೆ ಕಿಡಿ ಪಾ[೧]ಱುವಂತೆ ಮುಂತೊಗೆದ ಮುಗಿ
ಲ್ದುಱುಗಲನೆ ಖಚರಿ ಕುಚದಿಂ
ದಿಱಿದಳ್ ಕಿಱುಮಿಂಚು ನುಚ್ಚುನುಱಿಯಪ್ಪಿನೆಗಂ ೧೮

ವ|| ಚಿಂತಾಗತಿಯುಂ ತನ್ನ ಪೆಸರಂ ನನ್ನಿಮಾಡಿ ತರುಣಿಗೆ ತಕ್ಕುಗೊಟ್ಟು ಪೆಱಗೆ ಪಾಱೆ ಪೋಗಿ ಮಿಡಿದನಿತು ಬೇಗಕ್ಕೆ ಮಂದರಮನೈದಿ ಪಾಂಡುಕ ಶಿಲಾತಳಮಂ ತ್ರಿಃಪ್ರದಕ್ಷಿಣಂಗೆಯ್ದಲ್ಲಿಯ ಪರಮೇಶ್ವರ ಪ್ರತಿಬಿಂಬದ [೨]ಪಾದಾಂ ಭೋ[೨]ಜಕ್ಕೆ ಕೆಯ್ಯ ಕುಸುಮದಾಮಮನೇಱಿಸಿ ನೊಸಲೊಳಿಟ್ಟು ಪೊಡೆವಟ್ಟು ರೂಪಸ್ತವ ವಸ್ತುಸ್ತವ ಗುಣಸ್ತವಂಗಳಿಂ ಸ್ತುತಿಯಿಸಿ ಪಂಚಗುರುಭಕ್ತಿ ಪೂರ್ವಕಂ ಪಿರಿದು ಪೊಟ್ತು ದೇವರಂ ಕಂಡು ದೇವರ್ಕಳರ್ಹದ್ದೇವನ ದಿವ್ಯ ಶ್ರೀಪಾದ ಪದ್ಮದಮೇಗೆ ಮಂದಮಾಗೊಟ್ಟಿದ ಮಂದಾರಮಾಲೆಯುಮಂ ಚಂದನಕರ್ದಮುಮಂ ಮುತ್ತಿನ ಸಲ[೩]ಗೆಯಂತೆ ನವಮಾಳಿಕೆಯ ನನೆಗಳಂತೆ ನಿಡಿಯವುಂ ಕಮ್ಮಿ[೪] ದುವುಮಪ್ಪ[೪] ಕಳಮಾಕ್ಷತಂಗಳುಮಂ ತುಱುಬಿ ತಿಳಕಮಿಕ್ಕಿ ತನ್ನ ಗೆಲುವಿಂಗೆ ಸೇಸೆಗೊಳ್ವಂತೆ ಸೇಸೆಗೊಂಡು ಹರ್ಷೋತ್ಕರ್ಷಚಿತ್ತನುಂ ರೋಮಾಂಚ ಕಂಚುಕಿತ ಶರೀರನುಮಾಗಿ ಬಟಿಕಮಕೃತ್ರಿಮ ಚೈತ್ಯಾಲಯಂಗಳೆಲ್ಲಮಂ ಬಂದಿಸಿ ದೇವಗಿರಿಯಿಂ ದೇವನಂತೆ ಮಗಮಗಿಸಿ ಮಗುಳ್ದು [೫]ಬರು[೫]ತ್ತುಂ ತನ್ನೊಳಿಂತೆಂದನಮರ್ದಂ ಮದುರ್ವೇಟ್ಟಿಂ[೬] ತೆಯುಮಲರ[೭] ಮೇಲೆ ಮದಾಟಿಗೆ [೮]ದಾಟಿ[೮] ವೇಟ್ಟಿಂತೆಯುಮನ್ನೆವರಮೆನ್ನ ಪುರುಳ್ಗೆಟ್ಟ[೯] ದುರಾಗ್ರಹಂ ದುರಿತಹರಮಾದುದು ಲತೆಯೆನಿತ್ತು ಬಲ್ಲಿತ್ತಾದೊಡಂ ಮರದಿಂ ಬಲ್ಲಿತ್ತಲ್ತು ಪೋ[೧೦]ರ್ವಡೆ ಪೂಮಾಲೆಗಂ ಪಾಶಕ್ಕಮಜಗಜಾಂತರಂ ಚಪಳಪ್ರಕೃತಿಯಪ್ಪ ಪೆಂಡಿರ್ಗೆತ್ತಾನುಮೊಂದು ಗುಣಲವಂ ಘು[೧೧]ಣಾಕ್ಷರ ನ್ಯಾಯದಿನಾದುದಾದೊಡ[೧೨]ದನಗುರ್ವು[೧೨] ಮಾಡಿಕೊಂಡು ಕೊನೆದು ಕೊ[೧೩]ಣಕಿ[೧೩]ಟ್ಟು

೧೮. ಬಿರುಸಾದ ಕಲ್ಲನ್ನು ದಬ್ಬಣದಿಂದ ತಿವಿದಾಗ ಕಿಡಿ ಹಾರುವಂತೆ, ತನ್ನ ಮುಂದೆ ಬಂದ ಮೋಡದ ಹಿಂಡನ್ನು ಆ ಖೇಚರಿ ತನ್ನ ಕುಚಗಳಿಂದ ಇರಿದು (ಮೋಡದ) ಕಿರುಮಿಂಚನ್ನು ನುಚ್ಚು ನೂರು ಮಾಡಿದಳು.

ವ|| ಚಿಂತಾಗತಿಯೂ ತನ್ನ ಹೆಸರನ್ನು ಸಾರ್ಥಕಗೊಳಿಸಿ, ಆ ಯುವತಿಗೆ ಮೊದಲು ಹಾರಲು ಅವಕಾಶವಿತ್ತು, ಅವಳ ಹಿಂದಿನಿಂದ ಹಾರಿಹೋಗಿ, ಕಣ್ಣು ಮಿಟುಕಿಸುವಷ್ಟರಲ್ಲಿ ಮಂದರಪರ್ವತವನ್ನು ತಲುಪಿ, ಪಾಂಡುಕ ಶಿಲೆಯನ್ನು ಮೂರು ಸಲ ಸುತ್ತು ಬಂದು, ಅಲ್ಲಿಯ ಜಿನೇಶ್ವರ ಮೂರ್ತಿಯ ಪಾದಗಳಿಗೆ ತನ್ನ ಹೂಮಾಲೆಯನ್ನೇರಿಸಿ ಹಣೆಮುಟ್ಟಿ ನಮಸ್ಕರಿಸಿ, ರೂಪಸ್ತವ, ವಸ್ತುಸ್ತವ, ಗುಣಸ್ತವಗಳಿಂದ ಸ್ತೋತ್ರಕಾರ್ಯವನ್ನು ಮುಗಿಸಿ, ಪಂಚಪರಮೇಷ್ಠಿ ಭಕ್ತಿಯಿಂದ ಬಲುಹೊತ್ತಿನವರೆಗೆ ದೇವರನ್ನು ನೋಡಿ, ಆ ಜಿನೇಂದ್ರನ ಪಾದಕಮಲಗಳ ಮೇಲೆ ದೇವತೆಗಳು ದಟ್ಟವಾಗಿ ಒಟ್ಟಿದ್ದ ಮಂದಾರಮಾಲೆಯನ್ನು ಚಂದನ ಗಂಧವನ್ನು, ಮುತ್ತಿನ ಮೊಳೆಗಳಂತೆ, ನವಮೊಳಿಕೆಯ ಮೊಗ್ಗೆಗಳಂತೆ ಉದ್ದವಾಗಿಯೂ ಸುಗಂಧವಾಗಿಯೂ ಇರುವ ಅಕ್ಷತೆಗಳನ್ನು ತಿಲಕವಿಟ್ಟುಕೊಂಡು, ತನ್ನ ವಿಜಯಕ್ಕೆ ಶೇಷಾಕ್ಷತೆಗಳನ್ನು ಪಡೆಯುವಂತೆ, ತಲೆಯಲ್ಲಿ ಧರಿಸಿಕೊಂಡು ಹರ್ಷಾಧಿಕ್ಯದಿಂದ

---

೧ ಹಾ (ಕ, ಮ). ೨ ಪಂದಾಂಬು (ಮ), ಪಾದಾಂಬು (ಕಾ). ೩ ತ್ತಿ (ಕ). ೪ ದುವಪ್ಪ (ಕಾ), ದಱಿಮಪ್ಪ (ಕ). ೫ ಪೋಗು (ಮ). ೬ ಟ್ಟಿಂ (ಕ). ೭ ದ (ಮ). ೮ ಗಾಳಿ (ಮ). ೯ ಟ್ಟು (ಕ, ಪ). ೧೦ ಪಾ (ಕ, ಪ) ೧೧ ಘ (ಕ, ಕಾ). ೧೨ ಮಗುರ್ವು (ಕಾ). ನಗುರ್ವ (ಕ). ೧೩ ಟಗೆ (ಕಾ).

ಕೋಣನ[೧]ನಿ[೧]ಱಿದ ಭಗವತಿಯಂತೆ ಬಿಜ್ಜನೆ ಬೀಗಿಯದನೆ ಮುಂದು[೨]ಗೊಂಡಿಪ[೨]ರೆಂ[೩]ದು ನಸುನಗುತ್ತುಂ [೪]ಮೆಲ್ಲಮೆಲ್ಲನೆ[೪] ಖಚರಗಿರಿಗೆ ವಂದು ಗತಿಯುದ್ಧ ಶಿಲಾತಳಮನೇಱಿಲೊಡನೆ

ಪೂವಿನ ಮೞೆಯಂ ಸುರಿದರ್
ದೇವರ್ಕಳ್ ದೇವದುಂದುಭಿಧ್ವನಿ ನಭಮಂ
ತೀವಿದುದು [೫]ವೇಗ[೫]ಮಂ ಖಚ
ರಾವಳಿ ಪೊಗೞ್ದುದು ವಿವೇಕವಿದ್ಯಾಧರನಾ ೧೯

ದೊರೆವೆತ್ತೀ[೬] ವ್ಯೋಮಯಾನೋನ್ನತಿ ವಿತರಣ ವಿದ್ಯಾಧರಂಗಿಂದು ತಾನೊಂ
ದರಿದಲ್ತೀ[೭] ಪೇಟ್ದಿ[೮] ಪುಣ್ಯಾಂಬುಧಿಯೆ ವಿಬುಧವೃಂದಸ್ತುತಂ ನೇಮಿನಾಮಾ
ಚರಣಂ ತಾನಾಗಿ ಶುಂಭತ್ಸ[೯]ಮವ[೯]ಸೃತಿ ಸಭಾಸಂಯುತಂ ಶೋಭೆವೆತ್ತಂ
ಬರಯಾನಶ್ರೀಯ ಪೆಂಪಂ ತ್ರಿಭುವನ ಜನಕಾಶ್ಚರ್ಯಮಪ್ಪಂತು ತೋರ್ಪಂ ೨೦

ಮೈಯುಬ್ಬಿ, ರೋಮಾಂಚಗೊಂಡು ಅನಂತರ ಅಕೃತ್ರಿಮವಾದ ಬಸದಿಗಳನ್ನೆಲ್ಲ ಕಂಡು ವಂದಿಸಿ, ಆ ದೇವ ಪರ್ವತದಿಂದ ಹೊರಟು ಗಮಗಮಿಸುತ್ತ ಮರಳಿ ಬರುತ್ತ ತನ್ನಲ್ಲಿಯೆ ಹೀಗೆಂದುಕೊಂಡನು, - "ಅಮೃತವನ್ನೆ ಔಷಧಿಯಾಗಿ ವಿಧಿಸಿದಂತೆ, ಹೂವಿನ ಮೇಲೆ ದಾಳಿಮಾಡೆಂದು ದುಂಬಿಗೆ ಆಜ್ಞೆಯಿತ್ತಂತೆ, ಈಸ್ಪರ್ಧೆಗೆ ನಾನು ನಿಂತುದಾಯಿತು. ಈವರೆಗಿನ ನನ್ನ ದುರಾಗ್ರಹವು ಈಗ ಪಾಪನಾಶಕವಾಗಿ ಪರಿಣಮಿಸಿತು. ಬಳ್ಳಿ ಎಷ್ಟೆ ಬಲವಾದರೂ ಮರಕ್ಕಿಂತ ಬಲವಾಗಲಾರದು. ಹೂಮಾಲೆಗೂ ಪಾಶಕ್ಕೂ ಸ್ಪರ್ಧೆಯಿಟ್ಟರೆ, ಅವೆರಡರಲ್ಲಿ ಅಜಗಜಾಂತರ, ಚಪಲ ಸ್ವಭಾವದ ಸ್ತ್ರೀಯರಿಗೆ ಎಲ್ಲೊ ಒಂದಿಷ್ಟು ಗುಣಾಂಶ ಅಪ್ಪಿತಪ್ಪಿ ದೊರಕಿದ ಪಕ್ಷದಲ್ಲಿ ಅದನ್ನು ಒಂದು ಅತಿಶಯವೆಂದು ಮಾಡಿಕೊಂಡು ಗರ್ವದಿಂದ ಕುಣಿದಾಡಿ ಕೋಣನನ್ನು ಕೊಂದ ಭಗವತಿಯಂತೆ ಬುರುಬುರನೆ ಉಬ್ಬಿ ಕೊಬ್ಬಿಕೊಳ್ಳುತ್ತಾರೆ" ಎಂದು ನಸುನಗುತ್ತ ಮೆಲ್ಲಮೆಲ್ಲಗೆ ಖೇಚರ ಪರ್ವತಕ್ಕೆ ಮರಳಿಬಂದು ಗತಿಯುದ್ಧ ಶಿಲೆಯನ್ನು ಏರಿನಿಂತನು. ಆ ಕೂಡಲೆ -

೧೯. ದೇವತೆಗಳು ಹೂಮಳೆಯನ್ನು ಸುರಿಸಿದರು; ದೇವದುಂದುಭಿಗಳ ನಾದದಿಂದ ಆಕಾಶ ತುಂಬಿಹೋಯಿತು; ಆ ವಿದ್ಯಾಧರನ ವೇಗವನ್ನು ಖೇಚರರೆಲ್ಲ ಹೊಗಳಿದರು.

೨೦. "ಅತಿಶಯವೆಂದು ತೋರುವ ಈ ಆಕಾಶಗಮನದ ವೇಗವು ಈ ವಿದ್ಯಾಧರನಿಗೆ ದೊಡ್ಡದೇನೂ ಅಲ್ಲ. ಈ ಪುಣ್ಯ ಪುರುಷನೆ, ಸಮಸ್ತ ದೇವತಾ ಪೂಜ್ಯನಾಗಿ ಮುಂದೆ ನೇಮಿನಾಥಜಿನನಾಗಿ, ಉಜ್ವಲವಾದ ಸಮವಸರಣ ಸಭಾಮಂಟಪ ಸಹಿತನಾಗಿ ಶೋಭಿಸುತ್ತ, ಮೂರೂ ಲೋಕಗಳ ಜನರೂ ಬೆರಗಾಗಿ ನೋಡುವಂತೆ ಆಕಾಶಯಾನದ ವೈಭವವನ್ನು ತೋರಲಿರುವನು"

---

೧ ಣನಿ (ಕ, ಮ), ನನೇ (ಕಾ). ೨ ದೇಂ (ಪ). ೩ ದೆಂ (ಮ). ೪ ಮೆಲ್ಲನೆ ಮೆತ್ತನೆ (ಕಾ). ೫ ಮೇಘ (ಮ). ೬ ತ್ತಾ (ಕ), ತ್ತ (ಮ). ೭ ಲ್ಲೀ (ಕ, ಮ). ೮ ಟ್ವಿ (ಕಾ). ೯ ವಮ (ಕಾ).

ವ|| ಎಂದೊಂ[1]ದೆ ಕೊರಲಿಂ ವೃಂದಾರಕವೃಂದಂ ಪೊಂ[2]ಗಿ ಪೊಗೞುತ್ತುಮಿ[3]ರ್ಪನ್ನೆ[3] ಗಮರ್ಧಮಾರ್ಗದೊಳ್ ಮಗುೞ್ದು

[4]ಪಿಂತ[4]ನೆ ಬಂದಳಾಕೆ ಮದನಾನಳ[5]ನುರ್ವೆ[5] ಕರಂ ಬೞಲ್ದು ತ
ನ್ನಂ ತೆಗೆದೆತ್ತಿಕೊಂಡು ನವಿಲುಂ ಪೊಣರ್ವಕ್ಕಿ[6]ಯುಮೇಱಿ[6] ಪಾಱಿ ಬ
ರ್ಪಂತೆವೊಲೊಪ್ಪೆ ಬಿಟ್ಟ ಮುಡಿಯಂ ಮೊಲೆಯುಂ ವಧುನಾಡೆಯೋಡೆ ಬೆ
ನ್ನಂ ತಗುಳ್ದೆಚ್ಚ ಕಾಮನಲರಂಬಿನ ಬಾಯೊಳೆ ಬಂದಳೆಂಬಿನಂ ೨೧

ಬೆಮರಂ ವ್ಯೋಮಪ್ರಯಾಣಂ ಪಡೆದ ಬೆಮರ್ಗಳೊಳ್ ಬಾಷ್ಪಮಂ ಸೋಲ್ತ ಸಿಗ್ಗಿಂ
ದಮೆ ಪೂರಂಬಾಯ್ವ ಬಾಷ್ಪಂಗಳೊಳಸಮಸರಂ ಮಾಡಿದುಚ್ಛ್ವಾಸ ಖಿನ್ನ
ಶ್ರಮಮಂ ಪ್ರೋಡ್ಡೀನ ದೀನಶ್ರಮದೊಳೊಗೆದ ರೋಮಾಂಚಮಂ ಶೀತವಾತ
ಸ್ತಿಮಿತೋಪಸ್ಪರ್ಶ ರೋಮಾಂಚದೊಳೆ ಬೆರಸಿದಳ್ಕನ್ನೆಗೇಕಿನ್ನವಂದಂ ೨೨

ಎಡೆಗಿಱಿದಬಲೆಯ ಮೊಲೆಯಿ
ಟ್ಟೆಡೆಯೊ[7]ಳ್ಕೆಳೆ[7]ಗೊಂಡು ನಿಂದುವಲ್ಲದೆ ನುಸುಳ-
ಲ್ಪಡೆಯವು ಮದನಾಶ್ರು[8]ಗಳೆಂ
ದೊಡೆ ಮುತ್ತಿನಹಾರಮೆಂತು ಪೇೞ್ನುಸುಳ್ವುದೇ ೨೩

ವ|| ಎಂದು ದೇವಸಮೂಹವು ಒಕ್ಕೊರಲಿನಿಂದ ಉತ್ಸಾಹಪೂರ್ಣನಾಗಿ ಹೊಗಳುತ್ತಿರಲಾಗಿ ಅರ್ಧಮಾರ್ಗದಲ್ಲಿಯೆ (ಸೋತು) ಮರಳಿ-

೨೧. ಕಾಮಾಗ್ನಿಯ ಪ್ರಖರತೆಗೆ ತುಂಬ ಬೆಂದು, ಸೋತು, ನವಿಲೂ ಚಕ್ರವಾಕ ಪಕ್ಷಿಗಳೂ ತನ್ನನ್ನು ಎತ್ತಿಕೊಂಡು ಬರಲು ಅವುಗಳ ಮೇಲೆ ಭಾರಹಾಕಿ ತೇಲಿ ಬರುತ್ತಿರುವಳೊ ಏನೊ ಎಂಬಂತೆ ಬಿಚ್ಚಿದ ಮುಡಿಯೂ ಮೊಲೆಗಳೂ ಶೋಭಿಸುತ್ತಿರಲಾಗಿ, ಆ ಕನ್ಯೆ ಓಡೋಡಿ ಬಂದರೂ ತನ್ನನ್ನು ಬೆನ್ನಟ್ಟಿ ಬಂದ ಕಾಮನ ಬಾಣದ ಬಾಯಲ್ಲಿ ಸಿಕ್ಕಿಕೊಂಡೇ ಬಂದಳೆಂಬಂತೆ ಬಂದಳು.

೨೨. ಸ್ಮರತಾಪದಿಂದಾದ ಬೆವರನ್ನು ಆಕಾಶ ಪ್ರಯಾಣದಿಂದಾದ ಬೆವರಿನಲ್ಲಿಯೂ (ಕಾಮದಿಂದ) ಹೊಮ್ಮಿದ್ದ ಕಣ್ಣೀರನ್ನು ಸೋತ ಜುಗುಪ್ಸೆಯಿಂದ ಉಕ್ಕುವ ಕಣ್ಣೀರಿನಲ್ಲಿಯೂ ಮನ್ಮಥಾವೇಗದಿಂದುಂಟಾದ ಉಚ್ಛ್ವಾಸ ಶ್ರಮವನ್ನು, ಉಡ್ಡಾಣದ ಶ್ರಮದಲ್ಲಿಯೂ ಕಾಮೋದ್ಭವ ರೋಮಾಂಚವನ್ನು ಚಳಿಗಾಳಿಯಿಂದೆದ್ದ ರೋಮಾಂಚದಲ್ಲಿಯೂ ಆಕೆ ಬೆರಸಿಕೊಂಡು ಬಂದಳು.

೨೩. ಆ ಸ್ತ್ರೀಯು ಮದನಾವಸ್ಥೆಗೊಳಗಾಗಿ ಸುರಿದ ಕಣ್ಣೀರು ಕಿಕ್ಕಿರಿದು ಇಕ್ಕಟ್ಟಾದ ಅವಳ ಮೊಲೆಗಳ ಸಂದಿನಲ್ಲಿ ಸ್ನೇಹಗೊಂಡು ನಿಂತುವಲ್ಲದೆ, ಅಲ್ಲಿಂದ ನುಸುಳುವುದಕ್ಕೆ ಅವುಗಳಿಗೆ ಅವಕಾಶವೆ ಇರಲಿಲ್ಲ ಎಂದ ಮೇಲೆ ಮುತ್ತಿನ ಹಾರ ಅವುಗಳ ಮಧ್ಯೆ ನುಸುಳುವುದುಂಟೆ?

---

೧ ದೋ (ಕ, ಪ). ೨ ಪೋ (ಕ). ೩ ರ್ಪಂತೆನ (ಕ, ಮ, ಪ). ೪ ಅಂತೆ (ಕ, ಪ). ೫ ನಳುರ್ವೆ (ಮ), ನಳ್ರ್ವೆ (ಕಾ). ೬ ಯು ಮೇಲೆ (ಕ, ಮ). ಯ ಮೇಲೆ (ಪ). ೭ ಳ್ಕೊಳ (ಕ, ಪ). ೮ ಸ್ತ್ರ (ಕ, ಪ).

ಜವದಿಂ ವಿದ್ಯಾಧರರಿಯಂ
ವಿವೇಕವಿದ್ಯಾಧರಾಂಕನೇಂ ಗೆಲ್ದನೆ ಕೈ
ತವದಿಂ ಬಟಲಿಸಿ ಗೆಲಿಸಿದ
ನಿವನೆನೆ ಕಾಮಂ ವಿಕಾರಭರಮಂ ಪಡೆದಂ ೨೪

ವ॥ ಅಂತಾಕೆ ಯಾವ ಮೆಯ್ಯೊಳಂ ಸೋಲ್ತು ಚಿಂತಾಗತಿಗೆ ಜಿನಪೂಜೆಗೆಂದು ಪಿಡಿದು ಪೋದ ಪೂಮಾಲೆಯನಿದಕ್ಕೆ ಮತ್ತಾವನುಂ ಯೋಗ್ಯನಲ್ಲಂ ಭಾವೀ ಜಿನನಪ್ಪ ನೀನೆ ಯೋಗ್ಯನೆಂಬಂತೆ ಮಾಲೆ ಸೂಡಲೆತ್ತಿದೊಡೆ ಪಾವಂ ಕೊರಲೊ[೧]ಳಿಕ್ಕಲೆತ್ತಿ[೨]ದಂತಗಿದು ಪಾಜೆ ಪೆಜಮೆಟ್ಟಲೊಡನೆ

ಮುರಿದಿಸುವಂತೆ ಮೊಲ್ಲೆಯೆಸಳಿಂ ಮಿಗೆ ಸಲ್ಲಿಸುವಂತೆ ಕಾಂತೆ ತಾ
ವರೆಯೆಸಳಿಂದೆ ಕೇದಗೆಯ ಕೂರೆಸಳಿಂದವನೊಲ್ಲದೇವದಿಂ
ಸುರಿಗಿಜಿವಂತೆ ನೆಯ್ದಿಲೆಸಳಿಂ [ದಿಡು]ವಂತೆ ನವೀನ ಕಾಂತಿ ನೀ *
ಳ್ದಿರೆ ಕಡೆಗಣ್ಣ ಕಕ್ಕಡೆಯಿನೇಂ ಮುನಿದಿಟ್ಟಳೊ ಮಾನವೇಂದ್ರನಂ ೨೫

ಅವನೀ ಭರ್ತಾರನ ಚಿ
ತ್ತ[೨]ವಜ್ರಮಂ ತಾಗಿತಾಗಿ ತರಳಾಪಾಂಗಂ
ಸಿವುಜಿರ್ದಂತೆವೊಲೆಸೆದುವು
ಯುವತಿಯ ನವಕರ್ಣಪೂರಕುವಲಯದಲರ್ಗಳ್ ೨೬

೨೪. ವಿದ್ಯಾಧರಿಯನ್ನು ವಿವೇಕವಿದ್ಯಾಧರನಾದ ಚಿಂತಾಗತಿಯೇನು ವೇಗದಲ್ಲಿ ಗೆದ್ದನೆ? ಅಲ್ಲ, ಮೋಸದಿಂದ ಆಯಾಸಗೊಳಿಸಿ ತಾನೆ ಅವಳನ್ನು ಸೋಲಿಸಿದನೆಂಬಂತೆ ಕಾಮನು ಅವಳಲ್ಲಿ ಮನ್ಮಥ ವಿಕಾರಗಳನ್ನು ಹುಟ್ಟಿಸಿದನು.

ವ॥ ಹೀಗೆ ಆಕೆ ಎಲ್ಲ ರೀತಿಯಿಂದಲೂ ಸೋತು, ಜಿನಪೂಜೆಗೆಂದು ತಾನು ತೆಗೆದುಕೊಂಡು ಹೋಗಿದ್ದ ಹೂಮಾಲೆಯನ್ನು "ಇದಕ್ಕೆ ಬೇರೆ ಯಾವನೂ ಯೋಗ್ಯನಲ್ಲ, ಮುಂದೆ ಜಿನನಾಗಲಿರುವ ನೀನೇ ಯೋಗ್ಯ"ನೆಂಬಂತೆ ಚಿಂತಾಗತಿಯ ಕೊರಳಿಗೆ ಹಾಕಲು ಕೈಯೆತ್ತಿದಳು. ತಟ್ಟನೆ ಅವನು ಕೊರಳಿಗೆ ಹಾವನ್ನೆ ಇಡಬಂದಲೆಂಬಂತೆ ಬೆದರಿ ಹಾರಿ ಹಿಮ್ಮೆಟ್ಟಲಾಗಿ -

೨೫. ಮೊಲ್ಲೆಯ ಎಸಳಿನಿಂದ ತಿವಿಯುವ ಹಾಗೆ, ತಾವರೆಯೆಸಳಿನಿಂದ ಚುಚ್ಚುವ ಹಾಗೆ, ಕೇದಗೆಯ ಹದನಾದ ಎಸಳಿನಿಂದ ಇರಿಯುವ ಹಾಗೆ, ಇವನು ನನ್ನನ್ನು ಮೆಚ್ಚನಲ್ಲಾ ಎಂದು ಹೇವದಿಂದ ನೈದಿಲೆಯ ಎಸಳಿನಿಂದ ಚುಚ್ಚುವಂತೆ ಆಕೆ ತನ್ನ ಕಟಾಕ್ಷದ ಕಠಾರಿಯಿಂದ ಎಷ್ಟು ತೀಕ್ಷ್ಣವಾಗಿ ಅವನನ್ನು ಇರಿದಳು!

೨೬. ಆ ಭೂಪತಿಯ ವಜ್ರಚಿತ್ತವನ್ನು ತಾಕಿ ತಾಕಿ ಆಕೆಯ ಚಂಚಲ ಕಟಾಕ್ಷಗಳು ಸೀಳಿ ಸಿಗುರೆದ್ದುವೊ ಏನೊ ಎಂಬಂತೆ ಆ ಯುವತಿಯ ಕರ್ಣಪೂರವಾದ ನೈದಿಲೆ ಹೂಗಳು ಕಂಗೊಳಿಸಿದುವು.

---

೧ ಳಿಕ್ಕಿ (ಕ, ಪ), * ಈ ಪದ್ಯವು ಕ, ಮ, ಪ್ರತಿಗಳಲ್ಲಿ ಇಲ್ಲ. ೨ ತ್ರ (ಮ).

ವ|| ಆಕೆಯ ನೋಟಕ್ಕೆ ನಸುನಗುತ್ತುಮೀ ಗೆಲ್ಲ[೧]ಮೆನ್ನ ತಮ್ಮಂದಿರ ಸೋಲಮಲ್ಲದೆನ್ನ ಗೆಲ್ಲ[೨]ಮಲ್ಲದಿವರಿರ್ವರೊಳಾವಂ ನಿನ್ನ ಮನಕ್ಕೆ ವಂದಪ[೩]ನವಂಗೆ ಮಾಲೆಯಂ ಸೂಡೆನೆ ಸಿಗ್ಗಾಗಿ ವಿಳಾಸವತಿಯಿಂತೆಂದಳ್

ನೀರೇಜ[೪]ನಿಯೆನಿತಲರ್ದೇಂ
ಸಾರದೆ ಪೋದಂ ದಿನೇಶನಂತೆನಗಂ ನೀಂ
ದೂ[೫]ರ ಪ್ರಿಯನಾದೈ ಸಂ
ಸಾರಂ ವೃ[೬]ಥೆಯಾದುದೆಂದು ಬೆ[೭]ಚ್ಚನೆ ಸುಯ್ದಳ್ ೨೭

ನಿನ್ನೊಂದೆ ನೋಟ[೮]ಗುಣದಿಂ
ನಿನ್ನಿಂದಮುಮುಱುವ ಮದೆವನೊಳ್ ಮದುವೆಯ ನಿಂ
ದಾನ್ನಿಲ್ಲದಂತು[೧೦] ತಪ್ಪೆಂ
[೧೧]ನನ್ನಿಗೆ[೧೧] ಪುಸಿದಂದು ನಗಿ[೧೨]ಸದೇ[೧೨] ಮತ್ಕುಲಮಂ ೨೮

ವ|| [೧೩]ಉಂತುಂ[೧೩] ನಿನಗಾಂ ಮುನಿಯಲೇಕೆ ಪಸೆಯೊಳೆ ಪಾವು ಕೊಂಡುದೆಂಬಂತೆನಗೆ ನಿನ್ನಂತಪ್ಪ ಪುರುಷನಂ ದೊರೆಕೊಳಿಸಿ ಕಳಿಂಚು ಮಾಡಿ ಕಳೆದ ದುರ್ವಿದಗ್ಧವಿಧಾತ್ರಂಗೆ ಮುನಿವೆನಾಂ ಮುನ್ನಂ ಬೇಱೆ ನೋಂತೆನಿಲ್ಲಕ್ಕುಮರ್ಹದ್ದೇವನೊಂದು ಚರಣಕ್ಕೆ ಪೂವಂ ಮಿ[೧೪]ಗೆಯೇ[೧೪]ಱಿಸಿ ಮತ್ತೊಂದು ಚರಣಕ್ಕೆ ಏಱಿಸಲ್ಮಱೆದೆನಕ್ಕುಮೆಂದಾ ನಿರ್ವೇಗದೊಳೆ ಬೇಗಂ ಪೋಗಿ ಮುನ್ನಂ ತನ್ನ ಮದುವೆಗಿಕ್ಕಿದ ಪೂವಿನ ಪಂದರೊಳ್ ತಪಮೆಂಬ ಮದವನಿಗನೊಳ್ಮದುವೆ ನಿಲಲ್ಬಗೆದು

ವ|| ಆಕೆಯ ನೋಟಕ್ಕೆ ನಸುನಗುತ್ತ, "ಈ ಗೆಲವು ನನ್ನ ತಮ್ಮಂದಿರ ಸೋಲಲ್ಲದೆ ನನ್ನ ಗೆಲವಲ್ಲ; ಇವರಿಬ್ಬರಲ್ಲಿ ನಿನ್ನ ಮನಸ್ಸಿಗೆ ಬಂದ ಒಬ್ಬನಿಗೆ ಮಾಲೆ ಹಾಕು" ಎಂದು ಅವನು ಹೇಳಿದೊಡನೆ, ಜುಗುಪ್ಸೆಗೊಂಡು ವಿಳಾಸವತಿ ಹೀಗೆಂದಳು -

೨೭. "ತಾವರೆ ಎಷ್ಟೊಂದು ಅರಳಿದರೇನು? (ಪ್ರಿಯನಾದ) ಸೂರ್ಯನು ಬಳಿಬರದೆ ಹೋಗಿಬಿಟ್ಟನು. ಅದರಂತೆ ನೀನು ನನಗೆ ಪ್ರಿಯನಾದರೂ ನನ್ನಿಂದ ದೂರವಾದೆ. ಸಂಸಾರ ವ್ಯರ್ಥವಾಯಿತು" ಎಂದು ನುಡಿದು ಆಕೆ ಬೆಚ್ಚಗೆ ನಿಟ್ಟುಸಿರಿಟ್ಟಳು.

೨೮. ನಿನ್ನನ್ನೆ ಮದುವೆಯಾಗಬೇಕು. ನೋಟಕ್ಕೆ ಎಂತಹ ಮಿಗಿಲಾದ ಮದುವೆ ನನಗೇ ಬರಲಿ, ಅವನನ್ನು ತಾನು ಮದುವೆಯಾಗಲಾರೆ. ನುಡಿದ ಮಾತಿಗೆ ತಪ್ಪಿದರೆ ನನ್ನ ಕುಲಕ್ಕೆ ಅಪಮಾನವಲ್ಲವೆ?

ವ|| ಸುಮ್ಮನೆ ನಿನ್ನ ಮೇಲೆ ನನಗೆ ಕೋಪವಾದರೂ ಏಕೆ? ಹಸೆಯಲ್ಲಿಯೆ ಹಾವು ಕಚ್ಚಿತೆಂಬಂತೆ ನಿನ್ನಂತಹ ಪುರುಷನನ್ನು ನನ್ನೆದುರಿಗೆ ತಂದು, ನನಗೆ ದಕ್ಕದಂತೆ ಮೋಸ ಮಾಡಿದ ವಿಧಿಗೇ ನಾನು ಮುನಿಯುವೆನು, ಪೂರ್ವಜನ್ಮದಲ್ಲಿ ನಾನು ವ್ರತಪಾಲನೆಯನ್ನು ಚೆನ್ನಾಗಿ ಮಾಡಿರಲಿಕ್ಕಿಲ್ಲ. ಅರ್ಹಂತನ ಒಂದು ಪಾದಕ್ಕೆ ಮಿಗಿಲಾಗಿ ಹೂವೇರಿಸಿ

---

೧ ಲ (ಕಾ, ಮ, ಪ) ೨ ಲ (ಕಾ, ಮ. ಪ) ೩ X (ಕ, ಮ, ಪ) ೪ ಜ (ಕ, ಮ, ಪ). ೫ ಸಾ (ಕಾ). ೬ ವ್ಯ (ಪ). ೭ ಚೆ (ಕ). ೮ ಡೆ (ಕಾ). ೯ ದೆ (ಕಾ, ಮ). ೧೦ ದು.(ಕಾ, ಮ). ೧೧ ನಗೆ (ಕಾ). ೧೨ ಸಿದೆಂ (ಕಾ). ೧೩ ಉತ್ತುಂಗ (ಪ), ಉತ್ತುಂಗಿ (ಕ), ಎಂತುಂ (ಮ). ೧೪ ಗಲೇ (ಮ).

ಪಾಸಿದ[೧]ಪಸೆಯ ಮೇಲೆ [೨]ಮಲ್ಲಂತಿಗಿಱಿದು[೨] ಕುಳ್ಳಿರ್ದು ಕೆಯ್ಯಿಕ್ಕಿಕೊಂಡಿರ್ಪುದುಮಾ ಉನ್ಮೀಲಿತ ಲೋಚನೆ ಲೋಚಂ ಮಾಡಲೆಂದು ರಾ[೩]ಮಾರ್ಜಿಕಾಕರೇಣುಕರ ಕೋಮಲಾಂಗುಲಿ[೪]ಗಳ[೪] ಗಳಿಸಿಯಳಿಕುಳಮಳಿನಮಪ್ಪ ಕುಂತಳ ಕಮಳವನದೊಳಗೆ ಪುಗುವಾಗಳ್

ಅಳಕೆಯ ಕಂಪಿಂಗೆಱಗಿ
ರ್ದಳಿಗಳ್ಪಾಱಿದುವು ಕುಸುಮ ಕೋಮಳೆಯೇನಾ
ರ್ಪಳೆ [೫]ಕೀಟಿ[೫] ಸೈರಿಸಲ್ಕೆಂ
ದಳರ್ಗಕಂಗಳ್ತಮಗೆ ತಾವೆ ಪಾಱುವ ತೆಱದಿಂ ೨೯

ಬೆದಱಿ [೬]ಕಡುತಪ[೬]ದ ಕಿರ್ಚಿ
ರ್ದುದನೀಕ್ಷಿಸಿ ಪಿಡಿದು ರತಿಯ ಕೆಯ್ಯಂ[೭] ಮಿಗೆ ತೀ
ವಿದ ಮನೆ ತೀವಿರ್ದಂದದೆ
ಮದನಂ ತದ್ರೂಪ ಭವನದಿಂ ಪೊಱಮಟ್ಟಂ ೩೦

ವ॥ ಅಂತು ತನ್ನೊಡವಂದ ಸಾಸಿರ್ವರ್ಸಖಿಯರ್ವೆರಸು ತಪಂಬಟ್ಟು ಮುನ್ನೆ ತನ್ನ ಕುಚ[೮]ಕಚ[೮] [೯]ವಿಕಚ[೯]ವಿಲೋಚನಾದ್ಯವಯವಂಗಳ್ಗೆಱಗದಾತನ ನಿಜ ಚರಣಕ್ಕೆಱಗಿಸಿ[೧೦]ದ ಖಚರಿಯ ಪರಿಚ್ಛೇದಕ್ಕೆ ಮೆಚ್ಚಿ

ಇನ್ನೊಂದು ಪಾದಕ್ಕೆ ಏರಿಸುವುದನ್ನೆ ಮರೆತಿರಬೇಕು" ಹೀಗೆಂದು ಆ ವಿರಾಗಭಾವನೆಯಲ್ಲಿಯೆ ಬೇಗ ಬೇಗ ಹೋಗಿ, ತನ್ನ ಮದುವೆಗೆಂದು ಸಿದ್ಧಪಡಿಸಿದ್ದ ಹೂವಿನ ಹಂದರದಲ್ಲಿ ತಪವೆಂಬ ಮದುವಣಿಗನೊಡನೆ ಮದುವೆಯಾಗುವೆನೆಂದು ಹಾಸಿದ ಹಸೆಯ ಮೇಲೆ ಆಸನಬದ್ಧಳಾಗಿ ಕೈಬಿಟ್ಟು ಕುಳಿತುಕೊಂಡಳು. ರಾಮಾರ್ಯಿಕೆಯರ ಕೋಮಲವಾದ ಬೆರಳುಗಳು 'ಲೋಚು' ಮಾಡುವುದಕ್ಕಾಗಿ ಆಕೆಯ ತಲೆಗೂದಲನ್ನು ಹೊಕ್ಕಾಗ -

೨೯. ಕೂದಲನ್ನು ಹಿಡಿದು ಕಿತ್ತಲೆ ಹೂವಿನಂತೆ ಕೋಮಲೆಯಾದ ಇವಳು ಸೈರಿಸಲಾರಳೆಂದು ತಿಳಿದು, ಆ ಕೂದಲು ತಮ್ಮಷ್ಟಕ್ಕೆ ತಾವೆ ಮೇಲಕ್ಕೆ ನೆಗೆದು ಬಂದುವೊ ಏನೊ ಎಂಬಂತೆ, ಕಂಪಿಗೆ ಎರಗಿದ್ದ ದುಂಬಿಗಳು ಮೇಲಕ್ಕೆ ಹಾರಿದುವು.

೩೦. ಘೋರತಪಸ್ಸಿನ ಕಿಚ್ಚು ಎದ್ದುದನ್ನು ಕಂಡು ಅಂಜಿದ ಕಾಮನು ರತಿಯ ಕೈಹಿಡಿದುಕೊಂಡು ತುಂಬಿದ ಮನೆಯನ್ನು ತುಂಬಿದ್ದಂತೆಯೇ ಬಿಟ್ಟುಹೋಗುವ ಹಾಗೆ ರೂಪಭವನವಾದ ಆಕೆಯ ಶರೀರದಿಂದ ಹೊರಟು ಹೋದನು.

ವ॥ ಈ ಮೋರೆಗೆ ತನ್ನ ಸಂಗಡ ಬಂದು ಸಾವಿರ ಸಖಿಯರೊಡನೆ ತಪಸ್ಸಿಗೆ ಹೊರಟು ಈ ಮುಂಚೆ ತನ್ನ ಮೊಲೆ, ಮುಂಗುರುಳು, ಅರಳಿದ ಕಣ್ಣು ಮೊದಲಾದ ಅವಯವಗಳ ಚೆಲುವಿಗೆ ಎರಗದಿದ್ದವನನ್ನು ಈಗ ತನ್ನ ಪಾದಗಳಿಗೆ ಎರಗಿಸಿಕೊಂಡ ಖೇಚರಿಯ ದೃಢನಿರ್ಧಾರವನ್ನು ಮೆಚ್ಚಿ -

---

೧ ನ (ಕಾ). ೨ ಮಾಲಂತಿಗಿಱಿದು (ಕ), ಪುಲ್ಲಂತಿಱಿದು (ಪ). ೩ ರೋ (ಕಾ), ವಾ (ಪ). ೪ ಗಳಂ (ಕಾ). ೫ ಕಿಟಿ ಸಯಿರಿಸಲೆಂದವಳ (ಕಾ), ಕಿಳೆ ಸಯಿಸಲ್ಕಿಂದವರ (ಮ). ೬ ಕುಡುಪದ (ಕ, ಪ). ೭ ಯ್ಯಿಂ (ಕಂ). ೮ X (ಕ). ೯ X (ಮ, ಪ). ೧೦ X (ಕ, ಮ).

ಆ ಗುಣವತಿಯ ತಪಂ ನಿ
ರ್ವೇಗಕೆ ನಿಮಿತ್ತಮಾಗೆ ನಿಶ್ಚಿಂತಂ ಚಿಂ
ತಾಗತಿಯ[೧]ನುಜ ಸಮೇತಂ[೧]
ಭೋಗಮನಿಂಬಿಟ್ಟು ದೀಕ್ಷೆಯಂ ಕೆಯ್ಕೊಂಡಂ ೩೧

ಅಸಿಯಳ್ ಖೇಚರಮನೊಲ್ಲದಿರ್ದೊಡೆ ತಪಂಬಟ್ಟಂದದಿಂದಾ ಬುಧಂ
ಬಿಸುಟುರ್ವೀವಧು ಭೂಮಿಭೃದ್ಭುಜವನಕ್ಕೇಟ್ಟಿಂದು ವೈರಾಗ್ಯದಿಂ
ದಸಿಧಾರಾವ್ರತಮಂ ನೆಗಟ್ಟಿ[೨] ತಳೆದಳ್ತಾನುಂ ಕ್ಷಮಾರೂಪಮಂ
ಮಸೆ[೩]ದಂ ಕಲ್ಪಿಲಸವೇಟ್ಟುದೇ ಪುರುಡಿನೊಳ್ಪೆಂಡಿರ್ಗೆ ಪಾಂಡಿತ್ಯಮಂ ೩೨

ವ॥ ಅಂತು ಮೂವರುಮೊರ್ವಳೊಳೆ [೪]ಮದುವೆ ನಿ[೫]ಲ್ಲೆವೆಂ[೫]ಬ ಚಿಂತಾಗತಿಯುಂ ಮನೋಗತಿಯುಂ ಚಪಳಗತಿಯುಂ ದಮಧರ ಗುರುಗಳಡಿದಳಿರ್ಗಳೆಂಬ ತಳಿರ್ವಂದರೊಳ್ತಪೋವಧುವಿನೊಳ್[೪] ಮದುವೆ ನಿಂದು ನಿಜಾಯುರವಸಾನದೊಳ್ ಮಹೇಂದ್ರಕಲ್ಪದೊಳ್ ಸಾಮಾನಿಕ ನಿಳಿಂಪರಾದರ್

ಆ ಚಿಂತಾಗತಿಯೈ ನೀಂ
ಭೂಚರಪತಿ ಮಕುಟಮಣಿಗಣಾರ್ಚಿತ ಪದಕಮ
ಳಾ ಚಪಳಗತಿ ವಿಯಚ್ಚರ
ನೀ ಚಾರಣತಿಲಕನಾಂ ಮನೋಗತಿಯೆಂಬೊಂ[೬] ೩೩

ವ॥ ಅಲ್ಲಿ ಸಪ್ತಸಾಗರ ಜೀವನಮಂ ಜ[೭]ವನೆಂಬಗಸ್ತ್ಯ [೮]ನೀಂಟೆ[೮] ನೀಂ ಬಂದಪರಾಜಿತ ನಾದೆಯಾಮಿರ್ವರ್ಮುಂಬಂದು ಜಂಬೂದ್ವೀಪದ ಪೂರ್ವವಿದೇಹದ ಪುಷ್ಕಳವತೀ ವಿಷಯದ

೩೧. ಆ ಗುಣವಂತೆಯ ತಪಸ್ಸೇ ವೈರಾಗ್ಯ ಕಾರಣವಾಗಿ ಚಿಂತಾಗತಿಯು ನಿಶ್ಚಿಂತನಾಗಿ ತನ್ನ ತಮ್ಮಂದಿರೊಡನೆ ಭೋಗಜೀವನವನ್ನು ತೊರೆದು ತಪೋದೀಕ್ಷೆಯನ್ನು ಕೈಕೊಂಡನು.

೩೨. ಖೇಚರನು ಒಲ್ಲೆನೆಂದಾಗ ಆ ಸುಂದರ ವಿದ್ಯಾಧರಿ ತಪಕ್ಕೆ ಹೊರಟಳು. ಅವಳಂತೆಯೆ ಆ ರಾಜಕುಮಾರನಿಂದ ತ್ಯಕ್ತಳಾದ ರಾಜ್ಯವೆಂಬ ವಧುವು ಕೂಡ 'ಭೂಮಿಭೃದ್ಭುಜ'ಕ್ಕೆ (೧. ಬೆಟ್ಟದ ಸಾನುಪ್ರದೇಶಕ್ಕೆ ೨. ಇನ್ನೊಬ್ಬ ಅರಸನ ತೋಳುಗಳಿಗೆ) ಬಂದು, "ಅಸಿಧಾರಾ ವ್ರತ" (೧. ಕಠಿನವಾದ ತಪೋವ್ರತ ೨. ಖಡ್ಗಧಾರೆಯಿಂದ ಶತ್ರುಗಳನ್ನು ಜಯಿಸುವ ವ್ರತ)ವನ್ನು ಆಚರಿಸಲೆಂದು 'ಕ್ಷಮಾರೂಪ' (೧. ಕ್ಷಮಾಗುಣ ವಿಶಿಷ್ಟವಾದ ಸಂನ್ಯಾಸರೂಪ ೨. ಭೂಮಿಯ ರೂಪ) ವನ್ನು ತಾಳಿದಳು. ಹೆಂಗಸರಿಗೆ ಹುರುಡಿಸುವ ಪಾಂಡಿತ್ಯವನ್ನು ಕಲಿಸಿಕೊಂಡಬೇಕೆ? (ಕಂಸಗಳಲ್ಲಿರುವ ಮೊದಲನೆಯ ಅರ್ಥ ವಿದ್ಯಾಧರಿಗೂ, ಎರಡನೆಯ ಅರ್ಥ ರಾಜ್ಯವಧುವಿಗೂ ಅನ್ವಯಿಸುತ್ತದೆ).

ವ॥ ಹೀಗೆ ಚಿಂತಾಗತಿ, ಮನೋಗತಿ ಚಪಳಗತಿಗಳೆಂಬ ಮೂವರೂ ದಮವರ ಗುರುಗಳ ಸನ್ನಿಧಿಯಲ್ಲಿ ತಪೋದೀಕ್ಷೆಯನ್ನು ಕೈಕೊಂಡು ತಪಸ್ಸು ಮಾಡುತ್ತ ತಮ್ಮ ಆಯುಷ್ಯ ತೀರಿದ ಬಳಿಕ ಮಹೇಂದ್ರಕಲ್ಪದಲ್ಲಿ ಸಾಮಾನಿಕದೇವರಾದರು.

---

೧ ನನುಜಸಂಯುತ (ಕ), ನುಜಯುತಂ ಸಂ (ಪ). ೨ ಟ್ಟಿ (ಕ) ೩ ದೆಂ ಕೇಳ್ಪಿ (ಕಾ). ೪ X (ಕ. ಪ). ೫ ಲ್ಲಳಿಂ (ಕಾ) ೬ ಬಂ (ಕ). ಬೆಂ (ಮ, ಪ). ೭ ಜೀ (ಕ, ಪ). ೮ ನಿಂದೆ

ವಿಜಯಾರ್ಧದುತ್ತರ ಶ್ರೇಢಿಯ ಗಗನವಲ್ಲಭ ನಗರಮನಾಳ್ವ ಗಗನಚಂದ್ರ ಖಚೇರೇಂದ್ರಂಗಂ ಗಗನಸೌಂದರಿಗಮಮಿತಗತಿಯುಮಮಿತತೇಜನುಮೆಂಬ ತನುಜ[೧]ರೆಮಾ[೨]ಗಿ ಪುಂಡರೀಕಿಣಿಯೊಳ್ ಪುಂಡರೀಕತ್ರಯಾದಿ ವಿಭವ ವಿಭ್ರಾಜಿತನಾಗಿರ್ದ ಸ್ವಯಂಪ್ರಭ ಜಿನಪ್ರಭುವಂ ಪೂಜಿಸಲ್ವೋಗಿ ಭವದೀಯ ಭವತ್ರಯಮಮಂ ಜಗತ್ರಯಪತಿಯ ಪಕ್ಕದೊಳ್ಕೇಳ್ದು ಸರ್ವಸಂಗಮುಮಂ ಬಿಸುಟ್ಟು ಸಂಯಮಮಂ ಕಳಿದುಕೊಂಡು ಸದಾಚರಣದಿಂ ಗಗನಚಾರಣ ಋ[೩]ದ್ಧಿ ಸಂಪನ್ನರೆಮಾಗಿ ನಿನ್ನಂ ನೋಡಲೆಂದು ಬಂದೆವಲ್ಲದೆಯುಂ ನಮ್ಮನ್ಯೋನ್ಯ ಪ್ರೀತಿನಿಮಿತ್ತಮಪ್ಪ ಪೂರ್ವಭವ ಪ್ರಪಂಚಮಂ ಪೇಟ್ವೊಡೆ

ಬಳಿದೆಸೆವ ಮಗಧಮಂ
ಡಳದೊಳಗೆಸೆವುದು ಕಾನನಂ ಕಳಂಕಂ ಶಶಿಮಂ
ಡಳದೊಳೆಸೆವಂತೆ ಮೃಗಮದ
ಮಳಿನಂ ವಲ್ಮೀಕ ಮೃಗ ಮಹಾಮಹಿಮಜಯಂ ೩೪

ಅದು ಜಂಬೂ ಜಂಭ ರಂಭಾ[೪]ಕುಳಕ ಬಕುಳ ಕಂ[೪]ಪಿಲ್ಲ [೫]ಸತ್ರಾರ್ಣ[೫]ಸಪ್ತ
ಚ್ಛದ ನಾದೇಯ ಪ್ರಿಯಾಳ ಪ್ರಿಯಕ ಕುರವಕಾಶೋಕ [೬]ನಿಂಬಾ[೬]ಮ್ರ [೭]ಕುಂಭೀ[೭]
ಬದರ ನ್ಯಗ್ರೋಧ ಗುಂ[೮]ದ್ರಾ ಪಿಚುಳ ನಿಚುಳ ಕಾಶ್ಮರ್ಯ ಮಾಲೂರ ಲೋಧ್ರೋಂ[೯]
ಗುದಿ ಕಾಕ್ಷ ಪ್ಲಕ್ಷ ಪಥ್ಯಾಮಳಕ ತಿಳಕ ಭೂರ್ಜಾದಿ ಭೂಜಾವಕೀರ್ಣಂ ೩೫

೩೩. ಅನೇಕ ಭೂಪತಿಗಳನ್ನು ತಲೆಬಾಗಿಸಿಕೊಂಡ ಮಹಾತ್ಮನೇ, ನೀನೇ ಚಿಂತಾಗತಿ. ಈ ಚಾರಣಶ್ರೇಷ್ಠನು ಚಪಳಗತಿಯಾಗಿದ್ದವನು. ಮನೋಗತಿಯೆಂಬವನು ನಾನೇ.

ವ।। ಆ ಮಹೇಂದ್ರಕಲ್ಪದಲ್ಲಿ ಏಳುಸಾಗರದಷ್ಟು ಕಾಲವಿದ್ದು, ಯಮನೆಂಬ ಅಗಸ್ತ್ಯನು ನಿನ್ನ ಆಯುಷ್ಯವೆಂಬ ಕಡಲನ್ನೆಲ್ಲ ಕುಡಿಯಲಾಗಿ, ಅಲ್ಲಿಂದ ಬಂದು ನೀನು ಅಪರಾಜಿತನಾದೆ. ನಾವಿಬ್ಬರೂ ಬಂದು ಜಂಬೂದ್ವೀಪದ ಪೂರ್ವವಿದೇಹದಲ್ಲಿರುವ ಪುಷ್ಕಳಾವತೀ ವಿಷಯದ ವಿಜಯಾರ್ಧಪರ್ವತದುತ್ತರ ಶ್ರೇಢಿಯ ಗಗನವಲ್ಲಭಪುರಕ್ಕೆ ಅಧಿಪತಿಯಾದ ಗಗನಚಂದ್ರನೆಂಬ ಖೇಚರರಾಜನಿಗೂ ಗಗನಸೌಂದರಿಗೂ ಅಮಿತಗತಿ ಮತ್ತು ಅಮಿತತೇಜ ಎಂಬ ಮಕ್ಕಳಾಗಿ ಹುಟ್ಟಿದೆವು. ಪುಂಡರೀಕಿಣಿಯಲ್ಲಿ ಸ್ವಯಂಪ್ರಭ ಜಿನೇಂದ್ರನನ್ನು ಪೂಜಿಸಲೆಂದು ನಾವು ಹೋದಾಗ, ಅಲ್ಲಿ ನಿನ್ನ ಮೂರೂ ಜನ್ಮಗಳ ಕಥೆಯನ್ನು ಕೇಳಿ ತಿಳಿದುಕೊಂಡು ಸರ್ವಸಂಗವನ್ನು ತೊರೆದು ತಪಸ್ಸು ಮಾಡಿ ಸದಾಚರಣೆಯಿಂದ ಗಗನಚಾರಣ ಬುದ್ಧಿಯನ್ನು ಗಳಿಸಿದ್ದರಿಂದ ನಿನ್ನನ್ನು ನೋಡಲೆಂದು ಬಂದೆವು, ನಮ್ಮ ಪರಸ್ಪರ ಪ್ರೀತಿಗೆ ಕಾರಣವಾದ ಪೂರ್ವಜನ್ಮಗಳ ಕಥೆಯನ್ನು ಹೇಳುತ್ತೇವೆ, ಕೇಳು-

೩೪. ಚಂದ್ರಬಿಂಬದ ಮಧ್ಯದಲ್ಲಿ ಕಪ್ಪುಕಲೆ ಶೋಭಿಸುವಂತೆ, ಮಗಧರಾಜ್ಯದ ನಡುವೆ ಕಸ್ತೂರಿಯಿಂದ ಕಪ್ಪಾದ, ಹುತ್ತುಗಳಿಂದಲೂ ಮೃಗಗಳಿಂದಲೂ ಅತಿಶಯವಾದ ಅಡವಿಯೊಂದು ಶೋಭಿಸುವುದು.

೩೫. ನೇರಿಳೆ, ನಿಂಬೆ, ಬಾಳೆ, ತೂಬರೆ, ಬಕುಲ, ಕಂಪಿಲ್ಲ, ಸತ್ರಾರ್ಣಾ (?)

---

೧ ರಾ (ಕ), ೨ ತ (ಪ), ೩ ರಿ (ಮ), ರ (ಕಾ). ೪ ಕಕುಭಕುಳಕ ಕಂ (ಕಾ), ಕುಳಬಕುಳ ಕಂ (ಮ). ೫ ಸಂತಾನ (ಮ), ಪತ್ರಾರ್ಣ (ಕಾ). ೬ ಶಾಕಾ (ಕಾ), ಶಾಂಕಾ (ಮ). ೭ ಕಂಬೀ (ಮ). ೮ ಗಂ (ಕಾ), ೯ ಧ್ರಂ (ಕಾ).

ನವ ನಿರ್ಮೋಕಗ್ರಹ ವ್ಯಾಕುಳ ನಕುಳಕುಳಂ ಫೇ[1]ರವಸ್ಫಾರ ಥಕ್ಕಾ
ರವ[2]ವಲ್ಗ[2]ದ್ವಾನರಂ ಮಾರುತ ಚಳಿತ ತಮಾಳಾಹಿತೋತ್ಕಂಠ ಕಂಠೀ
ರವ ದಂತಿಭ್ರಾಂತಿಧಾವದ್ದವ ಕಿಸಲಯ ಜಾಲಾ[3]ನು ಸಂಸರ್ಪಿ ಶೂರ್ಪ
ಶ್ರವ ಸಂಭ್ರಸ್ಯತ್ವ[4] ತಂಗಾಶಯ ಶಯಗಿಳಿತಾ[5]ಪತ್ತ್ರತತ್ಕೀರ್ಣ[5]ಪರ್ಣಂ ೩೬

ಕದಳೀ ಪ್ರಿಯಕ ಶಿವಾರ್ಜುನ
ಕದಂಬ ಪುನ್ನಾಗ ಕಾಳ ಚಮರಕ ಶಲ್ಯಾ
ಸ್ಪದಮಾಯ್ತು ಪುದಿದ ಪಾದಪ
ಕದಂಬದಿಂ ಮೃಗಕದಂಬದಿಂದಾ ವಿಪಿನಂ ೩೭

ಅಳಗರ್ದಮಾಳುದಾನಕ
ತಿಳಿತ್ಸ ನಿರ್ಮುಕ್ತ ಶೇಷಶ[6]ಯು ವಾಸುಕಿ ರಾ
ಜಿಳ ಜಾಳ ನಿಕೇತಂ ಕ
ಲ್ಟಿಳಿಪುದು ಫಣಿಲೋಕದಂತೆ ತತ್ಕಾಂತಾರಂ ೩೮

ಏಳಿಲೆಬಾಳೆ, ಹೇರೀಳೆ, ಮೊರಟೆ, ಪ್ರಿಯಂಗು, ಕುರವಕ, ಅಶೋಕ, ಬೇವು, ಮಾವು, ಕಿರಿಯ ಶಿವನಿ, ಎಲಚಿ (ಬೋರೆ) ಆಲ, ಗುಂದ್ರ (ಕಾಗೆಬಿದಿರು?) ಕಕ್ಕೆ, ನೀರುಹಲಸು, ಸೀವನ್ನಿ, ಮಾಲೂರ, ಲೋಧ್ರ, ಇಂಗಳ, ಬಸರಿ, ನೆಲ್ಲಿ, ತಿಲಕ, ಭೂರ್ಜ ಮೊದಲಾದ ಮರಗಳಿಂದ ಅದು ಕಿಕ್ಕಿರಿದಿತ್ತು.

೩೬. (ಭ್ರಾಂತಿಯಿಂದ) ಹೊಸ ಪೊರೆಗಳನ್ನು ಹಿಡಿದು ಹಾವುಗಳನ್ನು ಕಾಣದೆ ವ್ಯಾಕುಲವಾದ ಮುಂಗುಸಿಗಳು, ಕೂಗುವ ನರಿಗಳು, ಕುಣಿದಾಡುವ ಕೋತಿಗಳು, ಗಾಳಿಯಲ್ಲಿ ಮೆಲ್ಲಗೆ ಹೊಯ್ದಾಡುತ್ತ ಸಿಂಹಕ್ಕೆ ಆನೆಯ ಭ್ರಾಂತಿಯನ್ನು ಉಂಟುಮಾಡುವ ಹೊಂಗೆಯ ಕಪ್ಪುವರ್ಣ, ದಾವಾನಲದ ಜ್ವಾಲೆಗಳೆಂಬ ಭ್ರಮೆಯುಂಟು ಮಾಡುವ ಕೆಂಪು ಚಿಗುರೆಲೆಗಳು, ಹರಿದಾಡುವ ಆನೆಯೆಂದು ಬಳಿಗೆ ಬಂದು ಹೆಬ್ಬಾವಿನ ಬಾಯಿಗೆ ಬೀಳುವ ಪಕ್ಷಿಗಳು - ಇವುಗಳಿಂದ ಆ ಕಾಡು ತುಂಬಿತ್ತು. (ಪದ್ಯ ಕ್ಲಿಷ್ಟವಾಗಿದೆ)

೩೭. ಕದಳಿ (ಬಾಳೆ), ಪ್ರಿಯಕ (ಹೊನ್ನೆ), ಶಿವ (ಗಂಧದ ಮರ), ಅರ್ಜುನ (ಮತ್ತಿಮರ), ಕದಂಬ (ಕಡಹದ ಮರ), ಪುನ್ನಾಗ (ನಾಗಕೇಸರ), ಕಾಳ (ಎಲಚಿ), ಚಮರಕ (ಕೋವಿದಾರ), ಶಲ್ಯ (ಬಿಲ್ವವೃಕ್ಷ) ಮೊದಲಾದ ಮರಗಳಿಂದ ಕಿಕ್ಕಿರಿದು ಆ ಕಾಡು, (ಅನುಕ್ರಮವಾಗಿ) ಆನೆ, ಸಾರಂಗಮೃಗ, ಈಶ್ವರ, ಅರ್ಜುನ, ಕದಂಬರಾಜ, ಪುರುಷೋತ್ತಮ, ವಿಷ್ಣು, ಚಮರಮೃಗ, ಶಲ್ಯರಾಜ ಇವರಿಗೆಲ್ಲ ಆಸ್ಪದವಾಗಿತ್ತು. (ಇಲ್ಲಿರುವ ಮರಗಳ ಹೆಸರುಗಳಿಗೆಲ್ಲ ಶ್ಲೇಷೆಯಿಂದ ಎರಡೆರಡು ಅರ್ಥ.)

೩೮. ಅಳಗರ್ದ (ನೀರುಹಾವು), ಮಾಳುದಾನಕ (ಊಸರವಳ್ಳಿ ಹಾವು), ತಿಳಿತ್ಸ (ಹೆಬ್ಬಾವು), ಪೊರೆ ಕಳಚಿಸಿದ ಶೇಷ, ದಾಸರಿಹಾವು, ವಾಸುಕಿ, ಉರಿಸಿಂಗಿಯೆಂಬ

---

೧ ಸ್ಫೇ (ಮ). ೨ ವಲ್ಲ (ಕಾ), ವಾಲ (ಕ). ೩ ಲೋ (ಮ) ೪ ತ್ವ (ಕಾ). ೫ ಥ ಪತ್ತ್ರೀರ್ಣ (ಮ), ಧಃ ಪದಜ್ಜೀರ್ಣ (ಕಾ). ೬ ಸ (ಕಾ).

ತ್ರಿಪದಿ॥ [೧]ಕಾನೊಳಗೆ ಕನಪುಂಸಾ ನ ಗಂತಬ್ಯಮೆಂ[೧]
ದೀ ನಡೆದಪುವೆ ತಿಮಿರದೊಳೆನಿಪುವು
ನಾನಾಹಿ [೨]ಮಸ್ತ[೨] ಮಣಿದೀಪಂ[೩] ೩೯

ಕರಟತಟ[೪]ಗಳಿ[೪]ತ ಮದ ಸುಂ
ದರ ಶುಭಗ[೫]ಸಲೀ[೬]ಲಗತಿಗೆ ಸೋಲ್ತು ಕರಂ ಕೇ
ಸರಿಣಿ ನಡೆನೋಡೆ[೭]ರದನಿಗೆ
ಪುರುಡಿಸಿ ಪಾಯ್ವಂತೆ ಪಾಯ್ದುದಲ್ಲಿ ಮೃಗೇಂದ್ರಂ ೪೦

ಭೃಂಗಮಳಿನೋಪಕಂಠಂ
ತುಂಗಶಿಖಾಚುಂಬಿಚಳಿತ ಚಂದ್ರಂ [೮]ಗಿರಿಜೇ[೮]
ಶಂ[೯]ಗೆಣೆವಂದುದು[೧೦] [೧೧]ವನ[೧೧]ದ ಭು
ಜಂಗಮವಳಯಾವಿ[೧೨]ಭಾಸಿ ಚಂದನನಿವಹಂ ೪೧

ಎರಡು ತಲೆಯ ಹಾವು - ಇವುಗಳ ಸಮೂಹಕ್ಕೆಲ್ಲ ಆಶ್ರಯವಾಗಿ ಆ ಕಾಡು ಸರ್ಪ ಲೋಕದಂತೆ ಅಂಧಕಾರಮಯವಾಗಿರುವುದು.

೩೯. "ಕಾಡಿನಲ್ಲಿ ಯಾವ ಮನುಷ್ಯನೂ ಬರಕೂಡದು" ಎಂದು ಸರ್ಪಗಳು ಕತ್ತಲೆಯಲ್ಲಿ ದೀಪ ಹಿಡಿದುಕೊಂಡು ಗಸ್ತು ತಿರುಗುತ್ತಿವೆಯೋ ಏನೊ ಎಂಬಂತೆ ಅನೇಕ ಸರ್ಪಗಳ ಹಣೆಮಣಿಗಳು ಹೊಳೆಯುತ್ತಿದ್ದವು.

೪೦. ಗಂಡಸ್ಥಳದಿಂದ ಇಳಿಯುವ ಮದೋದಕದಿಂದ ಶೋಭಿಸುತ್ತ, ನಡೆಯುವ ಸಲಗನ ಮನೋಹರವಾದ ಗತಿಗೆ ಮನಸೋತು ಸಿಂಹಿಣಿ ಕಣ್ಣಿಟ್ಟು ನೋಡುತ್ತಿರಲಾಗಿ ಅಸೂಯೆಯಿಂದ ಅದನ್ನು ಆಕ್ರಮಿಸಿತೊ ಏನೊ ಎಂಬಂತೆ ಸಿಂಹವು ಆ ಆನೆಯನ್ನು ಆಕ್ರಮಿಸಿತು. *(ಇದರ ಪಾಠಾಂತರವನ್ನು ಈ ಕೆಳಗಿನಂತೆ ತಿದ್ದಿಕೊಳ್ಳಲಾಗಿದೆ)

೪೧. ತಮ್ಮ ಕೊರಳಿನ ಪ್ರದೇಶದಲ್ಲಿ ದುಂಬಿಗಳ ಹಿಂಡಿನಿಂದ ಕಪ್ಪಾಗಿಯೂ, ಉನ್ನತವಾದ ಕೊಂಬೆಗಳಿಂದ ಚಂದ್ರಬಿಂಬವನ್ನು ಚುಂಬಿಸುತ್ತಲೂ ಇರುವ ಗಂಧದ ಮರಗಳು ತಮ್ಮ ಮೈತುಂಬ ಸುತ್ತಿಕೊಂಡ ಸರ್ಪಗಳಿಂದ ಶೋಭಿಸುತ್ತ (ನೀಲಕಂಠನೂ, ಚಂದ್ರಶೇಖರನೂ, ಸರ್ಪಾಭರಣನೂ ಆದ) ಶಿವನಿಗೆ ಸದೃಶವಾದುವು.

---

೧ ಕಾನೊಳಕ ಪುಂನಾನಗಂ ತವೆ ಮೆಂ (ಮ). ವಾಮಾಳಕ ಪುಂನಾಗಗಂ ತವೆ ಮೆಂ (ಕ, ಪ), [ಇಲ್ಲಿಯ 'ವಾಮಾಳ' ಎಂಬುದಕ್ಕೆ ಪ ಪ್ರತಿಯಲ್ಲಿ 'ಕಾಮೋಳ' ಎಂಬ ಪಾಠಾಂತರ ಕೊಟ್ಟಿದೆ. ನಮ್ಮ ಕ ಪ್ರತಿಯಲ್ಲಿ 'ಕಾಮಾಳ' ಎಂದಿದ್ದ ಮೂಲ ಲೇಖನವನ್ನು 'ಕಾಮೋಳ' ಎಂಬುದಾಗಿಯೂ ತರುವಾಯ 'ವಾಮಾಳ' ಎಂಬುದಾಗಿಯೂ ತಿದ್ದಿರುವಂತೆ ಕಂಡುಬರುತ್ತದೆ. ಇದು ಬಹುಶಃ 'ಕಾನೊಳ' ಪಾಠವನ್ನು ಅನುಮೋದಿಸುತ್ತದೆ]. ೨ ಮಸ್ತ (ಕ, ಮ, ಪ). ೩ ಪಾ (ಕ, ಮ, ಪ). ೪ ಘಟಿ (ಕ, ಮ, ಪ). ೫ ಗಂ (ಕ, ಕಾ). ೬ ಲ್ಲಿ (ಮ). ೭ ಡ (ಕಾ, ಮ). ಡೆ (ಕ). ೮ ನೀರೇ (ಕಾ), ೯ ಜಂ (ಕಾ). ೧೦ ವು (ಕಾ, ಮ). ೧೧ ಜಗ (ಕ), ಜನ (ಮ). ೧೨ ದಿ (ಕ, ಪ).

ಅಡಸಿ ಫಣಿ ಸುತ್ತೆ ಚಂದನ
ದ[೧]ಡಿ ಮೊದಲುಮನೊರಸಿಕೊಳ್ವ ಕೊರಲುಮನೆಳೆ ಸೊ
ರ್ಕೆಱಡೆದ[೨] ಕಟತಟದಿನಿಟಿತರೆ
ನಡುಪ[೩]ಟ್ಟಿಭಮಲ್ಲಿ ಕಟ್ಟುಪ[೪]ಟ್ಟವೊಲಿರ್ಕುಂ ೪೨

ಪಿಡಿದು ಕೊಲೆ[೫] ಜೀವರಾಶಿಯ
ನಡಿಗಡಿಗರೆಯಾದೊಡಾಯುಗಳ್[೬]ಪ್ರಾಣಮನಾ
ಗಡೆ ಪಾಯ್ದುಕೊಳ್ವ ತೆಱದಿಂ
ಕುಡಿವುವು ಬಾಯ್ದೆಱೆ[೩]ದು ಪವನನಂ ಫಣಿತತಿಗಳ್ ೪೩

ಜಡೆಯುಂ ಬಕ್ಕಳೆಯುಮನಾ
ಳ್ದಡವಿಯೊಳಿರ್ದೆಲರ[೭]ನಲೆದು[೭] ಕೋಟರ ಮುಖದಿಂ
ಕುಡಿವ ವಟವಿಟಪಿಪಟಳಂ
ತುಡುಂಕುವಂತಿರ್ಪುದಾವ ಚೋದ್ಯಮೊ ದಿವಮಂ ೪೪

ನೀರಡಿಸಿದ ಕಾಸರಪತಿ
ಕೇರೆಯ ನಗದೊಸರೆ ಗೆತ್ತು ನಕ್ಕುವುದಹಿಯುಂ[೮]
ಸೈರಿಭದ ಬಾಯ ನೊರೆಯಂ
ಸೈರಿಸಿ ಪಾಲೆಂದು ನಕ್ಕುವುದು ಕಾನನದೊಳ್ ೪೫

೪೨. ಗಂಧದ ಮರದ ಬೊಡ್ಡೆಗೆ ಒರಸಿಕೊಳ್ಳುತ್ತಿರುವ ಮದದಾನೆಯ. ಕೊರಳನ್ನು ಆ ಮರದ ಹಾವು ಸುತ್ತಿಕೊಂಡಿತು; ಅದರ ಕುಂಭಸ್ಥಳ ಬಿರಿತು ಮದೋದಕವು ಗಂಡಸ್ಥಳದಿಂದ ಧಾರೆಯಾಗಿ ಇಳಿಯಿತು. ಹೀಗೆ (ಮದೋದಕ ರೇಖೆಯಿಂದಲೂ, ಕೊರಳು ಸುತ್ತಿದ ಹಾವಿನಿಂದಲೂ) ಆ ಆನೆ (ಹಗ್ಗದ) ಕಟ್ಟಿಗೆ ಒಳಗಾದಂತೆ ತೋರುತ್ತಿತ್ತು.

೪೩. ಜೀವರಾಶಿಯನ್ನು ಹಿಡಿದು ಕೊಂದಂತೆಲ್ಲ ಕೊರತೆಯಾಗುತ್ತಿರುವ ತಮ್ಮ ಪ್ರಾಣವನ್ನು ಆಗಿಂದಾಗಲೆ ಮರಳಿ ತುಂಬಿಕೊಳ್ಳುತ್ತಿರುವುವೊ ಏನೊ ಎಂಬಂತೆ ಹಾವುಗಳು ಬಾಯಿ ತೆರೆದು ಗಾಳಿಯನ್ನು ಕುಡಿಯುತ್ತಿರುವುವು.

೪೪. 'ಜಡೆ' (ಬಿಳಲು), 'ಬಕ್ಕಳೆ' (ತೊಗಟೆ)ಗಳನ್ನು ಧರಿಸಿ ಅಡವಿಯಲ್ಲಿದ್ದು ತಮ್ಮ ಪೊಟರೆಗಳೆಂಬ ಬಾಯಿಂದ ಗಾಳಿಯನ್ನು ಒಳಗೆ ತುಂಬಿಕೊಂಡು ಕುಡಿಯುವ ಆಲದ ಮರಗಳು 'ದಿವ' (ಆಕಾಶ)ವನ್ನು ಕೈಚಾಚಿ ಹಿಡಿಯುವಂತಿರುವುದೇನು ಸೋಜಿಗವೆ? (ಜಟಾಧಾರಿಗಳೂ, ಬಕ್ಕಳೆ (ವಲ್ಕಲ) ಧಾರಿಗಳೂ ಆಗಿ ಕಾಡಿನಲ್ಲಿ ತಪಸ್ಸು ಮಾಡುತ್ತ ವಾಯುಸೇವೆಯಿಂದಲೆ ಬದುಕುವ ಯತಿಗಳು 'ದಿವ' (ಸ್ವರ್ಗ)ವನನು ಹಿಡಿದುಕೊಳ್ಳುವುದು ಸ್ವಾಭಾವಿಕ. ಅವರಂತೆ ವರ್ತಿಸುವ ಆಲದ ಮರಗಳು ಹಾಗೆ ಮಾಡುವುದೇನಾಶ್ಚರ್ಯ?)

೪೫. ಕಾಡಿನಲ್ಲಿ ನೀರಡಿಸಿದ ಕಾಡುಕೋಣವೊಂದು ಕೆರೆಯ ಹಾವನ್ನು ಬೆಟ್ಟದಿಂದ ಒಸರುವ ನೀರಧಾರೆಯೆಂದು ನೆಕ್ಕುವುದು; ಆ ಕೋಣನ ಬಾಯಿಂದ ಹೊಮ್ಮುವ ನೊರೆಯನ್ನು ಹಾಲೆಂದು ಭ್ರಮಿಸಿ ಆ ಹಾವೂ ಅದನ್ನು ನೆಕ್ಕುವುದು.

---

೧ ಕ (ಪ). ೨ ದು (ಪ). ೩ ಪು (ಕಾ). ೪ ವ (ಪ). ೫ ಳೆ (ಕಾ). ೬ ಳ (ಮ) X (ಕ) ೭ ನಲದೆ (ಕ, ಪ). ನೊರೆದು (ಕಾ). ೮ ಯಂ (ಕಾ).

ತಾರಗೆಯೆನೆ ತೊನೆದೊಟ್ಟಿದ
ಮೂರಿಯ ರೋಮಂಥ[೧] ಫೇನ ಮಂಜರಿನಿಕರಂ
ಕಾರಿರುಳ ತಿರುಳಿದೆನೆ ಮದ
ಸೈರಿಭಮಿರ್ಪುವು ಚಳತ್ತಮಾಳದ ನೆೞಲೊಳ್ ೪೬

ಗಿರಿಗುರು [ಚ[೨]]ಪೇಟ ಪಾ[೩]ಟಿತ
ಕರಿಯಂ ಹರಿ ಕೊಂಡು ಕೀೞೆ ಪಾಱುವುದರುಣಾ
ತ್ಯರುಣ ತನು ತ[೪]ರುಚರೇಂ[೫]ದ್ರಂ
ಶರಧಿಗೆ [೬]ಕರ್ಬೆ[೬]ಟ್ಟವೆತ್ತಿ ಪಾಱುವ ತೆಱದಿಂ ೪೭

ಬಲಿದುಗುರ್ಗಳಿಲ್ಲ ಪಲ್ಗಳ
ಬಲಮಿಲ್ಲ ಕಡಂಗಿ ಕಾದುವುವು ಕಾನನದೊ
ಳ್ಳೊಲಗದೆಳವೆಳಗುಮೆಳಗ
ೞ್ತಲೆಯುಂ ತಲೆ[೭]ವತ್ತುವಂತೆ[೭] ಹರಿಕರಿ ಶಿಶುಗಳ್ ೪೮

ತಮಮಂ ಕಾಡೊಳಕೊಂಡು ಕಾದಪಗೆ ತಮ್ಮಿರ್ವರ್ಗಮಂತಾದೊಡಂ
ಸಮಮರ್ಕಂ ಸುಡುತುಂ ನಿಜಾತ್ಮಶಿಖಿ[೧]ಯಿಂ [ದಾ][೧] ನಂದಿಪಂ ಚಂದ್ರನಿಂ
ದು[೨]ಮಣಿ ಸ್ರೋತದಿ[೩]ನೆಂಬವೋಲ್ವಿಪಿನದೊಳ್ಕಾದುತ್ಪಳಾನೀಕಮಂ
ಕಮಳಾನೀಕಮನರ್ಕಗೃಹ್ಯಕುಲಮಂ ಕೊಲ್ಗುಂ ವನೇಭೋತ್ಕರಂ ೪೯

೪೬. ಕಟವಾಯಿಯಿಂದ ಸುರಿಸುರಿದು ಒಟ್ಟಿಕೊಂಡ ನೊರೆ ನಕ್ಷತ್ರ ಸಮೂಹದಂತೆ ಇರಲಾಗಿ, ಅಲುಗಾಡುವ ಹೊಂಗೆ ಮರದ ನೆಳಲಲ್ಲಿ ನೆಲಸಿದ ಉನ್ಮತ್ತ, ಕಾಡುಕೋಣಗಳು ಕಗ್ಗತ್ತಲೆಯಿರುಳಿನ ತಿರುಳೊ ಏನೊ ಎಂಬಂತೆ ತೋರುವುವು.

೪೭. ಮೈಯೆಲ್ಲ ಕಡುಗೆಂಪಾದ ವಾನರೇಂದ್ರ (ಹನೂಮಂತ)ನು ಕರಿಯ ಬೆಟ್ಟವನ್ನೆತ್ತಿಕೊಂಡು ಕಡಲಿಗೆ ಹಾರುವಂತೆ, ತನ್ನ ಮುಂಗಾಲ ಪಂಜರದಿಂದ ಸೀಳಿದ ಆನೆಯನ್ನು ಎತ್ತಿಕೊಂಡು ಸಿಂಹವು ಬೆಟ್ಟಕ್ಕೆ ನೆಗೆಯುವುದು.

೪೮. ಇನ್ನೂ ಉಗುರು ಬಲಿಯದ ಸಿಂಹದ ಮರಿಗಳೂ, ಕೋರೆಗಳ ಬಲವಿಲ್ಲದ ಆನೆಮರಿಗಳೂ ಒಂದನ್ನೊಂದು ಎದುರಿಸಿ, ಎಳೆಯ ಬೆಳಕು ಹಾಗೂ ನಸುನಗುತ್ತಲೆಗಳು ಹೋರಾಡುವಂತೆ ಆವೇಶದಿಂದ ಕಾದಾಡುವುವು.

೪೯. ಕತ್ತಲೆಯನ್ನು ಒಳಗಿಟ್ಟುಕೊಂಡು ರಕ್ಷಿಸಿದ್ದರಿಂದ ಅಡವಿಯು ಸೂರ್ಯಚಂದ್ರರಿಬ್ಬರಿಗೂ ಶತ್ರುವಾಗಿದೆ; ಆದುದರಿಂದ ಸೂರ್ಯನು ತನ್ನ (ಬಿಸಿಲೆಂಬ) ಬೆಂಕಿಯಿಂದ ಅದನ್ನು ಸುಡುತ್ತಿದ್ದರೂ ಚಂದ್ರನು ಚಂದ್ರಕಾಂತ ಶಿಲೆಗಳನ್ನು ಒಸರಿಸುತ್ತ ಕಾಡಿಗೆ ಸಂತೋಷವನ್ನು ಒದಗಿಸುತ್ತಿರುವನು. ಹೀಗೆಂದುಕೊಂಡೊ ಏನೊ ಕಾಡಾನೆಗಳ ಹಿಂಡು (ಚಂದ್ರನಿಗೆ

---

೧ ದ (ಮ). ೨ ಜ (ಕ, ಕಾ, ಮ). ೩ ವಾ (ಮ). ೪ ರ (ಕಾ), ೫ ಕೇಂ (ಕಾ). ೬ ಕೆಯ್ಬೆ (ಕ, ಪ), ಕಬ್ಬೆ (ಮ). ೭ ವೆತ್ತದಂತೆ (ಕ), ವತ್ತುವಂತೆ (ಮ), ಯೆತ್ತುವಂತೆ (ಪ). ೧ ಯೆಂತಾ (ಕಾ). ಯಿಂತಾ (ಕ, ಮ). ೨ ದ್ಯು (ಕ, ಮ). ೩ ದೆ (ಕ).

ಆ ವನದೊಳಿರ್ಪುದವತಮ[1]
ಸಾವೃ[2]ತದೊಳೊಂದು ಶಬರ ಶಿಬಿರಂ ಪಾಪಂ[3]
ತೀವಿದವೋಲ್ಪಾತಾಳದೊ
ಳಾವಗಮಿರ್ಪಂತೆ ದುಷ್ಟದಾನವ ಶಿಬಿರಂ ೫೦

ಪೊಡೆದೆ[4]ತ್ತಂ ಪರಿಯುತ್ತುಮಿರ್ಪ ಪುೞುವಂ ತಿಂಗುಂ ಶಿಶುಶ್ರೇಣಿಗಳ್
ಪಿಡಿದುರ್ಕಿಂ ಪೊಲಗೆಟ್ಟು ಪೊಕ್ಕ ಮೃಗಶಾಬಾನೀಕಮಂ ಕೊಂದು[5] ಕೇ
ಸಡಗಂ ಸೂಡುವರಲ್ಲಿ ಬಾಲೆಯರೆನ[6]ಲ್ಕೊಮೊ[6]ತ್ತದಿಂ ಮತ್ತಮೊಂ-
ದೆಡೆಗೇನೀಗುಮೆ ಪೋಗಲುತ್ಕಟ ಮಹಾಪಾಪ[7]ಕ್ಕಣಂ[7] ಪಕ್ಕಣಂ ೫೧

ಮದಗಜಕುಂಭಕೋಟಿಯ ಕಲಂಕಗಿ[8]ದಂತದ [9]ಕೇ ತ್[9]ರಕ್ಕು ಚ
ರ್ಮದ ತೆರೆಸುತ್ತು ಕೇಸರಿಯ ದಾಡೆಯ ಜೂದಿನ[10]ದಿಂಟೆ[10] ಪೀಲಿಯಂ[11]
ಪೊದಸಿದ ಪಂದರಾ[12]ಳಿಯಲರಾನೆಯ ಮುತ್ತಿನರಾಶಿ ಜೇನ ತು
ಪ್ಪದ ಕೆಱೆಯಲ್ಲಿನೆತ್ತರ ಕೊಳಂ ಚಮರೀವ್ಯಕವಾಳ ತೋರಣಂ ೫೨

ಆ ಪಳ್ಳಿಗಧಿಪನಾದೊಂ[13]
ಕೋಪದೊಳಿರದರುಣನಾದ ಸಂಗರ ವಿಚಳ
ಚ್ಚಾಪದೊಳರ್ಜುನನಾದಂ
ರೂಪದೊಳತಿ ಕೃಷ್ಣನಾದ ವಿಂಧ್ಯಕನೆಂಬೊಂ[14] ೫೩

ಪ್ರಿಯವಾದ) ಬೆಳ್ದಾವರೆಗಳನ್ನು ಸುರಕ್ಷಿತವಾಗಿಟ್ಟು, ಸೂರ್ಯನ ಕುಟುಂಬಕ್ಕೆ ಸೇರಿದ ಕೆಂದಾವರೆಗಳನ್ನು ಕಿತ್ತು ನಾಶ ಮಾಡುವುವು.

೫೦. ಪಾಪದಿಂದ ತುಂಬಿದ ಪಾತಾಳಲೋಕದಲ್ಲಿ ದುಷ್ಟ ರಾಕ್ಷಸರ ಶಿಬಿರವು ನೆಲೆಸಿರುವಂತೆ ಕತ್ತಲೆ ತುಂಬಿದ ಆ ಕಾಡಿನಲ್ಲಿ ಒಂದು ಬೇಡರ ಪಾಳ್ಯ ಇರುವುದು.

೫೧. ಅಲ್ಲಿ ಎತ್ತೆತ್ತಲೂ ಹರಿದಾಡುತ್ತಿರುವ ಹುಳುಗಳನ್ನು ಅಲ್ಲಿಯ ಚಿಕ್ಕ ಚಿಕ್ಕ ಮಕ್ಕಳು ಹೊಡೆದು ತಿನ್ನುವುವು; ಹಾದಿ ತಪ್ಪಿ ಬಂದ ಜಿಂಕೆಮರಿಗಳನ್ನು ಕೊಂದು, ಅಲ್ಲಿಯ ಹುಡುಗೆಯರು ಅವುಗಳ ಹಸಿ ಖಂಡವನ್ನು ತಮ್ಮ ತಲೆಗಳಲ್ಲಿ ಮುಡಿದುಕೊಳ್ಳುವವು. ಎಂದ ಮೇಲೆ ಆ ಪಾಳ್ಯವು ಮಹಾಪಾಪಕ್ಕೆ ಅಲ್ಲಿಂದ ಬೇರೆಡೆಗೆ ಹೋಗಲು ಸ್ವಲ್ಪವಾದರೂ ಅವಕಾಶವೀಯುವುದುಂಟೆ?

೫೨. ಮದದಾನಗಳ ಕುಂಬಸ್ಥಳಗಳೆ ಕಲಶಗಳು; ಹಸ್ತಿದಂತದ ಗೋಡೆ ಹುಲಿಚರ್ಮದ ಜವನಿಕೆ; ಸಿಂಹದ ಕೋರೆಹಲ್ಲುಗಳಿಂದ ರಚಿಸಿದ ಜೂಜಿನ ಕಟ್ಟೆ; ನವಿಲುಗರಿಯನ್ನು ಹೊಚ್ಚಿದ ಹಂದರಗಳು; ಆನೆಗಳ ನೆತ್ತಿಯಿಂದ ತೆಗೆದ ಮುತ್ತುಗಳ ರಾಶಿಯೆ ಹೂ; ಜೇನುತುಪ್ಪದ ಕೆರೆ; ನೆತ್ತರಿನ ಕೊಳ; ಚಮರೀಮೃಗದ ಬಾಲಗಳಿಂದ ಮಾಡಿದ ತೋರಣಗಳೂ (ಆ ಪಾಳ್ಯದಲ್ಲಿ ತೋರುತ್ತಿದ್ದುವು).

೫೩. ಕೋಪದಲ್ಲಿ ಅರುಣನಂತೆ ಕೆಂಪಾದವನೂ, ಯುದ್ಧ ಪ್ರಸಂಗದಲ್ಲಿ

---

೧ ವ (ಕಾ), ೨ ಮ್ಯ (ಕಾ). ೩ ವಂ (ಕ, ಪ). ೪ ದ (ಕ, ಪ) ೫ ಡು (ಕ, ಪ). ೬ ಲ್ಯೂರ್ಮೋ (ಮ), ಲ್ಯೂರ್ಮೆ (ಕ, ಪ). ೭ ಕ್ಕೆ ತಾಂ (ಕ, ಪ). ೮ ರಿ (ಕಾ, ಮ). ೯ ಕೆತ್ತೆ (ಕಾ, ಮ), ೧೦ ದೀಂಟೆ (ಕ). ೧೧ ಯಿಂ (ಕಾ, ಮ). ೧೨ ರೋ (ಮ). ೧೩ ದಂ (ಕ, ಮ). ೧೪ ಬಂ (ಕ. ಮ).

ಪೊಸ ಕೋಲಂ ಗಱಿಗಟ್ಟುವಂ ಗರುಡಪಕ್ಷಚ್ಛೇದದಿಂ, ತಿರ್ದುವಂ
ಪ್ರಸರದ್ದಂತಿಯ ದಂತದೊಳ್, ಹರಿಯ ದಂಷ್ಟ್ರಾಲೇಖೆಯಂ ಕಿಟ್ಟು ತೆ
ತ್ತಿಸುವಂ ಲೀಲೆಯೊಳರ್ಧಚಂದ್ರಶ[೧]ರಮಂ ಮಾಟ್ಟಿಟ್ಟೆ[೨]ಯಿಂ[೩]ದಣ್ಮು ದ[೩]
ಳ್ಪಿಸೆ ಸಿಂಹೀಶ[೪]ತನೇತ್ರದತ್ತ ಪತಿ[೫]ಶೋಕಾವಂಧ್ಯಕಂ ವಿಂಧ್ಯಕಂ ೫೪

ಜಯವಡೆದಾ ಪುಳಿಂದ[೬]ಪತಿಯಾಡುವ ಬೇಂಟೆಗೆ ಬೆರ್ಚಿ ಪೋಗಿ ಚಂ
ಡಿಯ ಮಱೆಯಂ ಮೃಗಾರಿ [೭]ಮುರವೈ[೭]ರಿಯ ಮೆಯ್ಮಱೆಯಂ ಖಗೇಂದ್ರನು
ರ್ವಿಯ ಮಱೆಯಂ ಮಹಾಪ್ರಳಯದಾದಿ ವರಾಹನಿದದ್ಭುತಂ ದಿಶಾ
ಳಿಯ ಮಱೆಯಂ ಗಡಿನ್ನುಮವೆ ಪೊಕ್ಕುಳಿದಿರ್ದಪುವಷ್ಟದಂತಿಗಳ್ ೫೫

ಆ ವನಚರನ ಮನಃಪ್ರಿಯೆ
ಪೂವಿನ ಬಿಲ್ಲಾತನವಳ [೮]ನವ ಯೌವನ[೮]ಲ
ಕ್ಷ್ಮೀವನಚರನೆನೆ ದೃಕ್ ಶಫ
ರೀ ವಾಗುರಿ[೯] ಪೆಸರೊಳಾಕೆ ವಾಗುರೆ[೧೦]ಯೆಂಬಳ್ ೫೬

ವಾಗುರಿಕೆಯ ಮೊಲೆವೆಟ್ಟದ
ಮೇಗಣ ಪರಿಪಕ್ವ ಬಿಂಬಫಲರಸಮಂ ಪೀ
ರ್ದಾಗಳೆರ್ದೆ ತಣ್ಣನೆ ತಣಿ
[೧೧]ದೋಗಡಿ[೧೧]ಸಿರಲುಳಿದ ಪಣ್ಣನೊಲ್ಲಂ ಭಿಲ್ಲಂ ೫೭

ಅರ್ಜುನನಂತೆ ಧನುರ್ವಿದ್ಯಾನಿಪುಣನೂ, ರೂಪದಲ್ಲಿ (ಕಪ್ಪುವರ್ಣದಿಂದ) ಕೃಷ್ಣನೂ ಆದ ವಿಂಧ್ಯಕನೆಂಬವನು ಆ ಬೇಡರ ಪಾಳ್ಯಕ್ಕೆ ಅರಸಾಗಿರುವನು.

೫೪. ನೂರಾರು ಸಿಂಹಿ (ಹೆಣ್ಣು ಸಿಂಹ)ಗಳ ಕಣ್ಣುಗಳಲ್ಲಿ ಹೊಮ್ಮುತ್ತಿರುವ ಪತಿಶೋಕ(ದ ಭಯ)ವನ್ನು ಹುಸಿಗೊಳಿಸದ ವಿಂಧ್ಯಕನು ಗರುಡ ಪಕ್ಷಿಯ ರೆಕ್ಕೆಯನ್ನು ಕತ್ತರಿಸಿ ಅದರಿಂದ ತನ್ನ ಹೊಸ ಬಾಣಕ್ಕೆ ಗರಿಗಟ್ಟುವನು; ಆನೆಯ ಕೋರೆಯಿಂದ ತೀಡುವನು; ಅರ್ಧಚಂದ್ರ ಬಾಣವನ್ನು ನಿರ್ಮಿಸಬೇಕೆಂದು ಸಿಂಹದ ದಾಡೆ ಹಲ್ಲನ್ನು ಕಿತ್ತು ಅದಕ್ಕೆ ಅಲಗಾಗಿ ಜೋಡಿಸುವನು.

೫೫. ಆ ಬೇಡರ ದೊರೆ ಆಡುವ ಬೇಟೆಗೆ ಹೆದರಿ ಸಿಂಹವು ಚಂಡಿಕಾದೇವಿಯ ಮರೆಯನ್ನೂ, ಗರುಡನು ವಿಷ್ಣುವಿನ ಮರೆಯನ್ನೂ ಆದಿವರಾಹನು ಪೃಥ್ವಿಯ ಮರೆಯನ್ನೂ ಅಷ್ಟದಿಗ್ಗಜಗಳು ದಿಕ್ಕುಗಳ ಮರೆಯನ್ನೂ ಹೊಕ್ಕು ಬದುಕಿಕೊಂಡುವೆಂದರೆ ಅವನ ಬೇಟೆಯ ಅದ್ಭುತವೆಂತಹುದು!

೫೬. ಮನ್ಮಥನೆಂಬ ಬೇಟೆಗಾರನಿಗೆ ವಾಸಸ್ಥಾನವೆನಿಸುವ ನವಯೌವನವುಳ್ಳವಳೂ ನೋಡುವವರ ಕಣ್ಣೆಂಬ ಮೀನುಗಳಿಗೆ ಬಲೆಯಂತೆ ಇರುವವಳೂ ಆದ ವಾಗುರೆ ಎಂಬುವಳು ಆ ಬೇಡನಿಗೆ ಹೆಂಡತಿಯಾಗಿರುವಳು.

೫೭. ವಾಗುರಿಯ ಮೊಲೆಗಳೆಂಬ ಬೆಟ್ಟದ ಮೋಗಡೆ ಇರುವ ಪರಿಪಕ್ವವಾದ

---

೧ ಸ (ಕಾ, ಮ). ೨ ರ್ಥ (ಮ). ೩ ದುಣ್ಮುದ (ಕ, ಪ). ದಣ್ಮುವ (ಕಾ). ೪ ಸು (ಕ, ಪ). ೫ ರಿ (ಕಾ) ೬ ದಿ (ಕ, ಪ). ೭ ಯ ಮುರಾ (ಕ) ೮ ಯೌವನವನ (ಕಾ) ೯ ರೆ (ಕಾ) ೧೦ ರೆ (ಕಾ). ೧೧ ದೀಗಡಿ (ಮ), ದೀಗಡ (ಕ, ಪ).

ಎನಿತುಂ[೧] ಕ[೨]ಟ್ತಲಿ[೨]ಸಿದೊಡಂ
ವನೇಚರಂ ನಡೆವನಡರೆ ಪೊಳೆದಡಗದ ಮಿಂ
ಚಿನ ಗೊಂಚಲಂತೆ ಮಿಂಚುವ
ವನೇಚರಿಯ ಬಳಿಯ[೩] ಕಣ್ಣ ಬೆಳಗಿಂ ಬನದೊಳ್ ೫೮

ಧವಳವಿಲೋಚನಂ ಪೊಳೆವ ಪೂ[ವ[೪]]ನೆ ಪೀನಕುಚಂ ಪ್ರಗಲ್ಭಗು
ತ್ಸವ[೫] [ಮ]ನೆನಮ್ರ[೫] ಬಾಹು ಸೆಳೆಗೊಂಬ[೬]ನೆ ಜಾತ್ಯರು[೭] ಣಾಧರಾಂಶು ಪ
ಲ್ಲವಮ[೮]ನೆ ಪೋಲೆ ವಿಂಧ್ಯಕನ ಬೆಂಬಟಿಯಂ[೯] ವನಲಕ್ಷ್ಮಿ ಕೂರ್ತು ಬ
ರ್ಪವೊಲಿರೆ ಬರ್ಪಳಾ ಶಬರಿ ಸೋರ್ಮುಡಿ ಕ[೧೦]ಟ್ತಲಿ[೧೦]ಸುತ್ತುಮಿರ್ಪಿನಂ ೫೯

ವ|| ಅಂತವರ್ ಕೃತಕಕಿರಾತ ಭೂತಪತಿಯುಂ ವನಚರೀವೇಷವಶಗತ ಭವಾನಿಯು ಮಿರ್ಪಂತಿರ್ಪ[೧೧]ರುಮನ್ಯೋನ್ಯ[೧೨] ಸಕ್ತರುಮವಿಯುಕ್ತರುಮಾಗಿ ರಾಗದಿಂದಮಿರೆ

ಕಟಿದುದು ಮೊಲ್ಲೆ ಮಲ್ಲಿಗೆ ಮುಗುಳ್ತುದು ಕೊಂಚೆಯ ಪಂಜ್ತೆಯಿಂದ[೧೩]ರಂ
[೧೪]ಪಟಿ[೧೪]ಮರವಾದುದುಷ್ಪವಡಿಸಿತ್ತು ಪಿಕಧ್ವನಿ ಪೋಯ್ತು ನೇಳಲಂ
ಗೊಟಿಯದೆ ಮಾವುಬಂದುದದಟಿಂ ಶಿಶಿರಾಧಮನಂ ಜಡಾತ್ಮನಂ *
ದುಟಿದು ಬಸಂತನಂ ಕರೆದಳಕ್ಕುಮೆ ಭೂವಧು ವೇಶ್ಯೆಯಂದದಿಂ ೬೦

ಬಿಂಬಫಲದ ರಸವನ್ನು ಹೀರಿ ಪೂರ್ಣತೃಪ್ತಿಪಡೆದ ಆ ಕಿರಾತನಿಗೆ ಬೇರೆ ಹಣ್ಣೆಂದರೆ ಓಕರಿಯಾಗುವುದು. (ತುಟಿಯನ್ನು ಬಿಂಬ ಫಲಕ್ಕೆ ಹೋಲಿಸುವುದು ಸಾಮಾನ್ಯ)

೫೮. ಮುಗಿಲ ಮಿಂಚಿನಂತೆ ಹೊಳೆದು ಮಾಯವಾಗದೆ, ಸತತವಾಗಿ ಬೆಳಗುವ ಮಿಂಚಿನ ಗೊಂಚಲಂತಿರುವ ಆ ಕಿರಾತೆಯ ಕಣ್ಬೆಳಗು ಜೊತೆಯಾಗಿರುವುದರಿಂದ ಆ ಕಿರಾತನು ಎಂತಹ ಕತ್ತಲಾದರೂ ಕಾಡಿನಲ್ಲಿ ನಿರಾತಂಕವಾಗಿ ನಡೆದಾಡುವನು.

೫೯. ಬೆಳ್ಳಗೆ ಹೊಳೆಯುವ ಕಣ್ಣು ಹೂವನ್ನೂ ತೋರಮೊಲೆಗಳು ಗಾತ್ರವಾದ ಗುಚ್ಛವನ್ನೂ ತೋಳು ಬಳ್ಳಿಗೊಂಬನ್ನೂ ಸಹಜವಾಗಿ ಕೆಂಪಾದ ತುಟಿಗಳ ಕಾಂತಿ ಕೆಂದಳಿರನ್ನೂ ಹೋಲುತ್ತಿರಲಾಗಿ ತನ್ನ ಇಳಿಬಿಟ್ಟ ಮುಡಿ ಕಪ್ಪಾಗಿ ಕತ್ತಲಿಡುತ್ತಿರಲಾಗಿ ಆ ಶಬರಿಯು ವನಲಕ್ಷ್ಮಿಯೆ ಮೆಚ್ಚಿ ಅನುಸರಿಸಿ ಬರುವಂತೆ ಅವನ ಹಿಂದೆ ಬರುವಳು.

ವ|| ಹೀಗೆ ಅವರಿಬ್ಬರೂ ಕಿರಾತವೇಷವನ್ನೂ ತೊಟ್ಟ ಶಿವಪಾರ್ವತಿಯರಂತೆ ಪರಸ್ಪರಾಸಕ್ತರಾಗಿ ಯಾವಾಗಲೂ ಜೊತೆಯಾಗಿಯೆ ಸಂತೋಷದಿಂದ ಇರುತ್ತಿರಲು -

೬೦. ಮೊಲ್ಲೆ ಬರಡಾಯಿತು; ಮಲ್ಲಿಗೆ ಮುಗುಳಿಟ್ಟಿತು; ಕೋಗಿಲೆಯ ಧ್ವನಿ ನಿದ್ದೆ ಮುಗಿಸಿ ಎದ್ದಿತು; ಪ್ರಿಯಂಗು ವೃಕ್ಷ ಬಾಡಿತು; ಮಾವು ಚಿಗುರಿತು; ಈ ಅವಸ್ಥೆಯನ್ನು ಕಂಡು ಭೂಮಿಯೆಂಬ ರಮಣಿ ಜಡನಾದ ನೀಚ ಶಿಶಿರನನ್ನು ತೊರೆದು, ವೇಶ್ಯೆಯಂತೆ ವಸಂತನನ್ನು ಕರೆದಿರಬೇಕು.

---

೧ ತಂ (ಕ, ಮ, ಪ). ೨ ಟ್ತರಿ (ಕ, ಮ, ಪ) ೩ ದು (ಮ). ೪ ವೆ (ಕ, ಮ, ಕಾ, ಪ). ೫ ಮೆನೆ ನಮ್ರ (ಕಾ), ನೆ ವಿನಮ್ನ (ಕ, ಮ, ಪ). ೬ ಬೆ (ಕ, ಕಾ, ಪ). ೭ ಗು (ಕ, ಮ). ೮ ಮೆ (ಕಾ, ಕ, ಪ). ೯ ಯಿಂ (ಕ, ಪ), ೧೦ ತ್ತರಿ (ಮ). ೧೧ ರ್ಪ (ಕ, ಮ), ರ್ಬ (ಪ). ೧೨ ನ್ಯಾ (ಮ) ೧೩ ಭ (ಮ). ೧೪ ಫಳ (ಕ). * ಈ ಪದ್ಯವು ಕಾ ಪ್ರತಿಯಲ್ಲಿ ಇಲ್ಲ.

ಸ್ವಾಗತ ॥ ನೋಡಿ ನೋಡ[೧]ರತಿ ಮಲ್ಲಿಗೆಯಂ ಕೆಯ್
ನೀಡಿ ತಾಂ ತಿಱಿಯಲಾಱದೆ ಕಂಪಿಂ
ದೂಡುತಿರ್ಪಳೆನೆ ಕುಂತಳಮಂ ಸಾ
ದರ್ಾ[೨]ಡುತಿರ್ದುವದಱ[೨]ೊಳ್ ಮಧುಪಂಗಳ್ ೬೧

ವ॥ ಆ ವಸಂತದೊಳಾ ತಮಾಳಶ್ಯಾಮಳಮಪ್ಪ ವಿಂಧ್ಯಕನೊಂದು ದಿವಸಂ ಶಾರ್ದೂಲ ಸ್ನಾಯುಸಂಜನಿತ ಸಿಂಜಿನೀ[೩] ಸಮಾಸ್ಫಾಳನವಾಚಾಳ ಚಪಳಚಾಪನುಂ ಕರತಳ ಕಲಿತಕಂಕಪತ್ರನುಮಾಗಿ ಮೃಗಯಾವಿನೋದದಿಂ ತೊೞಲುತಿರ್ಪಾ[೪]ಗಳ್[೪] ಪೂಗಣೆಯನ[೫] ಪೆಱಗೆವರ್ಪ ರತಿಯ ರಮಣೀಯ ಮನೊಳಗುಮಾಡಿ

ತಳಿರುಡೆ ಪುಲ್ಲಕಂಕಣಮಶೋಕೆಯ ಬಿಲ್ [೬]ಬಿಳಿ[೬] ಯಂಬು ಕಾಡ ಪೂ
ಗಳ ತಲೆಸುತ್ತು ಮಾಂದಳಿರ ಕೆಯ್ಪೊಡೆ ರಂಜಿಸೆ ಬೇಂಟೆಯಾಡಿ ಚಾ
ಪಳ ಹರಿಣೀ ವಿಲೋಕನಮನೀ[೭]ೞ್[೭]ಕುಳಿಗೊಂಡಳೆನಲ್ಕೆ ಗಾಳುಗ
ಣ್ಪೊಳೆಯೆ ಪುಳಿಂದಿ ವೀರಸಿರಿಯಂತಿರೆ ಬೆನ್ನನೆ ಬಂದಳೋಪನಾ ೬೨

ವ॥ ಅಲ್ಲಿಂ ಪೆಱಗೆ

[೮]ಶಳ[೮]ಸೂಚೀಭಿನ್ನವಕ್ಷಂ ಕಿಟಿರದ ಲಿಖಿತಗ್ರೀವನಾಪೂತಿ ಶಂಕಾ
ವಿಳ್[೯]ಜಿಘ್ರದ್ಘ್ರಾಣ[೯]ನುತ್ತ್ರಸ್ತ[೧೦]ವಣ ಸಮಯ[೧೧]ಸೂತ್ಥಾಪಿತೈಕಾಂಘ್ರಿ[೧೧] ವ[೧೨]ಕ್ತ್ರಾಂ
ಚಳನಾ[೧೨]ಳ[೧೩]ಸ್ಪೃಷ್ಟಸೃಷ್ಟಂ ವಿವೃತ[೧೩]ವದನ [೧೪]ನಿಷ್ಕ್ರಾಂತ[೧೪] ಜಿಹ್ವಾಪ್ರವಾಳಂ
ಪೊಳೆದೊಂದೇಂ ಬಂದುದೋ ಬೇಡನ ಬಟಿವಟಿಯಂ[೧೫] ಶ್ವಾನನೇಣಾವಸಾನಂ ೬೩

೬೧. ಅಕೊ! ಮಲ್ಲಿಗೆಯನ್ನು ನೋಡಿ ರತಿದೇವಿ ಅದನ್ನು ಕೀಳಲೊಲ್ಲದೆ ಅದರ ಸುಗಂಧವನ್ನು ಮಾತ್ರ ತನ್ನ ಕೂದಲಿಗೆ ಉಣಿಸುತ್ತಿರುವಳೊ ಏನೊ ಎಂಬಂತೆ ಮಲ್ಲಿಗೆಯಲ್ಲಿ ದುಂಬಿಗಳು ಸುಳಿದಾಡುತ್ತಿದ್ದುವು.

ವ॥ ಹೀಗೆ ಬಂದ ವಸಂತಕಾಲದಲ್ಲಿ ಒಂದು ದಿನ ಹೊಂಗೆಯ ಮರದಂತೆ ಕಪ್ಪಾದ ವಿಂಧ್ಯಕನು ಸಿಂಹದ ಸ್ನಾಯುವಿನಿಂದ ತಯಾರಿಸಿದ ತನ್ನ ಹೆದೆಯ ಠೇಂಕಾರದಿಂದ ಸ್ಫುರಿಸುವ ಬಿಲ್ಲನ್ನೂ, ಹದ್ದಿನ ಗರಿಯ ಬಾಣಗಳನ್ನೂ ಕೈಯಲ್ಲಿ ಹಿಡಿದುಕೊಂಡು ಬೇಟೆಯ ಉತ್ಸಾಹದಿಂದ ಅಲೆಯುತ್ತಿರುವಾಗ, ಮನ್ಮಥನ ಬೆಂಬಳಿಯಲ್ಲೆಯೆ ಬರುತ್ತಿರುವ ರತಿದೇವಿಯ ಚೆಲುವನ್ನು ಒಳಗೊಂಡು.

೬೨. ತಳಿರಿನ ಉಡುಗೆ, ಹೂವಿನ ಕಡಗ, ಅಶೋಕೆಯ ಬಿಲ್ಲು, 'ಬಿಳಿ'ಯ ಬಾಣ, ಕಾಡಹೂಗಳ ಶಿರೋಭೂಷಣ, ಮಾವಿನ ತಳಿರಿಂದ ರಚಿಸಿದ ಮುಂಗೈ ಗವಸು, ಶೋಭಿಸುತ್ತಿರಲಾಗಿ ಬೇಟೆಯಾಡಿ ಜಿಂಕೆಯ ಚಂಚಲವಾದ ಕಣ್ನೋಟವನ್ನು ಅಪಹರಿಸಿ (ತನ್ನಲ್ಲಿ ಅಳವಡಿಸಿ) ಕೊಂಡಳೊ ಏನೊ ಎಂಬಂತೆ ತನ್ನ ಕಣ್ಣುಗಳು ಚಪಲಗತಿಯಿಂದ ಮಿಂಚುತ್ತಿರಲಾಗಿ, ಆತನ ಬೇಡಿತಿ ವೀರಲಕ್ಷ್ಮಿಯಂತೆ ಅವನನ್ನು ಅನುಸರಿಸುತ್ತ ಬಂದಳು.

ವ॥ ಅವರ ಹಿಂದಿನಿಂದ,

೬೩. ಮುಳ್ಳು ಹಂದಿಯ ಮುಳ್ಳುಗರಿ ಚುಚ್ಚಿದ ಗಾಯಗಳನ್ನು ಎದೆಯಲ್ಲಿಯೂ

---

೧ ಡಿ (ಕಾ). ೨ ದೋರ್ (ಮ). ೩ ತ (ಕ, ಮ, ಪ). ೪ ಗಳುಮಂ (ಮ). ೫ ನೆ (ಕ, ಮ). ೬ ಬಲಿ (ಕಾ, ಪ). ೭ ನೇ (ಕಾ) ೮ ಸಲೆ (ಕ, ಮ, ಪ). ೯ ಚಿತ್ರೋದ್ರೂಣ (ಕ, ಪ). ಜಘ್ರದ್ರೋಣ (ಕಾ). ೧೦ ಶ್ರ (ಕಾ). ೧೧ ಸುತಾಪೇಕಾಂಗ್ರಿ (ಕ, ಮ). ೧೨ ಕ್ರಾಂಚನವಾ (ಕಾ). ೧೩ ಸ್ಪೃಷ್ಟ ನೀವೀವೃತ (ಪ), ಸ್ಪೃಷ್ಟಂ ವಿವೃಂತ (ಕ). ೧೪ ನಕ್ರಾಂತ (ಕಾ), ವಿನಿಷ್ಕ್ರಾಂತ (ಪ). ೧೫ ಯಿಂ (ಕ, ಮ).

ವ॥ ಆ ನಾಯ ಸೊವಡಿಂಗೇವಯ್ಸಿ

ಒರಸುತ್ತುಂ ಗ್ರಾವಕೋಣಂಗಳೊಳವಯವಮಂ ಕಂಡು ಕಾಡಾನೆಯಂ ಕೇ
ಸರಿಸುತ್ತುಂ ಕಣ್ಗಳಂ ತಾಗುವ ಬಿಸಿಗದಿರಂ ಪೊಯ್ಸುತುಂ ಕೋಪದಿಂ ಘು[೧]
ರ್ಘುರಿಸುತ್ತುಂ ಗ್ರೀಷ್ಮದೊಳ್ಕೋಟಿಸಱನಱಸುತುಂ ಪೋಗುತಿರ್ದತ್ತು ದೌಂಷ್ಟ್ರಾಂ
ಕುರಘಾತವ್ಯಸ್ತಮುಸ್ತಾ[೨]ಕ್ಷತಿ[೩] ಸುರಭಿಕ್ಷತರೋತ್ರಾವಱರೋಹಂ ವರಾಹಂ ೬೪

ವ॥ ಆ ವರಾಹನನವರೋಹಿಸುವಂತೆ

ವನಗಜವ್ರೊಕ್ಕಳಮಳ್ಮಳದದ ಕೋಟಿ[೫]ಸಱೊಳ್ ಕೆಸಱಾಟವಾಡಿ ಸೊ
ಕ್ಕಿನ ಸೊವಡಿಂಗೆ ಮುತ್ತಿ ಮಱದುಂಬಿಗಱಳಿಂಬಿಱಸೆ ರೋಮವಿಕ್ಕಿ ಬಿ
ಕ್ಕನೆಬಿರಿವಂತೆ ಬಂದ ಬಲದೊಳ್ಪೆಳರ್ವಟ್ಟು ಮದಕ್ಕೆ[೬] ವಂದ ಕಂ
ಪಿನ ಕಳಭಂಬೊಲಿರ್ದುದತಿ ದರ್ಪರಸಾಕರನೊಂದು ಸೂಕರಂ ೬೫

ವ॥ ಆ ಪಂದಿಗಳನಾ ನಾಯೆ ಬೆಂಕೊಂಡು ಪೋಗೆ [೭]ಮುಂದೊಂದು[೭] ಮೇದಿನೀಧರ ದರೀದೇಶದೊಳ್

ಕಾಡುಹಂದಿಯ ಕೋರೆಯಿಂದಾದ ಗೀರು ಗಾಯಗಳ ಗುರುತನ್ನು ಕೊರಳಲ್ಲಿಯೂ ಧರಿಸಿ, ಪುಣುಗಿನ ವಾಸನೆಗಾಗಿ ಮೂಗನ್ನು ಅರಳಿಸುತ್ತ, ಒಂದು ಕಾಲನ್ನೆತ್ತಿ ಮೂತ್ರವನ್ನು ಚಿಮ್ಮಿಸುತ್ತ, ತೆರೆದ ಬಾಯಿಯಿಂದ ಕೆಂದಳಿರಂತಹ ನಾಲಗೆಯನ್ನು ಹೊರಚಾಚುತ್ತ, ಜಿಂಕೆಗಳಿಗೆ ಮೃತ್ಯು ಸ್ವರೂಪವಾದ ಆತನ ಬೇಟೆನಾಯಿ ಚಪಲಗತಿಯಿಂದ ಅವನನ್ನು ಹತ್ತಿರ ಹತ್ತಿರದಲ್ಲಿಯೆ ಅನುಸರಿಸಿಕೊಂಡು ಬಂದಿತು.

ವ॥ ಆ ನಾಯಿಯ ವಾಸನೆಗೆ ಸೈರಿಸಲಾರದೆ-

೬೪. ಬಂಡೆಯ ಏಣುಗಳಿಗೆ ತನ್ನ ಮೈಯನ್ನು ಉಜ್ಜಿಕೊಳ್ಳುತ್ತ, ಕಾಡಾನೆಯನ್ನು ಕಂಡು ಕಣ್ಣು ಕೆಕ್ಕರಿಸುತ್ತ, ಮೈತಾಗುವ ಬಿಸಿಲಿಗೆ ಉಮ್ಮಳಿಸಿ ಗುರುಗುಟ್ಟುತ್ತ, ಒಳ್ಳೆಯ ಹೆಸರಿನ ಜಾಗವನ್ನು ಹುಡುಕುತ್ತ, ಗೇಕಿನ ಗಡ್ಡೆಗಳನ್ನು ತಿವಿ ತಿವಿದು ಸುಗಂಧಿತವಾದ ಕೋರೆಗಳನ್ನು ಕೆಳಮೊಗವಾಗಿಟ್ಟುಕೊಂಡು ಒಂದು ಕಾಡು ಹಂದಿ ಹೋಗುತ್ತಿತ್ತು.

ವ॥ ಆ ಕಾಡುಹಂದಿಯನ್ನು ಹೀಗಳೆಯುವಂತೆ,

೬೫. ಕಾಡಾನೆಗಳ ನೆತ್ತಿಯಿಂದ ಸುರಿದ ಮದೋದಕದ ಕೊಗ್ಗೆಸರಿನಲ್ಲಿ ಕೆಸರಾಟವಾಡಿ, ಆ ಮದೋದಕದ ಉಗ್ರಗಂಧಕ್ಕೆ ಮುಸುರುವ ದುಂಬಿಗಳಿಂದಾಗಿ ಮೈಗೂದಲನ್ನು ನಿಮಿರಿಸಿಕೊಂಡು ಬಿರಿದು ಹೋಗುವುದೊ ಏನೊ ಎಂಬಂತೆ ಉಬ್ಬಿದ ಗಾತ್ರದಿಂದ ಭಯಾನಕವಾಗಿ ಸೊಕ್ಕಿದ ಕಾಡುಹಂದಿಯೊಂದು ಮದಕ್ಕೆ ಬಂದ ಆನೆಯೆಂಬಂತೆ ಇದ್ದಿತು.

ವ॥ ಆ ಹಂದಿಗಳನ್ನು ಆ ನಾಯಿ ಬೆನ್ನಟ್ಟಿ ಹೋಗಲಾಗಿ ಮುಂದೆ ಒಂದು ಬೆಟ್ಟದ ಬಳಿಯಲ್ಲಿ-

---

೧ ಘೂ (ಕ, ಪ, ಮ). ೨ ಕ್ಷುರಿತ (ಕ, ಪ). ೩ ತಪ್ಪೋವ್ರಾತ (ಕ, ಪ). ೪ ಮಳ್ಕ (ಕಾ), ವ್ರೋಲ್ಮ (ಕ, ಪ) ೫ ಳಂಜಿ (ಕಾ). ೬ ಕೆ (ಕಾ). ೭ X (ಕಾ).

ಹರಿ ಹೀರೋದ್ರೇಕದಿಂ ಕುಂಜರ ಗಿರಿಶಿರದೊಳ್ಪಾ[1]ಯ್ದುಮುಂ[1] ಪಿಂತೆ ಮೇಗಂ
ಬರದೊಳ್ ಮೇಘವ್ರಜಂ ಗರ್ಜಿಸೆ ಶರಭ ರವಾಶಂಕೆಯಿಂ ನಟ್ಟ ಕಾಲ್ನ
ಟ್ಟರೆ ಬೆನ್ನೊಳ್ನೊಯ್ದುಗುರ್ಪೊರ್[2]ಯ್ದಿರೆ ಬಿದುತಟದೊಳ್ಕಂದದೊಳ್ಚಕ್ಕ ಮೆಯ್ ಪೊ
ಕ್ಕಿರೆ ಸೋತ್ಕಂಠಂ ಸಧೀರಂ ಸಚಳಿತ ಪ[3]ಟಮೊಂದಾಯ್ತು ಸಿಂಹಾವಲೋಕಂ ೬೬

ವ॥ ಆ[4] ಸಿಂಹಾವಲೋಕನಮನಾ ಶಬರ ಸಿಂಹನವಜ್ಞೆಯಿನವಲೋಕಿಸುತ್ತುಂ[5] ಸಜ[6]ಳ ಜಳಧರ ಮಳಿನ ದೃಢಕಠಿನೋತ್ತುಂಗ ಕಾಯಬಳದಿಂ ವಿಂಧ್ಯಕಂ ಮೇಲಪ್ಪ ವಿಂಧ್ಯಕನಂದಿನ ಬೇಂಟೆಯೊಳ್ ಬೆರ್ಚಿ ನೋಡುವ ಪುಲ್ಲೆಗಳೊಳ್ ನಲ್ಲಳ ಕೊಲ್ಲಿ ನೋಟಮಂ ಕಂಡು ಕೊಲಲೊಲ್ಲದೆಯುಂ ಕಾಡಾನೆಯ ಕುಂಭಸ್ಥಲಂಗಳೊಳ್ ಕಾಮಿನಿಯ ಮೊಲೆಯ ಮಿಸುಪಂ ಕ[ಂಡಿ]ಸಲೊಲ್ಲದೆಯುಂ ಸೋಗೆ ನವಿಲ್ಗಳೊಳೆ ವಾಗುರಿಯ ಸೋರ್ಮುಡಿಯ ಸಿರಿಯ ಸೊಬಗಂ ಕಂಡಿಡಲೊಲ್ಲದೆಯುಂ ನಡೆನಡೆಯೆ ಮುಂದೊಂದೆಡೆಯೊಳೊಂದು ಮಹಾ ಮಹೀಧರ ಮಸ್ತಕದೊಳ್

ಸಮಪಾದಂ ಪೊರ್ದೆ ಬಲ್ಪಿಂ ಕರಣ ಸಮುದಯಂ ತನ್ನೊಳಕ್ಕಾಡೆ ಕಣ್ಗಳ್
ನಿಮಿಷವ್ಯಾಸಂಗಮಂ ಬಿಟ್ಟಿರೆ ಬಳೆಯೆ ಚಿದಾಸ್ವಾದಸೌಖ್ಯಂ ನಿದಾಘ
ದ್ಯುಮಣಿ ಪ್ರೌಢಾಂಶುಗಾಸ್ಯಾಂಬುಜಮಲರೆ ಮನಂ ಧ್ಯಾನದೊಳ್ ಸಿಲ್ಕಿ ಕೆಯ್ಮಿ
ಕ್ಕ ಮುನೀಂದ್ರದ್ವಂದ್ವಮೊಂದಿರ್ದುದು ಗಿರಿಶಿಖರ ದ್ವಂದ್ವಮಿರ್ಪಂದದಿಂದಂ ೬೭

೬೬. ಸಿಂಹವೊಂದು ಸಿಡಿಲಿನಂತೆ ರಭಸದಿಂದ ಆನೆಯ ನೆತ್ತಿಯನ್ನು ಆಕ್ರಮಿಸಿತು; ಅದೇ ಕಾಲಕ್ಕೆ ಅದರ ಹಿಂದೆ, ಮುಂದೆ ಹಾಗೂ ಮೇಲೆ ಮೋಡಗಳ ಗರ್ಜನೆಯೂ ಹೊರಹೊಮ್ಮಲಾಗಿ, ಇದೇನು ಶರಭಮೃಗದ ಶಬ್ದವೊ ಎಂಬ ಶಂಕೆಯಿಂದ ಆ ಸಿಂಹವು ಆನೆಯ ಬೆನ್ನಮೇಲೆ ನಟ್ಟಕಾಲು ನಟ್ಟಂತೆ, ನೆತ್ತಿಯಲ್ಲಿ ಹೊಕ್ಕ ಉಗುರು ಹೊಕ್ಕಂತೆ, ಕತ್ತಿನ ಮೇಲೆ ಬಾಗಿನಿಂತ ಮೈ ನಿಂತಂತೆ, ಪಟದ ಮೇಲೆ ಬರೆದ ಚಿತ್ರ ಸದೃಶವಾಗಿ ನಿಶ್ಚಲವಾಗಿ ನಿಂತು ಕಣ್ಣನ್ನು ಮಾತ್ರ ಹೊರಳಿಸಿ ನೋಡಿತು.

ವ॥ ಆ ಸಿಂಹದ ನೋಟವನ್ನು ಶಬರಶ್ರೇಷ್ಠನಾದ ವಿಂಧ್ಯಕನು ಅಲಕ್ಷ್ಯದಿಂದ ನೋಡುತ್ತ, ಮೋಡದಂತೆ ಕಪ್ಪಾಗಿಯೂ, ದೃಢವಾಗಿಯೂ ಉನ್ನತವಾಗಿಯೂ ಇರುವ ತನ್ನ ದೇಹ ಬಲದಿಂದ ವಿಂಧ್ಯಪರ್ವತಕ್ಕೂ ಮಿಗಿಲೆನಿಸಿ, ಅಂದಿನ ಬೇಟೆಯಲ್ಲಿ ಬೆಚ್ಚಿ ನೋಡುವ ಹೆಣ್ಣು ಜಿಂಕೆಗಳ ಕಣ್ಣಲ್ಲಿ ತನ್ನ ನಲ್ಲೆಯ ಚೆಲ್ಲಿ ನೋಟವನ್ನು ಕಂಡುದರಿಂದ ಅವುಗಳನ್ನು ಕೊಲ್ಲಲು ಒಪ್ಪದಾದನು; ಕಾಡನೆಯ ಕುಂಭಸ್ಥಲಗಳಲ್ಲಿ ತನ್ನ ಇನಿಯಳ ಮೊಲೆಗಳ ಕಾಂತಿಯನ್ನು ಕಂಡುದರಿಂದ ಅವುಗಳಿಗೆ ಬಾಣ ಹೊಡೆಯಲು ಅವನಿಗೆ ಮನಸ್ಸಾಗಲಿಲ್ಲ; ನವಿಲುಗಳ ಸೋಗೆಯಲ್ಲಿ ವಾಗುರೆಯ ಸೋರ್ಮುಡಿಯ ಸೊಬಗನ್ನು ಕಂಡುದರಿಂದ ಅವುಗಳನ್ನು ಹೊಡೆಯಲು ಕೈಯೇಳಲಿಲ್ಲ. ಹಾಗೆಯೆ ಮುಂದೆ ನಡೆಯಲಾಗಿ ಒಂದು ಹೆಬ್ಬೆಟ್ಟದ ಶಿಖರದಲ್ಲಿ -

೬೭. ಎರಡೂ ಪಾದಗಳನ್ನು ಜೋಡಿಸಿಕೊಂಡು, ಇಂದ್ರಿಯಗಳನ್ನೆಲ್ಲ ಸಂಯಮಿಸಿಕೊಂಡು, ಕಣ್ಣು ರೆಪ್ಪೆ ಹೊಯ್ಯದೆ, ಚಿದಾನಂದವನ್ನು ಆಸ್ವಾದಿಸಿತ್ತು, ಬೇಸಗೆಯ ಬಿಸಿಲಿಗೆ

---

೧ ಯ್ದುದುಂ (ಕಾ, ಮ). ೨ ಪಾರ್ (ಕ). ೩ ಸ (ಕಾ). ೪ ಅಂತು (ಕಾ), X (ಮ). ೫ ತ್ತೆ (ಕಾ). ೬ ಚ (ಕ).

ವ॥ ಅಂತು ಕಲ್ನೆ[೧]ಲೆ ನಿಂದ ವಿಮಳಬುದ್ಧಿಯುಮಮಳಬುದ್ಧಿಯುಮೆಂಬ ಮುನಿವೃಂದಾರಕರಂ ದೂರಾಂತರದೊಳ್ಕಂಡು ವಿಂಧ್ಯಕಂ ವಾಗುರೆಗೆಂದನಾ ತೋರ್ಪ ಪುರುಷಮೃಗಂಗಳಂ ಸಿಡಿಲ್ವೊಡೆಯೆ ಕೋಡುಂಗಲ್ಗಳ್ ಕೆಡೆವಂತೀ[೨] ವೊಂದೇ ಕೋಲೋಳ್ಕೆಡೆವಿನಮೆಚ್ಚಪೆಂ ಮೆಚ್ಚುಂಟೆಯೆಂಬುದುಮಾಕೆ ನೀಡುಂ ಭಾವಿಸಿ ನೋಡಿ ನಡನಡ ನಡುಗಿ

ಇವರನಿ೩ಸುವಾಗಲೆನ್ನಯೆ[೪]
ಕಿವಿಯೋಲೆಯಱನೊಲ್ಲೆಯಕ್ಕು[೫]ಮೆಂದಾರತಿ ಕಂ
ತುವಿನಿ[೬]ಸುವ ಕೆಯ್ಗೆವಾಯ್ವಂ
ತೆವೊಲವಳಾ ಶಬರನಿ[೭]ಸುವ ಕೆಯ್ಯಂ ಪಿಡಿದಳ್ ೭೮

ಪುರುಷ ಮೃಗಂಗಳಲ್ಲಮಿವರಪ್ಪೊಡೆ ದಿವ್ಯಮುನೀಂದ್ರರೆಚ್ಚಡಂ
ಶರಮಿದು ತಾಗಲಮ್ಮದಿವರಂ ನಡಲೊಲ್ಲದೆ ಸೂರ್ಯರಶ್ಮಿಯೋ
ಸರಿಸಿಯೆ ಪೋಗುತಿರ್ದಪುದು ನೋಡ[೮] ಪದಾಬ್ಜಮನೋಪ ಸಿಂಹಮುಂ
ಶರಭಮುಮೊತ್ತುತಿರ್ಪು[೯]ವಿವಱಿಂ ಬಲವಂತಮೆ ನಿನ್ನ ಸಾಯಕಂ ೭೯

ಮುಖಕಮಲ ಅರಳಿರಲಾಗಿ ಧ್ಯಾನದಲ್ಲಿ ಮನವನ್ನು ತೊಡಗಿಸಿ, ಕೈಯಿಕ್ಕಿಕೊಂಡು ಎರಡು ಗಿರಿಶಿಖರಗಳಂತೆ ಇಬ್ಬರು ಮುನಿಶ್ರೇಷ್ಠರು ನಿಂತಿದ್ದರು.

ವ॥ ಹೀಗೆ ಕಲ್ನೆಲೆ ನಿಂತ ವಿಮಳಬುದ್ಧಿ ಹಾಗೂ ಅಮಳಬುದ್ಧಿಯೆಂಬ ಮುನಿದೇವರನ್ನು ದೂರದಿಂದ ಕಂಡು ವಿಂಧ್ಯಕನು ವಾಗುರೆಗೆ ಹೀಗೆಂದನು - "ಅಕೋ! ಅಲ್ಲಿ ಕಾಣುವ ಪುರುಷಮೃಗಗಳನ್ನು ನೋಡು. ಸಿಡಿಲ ಹೊಡೆತಕ್ಕೆ ಕೋಡುಗಲ್ಲು ಕಡಿದುಕೊಂಡು ಬೀಳುವಂತೆ ಈ ಒಂದೇ ಬಾಣದಿಂದ ಅವರಿಬ್ಬರನ್ನೂ ಕೆಳಗುರುಳಿಸುವೆನು. ಮೆಚ್ಚು ಕೊಡುವೆಯೊ?" ವಾಗುರೆ ಅವರನ್ನು ಚೆನ್ನಾಗಿ ಕಣ್ಣೆಟ್ಟು ನೋಡಿ, ಗದಗದ ನಡುಗಿ.

೭೮. "ಇವರನ್ನು ಹೊಡೆದುರುಳಿಸುವೆನೆಂದೆಯ? ಹಾಗಾದರೆ ನನ್ನ ಮುತ್ತೈದೆತನ ನಿನಗೆ ಬೇಡವಾಯಿತು" ಎಂದು ನುಡಿಯುತ್ತ ಬಾಣ ಹೂಡಿದ ಕಾಮನ ಕೈಯನ್ನು ಹಿಡಿದೆಳೆವ ರತಿಯಂತೆ ಆಕೆ ವಿಂಧ್ಯಕನ ಕೈಯನ್ನು ಹಿಡಿದು ನಿಲ್ಲಿಸಿ ಹೀಗೆಂದಳು -

೭೯. "ಇವರು ಪುರುಷಮೃಗಗಳಲ್ಲ, ಶ್ರೇಷ್ಠ ಮಣಿಗಳು. ನೀನು ಬಿಟ್ಟ ಬಾಣ ಅವರನ್ನು ತಾಗಲಾರದು. ಸೂರ್ಯಕಿರಣ ಕೂಡ ಇವರನ್ನು ತಾಕಲಾರದೆ ಆಚೆಗೆ ಸರಿದು ಹೋಗುತ್ತಲಿದೆ. ನೋಡು, ಸಿಂಹವೂ ಶರಭವೂ ಪ್ರೀತಿಯಿಂದ ಅವರ ಪಾದಗಳನ್ನು ಒತ್ತುತ್ತ ಇವೆ. ಇವುಗಳಿಗಿಂತ ನಿನ್ನ ಬಾಣ ಬಲಿಷ್ಠವೆ?

---

೧ ಲ್ಮೆ (ಕ, ಮ). ೨ ತೇ (ಮ). ೩ ನೆ (ಕ). ೪ ಯ (ಕ, ಮ). ೫ ನೊಲೆಯಲಿಕ್ಕು (ಮ), ಮೇಲೆಯಕ್ಕು (ಪ), ನೊಲೆಯಕ್ಕು (ಕ). ೬ ನೆ (ಕ). ೭ ನೆ (ಕ). ೮ ಡೆ (ಕಾ). ೯ ತಿದಪ್ಪು (ಕ, ಮ).

[1]ಕಿಳ್[1]ದುರ್ಗ ಪರಿತಂದ ಬೇ[2]ಗೆಯು
ಮ[3]ಳುರಲ್ತಾನಳ್ಕಿ ನಿಂದು ಪೆಱಕಾಲೊಳ್ಕೆಂ
ದಳಿರಿಂ[4] ಕೇರ್ಗಟ್ಟಿದವೋ
ಲ್ಬಳಯಿಸಿ ಮುರಿದಪುದು ನೋಡ ಮುನಿಪುಂಗವರಂ[5] ೨೦

ವ॥ ನೀನ[6]ವರನೆಂತು ಬಲ್ಲೆ[7]ಯೆಂಬೆಯ[7]ಪ್ಪೊಡೆ

ಹರಿಶಕ್ತೀ ಭವದಸ್ತ್ರಭಿನ್ನಕರಿಕುಂಭೋನ್ಮುಕ್ತ ಮುಕ್ತಾಫಳೋ
ತ್ಕರಮಂ ಮಾಱಲೆ ಪೋಗಿ ರಾಜಗೃಹದೊಳ್ [8]ಕಾಣ್ಬೆಂ[8] ಗೃಹದ್ವಾರದೊಳ್
ಬರ್[9] ಪಾ[10]ರ್ದಾಗ[10]ತ ಭೂಪನಾ ವೃಷಭದತ್ತಂ ಭಕ್ತಿಯಿಂದೀ ಮುನೀ
ಶ್ವರರಂ ತಾನಿದಿರ್ಗೊಂಡು ಕಾಲ್ಗೆಱಗುವಂ ರತ್ನಂಗಳಿಂದರ್ಚಿಪಂ ೨೧

ಎನೆ ಬಿಲ್ಲುಮನಂಬುಮನಾ
ವನಚರನೀಡಾಡಿ ದಿವಿಜಧನುವಂ ಮಿಂಚಂ
ಘನಮೀಡಾಡುವವೋಲ್ ಭೋಂ
ಕೆ[11]ನೆ ಶರದದೊಳಮಳನಾಗಲುದ್ಯ[12]ತನಾದಂ ೨೨

ವ॥ ಆಗಿಯಾ ಬೇಗದೊಳುತ್ತರೋತ್ತರ ಸ್ಥಾನಮಂ ತಾನೇಱುವುದನಱಿಪುವಂತೆ ನಗಾಗ್ರಮನೇಱಿ ತಾವ[13]ರೆಗಳ್ಗೆ ತಪ್ಪಂ ಮಾಡಿ ಕಾಲ್ವಿಡಿವ ತುಂಬಿಗಳಂತಾ ಯೋಗಿಯುಗಳ ಪದಯುಗಳಂಗಳ

೭೯. ಉಗ್ರವಾಗಿ ಹರಿದುಬಂದ ಕಾಡಿನ ಬೆಂಕಿಯು ಕೂಡ ಉರಿಯುವುದಕ್ಕೆ ಹೆದರಿ ಇವರ ಪಾದಗಳ ಹಿಂದೆ ಕೆಂದಳಿರಿಂದ ಗೋಡೆ ಕಟ್ಟಿದ ಹಾಗೆ ತೋರಿ, ಹೊರಳಿ ಹೋಗುವುದು. ನೋಡು ಆ ಮುನಿಶ್ರೇಷ್ಠರನ್ನು"

ವ॥ "ಅವರನ್ನು ನೀನು ಹೇಗೆ ಬಲ್ಲೆ?" ಎಂದು ಕೇಳಲಾಗಿ (ಆಕೆ ಹೀಗೆ ಮುಂದುವರಿದಳು)

೨೧. "ಸಿಂಹಬಲನೆ, ನೀನು ಬಾಣದಿಂದ ಸೀಳಲಾಗಿ ಆನೆಯ ಕುಂಭಸ್ಥಳದಿಂದ ಹೊಮ್ಮಿದ ಮುತ್ತುಗಳನ್ನು ಆಯ್ದುಕೊಂಡು ಮಾರಲೆಂದು ಹೋದಾಗ ರಾಜಗೃಹದ ತಲೆಬಾಗಿಲಲ್ಲಿ ಹಾದಿಕಾಯುತ್ತ ನಿಂತ ವೃಷಭದತ್ತ ರಾಜನು ಭಕ್ತಿಯಿಂದ ಈ ಮುನೀಂದ್ರರನ್ನು ಇದಿರಗೊಂಡು ಕಾಲಿಗೆ ಬಿದ್ದು, ರತ್ನಗಳಿಂದ ಅರ್ಚಿಸಿದನು"

೨೨. ಈ ಮಾತನ್ನು ಕೇಳಿದೊಡನೆ, ಶರತ್ಕಾಲದಲ್ಲಿ ಇಂದ್ರಧನುವನ್ನು ಮಿಂಚನ್ನು ಮೋಡವು ತ್ಯಜಿಸಿ ಬಿಡುವಂತೆ, ಆ ಬೇಡನು ಬಿಲ್ಲನ್ನು ಬಾಣಗಳನ್ನು ಬಿಸಾಡಿ ಶುದ್ಧನಾಗಲು ತೊಡಗಿದನು.

ವ॥ ಹಾಗೆ ಸಿದ್ಧನಾಗಿ, ಮೇಲುಮೇಲಿನ ಸ್ಥಾನವನ್ನು ತಾನಿನ್ನು ಏರುವೆನೆಂಬುದನ್ನು ತಿಳಿಸುವಂತೆ ಬೆಟ್ಟವನ್ನು ಏರುತ್ತ ಶಿಖರಕ್ಕೆ ಮುಟ್ಟಿ, ಕಮಲಗಳಿಗೆ ಅಪರಾಧ ಮಾಡಿ

---

೧ ಕಳೆ (ಕ). ೨ ಬ (ಕ, ಕಾ). ೩ ಯು (ಕಾ). ೪ ರಂ (ಕ). ೫ ರಾ (ಕ, ಕಾ). ೬ ನಿ (ಕ, ಮ). ೭ ಯ (ಪ), ಯೆಯೆ (ಕ, ಮ). ೮ ಕೊಂಬೆಂ (ಕ, ಮ). ೯ ರ (ಕಾ, ಮ). ೧೦ ದರ್ಗ (ಕ). ೧೧ ಕ (ಮ). ೧೨ ದ್ಯ (ಕ). ೧೩ ಮ (ಕಾ, ಮ).

ಮುಂತೆ ಮೆಯ್ಯಿಕ್ಕಿರ್ಪುದುಮನ್ನೆಗಮಾ ಮುನಿಕುಮಾರರ್ ಕೆಯ್ಯೆತ್ತಿಕೊಂಡು ಲುಬ್ಧಕನ ಕಾಲಲಬ್ಧಿಕ್ಷಯೋಪಶಮಮಂ ಕಂಡು ಕನ್ನೈದಿಲ ಮೇಲೆ ಕುಮುದಪ್ರಿಯನಮೃತಮಯ ಮಯೂಖಮಂ ತಳಿವಂತೆ ದಯಾಮೃತರಸಮಂ ತಳಿವಂತು[೧] ದುಃಪಾತಕನಂ ಪೂತಂ ಮಾಡಿ

ಕೊಲಲಾಗದು ಕಳಲಾಗದು
ಕುಲಟೆಯರೊಳ್ ನೆರೆಯಲಾಗದಾರ್ತದಿನರ್ಥ
ಕ್ಕಲವರಲಣಮಾಗದು ಪುಸಿ
ಯಲಾಗದೀ ಬ್ರತಮನ್ನೈದುಮಮಂ ಪಿಡಿ ಮಗನೇ ೭೩

ವ॥ ಎನೆ ಮಹಾಪ್ರಸಾದಮೆಂದು

ಶರ[೨]ದದ[೨] ಕೆಯ್ಯೊಳ್ ಪಂಕಂ
ಸರಸಿಜ ಜನಕತ್ವ ಗುಣಮನಳವಡೆ ಕೊಳ್ವಂ
ತಿರೆ ವಿಮಳಮತಿಯ ಕೆಯ್ಯೊಳ್
ಪರಮ ಬ್ರತಮಂ ಕಿರಾತನೊಲವಿಂ ಕೊಂಡಂ ೭೪

ಜಿನಸಮಯವ್ರತಮೆತ್ತಲ್
ವನಚರನೆತ್ತಲ್ ವಿರುದ್ಧವೆನಬೇಡ ಜಗ
ಜ್ಜನನುತ ಸಿದ್ಧರಸಂ ಕ
ಬ್ಬುನಮಂ ಪೊನ್ಮಾಡಲಾಯ್ತು [೩]ಪೊನ್ನೇ[೪]ನಾಯ್ತೋ[೪] ೭೫

ಕಾಲುಹಿಡಿವ ದುಂಬಿಗಳಂತೆ ಆ ಇಬ್ಬರೂ ಯೋಗಿಗಳ ಪಾದಗಳ ಮುಂದೆ ಸಾಷ್ಟಾಂಗ ವೆರಗಿದನು. ಅಷ್ಟರಲ್ಲಿ ಆ ಮುನಿಕುಮಾರರು ಕೈಯೆತ್ತಿಕೊಂಡು ಈ ಕಿರಾತನಿಗೆ ಕಾಲಲಬ್ಧಿ ಉಂಟಾಗಿರುವುದನ್ನು ಕಂಡು, ಕನ್ನೈದಿಲೆಯ ಮೇಲೆ ಚಂದ್ರನು ಅಮೃತ ಕಿರಣಗಳನ್ನು ಸೂಸುವಂತೆ, ದಯಾಮೃತವನ್ನು ಕರೆದು ಅವನನ್ನು ಪವಿತ್ರಗೊಳಿಸಿ.

೭೩. ಕೊಲ್ಲಬೇಡ; ಕಳವು ಮಾಡಬೇಡ; ಕುಲಟಾ ಸಹವಾಸ ಮಾಡಬೇಡ; ಅರ್ಥ ಪರಿಗ್ರಹ ಮಾಡಬೇಡ. ಸುಳ್ಳು ನುಡಿಯಬೇಡ. ಮಗನೇ, ಈ ಐದು ವ್ರತಗಳನ್ನು ಹಿಡಿ"

ವ॥ ಎನ್ನಲಾಗಿ ಅನುಗ್ರಹವಾಯಿತೆಂದು -

೭೪. ಶರತ್ಕಾಲದ ಸನ್ನಿಧಿಯಲ್ಲಿ ತಾವರೆಗೆ ಜನ್ಮಕೊಡುವ ಗುಣವನ್ನು ಕೆಸರು ಪಡೆಯುವಂತೆ ವಿಮಳಮತಿಯ ಸನ್ನಿಧಿಯಲ್ಲಿ ಆ ಬೇಡನು ಶ್ರೇಷ್ಠವಾದ ವ್ರತವನ್ನು ಪಡೆದುಕೊಂಡನು.

೭೫. "ಜಿನಧರ್ಮದ ವ್ರತವೆತ್ತ, ಬೇಡನೆತ್ತ! ಇದು ವಿರುದ್ಧ ಎಂದೆನಲಾಗದು. ಜಗತ್ಪ್ರಸಿದ್ಧವಾದ ಸಿದ್ಧರಸ ಸ್ಪರ್ಶದಿಂದ ಕಬ್ಬಿಣವೂ ಹೊನ್ನಾಗುವುದಿಲ್ಲವೆ?

---

೧ + ಂತು (ಕಾ). ೨ ದದು (ಮ), ವದು (ಕ). ೩ ಪೊಂಗೇ (ಕಾ, ಮ). ೪ ಯ್ತೇ (ಕಾ).

ವ|| ಅಂತು ಮೇರುವಂ ಸಾರ್ದ ಕಾಗೆ ಪೊಂಬಣ್ಣಮಾದಂತಿರಾ ಜಾತ ರೂಪಧರರಂ ಸಾರ್ದು ಶಬರಂ ಸುವ್ರತ ಸ್ವೀಕಾರಭಾಸುರನಪ್ಪುದುಂ ವಾಗುರೆಯುಮ್ಮನಮಲ್ಲದ ಮನದೊಳಾನುಮೀ ವ್ರತಮಂ ಕೆಯ್ಕೊಂಡೆನೆಂದು ಪೊಡವಡೆ ಪರಸಿ ಪೋಪ ಪರಮೇಶ್ವರರ ಬಟೆಯನವರ್ಮಗುಟ್ಟುವಲ್ಲಿವರಂ ಪೋಗಿ ಮಗುಟ್ದು ಬಂದು ವಿಪಿನಮಂ ಪೊಕ್ಕು ತನ್ನ ಮುನ್ನೆ ಗೆಯ್ದ ವಧಬೀಭತ್ಸಸ್ಮರಣಮೆ ಕಂದಮೂಳಫಳಾಸ್ವಾದನದೊಳ್ ಮುಟ್ಟುಪಡಮಂ ಪಡೆವುದುಮದೇನುಮಂ ನೆನೆಯದೆ ಮದನಾರಿಗಳ ಪದನಳಿನಮಂ ನೆನೆಯುತ್ತುಮಿರೆಯಿರೆ

ಸ್ವಗ್ರಹೀತ [1]ವ್ರತ[1]ರಕ್ಷಾ
ಪ್ರಗಲ್ಭಮತಿ ಪುಟ್ಟದತ್ತು ತದ್ವನಚರ ಸೂ
ನ್ರುಗೆ ಕಾಷ್ಠಕನಲಂ ಪಂ
ದಿಗೆ ಮುತ್ತು (ಳ್ಳು)ರಗಂಗೆ ಮಾಣಿಕಂ ಪುಟ್ಟುವವೋಲ್ ೭೬

ವನಚರರಿಲ್ಲದಲ್ಲಿ ಮೃಗದಿಂ ಮೃಗಮಾರಣಮಿಲ್ಲದಲ್ಲಿಯೆ
ಲ್ವಿನ ಕೊಳ್[2]ಮಿಲ್ಲದಲ್ಲಿ ಖಗದಿಂ ಖಗಮರ್ದನಮಿಲ್ಲದಲ್ಲಿ ಕೋ[3]
ಟೆನ ಕ[4]ವಿಯಿಲ್ಲದಲ್ಲಿ ಶಿಬಿರಂ ಫಣಿಹಿಂಸನಮಿಲ್ಲದಲ್ಲಿ ತೋ
ಲ್ವನೆವೊಲಸಿಲ್ಲದಲ್ಲಿ ಶಬರಂ ಸುಖಮಿರ್ಪನಿದೇಂ ಸುಚಿತ್ತಮೋ ೭೭

ವ|| ಮೇರು ಪರ್ವತಕ್ಕೆ ಬಂದ ಕಾಗೆ ಸುವರ್ಣಕಾಂತಿಯನ್ನು ಪಡೆದಂತೆ ದಿಗಂಬರ ಮುನಿಗಳ ಬಳಿಗೆ ಬಂದು ಕಿರಾತನು ಉತ್ತಮವ್ರತಗಳನ್ನು ಪಡೆದು ಶೋಭಿಸಿದನು. ಆಗ ವಾಗುರೆಯೂ ಕೂಡ ಮನವಿಲ್ಲದಿದ್ದರೂ "ನಾನೂ ಈ ವ್ರತವನ್ನು ಕೈಕೊಂಡೆನೆ"ಂದು ಮುನಿಗಳಿಗೆ ನಮಸ್ಕರಿಸಿದಳು. ಆಶೀರ್ವದಿಸಿ ಹೊರಟ ಮುನಿಗಳ ಹಿಂದೆ ಹಿಂದೆಯೆ ಮರಳಿ ಹೋಗೆಂದು ಅವರು ಹೇಳುವವರೆಗೆ ನಡೆಯುತ್ತ ಹೋಗಿ, ಆಮೇಲೆ ಮರಳಿ ಬಂದು ವಿಂಧ್ಯಕನು ಕಾಡನ್ನು ಸೇರಿದನು. ತಾನು ಈ ಮುಂಚೆ ಮಾಡಿದ ಕೊಲೆಗಳ ಜುಗುಪ್ಸಾಕರವಾದ ನೆನಪು ಗೆಡ್ಡೆಗೆಣಸುಗಳ ಆಹಾರದಿಂದ ಪರಿಮಾರ್ಜನೆಯಾಗುತ್ತಿರಲಾಗಿ, ಇಂದ್ರಿಯ ನಿಗ್ರಹಿಗಳಾದ ಯತಿಗಳ ಪಾದಕಮಲಗಳನ್ನಲ್ಲದೆ ಬೇರೆ ಏನನ್ನೂ ನೆನೆಯದೆ ಇರುತ್ತಿದ್ದನು. ಹೀಗಿರುತ್ತ -

೭೬. ಮರದಲ್ಲಿ ಬೆಂಕಿಯೂ ಹಂದಿಯಲ್ಲಿ ಮುತ್ತೂ ಹಾವಿನಲ್ಲಿ ಮಾಣಿಕವೂ ಹುಟ್ಟುವಂತೆ, ಆ ಕಿರಾತನಲ್ಲಿ ತಾನು ಕೈಕೊಂಡ ವ್ರತವನ್ನು ರಕ್ಷಿಸಿಕೊಳ್ಳುವ ಬುದ್ಧಿ ಹುಟ್ಟಿತು.

೭೭. ಕಿರಾತರ ಸಹವಾಸವಿಲ್ಲದ, ಮೃಗಗಳಿಗೆ ಮೃಗ ಹಿಂಸೆ ನಡೆಯದ - ಮೂಳೆಗಳ ಕೊಳವಿಲ್ಲದ, ಪಕ್ಷಿಗಳಿಂದ ಪಕ್ಷಿಗಳ ಕೊಲೆಯಾಗದ, ಪ್ರಾಣಿಗಳ ಬೇಟೆ ಅಥವಾ ಸೆರೆ ಆಗದ, ಹಾವುಗಳ ಕೊಲೆ ನಡೆಯದ, ತೊಗಲು ಮೊದಲಾದವುಗಳ ಹೊಲಸಿರುವ ಸ್ಥಳದಲ್ಲಿ ತನ್ನ ಶಿಬಿರವನ್ನು ಹಾಕಿಕೊಂಡು ಆ ಕಿರಾತನು ಸುಖದಿಂದ ಇರುತ್ತಿದ್ದನು. ಅವನ ಚಿತ್ತ ಎಂತಹ ಶುದ್ಧವಾದುದು!

---

೧ ಹಿತಸು (ಕಾ). ೨ ಲ (ಕಾ). ೩ ತೋ (ಪ). ೪ ಕಿ (ಕ).

ಗಿಳಿ ತಿನ್ನದ ಬಿಂಬಫಲಂ
ಗಳ[1]ನನ್ಯ[1]ಭೃತಂ ಕರ್ದುಂಕದಿಮ್ಮಾವಿನ ಪ
ಣ್ಗಳನನ್ಯ ಪಕ್ಷಿಯುಣ್ಣದ
ಶಲಾಟು[2] ಸಂಕುಳಮನಾಯ್ದು ಮೆಲುವಂ ಶಬರಂ ೨೮

ಜಳಧರ ವಿಮುಕ್ತಧಾರಾ
ಜಳಮಂ ಕುಡಿದಿರ್ಪ ಖಗದವೋಲ್ಕುಡಿದು ಮಹಾ
ಚಳ ಶಿಖರಗಳಿತ ನಿರ್ಝರ
ಜಳಮಂ ಸಲೆ ಬೇಡನುಟಿದ ಜಳಮಂ ಬೇಡಂ ೨೯

ವ|| ವಾಗುರೆಯೊಡ[3]ನಾಡು[3]ವ ಬೇಡತಿಯರ್ಮೇರೆಗೆಡದು ಕಂಡುಂ ನೀನುಂ ನಿನ್ನ ಗಂಡನುಂ ಪುಲಿಯಂತಿರಿರ್ದು ನರಿಯಂತಿರೇಕಿರ್ದಿಪಿರೆನೆ ಕಣ್ಬನಿಯಂ ತೀವಿ ಭಿಲ್ಲಿ ಮೆಲ್ಲನಿಂತೆಂದಳ್

ತುಡೆ ಕೋಲಂ ಮುನಿಗಳ್ಗೆ ಕಾದ ಫಲಮಂ ಕೆಯ್ಗೆ[4]ಯ್ಯೊಳುಂ[4]ಡಪ್ಪೆನಾ
ದಡಿಙಗರ್[5] ಮಂತ್ರಿಸಿ ಕಟ್ಟಿದರ್ಕಲಿಯ ಕೆಯ್ಯುಂ ಬಾಯುಮಂ [6]ಕೆಟ್ಟೆಳನಾಂ
ಪಿಡಿಯಂ ಪಕ್ಕಿಗಳಂ ಮೃಗಕ್ಕೆ ಬಿಡಲೊಲ್ಲಂ ನಾಯ್ಗಳಂ ಜೇನುಮಂ
ಭಡಿಯಂ ಗಾಣಮನಿಕ್ಕನೊಕ್ಕನಿನಿಯಂ ತನ್ನಿಕ್ಕೆಯಂ ಬಾಟಿಸಿಯಂ ೩೦

ವ|| ಎಂಬುದುಮಾಕೆಗಳೆಂದರ್ನೀನೆಮ್ಮ ಮನೆಯೊಳ್ ಬಾಯ್ಗೆ ಬಯಸಿದುದನುಂಡು ಮೆಯ್ಗೆ ಮೆ[7]ಚ್ಚಿದಂತಿರು ಬಾಯೆಂ[8]ಬುದುಂ[8] ವಾಗುರೆ ತಲೆಯನಲುಗಿ ಬೆರಲಂ ಮಿಡಿದು

೨೮. ಗಿಳಿಗಳು ತಿನ್ನುವ ತೊಂಡೆಹಣ್ಣುಗಳನ್ನೂ ಕೋಗಿಲೆಗಳು ಕುಟಕದ ಇಮ್ಮಾವಿನ ಹಣ್ಣುಗಳನ್ನೂ ಪಕ್ಷಿಗಳು ಸೇವಿಸದ ಹೀಚುಗಳನ್ನೂ ಆಯ್ದುಕೊಂಡು ಆ ಶಬರನು ತಿನ್ನುವನು.

೨೯. ಮೋಡದ ನೀರನ್ನು ಮಾತ್ರ ಕುಡಿಯುವ (ಚಾತಕ) ಪಕ್ಷಿಯಂತೆ ಹೆಬ್ಬೆಟ್ಟದ ಶಿಖರದಿಂದ ಹರಿದುಬರುವ ನಿರ್ಝರದ ನೀರನ್ನು ಮಾತ್ರಕುಡಿದು ಆ ಬೇಡನು ತೃಪ್ತನಾಗುವನು. ಬೇರೇನನ್ನೂ ಆತನು ಬಯಸುವುದಿಲ್ಲ.

ವ|| ವಾಗುರೆಯ ಒಡನಾಡಿಗಳಾದ ಬೇಡತಿಯರು (ಈ ದಂಪತಿಗಳ ಸ್ಥಿತಿಯನ್ನು) ಕಂಡು "ನೀನೂ, ನಿನ್ನ ಗಂಡನೂ ಹುಲಿಯಂತಿದ್ದವರು ಈಗ ನರಿಯಂತೇಕಾದಿರಿ?" ಎನ್ನಲಾಗಿ ವಾಗುರೆಯ ಕಣ್ಣು ತುಂಬಿ ಬಂದುವು. ಆಕೆ ಮೆಲ್ಲನೆ ಹೀಗೆಂದಳು -

೩೦. "ಮುನಿಗಳನ್ನು ಬಾಣದಿಂದ ಹೊಡೆಯಲು ಹೊರಟಿದ್ದ ನನ್ನ ಗಂಡನನ್ನು ತಡೆದು ಅವರ ವಧೆಯನ್ನು ತಪ್ಪಿಸಿದೆನು. ಅದರ ಫಲವನ್ನು ಈಗ ಎರಡೂ ಕೈಗಳಿಂದ ಉಣ್ಣುತ್ತಿದ್ದೇನೆ. ಆ ದಾಂಡಿಗರು ಏನು ಮಾಟ ಮಾಡಿದರೊ ಏನೊ, ವೀರನಾದ ನನ್ನ ಪತಿಯ ಕೈಯನ್ನೂ ಬಾಯನ್ನೂ ಕಟ್ಟಿಬಿಟ್ಟರು. ನಾನು ದುರ್ಗತಿಗೀಡಾದೆನು. ಈಗವನು ಹಕ್ಕಿಗಳನ್ನು ಹಿಡಿಯನು; ಮೃಗಗಳಿಗೆ ನಾಯಿ ಬಿಡಲೊಲ್ಲನು; ಜೇನನ್ನೂ ಬಡಿಯನು; ಮೀನಿಗೆ ಗಾಳವಿಕ್ಕನು. ಅವನು ತನ್ನ ಮನೆಯನ್ನು ಬದುಕನ್ನೂ ತೊರೆದು ಬಿಟ್ಟಿದ್ದಾನೆ."

ವ|| ಇದನ್ನು ಕೇಳಿ ಅವರು ಆಕೆಗೆ ಹೀಗೆಂದರು - "ನೀನು ನಮ್ಮ ಮನೆಗೆ ಬಾ. ಬಾಯಿಗೆ ಇಷ್ಟವಾದುದನ್ನು ಉಂಡು, ಮೈಗೆ ಹಿತವಾಗುವಂತೆ ಮಾಡಿಕೊಂಡಿರು" ಅದಕ್ಕೆ

---

೧ ನಿತುಂಪರ (ಕ), ನಿತರ (ಮ). ೨ ಟ (ಕಾ, ಮ). ೩ ನೋದು (ಕ). ೪ ಯ್ಯೆಕಂ (ಕ, ಮ). ೫ ಗಂ (ಕ). ೬ ಕಟ್ಟಿ (ಕ). ೭ ಬೆ (ಕ). ೮ ದು ಕರೆವುದುಂ (ಕಾ).

ಮನದೊಳಿರ್ದುದಂ ಮಾತಿನೊಳ್ಬಱಿ[೧]ಕೆಯ್ವೆನಲ್ಲದೆ ಬೇಱೊಂದಕ್ಕೆ ಬಗೆದವಳೆನಲ್ಲೆ[೨]ನಿನ್ನೆ[೨]ನ್ನ ನಲ್ಲನಪ್ಪುದನಪ್ಪೆನದು ಲೇಸಾದೊಡಂ ಪೊಲ್ಲಾದೊಡಮೆನ್ನ ಪುಣ್ಯಮೆಂದು ಪೂಣ್ದಿರ್ದಳಿರ್ಪುದುಮೊಂದು ದಿವಸಂ ವಿಂಧ್ಯಕನೆಲ್ಲಿಯುಮೊಳ್ಳಿದುವಪ್ಪ ಫಲಂಗಳಂ ಪಡೆಯದಱಸುತ್ತುಂ ಬಂದೊಂದು ಕುಬ್ಜಾಮ್ರಕುಜದ ಬಿಱೊಂಬಿನ ಪಸುರೆಲೆಯ ಕುಸುಂಕುಱೊಳಗೆ ರಸಾಯನದ ಕುಪ್ಪಿಗೆಯಂತೆ ತೋರ್ಪ ತನಿವಣ್ಣಂ ತಿಱಿಯಲೊಡನೆ

ತರುಣರ (ರು) ವಿಷಧರಂ ಕೋ
ಟರ ಮುಖದಿಂ ನುಂಗಿದಂತಫಪ್ರೇರಣೆಯಿಂ
ಪಿರಿದಪ್ಪ ಪೋಟಿಲೊಳಗಾ
ಸರಸಫಳಂ ಕೆಯ್ ಕರ್ದುಂಕೆ ಬಿ[೩] [೪]ರ್ದತ್ತಾ[೪]ಗಳ್ ೮೧

ಆ ಪಣ್ಣನಱಸುವಳಿಪಿಂ
ದಾ ಪೋಟಿಲ್ಗೊಯ್ದ ತತ್ಕಿರಾತನ ಕರಮಂ
ಕೋಪದೊಳಹಿ ಕೊಂಡುದು ತರು
ಚಾಪದಿನಂತಕನ ಕಣೆಯೆ [೫]ಕೊಂಡ[೫]ವೊಲೆನಸುಂ ೮೨

ಅಯ್ಯೊ ಫಳಾಮೃತರಸಮಂ
ಕೆಯ್ಯಿಂದಂ ಪಿಡಿಯೆ ವಿಷಮದಾಯ್ತೇ[೬] ಬೇಡಂ
ಗಯ್ಯ ನೃಶಂಸ ಕೃತಾಂತನ
ಕೆಯ್ಯಡಕಮನಱಿವೆನೆಂಬ ದೇವನುಮೊಳನೇ ೮೩

ಉತ್ತರವಾಗಿ ವಾಗುರೆ ತಲೆಗೊಡಹಿ, ಬೆರಳು ಮಿಡಿದು, "ಮನಸ್ಸಿನಲ್ಲಿದ್ದುದನ್ನು ಮಾತಿನಲ್ಲಿ ತಿಳಿಸಿದೆನಲ್ಲದೆ, ಬೇರೊಂದಕ್ಕೆ ನಾನು ಹಾತೊರೆದವಳಲ್ಲ, ಇನ್ನು ನನ್ನ ಗಂಡನು ಹೇಗೋ ಹಾಗೆಯೆ ನಾನೂ ನಡೆದುಕೊಳ್ಳುವೆನು. ಒಳ್ಳೆಯದಾಗಲಿ, ಕೇಡೇ ಆಗಲಿ. ಅದು ನನ್ನ ಪುಣ್ಯ." ಹೀಗೆ ಪ್ರತಿಜ್ಞೆ ಮಾಡಿಕೊಂಡು ಅವಳು ಅನುಸರಿಸುತ್ತಿದ್ದಳು. ಹೀಗಿರುತ್ತ ಒಂದು ದಿನ ವಿಂಧ್ಯಕನಿಗೆ ಎಲ್ಲಿಯೂ ಒಳ್ಳೆಯ ಹಣ್ಣುಗಳು ದೊರೆಯಲಿಲ್ಲ; ಹುಡುಕುತ್ತ ಬಂದು ಒಂದು ಕುಳ್ಳಾದ ಮಾವಿನ ಮರದ ಕೆಳಗೊಂಬಿನಲ್ಲಿ, ಹಸುರೆಲೆಗಳ ಗೊಂಚಲಲ್ಲಿ ರಸಾಯನದ ಹೂಜೆಯಂತೆ ತೋರುವ ಸವಿಯಾದ ಹಣ್ಣೊಂದನ್ನು ಕಂಡು, ಅದನ್ನು ಕೀಳಲಾಗಿ -

೮೧. ಆ ಚಿಕ್ಕ ಮರವೆಂಬ ಹಾವು ತನ್ನ ಪೊಟರೆಯೆಂಬ ಬಾಯಿಯಿಂದ ಅದನ್ನು ನುಂಗಿತೆಂಬಂತೆ, ಆ ದೊಡ್ಡ ಪೊಟರೆಯೊಳಗೆ ರಸಭರಿತವಾದ ಆ ಹಣ್ಣು ಅವನ ಕೈಜಾರಿ ಬಿದ್ದುಬಿಟ್ಟಿತು.

೮೨. ಆ ಹಣ್ಣನನು ಅದರೊಳಗಿಂದ ಎತ್ತಿಕೊಳ್ಳಬೇಕೆಂದು ಆ ಕಿರಾತನು ಆಸೆಯಿಂದ ಪೊಟರೆಯಲ್ಲಿ ಕೈನೀಡಲಾಗಿ, ಮರದ ರೂಪವಾದ ಬಿಲ್ಲಿನಿಂದ ಯಮನೇ ಬಾಣಬಿಟ್ಟನೆಂಬಂತೆ, (ಪೊಟರೆಯೊಳಗಿದ್ದ) ಹಾವು ಕೋಪದಿಂದ ಅವನನ್ನು ಕಚ್ಚಿತು.

೮೩. ಅಯ್ಯೊ! ಹಣ್ಣಿನ ರಸವನ್ನು ಹಿಡಿದರೆ ಬೇಡನಿಗೆ ಅದೇ ವಿಷಯವಾಯಿತೆ? ಕ್ರೂರನಾದ ಯಮನ ಮೋಸವನ್ನು ಬಲ್ಲೆನೆಂಬ ದೇವನಾದರೂ ಉಂಟೆ?

---

೧ ಱು (ಕಾ). ೨ ನೀನೆ (ಕ). ೩ ಬರ್ದುಂಕಿ (ಕಾ, ಮ). ೪ ದಿರ್ಂತಾ (ಕ). ೫ ಕೊಳ್ವ (ಕಾ). ೬ ತೆನೆ (ಕಾ).

ಪಿಕ ಹಾಹಾಕ್ರಂದನಮಂ
ವಿಕಳಿ ವನಾಗ್ರಸ್ತೆ ಮಾಡೆ ಸ[೧]ತಿ ಸತ್ತು ಯಶೋ
ಧಿಕವೃಷಭದತ್ತ ವಿಭುಗಿ
ಭ್ಯಕೇತುವೆಂ[೨]ದೆಂಬ ತನುಜ[೨]ನಾದಂ ವ್ಯಾಧಂ ೮೪

ವನಚರಿಯುಮೆನಗೆ ಮತ್ಕಾಂ
ತನ ಲೋಕಮೆ ಲೋಕಮೆಂದು ಹಸ್ತಮನಾ ಪಾ
ವಿನ ಪಲ್ಗೆ ಕೊಟ್ಟು ಸತ್ತಾ
ತನ ಪೊಟಿಲೊಳೆ ಮುಖ್ಯನಪ್ಪ [೩]ಧೀವರ[೩]ನಾದಂ ೮೫

ವ॥ ಆ ವೃಷಭದತ್ತ ವೈಶ್ಯೋತ್ತಮನ ವಿಭವಮಂ ಪೇೞ್ವೊಡೆ

ಪಿಂಗದ ಪೊನ್ನ ರಾಶಿಯ ಬಿಸಿಲ್ಗಳೆ ಮುತ್ತಿನ ಮೊತ್ತದಚ್ಚವೆ
ಳ್ದಿಂಗಳೆ ಮಾಣಿಕಂಗಳೆಳೆಸಂಜೆಯೆ ನೀಳ್ದೊಗೆದಿಂದ್ರನೀಲ ಜಾ
ಲಂಗಳ ಮರ್ವೆ, ವಜ್ರರುಚಿಯೇೞ್ಗೆಯೆ ಪಚ್ಚೆಯ ರೋಚಿಯಚ್ಚ ಜಾ
ಳಂಗಳೆ ಸಂತತಂ ವೃಷಭದತ್ತ ವಣಿಕ್ಪತಿಯೊಂದು ಗೇಹದೊಳ್ ೮೬

[೪]ಒಮಳ್ದಿಭಮದಕರ್ದಮಳಮಂ
ಕ್ರಮಜದಳಿ[೫] ಕಾನೀಕ ಜಾನುಧಘ್ನಮ[೬]ನೆ ತುರಂ
ಗಮಲಾಳಾಜಳ[೭]ದ ಪೊನ
ಲ್ತೆಮಳ್ಬಿ[೮] ತೊಳೆವುದು ತದೀಯ ಗೇಹಾಂಗಣದೊಳ್ ೮೭

೮೪. ಆತನ ಬೇಡಿತಿ ಕೋಗಿಲೆಯಂತೆ ಹಾಹಾಕಾರ ಮಾಡುವಷ್ಟರಲ್ಲಿ ವಿಂಧ್ಯಕನು ಸತ್ತು, ವೃಷಭದತ್ತ ಪ್ರಭುವಿಗೆ ಇಭ್ಯಕೇತುವೆಂಬ ಮಗನಾಗಿ ಹುಟ್ಟಿದನು.

೮೫. ಆ ಶಬರಿಯೂ ಕೂಡ "ತನ್ನ ಪತಿಯ ಲೋಕವೇ ನನಗೆ" ಎಂದು ತನ್ನ ಕೈಯನ್ನು ಅದೇ ಹಾವಿನ ಬಾಯಿಗೆ ಕೊಟ್ಟು ಸತ್ತು, (ಇಭ್ಯಕೇತುವಿನ) ಪಟ್ಟಣದಲ್ಲಿಯೆ ಹುಟ್ಟಿ, ಮುಖ್ಯ ಬೆಸ್ತನಾದನು.

ವ॥ ಆ ವೃಷಭದತ್ತನೆಂಬ ವೈಶ್ಯಶ್ರೇಷ್ಠನ ವೈಭವವೆಂತಹುದೆಂದರೆ -

೮೬. ಕಡಮೆಯಾಗದ ಹೊನ್ನ ರಾಶಿಗಳದೇ ಬಿಸಿಲು; ಮುತ್ತಿನ ರಾಶಿಗಳದೇ ಬೆಳ್ದಿಂಗಳು; ಮಾಣಿಕಗಳ ಸಂಜೆವೆಳಕು; ಒಟ್ಟಿದ ಇಂದ್ರನೀಲಗಳ ಕತ್ತಲೆ; ವಜ್ರಗಳ ಪ್ರಭೆಯ ಏಳಿಗೆ; ಪಚ್ಚೆಗಳ ಕಾಂತಿಯ ಹೆಚ್ಚಳ. ಹೀಗೆ ಸಂತತವಾಗಿ ವೃಷಭದತ್ತನ ಮನೆಯಲ್ಲಿ ಯಾವಾಗಲೂ ಬೆಳಕು ತುಂಬಿರುವುದು.

೮೭. ಅವನ ಮನೆಯಂಗಳದಲ್ಲಿ (ಆತನ) ಆನೆಗಳು ಸುರಿಸಿದ ಮದೋದಕದಿಂದಮೊಳಕಾಲು ಮುಟ್ಟ ಕೆಸರಾಗಿರುವುದು; ಆದರೆ ಆತನ ಕುದುರೆಗಳ ಲಾಲಾಜಲವು ಹೊನಲಾಗಿ ಹರಿದು ಆ ಕೆಸರನ್ನೆಲ್ಲ ತೊಳೆದು ಬಿಡುವುದು.

---

೧ ಪ (ಕ). ೨ ಬಾತ್ಮಜಾತ (ಕಾ, ಮ). ೩ ದೀವಳ (ಕ, ಮ) ೪ ಒಮುಳ್ದಿಭಕರ್ದಮು (ಕ), ಒಮುಳ್ದಿಭಕ್ತರ್ದಮ (ಮ), ಒಮಮುಳ್ದಿಭಕರ್ದಮು (ಪ). ೫ ದೊಳೆ (ಕ, ಮ). ೬ ಮೆ (ಕಾ). ೭ ನ (ಕಾ) ೮ ಳ್ವಿ (ಕ, ಮ).

ತೆಗೆದತಿವರ್ತಿಗಳಂ ದಂ
ತಿಗಳ ಮೊಗಂಗಾಣದತ್ತ ಕಟ್ಟಿದೊಡೆ ಮೊಗಂ
ಬುಗಲವ್ವಳಿಪುವು ಮಣಿ ಹ
ರ್ಮ್ಯಗತ ನಿಜಚ್ಛಾಯೆಯೊಳ್ ವಣಿಗ್ವಲ್ಲಭನಾ ೮೮

ಪರದನ ಪೆರ್ಮನೆಯೊಳ್ ಕ
ರ್ಪುರಮಂ ಬೆಳ್ಪೊಟ್ಟಿದೆಂದು ಚೇಟಿಕೆಯರ್ಕ
ತ್ತುರಿಯಂ ಹರಿ ನೀಲ ಮನೋ
ಹರ ಕುಟ್ಟಿಮರಜಮಿದೆಂದು ಪೊಱ[೧]ಗುಗ್ಗುತಿ[೧]ರ್ಪರ್ ೮೯

ಪದ್ಮದ ಸುತನಖಿಳ ಕಳಾ
ಸದ್ಮಂ ಚತುರಾಸ್ಯನಾದ ತೆಱನಂ ತೋಱಲ್
ಪದ್ಮಶ್ರೀಯ ಸುತಂ [೨]ದ್ವಿಪ[೨]
[೩]ದದ್ಮರ ಶರ[೩]ನಿಭ್ಯಕೇತು ಕಳೆಗಳನಾಳ್ದಂ ೯೦

ಸ(ವ[೪]) ಸಂದಾರತಿಯಿಭ್ಯಕೇತುವಿನ ರೂಪಂ ಕಂಡು ಕಣ್ಸೋಲ್ತು ಕೂ
ಡುವ ಕಾಯ್ಪಿಂದಭಿಸಾರಿಕಾ ಪದವಿಂಗದೊಂದಾಸೆಯಂ ಮಾಡುವ
ಳ್ಭವನಿನ್ನೊರ್ಮೆ ಮನೋಜನಂ ಮುನಿದು ನೋಳಟ್ಕಿಂದಂದೆನೋಂಪಳ್ವಸಂ[೫]
ತವಿಳಾಸಕ್ಕೆ ಕನಲ್ವಳೆಂದೊಡೆ ವಣಿಕ್ಕಾಂತಂ ಕರಂ ಕಾಂತನೋ ೯೧

೮೮. ಆ ವಣಿಜ ಶ್ರೇಷ್ಠನ ಮನೆಯಲ್ಲಿ ಮದವೇರಿ ಕೈಮೀರುವ ಆನೆಗಳನ್ನು ಪ್ರತ್ಯೇಕಿಸಿ ಯಾರನ್ನೂ ಕಾಣದಂತೆ ಕಟ್ಟಿ ನಿಲ್ಲಿಸುವರು; ಆದರೆ ಅವು ರತ್ನ ನಿರ್ಮಿತವಾದ ಆ ಮನೆಯ (ನೆಲಗೋಡೆಗಳಲ್ಲಿ) ತಮ್ಮ ಪ್ರತಿಬಿಂಬವನ್ನು ಕಂಡು ಅದರೊಡನೆಯೆ ಹೋರಾಡಲು ಹಾತೊರೆಯುವುವು.

೮೯. ಆ ವಣಿಜನ ಮಹಾಮನೆಯಲ್ಲಿ ಕಪ್ಪುರವನ್ನು ಬಿಳಿಯ ಹೊಟ್ಟೆಂದೂ ಕಸ್ತೂರಿಯನ್ನು ಇಂದ್ರನೀಲದ ನೆಲಗಟ್ಟಿನ ಕಸವೆಂದೂ ಕೆಲಸಗಿತ್ತಿಯರು ಗುಡಿಸಿ ಹೊರಗೆ ಚೆಲ್ಲುವರು.

೯೦. ತಾವರೆಯ ಮಗನಾದ ಬ್ರಹ್ಮನು 'ಚತುರಾಸ್ಯ' (೧. ನಾಲ್ಕು ಮುಖದವ ೨. ಪರಮ ಪಂಡಿತ) ನಾದುದು ಹೇಗೆಂದು ತೋರುವಂತೆ, ಪದ್ಮಶ್ರೀಯ ಮಗನಾದ ಇಭ್ಯಕೇತು ಎಲ್ಲ ಕಲೆಗಳಲ್ಲಿಯೂ ಪ್ರವೀಣನಾದನು.

೯೧. ಪ್ರತ್ಯಕ್ಷ ರತಿಯು ಕೂಡ ಇಭ್ಯಕೇತುವಿನ ರೂಪವನ್ನು ಕಂಡು ಮರುಳಾಗಿ ಅವನನ್ನು ಕೂಡುವ ಕಾತರದಿಂದ ಅಭಿಸಾರಿಕೆಯಾಗಲು ಬಯಸುವಳು; ಶಿವನು ಇನ್ನೊಮ್ಮೆ ಮನ್ಮಥನನ್ನು ಉರಿಗಣ್ಣಿಂದ ನೋಡಲಿ ಎಂದು ಧ್ಯಾನಿಸುವಳು; ವಸಂತವೇಕೆ ಬಂದಿತೊ ಎಂದು ಸಿಡಿಮಿಡಿಗೊಳ್ಳುವಳು. ಎಂದಮೇಲೆ ಆ ವಣಿಜ ಕುಮಾರನು ಚೆಲುವನ್ನು ಏನೆಂದು ಬಣ್ಣಿಸಬಹುದು?

---

೧ ಗುತ್ತಿ (ಕ, ಪ). ೨ ವಿಪ (ಕ, ಪ). ೩ ಪದ್ಮಸುತ ಶರ (ಕ), ಪದ್ಮರ ಸುತ (ಪ). ೪ ಮ (ಕ, ಕಾ, ಮ). ೫ ಳ್ಕಿಂದಂದೆ ನೊಪ್ಪುವಳು ವಸಂ (ಕ), ಳ್ಕೊಂದೊಂದೆ ನೋಂಪಳ್ ವಸಂ (ಕಾ).

ಶ್ರುತವಧು ಕೂರ್ತು ಕೊಟ್ಟ ತೆಱದಿಂದೆಸೆದಿರ್ಪುದು ನಾಟಕ ಪ್ರವೀ
ಣತೆ ಕೃತಿಭಾವ ಕೋವಿದತೆ ಶಬ್ದಸಮಗ್ರತೆ ತರ್ಕರೀತ್ಯಭಿ
ಜ್ಞತೆ ನಯ ವಾಗ್ವಿಚಕ್ಷಣತೆ ವಾದ್ಯವಿದಗ್ಧತೆ ನರ್ತನ ಪ್ರಗ
ಲ್ಭತೆರಸಗಾನಮಗ್ನತೆ ವಿಳಾಸರಸದಜ್ಞತೆ ವೈಶ್ಯಪುತ್ರನಾ ೯೨

ಬಾಧಿಸುವಂ ಮನೋಮೃಗಮನಂಗಜದಾಮ[1]ಮನಿಟ್ಟು ಸೋಲ್ತ ಬಿಂ
ಬಾಧರೆಯರ್ಕಳೊಪ್ಪು[2]ವ ಪಿಣಿಲ್ಕ[3]ವಿಲಂ ಪಿಡಿವಂ ವಿವೇಕ ವಿ
ದ್ಯಾಧರನಂಗಜಾಳದೊಳೆ ಸಿಲ್ಕಿವಂ ಸಲೆ ಪೋದ ಜನ್ಮದಾ
ವ್ಯಾಧನ ಕೆಯ್ತಮಂ ಕೆದಱುವಂತಿರೆ ಲೋಚನ ಮತ್ಸ್ಯಜಾಲಮಂ ೯೩

ಅಪ್ರತಿಮ ರಾಜಗೃಹ ನಗ
ರಪ್ರಭು ಜಿತಶತ್ರುವೆಂಬನಾ ಭೂಪಂಗಂ
ಸುಪ್ರಭೆಗಂ ಪುಟ್ಟಿದ ಕಮ
ಳಪ್ರಭೆ ರೂಪಾತಿಶಯದ ಸಿರಿಯಂ ಪಡೆದಳ್ ೯೪

ವ॥ ಆಕೆಯ ನೂತನ ತನುಮನಕ್ಕೆ ವಸಂತದಂತೆ ಬಂದ ಪೊಸಜವ್ವನಮಂ ಜಿತಶತ್ರು ಮಹಾರಾಜಂ ಕಂಡು ಭೂಮಂಡಲದೊಳುಳ್ಳ ರಾಜಕುಮಾರರಂ ಬರಿಸಿ ಸ್ವಯಂಪರಮಂ ಸ್ಮರಂ ಬರಮಿತ್ತಂತೆ ಮಹಾವಿಭೂತಿಯಿಂ ಮಾಳ್ಪುದುಂ ವನದೊಳಗೆ ಬಳೆಯುತ್ತುಮಿರ್ಪ ಮೀನಕೇತುವಿನಂತೆ ನೆಲನುಂ ನೇಸಱುಂಗಾಣದಂತು ಮನೆಯೊಳ್ ಬಳೆಯುತ್ತುಮಿರ್ದಿಭ್ಯಕೇತು ಕುಮಾರಂ ಬೇಡವೇಡೆನೆಯುಂ ನಿಜ ಜನಕನೊಡನೆ ಬಂದು ನೋಡುತ್ತುಮಿರೆ

೯೨. ನಾಟಕ ಪ್ರಾವೀಣ್ಯ, ಕೃತಿಭಾವ ಕೌಶಲ, ಶಬ್ದಸಮಗ್ರತೆ, ತರ್ಕ ಪಾಂಡಿತ್ಯ, ನಯಜ್ಞತೆ, ವಾಕ್ಪಾಟವ, ವಾದ್ಯವಿದ್ಯಾನೈಪುಣ್ಯ, ನರ್ತನ ಕಲಾ ಪ್ರವೀಣತೆ, ರಸಗಾನ ಲೋಲತೆ, ವಿಳಾಸರಸಜ್ಞತೆ - ವಿದ್ಯಾದೇವಿಯೆ ಒಲಿದು ಅನುಗ್ರಹಿಸಿದಳೊ ಏನೊ ಎಂಬಂತೆ ಇವೆಲ್ಲವೂ ಆ ವೈಶ್ಯ ಪುತ್ರನಲ್ಲಿ ನೆಲಸಿದ್ದುವು

೯೩. ಪೂರ್ವಜನ್ಮದ ಕಿರಾತಲೀಲೆಯನ್ನು ಮರೆಯದೆ ಮತ್ತೆ ನಡೆಸುವನೊ ಏನೊ ಎಂಬಂತೆ ಸ್ತ್ರೀಯರ ಮನವೆಂಬ ಜಿಂಕೆಗಳನ್ನು ಕಾಮಪಾಶದಿಂದ ಪೀಡಿಸುವನು;

ಮನಸೋತ ಚೆಲುವೆಯರ ಮುಡಿಯೆಂಬ ನವಿಲುಗಳನ್ನು ಸೆರೆಹಿಡಿಯುವನು; ಅವರ ಕಣ್ಣುಗಳೆಂಬ ಮೀನುಗಳನ್ನು ತನ್ನ ದೇಹವೆಂಬ ಬಲೆಯಲ್ಲಿ ಹಿಡಿದುಬಿಡುವನು.

೯೪. ಅಪ್ರತಿಮವಾದ ರಾಜಗೃಹ ನಗರಕ್ಕೆ ಜಿತಶತ್ರುವೆಂಬುವನು ಅರಸು; ಆತನಿಗೂ ಅವನ ರಾಣಿಯಾದ ಸುಪ್ರಭೆಗೂ ಮಗಳಾದ ಕಮಳಪ್ರಭೆ ಅತ್ಯಂತ ರೂಪವತಿಯಾಗಿದ್ದಳು.

ವ॥ ಆಕೆಯ ದೇಹಕ್ಕೂ ಮನಕ್ಕೂ ವಸಂತದಂತೆ ಬಂದ ಹೊಸ ಯೌವನವನ್ನು ಕಂಡು ಜಿತಶತ್ರು ಮಹಾರಾಜನು ಸರ್ವ ರಾಜಕುಮಾರನನ್ನೂ ಕರೆಯಿಸಿಕೊಂಡು ಮನ್ಮಥನ ವರವಿತ್ತಂತೆ ಮಹಾವೈಭವದಿಂದ ಸ್ವಯಂವರವನ್ನು ನಡೆಸಿದನು. ಕಾಡಿನಲ್ಲಿ ಬೆಳೆಯುತ್ತಿರುವ

---

೧ ವ (ಕ). ೨ ಪಿಣಿಲಂ ನ (ಕ, ಮ). ೩ ಪೋ (ಕ. ಮ).

ಎನಿತಲರ್ಗಳಲರ್ದೊಡಂ ಭೃಂ
ಗನಾಯಕಂ ಜಾತಿಗೆಱಗುವಂತಿರೆ ನೃಪನಂ
ದನರೆನಿತೆಸೆದಿರ್ದೊಡಮಂ
ಗನೆಯಲರ್ಗಣ್ಣಿಭ್ಯಕೇತುಗೆಱಗಿದುವಳಿಪಿಂ ೯೫

ರಾಗದಳುರ್ಕೆಯಿಂ ನೆರೆದ ರಾಜಕುಮಾರರ ಕಣ್ಗಳೆಯ್ದೆ ಸಿ
ಗ್ಗಾಗಿರೆ ಕಾಮಿನೀ ಜನದ[1]ಕಣ್ಗಳೆಟ್ಟಿರೆ[1] ತನ್ನನುರ್ಚಿದಾ
ಪೂಗಣೆಪಲ್ಲವಂ ಪಿಡಿದು ಮಾಲೆಯನೇಱಿಸಿ ಮೇಲೆ ಸೂಸುವಂ
ತಾಗಿರೆ ವೈಶ್ಯಸೂನುಗೊಲವಿಂ ಕಮಳಪ್ರಭೆ ಮಾಲೆ ಸೂಡಿದಳ್ ೯೬

ಅಱಿದು[2] ಜಿತಶತ್ರು ಭೂಪನ
ಕಿಱಿಯರಸಿ ವಸಂತಸೇನೆಯಾ ಕಾಮಿನಿಯ
ಟ್ಕಱ ತನುಜೆ ಮದನಸೌಂದರಿ
ನೆಱಿದಳ್ ನೃತ್ಯದೊಳಮಸಮ ಸಾಹಿತ್ಯದೊಳಂ ೯೭

ವನಿತೆಯ ರೂಪಂ ಪೊಸ ಜ
ವ್ವನಮುಂ ಮೋಹಮದಿನ್ನುದಂಚಿತ ರಸ ನ
ರ್ತನ ಭಾವಭಾವಿತಂ ಗಡ
ಮೆ[3]ನೆ ಕಾಮನಮೋಘಬಾಣಮಾದುದು ಪೆಱತೇಂ ೯೮

ವ॥ ಅಂತು ಭುವನಬುಂಭುಕಮಾದ ತನ್ನ ಮಗಳ ವಿಚಿತ್ರ ನೃತ್ಯ ವಿದ್ಯಾವಿಳಾಸಮಂ

ಮನ್ಮಥನಂತೆ ನೆಲವನ್ನು ಸೂರ್ಯನನ್ನು ಕಾಣದೆ ಮನೆಯಲ್ಲಿಯೆ ಬೆಳೆಯುತ್ತಿದ್ದ ಇಭ್ಯಕೇತು ಕುಮಾರನು ಬೇಡ ಬೇಡವೆಂದರೂ ತನ್ನ ತಂದೆಯೊಡನೆ ಅಲ್ಲಿಗೆ ಬಂದು ನೋಡುತ್ತಿರುವಾಗ

೯೫. ಅರಳಿದ ಹೂಗಳು ಎಷ್ಟೇ ಇದ್ದರೂ ಶ್ರೇಷ್ಠವಾದ ದುಂಬಿ ಜಾಲಿಪುಷ್ಪಕ್ಕೇ ಎರಗುವಂತೆ, ಎಷ್ಟೋ ಜನ ರಾಜಕುಮಾರರು ಎದುರಿಗಿದ್ದರೂ ಆ ಕನ್ಯೆಯ ಕಣ್ಣು ಇಭ್ಯಕೇತುವಿನ ಮೇಲೆಯೆ ನೆಲಸಿದುವು.

೯೬. ರಾಗೋತ್ಸಾಹದಿಂದ ನೆರೆದಿದ್ದ ರಾಜಕುಮಾರರು ನಾಚಿಕೆಯಿಂದ ಕೊರಗುತ್ತಿರಲಾಗಿ, ಕಾಮಿನಿಯರ ಕಣ್ಣು ಸೋತು ಜೋಲುತ್ತಿರಲಾಗಿ, ತನ್ನಲ್ಲಿ ನಾಟಿದ ಪುಷ್ಪಬಾಣವೆ ಚಿಗುರೆಲೆ ಹಿಡಿದು ಮಾಲೆಯೇರಿಸಿ ಮೇಲೆ ಸೂಸುವುದೇನೊ ಎಂಬಂತೆ ಕಮಳಪ್ರಭೆಯು ಆ ವೈಶ್ಯಪುತ್ರನಿಗೆ ಮಾಲೆಯಿಕ್ಕಿದಳು.

೯೭. ಜಿತಶತ್ರುರಾಜನ ಕಿರಿಯರಸಿಯಾದ ವಸಂತಸೇನೆಯ ಮುದ್ದಿನ ಮಗಳು ಮದನ ಸೌಂದರಿಯೆಂಬುವಳು ನೃತ್ಯದಲ್ಲಿಯೂ ಸಾಹಿತ್ಯದಲ್ಲಿಯೂ ನಿಷ್ಣಾತೆಯಾಗಿದ್ದಳು.

೯೮. ಆಕೆಯ ರೂಪುವೂ ನವಯೌವನವೂ ಮೋಹಕತೆಯೂ ರಸನರ್ತನದ ಭಾವ ವಿಲಾಸವೂ ಕೂಡಿ ಆಕೆ ಮನ್ಮಥನ ಅಮೋಘಬಾಣವಾಗಿದ್ದಳು.

ವ॥ ಹೀಗೆ ಜಗತ್ತಿಗೆ ಅತಿಶಯವಾದ ತನ್ನ ಮಗಳ ಮಿಗಿಲಾದ ನೃತ್ಯ

---

೧ ಕಣ್ಣೆಳಲಟ್ಟಿರೆ (ಕಾ). ೨ ವೆ (ಮ), ವೊ (ಕಾ), ೩ ನ (ಕ, ಮಸ ಪ).

ಕಂಡು ಜಿತಶತ್ರುಮಹಾರಾಜನಾ ವಿದ್ಯೆಗಿಭ್ಯಕೇತುಕುಮಾರನೆ ಬಲ್ಲನಾತನಲ್ಲದೆ ಸರ್ವ[೧]ನುಮಱಿಯನೆಂದು ವಿವಿಧ ವಾದ್ಯವಾದನ ವಾಚಾಳಮುಂ ಗಾಯಿಕಾಜನಸಂಭನ್ನಮುಂ ವಾಂಸಿಕ ಸಂಕುಳ ಸಂಕೀರ್ಣಮುಂ ಶೈಲೂಷ ಸಮೂಹ ಸಮ್ಮರ್ದಮುಂ ಭಾರತಿಕವೃಂದ ಭರಿತಮುಂ ವಾಗ್ಗೇ[೨]ಯಕಾರ ವಿಳಸಿತಮುಂ ಪ್ರಗೀತ ಪ್ರಕೀರ್ಣಮುಂ ತಾಳಧರಾಧಿಷ್ಠಿತಮುಮಪ್ಪ ಮಣಿಮಯ ನೃತ್ಯಮಂಟಪಕ್ಕಿಭ್ಯಕೇತುಕುಮಾರನಂ ಬರಿಸಿ

ಇಕ್ಕಿದ ಮುತ್ತಿನೆಕ್ಕಸರದೋಲೆ ತುಱುಂಬಿದ ಜಾದಿವೂ[೩]ವೆ ತೊ
ಟ್ಟೆಕ್ಕಸರಂ ಕೆಲಕ್ಕೆ ನಸುಗೊಂಕಿದ ಕತ್ತುರಿಯಡ್ಡ ಬೊಟ್ಟು ತ
ಳ್ತಿಕ್ಕಿದ ಚಂದನಂ ಮುರಿದು ಸುತ್ತಿದ ಚಂಪಕಮಾಲೆ ಕಣ್ಗಳಂ
ಜಕ್ಕುಲಿಸಿತ್ತು ಪಜ್ಜಳಿಪ ವಜ್ರದ ಕಂಕಣಮಾ ಕುಮಾರನಾ ೯೯

ವ|| ಅಂತು ಕಂತುವಿನಂತೆ ಬಂದ ಸೌಭಾಗ್ಯಸಕಿಂಚನನಂ ಕಾಂಚನಪೀಠದೊಳ್ಕುಳ್ಳಿರಿಸಿ ಕೇಳಿಕೆಯಂ ಮಾಡಿ

ವನಿತಾಪಾದಪಯೋಜ ಸಂಗಸುಖದಿಂರಂಗಕ್ಕೆ ರೋಮಾಂಚಮಾ
ಯ್ತೆನೆ ನಟ್ಟಂತಿರೆ ಸೂಸೆ[೪] ಸೂಜಿ[೫]ಗಳನಾ ಪೊಂಜೂ[೬]ಜಿಯೊಂದೊಂದು ಚೂ
ಮೊ[೭]ನೆಗೊಂಡದೊಂ[೮]ದಲರಾ[೯]ಯ್ದು ಕೋದ ತೆಱದಿಂದಿರ್ಪಂತು ಫುಲ್ಲಾಂಬುಜಾ
ನನೆ ಪುಷ್ಪಾಂಜಲಿಗೊಟ್ಟಳಂಗಜ[೧೦]ಸುಧಾ[೧೦]ಸಾರಂ ಪೊದಟ್ಟಿಂದದಿಂ ೧೦೦

ವಿದ್ಯಾವಿಲಾಸವನ್ನು ಕಂಡು ಜಿತಶತ್ರುಮಹಾರಾಜನು "ಈ ವಿದ್ಯೆಯನ್ನು ಇಭ್ಯಕೇತುವೆ ಬಲ್ಲನಲ್ಲದೆ, ಸರ್ವಜ್ಞನೆಂಬವನಿಗೊಂದು ತಿಳಿಯದು" ಎಂದುಕೊಂಡು ವಾದ್ಯವಾದನಗಳಿಂದಲೂ ಗಾಯಿಕಾಜನರ ಸಮೂಹದಿಂದಲೂ ವೇಣುವಾದಕರ ಮಂಡಳಿಯಿಂದಲೂ ನಟರ ಗುಂಪಿನಿಂದಲೂ ಭಾರತಿಕಸಮೂಹದಿಂದಲೂ ವಾಗ್ಗೇಯಕಾರರಿಂದಲೂ ಶೋಭಿಸುತ್ತಿರುವ ಪ್ರಗೀತಗಳಿಂದ ತುಂಬಿದ ತಾಳಧರರಿಂದ ಅನ್ವಿತವಾದ ರತ್ನಮಯವಾದ ನೃತ್ಯಮಂಟಪಕ್ಕೆ ಇಭ್ಯಕೇತುಕುಮಾರನನ್ನು ಕರೆತಂದನು -

೯೯. ಮುತ್ತಿನ ಏಕಸರ, ಮುಡಿದುಕೊಂಡ ಜಾಜಿಹೂವಿನ ಮಾಲೆ, ತುಸುವೆ ಕೊಂಕಿದ ಕಸ್ತೂರಿಯ ಅಡ್ಡಬೊಟ್ಟು, ಲೇಪಿಸಿಕೊಂಡ ಚಂದನ, ಸುತ್ತಿದ ಸಂಪಗೆಯ ಮಾಲೆ, ಪ್ರಜ್ವಲಿಸುವ ವಜ್ರದ ಕೈಗಡಗ - ಈ ಪ್ರಸಾಧನವು ಕಣ್ಣುಗಳನ್ನು ಸೆಳೆಯಿತು.

ವ|| ಹೀಗೆ ಕಾಮದೇವನಂತೆ ಬಂದ ಸೌಭಾಗ್ಯವಂತನನ್ನು ಚಿನ್ನದ ಸಿಂಹಾಸನದಲ್ಲಿ ಕುಳ್ಳಿರಿಸಿ ನೃತ್ಯಾರಂಭಕ್ಕೆ ಸೂಚನೆ ಕೊಡಲಾಗಿ -

೧೦೦. ಆ ಸ್ತ್ರೀಯ ಪಾದಕಮಲಗಳ ಸಂಗಸುಖದಿಂದ ರಂಗಸ್ಥಳಕ್ಕೆ ರೋಮಾಂಚವಾಯಿತೊ ಏನೊ ಎಂಬಂತೆ ಸೂಜಿಗಳನ್ನು ನೆಲದಲ್ಲಿ ನಡುವ ಹಾಗೆ ಸೂಸಿ, ಆ ಹೊನ್ನ ಸೂಜಿಗಳಲ್ಲಿ ಒಂದೊಂದೂ ಒಂದು ಹೂವನ್ನು ಚುಚ್ಚಿಕೊಳ್ಳುವಂತೆ ಆ ಕಮಲಮುಖಿಯು ಮನ್ಮಥಾಮೃತ ಸಾರವನ್ನೆ ಸುರಿಯುವ ರೀತಿಯಲ್ಲಿ ಪುಷ್ಪಾಂಜಲಿಯನ್ನು ಸೂಸಿದಳು.

---

೧ + ಜ್ಞ(ಕಾ). ೨ ಗ್ಮೇ (ಕ, ಮ, ಪ), ೩ ಹೂ (ಕ). ೪ ಸಿ (ಕಾ). ೫ ಚಿ (ಕಾ). ೬ ಪೂ (ಕಾ). ೭ ಮೊರ್ (ಕಾ). ೮ ಡಿಂ (ಕಾ). ೯ ಯ್ತಾ ಕೊಂಡ (ಮ), ಯ್ದು ಕೋದ (ಕಾ). ೧೦ ಸರಾ (ಕಾ).

ಬಾಡಿದಲಱಿಪೆ ನೆಱ[೧] ನಂ
ಜೂಡಿದ ಸೂಜಿಗಳನುೞಿ[೨]ಪಿ[೨] ತುಂಬಿವೊಲವಳೇ[೩]
ನಾಡಿದಳೊ ಸೂಜಿಗಳ ಕೂ
ರ್ಪೊೞಡದ ಮೊನೆಯಲರ ಮೇಲೆ ನಾನಾವಿಧದಿಂ ೧೦೧

ಪರೆದ ತಿಳಕಮನೆ ಕಂಡೆಸೆ
ದಿರೆ ಕೊಟ್ಟುದ್ದಂಡ ಪಾದದುಗುರ್ಗನ್ನಡಿಯೊಳ್
ತರಳಾಕ್ಷಿ ತಿರ್ದಿದಳ್ ಚೆ
ಚ್ಚರದಿಂ ಮತ್ತೊಂದು ಪಾದದುಂಗುಟದಿಂದಂ ೧೦೨

ವ॥ ಅಂತು ಸಮ ವಿಷಮಮೆಂಬೆರಡುಂ ತೆಱದ ನೃತ್ಯಮತ್ಯಂತ ಮನೋಹರಮುಂ ಕೌತುಕಕರಮಾಗೆ ಮಗಧ ಸೌಂ[೪]ದರಿ ಪಿರಿದುಬೇಗಮಾಡುತ್ತುಮಿರೆ ಮೆಯ್ಮೞೆದು ನೋಡುತ್ತಮಿರ್ದರ್[೫] ನಯನಹಂಸಂಗಳ್ಗೆ ಪಯೋವ[೬]ರ್ಷವಾದ ಪಯುಂಗಳುಮಂ ಬೆಡಂ[೭]ಗಿಪ್ಪ ಪೊಳೆಯು[೮]ಕ್ಕಮಾ[೮]ಚಾಳಯಮಾದ ಚಾಳಿಯಂಗಳುಮಂ ಚತುಃಷಷ್ಟಿ ಕರ್ಮಂಗಳಾಲಂಬ ಹಸ್ತಮಾದ ಹಸ್ತಂಗಳುಮಂ ಭಾವರಸಾಕೃಷ್ಟಿಗಳಾದ ದೃಷ್ಟಿಗಳುಮಂ ಸರಸ್ವತಿಳಂಕರಣಂಗಳಾದ ಕರಣಂಗಳುಮಂ ಶೃಂಗಾರಶ್ರೀಗೆ ಹಾರಮಾದಂಗಹಾರಂಗಳುಮಂ ನರ್ತನಕ್ಕೆ ಚಾರುತ್ವಂಬಡೆದ ಚಾರಿಗಳುಮಂ ನೃತ್ಯವಿದ್ಯಾದೇವತೆಗೆಮುಂಡನಮಾದ ಮಂಡಳಂ[೯]ಗಳುಮಂ ಸುಲೇಖೆಗೆ ನೆಲೆಯಾದ ನಿಲವುಗಳುಮ ನವರವಱ ಬಲದೆಡೆಗಳೊಳೆ ಪೊಸಯಿಸಿ ಪೆಸರಿಟ್ಟು ತಾಳದೊಳ್ ತೂಗದಿಂತೆ ವಾದ್ಯದೊ[೧೦]ಳೆ[೧೦]ದಂತೆ ನಿರುತಮಾದ ನೃತ್ಯಂ ನೃತ್ಯಶಾಸ್ತ್ರಮನಭಿನಯಿಸುವಂತಾದುದೀ ಕಪೋತ [೧೧]ಖಗ[೧೧]ವಿಕೀರ್ಣ

೧೦೧. ನಂಜಿನ ಸೂಜಿಗಳನ್ನು ಬಾಡಿದ ಹೂಗಳು ತಿಳಿಸುತ್ತಿರಲಾಗಿ, ಸೂಜಿ ತಾಗ ಹೂಗಳ ಮೇಲೆ ಅವಳು ದುಂಬಿಯಂತೆ ನಾನಾವಿಧವಾಗಿ ಚತುರತೆಯಿಂದ ನರ್ತಿಸಿದಳು.

೧೦೨. ತನ್ನ ತಿಲಕ ಹರಡಿರುವುದನ್ನು ತನ್ನ ಎತ್ತಿದ ಪಾದುದುಗರಲ್ಲಿ ನೋಡಿ ಕೊಂಡು ತ್ವರಿತವಾಗಿ ಮತ್ತೊಂದು ಪಾದದ ಉಂಗುಟದಿಂದ ಅದನ್ನು ಆಕೆ ತಿದ್ದಿಕೊಂಡಳು.

ವ॥ ಹೀಗೆ ಸಮ ಹಾಗೂ ವಿಷಮವೆಂಬ ಎರಡು ಬಗೆಯ ನೃತ್ಯವು ಅತ್ಯಂತ ಮನೋಹರವೂ ಆಶ್ಚರ್ಯಜನಕವೂ ಆಗುವಂತೆ ಮಗಧಸೌಂದರಿಯು ತುಂಬ ಹೊತ್ತಿನವರೆಗೆ ನರ್ತಿಸುತ್ತಿರಲು ಮೈಮರೆತು ನೋಡುತ್ತಿರುವ ಕಣ್ಣುಗಳೆಂಬ ಹಂಸಗಳಿಗೆ ಹಾಲಿನಮಳೆ ಕರೆದಂತಿರುವ ಪಯಂಗಳನ್ನೂ ಬೆಡಗಿನ ಚಾಳಿಯಗಳನ್ನೂ, ಅರುವತ್ತು ನಾಲ್ಕು ಕರ್ಮಗಳಿಗೆ ಆಧಾರವಾದ ಹಸ್ತಗಳನ್ನೂ ಭಾವರಸಪೂರ್ಣವಾದ ದೃಷ್ಟಿಗಳನ್ನೂ ಸರಸ್ವತಿಗೆ ಅಲಂಕಾರವೆನಿಸುವ ಕರಣಗಳನ್ನೂ ಶೃಂಗಾರಲಕ್ಷ್ಮಿಗೆ ಹಾರವೆನಿಸುವ ಅಂಗಹಾರ ಗಳನ್ನೂ ನರ್ತನಕ್ಕೆ ಸೊಬಗನ್ನು ನೀಡುರ ಚಾರಿಗಳನ್ನೂ ನೃತ್ಯ ವಿದ್ಯಾದೇವತೆಗೆ ಅಲಂಕಾರ ವೆನಿಸುವ ಮಂಡಲಗಳನ್ನೂ ಸೌಂದರ್ಯಕ್ಕೆ ನೆಲೆಯಾದ ನಿಲವುಗಳನ್ನೂ ಅವುಗಳ ಬಲದಿಂದ ಎಡಯೆಡೆಯಲ್ಲಿ ಹೊಸತಾಗಿಸಿ ಹೆಸರಿಟ್ಟು ತಾಳದಲ್ಲಿ ತೂಗಿದಂತೆ, ವಾದ್ಯದಲ್ಲಿ

೧ ಳು (ಮ), ರು (ಕ, ಪ). ೨ ಕುಂಭಿಯೊ (ಕ, ಪ). ೩ ಗೇ (ಕ), ನೇ (ಪ). ೪ ಸುಂ (ಕಾ). ೫ ದುರ್ (ಕ, ಮ). ೬ ಹ (ಕ). ೭ ಳಂ (ಕಾ), ಡ (ಕ). ೮ ಕ್ಕ ಮಾ (ಮ), ಕ್ಕೆ (ಕಾ). ರ್ಕಮಾ (ಪ). ೯ ನಂ (ಕ. ಪ). ೧೦ ಳೆಳ (ಕಾ), ಲಳ (ಕ) ೧೧ ಕರ (ಕಾ).

ಕನಕಸೂಚಿಸಂಚಯಸ್ಥಾಪನ ಕೌತುಕಕ್ರಿಯಾಕೌಶಲಮುಮೀ ಪುಷ್ಪಾಂಜಲೀ ಕ್ಷೇಪಣನೈಪುಣ್ಯಮುಮೀ ವಿಷಮ ವಿದ್ಯಾಸಾಧನಮುಂ ಸರಸ್ವತಿಗಂ ಸಾರದೆಂದು ಕುಮಾರಂ ಮೆಚ್ಚಿ ಮೆಚ್ಚಿಂಗೆ ಮೆಚ್ಚುಗುಡುವಂತೆ ಮಹೀನಾಥನಾ ಕುಮಾರಿಯುಮಂ ಕುಡೆ ಮಹಾವಿಭೂತಿಯಿಂ ಮದುವೆ[೧]ನಿಂದು[೧]

ಅನುರಾಗಾಂತಂ ವಸಂತ[೨]ಪ್ರಿಯನ ವಿರಹದೊಳ್ ಗ್ರೀಷ್ಮತಾಪಜ್ವರಂ ಮೇ
ದಿನಿಗಾದಂ ಪುಟ್ಟೆ ಮೇಲೇಂ ತಳಿದುದೊ ಮಱಿ[೩]ಯಂ ಪ್ರಾ [ವೃ[೪]] ಷಂ ಚಂದ್ರಿಕಾಚಂ
ದನಮಂ ಸೂಸುತ್ತುಮೆತ್ತಂ ಶರದಮಿರದೆ ತಂದತ್ತು ತೆಂಗಾಳಿಯಂ ಹೈ
ಮಳನಮಂಳ ಹೇಮಂತಮೆತ್ತಂ ಸುರಿದುದು ಶಿಶಿರಶ್ರೀ ತುಷಾರಂಗ[೫]ಳಿರ್ಪಂ[೫] ೧೦೩

ವ|| ಅಂತು ಬಂದಾಱುಂ ಋತುಗಳೊಳಾದುಭಾ[೬]ವೋಚಿತ ಕ್ರೀಡಾ ರಸಂಗಳ[೭]ನಾಱುಂ ರಸಂಗಳಂ[೮] ಸವಿವಂತೆ ಸವಿದು ಸಕಳಕಳಾಸೌಕರ್ಯಕ್ಕಂ ಸೌಭಾಗ್ಯಕ್ಕಮೇಕಪತಿಯಾಗಿ

ಅನುಪಮ ರಾಜ[೯]ನಂದನೆಯರಾ ಕಮಳಪ್ರಭೆಗಂ ವಿಲಿಪ್ತ ಚಂ
ದನ ಧವಳಾಂಗಿಗಾ ಮಗಧ ಸೌಂದರಿಗಂ ಪತಿಯಾದನಾ ವಣಿಗ್
ಜನ[೧೦]ದಧಿನಾಥನೊಂದೆ ಕೊ[೧೧]ಳನ[೧೧]ಲ್ಲಿಯೆ ಪುಟ್ಟಿ ಪೊಗಟ್ತಿವೆತ್ತ ಪ
ದ್ಮಿನಿಗಮನಾರತಂ ಸಿತಸರೋಜಿನಿಗಂ ದಿನನಾಥನಾದವೋಲ್ ೧೦೪

ಅಳಿದಂತೆ ಆಕೆಯ ನೃತ್ಯವು ನೃತ್ಯಶಾಸ್ತ್ರವನ್ನೇ ಅಭಿನಯಸಿ ತೋರಿಸಿದಂತಾಯಿತು. 'ಕಪೋತ' ಹಸ್ತದಿಂದ ಕನಕಸೂಚಿಗಳನ್ನು ಸ್ಥಾಪಿಸುವ ಆಶ್ಚರ್ಯಕರವಾದ ಕ್ರಿಯಾಕೌಶಲವೂ ಈ ಪುಷ್ಪಾಂಜಲಿ ಸೂಸುವ ನೈಪುಣ್ಯವೂ ಈ ಅಸಮಾನ್ಯ ವಿದ್ಯಾಸಾಧನೆಯೂ ಸರಸ್ವತಿಗೆ ಕೂಡ ಸಾಧ್ಯವಲ್ಲವೆಂದು ಇಭ್ಯಕೇತುಕುಮಾರನು ಮೆಚ್ಚಿದನು. ಆತನ ಮೆಚ್ಚಿಗೆ ಪ್ರತಿಯಾಗೆ ಮೆಚ್ಚುಗೊಡುವಂತೆ ರಾಜನು ಆ ಕುಮಾರಿಯನ್ನು ಕೊಡಲಾಗಿ ಮಹಾವೈಭವದಿಂದ ಇಭ್ಯಕೇತು ಮದುವೆಯಾದನು.

೧೦೩. ಅನುರಾಗ ಮುಗಿದ ವಸಂತನು ಅಗಲಿ ಹೋದನು; ಭೂಮಿಗೆ ಆ ವಿರಹತಾಪದಲ್ಲಿ ಬೇಸಗೆಯ ತಾಪಜ್ವರವೇರಿತು; ತಾಪವಾರಿಸಲು ನೀರು ತಳಿದಂತೆ ಮಳೆಗಾಲ ಮಳೆಯನ್ನು ಸುರಿಯಿತು; ಬೆಳ್ದಿಂಗಳ ಚಂದನವನ್ನು ಎತ್ತೆತ್ತಲೂ ಸೂಸುತ್ತ ಶರತ್ಕಾಲವು ತಂಗಾಳಿಯನ್ನು ತಂದಿತು; ಹೇಮಂತ ಋತು ತಂಪನ್ನೆರೆಯಿತು. ಶಿಶಿರ ಬಂದು ಮಂಜಿನ ತುಷಾರವನ್ನು ಸಿಂಪಿಸಿತು.

ವ|| ಹೀಗೆ ಬಂದ ಆರೂ ಋತುಗಳಲ್ಲಿ ಆಯಾ ಕಾಲಕ್ಕೆ ತಕ್ಕ ಕ್ರೀಡೆಗಳಿಂದ ಷಡ್ರಸಗಳನ್ನು ಸೇವಿಸುವಂತೆ ಸುಖವನ್ನು ಸವಿದು ಸಮಸ್ತ ಕಲಾಸೌಕರ್ಯಕ್ಕೂ ಸೌಭಾಗ್ಯಕ್ಕೂ ಏಕಾಧಿಪತಿಯಾಗಿ -

೧೦೪. ಒಂದೇ ಸರೋವರದಲ್ಲಿ ಹುಟ್ಟಿ ಶೋಭಿಸುವ ಕೆಂದಾವರೆ ಹಾಗೂ ಬೆಳ್ದಾವರೆಗಳೆರಡಕ್ಕೂ ಸೂರ್ಯನೊಬ್ಬನೆ ವಲ್ಲಭನಾದಂತೆ, ಅಪ್ರತಿಮ ರಾಜಪುತ್ರಿಯರಾದ

---

೧ ನಿಲೆ (ಕಾ). ೨ ತಂ (ಕಾ). ೩ ವಿ (ಕ, ಮ, ಕಾ). ೪ ವನಂ (ಕಾ). ೫ ಳೀರ್ಷಂ (ಕ). ೬ ಭ (ಕ, ಮ, ಪ.) ೭ ಳಿ (ಕಾ) ೮ ಳಿಂ (ಕಾ). ೯ ಜ್ಯ (ಕ, ಮ, ಪ) ೧೧ ಗ (ಕಾ, ಮ). ೧೧ ರಳ (ಕ, ಪ), ಳದ (ಮ).

ಅಸಿಯಳ ವಿದ್ಯೆ ಕೂರಿಸಿದುದಿಲ್ಲ ನೃಪಾಗ್ರತನೂಜೆಯಿಂದೆ ಕೂ
ರಿಸಿದುದಧೀಶನಂ ಸೊಬಗು ಕೂರಿಸುವಂತಿರೆ ಪೆಣ್ಣ ವಿದ್ಯೆ ಕೂ
ರಿಸುಗುಮೆ ತುಂಬಿ ಮಲ್ಲಿಗೆಗೆ ಕೂರ್ಪರೊಲೊಪ್ಪೆ ವಿಚಿತ್ರ ಬಂಧದಿಂ
ದೆಸೆದಿರೆ ಕಟ್ಟಿ ತಂದು ಸೊವಡಿಲ್ಲದ ಮಾಲೆಗೆ ಕೂರ[೧]ಲಾರ್ಕುಮೇ ೧೦೫

ವ|| ಅಂತು ಮಗಧ ಸೌಂದರಿ ವಿವಾಹ ವಿಹಿತ[೨]ಮಾನಾಧೀನ[೨] ಮಾನಸೆಯಾದ ಕಮಲಪ್ರಭೆಯ ಕನಲ್ದ ಮುದ್ದುಮೊಗಮಂ ನೋಡಿ

ಹೃದಯಾಧೀಶಂ ಕುರುಳ್ಗವ್ವಳಿಸೆ ನುಡಿಸೆ ಮೇಲ್ವಾಯೆ ಲಲ್ಲೈಸೆ ಮೆಲ್ಪಿಂ
ಮೊದಲೊಳ್ ಸರ್ವಾಕ್ಷಿಪಾತಂ ಬಟಿಕದು ನಯನಾರ್ಧಾವಲೋಕಂ ಬಟಿಕ್ಕೊಂ
ದ[೩]ದಯಂ ನೇತ್ರತ್ರಿಭಾಗಂ ಬಟಿಕಿಟಿದುದಪಾಂಗೇಕ್ಷಣಂ ತಾಂ ಬಟಿಕ್ಕಾ
ವುದುಮಿಲ್ಲಾಯ್ತಗ್ಗಳಂ ಕಾಮದಮಿನಿಯಳ ಸನ್ಮಾನದಿಂ ಮಾನಮಲ್ತೇ ೧೦೬

ವ|| ಎಂ[೪]ಬಿನಂ[೪] ಕಮಳಪ್ರಭೆಗಂ ತನಗಂ ಹುರುಡಿಂದಮೆ ಪರಸ್ಪರಾನುರಾಗಮಳವಿಗಟಿಯೆ

ಪುಳಕಂ ಪಕ್ಕೆಗೆ ಸಾರದಂತು ಬೆಮರೆಂದುಂ ಕುಂದದಂತರ್ಧ್ವ ಕು
ಟ್ಮಳಿತಂಗಳ್ನಯನಂಗಳುಳ್ಳಲರಂತೊಂದೊದಱ[೫]ಳ್ ಪತ್ತಿ ಮೆ
ಯ್ಗಳಲಂಪಂ[೫] ಬಿಡದಂತು ಸ್ವೈ[೬]ಸಮಯ[೬]ದಂತಾ[೭]ನಂದ ವಾರಾಶಿಯೊಳ್
ಮುಟುಗಿರ್ದಳ್ಪೆರ್ದೆ ಮೂಡದಂತು ಕೊವರಂ ಕೂಡಿರ್ದನಬ್ಜಾಕ್ಷಿಯೊಳ್ ೧೦೭

ಆ ಕಮಳ ಪ್ರಭೆ ಮತ್ತು ಧವಳವರ್ಣದ ಮಗಧಸೌಂದರಿಯೆಂಬ ಇಬ್ಬರಿಗೂ ಆ ವೈಶ್ಯ ಶ್ರೇಷ್ಠನು ಪತಿಯಾದನು.

೧೦೫. ಹಿರಿಯ ರಾಜಕನ್ಯೆಯ ಸೊಬಗಿಗೆ ಮನಸೋತಂತೆ ಕಿರಿಯಳ ವಿದ್ಯೆಗೆ ಅವನ ಮನಸ್ಸು ಸೋಲದಾಯಿತು. ಸೊಬಗು ಪ್ರಿಯವಾಗುವಂತೆ ಹೆಣ್ಣಿನ ವಿದ್ಯೆ ಪ್ರಿಯವಾಗುವುದೆ? ದುಂಬಿ ಮಲ್ಲಿಗೆಯನ್ನು ಪ್ರೀತಿಸುವುದಲ್ಲದೆ, ಚೆಂದ ಚೆಂದವಾಗಿ ಕಟ್ಟಿಂದ ನಿರ್ಗಂಧಮಾಲೆಯನ್ನು ಪ್ರೀತಿಸಬಲ್ಲುದೆ?

ವ|| ಹೀಗೆ ಮಗಧಸೌಂದರಿಯ ವಿವಾಹದಿಂದ ಮನಸ್ಸು ಕುಗ್ಗಿ, ಕೋಪಗೊಂಡ ಕಮಳಪ್ರಭೆಯ ಮುದ್ದುಮುಖವನ್ನು ನೋಡಿ -

೧೦೬. ಆಕೆಯ ಹೃದಯೇಶ್ವರನು ತಲೆಗೂದಲನ್ನು ಹಿಡಿದು, ನುಡಿಸಿ, ಮೇಲೆ ಬಿದ್ದು, ಲಲ್ಲೆಯಾಡಲಾಗಿ ಮಧುರವಾಗಿ ಅವಳ ಕಣ್ಣು ಮೊದಲು ಅಗಲವಾಗಿ ತೆರೆದು ನೋಡಿದುವು; ಆಮಲೆ ಅರೆಗಣ್ಣ ನೋಟವಾಯಿತು; ಅನಂತರ ಓರೆ ನೋಟವಾಯಿತು; ಆ ನೋಟವೂ ಇಳಿದು ಆಮೇಲೆ ಮತ್ತೇನೂ ಇಲ್ಲವಾಯಿತು. ಪ್ರಿಯತಮೆಯ ಇಂತಹ ಪ್ರಣಯಪೂರ್ಣ ಸನ್ಮಾನವೆ ಮಾನವಲ್ಲವೆ?

ವ|| ಹೀಗೆ ಕಮಳಪ್ರಭೆಗೂ ತನಗೂ ಸ್ಪರ್ಧೆಯಿಂದ ಪರಸ್ಪರ ಅನುರಾಗ - ಆಸಕ್ತಿಗಳು ಮೇರೆವರಿಯಲಾಗಿ -

೧೦೭. ರೋಮಾಂಚದುಬ್ಬರ ಶಿಥಿಲವಾಗದಂತೆ, ಬೆವರೆಂದೂ ಆರದಂತೆ,

---

೧ ಡ (ಕ, ಮ). ೨ ಮನಾದೀನ (ಕ, ಪ). ೩ ದು (ಕ. ಪ). ೪ ಬುದುಂ (ಮ). ೫ ಪಿಂ (ಕ, ಮ). ೬ ಸುಯಿ (ಮ). ೭ ದತ್ತಾ (ಕ, ಮ, ಪ).

ವ॥ [1]ಇತ್ತ[1] ಮಗಧ ಸೌಂದರಿ ತನ್ನ ಪಾಳೆಯದೊಳಂ ವಾಸವ[2]ಸಜ್ಜಿಕೆ[3]ಯಾಗಿ

ಪತಿ ಚಿತ್ತಾನರ್ದ ನಿದ್ರಾವಿರಹಿತೆಯಿರುಳಿಂತಪ್ಪುದುಂ ಸುಪ್ತಪಾರಾ
ವ[4]ತಮಂ ಬಂದೆತ್ತುವಳ್ ಹಂಸೆಗಳೆರಡೆಮೆಯೊಂದಾಗಲೀಯಳ್ ನವಿಲ್ಪಾ
ಣತಿಯಂ ಕಣ್ಮುಚ್ಚಲೀಯಳ್ ಗಟಿಪುವ ಗಿಳಿಯಂ ತೂಂಕಡಂ ಕಾಣಲೀಯಳ್ಕತೆಯಂ
ಪೇಟಿಂದವಳ್ ಸಾರಿಕೆಯುಮನನಿ[5]ವಂಗೆಯ್ದು ಕಣ್ಗೆ[6]ಯ್ಯಲೀಯಳ್ ೧೦೮

ಅರಗಿಳಿಯಂ ಮೃಗಾಕ್ಷಿ ಪಿಡಿದೋದಿ[7]ಸಲ್[8]ಣ್ಮಳೆ[8] ಸುಯ್ಲ ಬೆಂಕೆಯಿಂ
ಕರಿಮುರಿಯಕ್ಕುಮೆಂದು ತೆಗೆದಪ್ಪಲುಮಣ್ಮಳೆ[10] ಮೆಯ್ಯ ತಾಪದಿಂ
ಕುರವಕಮೆಯ್ದೆ ಸೀದಪುದಿದೆಂದು ಕರಂ ತಿಳಕಾವನೀಜಮಂ
ಕೊರಗುಗುಮೆಂದು ನೋಡಲಣಮಣ್ಮಳೆ[11]ತಪ್ತ ವಿಳೋಚನಾರ್ಚಿಯಿಂ ೧೦೯

ಪರಪಿ ನಱುಸುಯ್ಯ ಕಂಪಂ
ಸುರತ ಸುಖಾಸ್ವಾದ ಸುಭಗ ಚಿಂತಾಭರದಿಂ
ಬಿ[9]ರಿದು ವಿರಹಾರ್ತೆ ಬೇಟದ
ಬಿರಿಮುಗುಳವೊಲಿರ್ಪಳಳಿಕುಳಾಳಕಿ [12]ಬನದೊಳ್[12] ೧೧೦

ಬಿರಿಮೊಗ್ಗಿನಂತೆ ಅರೆಯರಳಿದ ಕಣ್ಣುಗಳು ಪೂರ್ತಿ ತೆರೆಯಲಾಗದಂತೆ, ಒಂದಕ್ಕೊಂದು ಅಂಟಿಕೊಂಡ ಮೈಗಳು ಅಪ್ಪುಗೆಯ ಸುಖದಿಂದ ಅಗಲದಂತೆ, ಆನಂದ ಸಾಗರದಲ್ಲಿ ಮುಳುಗಿ, ಮನಸ್ಸು ಚಂಚಲವಾಗದಂತೆ ಕುಮಾರನು ಆ ಚೆಲುವೆಯನ್ನು ಕೂಡಿದ್ದನು.

ವ॥ ಇತ್ತ ಮಗಧಸೌಂದರಿಯು ತನ್ನ ನಿಲಯದಲ್ಲಿ ವಾಸವಸಜ್ಜಿಕೆಯಾಗಿ -

೧೦೮. ಪತಿಚಿಂತೆಯಿಂದ ನಿದ್ದೆಯಿಲ್ಲದವಳಾಗಿ ರಾತ್ರಿಯಲ್ಲಿ ನಿದ್ರಿಸುವ ಪಾರಿವಾಳವನ್ನು ಹಿಡಿದೆತ್ತುವಳು; ಹಂಸೆಗಳಿಗೆ ಕಣ್ಮುಚ್ಚಗೊಡಳು; ಬಾಣಂತಿ ನವಿಲನ್ನು ನಿದ್ರಿಸಲೀಯಳು; ಮಾತಾಡುವ ಗಿಳಿಗೆ ತೂಕಡಿಸಲೂ ಅವಕಾಶವೀಯಳು; ಕತೆಯನ್ನು ಹೇಳೆಂದು ಅಲ್ಪರಿಯುತ್ತ ಸಾರಿಕೆಯನ್ನೂ ನಿದ್ದೆಮಾಡಗೊಡಳು.

೧೦೯. ತನ್ನ ಉಸಿರಿನ ಬೆಂಕಿಯಿಂದ ಸುಟ್ಟು ಕರಿಕಾದೀತೆಂದು ಹೆದರಿ ಆ ಚೆಲುವೆ ಅರಗಿಳಿಯನ್ನು ಹಿಡಿದು ನುಡಿಸಲಾರಳು; ತನ್ನ ದೇಹ ತಾಪದಿಂದ ಸೀದು ಹೋದೀತೆಂದು ಕುರವಕವನ್ನು ಅಪ್ಪಿ ಹಿಡಿಯಲಾರಳು; ತನ್ನ ಕಣ್ಣಿನ ತಾಪದಿಂದ ಎಲ್ಲಿ ಕೊರಗಿ ಹೋದೀತೋ ಎಂದು ತಿಲಕವೃಕ್ಷದ ಮೇಲೆ ಕಣ್ಣು ಹಾಯಿಸಲೂ ಅವಳಿಗೆ ಸಾಧ್ಯವಾಗದು.

೧೧೦. ತನ್ನ ಉಸಿರಿನ ಸುಗಂಧವನ್ನೂ ಹರಡುತ್ತ ಕೂಟದ ಸವಿಯ ಚಿಂತೆಯಿಂದು ಬಿರಿದು ಆ ವಿರಹಿಣಿ ಬೇಟದ ಬಿರಿಮುಗುಳಿನಂತೆ ಇರುವಳು.

---

೧ ಇಂತು (ಕ, ಪ.) ೨ ಕ (ಮ). ೩ ಕೆ (ಪ). ೪ ಪ (ಕಾ, ಮ). ೫ ವಿ (ಕ, ಮ, ಪ). ೬ ಣ್ಗೇ (ಕ). ೭ ಡಿ (ಕ). ೮ ಮ್ಮಳೆ (ಕ), ನ್ನಳು (ಕಾ). ೯ (ಉ) (ಕಾ). ೧೦ ಳು (ಕ, ಮ, ಕಾ). ೧೧ ಪಿ (ಪ). ೧೨ ಯದಬಿಕೊಳ್ (ಕ, ಪ).

ತಡೆದು ಬರೆ ನಲ್ಲನೀಕ್ಷಿಪ
ಮಡದಿಯ ಕಟ್ಟ[೧]ಲಿಪ ಮೊಗಮುಮರುಣೇಕ್ಷಣಮುಂ
ತೊಡೆದಂಜನ[೨]ಮುಮ್ಮ[೨]ೞಿದಳ
ವಡೆ ನೀರ್ಗುಂಕುಮಮನೆಚ್ಚಿಕೊಂಡವೊಲೆಸೆಗುಂ ೧೧೧

ವ॥ ಆ ಮಗಧ ಸೌಂದರಿಯ[೩] ವಿದ್ಯೆಯ ದೌರ್ಭಾಗ್ಯಮೆ ನಿರ್ವೇಗ ನಿಮಿತ್ತಮಾಗೆ

ಮನಮಂ ವಿರಕ್ತಿಗೆತ್ತೊ
ಳ್ವಿನ ರಾಜ್ಯಮನಿಭ್ಯಕೇತು [೪]ಕುವರಂಗಿತ್ತಂ[೪]
ತನುವಂ ತಪಕ್ಕೆ ಜಿತಶ
ತ್ರುನೃಪಂ ನಿಯಮಸ್ಥ ಯತಿಯ ಪಾದಾಂತಿಕದೊಳ್ ೧೧೨

ಸ್ವಾಗತ ॥ ಅವನಿ ಕೀರ್ತಿಸೆ ತಾಳ್ದಿದನಿಭ್ಯಕೇ
ತುವಿನ ತಂದೆಯುಮೊಳ್ತಪಮಂ ಮನೋ
ಭವನಂಡಲೆದಿಕ್ಕಿದ ಮಂದರ
ಸ್ಥವಿರರೆಂಬ ಮುನೀಂದ್ರರ ಪಕ್ಕದೊಳ್ ೧೧೩

ಇನಬಿಂಬಂ ಕೋಂಟೆಯ ಕ
ಟ್ಟಿನ ಕೊತ್ತಳಂದಂಬುಗಂಡಿಯೊಳ್ನುಸುಳುತ್ತೋ
ಯ್ಯನೆ ಸಿಲ್ಕಿ[೫] ನಿಲ್ವುದಾ ಪುರ
ವನಿತೆಯ [೬]ನವ[೬]ಕರ್ಣಪೂರ ಕಮಳದ ತೆಱದಿಂ ೧೧೪

೧೧೧. ತನ್ನ ಪ್ರಿಯತಮನು ತಡವಾಗಿ ಬಂದಾಗ ಮೈಮರೆವಿನಿಂದ ಮುಖಕ್ಕೆ ಕಾಡಿಗೆಯನ್ನೂ ಕಣ್ಣಿಗೆ ನೀರುಕುಂಕುಮವನ್ನೂ ಲೇಪಿಸಿಕೊಂಡಳೊ ಏನೊ ಎಂಬಂತೆ ಮಡದಿಯ ಕಪ್ಪಿಟ್ಟ ಮುಖವೂ ಕೆಂಪೇರಿದ ಕಣ್ಣುಗಳೂ ಕಂಗೊಳಿಸುವುವು.

ವ॥ ಆ ಮಗಧಸೌಂದರಿಯು ವಿದ್ಯೆಯ ದುರ್ಭಾಗ್ಯವೆ ತನಗೆ ವೈರಾಗ್ಯಕಾರಣವಾಗಿ-

೧೧೨. ಸಂಸಾರ ಬೇಡವೆಂದು ರಾಜ್ಯವನ್ನು ಇಭ್ಯಕೇತುವಿಗೆ ಕೊಟ್ಟು ಜಿತಶತ್ರು ರಾಜನು ನಿಯಮಸ್ಥಯತಿಯ ಸನ್ನಿಧಿಯಲ್ಲಿ ತಪೋವ್ರತವನ್ನು ಕೈಕೊಂಡನು.

೧೧೩. ಇಭ್ಯಕೇತುವಿನ ತಂದೆಯೂ ಜನವೆಲ್ಲ ಹೊಗಳುವಂತೆ ಜಿತಕಾಮರಾದ ಮಂದರಸ್ಥವಿರವೆಂಬ ಮುನೀಂದ್ರರ ಸನ್ನಿಧಿಯಲ್ಲಿ ತಪವನ್ನು ಸ್ವೀಕರಿಸಿದನು.

೧೧೪. ಆ ರಾಜಧಾನಿಯಲ್ಲಿ ಕೊತ್ತಳದ ಅಂಬುಗಂಡಿಯನ್ನು ಹೊಕ್ಕ ಸೂರ್ಯಬಿಂಬವು ಅದರಲ್ಲಿ ಸಿಕ್ಕಿಕೊಂಡು, ಪುರವೆಂಬ ಸುಂದರಿಯ ಕರ್ಣಭೂಷಣವಾದ ಕಮಲದಂತೆ ಅಲ್ಲಿಯೆ ನಿಂತುಬಿಡುವುದು.

---

೧ ಣ್ತ (ಕ, ಮ). ೨ ಮಂವೊ (ಕಾ). ೩ + ಸುಂದರ (ಕ), ಸೌಂದರ (ಮ). ೪ ವಿಂಗಿತ್ತೆತ್ತಂ (ಕಾ), ವಿಂಗಿತ್ತಿತ್ತಂ (ಮ). ೫ ಕ್ಕಿ (ಕ). ೬ ರಾ (ಕ, ಪ).

ಇಂದುವ ಬಿಂಬಂ ಪಟಿಯಿಗೆ
[೧]ಯಿಂದಂ[೧] ಪಿಡಿವಡೆದು ಕಿಱಿದು ಬೇಗಂ ನಗರೀ
ಸೌಂದರಿಯ ಕೆಯ್ಯ ಕೇಳಿಯ
ಕಂದುಕದಂ[೨]ತಿರ್ಪುದೊಪ್ಪೆ ಪತನೋತ್ಪತನಂ ೧೧೫

ಅವಿರಳ ಕೇತಕ ಪರಿಮಳ
ನವಾಪ್ತ ಶೈತ್ಯಂ ಸಮುದ್ಯ[೩] ದಳಿನೀಳ[೪]ಗಳಂ[೪]
ಪವನ ಪವನಾಶ[೫]ಸೀಂಟು[೫]ವು
ದು ವಿಯೋಗಿ ಪ್ರಾಣಪವನನಂ ಪುರವರದೊಳ್ ೧೧೬

ವ|| ಎಂಬ ಪೊಗೞ್ತೆಗೆ ಜನ್ಮಗೃಹಮುಂ ಲಕ್ಷ್ಮಿಗೆ ಕುಲಗೃಹಮುಂ ಕಳಾಧಿದೇವತೆಗೆ ಕೇಳೀಗೃಹಮುಮಪ್ಪ ರಾಜಗೃಹಕ್ಕಧಿರಾಜನಾಗಿ

ಕರಸಾರಾಸ್ವಾದನಂ[೬] ಚುಂಬನಮ[೭] ದದು[೭]ಸುಹೃತ್ಸಂಗಮಾಲಿಂಗ[೮]ನಂ ವೀ[೯]
ರ್[೯]ರಸಂ[೧೦] ಸ್ವೇದಾಂಬು ದೃ[೧೧]ಪ್ತಾಹತ[೧೨]ಹ[೧೩]ತಿಸಿತಕಾ[೧೪]ಮಾಂಕು[೧೪]ಶಾಗ್ರಕ್ಷತಂ ಕುಂ
ಜರ ಕುಂಭಾಸ್ಫಾಲನಂ[೧೫] ಪೀವರ ಕುಚಕಲಶಾಸ್ಫಾಲನಂ[೧೬] ಲೀಲೆಗಾಗು
ತ್ತಿರೆ ರಾಜ್ಯಶ್ರೀಯ ಸಂಭೋಗವನೊದವಿಸಿದಂ ರಾಜವಿದ್ಯಾವಿಳಾಸಂ ೧೧೭

ವ|| ಇದು ಮೃದುಪದ ಬಂಧ [೧೭]ಬಂಧುರ[೧೭] ಸರಸ್ವತೀ ಸೌಭಾಗ್ಯಭ್ಯಂಗ ಭಂಗಿನೀ ನಿಧಾನ ದೀಪವರ್ತಿ [೧೮]ಚತುರ್ಭಾಷಾ ಕವಿಚಕ್ರವರ್ತಿ[೧೮] ನೇಮಿಚಂದ್ರಕೃತ ಮುಂ ಶ್ರೀಮತ್ಪ್ರತಾಪ ಚಕ್ರವತಿ ವೀರರಬಲ್ಲಾಳದೇವ ಪ್ರಸಾದಾಸಾದಿತ ಮಹಾ ಪ್ರಧಾನ [೧೯]ಪದವೀ ವಿರಾಜಿತ[೧೯] ಸೆಜ್ಜೆವಳ್ಳ ಪದ್ಮನಾಭಕಾರಿತಮುಮಪ್ಪ ನೇಮಿನಾಥ ಪುರಾಣದೊಳ್ ತೃತೀಯಾಶ್ವಾಸಂ

೧೧೫. ಚಂದ್ರಬಿಂಬವು ಕೋಟೆಯ ಮೇಲಿನ ಧ್ವಜಪಟದಲ್ಲಿ ಸಿಕ್ಕಿಕೊಂಡು ಕೆಳಗೂ ಮೇಲೂ ಅದರೊಡನೆ ಹೊಯ್ದಾಡುತ್ತ ಪುರವೆಂಬ ಸುಂದರಿಯ ಕೈಯಲ್ಲಾಡುವ ಚೆಂಡಿನಂತೆ ಕೆಲ ಹೊತ್ತು ಅಲ್ಲಿಯೆ ಶೋಭಿಸುವುದು.

೧೧೬. ಹೇರಳವಾದ ಕೇದಗೆಯ ಹೊಸಗಂಪಿನಿಂದ ತಂಪಾಗಿ ದುಂಬಿಗಳಿಂದ ಕೂಡಿ ಮೆಲ್ಲಗೆ ಸಾಗುತ್ತ ಕಪ್ಪಾದ ಕಂಠವುಳ್ಳ ಗಾಳಿಯೆಂಬ ಹಾವು ಆ ರಾಜಧಾನಿಯಲ್ಲಿ ವಿರಹಿಗಳ ಪ್ರಾಣವಾಯುವನ್ನು ಹೀರುತ್ತಿರುವುದು.

ವ|| ಎಂಬ ಹೊಗಳಿಕೆಗೆ ನೆಲೆಯಾಗಿ, ಲಕ್ಷ್ಮಿಗೆ ತವರ್ಮನೆಯೂ ಕಲಾಧಿದೇವತೆಗೆ ಕ್ರೀಡಾಗೃಹವೂ ಎನಿಸಿದ ರಾಜಗೃಹಕ್ಕೆ ಅಧಿರಾಜನಾಗಿ -

೧೧೭. ಭೂಮಿಯ ಕಂದಾಯವನ್ನು ಪಡೆದುಕೊಳ್ಳುವುದೆ ಚುಂಬನ, ಶತ್ರುಗಳನ್ನು ಎದುರಿಸುವುದೆ ಆಲಿಂಗನ, ವೀರರಸವೆ ಬೆವರು, ಸೊಕ್ಕಿಗೆದ್ದವರನ್ನು ಸೀಳುವುದೆ ದಂತಕ್ಷತ, ಆನೆಯ ಕುಂಭಗಳನ್ನು ಚಪ್ಪರಿಸುವುದೆ ತೋರ ಮೊಲೆಗಳ ತಾಡನವಾಗಲಾಗಿ, ಆ ರಾಜ ವಿದ್ಯಾವಿಲಾಸನಿಯು ರಾಜ್ಯಲಕ್ಷ್ಮಿಗೆ ಹೀಗೆ ಸಂಭೋಗಸುಖವನ್ನು ಒದಗಿಸಿದನು.

ಮುಗಿಯಿತು.

---

೧ ಎಂದುಂ (ಕಾ). ೨ ದಿಂ (ಕಾ). ೩ ಮು (ಕ). ೪ ಗುಣಂ (ಕಾ). ೫ ನಿಂದು (ಕ, ಮ, ಪ) ೬ ನರ್ (ಕ), ನಲ್ (ಮ). ೭ ಘುಪ (ಕ). ೮ ನಲಲಿ (ಮ). ೯ ತ (ಮ). ೧೦ ಸ (ಕ), ಸಲ್ (ಮ). ೧೧ ದೀ (ಮ). ೧೨ ರ (ಕಾ). ೧೩ ಹಿ (ಮ). ೧೪ ಮಾದ (ಕಾ). ೧೫ ನಲ್ (ಮ). ೧೬ ನಲ್ (ಮ) ೧೭ X (ಕಾ). ೧೮ X (ಕಾ). ೧೯ X (ಕ).

ಚತುರ್ಥಾಶ್ವಾಸಂ

ಶ್ರೀಪತಿಯುಂ ಸಯ್ಪಿಂ ಪೃ
ಥ್ವೀಪತಿಯುಂ ವೀರಪತಿಯು[೧]ಮಿರ್ಪು[೧]ದುಮಿರದ
ಲ್ತಾ ಪೊಟ್ಟುಮಿತ್ತು ಕೀರ್ತಿ
ಶ್ರೀಪತಿಯಾದಂ ಸರಸ್ವತೀಶೃಂಗಾರಂ ೧

ಪೊಂಪಟ್ಟಮಪ್ಪವೋಲ್ಮೂ
ರ್ಖಂ ಪಂಡಿತನಪ್ಪ ತಱದೆ ವಾಣೀದಯೆಯಿಂ
ದಂ ಪರದನರಸನಾಗಿ
ರ್ದಂ ಪೃಥ್ವಿಗೆ ಸಯ್ಪು ಸಮೆಯಲಾಱದುದುಂಟೇ ೨

ವ॥ ಒಂದು ದಿವಸಮಾ ಪ್ರತಾಪಮಾರ್ತಂಡಂ ಮಾರ್ತಂಡೋದಯ ಸಮಯ ದೊಳೊಡ್ಡೋಲಗಂಗೊಟ್ಟಿರೆ

ಕರಿಕುಂಭದ ಮುತ್ತಂ ಕ
ಸ್ತುರಿಮಿಗಮಂ ಸಿಂಹಶಾಬಮಂ ದರ್ಶನಮಿ
ತ್ತುರವಣಿಸಿ ಕಂಡನಾ ಧೀ
ವರನಾಯಕನಿಭ್ಯಕೇತು ಭೂನಾಯಕನಂ ೩

ವ॥ [೨]ಕಾಣ[೨]ಲೊಡನಾರ್ಗಂ ಮಾಡದ ಮೋಹವನವಂಗೆ ಮಾಡಿ ಸೇನಾಪತಿ ಪದವಿಯಂ ಕೊಟ್ಟು ತನಗಾತನೆ ಪರಮ ವಿಶ್ವಾಸ ಭೂಮಿಯುಂ ಪರಮ ಪ್ರೇಮಭೂಮಿಯುಮಾಗೆ

೧. ಐಶ್ವರ್ಯಕ್ಕೆ ಒಡೆಯನಾಗಿದ್ದ ಆ ವಿದ್ಯಾಭೂಷಣನು ಭೂಪತಿಯೂ ವೀರನೂ ಆಗಿ ಸತತವಾದ ದಾನವೈಭವದಿಂದ ಕೀರ್ತಿವಂತನೂ ಆದನು.

೨. ಹೊನ್ನು (ರಾಜ)ಪಟ್ಟವಾದಂತೆ ಸರಸ್ವತಿಯ ಅನುಗ್ರಹದಿಂದ ಮೂರ್ಖನು ಪಂಡಿತನಾದಂತೆ, ಕೇವಲ ವ್ಯಾಪಾರಿಯಾಗಿದ್ದವನು ಈಗ ಅರಸನಾದನು. ಪುಣ್ಯದಿಂದ ಆಗಲಾರದುದುಂಟೆ?

ವ॥ ಒಂದು ದಿನ ಆ ಪ್ರತಾಪಸೂರ್ಯನು ಸೂರ್ಯೋದಯಕಾಲದಲ್ಲಿ ಒಡ್ಡೋಲಗ ನಡೆಸುತ್ತಿರುವಾಗ-

೩. ಆನೆಯ ಕುಂಭಸ್ಥಳದ ಮುತ್ತುಗಳನ್ನೂ ಕಸ್ತೂರಿ ಮೃಗವನ್ನೂ ಸಿಂಹದ ಮರಿಯನ್ನೂ ಕಾಣಿಕೆಯಾಗಿತ್ತು, ಬೆಸ್ತರ ನಾಯಕನು ಇಭ್ಯಕೇತು ರಾಜನನ್ನು ಕಂಡನು.

ವ॥ ಅವನನ್ನು ಕಂಡೊಡನೆ ಯಾರಿಗೂ ತೋರದ ಪ್ರೇಮವನ್ನು ಅವನಿಗೆ ತೋರಿ, ಸೇನಾಪತಿ ಪದವಿಯನ್ನು ಕೊಟ್ಟು, ತನಗೆ ಆತನೆ ಪರಮ ವಿಶ್ವಾಸಪಾತ್ರನೂ ಅತ್ಯಂತ

---

೧ ಮಪ್ಪು (ಕಾ), ಮಿಪ್ಪು (ಕ, ಮ). ೨ ಕೊಡ (ಕ).

ಮಳಯಾನಿಳಂಬೆರಸು ವ[೧]ಸಂ[೨]ತಂ ವನ[೨] ರಾಜ್ಯಂಗೆಯ್ವಂತೆ ದೂರಾಯಾತಧೀವರಂಬೆರಸು ವಿಳಾಸ ವಸಂತಂ ರಾಜ್ಯಂ ಗೆಯ್ಯುತ್ತುಮಿರ್ದೊಂದು ದಿವಸಮಾ ಮಂದರಧೀರಂ ಮಂದರಸ್ಥವಿರ[೩] ಭಟ್ಟಾರಕರ ಸಮೀಪದೊಳ್ ಧರ್ಮಮಂ ಕೇಳುತ್ತುಮಿರ್ದ[೪]ದೂರದೇಶದೊಳುಮಿರ್ದ ಧೀವರಾಖ್ಯನಲ್ಲಿಗೆ ಮೆಲ್ಲಗೆ ಪತ್ತೆ ಸಾರ್ದು ಸಾರ್ದ್ರಹೃದಯನಾಗಿ ಮನಃಪ್ರಿಯ[೫] ವಚನಾಮೃತಮಂ ಕಿವಿಗುಡಿ[೬]ಯಿಂ ಕುಡಿಯುತ್ತುಮಿರ್ಪುದುಂ ಕಂಡು

ಎನಗೀ ಮೊಂಬುಲಿಗನಮೇ
ಗನಿಮಿತ್ತಂ ಪ್ರೇಮಮಣುಗಮಗನೊಳಮೊಲ್ವಂ
ಗನೆಯೊಳಮಾಗದುದಾಯ್ತಿದ
ನನುಪಮ ನಿರ್ವಾದಬೋಧಭಾಸುರ ಬೆಸಸಿಂ ೪

ಎನೆ ನಿನ್ನ [೭]ಮುನ್ನ[೭]ಭವದಂ
ಗನೆ ವಾಗುರೆಯೆಂಬಳೀತನಾ ಭವದೊಳೆ ನೀಂ
ವನಚರನೆಯೆನಲೊಡಂ ತೆ
ಕ್ಕ[೮]ನೆವೋದಂ ಜನ್ಮನಾಟಕಕ್ಕವನೀಶಂ ೫

ಆರೇನಾದಪರೆಂಬುದ
ನಾರಱಿವರೊ ಜಗದೊಳುಳ್ಳ ರೂಪುಗಳಂ ಸಂ
ಸಾರಿಯಘಸೂತ್ರಧಾರ
ಪ್ರೇರಣೆಯಿಂ ಪೊತ್ತು ಸುತ್ತಿ ಕುಣಿಯುತ್ತಿರ್ಪರ್ ೬

ಪ್ರಿಯನೂ ಆಗಲು, ಮಲಯಾನಿಲನೊಡನೆ ಕೂಡಿಕೊಂಡು ವಸಂತನು ವನರಾಜ್ಯವನ್ನು ಆಳುವಂತೆ, ದೂರದಿಂದ ಬಂದ ಆ ಬೆಸ್ತನೊಡನೆ ವಿಲಾಸಿಯಾದ ಆ ರಾಜನು ರಾಜ್ಯವಾಳುತ್ತಿದ್ದು ಒಂದು ದಿವಸ ಮಂದರಸ್ಥವಿರ ಭಟ್ಟಾರಕರ ಬಳಿಗೆಹೋಗಿ ಅವರಿಂದ ಧರ್ಮವನ್ನು ಕೇಳುತ್ತ ಇದ್ದಾಗ, ಆ ಬೆಸ್ತನು ಮೆಲ್ಲಗೆ ಬಳಿಗೆ ಬಂದು ಹೃತ್ಪೂರ್ವಕವಾಗಿ ಮನಸ್ಸಿಗೆ ಪ್ರಿಯವಾದ ಮಾತುಗಳನ್ನು ಅಮೃತವೆಂಬಂತೆ ಕಿವಿಯಿಂದ ಕುಡಿಯುತ್ತ ಇರುವುದನ್ನು ಕಂಡು -

೪. "ಅಕ್ಕರೆಯ ಮಗನ ಮೇಲಾಗಲಿ, ಒಲಿದ ಮಡದಿಯ ಮೇಲಾಗಲಿ ಉಂಟಾಗದಷ್ಟು ಪ್ರೇಮವು ಅದೇಕೋ ಆ ಬೆಸ್ತನ ಮೇಲೆ ನನಗುಂಟಾಯಿತು. ಮಹಾಜ್ಞಾನಿಗಳೆ, ಇದೇಕೆಂದು ತಿಳಿಸಿ."

೫. ಎಂದು ಕೇಳಲಾಗಿ, "ಪೂರ್ವಜನ್ಮದಲ್ಲಿ ನಿನಗೆ ಹೆಂಡತಿಯಾಗಿದ್ದ ವಾಗುರೆಯೆ ಈತನು. ನೀನು ಆಗ (ವಿಂಧ್ಯಕನೆಂಬ) ಬೇಡನಾಗಿದ್ದೆ" ಎಂದು ಅವರು ತಿಳಿಸಿದರು. ಅದನ್ನು ಕೇಳಿದೊಡನೆ ಆ ರಾಜನು ಜನ್ಮನಾಟಕಕ್ಕೆ ವಿಸ್ಮಯಗೊಂಡನು.

೬. ಯಾರು ಏನಾಗುವರೆಂಬುದನ್ನು ಬಲ್ಲವರಾರು? ಜಗತ್ತಿನಲ್ಲಿ ಯಾವ

---

೧ ಬ (ಕಾ). ೨ ತನ (ಕ). ೩ + ರೆಂಬ (ಮ). ೪ ತ್ತ (ಕಾ). ೫ + ಪ್ರಿಯವಚನಮನಾಲಿಸುವ ರಜಸ್ವಲಾ ಶ್ರವಣದಂತೆಮಭಯ (ಕಾ). ೬ ಡು (ಕ, ಕಾ). ೭ ಪೋದ (ಕ, ಮ, ಪ). ೮ ಕ್ಕೆ (ಕಾ)

ವ|| ಎಂದು ಬೇಗದಿಂ ನಿರ್ವೇಗಪರನಾಗಿ ಸುಕೇತುವೆಂಬ ತನ್ನ ತನಯಂಗಿಭ್ಯಕೇತು [1]ರಾಜ್ಯ[1]ಭಾರಮನಿತ್ತು ತಪೋರಾಜ್ಯಭಾರಮನೆತ್ತಿಕೊಳಲೊಡನೆ

ಯುವತಿ ಕಮಳಪ್ರಭೆಯುಮಾ
ತ್ಮವಲ್ಲಭ ಪ್ರೇಮದಿಂ ತಪಂಬಟ್ಟಳ್ ಕಾಂ
ತವಸಂತಂ ಬೀತೊಡೆ ಮಾ
ಧವಿಲತೆಯುಂ ಪಿಂತೆ ಬೀಯದೇನಿರ್ದಪುದೇ ೭

ಆ ವ್ರತಿಪತಿ[2]ಪದ[2]ಕಮಳ ಮ
ಧುವ್ರತನೆಂದಾಗಿ ಧೀವರಂ ಲೋಪಿತ ಪಾ
ಪವ್ರಣನಣುವ್ರತಾದಿ ಗು
ಣವ್ರತ ಶಿ[3]ಕ್ಷಾವ್ರತಂಗಳಂ ಕೆಯ್ಕೊಂಡಂ ೮

ವ|| ಅಂತು ಮಕರಕೇತುವಿಂಗೆ ಧೂಮಕೇತುವಾಗಿಭ್ಯಕೇತು ದಿವ್ಯ [4]ಕಾಂತಾ[4]ಕಟಾಕ್ಷ ಧವಲದೀಧಿತಿ ಸುಧಾ[5]ಸೌಧ[5]ಮಪ್ಪ ಸೌಧರ್ಮಕಲ್ಪದ ಶ್ರೀನಿಳಯವಿಮಾನದೊಳ್ ಶ್ರೀದೇವನೆಂಬ ದೇವನಾದಂ ತಪಸ್ತಪನ ವಿಕಸಿತ ವದನಕಮಳಪ್ರಭೆಯಪ್ಪ ಕಮಳಪ್ರಭೆಯುಂ ಸುಪ್ರಭವಿಮಾನದೊಳ್ ವಿಮಲಪ್ರಭನೆಂಬ ದೇವನಾದಳ್ ವ್ರತಸ್ವರೂಪ ನಿರೂಪಣಪ್ರವೀಣ ಪರಮಾಗಮಶ್ರವಣ ನಿರ್ಮಳಭೂತ ಧೀವರನಪ್ಪ ಧೀವರನುಂ ವಿದ್ಯುತ್ಪ್ರಭವಿಮಾನದೊಳ್ ಶ್ರುತಪ್ರಭಾಂಕನೆಂಬ ದೇವನಾದ[6]ನಿಂತಾ[6] ಮೂವರುಂ ಸುರಲೋಕಸೌಖ್ಯಮನನುಭವಿಸಿ ಬಂದು

ಯಾವುದೊ ರೂಪಗಳನ್ನು ಹೊತ್ತು ಸಂಸಾರಗಳು ಪಾಪವೆಂಬ ಸೂತ್ರಧಾರನು ಕುಣಿಸಿದಂತೆ ಸುತ್ತಿಸುತ್ತಿ ಕುಣಿಯುತ್ತಿರುವರು.

ವ|| ಎಂದುಕೊಂಡು ಕೂಡಲೆ ವೈರಾಗ್ಯಪರನಾಗಿ ಸುಕೇತುವೆಂಬ ತನ್ನ ಮಗನಿಗೆ ರಾಜ್ಯಭಾರವನ್ನು ಒಪ್ಪಿಸಿ ಇಭ್ಯಕೇತು ತಪೋದೀಕ್ಷೆಯನ್ನು ಕೈಕೊಂಡನು. ಆ ಕೂಡಲೆ -

೭. ಕಮಲಪ್ರಭೆಯೂ ತನ್ನ ಪತಿಯ ಮೇಲಿನ ಪ್ರೇಮದಿಂದ ತಾನೂ ತಪಸ್ಸನ್ನು ಕೈಕೊಂಡಳು. ವಸಂತನು ಹೋದಮೇಲೆ ಮಾಧವೀಲತೆ ಹಿಂದುಳಿಯುವುದುಂಟೆ?

೮. ಆ ಯತೀಂದ್ರನ ಪಾದಸೇವಕನಾದ ಬೆಸ್ತನು ಪಾಪನಿರ್ಮುಕ್ತನಾಗಿ ಅಣುವ್ರತ, ಗುಣವ್ರತ, ಶಿಕ್ಷಾವ್ರತಗಳನ್ನು ಸ್ವೀಕರಿಸಿದನು.

ವ|| ಮನ್ಮಥನಿಗೆ ಧೂಮಕೇತುವಾಗಿ ಇಭ್ಯಕೇತು ದಿವ್ಯಕಾಂತೆಯರ ಕಡೆಗಣ್ಣ ಬೆಳಗಿನಿಂದ ಥಳಥಳಿಸುವ ಸೌಧರ್ಮಕಲ್ಪದ ಶ್ರೀನಿಲಯ ವಿಮಾನದಲ್ಲಿ ಶ್ರೀದೇವನೆಂಬ ದೇವನಾದನು. ತಪೋಬಲದಿಂದ ಕಮಲಪ್ರಭೆಯು ಸುಪ್ರಭವಿಮಾನದಲ್ಲಿ ವಿಮಲ ಪ್ರಭನೆಂಬ ದೇವನಾದಳು. ವ್ರತಪ್ರಭಾವದಿಂದಲೂ ಪರಮಾಗಮ ಶ್ರವಣದಿಂದಲೂ ನಿರ್ಮಲನಾದ ಆ ಬೆಸ್ತನು ವಿದ್ಯುತ್‌ಪ್ರಭ ವಿಮಾನದಲ್ಲಿ ಶ್ರುತ ಪ್ರಭಾಂಕನೆಂಬ ದೇವನಾದನು. ಹೀಗೆ ಆ ಮೂವರೂ ದೇವಲೋಕದ ಸುಖವನ್ನು ಅನುಭವಿಸಿದ ಬಳಿಕ—

---

೧ X (ಕ) ೨ ಕುಡೆ (ಮ). ೩ ದೀ (ಕಾಧ. ೪ ಕುಂತಳ (ಕ, ಪ), ಕುಂತಾ (ಮ). ೫ ಸಾರ (ಮ) ೬ ನಿತ್ತಾ (ಕ).

ಶ್ರೀದೇವಂ ಚಿಂತಾಗತಿ
ಯಾದಂ ವಿಮಳಪ್ರಭಂ ಮನೋಗತಿಯುಂ ತಾ
ನಾದಂ ಶ್ರುತಪ್ರಭಾಂಕನು
ಮೀ ದುರಿತಾರಾತಿ ಚಪಳಗತಿ ತಾನಾದಂ ೯

ವ|| ಇದು ನಮ್ಮ ಮುತ್ತಮೂವರ ಭವಪಂಚಕ ಪ್ರಪಂಚಿತ ಪ್ರೀತಿ ನಿಮಿತ್ತಂ [1]ಮತ್ತ[1]ಮೊಂದು ಹಿತೋಪದೇಶಮುಂ ಕೇಳ್ವೊಡೆ

ಇದಱ[2]ೊ[2]ಳನಿ[3]ರುದ್ಧನವರಂ
ಧ್ರದೊಳಪಘನಘಟದೊಳಯ[4]ನ ಶೀಲನದಿಂ ಪೋ
ಪುದು ಚೋದ್ಯಮೆಯಿರ್ದಪುದೆಂ
ಬುದೆ ಚೋದ್ಯಂ ಪ್ರಾಣಪವನನನುಚಿತಭವನಂ ೧೦

ಎಡೆಯಾಡುತಿರ್ಪ ವೇ[5]ಣುವೆ
ಕೆಡೆವಂತಿರೆ ತಂತು ತೀರ್ವುದುಂ ಹತಕಾಯಂ
ಕೆಡೆವುದು ಕಾಣಲ್ಕಲ್ಲದೆ
ಸ[6]ಡಪುಡ[6]ನಜೀವನ್ನನಾವನಾಯುವ ತವಿಲಂ ೧೧

ವ|| ತಿಂಗಳಂತೆ ನಿನಗೊಂದೆ ತಿಂಗಳಾಯುಷ್ಯಮವಶ್ಯಂ ಪರವಶನಾಗಿರದೆ ಪರಲೋಕ ಹಿತ[7]ಮನೆ[7] ಮನದೆಗೊಳ್ಳೆಂಬುದುಮಪರಾಜಿತನಿಂತೆಂದಂ

೯. ಶ್ರೀದೇವನು ಚಿಂತಾಗತಿಯಾದನು; ವಿಮಲಪ್ರಭನು ಮನೋಗತಿಯಾದನು, ಶ್ರುತಪ್ರಭಾಂಕನು ಪಾಪವೈರಿಯಾದ ಚಪಲಗತಿಯಾದನು.

ವ|| ಇದು ನಮ್ಮ ಮೂವರ ಐದು ಜನ್ಮಗಳ ಕಥೆ. ಈ ಐದು ಜನ್ಮಗಳಿಂದ ಬೆಳೆದು ಬಂದ ಪ್ರೀತಿಯಿಂದ ಒಂದು ಹಿತೋಪದೇಶದ ಮಾತನ್ನು ನಿನಗೆ ಹೇಳುವುದಿದೆ ಕೇಳು-

೧೦. ಅನಿರ್ಬಂಧವಾದ ಒಂಬತ್ತು ರಂಧ್ರಗಳುಳ್ಳ ದೇಹವೆಂಬ ಈ ಮಡಕೆ ಒಡೆದು ಹೋಗುವ ಸ್ವಭಾವವುಳ್ಳುದೇ ಆದುದರಿಂದ ಅದು ಇನ್ನೂ ನಾಶವಾಗದೆ ಇರುವುದೇ ಒಂದು ಸೋಜಿಗ. ಪ್ರಾಣವಾಯುವಿಗೆ ಇದು ಅಯೋಗ್ಯವಾದ ವಾಸಸ್ಥಾನ.

೧೧. ನುಡಿಯುತ್ತಿರುವ ವೀಣೆ ತಂತಿ ಹರಿದೊಡನೆ ಮುರಿದು ಬೀಳುವಂತೆ ಆಯುಷ್ಯ ತೀರಿದೊಡನೆ ದೇಹ ಬಿದ್ದುಹೋಗುವುದು - ಆಯುಷ್ಯದ ಕೊನೆಯನ್ನು ಅರಿಯಬಲ್ಲವರಾರು?

ವ|| ಚಂದ್ರನಿಗೆ ಹೇಗೊ ಹಾಗೆ ನಿನಗೂ ಒಂದೇ ತಿಂಗಳು ಆಯುಷ್ಯ. ಆದುದರಿಂದ ಪರವಶನಾಗದೆ ಪರಲೋಕಹಿತವನ್ನೆ ಚಿಂತಿಸು" ಹೀಗೆಂದ ನುಡಿಗೆ ಅಪರಾಜಿತನೆಂದನು-

---

೧ ಕೇಳ್ (ಕಾ) ೨ ಳಗಿ (ಕ), ಳುವಿ (ಮ). ೩ ಟ (ಕ, ಮ). ೪ ವೆನ (ಕ, ಪ). ೫ ಗ (ಕ). ೬ ಡ (ಪ). ೭ ಮಂ (ಕಾ).

ಇಂದುಗಮಿನಂಗಮಂ[೧]ಬುದ
ಬೃಂದಕ್ಕಂ ಪಳಿನ ಶಾಖೆಗಂ ಮೇದಿನಿಗಂ
ಮಂದಾನಿಳಂಗಮಿನ್ನಿ[೨]
ಮ್ಮಂದಿಗ[೩]ರ್ಗಂ ಸಲೆ ಪರೋಪಕಾರಮೆ ಶೀಲಂ ೧೨

ಗುಣದಿಂದಂ ಸಹಜಾತ ಮೋ[೪]ಹದ ರಿಣಂ ಬಲ್ಲಿತ್ತು ನೀಮೀ ಮಹಾ
ಗುಣ[೫]ಕೆಂದೆ[೫]ಲ್ಲಮರ[೬]ತ್ವಮಂ ಬಿಸುಟೊಡಂ ತಾಂ ಬಿಟ್ಟುದಿಲ್ಲೆಮ್ಮ ಮೇ
ಗಣ ನಿಮ್ಮೊಂದು ಮಮತ್ವಮಿಂತುಟು ರಿಣಂ [೭]ಕ್ಷಂತ[೭] ವ್ಯಮೆಂದಂದು ಚಾ
ರಣ ಯುಗ್ಮಕ್ಕತಿ ಭಕ್ತಿಯಿಂದೆಱಗಿದಂ ವಿದ್ಯಾವಧೂವಲ್ಲಭಂ ೧೩

ವ॥ ಎಱಗುವುದುಮವರಭ್ಯುದಯಪರಂಪರಾಪ್ರಾಪ್ತನಾಗೆಂದು ಪರಸಿ ಪೋದರಿತ್ತಲಪರಾಜಿತನುಂ ಮುನ್ನಿನಂತೆ ನಿರೀಕ್ಷಣಮುಮಹಂಕಾರಮಿಲ್ಲದೆ ಪರಮವ್ರತಿ [೮]ಪೊಟಿಲಂ ಪುಗುವಂತೆ[೮] ಪೊಟಿಲಂ ಪೊಕ್ಕು ನೆರೆ[೯]ಮನೆಗೆ [೧೦]ವರ್ಷಾಂತರ ಮನೆಗೆ[೧೦] ವಂದು [೧೧]ಸಗ್ಗಕ್ಕೆ[೧೧] ಸಲ್ವ[೧೨]ಲ್ಲಿ[೧೩]ಗೆಯಿವಲ್ಲ[೧೩]ದಿವು ಸಲ್ಲವೆಂದುದ್ಯೋಗಿಸು[೧೪]ವಂತಾಗ ನಾಗಂ[೧೪]ಗಳೊಳಂ ಸಾಂಯುಗೀನ [೧೫]ಗಜಂ[೧೫]ಗಳೊ[೧೬]ಳಂ ಕಾ[೧೭]ಲ್ಗೋ ಡ[೧೬]ದ ಮೋಹಮಂ ಧರ್ಮ[೧೮]ಧವಳ ದ್ವಿರದನಮನೇಱಿಸಿ ಪವನಜವಸತ್ವರ[೧೯] ತುರಂಗಮಂಗಳ ಮೇಗಣ ಮನಮನುಚ್ಚೈಶ್ರವಮಪ್ಪ ವೈರಾ[೨೦]ಗ್ಯವಾಜಿಯ[೨೦] ಬೆಂಗೆ ವರಿಸಿ ಮುಂದಲೆಯ ಕಸದಂತೆ ಮುಂತಿರ್ದ ಕಸವರಮಂ ಸತ್ಪಾತ್ರದ ಕೆಯ್ಗೆ ಮಣ್ಣಿಕ್ಕುವಂತಿಕ್ಕಿ[೨೧]

೧೨. ಚಂದ್ರನಿಗೂ ಸೂರ್ಯನಿಗೂ ಮೋಡಗಳಿಗೂ ಹಣ್ಣಿನ ಮರಗಳಿಗೂ ಭೂಮಿಗೂ ಸುಳಿಗಾಳಿಗೂ ನಿಮ್ಮಂತಹ ಜನಕ್ಕೂ ಪರೋಪಕಾರವೇ ಶೀಲವಾಗಿರುವುದು.

೧೩. ಗುಣಕ್ಕಿಂತ ಸೋದರಿಕೆಯ ಮೋಹದ ಋಣ ಬಲಿಷ್ಠವಾದುದು. ದೇವತ್ವವನ್ನು ತ್ಯಜಿಸಿ ಬಂದರೂ ನಮ್ಮ ಮೇಲಿನ ನಿಮ್ಮದೊಂದು ಪ್ರೇಮವನ್ನು ನೀವು ಬಿಡದಾದಿರಿ. ಋಣಾನುಬಂಧ ಹೀಗಿದೆ. "ಹೀಗೆಂದು ಆ ವಿದ್ಯಾಧೀಶ್ವರನು ಆ ಇಬ್ಬರು ಚಾರಣರಿಗೆ ಭಕ್ತಿಯಿಂದ ನಮಸ್ಕರಿಸಿದನು.

ವ॥ "ನಿನಗೆ ಉತ್ತರೋತ್ತರ ಅಭ್ಯುದಯವಾಗಲಿ" ಎಂದು ಅವರು ಆಶೀರ್ವದಿಸಿ ಹೋದರು. ಇತ್ತ ಅಪರಾಜಿತನು ಮೊದಲಿನಂತೆ ನಿರೀಕ್ಷಣೆಯಾಗಲಿ ಅಹಂಕಾರವಾಗಲಿ ಇಲ್ಲದೆ ಮುನೀಂದ್ರನೊಬ್ಬನು ಪಟ್ಟಣವನ್ನು ಪ್ರವೇಶ ಮಾಡುವಂತೆ, ತನ್ನ ನಗರವನ್ನು ಹೊಕ್ಕು, ನೆರೆಮನೆಗೆ ಬರುವಂತೆ ಅರಮನೆಗೆ ಬಂದು, ಸ್ವರ್ಗಕ್ಕೆ ಹೋದಾಗ ಅಲ್ಲಿಯ ವಾಹನಗಳೆ ಬೇರೆ ಇರುವುದರಿಂದ ಇಲ್ಲಿಯ ಇವು ನನಗೇಕೆ ಎಂದುಕೊಂಡು ಸವಾರಿ ಆನೆ, ಯುದ್ಧದ ಆನೆ ಹಾಗೂ ಸಾಮಾನ್ಯ ಆನೆಗಳಲ್ಲಿ ಈವರೆಗೆ ಇದ್ದ ಮೋಹವನ್ನು ಅಲ್ಲಿಂದ ಕಿತ್ತು, ಧರ್ಮದ ಐರಾವತದ ಮೇಲೆ ಏರಿಸಿ, ವಾಯುವೇಗದ ಕುದುರೆಗಳ ಮೇಲಿದ್ದ ಮನವನ್ನು ವೈರಾಗ್ಯವೆಂಬ ಉಚ್ಚೈಸ್ರವದ ಮೇಲಿಟ್ಟು, ಬಾಗಿಲ ಮುಂದಿನ

---

೧ ಮಿಂ (ಕ, ಮ). ೨ ನ್ನೆ (ಕ, ಮ, ಪ). ೩ X (ಕ). ೪ ಮೀ (ಕ, ಪ). ೫ ದಿಂದ (ಕ, ಪ). ಕಿಂದ (ಮ). ೬ ತ (ಕ, ಮ, ಪ) ೭ ಕ್ಷೇತ್ರ (ಕ). ೮ X (ಕಾ). ೯ ರ (ಕ). ೧೦ X (ಕಾ). ೧೧ ಪಸರ್ಗಕ್ಕೆ (ಕಾ). ೧೨ + ಮ (ಮ). ೧೩ ತ್ತಿನಿವ ನಿಲ್ವ (ಕಾ). ೧೪ ತ್ಯಾಗದಾನಂ (ಕ), ತುಂ ತ್ಯಾಗದಾನಂ (ಪ) ವಂತೂಗನಾಗಂ (ಮ). ೧೫ ಜಗಂ (ಕ). ೧೬ X (ಕಾ). ೧೭ ಲ್ಗಾ (ಮ), ಲ್ಗೊ (ಕಾ). ೧೮ ರ್ಮಂ (ಮ). ೧೯ X (ಕಾ). ೨೦ ಗ್ಯಂ (ಮ). ೨೧ ಕ್ಕೆ (ಮ).

ಪರಿತಾಪಾತಪಮಟ್ಟಿದತ್ತೊಗೆದು [೧]ದುದ್ಯೋ[೧]ಧ ಪ್ರದೀಪಂ ದಮ
ದ್ವಿರದಾರೂಢನೆ[೨]ನಾದನೇವೇನಿದನೆಂದಂದಾ ನೃಪಂ ಛತ್ರ ಚಾ
ಮರ ಸಿಂಹಾಸನಮೆಂಬಿವಂ ತ್ವರಿತದಿಂ ಪ್ರೀತಿಂಕರಂ[೩]ಗಿತ್ತನೊ[೩]
ಲ್ವ[೪]ರೆ ಮಿಕ್ಕಚ್ಯುತರಾಜ್ಯಮಂ ಪಡೆವ[೫]ವೋಲ್[೫] ಸಾಮಾನ್ಯ ಸಾಮ್ರಾಜ್ಯಮಂ ೧೪

ವ॥ ಅಲ್ಲಿಂ ಬಟೆಯಂ ಭಂಡಾರದ ಪೊನ್ನೆಲ್ಲಮಂ ತೆಗೆಸಿ ತ್ರಿಭುವನಾಭರಣಮೆಂಬ ಜಿನ ಮಂದಿರದ ಮುಂದೆ ಮಂದರಮಂ ಮಾಡಿಸಿ ಪಂಚರತ್ನ ಸಂಚಯದಿನದಕ್ಕೆ ಕಲ್ಪಕುಜಂಗಳಂ ಕಲ್ಪಿಸಿ ನಕ್ಷತ್ರಮಾಲೆಯೆಂಬ ಹಾರಮಂ ಚಂದ್ರಾದಿತ್ಯರೆಂಬ ಮಣಿದರ್ಪಣಂಗಳುಮಂ ಬಲವರಿಸಿ

ಅನಘಂ ತಾನೆ ಮಹೇಂದ್ರನಾಗಿ ಮಹನೀಯಾನರ್ಘ್ಯ ಮಾಣಿಕ್ಯಮಂ
ಡನ ಮಾಳಾಂಶು ಸಹಸ್ರನೇತ್ರತನುರಾಜೇಂದ್ರಂ ಜಿನೇಂದ್ರಂಗೆ ಮ
ಜ್ಜನಮಂ ನಿರ್ಮಿಸಿ ನಿರ್ಮಳಾಧ್ವರಮನಂದಷ್ಟಾಹ್ನಿಕಂ ಮಾಡಿ ತ
ತ್ಕನಕಾದ್ರೀಂದ್ರಮನಿತ್ತನರ್ಥಿ ನಿಕ[೬]ರಕ್ಕೌದಾ[೬]ರ್ಯ ವಿದ್ಯಾಧರಂ ೧೫

ರಮಣೀರಾಗ ವಿಕಾಸಕೋಶ[೭]ಲಪ[೭]ನಾಂಭೋಜಾತ ಲಾವಣ್ಯಮಂ
ದಮಧೂಚ್ಛಿಷ್ಟಮನುಂಡು ಬೆಂಡು[೮]ನೆಗೆದಸ್ಪೃಶ್ಯಂಗಳಾಗಿರ್ದ ತ
ನ್ನ ಮನೋನೇತ್ರಮದಾಳಿಗಳ್ಗೆ ಶಮಗಂಗಾಸ್ನಾನದಿಂ ಶುದ್ಧಿಯಂ
ಸಮೆದಾ ಸಂಯಮಭಾಜನಂ ಜಿನಪದಾಂಭೋಜಂಗಳೊಳ್ ಸಾರ್ಚಿದಂ ೧೬

ಕಸದಂತೆ ತನ್ನ ಮುಂದಿದ್ದ ಚಿನ್ನವನ್ನು ಮಣ್ಣಿಗೆ ಸಮನಾಗಿ ಕಂಡು ಸತ್ಪಾತ್ರಕ್ಕೆ ದಾನ ಮಾಡಲಾಗಿ -

೧೪. "ಪರತಾಪದ ಬೇಗೆ ನಂದಿತು; ಜ್ಞಾನದೀಪ ಹೊತ್ತಿತು; ನಿಗ್ರಹಗಜವನ್ನ ಏರಿದ್ದೇನೆ. ಇನ್ನೂ ಇವೆಲ್ಲ ನನಗೇನು ಪ್ರಯೋಜನ?" ಎಂದು ಆ ಅರಸನು ಛತ್ರ, ಚಾಮರ ಸಿಂಹಾಸನವೆಂಬುವನ್ನೆಲ್ಲ ಕೂಡಲೆ ಪ್ರೀತಿಂಕರ ಕುಮಾರನಿಗೆ ಒಪ್ಪಿಸಿಬಿಟ್ಟನು. ಅಚ್ಯುತಕಲ್ಪದ ರಾಜ್ಯವನ್ನು ಪಡೆಯುವವರಿಗೆ ಸಾಮಾನ್ಯ ಸಾಮ್ರಾಜ್ಯದ ಮೇಲೆ ಮಮತೆಯಿರುವುದೆ?

ವ॥ ಆ ಬಳಿಕ ಬೊಕ್ಕಸದ ಚಿನ್ನವನ್ನೆಲ್ಲಾ ತೆಗೆಯಿಸಿ ತ್ರಿಭುವನಾಭರಣವೆಂಬ ಜಿನಾಲಯದ ಮುಂದೆ ಮಂದರವನ್ನು ಮಾಡಿಸಿ, ಪಂಚರತ್ನಗಳಿಂದ ಅದರಲ್ಲಿ ಕಲ್ಪವೃಕ್ಷ ಗಳನ್ನು ನಿರ್ಮಿಸಿ, ನಕ್ಷತ್ರ ಮಾಲೆಯೆಂಬ ಹಾರವನ್ನೂ ಚಂದ್ರಾದಿತ್ಯರೆಂಬ ರತ್ನದರ್ಪಣ ಗಳನ್ನೂ ಅಳವಡಿಸಿದನು.

೧೫. ಮೈಯಲ್ಲಿ ಸಾವಿರ ಕಣ್ಣುಗಳಂತೆ ಶೋಭಿಸುವ ಅಮೌಲ್ಯವಾದ ಮಾಣಿಕ್ಯಾಭರಣಗಳನ್ನು ತೊಟ್ಟ ರಾಜೇಂದ್ರನು ತಾನೆ ಮಹೇಂದ್ರನಾಗಿ ಜಿನಬಿಂಬಕ್ಕೆ ಅಭಿಷೇಕವನ್ನು ಮಾಡಿ, ಅಷ್ಟಾಹ್ನಿಕ ಪೂಜೆಯನ್ನು ನೆರವೇರಿಸಿ, ಆ ಚಿನ್ನದ ಮಂದರವನ್ನು ಯಾಚಕರಿಗೆ ದಾನಮಾಡಿದನು.

೧೬. ಅನುರಾಗದಿಂದರಳಿದ ರಮಣಿಯರ ಮುಖಕಮಲಗಳಲ್ಲಿ ಲಾವಣ್ಯದ

---

೧ ದದ್ಯೋ (ಕ), ದದ್ಬೋ (ಮ). ೨ ಗೆ (ಕಾ). ೩ ಗಿತ್ತುನೊ (ಕ), ಗೆತ್ತನೊ (ಮ). ೪ ಳ್ವ (ಪ). ೫ ವರ್ (ಕಾ, ಮ). ೬ ರಂ ಸೌಂದ (ಕ), ರಕ್ಕಾಢ್ಯೈ (ಪ). ೭ ಫಲ (ಕ, ಮ). ೮ ದು (ಕ).

ವ॥ ಅನಂತರಂ ಬಾಂಧವಬಂಧನಮಂ ಪ[೧]ಱಿದು ಪಂಚಮುಷ್ಟಿಯಿಂ ಕೇಶ[೨]ಪಾಶಂಗಳಂ [೩]ಪಱಿದುಳಿದಿ[೪]ರ್ಪತ್ತೆರಡು ದಿವಸಮುಂ ಪ್ರಾಯೋಪ[೫]ಯೋಗ ಸಂಸ್ಯನದಿನಿರ್ಪತ್ತೆರಡು ಸಾಗರೋಪಮಾಯುಷ್ಯಮಂ ಪಡೆದಂದಲಚ್ಯುತ [೬]ಕಲ್ಪದ ಸಾಂತಕರ ವಿಮಾನದೊಳಚ್ಯುತೇಂದ್ರನಾಗಿ

ಭೋಗಾಮೃತಮಂ ಪುಣ್ಯನಿ
ಯೋಗದಿನೀಂಟುತ್ತುಮಿರೆಯು[೭]ಮೌರ್ವ[೭]ದ ತೃಷ್ಣಾ
ವೇ[೮]ಗಮಿದೇಂ ದ್ವಾವಿಂಶತಿ
ಸಾಗರ ಜೀವನಮನೀಂಟಿದತ್ತನಿಮಿಷನಾ ೧೭

ಇತರರ ಸಂಪ[೯]ತ್ತೇನ್
ಚ್ಯುತಕಲ್ಪದಿನಾಯುರಬ್ಧಿಯವಸಾನದೊಳ
ಚ್ಯುತನುಂ[೧೦] ಚುತ್ಯನಾದಂ ಯಮ
ಹತಕಂ ಸುಸ್ಥಿ[೧೧]ರನ[೧೧]ನಾರುಮಂ ಸೈರಿಪನೇ ೧೮

ಎಂದುಂ ಕಾಲಕ್ಕೆ ಚಲಂ
ಸಂದುದು ಮೂಜಗದೊಳಚಲಮೆಂದೊಡೆ ನಗುತುಂ
ಬಂದು ತಳರ್ಚುಗುಮಚ್ಯುತ
ನೆಂದೊಡೆ ಕೆಡಪುಗುಮದಮರನೆಂದೊಡೆ ಕೊಲ್ಗುಂ ೧೯

ಮಧುವನ್ನು ಎಂಜಲಿಸಿ ಅಸ್ಪೃಶ್ಯಗಳಾಗಿದ್ದ ತನ್ನ ಮನೋನೇತ್ರವೆಂಬ ದುಂಬಿಗಳಿಗೆ ಶಮೆಯೆಂಬ ಗಂಗೋದಕದಿಂದ ಸ್ನಾನ ಮಾಡಿಸಿ, ಶುದ್ಧವಾದ ಮೇಲೆ ಅವುಗಳನ್ನು ಜಿನನ ಪಾದಕಮಲಗಳಲ್ಲಿ ತೊಡಗಿಸಿದನು.

ವ॥ ಅನಂತರ ಬಾಂಧವರ ಸಂಬಂಧವನ್ನು ಹರಿದುಕೊಂಡು, ಪಂಚಮುಷ್ಟಿಯಿಂದ ತನ್ನ ತಲೆಗೂದಲನ್ನು ಕಿತ್ತು, ತನ್ನ ಆಯುಷ್ಯದಲ್ಲಿ ಉಳಿದ ಇಪ್ಪತ್ತೆರಡು ದಿನಗಳನ್ನು ಪ್ರಾಯೋಪಯೋಗ ಸಂನ್ಯಸನದಿಂದ ಕಳೆದು, ಇಪ್ಪತ್ತೆರಡು ಸಾಗರೋಪಮವಾದ ಆಯುಷ್ಯವನ್ನು ಗಳಿಸಿ ಅಚ್ಯುತಕಲ್ಪದ ಸಾಂತಕರ ವಿಮಾನದಲ್ಲಿ ಅಚ್ಯುತೇಂದ್ರನಾದನು.

೧೭. ಅಲ್ಲಿ ತನ್ನ ಪುಣ್ಯದಿಂದ ಒದಗಿದ ಭೋಗವನ್ನು ಅನುಭವಿಸುತ್ತ ಇರಲಾಗಿ ಬಡಬಾಗ್ನಿ ಕಡಲೆಲ್ಲವನ್ನೂ ಹೀರಿ ಬಿಡುವಂತೆ ಅವನ ಇಪ್ಪತ್ತೆರಡು ಸಾಗರಾವಧಿಯ ಆಯುಷ್ಯನ್ನೆಲ್ಲ ಅವನ ತೃಷ್ಣೆ ಹೀರಿ ಮುಗಿಸಿತು.

೧೮. ಆಯುಷ್ಯದ ಅವಧಿ ಮುಗಿದೊಡನೆ ಅಚ್ಯುತ ಕಲ್ಪದಿಂದ ಅಚ್ಯುತದೇವನೂ ಚ್ಯುತನಾದನು ಎಂದ ಮೇಲೆ ಇತರರ ಸಂಪತ್ತು ಎಷ್ಟುಕಾಲ ಉಳಿದೀತು? ಸುಸ್ಥಿರವಾದವರನ್ನು ಕಂಡು ದುಷ್ಟಯಮನು ಸೈರಿಸುವನೆ?

೧೯. ಮೂರುಲೋಕದಲ್ಲಿಯೂ ಕಾಲ ಚಲನಶೀಲವಾದುದು. ತಾನು ಅಚಲನೆಂದೊಡನೆ ನಗುತ್ತ ಬಂದು ಅದು ಕದಲಿಸಿಬಿಡುವುದು; ಅಚ್ಯುತನೆಂಬವರನ್ನು ಕೆಡಹುವುದು; ಅಮರರೆಂಬವರನ್ನು ಕೊಲ್ಲುವುದು.

---

೧ ತ (ಮ, ಪ). ೨ ಪಾಶಮಂ (ಕಾ). ೩ ದೆ (ಕ, ಪ). ೪ + ಗಮನ (ಮ). ೫ ತ (ಕ, ಪ). ೬ X (ಕ, ಪ). ೭ ಮೂರ್ವ (ಮ), ಮಾರಿ (ಪ). ೮ ಯೋ (ಕಾ). ೯ ತ್ತೆನಲ (ಕಾ). ೧೦ ನ (ಕ, ಪ). ೧೧ ತರ (ಕ, ಪ).

ನಿರುಪಮ ಜಂಬೂದ್ವೀಪದ
ಭರತಕ್ಷೇತ್ರಕ್ಕೆ ಸಸ್ಯಸಂಪದಮೆನಿಕುಂ
ಕುರುಜಾಂಗಣ ಜನಪದಮ
ಲ್ಲಿ ರಂಜಿಕುಂ ಹಸ್ತಿನಾಪುರಂ ಪೊಸದೆನೆವೋಲ್ ೨೦

ಮೃಗಮೆತ್ತುನ್ಮೃಗ ಮುಗ್ಧವೀಕ್ಷಿತಮದೆ[೧]ತ್ತಚ್ಚಾಲ[೧]ವೆತ್ತೋಪ್ಪ ಲ
ಕ್ಷ್ಮಿ ಗ್ರೆ ನೋಂತಾಲದ ಪಣ್ಣದೆತ್ತ ಬ[೨]ಜೆಯಾಪುತ್ತೆತ್ತ ಕೇಶಾ[೩]ಸಿ ತೋ[೩]
[೪]ರಗ[೪]ಮೆತ್ತಂ ಕ[೫]ಮದೆತ್ತ ಪೀರ್ವಮೃತವೆತ್ತಂತಾ ಪುರಸ್ತ್ರೀಮುಖೇಂ
ದುಗಳಂ ಪೋಲಿಸಿ ಪೊಂಗುವರ್ಸಮು[೬]ರತ[೬]ಶ್ರಾ (೦)ತಂಗಳಂ[೭] ತಿಂಗಳಂ ೨೧

ನಡೆ ನೋಟ್ಪರ ಕಡೆಗಣ್ಣುಂ
ಕಡು ನಲ್ಲರಮನಮುಮೊಡನೆ ಪೊತ್ತುವು ಪುರದೊಳ್
ಮಡದಿಯರ ಮೊಲೆಯನಲ್ಲದೊ
ಡುಡಿಯವೆ ಬಳುವಳಿಕೆವಡೆದ ಬಡನಡು ಭರದಿಂ ೨೨

ಆ ಪುರಮನಾಳ್ವನಮೃತಾ
ಳಾಪಂ ಯಮಕೋಪನತ್ಯುದಾರಂ ಧೀರಂ
ರೂಪೇಕ್ಷುಚಾಪನನ್ವಯ
ದೀಪಂ ಶ್ರೀಚಂದ್ರನವನತಾರಿ ನರೇಂದ್ರಂ ೨೩

೨೦. ಅಪ್ರತಿಮವಾದ ಜಂಬೂದ್ವೀಪದ ಭರತಕ್ಷೇತ್ರಕ್ಕೆ ಸಸ್ಯಸಂಪತ್ತಿನಂತಿರುವುದು ಕುರುಜಾಂಗಣ ರಾಜ್ಯ; ಅಲ್ಲಿ ಹೊಸ ತೆನೆಯಂತೆ ಶೋಭಿಸುವುದು ಹಸ್ತಿನಾಪುರ.

೨೧. "ಆ ಜಿಂಕೆಯೆತ್ತ! ಜಿಂಕೆಯಂತೆ ಮುಗ್ಧವಾದ ಈ ನೋಟವೆತ್ತ! ಆ ಆಲದ ಮರವೆತ್ತ! ತಪಮಾಡಿ ತುಟಿಯಾಗುವ ಭಾಗ್ಯ ಪಡೆದ ಈ ಆಲದ ಹಣ್ಣೆತ್ತ! ಶೂನ್ಯವಾದ ಆ ಹುತ್ತ ಎತ್ತ! ಕೇಶವೆಂಬ ಈ ಕಾಲಸರ್ಪವೆತ್ತ. ಆ ಕಪ್ಪು ಕಲೆಯೆತ್ತ! ಹೀರುವ ಈ ಅಮೃತವೆತ್ತ!" ಹೀಗೆಂದು ಚಂದ್ರನಿಗೆ ಹೋಲಿಸಿ ತಮ್ಮ ಪುರಸ್ತ್ರೀಯರ ಮುಖಚಂದ್ರಗಳನ್ನು ಬಣ್ಣಿಸುತ್ತ ಸಮರತಿಯಿಂದ ಬಳಲಿದ ಅಲ್ಲಿಯ ಪುರುಷರು ಹಿಗ್ಗುವರು.

೨೨. ಬಿಡದೆ ನೋಡುವವರ ಕಡೆಗಣ್ಣುಗಳೂ ಪ್ರಿಯತಮರ ಮನಸ್ಸುಗಳೂ ಆ ಪುರದ ಚೆಲುವೆಯರ ಮೊಲೆಗಳನ್ನೂ ಹೊತ್ತು ನಿಂತುವು. ಹಾಗಲ್ಲದೆ ಹೋಗಿದ್ದರೆ ಭರದಿಂದ ಬೆಳೆಯುವ ಆ ಮೊಲೆಗಳ ಭಾರದಿಂದ ಬಡನಡು ಮುರಿಯದೆ ನಿಲ್ಲುವುದುಂಟೆ?

೨೩. ಅಮೃತದಂತೆ ಸವಿಮಾತನಾಡುವವನೂ ಯಮನಂತೆ ಕೋಪವುಳ್ಳವನೂ ಅತ್ಯಂತ ಉದಾರನೂ ಧೀರನೂ ರೂಪದಲ್ಲಿ ಮನ್ಮಥನೂ ಕುಲಭೂಷಣನೂ ವೈರಿಗಳನ್ನೆಲ್ಲ ಸೋಲಿಸಿದವನೂ ಆದ ಶ್ರೀಚಂದ್ರನೆಂಬವನು ಆ ಪುರಕ್ಕೆ ದೊರೆಯಾಗಿದ್ದನು.

---

೧ ತಂ ಜ್ವಾಲ (ಪ), ೨ ಪ (ಕಾ). ೩ ಶಿರೋ (ಕ, ಮ, ಪ). ೪ ಮಗ (ಕ, ಪ). ಗಮ (ಮ). ೫ ತ (ಪ). ೬ ತರ (ಕ). ೭ ಳಿಂ (ಪ).

ದಯಿತೇಕ್ಷಣ ಮಗ್ನಮೃಗಂ
ವಿಯತ್ತದೋದ್ಭಾಸಿರುಧಿರ ಕರ್ದಮ ವಲ್ಮೀ
ಕಯುತಂ ಶ್ರೀಚಂದ್ರಮುಖ
ಪ್ರಿಯಚಂದ್ರಂ ಕೀರ್ತಿಚಂದ್ರನೆಸೆವಸಿಚಂದ್ರಂ ೨೪

ಆ ಮಹಿಪತಿಯ ಮನಃಪ್ರಿಯೆ[೧]
ಕಾಮಿನಿ ಮಿಕ್ಕಗ್ರಮಹಿಷಿ ತಾನೆನಿಸಿರ್ದುಂ
ಶ್ರೀಮತಿಯೆಂಬಳ್ ದಾನ
ಶ್ರೀಮತಿಯಿಂ ಕಾಮಧೇನುವೆನಿಸಿದಳೆಳೆಯಂ[೨] ೨೫

ಅವಳಂಗಚ್ಛವಿಗೋತು ಪಚ್ಚೆ ಕುರುಳಂದಕ್ಕೋತು ನೀಳಂ ನಖ
ಚ್ಛವಿಗೋತುಜ್ವಳ ವಜ್ರಮೆಲ್ಲ ಸುಲಿಪಲ್ಗೋತಚ್ಚ ಮುಕ್ತಾಫಳಂ
ಪವಳಂ ಬಾಯ್ದೆಱೆಗೋತು ಬಂದು ಸಲೆ ಸೇವಾವೃತ್ತಿಗೆಯ್ವಂತೆ ರ
ತ್ನ ವಿಭೂಷಾವಳಿಯೊರ್ಮೆಯುಂ ತೊಲಗವಂತಾ ಶ್ರೀಮತೀದೇವಿಯಂ[೩] ೨೬

ಆ ನೃಪತಿಗಮಾರಾಜ್ಞಿಗ
ಮಾ ನಾಕಜನೊಸಗೆ ಪುಟ್ಟೆ ಪುಟ್ಟಿ ಮಹಾ ಪು
ಣ್ಯಾ[೪]ನೀಕಂ[೪] ಪಡೆದಂ ಶಿಶು
ಭಾನುದ್ಯುತಿ ಸುಪ್ರತಿಷ್ಠನೆಂಬೊಳ್ಪೆಸರಂ ೨೭

೨೪. ತನ್ನ ಮುಖದಲ್ಲಿ ನೆಲಸಿರುವ ಪ್ರಿಯತಮೆಯ ದೃಷ್ಟಿಯೆಂಬ ಜಿಂಕೆಯ ಕಣ್ಣುಗಳನ್ನು ಒಳಗೊಂಡು, ಆಕಾಶವನ್ನೆಲ್ಲ ವ್ಯಾಪಿಸಿರುವ ಕೀರ್ತಿಯೆಂಬ ಬೆಳ್ದಿಂಗಳಿಂದ ಶೋಭಿಸುತ್ತ, (ಚಂದ್ರನಲ್ಲಿಯ ಹುತ್ತಿನಂತೆ) ನೆತ್ತರು ಮೆತ್ತಿಕೊಂಡಿರುವ ಖಡ್ಗಚಂದ್ರಸಹಿತನಾಗಿ ಚಂದ್ರಮುಖಿ ಪ್ರಿಯನಾದ ಶ್ರೀಚಂದ್ರಕುಮಾರನು ಶೋಭಿಸಿದನು.

೨೫. ಶ್ರೀಮತಿಯೆಂಬ ಅಗ್ರಮಹಿಷಿ, ಆತನಿಗೆ ಮನೋವಲ್ಲಭೆಯಾಗಿದ್ದು ದಾನಬುದ್ಧಿಯ ಮಹಿಮೆಯಿಂದ ಕಾಮಧೇನುವೆನಿಸಿದ್ದಳು.

೨೬. ಆಕೆಯ ದೇಹಕಾಂತಿಗೆ ಮೆಚ್ಚಿ ಪಚ್ಚೆಯೂ ಕೂದಲ ಶೋಭೆಗೆ ಮರುಳಾಗಿ ನೀಲವೂ ಉಗುರಿನ ಪ್ರಭೆಗೆ ಮೋಹಗೊಂಡು ವಜ್ರವೂ ಹಸನಾದ ಹಲ್ಲುಗಳಿಗೆ ಒಲಿದು ಮುತ್ತುಗಳೂ ತುಟಿಗೆ ಒಲಿದು ಹವಳವೂ ಬಂದು ಅವಳ ಸೇವಾವೃತ್ತಿಗೆ ನಿಂತವೊ ಎನೋ ಎಂಬಂತೆ ಶ್ರೀಮತಿದೇವಿಯ ರತ್ನಾಭರಣಗಳನ್ನು ಸದಾಕಾಲ ಧರಿಸಿಕೊಂಡೇ ಇರುವಳು.

೨೭. ಆ ಅರಸನಿಗೂ ಆ ರಾಣಿಗೂ ಅಚ್ಯುತಕಲ್ಪದಿಂದ ಬಂದ ಆ ಮಹಾಪುಣ್ಯಶಾಲಿಯಾದ ದೇವನು ಮಗನಾಗಿ ಹುಟ್ಟಿ, ಸುಪ್ರತಿಷ್ಠನೆಂಬ ಉತ್ತಮವಾದ ಹೆಸರನ್ನು ಪಡೆದು ಬಾಲಸೂರ್ಯನಂತೆ ಕಾಂತಿಮಯನಾಗಿ ಶೋಭಿಸಿದನು.

---

೧ ಯ (ಕಾ, ಮ). ೨ ಯಿಂ (ಕ, ಮ). ೩ ಯಾ (ಕಾ). ೪ ನನ್ವಿತ (ಕ), ನೀಕಂ (ಫ).

ಆ ರಾಜಪ್ರಿಯ ಸೂನು ತನ್ನೆವಳೆಯಂದುದ್ದಾಮ ವಾಗ್ದೇವಿಯಂ
ಧೀರಂ ಯೌವನದಂದು ಸನ್ನುತ ಸುನಂದಾದೇವಿಯಂ ಕ್ಷತ್ರಿಯಾ
ಚಾರಖ್ಯಾತಿ ವಿಧೇಯ ನೀತಿಯಜೆಯಲ್ಕಲ್ತಂದು ಲೋಕಸ್ತುತಂ
ವೀರಶ್ರೀಯನಲಂಪಿನಿಂ ಮದುವೆನಿಂದುತ್ಸಾಹಮಂ ತಾಳ್ದಿದಂ ೨೮

ಬೇಡ ಕೊಲಲೆಂಬ ತೆಱದಿಂ
ಕ್ರೀಡಾರಸದಿಂದ ರಾಜತನಯಂ ಕೊಂಬಂ
ದಾಡೆಯುಮಂ ಕಿಟ್ಟೇ[೧]ನೊಡ[೧]
ನಾ[೨]ಡಿಸುವನೊ ಕಾಡಕರಿಗಳಂ ಹರಿಗಳುಮಂ ೨೯

ವ|| ಅಂತಿಜೆವ ಮೆಱೆವ ಪ್ರಾಯದ ಪುತ್ರನಂ ಕಂಡು ಸಂಸಾರದ ಕಡೆ ಗಂಡಂತೆ ಸಂತೋಷದಂತನೆಯ್ದಿ

ಚಂದ್ರಂ ಬುಧಂಗೆ ಕೊಡುವವೊ
ಲಿಂದ್ರಂ ಪ್ರತಿಮಂಗೆ ಸುಪ್ರತಿಷ್ಠಂಗಾ ಶ್ರೀ
ಚಂದ್ರಂ ರಾಜ್ಯಮನಪಗತ
ತಂದ್ರಂ ಕೊಟ್ಟೊಳ್ದಪಕ್ಕೆ ಕಚಮಂ ಕೊಟ್ಟಂ ೩೦

ಮಂದರಕುಧರ ಸಮಾನ ಸು
ಮಂದಿರ ಗುರುಪಾದ ಸೇವೆಗೆಯ್ದಾಚರಿಸು
ತ್ತಂ[೩]ದಂದಿಂಗಕಳಂಕಂ
ಕುಂದಿದನುತ್ತಮ ತಪಃಶ್ರಿತಂ[೪] ಶ್ರೀಚಂದ್ರಂ ೩೧

೨೮. ರಾಜನಿಗೆ ಪ್ರಿಯನಾದ ಆ ಕುಮಾರನು ತನ್ನ ಬಾಲ್ಯದಲ್ಲಿ ವಿದ್ಯಾದೇವತೆಯನ್ನೂ ಯೌವನಕಾಲದಲ್ಲಿ ಸುನಂದಾದೇವಿಯನ್ನೂ ಕ್ಷತ್ರಿಯವೃತ್ತಿಗನುಸಾರವಾಗಿ ರಾಜನೀತಿಯನ್ನು ಕಲಿತ ಬಳಿಕ ಲೋಕಸ್ತುತನಾಗಿ ವೀರಲಕ್ಷ್ಮಿಯನ್ನೂ ಮದುವೆಯಾಗಿ ಉತ್ಸಾಹವನ್ನು ಪಡೆದನು.

೨೯. ಕೊಲೆಬೇಡವೆಂದು ವಿನೋದದಿಂದ ಆ ರಾಜಕುಮಾರನು ಆನೆಗಳ ಕೋರೆಗಳನ್ನೂ ಸಿಂಹಗಳ ದಾಡೆಹಲ್ಲುಗಳನ್ನೂ ಕಿತ್ತು ಅವೆರಡೂ ವರ್ಗಗಳನ್ನು ಒಡನಾಡುವಂತೆ ಮಾಡುವನು.

ವ|| ಹೀಗೆ ಶೌರ್ಯದಿಂದ ಮೆರೆಯುವ ತನ್ನ ಯುವಕ ಪುತ್ರನನ್ನು ಕಂಡು, ಸಂಸಾರದ ಕೊನೆಯನ್ನೆ ಕಂಡವನಂತೆ ಅತ್ಯಂತ ಸಂತೋಷಬಟ್ಟು -

೩೦. ಚಂದ್ರನು ಬುಧನಿಗೆ ಕೊಡುವಂತೆ ಶ್ರೀಚಂದ್ರರಾಜನು ಸುಪ್ರತಿಷ್ಠನಿಗೆ ರಾಜ್ಯವನ್ನು ಕೊಟ್ಟು, ನಿಶ್ಚಿಂತನಾಗಿ ತಪಶ್ಚರಣವ್ರತವನ್ನು ಕೈಕೊಂಡನು.

೩೧. ಮಂದರ ಪರ್ವತ ಸದೃಶರಾದ ಸುಮಂದಿರರೆಂಬ ಗುರುಗಳು ಪಾದಸೇವೆ ಮಾಡಿ, ತಪಸ್ಸು ಮಾಡುತ್ತ ಶ್ರೀಚಂದ್ರನು ದೇಹವನ್ನು ಕುಗ್ಗಿಸಿದನು.

---

೧ X (ಕಾ). ೨ ನೋ (ಕಾ), ೩ ತ್ತೆಂ (ಮ). ೪ ತ (ಕಾ).

ವಿಗತವಸನಾಂಶುವಿ[೧]ಸರಂ[೧]
ಪ್ರಗಲ್ಭ ನಿಃಕಪಟವೃತ್ತಿ ರಹಿತಂ ವಿಮಲ
ಪ್ರಗುಣನುಪಶಾಂತ ಕಾಮಂ
ಪೊಗಸಿನ ಚಂದ್ರಂಬೊಲಿರ್ದನಾ ಶ್ರೀಚಂದ್ರಂ ೩೨

ಇತ್ತ ಪಿತೃ[೨]ವಿತ್ತ[೨] ರಾಜ್ಯಮ
ನಿತ್ತು ಭುಜಕ್ಕಾಜ್ಞೆಯಂ೩ ವಿರೋಧಿಗಳ ನೊಸ
ಲ್ಗಿತ್ತರಸುಗೆಯ್ದನಾತ್ಮಾ
ಯತ್ತಂ ಕಲಿ ಸುಪ್ರತಿಷ್ಠನಯನಯ[೪]ನಿಷ್ಠಂ[೪] ೩೩

ಧೃತಿವತ್ತಾತನ ದಿಗ್ಜಯೋದ್ಯಮ ಭವದ್ಭೇರೀಪ್ರಣಾದಕ್ಕೆ ಕಂ
ಪಿತಮಪ್ಪಾದಿಯ ಕೂರ್ಮನಂ ಫಣಿಪನಂ ದಿಗ್ದಂತಿಯಂ ಗೋತ್ರ ಪ
ರ್ವತಮಂ ಭೂಮಿ ಬಿಸುಟ್ಟು ಬಂದು ಪಿರಿದುಂ ನಿಶ್ಚಿಂತದಿಂ ಸುಪ್ರತಿ
ಷ್ಠಿತಮಾಗಿರ್ಪುದು ಸುಪ್ರತಿ[೫]ಷ್ಠನ ಪಟಿಷ್ಠೋ[೫]ದ್ದಂಡದೋರ್ದಂಡದೊಳ್ ೩೪

ಮಾನಂ ಸದ್ಧೈರ್ಯದೀಕ್ಷಾಗುರು ಸುರಗಿರಿಗಂ ಕಲ್ಪವೃಕ್ಷಕ್ಕೆ ಹಸ್ತಂ
ದಾನೋಪಾಧ್ಯಾಯನಾತ್ಮಕೃತಿಯತನುಗೆ ಬಿಲ್ಲೋಜನೋಜ ಪ್ರಸಾದಾ
ಧೀನಂ ತನ್ಮುಕ್ತಿ ವಾಗ್ನರ್ತಕಿಗಖಿಳ ಕ[೬]ಳಾಲಾ[೬]ಸ್ಯ ಶೈಲೂಷಾನಾಗ
ಲ್ತಾನಾಯ್ತೆಂಬನ್ನಮಾದಂ ಜಗಮನೆಜಿಗಿಸಲ್ ಸುಪ್ರತಿಷ್ಠಂ ಗರಿಷ್ಠಂ ೩೫

೩೨. ದಿಗಂಬರನಾಗಿ ನಿಷ್ಕಪಟವೃತ್ತಿಯಿಂದ ಏಕಾಂತ ವಾಸಿಯಾಗಿ ಶುದ್ಧಗುಣವನ್ನು ಹೊಂದಿ ಕಾಮವಾಸನೆಯನ್ನು ಕಳೆದುಕೊಂಡು ಶ್ರೀಚಂದ್ರನು ಪ್ರಾತಃಕಾಲದ ಚಂದ್ರನಂತಿದ್ದನು.

೩೩. ಇತ್ತ ನೀಲನಿಷ್ಠನಾದ ಸುಪ್ರತಿಷ್ಠನು ತಂದೆ ಒಪ್ಪಿಸಿಕೊಟ್ಟ ರಾಜ್ಯವನ್ನು ತನ್ನ ತೋಳ್ಬಲದಿಂದ ಧರಿಸಿ, ವೈರಿಗಳನ್ನೆಲ್ಲ ತನ್ನ ಆಜ್ಞಾವರ್ತಿಗಳಾಗುವಂತೆ ಮಾಡಿ, ಆಳುತ್ತಿದ್ದನು.

೩೪. ಧೈರ್ಯಶಾಲಿಯಾದ ಸುಪ್ರತಿಷ್ಠನ ದಿಗ್ವಿಜಯ ಪ್ರಾರಂಭದ ಭೇರೀನಾದಕ್ಕೆ ಹೆದರಿ ಆದಿಕೂರ್ಮ, ಆದಿಶೇಷ, ದಿಗ್ದಂತಿಗಳು ಹಾಗೂ ಕುಲಪರ್ವತಗಳು ನಡುಗುತ್ತಿರಲಾಗಿ, ಈ ಆಧಾರಗಳನ್ನು (ನಂಬಲಾರದೆ) ತೊರೆದು ಬಂದು ಭೂಮಿಯು ಆತನ ಸಮರ್ಥವಾದ ತೋಳುಗಳ ಮೇಲೆ ನೆಲಸಿ ನೆಮ್ಮದಿ ಹೊಂದಿರುವುದು.

೩೫. ಮೇರುಪರ್ವತಕ್ಕೂ ಸುಸ್ಥಿರತೆಯನ್ನು ಕಲಿಸಿಕೊಂಡತಕ್ಕಂತಹ ಅಭಿಮಾನ ಗುಣ, ಕಲ್ಪವೃಕ್ಷಕ್ಕೂ ದಾನ ಮಾಡುವುದನ್ನು ಹೇಳಿಕೊಡುವ ಹಸ್ತ, ಸಾಕ್ಷಾತ್ ಮನ್ಮಥನಿಗೇ ಧನುರ್ವಿದ್ಯಾಗುರುವಾಗಿರುವ ಸ್ವಾಭಾವಿಕ ದೇಹಸೌಂದರ್ಯ, ಮುಕ್ತಿಯೆಂಬ ನರ್ತಕಿಗೆ ಅನುಗ್ರಹ ಮಾಡುವಂತಹ ತೇಜಸ್ಸೂ, ಹಾಗೂ ಸರಸ್ವತಿಗೇ ಗುರುವಾಗುವಂತಹ ಸಮಸ್ತ

೧ ರಸಂ (ಕ, ಪ). ೨ ವೀರ (ಮ). ೩ ಯಿಂ (ಕ, ಮ). ೪ ವಿಷ್ಟಂ (ಕಾ). ೫ ಷ್ಠಿತನ ಪೇಟಿಪ್ಪೋ (ಕ), ಷ್ಠಿತ ಪಟಿಷ್ಟೋ (ಪ). ೬ ಳೋಲ್ಲಾ (ಕ), ಳಾಲಾ (ಪ) ಳೋಲಾ (ಮ).

ಆದತ್ತು ಸುಪ್ರತಿಷ್ಠ ಧ
ರಾದಯಿತಂಗಧಿಕ ದೃಷ್ಟಿಯೆನೆ ಮೇದಿನಿ ಬಾ
ಗ್ಯೋದಯಮಂ ಪಡೆಯೆ ಸುನಂ
ದಾದೇವಿ ಸುದೃಷ್ಟನೆಂಬ ಮಗನಂ [1]ಪಡೆ[1]ದಳ್ ೩೬

ಉಕ್ಕೆವದೆಲೆ[2] ಮಾಯದ ಕೊಳ
[3]ರ್ವಕ್ಕಿ[3]ಯ ಗೆಳೆ[4]ತಿಳಕವಿಡುವ ಪೊಳೆ ಪುಸಿಯ ಪುಣಿಲ್
ಟ[5]ಕ್ಕಿನ ಬಿಸಲತೆ ಮುತ್ತಂ
ಮುಕ್ಕುಳಿಸಿದ ಪವಳ[6]ಮವಳ[6] ಮರುಳಿಸುವಂಗಂ ೩೭

ಊಡುವ ಪೊಸದಳಿರಲರಂ
ಸೂಡಿರ್ಪಳಿ ಕಂಪನಱಿವ ಸಂಪಗೆ ನಯದಿಂ
ನೋಡುವ ನಿಡುನೆಯ್ದಿಲ್ಮಾ
ತಾಡುವ ತಾವರೆ ವಿರಾಜಿಕುಂ ನೃಪಸತಿಯಾ ೩೮

ಊಡುವ ಪೊಸದಳಿಲರಂ
ಸೂಡಿರ್ಪಳಿ ಕಂಪನಱಿವ ಸಂಪಗೆ ನಯದಿಂ
ನೋಡುವ ನಿಡುನೆಯ್ದಿಲ್ಮಾ
ತಾಡುವ ತಾವರೆವಿರಾಜಿಕುಂ ನೃಪಸತಿಯಾ ೩೮

ಕಲಾ ಪರಿಣತಿ- ಇವುಗಳಿಂದಾಗಿ ಶ್ರೇಷ್ಠನಾದ ಸುಪ್ರತಿಷ್ಠನಿಗೆ ಜಗತ್ತೇ ತಲೆಬಾಗುವಂತಾಯಿತು.

೩೬. ಸುಪ್ರತಿಷ್ಠರಾಜನಿಗೆ ಇನ್ನೊಂದು ಕಣ್ಣು ಮೂಡಿತೆಂಬಂತೆ ಭೂಮಿಗೆ ಭಾಗ್ಯೋದಯ ಬಂದಂತೆ ಸುನಂದಾದೇವಿ ಸುದೃಷ್ಟನೆಂಬ ಮಗನನ್ನು ಹಡೆದಳು.

೩೭. ಕಪಟದ ಎಲೆ, ಮಾಯದ ಹಂಸ ಮಿಥುನ, ತಿಲಕವಿಟ್ಟುಕೊಳ್ಳುವ ಹೊಳೆ, ಕೃತ್ರಿಮವಾದ ಮಳಲದಿಣ್ಣೆ, ಕಣ್ಕಟ್ಟಿನ ಕಮಲನಾಳ, ಮುತ್ತುಗಳನ್ನು ಮುಕ್ಕುಳಿಸುವ ಹವಳ - ಇವುಗಳನ್ನೊಡಗೊಂಡು ಅವಳ ದೇಹ ಮರುಳುಗೊಳಿಸುವುದು (ಇವು ರೂಪಕದಿಂದ ಕ್ರಮವಾಗಿ ಆಕೆಯ ತಲೆ, ಕುಚ, ಹಣೆ, ನಿತಂಬ, ಬಾಸೆ, ಹಾಗೂ ಬಾಯಿಗಳನ್ನು ಸೂಚಿಸುತ್ತವೆ)

೩೮. ಉಣ್ಣುವ ಎಳೆದಳಿರು, ಹೂಮುಡಿವ ದುಂಬಿ, ಕಂಪನ್ನು ತಿಳಿಯಬಲ್ಲ ಸಂಪಗೆ, ನಯವಾಗಿ ನೋಡುವ ನೀಳವಾದ ನೈದಿಲೆ, ಮಾತಾಡುವ ತಾವರೆ - ಇವು ಆ ಅರಸಿಗೆ (ದೇಹದಲ್ಲಿ) ಶೋಭಿಸುವುವು (ಇವು ರೂಪಕದಿಂದ ಕ್ರಮವಾಗಿ ತುಟಿ, ತಲೆಗೂದಲು, ಮೂಗು, ಕಣ್ಣು, ಮುಖಗಳನ್ನು ಸೂಚಿಸುತ್ತವೆ.)

---

೧ ಪಿಡಿ (ಕಾ). ೨ ಳೆ (ಪ). ೩ ವಕ್ಕಿ (ಕಾ), ವಕ್ಕಿ (ಮ). ೪ ಡೆ (ಕಾ). ೫ ಉ (ಕಾ). ೬ ದಂತೆ (ಕ, ಪ).

ಪ್ರಭೆಯಿಂ[1] ಚಿಂತಾಮಣಿ ಕ
ಲ್ಪ ಭೂರುಹಂ ಪುಷ್ಪಮಂಜರಿಯಿನೆಸೆವವೊಲಾ
ತ್ರಿಭುವನ ಭೂಷಣನೆಸೆದಂ
ಶುಭನಂದನೆಯಿಂ ಸುನಂದೆಯಿಂದನವರತಂ ೩೯

ಪಡೆದು ಯಶೋಧರ ಯತಿಪತಿ
ಯಡಿದಳಿರ್ಗಳನೆಱಗಿ ಕೆಯ್ಮೊಳಿಕ್ಕಲ್ ಪಡೆದಾ
ಗಡೆ ಪಂಚಾಶ್ಚರ್ಯಮುಮಂ
ಪಡೆದಂ ಸತ್ಪಾತ್ರದಾನಿ ಪಡೆಯದುದುಂಟೇ ೪೦

ಪಡೆಯಲೆ ಬರ್ಪುದಾ ಪರುಷವೇದಿಯನಿಂದ್ರ ನರೇಂದ್ರ ಲಕ್ಷ್ಮಿಯಂ
ಪಡೆಯಲೆ ಬರ್ಪುದಾರಯೆ ಸುಪಾತ್ರಮನೊಂದನೆ ಯೋಗ್ಯ ಕಾಲದೊಳ್
ಪಡೆಯಲೆ ಬಾರದಲ್ಲದೆಡೆಗೀವವನೇವಡೆದಂ[2] ಸುಪಾತ್ರಮಂ
ಪಡೆದನೆ ವಸ್ತುವಂ ಪಡೆದನಾತನ ಪುಣ್ಯಮೆ ಪುಣ್ಯಕಾರಣಂ ೪೧

ಪಡೆದುಂ ಪಣಮಂ ಪಾತ್ರಂ
ಬಡೆಯದೊಡದು ನಿಷ್ಫಳಂ ಫಳಾರ್ಥಿ[3]ಗೆ ಪಾತ್ರಂ
ಬಡೆವುದೆ ಪುಣ್ಯಂ ಪಣಮಂ
ಪಡೆವುದು ಪುಣ್ಯಮೆ ಪಣಂ ಮಹಾಹಿಗಮಿಲ್ಲಾ ೪೨

೩೯. ಉಜ್ವಲವಾದ ಕಾಂತಿಯಿಂದ ಚಿಂತಾಮಣಿಯೂ ಹೂಗೊಂಚಲಿಂದ ಕಲ್ಪವೃಕ್ಷವೂ ಶೋಭಿಸುವಂತೆ ತ್ರಿಲೋಕಭೂಷಣನಾದ ಆ ರಾಜನು ಶುಭಕುಮಾರನನ್ನು ಹೆತ್ತ ಸುನಂದೆಯೊಡನೆ ಶೋಭಿಸಿದನು.

೪೦. ಆನಂತರ ಯಶೋಧರ ಮುನೀಂದ್ರರಿಗೆ ಪಾತ್ರದಾನಮಾಡಿ ಆದನು ನಮಸ್ಕರಿಸಿದೊಡನೆ ಪಂಚಾಶ್ಚರ್ಯಗಳು ಉಂಟಾದುವು. ಸತ್ಪಾತ್ರರಿಗೆ ದಾನಮಾಡುವವರಿಗೆ ದೊರೆದೆ ಇರುವುದು ಯಾವುದು?

೪೧. ಸ್ಪರ್ಶಮಣಿಯನ್ನು ಪಡೆಯುವುದು ಸಾಧ್ಯವಾದೀತು; ರಾಜರಾಜೇಂದ್ರರ ಐಶ್ವರ್ಯವನ್ನು ಪಡೆಯುವುದೂ ಸಾಧ್ಯವಾದೀತು. ಆದರೆ ಯೋಗ್ಯಕಾಲದಲ್ಲಿ ಸತ್ಪಾತ್ರನನ್ನು ಪಡೆಯುವುದು ಅಸಾಧ್ಯ. ಅಪಾತ್ರರಿಗೆ ದಾನ ಮಾಡಿದರೆ ಏನು ದೊರೆಯುವುದು? ಸತ್ಪಾತ್ರವನ್ನು ಪಡೆದವನೇ ಭಾಗ್ಯವಂತನು. ಆತನ ಪುಣ್ಯವೇ ಪುಣ್ಯ.

೪೨. ಹಣವನ್ನು ಪಡೆದರೂ ಸತ್ಪಾತ್ರನನ್ನು ಪಡೆಯದಿದ್ದರೆ ಆ ಹಣ ನಿಷ್ಫಲವಾಗುವುದು. ಸತ್ಫಲವನ್ನು ಬಯಸುವವನಿಗೆ ಸತ್ಪಾತ್ರನನ್ನು ಪಡೆಯುವುದೇ ಪುಣ್ಯ 'ಪಣ' (ಹಣ)ವನ್ನು ಪಡೆದಿರುವುದು ಪುಣ್ಯವೇ? ಮಹಾಸರ್ಪಕ್ಕೂ 'ಪಣ' (ಹೆಡೆ) ಇರುವುದಿಲ್ಲವೆ?

---

೧ ಯಂ (ಕ, ಪ). ೨ ನೆಂ (ಕ). ೩ ರ್ಥಿ (ಕ).

ತಡೆಯದೆ ಮುಗಿಲ್ಗೆ ಕುಡುವುದು
ಕಡಲಿತರ ಜನಕ್ಕೆ ಕೆಯ್ವೆಯಪ್ಪುದು ಕುಡಲು
ಳ್ಕೊಡೆ ಪಾತ್ರಮಱಿದು ಮಾಣದೆ
ಕುಡುವುದಪಾತ್ರಕ್ಕೆ ಕೊಟ್ಟೊಡೇಂ ಪುರುಳುಂಟೇ ೪೩

ಸ್ವಾತಿಯ ಮುಗಿಲ್ಗೆ ತಾನಿ
ತ್ತಾ ತೋಯಂ ರತ್ನಮಾಗೆ ರತ್ನಾಕರಮಾ
ಯ್ತಾ ತೋಯದಿನೆಡೆಯಱಿಯದೆ
ಪಾತಾಳಕ್ಕಿತ್ತ ತೋಯಮೇನಾಯ್ತಱಿಯೆಂ[೧] ೪೪

ದೇವರ್ಗಲ್ಲದೆ[೨] ಕಳೆಯಂ
ಜೈವಾತ್ರಕನೀಯದಂತಿರುತ್ತಮ ಪಾತ್ರ
ಕ್ಕೀವುದು ಧನಮಂ ಸೌಖ್ಯಮ
ನೀವುದದುಂ ತವೆಯದಾ ಯುಗಾಂತಂಬರೆಗಂ ೪೫

ತರಳ ಜಳಬಿಂದು ಮೌಕ್ತಿಕ
ಭರಮಪ್ಪವೊಲುದಧಿಶುಕ್ತಿಪತಿತಂ ನೀರುಂ
ಪಿರಿದಪ್ಪ ಪುಣ್ಯಮಕ್ಕುಂ
ಪರಮ ತಪೋಧರನರ ಪಾಣಿಸಂಪುಟಪತಿತಂ ೪೬

ಕುಡುವಾತನರ್ಥಿ[೩]ಯಪ್ಪಂ
ತೊಡರದೆ ಕೊಳ್ವಾತನುತ್ತಮ ಪ್ರಭುವಪ್ಪಂ
ಧರ್ಮಪಾತ್ರಂ ಪಡೆದುನ್ನತಿಯಂ
ಕಡೆಗಣಿಸು ಸುರಾದ್ರಿಯುಂ ಪಡೆದಪುದೇ ೪೭

೪೩. ಮೋಡಗಳಿಗೆ ತನ್ನ ನೀರನ್ನು ಕೊಡುವ ಕಡಲು ಇತರ ಜನಕ್ಕೆ ಅರುಚಿಯಾಗಿರುವುದು. (ದಾನವಾಗಿ) ಕೊಡುವುದಕ್ಕೆ ಇದ್ದರೆ ಯೋಗ್ಯರಾದವರಿಗೆ ಕೊಡಬೇಕು. ಅಪಾತ್ರಕ್ಕೆ ಕೊಟ್ಟರೆ, ಅದರಿಂದೇನಾದರೂ ಪ್ರಯೋಜನವುಂಟೆ?

೪೪. ಸ್ವಾತಿಯ ಮುಗಿಲಿಗೆ ತಾನು ಕೊಟ್ಟ ನೀರಿನಿಂದ ರತ್ನವಾಗಿ, ಕಡಲು ರತ್ನಾಕರವೆನಿಸಿತು. ಸ್ಥಾನಾಸ್ಥಾನವೆನ್ನದೆ ಪಾತಾಳಕ್ಕೆ ಕೊಟ್ಟ ನೀರು ಏನಾಯಿತೋ ನಾನರಿಯೆ.

೪೫. ಚಂದ್ರನು ತನ್ನ ಅಮೃತವನ್ನು ದೇವತೆಗಳಿಗಲ್ಲದೆ ಇತರರಿಗೆ ಕೊಡಲಾರನು. ಅದೇ ರೀತಿಯಾಗಿ ಉತ್ತಮ ಪಾತ್ರನಿಗೆ ಧನವನ್ನು ದಾನಮಾಡಬೇಕು. ಆ ದಾನವು ದೊರಕಿಸಿ ಕೊಡುವ ಸುಖ ಯುಗಾಂತದವರೆಗೂ ಸವೆಯಲಾರದು.

೪೬. ಚಂಚಲವಾದ ಒಂದು ನೀರಿನ ಹನಿ ಕಡಲೊಳಗಿನ ಒಂದು ಚಿಪ್ಪಿನಲ್ಲಿ ಬಿದ್ದು ಮುತ್ತಾಗುವುದು. ಪರಮ ತಪಸ್ವಿಗಳು ನೀಡಿದ ಕೈಯಲ್ಲಿ ಬರಿನೀರನ್ನೇ ಇಕ್ಕಿದರೂ ಅದು ಮಹಾ ಪುಣ್ಯವನ್ನು ಗಳಿಸಿಕೊಡುತ್ತದೆ.

೪೭. ದಾನ ಕೊಡುವವನು (ಫಲವನ್ನು ಬಯಸುವ) ಯಾಚಕನಾಗಿರುತ್ತಾನೆ;

---

೧ ಯಾ (ಕ್ರ. ೨ ದ (ಕ, ಮ). ೩ ಳ್ತಿ (ಕಾ).

ಓವಿ ಫ[೧]ಳತರುಗೆ ನೀರ್ಗಳ
ನೀವುದುಮಂ[೨] [೩]ಬ್ಬಿತು[೩] ಬಿತ್ತನೊಲವಿಂ ಬೆಳೆಗೆ
ಯ್ದೀವುದುಮಂ ಸತ್ಪಾತ್ರ
ಕ್ಕೀವುದುಮಂ ದಾನಮೆಂಬ [೪]ನಾಣ್ಚಿ[೪]ಕೆಯುಂಟೇ ೪೮

ಬಿಡು ಮುತ್ತಂ ಮಾಣಿಕಮಂ
[೫]ಪಿಡಿ[೫]ದೊಡ್ಡಿದ ಯತಿಯ ಕೆಯ್ಯೊಳಿಕ್ಕಿದಪರೆಯೊ
ಪ್ಪಿಡಿ ಕೂಳನಿಕ್ಕಿ ಸಗ್ಗಂ
ಬಡೆಯದ ನರನೆಗ್ಗನಲ್ತೆ ಭುವನಾಭರಣಾ ೪೯

ವ॥ ಎಂದು ಪೇಳ್ದ ಧರ್ಮೋಪಾಧ್ಯಾಯರ ವಚನಾಮೃತದಿಂ ಮೂಡಿ ಮಡಲ್ತ ದಾನಬುದ್ಧಿ [೬]ಕಲ್ಪಕುಜಂ[೬] ಸತ್ಪಾತ್ರಿ[೭] ಪೋಷಣಮಾಗೆ ಧರ್ಮವಿಜಯಿಯಾಗಿ ರಾಜ್ಯಂಗೆಯ್ಯುತ್ತುಮಿರೆ

ಅತಿಸಂಗ್ರಾಹ್ಯಮೊ ಮಲ್ಲಿಕಾಪರಿಮಳಂ ಮಾಕಂದದಾಮೋದಮೊ
ಳ್ಳಿತೊ ವಾಸಂತಿಯ ಕಂಪು ಲೇಸೊ ಸುರಭಿ ಶ್ರೀಸೌರಭಂ ಯೋಗ್ಯಮೋ
ಸ್ತುತಮೋ ಪಾಟಳಗಂಧಮೆಂದು ಪಿಡಿಯಲ್ಬರ್ಪಂತೆ ಬಂದತ್ತು ಪಂ
ಡಿತಶೀಳಂ ಮಳಯಾನಿಳಂ ಮಳಯಜಾಮೋದೈಕ ಸಂಸ[೮]ಕ್ತನೇ ೫೦

ಅದನ್ನು ಸ್ವೀಕರಿಸುವವನು (ಆ ಫಲವನ್ನು ದೊರಕಿಸಿಕೊಡುವ) ಮಹಾಪ್ರಭುವಾಗುತ್ತಾನೆ. ಧರ್ಮಪಾತ್ರನು ಪಡೆಯುವ ಉನ್ನತಿಯನ್ನು ಮೀರಿ ಮೇರುಗಿರಿಯಾದರೂ ಪಡೆಯುವುದೆ?

೪೮. ಫಲಬಿಡುವ ಮರಕ್ಕೆ ನೀರೂಡುವುದಕ್ಕೂ ರಕ್ಷಿಸಿಟ್ಟಕೊಂಡ ಬೀಜವನ್ನು ಬೆಳೆಯುವ ಭೂಮಿಯಲ್ಲಿ ಬಿತ್ತುವುದಕ್ಕೂ ಸತ್ಪಾತ್ರದ ಕೈಯಲ್ಲಿ ನೀಡುವುದಕ್ಕೂ ದಾನವೆಂಬ ನಾಚಿಕೆಯುಂಟೆ?

೪೯. ಯತಿಯೊಬ್ಬನು ಬಂದು ಕೈಯೊಡ್ಡಿದಾಗ ಅವನ ಕೈಯಲ್ಲೇನು ಮುತ್ತುರತ್ನಗಳನ್ನು ಇಕ್ಕುವರೆ? ಒಂದ ಹಿಡಿ ಅನ್ನವನ್ನಿಕ್ಕಿ ಸ್ವರ್ಗವನ್ನು ಗಳಿಸಿಕೊಳ್ಳಲೊಲ್ಲದ ಮನುಷ್ಯನು ಮೂರ್ಖನಲ್ಲವೆ?

ವ॥ ಹೀಗೆಂದು ತಿಳಿಸಿದ ಧರ್ಮಗುರುಗಳ ವಚನಾಮೃತದಿಂದ ಚಿಗುರಿದ ಕಲ್ಪವೃಕ್ಷದಂತಾದ ರಾಜನು ಸತ್ಪಾತ್ರ ಪೋಷಕನಾಗಿ, ಧರ್ಮವಿಜಯಿಯಾಗಿ ರಾಜ್ಯಭಾರ ಮಾಡುತ್ತಿರಲಾಗಿ-

೫೦. ಶೇಖರಣೆ ಮಾಡಿಡಲು ಮಲ್ಲಿಗೆಯ ಪರಿಮಳವು ಅತ್ಯುತ್ತಮವಾದುದೊ, ಮಾವಿಮ ಸುಗಂಧ ಲೇಸಾದುದೊ ವಾಸಂತಿಯ ಸುವಾಸನೆ ಉತ್ತಮವೊ ಸಂಪಗೆಯ ಸೌಸವ ಯೋಗವೊ ಪಾದರಿಯ ಪರಿಮಳ ಸ್ತುತ್ಯವಾದುದೊ ಎಂದು ಅವುಗಳನ್ನು ಹಿಡಿಹಿಡಿದು ನೋಡುತ್ತ ಬರುವಂತೆ ಮಲಯಮಾರುತವು ಬಂದಿತು. ಪಂಡಿತನಂತೆ ಸಕಲವನ್ನೂ ತಿಳಿಯುವ ಆ ಗಾಳಿ ಶ್ರೀಗಂಧದ ವಾಸನೆಯೊಂದರಲ್ಲಿಯೆ ತೊಡಗಿರಬಲ್ಲುದೆ?

---

೧ ಪು (ಕಾ). ೨ ಮುಂ (ಕಾ). ೩ ಬೆಯ್ಯು (ಕ), ೪ ನಾಚಿ (ಕ), ನಾಂಚಿ (ಮ). ೫ ಬಿಡ (ಕಾ). ೬. ಕಳ್ಪಕಾಜಂ (ಮ). ೭ ತ್ರ (ಕ, ಪ). ೮ ದಿ (ಮ).

ವ|| ಆ ಬಂದ [1]ಮಂದ ಮಳಯಾ[1]ನಿಳನನಿದಿರ್ಗೊಳಲೆಂದೊಂದಿರುಳಾ ಮಾನವೇಂದ್ರನಿಂದ್ರ ವಿಮಾನಮನೇಱುವುದನನುಕರಿಸುವಂತೆ ಕರುಮಾಡಮನೇಱಿ ಪಾಸಿನ ಪೊರೆಯೊಳ್ಪು [2]ಟ್ಟಿಪುರ್ದನಭಿನಯಿಸುವಂತೆ ಪರಾಂಗಣದೊಳ್ ಪಚ್ಚವಡಿಸಿರ್ದಮೃತಾರ್ಣವ ತರಂಗಸ್ಥೂಲಹಂಸತೂಳತಳ್ಪ[3]ತಳ[3]ದೊಳ್ ಮಗ್ನ ಮೂರ್ತಿಯಾಗಿ ಕುಳ್ಳಿರ್ದಬಲೆಯ ಕಣ್ಣ ಬೆಳಗಿಂಗೆ ಬೆದಱಿ ಕಟ್ತಲೆಯ [4]ಮೊಗ್ಗರಂ ಮಗುಳ್ದು[4] ಮೂದಲಿಸಿ ಕವಿವಂತೆ ಕನಕಕೇತಕೀ ದೀರ್ಘದಳದಾಮಾನುಲೇಪನ ಕರ್ಪೂರ ತಾಂಬೂಲ ಬಹಳ ಪರಿಮಳಕ್ಕೆ ಪರಿತಂದ ಮುಸುಱಿ ಮುತ್ತುವ [5]ಮತ್ತ[5]ಮಧುರಕನಿಕರಮಂ ಲೀಲಾಕಮಳದಿಂ [6]ಸೋದು[6] ಸೇದೆವಡುವ ಸುನಂದಾದೇವಿಯ ಮುದ್ದುಮೊಗಮಂ ನಸುನಗೆವೆರಸು ನೋಡುತ್ತುಮಿರೆ

ಬಿರಿವನ್ನಂ ತಮಮೆಂಬ ನೀಳಗಿರಿಯಂ ತಾರಾಸಹಸ್ರಾಕ್ಷನಂ
ಬರ[7]ಗೋತ್ರಾಂತಕನಿಟ್ಟ ವಜ್ರಮೆನಸುಂ ಬೀೞ್ವಂತೆ ಕ[8]ಣ್ಮುಳ್ಕೆ[8] ಕ
ಣ್ಮಿರಲಂ ಪೆಣ್ಬಡೆ ಮುಚ್ಚೆ ಭೂಪನ[9]ರಸೆಂಬೊಳ್ವಲ್ಲ ಮೇಲೊಂದು ದ
ಳ್ಳುರಿ ಬೀೞ್ವಂತೆವೊಲುಳ್ಕು ಬಿರ್ದುದು ನೃಪಂ ಬೆಂಬೀೞ್ದ ನಿರ್ವೇಗದಿಂ ೫೧

ಅದಟಲೆವ ಕೊಳ್ಳಿಯಂತು
[10]ಳ್ಕದ[10] ಕೊಳ್ಳಿ ಕನಲ್ದು ಬಿಟ್ದು [11]ದಂ ಕಂಡು ಕರಂ
ಬೆದಱಿ ಮಿಗೆ ಕೊಳ್ಳಿಯಿಂ[12] ಕು
ತ್ತಿದವೋಲ್ಮುಱುಗಿತ್ತು ಚಿತ್ತಮನವನೀಪತಿಯಾ ೫೨

ವ|| ಹಾಗೆ ಬಂದ ಮಲಯಾನಿಲವನ್ನು ಇದಿರುಗೊಳ್ಳಲೆಂದು ಆ ರಾಜೇಂದ್ರನು, ಇಂದ್ರನು ವಿಮಾನವೇರುವಂತೆ ಉಪ್ಪರಿಗೆಯನ್ನೇರಿ, ಸ್ವರ್ಗದ ಹಾಸಿಗೆಯ ಮೇಲೊರಗುವುದನ್ನು ಅನುಕರಿಸುವಂತೆ ಉಪ್ಪರಿಗೆಯ ಅಂಗಳದಲ್ಲಿ ಸಿದ್ಧಪಡಿಸಿದ್ದ ಅಮೃತಸಮುದ್ರದ ತರಂಗ ಸದೃಶವಾದ ಹಂಸತೂಲತಲ್ಪದಲ್ಲಿ ಸುಖವಾಗಿ ಕುಳಿತು, ನಲ್ಲೆಯ ಕಣ್ಣಕಾಂತಿಗೆ ಬೆದರಿ ಕತ್ತಲೆಯ ದಂಡು ಹಿಮ್ಮೆಟ್ಟಿದ್ದರೂ ಮತ್ತೆ ಹುರುಪಿನಿಂದ ಬಂದು ಕವಿಯಿತೋ ಏನೊ ಎಂಬಂತೆ ಹೊಂಗೇದಗೆಯ ನೀಳವಾದ ಗರಿಗಳ ಮಾಲೆಯ, ಅನುಲೇಪನ ಗಂಧದ ಹಾಗೂ ಕರ್ಪೂರ ತಾಂಬೂಲದ ಪರಿಮಳಕ್ಕೆ ಹಾತೊರೆದು ಮುಸುರಿಕೊಳ್ಳುತ್ತಿರುವ ಸೊಕ್ಕುದುಂಬಿಗಳನ್ನು ತನ್ನ ಲೀಲಾ ಕಮಲದಿಂದ ಬೀಸಿ ಬೀಸಿ ಓಡಿಸುವುದರಲ್ಲಿಯ ಆಯಾಸ ಪಡುವ ಸುನಂದಾದೇವಿಯ ಮುದ್ದುಮುಖವನ್ನು ನಸುನಗೆಯಿಂದ ನೋಡುತ್ತ ಇರಲಾಗಿ-

೫೧. ನಕ್ಷತ್ರಗಳೆ ತನ್ನ ಸಹಸ್ರಕಣ್ಣುಗಳಾಗಿರುವ ಆಕಾಶವೆಂಬ ಇಂದ್ರನು ಕತ್ತಲೆಯೆಂಬ ನೀಲಗಿರಿಯು ಸೀಳಿ ಹೋಗುವಂತೆ ತನ್ನ ವಜ್ರಾಯುಧವನ್ನು ಬೀಸಿದನೊ ಏನೊ ಎಂಬಂತೆ ಉಲ್ಕೆಯೊಂದು ಕಣ್ಣುಕ್ಕುತ್ತ ಬಿದ್ದಿತು. ಹೆಣ್ಣುಗಳೆಲ್ಲ ಗಾಬರಿಯಿಂದ ಕಣ್ಮುಚ್ಚಿಕೊಳ್ಳಲಾಗಿ, ರಾಜನ ಅರಸುತನವೆಂಬ ಒಣಹುಲ್ಲಿನ ಮೇಲೊಂದು ದಳ್ಳುರಿ ಬಂದು ಬಿದ್ದಂತೆ ಆ ಉಲ್ಕೆ ಬೀಳಲಾಗಿ ಅರಸು ಒಮ್ಮೆಲೆ ವೈರಾಗ್ಯಕ್ಕೆ ಶರಣಾದನು.

೫೨. ಅಬ್ಬರಿಸುವ ಕೊಳ್ಳಿಯಂತೆ ಉಲ್ಕೆ ಭಯಾನಕವಾಗಿ ಬಿದ್ದುದನ್ನು ಕಂಡು

---

೧ ಮಂದಾ (ಕಾ). ೨ ಳ್ಟ (ಪ) ೩ X (ಕ) ೪ X (ಕಾ) ೫ X (ಕಾ). ೬. ಸೋಂದು (ಕ) ೭ ರೆ (ಕ) ೮ ಣ್ಣುಗ್ಗೆ (ಮ, ಪ, ಕ) ೯ ವ (ಕ). ೧೦ ಳ್ಕಿನ (ಕಾ) ೧೧ ಟ್ಟು (ಕಾ) ೧೨ ಯಂ (ಕ, ಮ, ಪ)

ವ|| * ಎಂದು ತನ್ನೊಳಿಂತೆಂದಂ

ಏಕುಳ್ಕಂ[೧] ಪೊಲ್ಲೆಂಬುದೊ[೨]
ಲೋಕಂ ಪೋಯ್ತೆನ್ನ ಮನದ ಮೋಹಧ್ವಾಂತಾ
ನೀಕಂ ಪ್ರಯೋಜನಾರ್ಥಾ
ಳೋಕನಮುಳ್ಕಾ ಪ್ರದೀಪದಿಂದಾಯ್ತೀ[೩]ಗಳ್ ೫೩

ತೇಜಂ ಬಾಡಿಸುತಿರ್ಪ ರೇಖೆಯೊ ಚಿರಂ ಬಾಳ್ವಾಸೆಯಿಂದೀ ಮಹಾ
ರಾಜರ್ನೋಡುವ ತೀವ್ರ ತೇಜದ ಮಹಾ ಸಪ್ತಾರ್ಚಿಗಂಡುಂ ಮಹಾ
ತೇಜಂ ಭಾಸ್ಕರನಸ್ತದೊಳ್ಕಿಡೆವುದುಂ ಕಂಡುಂ ಮಹೋಳ್ಕಂ[೪] ಜ್ವಳ
ತ್ತೇಜಂ ಬೀೞ್ವಿ [೫]ದಂಗಂ[೫]ಡುಮುದ್ಧ[೬]ತ ಮಹಾ ಮೋಹಾಂಧಕಾರಾಂಧಕರ್ ೫೪

ಪುಟ್ಟುಂಗುರುಡಂ ಕಾಣ್ಬನೆ
ಬಟ್ಟೆಯನಮಳಾಕ್ಷನಂತೆ ಸದ್ದೃಷ್ಟಿಯೆ ಬಾ
ಯ್ಪುಟ್ಟದೆ ಕಾಣ್ಗುಂ ಧರ್ಮಗದ
ಬಟ್ಟೆಯ ನೆಱೆ ಕಾಣಲಱಿವನಕ್ಕು ಮೆಯಂಧಂ ೫೫

ವ|| ಆ ಪ್ರಸ್ತಾವದೊಳ್

ತುಂಬ ಬೆದರಿ, ಉರಿಗೊಳ್ಳಿಯೆ ತನ್ನನ್ನು ತಿವಿಯಿತೊ ಏನೊ ಎಂಬಂತೆ ರಾಜನ ಚಿತ್ತವು ಮರುಗಿತು.

ವ|| ಆಗ ಅವನ ತನ್ನಲ್ಲಿಯ ಹೀಗೆಂದುಕೊಂಡನು -

೫೩. "ಉಲ್ಕಾಪಾತವನ್ನು ಕೇಡೆಂದೇಕೆ ಜನರು ಭಾವಿಸುವರೊ! ಈ ಉಲ್ಕಾಪಾತ ದಿಂದ ದೀಪ ಹೊತ್ತಿಸಿದಂತಾಗಿ ನನ್ನ ಮೋಹದ ಕತ್ತಲೆಯೆಲ್ಲವೂ ಹಿಂಗಿಹೋಯಿತು.

೫೪. ತೀವ್ರ ತೇಜಸ್ಸಿನ ಮಹಾ ಅಗ್ನಿಯೂ ಕೂಡ ಆರಿಹೋಗುತ್ತದೆ; ಮಹಾ ತೇಜಸ್ವಿಯಾದ ಸೂರ್ಯನು ಅಸ್ತವಾಗುತ್ತಾನೆ. ಅತ್ಯುಜ್ವಲವಾದ ಉಲ್ಕೆಯ ಅತ್ಯಧಿಕ ತೇಜವೂ ಕೂಡ ಬಯಲಾಗುತ್ತದೆ. ಇವೆಲ್ಲವನ್ನು ಕಣ್ಣಿಂಡು ಕೂಡ ಮಹಾರಾಜರೆಂಬವರು ತಾವು ಚಿರವಾಗಿ ಬಾಳಬೇಕೆಂದು ಬಯಸುವರಲ್ಲವೆ? ಅವರು ಮೋಹಾಂಧಕಾರದ ಆರಾಧಕರು. ತೇಜವೆಂಬುದು ಆರಿಹೋಗುವ ಬದುಕೆಂದು ಅವರಿಗೆ ತಿಳಿಯಬೇಡವೆ?

೫೫. ಶುದ್ಧದೃಷ್ಟಿಯಿದ್ದವನು ಕಾಣುವಂತೆ ಹುಟ್ಟುಗುರುಡನೇನಾದರೂ ಹಾದಿಯನ್ನು ಕಾಣಬಲ್ಲನೆ? ಸದೃಷ್ಟಿಯುಳ್ಳವನಿಗೆ ಧರ್ಮದ ಮಾರ್ಗ ಸರಿಯಾಗಿ ಕಾಣಬಲ್ಲುದು. ಅಜ್ಞಾನ ದಿಂದ ಕಂಗೆಟ್ಟವನಿಗೆ ಅದು ಕಾಣಲಾರದು"

ವ|| ಹೀಗೆಂದು ಭಾವಿಸುವ ಸಮಯದಲ್ಲಿ -

* ಈ ವಚನವು ಕಾ ಪ್ರತಿಯಲ್ಲಿಲ್ಲ. ೧ ಳ್ಕುಂ (ಕಾ). ೨ ದ (ಕಾ). ೩ ಯ್ತಾ (ಕ). ೪ ಳ್ಕ (ಕಾ). ೫ ದ ಕಂ (ಕ), ದ್ಗ (ಪ). ೬ ದ್ಗ (ಪ).

ಕಂದಿಸೆ ಭಾಮಂಡಲ ರುಚಿ
ಸಂದೋಹಂ ಮೂಡುತಿರ್ಪ ರವಿಮಂಡಲಮೆನೆ
ಬಂದುದು ತನ್ನಗರಕ್ಕೆ ಸು
ಮಂದಿರ ಜಿನಪತಿಯ ಸಮವಸೃತಿ ಜಿತದುರಿತಂ ೫೬

ವ|| ಸುಪ್ರತಿಷ್ಠ[೧] ಚಾದಗೆಯಭಿನ್ನ [೨]ಘನ[೨]ಧ್ವನಿಯಿಂ[೩] ಪ್ರಾವೃಡಾಗಮನಮನಱೆವಂತೆ ದೇವದುಂದುಭಿ ಧ್ವನಿಯಿನಱೆದಱಲ್ಕೊಂಡನ ಮೇಲೆ ತೊಱೆ[೩]ಬಂದತ್ತೆಂದು ಸಂತಸಂಬಟ್ಟು ಪಾಪಪ್ರತಿವ್ಯೂಹಭೀತಿಯಿಂ ಸಮವಸರಣ ದುರ್ಗಮಂ ಶರಣ್ಬೊಕ್ಕುಂ

ಎನಸುಂ ಭಿನ್ನ ಘಟಕ್ಕೆ ತೂಂತಿಡುವುವೇ ನದ್ಯಾದಿಗಳ್ ಭಿನ್ನ ಭಾ
ಜನವಾ[೪]ದಂದಱೆಯೆಂ ನಿಜಾಮೃತಮಯ ಶ್ರೀಧರ್ಮತೀರ್ಥಕ್ಕೆಬಂ
[೫]ದಿನಿಸುಂ[೫] ಸದ್ಗುಣಭಾಜನಂ ಸುಲಭ[೬] ಪುಣ್ಯಾಂಬುವಂ ತನ್ನ ಕೊ
ಳ್ವನಿತಂ[೭] ಕೊಳ್ಳದೆ ಪೋದ ಕಾಲವೊಳವೇ ನಿ[೮]ರ್ವಾದ[೮] ಬೋಧಾಂಬುಧೀ ೫೭

ವ|| ಎಂದು ದೇವಾಧಿದೇವನಂ ಸ್ತುತಿಯಿಸಿ

ಆ ಜಿನನ ದಿವ್ಯಪಾದಪ
ಯೋಜಂತಿಕದಲ್ಲಿ ದೀಕ್ಷೆಗೊಂಡನಿಳೇಶಂ
ಬೀಜಂಗೊಳ್ವಂತಿರೆ ವಿ
ಭ್ರಾಜಿಸುವಾರ್ಹಂತ್ಯ ವಿಪುಳಫಳಮಂ ಪಡೆಯಲ್ ೫೮

೫೬. ಆಕಾಶಮಂಡಲದ ಕತ್ತಲೆಯನ್ನು ಹಿಮ್ಮೆಟ್ಟಿಸಿ ಮೂಡುತ್ತಿರುವ ಸೂರ್ಯನಂತೆ ಆ ನಗರಕ್ಕೆ ಸುಮಂದಿರ ಜಿನನ ಸಮವಸರಣವು ಬಂದಿಳಿಯಿತು.

ವ|| ಮೋಡಗಳ ಗರ್ಜನೆಯನ್ನು ಕೇಳಿ ಮಳೆಗಾಲ ಬಂತೆಂದು ಚಾತಕಪಕ್ಷಿ ತಿಳಿದುಕೊಳ್ಳುವಂತೆ, ರಾಜನು ದೇವದುಂದುಭಿಗಳ ಧ್ವನಿಯನ್ನು ಕೇಳಿ ಸಮವಸರಣಾಗಮನ ವನ್ನು ಅರಿತುಕೊಂಡು, ನೀರಡಿಸಿದವನ ಮೇಲೆ ನದಿಯೆ ಬಂದು ಹಾಯಿತೆಂದು ಸಂತೋಷಬಟ್ಟು, ಪಾಪವೆಂಬ ವೈರಿಸಮೂಹದ ಭೀತಿಯಿಂದ ಸಮವಸರಣವೆಂಬ ದುರ್ಗದ ಒಳಗೆ ಸೇರಿಕೊಂಡು-

೫೭. "ನಿಶ್ಚಿತಜ್ಞಾನ ಸಮುದ್ರನೇ, ತುಂಬ ತೂತಾಗಿ ಹೋಗಿರುವ ಗಡಗೆಯನ್ನು ಎಷ್ಟು ನದಿಗಳಾದರೂ ತುಂಬಬಲ್ಲುದೆ? ಭಿನ್ನ ಭಾಜನದಿಂದೇನು ಪ್ರಯೋಜನ? ನಿನ್ನ ಅಮೃತಮಯವಾದ ಪೂಜ್ಯ ಧರ್ಮತೀರ್ಥದ ಸನ್ನಿಧಿಗೆ ಬಂದ ಮೇಲೆ ಗಟ್ಟಿಮುಟ್ಟಾದ ಗಡಗೆಯಂತೆ ಸದ್ಗುಣಿಯಾದವನು ಪುಣ್ಯದ ಜಲವನ್ನು ತನ್ನಲ್ಲಿ ಹಿಡಿಸುವಷ್ಟು ತುಂಬಿಕೊಳ್ಳದೆ ಹೋದುದುಂಟೆ?"

ವ|| ಎಂದು ದೇವಾಧಿದೇವನನ್ನು ಸ್ತುತಿಸಿದನು.

೫೮. ಉಜ್ವಲವಾದ ಅರ್ಹಂತ್ಯವೆಂಬ ಶ್ರೇಷ್ಠ ಫಲವನ್ನು ಬೆಳೆದುಕೊಳ್ಳುವುದಕ್ಕೆ ಬಿತ್ತನೆಯ ಬೀಜವನ್ನು ಸ್ವೀಕರಿಸುವಂತೆ, ಆ ಜಿನನ ಪಾದಸನ್ನಿಧಿಯಲ್ಲಿ ರಾಜನು ತಪೋ ದೀಕ್ಷೆಯನ್ನು ಕೈಕೊಂಡನು.

---

೧ ಷ್ಠಾ (ಕ), ಷ್ಠು ಷ್ಟಾ (ಪ). ೨ ಣ (ಕಾ). ೩ ಯಂ (ಕಾ). ೪ ವೋ (ಕ, ಮ). ವಂ (ಪ). ೫ ದಿನಿಸಂ (ಪ). ದರಸಂ (ಕಾ, ಮ). ೬ ನುಂ (ಕ, ಪ). ೭ ತುಂ (ಕ). ೮ ರ್ವ್ಯಾಡ (ಕಾ).

ವ್ಯಾಲೋಲರಾಜ್ಯ ವಿಭವ ವಿ
ಶಾಲ ವಿಭೂಷಣಕಳಾಪಮಂ ಕಳೆದೊಲವಿಂ
ದೋಲಾಡುತಿರ್ದನುಪಶಮ
ಲೀಲಾರಸದೊಳ್ ಸರಸ್ವತೀ ಶೃಂಗಾರಂ ೫೯

ವ॥ ಆ ತಪೋಧನರ ತಪೋರಾಜ್ಯಯೋಗ್ಯಕ್ಕೆ ಯೋಗಿಯಾಗಿ

ನಲಿದು ನವಿಲ್ [೧]ಚಗು[೧]ರ್ತುದು ಪಿಕಧ್ವನಿ ಪಣ್ತುದು ಮಿಂಚು ಕಣ್ಗಳೊಳ್
ಮೊಳೆತುದು ಶಕ್ರಚಾಪಲತೆ ಪೊಣ್ಮೆ ಪಸುರ್ತುದು ಮುಗ್ಧಚಾತಕಂ
ಗಳ [೨]ಸಿತ[೨]ಚಂಚುವುಳ್ಳಲರ್ದುದಂಬರಮೆಂಬ ತಮಾಳಮೀಗಳೀ
ಗಳೆ ಮುಗಿಲಂ ತಳಿರ್ತುದೆಲೆ ತೀಡಿದುದಕ್ಕುಮೆ ಪಶ್ಚಿಮಾನಿಳಂ ೬೦

ಸಿಡಿಲ ಸಱೆ ಮೊಱಗುಗಳ ಮೊಱೆ
ಕುಡುಮಿಂಚಿನ [೩]ಸೋನೆ[೩]ಯಾಲಿಗಳ ಬೆಜ್ಸಿ[೪]ರಿಗಳ್
ಬಿಡ[೫]ದ ರಜನಿ[೫]ಗಳ [೬]ಪನಿಯೊಳ್[೬]
ಮಿಡುಕದೆ ಮರಮೊದಲೊಳಿರ್ದನಿರ್ಪವೊಲಚಳಂ ೬೧

ವ॥ ಆ ಘನಾಗಮದೊಳ್

ಶಾಳಿಯ ಕಂಪನೊಟ್ಟಿ ನಳಿನಂಗಳನಳ್ಕಿಸಿ ಬೆಳ್ಮುಗಿಲ್ಗಳಂ
ತೂಳಮನೆತ್ತುವಂತೆ[೭]ಳೆದು ಸೋಗೆಯ ಹೀಲಿಯ ಬೇರನೆತ್ತಿ ಹಂ
ಸಾಳಿಯ ತುಪ್ಪುಳಂ ತುಟಿದು ಪಚ್ಚಿಮದಿಂ ಬಡವಾಗಿ ಬರ್ಪ ಮೇ[೮]
[೯]ಘಾಳಿಯನೊತ್ತಿ ತೀಡಿದುದು ಮೂಡಣ ಗಾಳಿ ಹಿಮಪ್ರ [ವೇ[೧೦]]ಶದೊಳ್ ೬೨

೫೯. ಸರಸ್ವತಿಗೇ ಅಲಂಕಾರವೆನಸುವ ಆರಾಜನು ರಾಜ್ಯವೈಭವವನ್ನೂ, ಆಭರಣಾದಿಗಳನ್ನೂ ವಿಸರ್ಜಿಸಿ, ಕರ್ಮೋಪಶಮದ ಸಂತೋಷದಲ್ಲಿ ಓಲಾಡುತ್ತಿದ್ದನು.

ವ॥ ಆ ತಪಸ್ವಿಗಳ ತಪೋರಾಜ್ಯದಲ್ಲಿ ಯೋಗಿಯಾಗಿ ಆತನು ಇರುವಾಗ -

೬೦. ನವಿಲು ಉತ್ಸಾಹದಿಂದ ಕುಣಿಯಿತು. ಕೋಗಿಲೆಯ ದನಿ ಹಣ್ಣಾಯಿತು; ಮಿಂಚು ಕಣ್ಣಲ್ಲಿ ಹೊಳೆಯಿತು; ಕಾಮನ ಬಿಲ್ಲು ಮೂಡಿತು; ಮುಗ್ಧ ಚಾತಕ ಪಕ್ಷಿಗಳ ಬಿಳಿಯ ಕೊಕ್ಕುಗಳು ಅರಳಿದುವು, ಆಕಾಶವೆಂಬ ಹೊಂಗೆಮರದಲ್ಲಿ ಇದೀಗ ಮೋಡಗಳೆಂಬ ತಳಿರು ಮೂಡುತ್ತಿದೆ. ಪಡುವಣದ ಗಾಳಿ ಬೀಸಿ ಬಂದಿರಲೆಬೇಕು.

೬೧. ಸಿಡಿಲ ಮಳೆ, ಗುಡುಗಿನ ಅಬ್ಬರ, ಕುಡಿಮಿಂಚಿನ ಸೋನೆ, ಆಲಿಕಲ್ಲುಗಳ ಸುರಿಮಳೆಯಿಂದ ಕತ್ತಲೆಯಿಡಿದ ಸತತ ಧಾರೆ ಸುರಿಯುತ್ತಿದ್ದರೂ ಆ ಯೋಗಿಯು ಮರದಡಿಯಲ್ಲಿ ಬೆಟ್ಟದಂತೆ ನಿಶ್ಚಲವಾಗಿ ನಿಂತಿದ್ದನು.

ವ॥ ಹೀಗೆ ಆ ಮಳೆಗಾಲದಲ್ಲಿಯೂ -

೬೨. (ಗಂಧ) ಶಾಲಿಯ ಪರಿಮಳನ್ನು ಒಟ್ಟಿಕೊಂಡು, ತಾವರೆಗಳನ್ನು ಹಿಂಸಿಸಿ,

---

೧ ಜಗು (ಕ). ಜಗ (ಪ). ೨ ಚಳ (ಕಾ), ೩ ಸೋಲೆ (ಕಾ). ೪ ಳ್ಸ (ಕ, ಮ). ೫ ದ ಜಗಿ (ಕ), ದ ಜನಿ (ಮ, ಪ). ೬ ಮಳೆಯೊಳೆ (ಕ, ಮ, ಪ). ೭ ತ (ಕ). ೮ ಮೆ (ಕಾ). ೯. ಯ್ಯಾ (ಕಾ), ಲಾ (ಮ) ೧೦ ದೇ (ಕ, ಕಾ, ಮ).

ವ|| ಆ ಹಿಮಾಗಮ[೧]ದೊಳ್

ರಂಗತ್ತರಂಗ ಸೀಕರ
ಮಂ ಗಾಳಿಗಳೊಟ್ಟಿ ಕರಗಿ ಸುರಿದಂತಿರೆ ಬೆ
ಳ್ದಿಂಗಳ [೨]ಮೇಲ್ಚೈ (ಕಿ)ಲ[೨] ಬೆ
ಳ್ಪಂಗೆಡದಿರೆ ಯೋಗಿ ಬೆಳ್ಳವಾಸಮನಿರ್ದಂ ೬೩

ಪರಿಮಟೆಯಾಡಿ ದಾವದುರಿಗಾಳಿಗಳೊಳ್ [೩]ಬಿಸಿಲೊಳ್[೩] ಕನಲ್ವ ಕ[೪]
ಲ್ಲ[೫]ರಿಯುರಿಯುಯ್ಯಲಾಡಿ ಪುಡಿಯಾಟಮನಾಡಿ ಚರಾಚರಂಗಳಂ
ಕರಿಮುರಿಯಪ್ಪಿನಂ ಹುರಿವ ಹಂಚುವೊಲಿರ್ದಿಳೆಯೊಳ್ ಕೃತಾಂತನೆ
ಚ್ಚುರಿಗ[೬]ಣೆಯಂತೆ ಬಂದುದು ಲಯಾನಿಳ ಕಲ್ಪನಿದಾಘಜಾನಿಳಂ ೬೪

ವ|| ಆ ಸಮುಗ್ರೋಷ್ಮ ಗ್ರೀಷ್ಮಾಗಮದೊಳ್

ಕೆಳರ್ದುರಿವ ಬಿಸಿಲ ಕೇಸುರಿ
ಗಳುಮಂ[೭] ಕಿಡಿಗಳುಮನು[೮]ಗುಟ್ವಿ ಕಿಚ್ಚಿನ ಸರಿ[೯]ಯಂ
ತಳುರ್ದು ತಳತಳಿಪ ತಪನೋ
ಪಳದೊಳ್ ಶಾಂತ್ಯಮೃತ ಜಳಧಿ ಕಲ್ಲ[೧೦]ಲೆನಿಂದಂ ೬೫

ವ|| ಅಂತು ತನ್ನ ತಪಂ ತ್ರಿಕಾಲಮಂ ಗೆಲೆ ತನ್ನ ಬೋಧಂ ತ್ರಿಭುವ ನಮನೊಳಗು ಮಾಡೆ ತನ್ನ ದರ್ಶನಂ ತ್ರಿದರ್ಶ[೧೧]ನಮ[೧೧]ನಧಃಕರಿಸೆ ಸುಪ್ರತಿಷ್ಠ ವೃತಿಪನನುಕ್ರಮದಿನೇಕಾದಶಾಂಗಧರನಾಗಿ

ಅರಳೆಯನ್ನು ಎತ್ತುವಂತೆ ಬಿಳಿಮೋಡಗಳನ್ನು ಎತ್ತಿಕೊಂಡು, ನವಿಲಿನ ಗರಿಯ ಬೇರುಗಳನ್ನು ಎತ್ತಿ ಹಂಸಗಳ ತುಪ್ಪುಳನ್ನು ತುಳಿದು, ಪಶ್ಚಿಮದಿಂದ ಸೋತು ಬರುವ ಮೋಡಗಳನ್ನು ಹಿಂದಕ್ಕೆ ಒತ್ತುತ್ತ ಚಳಿಗಾಲದ ಆರಂಭದಲ್ಲಿ ಮೂಡಣಗಾಳಿ ಬೀಸಿತು.

ವ|| ಆ ಚಳಿಗಾಲದಲ್ಲಿ -

೬೩. ಹೊಯ್ದಾಡುವ ಅಲೆಗಳಿಂದೆದ್ದ ತುಷಾರಕಣಗಳನ್ನು ಒಟ್ಟಿತಂದು ಕರಗಿಸಿ ಸುರಿದಂತೆ ಬೆಳ್ದಿಂಗಳ ಮೇಲೆ ಚಳಿ ಮಹಾಪೂರವಾಗಿ ಇಳಿಯುತ್ತಿರಲಾಗಿ ಆ ಯೋಗಿಯು ಬೆಳ್ಳವಾಸದಲ್ಲಿ (ನೀರಿನ ಪ್ರವಾಹದಲ್ಲಿ ನಿಂತುಕೊಂಡು) ಇದ್ದನು.

೬೪. ಕಾಡುಗಿಚ್ಚಿನ ಉರಿಗಾಳಿಗಳೊಡನೆ ಹಾರುಗುಪ್ಪೆಯಾಟವಾಡಿ ಬಿಸಿಲಲ್ಲಿ ಕಾದ ಕಲ್ಲಿನ ಮೇಲೆ ಉರಿಯುರಿಯ ಉಯ್ಯಾಲೆಯಾಡಿ, ದೂಳಾಟವಾಡುತ್ತ, ಚರಾಚರ ಗಳನ್ನೆಲ್ಲ ಕರಿಕಾಗುವಂತೆ ಹುರಿವ ಹಂಚೊ ಏನೊ ಎಂಬಂತಾದ ಭೂಮಿಯ ಮೇಲೆ ಯಮನು ಪ್ರಯೋಗಿಸಿದ ಅಗ್ನಿಬಾಣದಂತೆ ಬೇಸಗೆಯ ತಾಪ ಬಂದೊದಗಿತು.

ವ|| ಆ ಉರಿವ ಬೇಸಗೆಯಲ್ಲಿ -

೬೫. ಕೆರಳಿ ಉರಿಯುವ ಬಿಸಿಲಿನ ಕೆಂಪಾದ ಜ್ವಾಲೆಗಳನ್ನೂ ಕಿಡಿಗಳನ್ನೂ ನುಂಗಿ

---

೧ X (ಕಾ). ೨ ಪೊಲೆಯಲ್ಕಲ್ (ಕ). ೩ X (ಕ). ೪ + ರ್ಬುಬ (ಕ). ೫ ಲ್ಲು (ಪ). ೬ ಗೆ (ಕಾ). ೭ X (ಕ, ಮ). ೮ ನ್ನು (ಕ, ಮ). ೯ ಜೆ (ಕ, ಕಾ, ಮ). ೧೦ ಲ್ಲುನೆ (ಕ, ಮ). ಲ್ನೆ (ಪ). ೧೧ ನಂಗಳ (ಕಾ, ಮ).

ಸಮ್ಯಕ್ತ್ವಾದಿ ಷೋಡಶಭಾವನೆಗಳಂ ಭಾವಿಸಿ ಸದ್ಗುಣಂಗಳಿಂ ತೀರ್ಥಕರ ಪುಣ್ಯಮಂ ಕಟ್ಟಿ [1]ಕೊಡುವೊಡ[1] ಹಮಿಂದ್ರತ್ವಮಂ ಕುಡೆಂದು ಜಿನೇಂದ್ರಂಗೆ ಪಾಟಂಬಿಡುವಂತೆ [2]ಮೂಱು[2] ತಿಂಗಳ್ ಸನ್ನ ಸನಮಿದೆರ್ೂಡಲನೀಡಾಡಿಯುತ್ತರ[3]ಜಯಂತೀ ವಿಮಾನದೊಳಹಮಿಂದ್ರನಾಗಿ ತ್ರಯಸ್ತ್ರಿಂ ಶತ್ಸಾಗರೋಪಮಾಯುಷ್ಯನುಮೇಕರತ್ನಿ ಪ್ರಮಾಣನುಂ ಶುಕ್ಲ ಲೇಶ್ಯಾ ಪರಿಣಾಮನುಂ ಸಾರ್ಧಷೋಡ ಶಮಾಸ ನಿಶ್ವಾಸನುಂ ತ್ರಯಸ್ತ್ರಿಂ ಶದ್ವರ್ಷ ಸಹಸ್ರಾಂತೋಪಭುಕ್ತಾಮೃತಾಹಾರನುಂ ನಿಃಪ್ರವೀಚಾರಸುಖನುಂ ಸಪ್ರವೀಚಾರಾಂತ ಗುಣನುಂ ಲೋಕನಾ[4]ಕಾಭ್ಯಂತರಗತಾವಧಿ ಜ್ಞಾನನುಂ ಸ್ವಾವಧಿಕ್ಷೇತ್ರಬಳಪ್ರಕಾಶ ಶರೀರವಿಕ್ರಿಯಾದಿ ಗುಣಾಲಂಕೃತನುಮಾಗಿ ದಿವ್ಯಸುಖಮನಾಸ್ವಾದಿಸುತ್ತುಮಿರ್ದಂ

ನಱುಸುಯ್ಗಂಪನಲಂಪಿಂ
ದಱುದಿಂಗಳ್ಗೊಮ್ಮೆ ಪೀರ್ದು ತಣಿದಿರ್ಪಳಿವೋಲ್
ಮಿಱುಗೆ ನಿಜನೀಳಭೂಷಣ
ಮಱುದಿಂಗಳ್ಗೊಮ್ಮೆ ಸುಯ್ವನೆಸೆವಹಮಿಂದ್ರಂ ೬೬

ಬೆಂಕಿಯ ಮಳೆಯಂತೆ ಅವುಗಳನ್ನು ಮರಳಿ ಹೊರಚಿಮ್ಮುತ್ತಿರುವ ಸೂರ್ಯಕಾಂತ ಶಿಲೆಯ ಮೇಲೆ ಶಾಂತಿಯ ಅಮೃತಸಮುದ್ರವಾದ ಆ ಯೋಗಿಯು ಕಲ್ನೆಲೆ ನಿಂತನು.

ವ|| ಹೀಗೆ ತನ್ನ ತಪಸ್ಸು (ಮಳೆಗಾಲ, ಚಳಿಗಾಲ, ಬೇಸಗೆಗಳಂತೆ) ಮೂರೂ ಕಾಲಗಳನ್ನು ಗೆದ್ದು, ತನ್ನ ಜ್ಞಾನವು ಮೂರೂಲೋಕಗಳ್ನು ಒಳಪಡಿಸಿಕೊಳ್ಳಲಾಗಿ, ತನ್ನ ದರ್ಶನವು (ಶ್ರುತಿ, ಮತಿ ಮತ್ತು ಅವಧಿಯೆಂಬ) ಮೂರು ಜ್ಞಾನಗಳಿಗಿಂತ - ಮಿಗಿಲಾಗಿ ಸುಪ್ರತಿಷ್ಠ ಮುನಿಯು ಅನುಕ್ರಮವಾಗಿ ಏಕಾದಶಾಂಗಧರನಾಗಿ, ಸಮ್ಯಕ್ತ್ವವೆ ಮೊದಲಾದ ಷೋಡಶಭಾವನೆಗಳನ್ನು ಭಾವಿಸಿ, ಸದ್ಗುಣಗಳಿಂದ "ತೀರ್ಥಕರ ಪುಣ್ಯವನ್ನು ಕಟ್ಟಿಕೊಡು ವುದಿದ್ದರೂ ಮೊದಲು ಅಹಮಿಂದ್ರತ್ವವನ್ನು ಕೊಡು" ಎಂದು ಜಿನೇಂದ್ರನಿಗೆ ಹರಕೆ ಹೊತ್ತು ಕಾಯಕ್ಲೇಶ ಪಡುವನೋ ಏನೊ ಎಂಬಂತೆ ಮೂರು ತಿಂಗಳು ಸಂನ್ಯಸನವನ್ನು ನೆರವೇರಿಸಿ ದೇಹವನ್ನು ತೊರೆದು ಉತ್ತರ ಜಯಂತೀ ವಿಮಾನದಲ್ಲಿ ಅಹಮಿಂದ್ರನಾಗಿ ಮೂವತ್ತ ಮೂರು ಸಾಗರೋಪಮ ಆಯುಷ್ಯವುಳ್ಳವನೂ ಒಂದು ರತ್ನ ಎತ್ತರವಾದ ದೇಹವುಳ್ಳನೂ ಶುಕ್ಲಲೇಶ್ಯೆಯ ಪರಿಣಾಮ ಹೊಂದಿದವನೂ ಹದಿನಾರುವರೆತಿಂಗಳಿಗೊಮ್ಮೆ ಉಸಿರಾಡು ವವನೂ ಮೂವತ್ತುಮೂರು ಸಾವಿರ ವರ್ಷಕ್ಕೊಮ್ಮೆ ಅಮೃತಾಹಾರವನ್ನುಣ್ಣುವವನೂ, ದೇಹ ಸಂಪರ್ಕವಿಲ್ಲದೆಯೆ ಸುರತ ಸುಖವನ್ನನುಭವಿಸುವವನೂ ಲೋಕಾಭ್ಯಂತರಗತವಾದ ಅವಧಿಜ್ಞಾನ ಸಂಪನ್ನನೂ ಸ್ವಾವಧಿ ಕ್ಷೇತ್ರ ಬಲ ಪ್ರಕಾಶ ಶರೀರ ವಿಕ್ರಿಯಾದಿ ಗುಣಗಳಿಂದ ಶೋಭಿಸುವವನೂ ಆಗಿ ಸ್ವರ್ಗಸುಖವನ್ನು ಅನುಭವಿಸುತ್ತ ಇದ್ದನು.

೬೬. ಸುಗಂಧ ವಿಶ್ವಾಸದ ಪರಿಮಳವನ್ನು ಆರುತಿಂಗಳಿಗೊಮ್ಮೆ ಸಂತೋಷದಿಂದ ಹೀರಿ ತೃಪ್ತಿಗೊಂಡಿರುವ ದುಂಬಿಯಂತೆ ತನ್ನ ನೀಲರತ್ನಗಳ ಆಭರಣಗಳು ಶೋಭಿಸು ತ್ತಿರಲಾಗಿ ಆ ಅಹಮಿಂದ್ರನು ಆರುತಿಂಗಳಿಗೆ ಒಂದು ಸಲ ಉಸಿರಾಡಿಸುವನು.

---

೧ ಕೊಂಡುವೊಡನ (ಕ). ಕೊಂಡುಮೊಡನ (ಪ). ೨ X (ಕ). ೩ + ವಿ (ಕ, ಪ). ೪ + ಡಿ (ಕ, ಪ)

ಅಹಮಹಮಿಕೆಯಿಂದತಿಶಯ
ಸಹಜಾಳಂಕರಣಗಳಮಹಂಪೂರ್ವಿಕೆಯಿಂ
ಬಹುಭೋಗಮಹಂಕೃತಿಯಿಂ
ದಹಮಿಂದ್ರಂಗಪ್ಪುವ[೧]ಪ್ರವೀಚಾರಸುಖಂ ೬೭

ಮೇದಿನಿಯೊಳ್ ವಿನೂತ[೨]ನದ[೨] ವರ್ಣನಮಾಗೆ ವಸಂತ ವರ್ಣನಂ
ಸ್ವಾದಮೆನಿಕ್ಕುಮಲ್ತೆ ನೆಗಟ್ದೀ ಕೃತಿಯೊಳ್ ಕೃತಿನಾಥ ನೇಮಿನಾ
ಥೋ[೩]ದಯ ವಸ್ತುವರ್ಣನಮೆ ಮುಖ್ಯತೆವೆತ್ತೊಡಮಾದಿಯೊಳ್ ಪೊದ
ಟ್ವಾದರಣೀಯಮಾದುದೆನಗಾತನ ವಿಶ್ರುತ ವಂಶವರ್ಣನಂ ೬೮

ವ|| ಅದೆಂತೆಂದೊಡೆ ಫುಲ್ಲಶರನ ಶಸ್ತ್ರಶಾಲೆಯಂತಿರ್ಪ ಪುಷ್ಪವಾಟಿಗಳಿಂ ಮನೋಜರಾಜನ ರಾಣಿಯ ವಾಸದಂತಿರ್ಪೆಳಲತೆಯ ಬಳ್ಳಿಗಾವಣಂಗಳಿನಂಗಜನ ರಾಜಗೃಹಂಗಳಂತಿರ್ಪ ನಾಗವಲ್ಲಿಗಳಿಂ ಶೃಂಗಾರಸೂತಿಯ ಶೃಂಗಾರ ಭವನದಂತಿರ್ಪ ಮಲ್ಲಿಕಾಭವನಂಗಳಿಂ ಲಕ್ಷ್ಮೀಸುತನಳ [೪]ಸೂತಿಕಾಗಾರ[೪] ದಂತಿರ್ಪ ಕದಳಿಯ ಸುತ್ತಿನಿಂ ನನೆಗಣೆಯನ ಗರುಡಿಯಂತಿರ್ಪ ಪೂವಿನ ಪುಡಿಯ ಪುಟೆಲ್ಗಳಿನಲ ರ್ಗೋಲನೋಲಗಶಾಲೆಯಂತಿರ್ಪ ಜಾದಿಯ ಪಂದರಿಂ ಕಂತುವಿನ ಖೇಡಕುಟೀಯಂತಿರ್ಪ ಕ್ರೀಡಾಸರಂಗಳಿಂ ರತಿಯ ರತಿಗೃಹಂಗಳಂತಿರ್ಪ [೬]ಬಾಳ್ಪೊಂ[೬] ಪಂಗಳಿಂ ರತಿಯ ನೃತ್ಯಮಂಡಪಂಗಳಂತಿರ್ಪ ನವ ಮಾಳಿಕಾಮಂಡಪಂಗಳಿಂ ಕಂತುಕಾಂತೆಯ ಕಳಕೂಜನದ ಗು[೭]ಣನೆ[೭]ಯಂತಿರ್ಪ ಸಾರಸ[೮] ಸಿತಕಮಳ ಕುವಳಯಷಂಡಂಗಳಿಂ ಅನಂಗವನಿತೆಯ ವಿನೋದದಳಿಯ ಗಿಳಿಯ ಕೋಗಿಲೆಯ ಕಾಪಿನಾಕೆಗಳಿಂತಿರ್ಪ ಚೂತಲತೆಗಳಿಂ ರತಿಪತಿಯ ಪಡಿಯಜಿತಿಯರಂ [೯]ತಿಪ್ಪ[೯] [೧೦]ಳಿರ್

೬೭. ನಾಮುಂದು ತಾ ಮುಂದೆಂದು ಅತಿಶಯವಾದ ಸಹಜವಾದ ಅಲಂಕಾರ ಗಳೂ ಅನೇಕವಾದ ಭೋಗಗಳೂ ಅಹಮಿಂದ್ರನಿಗೆ ತಾವಾಗಿ ಬಂದೊದಗುವುವು. ಸ್ತ್ರೀಸಂಗವಿಲ್ಲದೆಯ ಅಹಮಿಂದ್ರನಿಗೆ ಕಾಮಸೌಖ್ಯವೆಲ್ಲವೂ ಉಂಟಾಗುವುದು.

೬೮. ಈ ಭೂಮಿಯಲ್ಲೆಲ್ಲ ವಿನೂತನ ವರ್ಣನೆಯಾಗಿ, ವಸಂತವರ್ಣನೆಯೆ ರುಚಿಕಟ್ಟಾಗುವುದಲ್ಲವೆ ? ಈ ಕಾವ್ಯದಲ್ಲಿ ಕಥಾನಾಯಕನಾದ ನೇಮಿನಾಥನ ಉದಯವನ್ನು ವರ್ಣಿಸುವುದೇ ಮುಖ್ಯವಾಗಿದ್ದರೂ ಅದಕ್ಕೆ ಮುಂಚೆ ಆತನ ಪ್ರಸಿದ್ಧವಾದ ವಂಶವನ್ನು ವರ್ಣಿಸುವುದು ನನಗೆ ಆದರಣೀಯವಾಗಿದೆ.

ವ|| ಅದು ಹೀಗಿದೆ-ಪುಷ್ಪಬಾಣನ ಶಸ್ತ್ರಾಗಾರದಂತಿರುವ ಹೂದೋಟ ಗಳಿಂದಲೂ, ಮನ್ಮಥರಾಜನ ರಾಣಿವಾಸದಂತಿರುವ ಎಳೆಯಬಳ್ಳಿಗಳ ಮಂಟಪಗಳಿಂದಲೂ ಅಂಗಜರಾಜನ ಅರಮನೆಗಳಂತಿರುವ ನಾಗವಲ್ಲಿಗಳಿಂದಲೂ ಶೃಂಗಾರಜನ್ಮನ ಶೃಂಗಾರ ಭವನದಂತಿರುವ ಮಲ್ಲಿಗೆ ಮಂಟಪಗಳಿಂದಲೂ ಲಕ್ಷ್ಮೀಕುಮಾರನ ಸೂತಿಕಾಗಾರದಂತಿರವ ಬಾಳೆಯ ಸುತ್ತಿನಿಂದಲೂ, ಹೂಬಾಣನ ಗರುಡಿ ಮನೆಯಂತಿರುವ ಪುಷ್ಪಪರಾಗದ ಮರಳು ದಿಣ್ಣೆಗಳಿಂದಲೂ, ಹೂಗೋಲನ ಓಲಗಶಾಲೆಯಂತಿರುವ ಜಾಜಿಯ ಹಂದರದಿಂದಲೂ, ಮದನನ ಕ್ರೀಡಾಜಲಾಶಯಗಳಂತಿರುವ ಲೀಲಾ ಸರೋವರಗಳಿಂದಲೂ ರತಿದೇವಿಯ

೧ದ (ಕ, ಮ, ಪ) ೨ ವನ (ಕಾ, ಮ). ೩ ಮೋ (ಕಾ) ೪ ಸುತಕಾರ (ಕ, ಕಾ). ಸೂತಿಕಾಗಾರ (ಪ). ೫ ಈ ಭಾಗವು ಕಾ ಪ್ರತಿಯಲ್ಲಿ ಇಲ್ಲ. ೬ ಚಾಳೊ (ಕ, ಮ, ಪ). ೭. ವೋಣೆ (ಕಾ). ೮ +ದ (ಮ). ೯ ತೆ (ಕ, ಕಾ). ೧೦ X (ಕಾ).

ತು[೧]ಱುಗಲೊ[೨]ಳ್ ಮೆಯ್ಗರೆದು ಕರೆವ ಕೋಗಿಲೆಯ ದನಿಯಿಂ [೩]ಪುಗಿಲ್ಪುಗಿಲೆಂಬ[೩] ಸಹಕಾರ ವಲ್ಲರಿಗಳಿಂ ಮನ್ಮಥನ ಮೆಯ್ಗಾಪಿನಾಕೆಗಳಂತೆ ಸುಕುಮಾರ ಶಾಖಾಭುಜಾಗ್ರ ಭೀಷಣ ಭುಜಂಗ[೪]ಮ ಜಂಗ[೪] ಮಸಿತ ಲತೆಗಳಂ ತಳೆದ ಚಂದನಲತೆಗಳಿಂ ದರ್ಪಕನ ದೀಪೋತ್ಸವ[೫] ದೀಪಮಾಲೆಗಳಂತೆ ಪೂತು ಸೊಗಯಿಸುವ ಸಂಪಗೆಗಳಿಂ ಮನಸಿಜಂಗೆ ಮೀನಕೇ[೬]ತುವ[೬]ನೆತ್ತುವಂತೆ ನೀರ ಮೇಗೆ ನೆಗೆದ ನಿಡಿಯ ನಾಳದ ನಳಿನದರಲೊಳೆ ಪೊಳೆದು ಪಾಜೆ ಬೀೞ್ವ ಬಾಳೆಮೀನಿಂ ತೊಳಪ ತಿಳಿಗೊಳಂಗಳಿಂ ನೀರ ಮೇಲೆ ಪರಿವ ರತಿವಲ್ಲಭನ ವಾಜಿಕುಳದಂತೆ [೭]ತೊಡನಿ[೭]ಸುವ ಜಕ್ಕವಕ್ಕಿಗಳಿಂ ಚಿತ್ತಭವಚಕ್ರವರ್ತಿಯ ನಡುಪಟ್ಟ ಪಟ್ಟದಾನೆಯಂತೆ ಮಗಮಗಿಸುವ ಮದಮದದ ಸೊನೆ ಸೊನೆಯಂ ಬಿಡುವ ಬಾಳರಸಾ[೮]ಳಂಗಳಿಂ ಕಾಮದೇವನ ದೀವದ ಪಿಂಡಿನಂತಿರ್ಪ ಕಳಹಂಸಂ[೯]ಗಳಿಂ ಸ್ಮರನ ಸಿರಿಗೆ ಸೀಗುರಿಯನಿಕ್ಕುವಂತಿರ್ಪ ಸೋಗೆನವಿಲ್ಗಳಿನವಳ್ಗೆ ಪೊಂ[೧೦]ಬಟ್ಟ ಲೊಳ್ಕತ್ತುರಿ[೧೧]ಯುರುಳಿ[೧೧]ಯಂ ಪಿಡಿದಿರ್ಪಂತೆ ತುಂಬಿ ಪಾಯ್ದ[೧೨] ಕುಸುಮಂಗಳಿನೆಸೆವ ಕೊಸಕುಗದಳಿನಾಕೆಗೆ ಕುಂಕುಮದುರುಳಿಯ ನವಟಿಯಿಸುವ ಘಟ್ಟವಟ್ಟಿ[೧೩]ಯರಂತೆ[೧೩] ಪಣ್ತ ನಾರಂಗವಲ್ಲಿಗಳಿನುದ್ಯಾನ ದೇಶಮನಾಳಲೆಂದು ಕಾಮನ ಕೆಯ್ಯೊಳ್ ತೊಳಗಿ[೧೪]ದ ಪತ್ತಳೆಯಂ ಕೊಂಡು ಜಾ[೧೫]ದಂ ತೊಡೆದಂತೆ ತಳಿರ್ತಸು[೧೬]ಕೆಗಳಿಂ ಪಂಚಶರನ ಪಾಯಾ[೧೭]ಳನಂತೆ ಚಂಚರೀಕದ ಕುಂಚಮನೆತ್ತಿ ಕಿಂಜಲ್ಕದ ಕೆಂಧೂಳಿಯೊಳ್ಪೊರೆದು ಮಕರಂದ ಬಿಂದುವೆಂಬ ಬೆಮರಂ ಪೇಜೆ ಪರಿತರ್ಪ ತಣ್ಣೆಲರಿಂ ಶಂಬರಹರನ *ಬಿರುದಂ ಪಾಡುವಂತೆ ಮೊರೆವ ಮಧುಕರ ವೃಂದಗಳಿಂ ಮಕರಧ್ವಜನ ಸಂಧಿವಿಗ್ರಹಿಗಳಂತಾ ತನಂಕಮಾಲೆಯನೋದುವರ ಗಿಳಿಗಳಿಂ ಕುಸುಮಶರನ ಸಿರಿಕರಣದಂತಿರಂತಿಕಸ್ಥಿತ ತರುಪತ್ರಂಗಳನ ನಿಳಚಳಿತ ದೀರ್ಘಗಳಾಂ*ಗುಳಿ[೧೮]ಗಳಿತ[೧೮] ಕಂಟಕಂಗಳಿಂ ಬರೆವ ಕೇದಗೆಗಳಿಂ ವಸಂತಸಖನ

ಶಯನಶಾಲೆಯಂತಿರುವ ಎಲೆಮನೆಗಳಿಂದಲೂ ರತಿಯ ನರ್ತನಮಂಡಪಗಳಂತಿರುವ ಮಾಲಿಕಾಮಂಡಪಗಳಿಂದಲೂ ಮನ್ಮಥಕಾಂತೆಯ ಮಧುರ ಸ್ವರದ ಸಂಗೀತಶಾಲೆ ಯಂತಿರುವ ಸಾರಸ - ಪುಂಡರೀಕ - ಕುವಲಯಗಳ ಸಮೂಹಗಳಿಂದಲೂ ಆಕೆಯ ವಿನೋದದ ದುಂಬಿ - ಗಿಳಿ ಕೋಗಿಲೆಗಳನ್ನು ಕಾಪಾಡುವ ಪರಿಚಾರಿಕೆಯಂತಿರುವ ಬಳ್ಳಿ ಮಾವುಗಳಿಂದಲೂ ರತಿಪತಿಯ ಪ್ರತೀಹಾರದಂತಿದ್ದು ತಳಿರುಗಳ ಗೊಂಚಲಲ್ಲಿ ಅಡಗಿಕೊಂಡು ಕೂಗವ ಕೋಗಿಲೆಗಳ ಧ್ವನಿಯಿಂದ ಪುಗಲ್ ಪುಗಲ್ ಎಂದು ನುಡಿವ ಮಾವಿನ ಬಳ್ಳಿಗಳಿಂದಲೂ ಮನ್ಮಥನ ಮೈಗಾವಲ ಸ್ತ್ರೀಯರಂತೆ ಕೋಮಲವಾದ ಕೊಂಬೆಗಳ ಮೇಲೆ ಸಜೀವ ಹಾವಿನ ಬಳ್ಳಿಗಳನ್ನು ಹೊತ್ತ ಚಂದನಲತೆಗಳಿಂದಲೂ ಕಂದರ್ಪನ ದೀಪೋತ್ಸವದ ದೀಪಮಾಲೆಗಳಂತೆ ಹೂಬಿಟ್ಟು ಶೋಭಿಸುವ ಸಂಪಿಗೆಗಳಿಂದಲೂ ರತಿರಾಜನಿಗೆ ಮೀನಧ್ವಜವನ್ನು ಎತ್ತಿ ಹಿಡಿಯುವಂತೆ ನೀರಮೇಲೆ ಎದ್ದು ನಿಂತ ನೀಳವಾದ ನಾಳದ ತಾವರೆಯ ಹೂವಿನಲ್ಲಿ ಅತ್ತಿತ್ತ ಹಾರಾಡಿ ಬೀಳುವ ಬಾಳೆಯ ಮೀನುಗಳಿಂದ ಶೋಭಿಸುವ ತಿಳಿನೀರಿನ ಕೊಳಗಳಿಂದಲೂ ನೀರಮೇಲೆ ಓಡುವ ಮನ್ಮಥನ ಕುದುರೆಗಳಂತೆ ಕೂಡಿಕೊಂಡಿರುವ ಚಕ್ರವಾಕಗಳಿಂದಲೂ ಕಾಮಚಕ್ರವರ್ತಿಯ ಮದವೇರಿದ ಪಟ್ಟದಾನೆ ಯಂತೆ ಗಮಗಮಿಸುವ ಸೊನೆಯನ್ನು ಸೂಸುವ ಕೋಮಲವಾದ ಮಾವುಗಳಿಂದಲೂ ಕಾಮದೇವನು ಸಾಕಿದ ಹಂಸಸಮುದಾಯದಂತಿರುವ ಕಲಹಂಸಗಳಿಂದಲೂ ಮನ್ಮಥ

೧ ತ (ಕ). ೨ ಳೊ (ಕ, ಮ), ೩ ಪುಗಲ್ಪುಗಲೆಂಬ (ಕಾ). ೪ X (ಕಾ) ೫ + ದ (ಕಾ). ೬ ತಮ (ಕಾ). ೭ ತೊಡಗಿ (ಪ), ಕೊಡಗಿ (ಕ,) ೮ ದಷ್ಥ (ಕಾ) ೯ ಸೆ (ಕ, ಪ). ೧೦ ಪೊನ್ನ (ಕ, ಮ). ೧೧ X (ಕಾ). ೧೨ ಯ್ದ (ಕಾ). ೧೩ ಯಂತೆ (ಕ, ಮ). ೧೪ + ಳ (ಕ, ಮ). ೧೫ ಚಾ (ಕ, ಪ). ೧೬ ಶೋ (ಕ, ಪ). ೧೭ ಯಿದಾ (ಕ, ಪ). ೧೮. ಕಳಿತ (ಕಾ, ಮ).

ನಿಸ್ಪೃ[೧]ಷ್ಟಾರ್ಥ[೨] ದೂತಿಯಂತಿರ್ಪ ವಸಂತದೂತಿಯಂ ಮದನಮಹಾರಾಜ [೩]ನರಮನೆಯಂ[೪]ತಿ[*]ರ್ಪಾರಮೆಯಿಂ[೪] ಮನಂಗೊಳಿಸಿ ಕಂದರ್ಪನಾದೇಶಂಗಳಂತಿರ್ಪ ದೇಶಂಗಳಿಂ ಭರಿತಮಾದ ಭರತಕ್ಷೇತ್ರದೊಳ್

ಉಂಟು 'ಕಶಾರ್ಥ'ವಿಷಯ[೫]ರ್ಥಮೆಂಬ ವಿಷಯಂ ವಿಷಯದ್ವಿಷರಪ್ಪಿನಂತೆ ನಿಃ
ಕಂಟಕಮಲ್ಲಿ, ಶೌರ್ಯಪುರಮುಂಟು ಸುರೇಂದ್ರ ಪುರೋಪಮಂ, ಪ್ರಭಾ
ಲುಂಟಿತ ಶೂರ ಸಾರಗುಣನಾಳ್ವನದಂ ಕಲಿ ಶೂರಸೇನನಾಂ
ತೆಂಟುಮಿಭಂಗಳಾಂತ ಧರೆಯಂ ದೃಢದಕ್ಷಿಣ ಬಾಹುದಂಡದಿಂ ೧೯

ಸುರನಿಭ ಶೂರಸೇನನ ಸುತಂ ಸ್ಮರಸನ್ನಿಭ ಶೂರವೀರನಾ
ನರಪತಿಯಿಂ ಪತಿಂ ವರೆ[ಗೆ[೬]] ಧಾರಿಣಿಗಂಧಕವೃಷ್ಣಿಯೆಂಬನುಂ
ನರಪತಿವೃಷ್ಣಿಯೆಂಬನುಮುದಾತ್ತ ರಸಾಢ್ಯ ಫಲಪ್ರದತ್ವ[೭]ಮುಂ
ಭರ ಸಹಸತ್ವಮುಂ ನೆಗಟ್ದಿ ಧಾರಿಣಿಗಾದವೊಲಾದರಾತ್ಮಜರ್ ೨೦

ಲಕ್ಷ್ಮಿಗೆ ಸೀಗುರಿಯನ್ನು ಬೀಸುವಂತಿರುವ ಸೋಗೆನವಿಲುಗಳಿಂದಲೂ ಆಕೆಗೆ ಹೊನ್ನ ಬಟ್ಟಲಲ್ಲಿ ಕಸ್ತೂರಿಯನ್ನು ತುಂಬಿ ಹಿಡಿದಂತೆ ದುಂಬಿಗಳು ಹೊಕ್ಕ ಹೂಗಳಿಂದ ಶೋಭಿಸುವ ಬೆಟ್ಟದಾವರೆಗಳಿಂದಲೂ ಆಕೆಗೆ ಕುಂಕುಮವನ್ನು ಓಲೈಸುವ ಸೈರಂಧ್ರಿಯರಂತೆ ಫಲಬಿಟ್ಟ ಕಿತ್ತಳೆ ಬಳ್ಳಿಗಳಿಂದಲೂ ತೋಟವನ್ನಾಳಲೆಂದು ಕಾಮನ ಕೈಯಿಂದ ಹೊಳೆಯುವ ಅಧಿಕಾರಪತ್ರವನ್ನು ಪಡೆದುಕೊಂಡು ಕಾವಿ ಬಣ್ಣವನ್ನು ತೊಡೆದಂತೆ ಚಿಗುರಿದ ಅಶೋಕಗಳಿಂದಲೂ ಪಂಚಬಾಣನ ಕಾಲಾಳಿನಂತೆ ದುಂಬಿಗಳೆಂಬ ಚಾಮರವನ್ನೆತ್ತಿ ಪುಷ್ಪಪರಾಗವೆಂಬ ಕೆಂದೂಳಿ ಅಡರಿ, ಮಕರಂದ ಬಿಂದುವೆಂಬ ಬೆವರನ್ನು ತಾಳಿ ಹರಿದು ಬರುತ್ತಿರುವ ತಂಗಾಳಿಯಿಂದಲೂ ಕಾಮನ ಬಿರುದಾವಳಿಯನ್ನು ಹೊಗಳಿ ಹಾಡುವಂತೆ ಮೊರೆಯುವ ದುಂಬಿವಿಂಡುಗಳಿಂದಲೂ ಮನ್ಮಥನ ಸಂಧಿ ವಿಗ್ರಹಿಗಳಂತೆ ಆತನ ಸ್ತುತಿಪಾಠಮಾಡುವ ಅರಗಿಳಿಗಳಿಂದಲೂ ಅಂಗಜರಾಜನ ಲೆಕ್ಕಿಗರಂತೆ ಪಕ್ಕದಲ್ಲಿರುವ ಮರದೆಲೆಗಳ ಮೇಲೆ ಗಾಳಿಯ ಅಲುಗಾಟದಿಂದ ತಮ್ಮ ದೀರ್ಘವಾದ ಗರಿಗಳ ತುದಿ ಮುಳ್ಳುಗಳು ತಾಗಿ ಒರೆಯುವ ಕೇದಗೆಗಳಿಂದಲೂ ವಸಂತ ಮಿತ್ರ (ಕಾಮ)ನು ಕಳಿಸಿದ ದೂತಿಯಂತಿರುವ ಅದಿರ್ಗಂತಿಯಿಂದಲೂ ಮದನಮಹಾರಾಜನ ಅರಮನೆಯಂತಿರುವ ಉದ್ಯಾನಗಳಿಂದಲೂ ಮನೋಹರವಾಗಿ ಕಾಮದೇವನ ಆಡಳಿತದಲ್ಲಿರುವ ದೇಶಗಳಂತಿರುವ ದೇಶಗಳಿಂದ ತುಂಬಿದ ಭರತಕ್ಷೇತ್ರದಲ್ಲಿ -

೧೯. ಕಷಾರ್ಥವೆಂಬ ನಿಷ್ಕಂಟಕವಾದ ರಾಜ್ಯವಿರುವುದು. ಅದರೊಳಗೆ ಇಂದ್ರನಗರಕ್ಕೆ ಸದೃಶವಾದ ಶೌರ್ಯಪುರವುಂಟು. ಅದನ್ನಾಳುವ ಶೂರೇಸನೆಂಬ ತೇಜಸ್ವಿಯೂ ಶೂರನೂ ಗುಣವಂತನೂ ಆದ ಅರಸನು ಎಂಟು ದಿಗ್ಗಜಗಳು ಹೊರುವ ಭೂಮಂಡಲವನ್ನು ತನ್ನ ಬಲಿಷ್ಠವಾದ ಬಲದೋಳಿನ ಮೇಲೆ ಇಟ್ಟುಕೊಂಡು ಪಾಲಿಸುತ್ತಿರುವನು.

೨೦. ದೇವಸದೃಶನಾದ ಶೂರಸೇನನಿಗೆ ಮನ್ಮಥಸದೃಶನಾದ ಶೂರವೀರನೆಂಬ

---

೧ ಸ್ಪೃ (ಕಾ). ೨ ತ (ಕ, ಪ). ೩ ನಂ (ಕಾ, ಮ) ೪ ರ್ಪರಮನೆಯಂ (ಕ, ಪ). ೫ ಷಾ (ಕಾ ಮ). *ಈ ಭಾಗವು ಕ, ಮ ಪ್ರತಿಗಳಲ್ಲಿ ಇಲ್ಲ, ೬ ಗ (ಕ, ಕಾ, ಮ). ೭ ತ್ತ (ಕ, ಮ, ಪ).

ಆ ವೀಜಗೀಷುವಿಂಗೆ ವಧುವಂಧಕವೃಷ್ಟಿಗೆ ವಿಷ್ಣುವಿಂಗೆ ಲ
ಕ್ಷ್ಮೀವಧುವೋಲ್ ಸುಭದ್ರೆ [೧]ಶುಭ[೧]ಲಕ್ಷಣೆಯಾದಳುಮಾವರಂಗುಮಾ
ದೇವಿಯೊಲಾ ನರಾಧಿಪತಿವೃಷ್ಣಿಗೆ ಪದ್ಮದಳಾಯತಾಕ್ಷಿ ಪ
ದ್ಮಾವತಿಯಾದಳಂತು ನೆಗಟ್ದಂಧಕವೃಷ್ಣಿಗಮಾ ಸುಭದ್ರೆಗಂ ೭೧

ನಾಭಿನಿಭಂ ಸಮುದ್ರವಿಜಯಂ ಮೊದಲಾಗೆ ಪದಿಂಬರಾದರ
ಕ್ಷೋಭನು[೨]ಮುತ್ತಮ[೨]ಸ್ತಿಮಿತಸಾಗರನುಂ ಹಿಮವಂತನುಂ ಧೃತೋ
ರ್ವೀಭರರಾ[೩]ಗಿ ಸಂದ ವಿಜಯಾಚಳ ಧಾರಣ ಪೂರಣರ್ಕಳುಂ
ಶ್ರೀಭವನಾಭಿನಂದನನುಮಾ ವಸುದೇವನುಮೆಂಬ ನಂದನರ್ ೭೨

ಕ್ರಮಮುಂ ವಿಕ್ರಮಮರ್ಥಮುಂ ವಿತರಣಂ ವಾಗ್ಮಿತ್ವಮುಂ ಸನ್ನಿ ತೇ
ಜಮುಮೈ[೪]ಶ್ಯಂ ಪ್ರತಿಭಾಸಮುಂ ಸಕಲ ಶಾಸ್ತ್ರಾಭ್ಯಾಸ[೫]ಮಾದಾ[೫]ಭಿಜಾ
ತ್ಯಮು[೬]ಮಾಚಾ[೬]ರಮಪಾರ ಸೌಂದರತೆಯುಂ ಸೌಭಾಗ್ಯಮೊಲ್ದೆಯ್ದೆ ಮ
ಚ್ಚಿ ಮರುಳ್ಗೊಂಡುವೊಲಿರ್ಪುವೊಪ್ಪಿ ಶಿವದೇವೀಕಾಂತನೊಳ್ ಸಂತತಂ ೭೩

ಮಗನಾದನು. ಶೂರವೀರನಿಗೆ ಧಾರಿಣಿಯೆಂಬುವಳು ಪತ್ನಿಯಾದಳು. ರಸಮಯವಾದ ಹಣ್ಣುಗಳನ್ನು ನೀಡುವ ಗುಣವೂ, ಭಾರವನ್ನು ಸಹಿಸುವ ಗುಣವೂ ಧಾರುಣಿಗೆ (ಭೂಮಿಗೆ) ಒದಗಿದಂತೆ ಧಾರಿಣೀದೇವಿಗೆ ಅಂಧಕವೃಷ್ಣಿ ಹಾಗೂ ನರಪತಿವೃಷ್ಣಿಯೆಂಬ ಇಬ್ಬರು ಮಕ್ಕಳಾದರು.

೭೧. ವಿಷ್ಣುವನ್ನು ಲಕ್ಷ್ಮಿ ಮದುವೆಯಾದಂತೆ ವಿಜಯಶಾಲಿಯಾದ ಅಂಧಕ ವೃಷ್ಣಿಯನ್ನು ಶುಭಲಕ್ಷಣೆಯಾದ ಸುಭದ್ರೆ ಮದುವೆಯಾದಳು. ಶಿವನನ್ನು ಉಮಾದೇವಿ ಮದುವೆಯಾದಂತೆ ಕಮಲನೇತ್ರೆಯಾದ ಪದ್ಮಾವತಿ ನರಾಧಿಪತಿ ವೃಷ್ಣಿಯನ್ನು ಮದುವೆಯಾದಳು. ಅಂಧಕವೃಷ್ಣಿ ಹಾಗೂ ಸುಭದ್ರೆ ಎಂಬ ದಂಪತಿಗಳಿಗೆ -

೭೨. ನಾಭಿರಾಜನಿಗೆ ಸದೃಶನಾದ ಸಮುದ್ರವಿಜಯ, ಅಕ್ಷೋಭ, ಸ್ತಿಮಿತಸಾಗರ, ಹಿಮವಂತ, ಅಭಿನಂದನ, ವಿಜಯ, ಅಚಳ, ಧಾರಣ, ಪೂರಣ ಲೋಕಸ್ತುತನಾದ ವಸುದೇವ ಎಂಬ ಹತ್ತು ಜನ ಮಕ್ಕಳಾದರು.

೭೩. ಶಿವದೇವೀ ಪತಿಯಾದ ಸಮುದ್ರವಿಜಯನನ್ನು ಮೆಚ್ಚಿ ಮೋಹ ಗೊಂಡಳೋ ಏನೋ ಎಂಬಂತೆ ನೀತಿ, ಶೌರ್ಯ, ಸಂಪತ್ತು, ದಾನಗುಣ, ವಾಗ್ಮಿತ್ವ, ಸತ್ಯಸಂಧತೆ, ತೇಜಸ್ಸು, ಪ್ರಭುತ್ವ, ದರ್ಶನ, ಸಮಸ್ತ ಶಾಸ್ತ್ರಾಭ್ಯಾಸದಿಂದ ಬರುವ ಅಭಿಜಾತತೆ, ಸದಾಚಾರ, ಅತಿಶಯವಾದ ಲಾವಣ್ಯ, ಸೌಭಾಗ್ಯಗಳು ಅವನಲ್ಲಿ ಸ್ಥಿರವಾಗಿ ನೆಲಸಿದ್ದುವು.

---

೧ ಗೆಸು (ಕ). ೨ ಮುತ್ಕನು (ಕ, ಮ). ೩ ನಾ (ಕ, ಪ). ೪ ನೈ (ಕಾ). ೫ ಮಿದ್ದಾ (ಕಾ). ೬ ದಾವಾ (ಕಾ).

ಆದ್ರಿಗಳಿರ್ಕಚೇತನೆಯೊಳೆಂದು ಧರಾಧರ ಕೂರ್ಮ ಶೇಷ ದಿಗ್
ಭದ್ರಗಜಂಗಳೆಯ್ದೆ ದಶಭೂಭುಜರಾದರೆನಿಪ ತತ್ತ್ರಾ
ಪದ್ರವಿಣರ್ಗೆ ನೇರ್ಗಿ[೧]ಜೆಯರಾ[೨]ಗಿ ನೆಗಟ್ತ್ಗೆ ನೋಂತ ಕೊಂತಿಯು
ಮಾ[೩]ದ್ರಿಯುಮದ್ರಿರಾಜಸುತೆಗಂ ಸತಿಗಂ ಸರಿವಂದರೇಟ್ಗೆಯೊಳ್ ೭೪

ದ್ಯುಮಣಿ ಪ್ರದ್ಯೋತದಿಂ ಪದ್ಮಿನಿಗೆ ನಗೆಯುಮಾನಂದಮುಂ ಲೀಲೆಯುಂ ಶ್ರೀ
ಯುಮನೂನಂ ಪುಟ್ಟುವಂತಾ ವರ ನರಪತಿವೃಷ್ಣೀಶನಿಂ[೪]ದುಗ್ರಸೇನೋ
ತ್ತಮನುಂ ಶ್ರೀದೇವಸೇನಾಖ್ಯನುಮೆಸೆವ ಮಹಾಸೇನ ಭೂಮೀಶನುಂ ತ[೫]
ತ್ಕ್ರಮದಿಂ ಗಾಂಧಾರಿಯುಂ ಪುಟ್ಟಿದರೆಸೆದಿರೆ ಪದ್ಮಾವತೀದೇವಿಗೊಲ್ಪಿಂ ೭೫

ವಸುದೇವಂ ಪೊಱಗಾಗೆ ಮಿಕ್ಕನರಮಕ್ಕಳ್ಗೊಪ್ಪಿದರ್ಕಾಮ ಕೇ
ಳಿ ಸುಖಾಸಕ್ತೆಯರಾಗಿ ಚಂದ್ರಕಳೆಯುಂ ವಾರಾಧನುರ್ಲೇಖೆಯುಂ
ಕುಸುಮಾಸ್ತ್ರಾವಳಿಯುಂ ಮನೋಜನ ವಸಂತ ಶ್ರೀಯುಮೋರಂದದಿಂ
ಮಿಸುಗಲ್ಮೀನ ಪತಾಕೆಯುಮ್ಮದವತೀ ರೂಪಕ್ಕೆ ಪಕ್ಕಾದವೋಲ್ ೭೬

[೬]ಸ್ವಾಗತ[೬] ॥

ಸುಯುಕ್ತೆ ಶಿವದೇವಿಯುಂ ನ[೭]ವಧೃತೀಶ್ವರಾದೇವಿಯುಂ
ಸ್ವಯಂಪ್ರಭೆಯುಮುದ್ಧ[೮]ವಾನ್ವಿತೆ ಸುನೀತೆಯುಂ [ಸೀತೆಯುಂ]*
ಪ್ರಿಯಂವದೆಯುಮಾ ಪ್ರಭಾವತಿಯುಮಂತೆ ಕಾಳಿಂದಿಯುಂ
ಕ್ರಿಯಾನಿಧಿಗಳಂತೆ ಸುಪ್ರಭೆಯುಮೆಂಬರಬ್ಜಾಕ್ಷಿಯರ್ ೭೭

೭೪. ಭೂಭಾರವನ್ನು ವಹಿಸುವುದಕ್ಕೆ ಈ ಬೆಟ್ಟಗಳೇಕೆ? ಅವು ನೆಮ್ಮದಿಯಾಗಿ ನಿದ್ರಿಸಲಿ, ನಾವೇ ನೋಡಿಕೊಳ್ಳೋಣವೆಂದು ಕೂರ್ಮನೂ ಶೇಷನೂ ಅಷ್ಟದಿಗ್ಗಜಗಳೂ ಈಹತ್ತು ಜನ ರಾಜಕುಮಾರರ ರೂಪತಾಳಿದರೆಂಬಂತೆ ಆ ಸಹೋದರರರು ಶೌರ್ಯಧನರಾಗಿದ್ದರು. ಆ ಹತ್ತೂ ಜನರಿಗೆ ತಂಗಿಯರಾಗಿ ಹುಟ್ಟಿದ ಕುಂತಿ ಹಾಗೂ ಮಾದ್ರಿಯರು ತಮ್ಮ ಉನ್ನತ ಶೀಲದಿಂದ ಪಾರ್ವತಿಗೆ ಸಮಾನರೆನಿಸಿದರು.

೭೫. ಸೂರ್ಯಪ್ರಕಾಶದಿಂದ ಪದ್ಮಿನಿಗೆ ವಿಕಾಸವೂ ಆನಂದವೂ ಲೀಲೆಯೂ ಶೋಭೆಯೂ ಹುಟ್ಟುವುವು. ಅದೇ ಮೇರೆಗೆ ಆ ನರಪತಿವೃಷ್ಣಿ ಮತ್ತು ಪದ್ಮಾವತಿಯೆಂಬ ದಂಪತಿಗಳಿಗೆ ಪುಣ್ಯ ಫಲದಿಂದ ಉಗ್ರಸೇನ, ದೇವಸೇನ ಮತ್ತು ಮಹಾಸೇನನೆಂಬ ಮೂವರು ಪುತ್ರರೂ ಗಾಂಧಾರಿಯೆಂಬ ಮಗಳೂ ಕ್ರಮವಾಗಿ ಹುಟ್ಟಿದರು.

೭೬. ವಸುದೇವನನ್ನು ಬಿಟ್ಟು ಉಳಿದ ಒಂಬತ್ತು ಸಹೋದರರಿಗೆ ಕಾಮಕ್ರೀಡಾ ಸುಖಾಸಕ್ತೆಯರಾಗಿ ಚಂದ್ರಕಳೆಯೂ ಇಂದ್ರಚಾಪವೂ ಮನ್ಮಥನ ಐದು ಬಾಣಗಳೂ ವಸಂತಲಕ್ಷ್ಮಿಯೂ ಕಾಮನ ಮೀನಧ್ವಜವೂ ಇವರ ರೂಪಕ್ಕೆ ಮರುಳಾಗಿ ಬಂದುವೊ ಏನೊ ಎಂಬಂತೆ (ಅನುಕ್ರಮವಾಗಿ) ಈ ಕೆಳಗಿನವರು) ಪತ್ನಿಯರಾದರು -

೭೭. ಶಿವದೇವಿ, ಧೃತೀಶ್ವರೆ, ಸ್ವಯಂಪ್ರಭೆ, ಸುನೀತೆ, ಸೀತೆ, ಪ್ರಿಯಂವದೆ, ಪ್ರಭಾವತಿ, ಕಾಳಿಂದಿ ಹಾಗೂ ಸುಪ್ರಭೆಯೆಂಬ ಕಮಲ ನೇತ್ರೆಯರು.

---

೧ ಜೆ (ಕ). ೨ ನಾ (ಕ, ಮ). ೩ ಮು (ಕಾ), ಮ (ಮ). ೪ ಗಿಂ (ಕ). ೫. ಸ (ಕ, ಮ). ೬ ಪೃಥ್ವೀ (ಪ), ಛಂದಸು (ಕಾ) ೭ ನು (ಕಾ). ೮ ತ್ವ (ಕಾ) * [ಸೀತೆಯುಂ]

ವ॥ ಅಂತು ಸೂರಸೇನ್[೧]ನಿಂ ಗೆಡ್ಡೆ[೧]ಗೊಂಡು ತನ್ನಿಂದಮೆ ಮೊಳೆವೋಗಿ ವೃಷ್ಣಿಯುಗಳದಿ ನೀರೆಲೆವೋಗಿ ಸಮುದ್ರವಿಜಯೋಗ್ರಸೇನಾದಿಗಳಿಂ ಮಡಲ್ತ್[೨] ಹರಿವಂಶವಲ್ಲರಿಗೆ ಮೊತ್ತ ಮೊದಲಾದ ತನ್ನ ಮಹಿಮೆ ಮಹೀತಳ ಮಹನೀಯಮಾಗೆ ಸೂರವೀರ ಮಹಾರಾಜಂ ರಾಜ್ಯಲತೆಗಡರ್ಪಾಗಿರೆ ಮತ್ತಮತ್ತಲ್[೬]

ಕುರುವಂಶ ಪ್ರಭುಶಕ್ತಿಗಂ[೭] ಸವಕೆಗಂ[೭] ತಾಂ ಪುಟ್ಟಿದಂ ಹಸ್ತಿನಾ
ಪುರದೊಳ್ ಸಂದ ಪರಾಶರಂ ಪರ ಶಿರ[ಃ[೮]] ಶೂಲಪ್ರತಾಪಂ ಪರಾ
ಶರನಿಂ ಸತ್ಯಪ[೯]ತಾಕೆ[೯] ಸತ್ಯವತಿಗಾದಂ ಮತ್ಸ್ಯ[೧೦]ರಾಜಾನ್ವಯಾಂ
ಬುರುಹಶ್ರೀಗೆ ಸುತಂ ಜಿತವ್ಯಸನನಾ ವ್ಯಾ[೧೧]ಸಂ ಯಶೋವಲ್ಲಭಂ ೭೮

ಸುತರಾದರಾ ಪರಾಶರ
ಸುತಂಗಮಾ ಸತಿ ಸುಭದ್ರೆಗಂ ಭದ್ರಮನಂ
ಧೃತರಾಷ್ಟ್ರಂ ಧೃತರಾಷ್ಟ್ರಂ
ವಿತತ ಯಶಃಪಾಂಡು ಪಾಂಡು ವಿದುರಂ ವಿದುರಂ ೭೯

ಅಂತು ಪೊಗಟ್ಟೆವೆತ್ತವರೊಳಗ್ಗದ ಪಾಂಡುವಿನಂತರಂಗಮಂ
ಕೊಂತಿಯ ರೂಪ್ ವರ್ಣನದ ಮಾತು ಜಗದ್ಗ[೧೨]ದಿತಂ ಬಟೆಕ್ಕಮಾ
ಕಂತುವ ಪುಷ್ಪಬಾಣನಿಕರಂ ಸುಖಲಬ್ಧಪಥಂ[೧೩] ಬಟೆಕ್ಕಮಾ
ಕಾಂತೆಯ ರೂಪಕಂ ಪೊಳೆದು ಪೊಕ್ಕುದು ಕೆಂಡದ ಬೊಂಬೆಯೆಂಬಿನಂ ೮೦

ವ॥ ಹೀಗೆ ಶೂರಸೇನನಿಂದ ಗೆಡ್ಡೆಯಾಗಿ ತಾನೆ ಮೊಳೆತು, ಇಬ್ಬರು ವೃಷ್ಣಿಗಳಾಗಿ ಎಲೆಯೊಡೆದು ಸಮುದ್ರವಿಜಯಾದಿಗಳಿಂದ ಹಬ್ಬಿ ನಿಂತ ಹರಿವಂಶವೆಂಬ ಬಳ್ಳಿಗೆ ಜನ್ಮದಾತನಾದ ಮಹಿಮೆ ಲೋಕಸ್ತುತವಾಗಲು, ಶೂರವೀರಮಹಾರಾಜನು ರಾಜ್ಯದ ಬಳ್ಳಿಗೆ ಆಧಾರವಾಗಿದ್ದನು. ಅತ್ತ ಇನ್ನೊಂದೆಡೆಗೆ -

೭೮. ಹಸ್ತಿನಾಪುರದಲ್ಲಿ ಕುರುವಂಶದ ಪ್ರಭುವಾದ ಶಕ್ತಿ ಎಂಬರಸನಿಗೆ ಪ್ರಸಿದ್ಧನಾದ ಪರಾಶರನೆಂಬ ಶತ್ರುಶೂಲಸ್ವರೂಪನಾದ ಪರಾಕ್ರಮಿ ಪುತ್ರನಾದನು. ಸತ್ಯವಂತಳಾದ ಸತ್ಯವತಿಯಲ್ಲಿ ಪರಾಶರನಿಗೆ ವ್ಯಾಸನೆಂಬ ಮಗನು ಹುಟ್ಟಿ ಮತ್ಸ್ಯರಾಜವಂಶಕ್ಕೆ ಶೋಭೆಯನ್ನು ಒದಗಿಸಿದನು.

೭೯. ಆ ಪರಾಶರ ಪುತ್ರನಿಗೆ ಸತಿ ಸುಭದ್ರೆಯಲ್ಲಿ ದೃಢಮನಸ್ಕನಾದನ ಧೃತರಾಷ್ಟ್ರನೂ ಯಶೋಧವಳನಾದ ಪಾಂಡುವೂ ಜ್ಞಾನಿಯಾದ ವಿದುರನೂ ಹುಟ್ಟಿದರು.

೮೦. ಹೀಗೆ ಪ್ರಸಿದ್ಧರಾದವರಲ್ಲಿ ಪಾಂಡುಕಮಾರನ ಅಂತರಂಗವನ್ನು ಕುಂತಿಯ ರೂಪವರ್ಣನೆಯ ಜಗತ್ಕೀರ್ತಿಕವಾದ ಮಾತು ಒಳಹೊಕ್ಕಿತು. ಅದರಿಂದಾಗಿ ಒಳ ಹೋಗುವ ಹಾದಿ ಸಿದ್ಧವಾದಂತಾಗಿ ಕಾಮನ ಪಂಚಬಾಣಗಳೂ ಸುಲಭವಾಗಿ ಬಂದು ಅವನ ಮನವನ್ನು ಸುಟ್ಟುವು; ಅವುಗಳ ಹಿಂದಿನಿಂದ ಆ ಚೆಲುವೆಯ ರೂಪವೂ ಕೆಂಡದ ಗೊಂಬೆಯಂತೆ ಜಗಜಗಿಸುತ್ತ ಒಳಕ್ಕೆ ನುಗ್ಗಿತು.

---

೧ ನಂ ಗೆಡೆ (ಕ), ನಿಂ ಗೆಡೆ (ಮ), ನ ನೆಡೆ (ಪ). ೨ ಲ್ತು (ಕಾ). ೬ ರ್ (ಕ), ೭ ಸಂ (ಪ). ೮ X (ಕ, ಪ)ಯ ೯ ೦ (ಕ, ಕಾ, ಮ, ಪ). ೧೦ ರಾಖ್ಯ (ಕ, ಮ, ಪ). ೧೧ ಭ್ಯಾ (ಕಾ). ೧೨ ಪ (ಕ, ಪ). ೧೩ ಥಿ (ಕಾ). ೧೪ ದಂ (ಮ).

ಕೆಂಡದ ನೀಳ್ದ ಕೇಸುರಿಯ ಬಣ್ಣದಶೋಕೆಯ ಪುಷ್ಪಪಲ್ಲವಂ
ಪಾಂಡುವಿನಂಗಮಂ ಸುಡುಗೆ ಪಾಸಿದ ಮಲ್ಲಿಗೆಯುಂ ಮೃಣಾಳಮಂ
ಕೊಂಡುವು ಕಿಚ್ಚಿನಿಂದಣಕಮಲ್ಲದೆ ಮೂಡಿದುದೆರ್ದು ಬೂದಿವ್ರೋಲ್
ಪಾಂಡುಗೆ ಕಾಮಪಾಂಡುರತೆ ಸಾರ್ಥಕ ನಾಮಮನುಂಟುಮಾಳ್ಪವೋಲ್ ೮೧

ಸುಡದೆ ಕನಲ್ವ ಕಿಚ್ಚಿನೊಡನಾಡಿದ ತಂಬೆಲರಾತಪಂಗಳಂ
ಕುಡಿವ ಸರೋರುಹಂ ಸುಡದೆ, ನುಂಗುವ ಪಾವಿನ ಪಲ್ಲನಂಜು ಗಿ
ಚ್ಚಿಡರ್ದಮೃತಾಂಶು ಮಂಡಳಮದೇಂ ಸುಡದೇ ಹಿಮವುಂಡು ಬಾಳ್ವ ತ
ಣ್ಮಡುವಿನ ಪೂವೆ ಸುಟ್ಟಪುದು ಮಾಯ್ದ ವಿಯೋಗಿಗಳೆಂತು ಬರ್ದಪರ್ ೮೨

ಪರಿಕಿಸೆ ಪಾಂಚಭೌತಿಕಮಿದೆಂಬುದಸಂಗತಮೇಕಭೌತಿಕಂ
ವಿರಹಿಜನಾಳಿಗೀ ಭುವನಮೆಂತೆನೆ ಸೂಸುವ ಶೀತಳಂ ಜಳಂ
ಸುರಭಿ ಸಮೀರಣಂ ಸ್ಮಿತವನೋಲ್ಲಸಿತಂ ವಸುಧಾತಳಂ ಸುಧಾ
ಕರ ಕರಪಾತ ಪಾಂಡುನಭಮಾದುದು ಪಾಂಡುಗೆ ಪಾವಕೋಪಮಂ ೮೩

ಶರಶಲ್ಯಮಿನಿತು ಸಿಲ್ಕಿಯು
[1]ಮರಿ[1]ದಸುವಂ ಪಿಡಿಯಲೆರ್ದೆಯನಲ್ಲದೆ ನಡ[2] ವಿ
ಸ್ಮರ ಶರತತಿ ಕಿಬಿಲರಿಯವು
ವಿರಹಿಯ ನೋವಿಂಗೆ ಸಾಯಲಿಲ್ಲದಜೆಂದಂ ೮೪

೮೧. ನೀಳವಾದ ಉರಿನಾಲಗೆಯ ಬಣ್ಣ ಹೊಂದಿದ ಅಶೋಕದ ಹೂದಳಿರು ಪಾಂಡುವಿನ ದೇಹವನ್ನು ಸುಟ್ಟುವು; ಹಾಸಿದ ಮಲ್ಲಿಗೆಯೂ ತಾವರೆ ನಾಳಗಳೂ ಸುಟ್ಟು, ಉಳಿದ ಬೂದಿ ಅವನ ಮೈಮೇಲೆ ಒರೆದುಕೊಂಡಿತೊ ಏನೊ ಎಂಬಂತೆ ಕಾಮಚಾಪದ ಪಾಂಡುರತೆ (ಬಿಳಿಚು)ಯನ್ನು ಹೊಂದಿ 'ಪಾಂಡು' (ಬಿಳುಪುಳ್ಳವನು) ಎಂಬ ಹೆಸರು ಸಾರ್ಥಕವಾದಂತಾಯಿತು.

೮೨. ಬೆಂಕಿಯೊಡನೆ ಆಡಿ ಬಂದ ತಂಗಾಳಿ ಸುಡುವುದಿಲ್ಲವೆ? ಬಿಸಿಲಿನ ತಾಪವನ್ನು ಹೀರಿಕೊಂಡ ತಾವರೆ ಸುಡುವುದಿಲ್ಲವೆ? ನುಂಗಿರುವ ರಾಹುವಿನ ಹಲ್ಲ ನಂಜೇರಿದ ಚಂದ್ರಬಿಂಬವೇನು ಸುಡುವುದಿಲ್ಲವೆ? ತಂಪನ್ನು ಉಂಡು ಬದುಕುವ ತಂಗೊಳದ ಹೂವೆ ಸುಡುವುದು. ಎಂದು ಮೇಲೆ ಪಾಪ! ವಿರಹಿಗಳು ಹೇಗೆ ಬದುಕುವರು?

೮೩. ಈ ಲೋಕವು ಪಂಚಭೂತಾತ್ಮಕವೆಂಬುದು ಸರಿಯಲ್ಲ; ವಿರಹಿಜನಕ್ಕೆ ಅದು (ಬೆಂಕಿಯೆಂಬ) ಒಂದೇ ಭೂತದಿಂದ ತುಂಬಿ ಹೋಗಿರುತ್ತದೆ. ಸೂಸುವ ತಂಪಾದ ನೀರು, ಸುಗಂಧ ಗಾಳಿ, ಅರಳಿದ ಉದ್ಯಾನಗಳಿಂದ ತುಂಬಿದ ಭೂಮಿ, ಬೆಳ್ದಿಂಗಳಿಂದ ಧವಳಿತವಾದ ಆಕಾಶ - ಎಲ್ಲವೂ ಪಾಂಡುವಿಗೆ ಬೆಂಕಿಯಾದುವೆ ವಿನಾ ಬೇರೆಯಾಗಲಿಲ್ಲ.

೮೪. ಶಲ್ಯದಂತೆ (ಕಾಮ) ಬಾಣಗಳು ನಟ್ಟು ನಿಂತಿದ್ದರೂ ಪ್ರಾಣವನ್ನು ಹಿಡಿದೆಳೆಯಲು ಸಾಧ್ಯವಾಗದಂತೆ ವಿರಹವೇದನೆಯ ಮೈಮರೆವು ಆವರಿಸಿದ್ದರಿಂದ, ಆ ಜೀವ ನಾಶವಾಗಲಿಲ್ಲ.

೧ ಮರೆ (ಕ) ಮುರಿ (ಕಾ). ೨ ಡೆ (ಕ, ಮ).

ವ॥ ಅಂತು ಕಂತುರಾಜನ ಕೊಂತದಂತೆ ಕೊಂತಿಯ ರೂಪಮೆರ್ದೆಯಂ [೧]ನಡೆ[೧] ನಾಡೆಯುಂ ನೊಂದು ಮದನದಾಹದಿಂ ದೇಹಂ ಕೊರಗಿ ಮಲ್ಮಲಂ ಮಱುಗಿ ಮನಮಂ [೨]ನಿಲ[೨] ಪಿಡಿಯಲಾಱದೆ ಪಾಂಡುರಾಜಂ ಪುಂಡರೀಕದಂತೆ ವನಮೇ ಭವನಮಾಗಿರ್ಪುದುಮೊಂದು ದಿವಸಮಾ ವಸಂತವಾಸಮೆಂಬ[೩] ವನದ ಮನೋಹರತೆ ಮನಮೆಳಸುವರಿಯೆ ಮನೋಹರಿಯೆಂಬ ಮನಃಪ್ರಿಯೆವೆರಸು ವಜ್ರಮಾಳಿಯೆಂಬ ವಿದ್ಯಾಧರಂ ಬಂದೊಂದು ಬಂಧುರಮಪ್ಪ ಮಾಧವೀ ಮಂಟಪದೊಳ್ ಮನೋಭವ ಸುಖಮನನುಭವಿಸಿ ತನ್ನ ಬೆರಲುಂಗುರದ ಕೆಂಬ[೪]ರಲ್ಗೆ[೪] ಕಣ್ಬಾತು ದಾಡಿಂಬದ ಬಿತ್ತು[೫]ಗೆತ್ತು ಸೋವುವ ಶುಕಶಿಶುಗೆ ಮಣಿ[೬] ಮುದ್ರಿಕೆಯಂ ಕಳೆದು ನೀಡಿ ನೀಡಿ ಮೇ[೭]ಳವಾಡಿ ಮಱಿ[೮]ದೀಡಾಡಿ ಪೋಪುದುಮಾ [೯]ಪದ[೯]ದೊಳ್ ಪಾಂಡುರಾಜಂ ಬಂದು ಮನೋಜ[೧೦]ಮುಕ್ತ[೧೦]ಬಾಣ ಭಿನ್ನಮಪ್ಪ ಬಿರಯಿಯೆರ್ದೆಯಿನುದಿರ್ದ ವಿರಹಾಗ್ನಿಯಂತಿರ್ದುಂಗುರಮಂ ಕಂಡು [೧೧]ಕೊಂಡು[೧೧] ನೀಡುಂ ಭಾವಿಸಿನೋಡುತ್ತುಮಿರೆ

ಆ ವಜ್ರಮಾಳಿ [೧೧]ಮಣಿ[೧೧] ಮು
ದ್ರಾವಿಚಯನ ಚಳಿತ ನಯನಾಕಾರ ಕಳಾ
ಕೋವಿದನಾತನ ಭಾಗ್ಯ[೧೨]ದ
[೧೩]ದೇವತೆ[೧೩] ಬರ್ಪಂತೆ ಬಂದನತಿ ಸಂಭ್ರಮದಿ ೮೫

ವ॥ ಬರೆ ಕಂಡರಸಂ ದರ್ಶನೇಂಗಿತದಿನೀತ[೧೪]ನುಂಗುರಮೆಂದಱಿದು ಕುಡುವುದುಮಾ[೧೫] ವಿವೇಕಕ್ಕೆ ಮೆಚ್ಚಿ ವಿಯಚ್ಚರನಿದು ಕಾಮರೂಪ ಸಾಧನಮೆಂಬುದು ನೀನುಂ

ವ॥ ಹೀಗೆ ಕಾಮರಾಜನ ಈಟಿಯಂತೆ ಕುಂತಿಯ ರೂಪವು ಎದೆಯಲ್ಲಿ ನಾಟಲಾಗಿ, ತುಂಬನೊಂದು, ಮದನ ತಾಪದಿಂದ ಮೈ ಕೊರಗಿ, ಮಲಮಲ ಮರುಗಿ, ಮನ ತಡೆಯಲಾರದೆ, ಹುಲಿಯಂತೆ ವನದಲ್ಲಿಯೆ ಆತನು ವಾಸವಾಗಿದ್ದನು. ಒಂದು ದಿನ ವಸಂತವಾಸನೆಂಬ ವನದ ಚೆಲುವಿಗೆ ಮನಮೆಚ್ಚಿ ವಜ್ರಮಾಳಿಯೆಂಬ ವಿದ್ಯಾಧರನು ಮನೋಹರಿಯೆಂಬ ತನ್ನ ನಲ್ಲೆಯೊಡನೆ ಬಂದು ಸುಂದರವಾದೊಂದು ಮಾಧವೀ ಮಂಡಪದಲ್ಲಿ ಕಾಮಸುವನ್ನು ಅನುಭವಿಸದ ಬಳಿಕ, ತನ್ನ ಬೆರಳುಂಗುರದ ಮಾಣಿಕ್ಯವನ್ನು ದಾಳಿಂಬದ ಬೀಜವೆಂದು ಆಸೆಯಿಂದ ನೋಡುತ್ತಿದ್ದ ಗಿಳಿಮರಿಯನ್ನು ಕಂಡು ತನ್ನ ಆ ಉಂಗುರವನ್ನು ತೆಗೆದು ಅದರ ಮುಂದೆ ಚಾಚಿ ಚಾಚಿ ಆಟವಾಡುತ್ತ ತಾನು ಹೋಗುವಾಗ ಅದನ್ನು ಮರೆತು ಅಲ್ಲಿಯೆ ಚೆಲ್ಲಿಹೋದನು. ಆ ಸಮಯಕ್ಕೆ ಪಾಂಡುರಾಜನು ಅಲ್ಲಿಗೆ ಬಂದು, ಕಾಮ ಬಾಣದಿಂದ ಸೀಳಿಹೋದ ವಿರಹಿಯ ಎದೆಯಿಂದ ಉದಿರಿಬಿದ್ದ ವಿರಹಾಗ್ನಿಯೊ ಏನೊ ಎಂಬಂತಿದ್ದ ಆ ಉಂಗುರವನ್ನು ಕಂಡು ಎತ್ತಿಕೊಂಡು ತುಂಬ ಆಸಕ್ತಿಯಿಂದ ನೋಡುತ್ತಿರಲಾಗಿ -

೮೫. ಆತನ ಭಾಗ್ಯದೇವತೆಯೆ ಬರುವಂತೆ, ವಜ್ರಮಾಳಿಯು ತನ್ನ ಉಂಗುರವನ್ನು ಹುಡುಕಲೆಂದು ರಭಸದಿಂದ ಅಲ್ಲಿಗೆ ಬಂದನು.

ವ॥ ಪಾಂಡುರಾಜನು ಅವನನ್ನು ಕಂಡೊಡನೆ, ಅವನ ಕಣ್ಣೆಂಗಿತದಿಂದ ಅದು

---

೧ X (ಕ), ೨ ನಿಲಿ (ಕಾ), ನೀಡಲ (ಕ), ನಿಡಲ (ಪ). ೩ + ಭ (ಕ, ಮ). ೪ ಲ್ಗೆ (ಕಾ). ೫ ಟ್ಟೆ (ಕಾ). ೬ + ಮಯ (ಕಾ). ೭ ಯೆ (ಪ). ೮ ಪುರ (ಕ, ಪ). ೯ X (ಕ, ಮ). ೧೦ X (ಕ, ಕಾ) ೧೧ ಯುಂ (ಕ, ಮ). ೧೨ ಗ, (ಕ, (ಮ). ೧೩ ದೇವಂ (ಕ). ದೈವಂ (ಮ). ೧೪ ನೆಗಿತ್ತದಿತ್ತ ನಿಂಗಿತದಿ ನೀತ (ಕಾ) ೧೫. + ತನ (ಮ)

ದುರ್ಲಭದಯಿತಾನುರಾಗರಾಶಿಯಾದ ತೆಱದಿಂ ತೋಱೆ ದಪ್ಪೆಯೀ[೧] ಮದೀಯ ಮುದ್ರಿಕೆ ನಿನ್ನ ಕೆಯ್ಯೊಳೊಂದೆರಡು ದಿವಸಮಿರ್ದು ಸರತ ಸಾರಥಿಯಕ್ಕೆಂದು ಕೊಟ್ಟು ಪೋ[೨]ದನಿ[೨]ತ್ತ ಪಾಂಡುರಾಜ[೩]ನುಮಾ[೩] ಪೊೞ್ತ ಪೊೞ್ತಾಗಿ ಕೊಂತಿಯಲ್ಲಿಗೆ ಕೂಟಂಬಡೆವಾಣತಿಗೆಂದು ಮದನ ಮುದ್ರಿಕೆಯಂ ಕೊಂಡು ಪೋಪಂತೆ ಮಣಿಮುದ್ರಿಕೆಯನಿಟ್ಟ[೪] ದೃಶ್ಯ ರೂಪನಾಗಿ ಹಸ್ತಿನಾಪುರದಿಂ[೫] ಪೋಗಿ ಕನ್ಯಾವ್ರತ[೬]ಭಂಗ[೬] ಭೀತಿಯಿಂ ಗಂಡುನೊಣನಡ್ಡ ಪಾಱದಂತಾಗಿ ಸುತ್ತಲುಂ ಕಟ್ಟಿದ ಕಟ್ಟಾನೆಗಳಿಂ ಪ್ರತ್ಯಂತ ಪರ್ವತಂಗಳ ಬಳಸಿನಿಂ ಬಗೆಗೊಳಿಸುವ ಕನಕನಗದಂತಿರಭ್ರಂಕಷಮಾದ ಕೆಂ[೭]ಬೊನ್ನ ಕನ್ನೆಮಾಡದೇೞನೆಯ ನೆಲೆಯೊಳ್ಸಮಾನ ವಯೋವಿಳಾಸ ವಿಭ್ರಮ ವಿಭವೆಯರಪ್ಪ ವಿಳಾಸಿನಿಯರ್ವೆರಸು ಕೆಮ್ಮುಗಿಲ ಪೊರೆಯೊಳ್ ಪೊಳೆವೆಳಮಿಂಚಿನ ಗೊಂಚಲಂತೆ[೮] ತಳತ್ತಳಿಸಿ ಕೇಳೀ ಕಲಹದಿಂ ಮುಳಿದ ಕಾಮನ ಕಾಲ್ವಿಡಿವ ರತಿಯಂತೆ ಕಾಮದೇವನಂ ಪೂಜಿಸಿ ಪೊಡೆವಡುತ್ತುಮಿರ್ದ ಕೊಂತಿ[೯]ಯಂ ಕಂಡು ಕೂಡಲ್ಬ[೧೦]ಯಸಿ ತನ್ನೊಳಿಂತೆಂದಂ

> ಗರಗರನಾಗಿ ಭೋಗಿಪೊಡೆ ಮೇಳಿಸಿ ಮುಗ್ಧೆಯನಾಗುಮಾೞ್ಪುದೋ
> ಗರದಧರಾಮೃತಂ ತುಳುಕಲಾಗದು ಬೀಸರವಾಗದಪ್ಪುಕ
> ಣ್ಬರಿಯಣಮಾಗದ[೧೧]ಣ್ಣಱೆಯದಿಂಪರೆ[೧೨]ಯಾದಲಂಪು ಮೀಸಲಂ
> ತಿರೆ ಮನಮಿರ್ಪುದೇಱ[೧೩]ಸಿದ[೧೩] ಲಜ್ಜೆಯ ಲಚ್ಚಣಮಂಗಜಾಜ್ಞೆಯಾ ೮೬

ಈತನ ಉಂಗುರವೆಂದು ಎಂದು ತಿಳಿದು ಕೊಟ್ಟುಬಿಟ್ಟನು. ಆತನ ವಿವೇಕಕ್ಕೆ ಮೆಚ್ಚಿಕೊಂಡ ವಿದ್ಯಾಧರನು "ಇದು ಕಾಮರೂಪಸಾಧನವೆಂಬ ಉಂಗುರ, ನೀನು ಕೂಡ ದುರ್ಲಭಳಾದ ನಲ್ಲೆಯ ಅನುರಾಗದಲ್ಲಿ ತೊಡಗಿರುವವನಂತೆ ತೋರುವೆ. ನನ್ನ ಈ ಉಂಗುರ ಒಂದೆರಡು ದಿನ ನಿನ್ನ ಕೈಯಲ್ಲಿ ಇದ್ದು ನಿನ್ನ ಪ್ರಿಯೆಯ ಸಮಾಗಮಕ್ಕೆ ಸಾಧನವಾಗಲಿ" ಎಂದು ನುಡಿದು ಅದನ್ನು ಕೊಟ್ಟು ಹೋದನು. "ತಕ್ಷಣ ಕುಂತಿಯ ಸಮಾಗಮಕ್ಕೆ ಹೊರಡೆಂದು ಮನ್ಮಥನು ಕೊಟ್ಟ ಆಜ್ಞಾಪತ್ರವೆಂಬಂತೆ ಆ ರತ್ನದುಂಗುರವನ್ನ ಕೈಯಲ್ಲಿ ಧರಿಸಿದೊಡನೆ ಅದೃಶ್ಯರೂಪನಾಗಿ ಹಸ್ತಿನಾಪುರದಿಂದ ಹೋಗಿ, ಕನ್ಯಾವ್ರತಭಂಗಭೀತಿಯಿಂದ ಒಂದು ಗಂಡುನೊಣವು ಕೂಡ ಹಾರಿ ಬರದಂತೆ ಸುತ್ತಲೂ ಕಟ್ಟಿದ ಮಹಾಗಜಗಳ ಕಾವಲಲ್ಲಿ ಪರ್ವತಗಳ ವರ್ತುಲದ ಮಧ್ಯೆ ಶೋಭಿಸುವ ಹೇಮಗಿರಿಯಂತೆ ಮುಗಿಲು ಮುಟ್ಟುವ ಚಿನ್ನದ ಅಂತಃಪುರದ ಏಳನೆಯ ಉಪ್ಪರಿಗೆಯಲ್ಲಿ ಓರಗೆಯ ವಿಲಾಸ ವಿಭ್ರಮವೈಭವದಿಂದ ಶೋಭಿಸುವ ವಿಲಾಸಿನಿಯರೊಡನೆ, ಕೆಮ್ಮೋಡದ ಮರೆಯಲ್ಲಿರುವ ಮಿಂಚಿನ ಗೊಂಚಲಂತೆ ಥಳಥಳಿಸಿ ಪ್ರಣಯ ಕಲಹದಿಂದ ಮುನಿಸಿಕೊಂಡ ಕಾಮನ ಕಾಲು ಹಿಡಿದು ಬೇಡಿಕೊಳ್ಳುವ ರತಿದೇವಿಯಂತೆ ಕಾಮದೇವನನ್ನು ಪೂಜಿಸಿ ನಮಸ್ಕರಿಸುತ್ತಿದ್ದ ಕುಂತಿಯನ್ನು ಕಂಡನು. ಕೂಡಲೆ ಕೂಟದ ಉದ್ವೇಗದಿಂದ ತನ್ನಲ್ಲಿಯ ಹೀಗೆಂದುಕೊಂಡನು -

೮೬. ಸೊಗಸಾಗಿ ಭೋಗಿಸುವುದಾದರೆ ಈ ಮುಗ್ಧೆಯನ್ನು ವಶಪಡಿಸಿಕೊಳ್ಳಬೇಕು. ಅಧರಾಮೃತದ ಸವಿ ತುಳುಕಲಾಗದು. ಅಪ್ಪುಗೆ ಸಡಿಲಾಗಕೂಡದು. ಇವಳು ಮೀಸಲು ಕನ್ಯೆ. ಕಣ್ನೋಟ ಅಧಿಕವಾಗಿದೆ, ಇಂಪು ಅರೆಯಾಗದೆ, ಅಚ್ಚಳಿಯದೆ ಮೀಸಲು ಸೊಗಸಿನಿಂದ ಕೂಡಿರುವ ಈಕೆಯ ಮನಸ್ಸು ಮನ್ಮಥನು ಏರಿಸಿದ ಲಜ್ಜೆಯಿಂದ ತುಂಬಿದೆ.

---

೧ ನೀ (ಕಾ). ೨ ಪದುಮಿ (ಕಾ). ೩ ನಾ (ಕಾ). ೪ ಟ್ಟು (ಕಾ). ೫ ಕ್ಕೆ (ಕ, ಮ, ಪ), ೬ X (ಮ). ೭ ಚಿಂ (ಮ). ೮ X (ಕ). ೯ + ದೇವಿ (ಮ), ೧೦ ಲೆ ಬ (ಕಾ). ೧೧ ಪ (ಪ). ೧೨ ಗೆ (ಕ, ಮ, ಫ). ೧೩ ಸದು (ಕ, ಪ, ಮ).

ಸೈರಣೆಗುಂದದತ್ತ ಮೊಗಮಾದೊಡೆ ಬೆರ್ಚ ಮನಕ್ಕೆ ಬೇಸಱಿಂ
ತಾರದೆ ಮೀಱಿ ಮೆಯ್ದೆಗೆಯೆ ಮಾಣದೆ ಪೋದೊಡೆ ಪೋಗದಿಚ್ಚೆಯಿಂ
ಗೋರಿಗೆ ತಂದು ಮುಗ್ಧೆಯ ಮನೋಮೃಗಮಂ ನವ ಸಾಂಪ್ರಯೋಗ ಶೃಂ
ಗಾರಮನಾಳ್ವವಂ ಮದನರಾಜನ ರಾಜ್ಯಮನಾಳ್ವನಲ್ಲನೇ ೮೭

ವ|| ಅಂತುಮಲ್ಲದೆಯುಂ

ಪೆಣ್ಣೊಱಗದೆ ಕೂರ್ತೆಱಗಿದ
ಕಣ್ಣೞಿದುಱಿದಂತೆ ಬಿಡುಗೊಡಂಬಡುಗೆ ನೊಣಂ
ಪುಣ್ಣಂ ಸಾರ್ವವೊಲೊಲ್ಲದೆ (ದ)
ಪೆಣ್ಣಂ ಸಾರ್ದಹಹ ಸಾಸಿಕೊಳ್ವ (ಳ್ಳು)ದ ಕೇಳಂ (ಳಾ) ೮೮

ವ|| ಎಂದು ನಿಜಸ್ವರೂಪಮನಾ ತರುಣಿಗೆ ತೋಱಲೆಂದು ಬಗೆದು

ಉಂಗುರಮಂ ಕಳೆಯಲೊಡಂ
ಪಿಂಗಿದುದು ಶರೀರಮಾಯೆ ಕೊಂತಿಯ ಪೂಜಾ
ಸಂಗಕ್ಕೆ ಮೆಚ್ಚಿ ಮೆಚ್ಚಿದ
ನಂಗಂ ಪ್ರತ್ಯಕ್ಷಮಾದವೋಲ್ ನೃಪನೆಸೆದಂ ೮೯

ವ|| ಆಗಳ್

ಗೊಂಚ[1]ಲ್ಲಿರೆ[1] ಚಲ್ಲುವ ನಯ
ನಾಂಚಳಮಂ ನಾಣ್ಚಿ ತೆಗೆವ ಕರಿಯಸಿಯಳ್ ಚೆ
ಲ್ವಂ ಚಲ್ಲಿದಳಿನನಿದಿರೊಳ್
ಮಿಂಚುವ ನವ ಮೇಘಮಾಲೆವೋಲ್ಕಾರಿದಿ[2]ರೊಳ್ ೯೦

೮೭. ನಲ್ಲೆ ಮೊಗವನ್ನು ತಿರುಗಿಸಿದರೆ ಸೈರಣೆಗೆಡದೆ ಮೈದೆಗೆದರೆ ಮನಕ್ಕೆ ಬೇಸರಪಟ್ಟುಕೊಳ್ಳದೆ ಬೇಟೆಗಾರನು ಜಿಂಕೆಯನ್ನು ಮೋಹಗೊಳಿಸಿ ಹಿಡಿಯುವಂತೆ ಅವಳ ಮನವನ್ನು ವಶಪಡಿಸಿಕೊಂಡು ಹೊಸ ಸಮಾಗಮದಲ್ಲಿ ಶೃಂಗಾರವನ್ನು ಸೂರೆ ಮಾಡುವವನು ಮನ್ಮಥರಾಜ್ಯವನ್ನು ಆಳುವ ರಾಜನೆ ಅಲ್ಲವೆ?

ವ|| ಅಷ್ಟೆ ಅಲ್ಲದೆ -

೮೮. ಹೆಣ್ಣು ಒಲಿಯದಿದ್ದರೆ ಬಿಟ್ಟು, ಒಲಿದ ಲಕ್ಷಣವನ್ನು ಕಂಡರೆ ಒಡಂಬಡಬೇಕು. ಹುಣ್ಣಿನ ಮೇಲೆ ನೊಣವೆರಗಿದಂತೆ ಒಲ್ಲದ ಹೆಣ್ಣನ್ನು ಸಾಧಿಸಿಕೊಳ್ಳಲಾಗದು"

ವ|| ಹೀಗೆ ಭಾವಿಸಿ ತನ್ನ ರೂಪವನ್ನು ಆ ಯುವತಿಗೆ ತೋರಬೇಕೆಂದು ಬಯಸಿ-

೮೯. ಉಂಗುರವನ್ನು ತೆಗೆದೊಡನೆ ಅದೃಶ್ಯದ ಮಾಯೆ ಹೊರಟು ಹೋಯಿತು. ಕುಂತಿಯ ಪೂಜೆಗೆ ಮೆಚ್ಚಿ ಪ್ರತ್ಯಕ್ಷನಾಗಿ ಮನ್ಮಥನೆ ಇದಿರಿಗೆ ನಿಂತನೊ ಎನೊ ಎಂಬಂತೆ ಪಾಂಡುರಾಜನು ಶೋಭಿಸಿದನು.

ವ|| ಆಗ -

೯೦. ವರ್ಷಾಗಮದಲ್ಲಿ ಮಿಂಚನ್ನು ಚೆಲ್ಲುವ ಮೋಡಗಳ ಸಾಲೆಂಬಂತೆ ದಟ್ಟವಾದ ತನ್ನ ಕಣ್ಣೆವೆಗಳನ್ನು ಎತ್ತಿ ಆಕೆ ಚೆಲುವಾದ ನೋಟವನ್ನು ಚಿಮ್ಮಿದಳು.

೧ ಲ್ತಿರೆ (ಕಾ), ಲ್ಲಿಗೆ (ಮ). ೨ ರು (ಕ, ಪ).

ಚಕಿತ ಪ್ರಕ್ಷಿಪ್ತ ಪಕ್ಷ್ಮಾಂತರದೊಳೆಳೆ[೧]ವೆಯಂ ಮೀಱಿದಂತಿರ್ಪ[೨] ದೀರ್ಘಾಂ
ಬಕ ಶಸ್ತ್ರಾಲೇಖೆಯಂ ತಚ್ಛ್ರವಣ ಕುವಳಯ ಶ್ರೇಣಿ ಶೋ[೩]ಣಾಗ್ರದೊಳ್ ದ
ರ್ಪಕದೇವಂ ದರ್ಪದಿಂ ಮಿಂಚಡರೆ ಮಸೆವವೋಲ್ ಚೆಲ್ವನಾಯ್ತಾಕೆಯತ್ತು
ತ್ತುಕಯಾತಾಯಾತ ವಕ್ರೋತ್ತರಳ ತರುಣಿ ಮಾನಿತ ನೇತ್ರತ್ರಿಭಾಗಂ ೬೧

ಮದನಂ ಮಧುಮಯವರುಣಾ
ಸ್ತ್ರದಿನೆಚ್ಚನೊ ಮದನಮೋಹರಸಮಂಗಜ ತಾ
ಪದಿನುರ್ಕಿದತ್ತೊ ಪೇಳೆನೆ
ಸುದತಿ ಬೆಮರ್ತಳ್ ಕುಮಾರನಂ ಕಾಣಲೊಡಂ ೬೨

ವ॥ ಅಂತು ಚಂದ್ರೋದಯದೊಳ್ ಬಂದುವಿ[೪]ಡುವ ಶಶಿಮಣಿಶಲಾಕೆಯಂತಿರ್ದಾಕೆಯಂ ಕಂಡು ಮನಂಗೊಂಡು

ಅಳಿ ಮುಗುಳಂ ತುಡುಂ[೫]ಕಿ [೬]ನವ[೬]ಸೌರಭಮಂ ಸವಿವಂತೆ ಗಂಡುಗೋ
ಗಿಲೆ[೭] ಪಡೆವಂತೆವೋಲ್ ಕಳಿಕೆಯೊಳ್ ರಸಮಂ ದಿವಸೇಂದ್ರನಬ್ಜ ಕು
ಟ್ಮಳಮನಲರ್ಚುವಂತೆ ಮಧು ಮುಗ್ಧವನಾಂಗನೆಯೊಳ್ ವಿಕಾಸಮ
ಗ್ಗಳಿ[೮]ಸಿರೆ ಕೂಡುವಂತೆ ಗಡ ಕೂಡಿದನಾಗಳ್[೯] ಪಾಂಡು ಕೊಂ[೧೦]ತಿಯೊಳ್ ೬೩

ವ॥ ಕೂಡಿ ಸುಖ[೧೧]ಸ್ವಪ್ನದಂತದೃಶ್ಯಮಾಗಿ ಪೋಗೆ[೧೨] ಕೆಲವಾನುಂ ದಿವಸದಿಂ

೬೧. ಬೆರಗಾಗಿ ತೆರೆದ ಕಣ್ಣೆವೆಗಳ ಕೆಳಗೆ ಕೌಮಾರ್ಯವನ್ನು ಮೀರಿದಂತಿದ್ದ ನೀಳವಾದ ಕಣ್ಣೆಂಬ ಶಸ್ತ್ರದ ಅಲಗನ್ನು ಆಕೆಯ ಕರ್ಣಾಭರಣವಾದ ನೈದಿಲೆ ಎಸಳೆಂಬ ಸಾಣೆಕಲ್ಲ ಮೇಲೆ ಮೀಂಚೇರುವಂತೆ ಕಾಮದೇವನು ಮಸೆಯುತ್ತಿರುವನೊ ಏನೊ ಎಂಬಂತೆ ಅತ್ತಿತ್ತ ಚಲಿಸುತ್ತಿರುವ ಆಕೆಯ ಕಣ್ನೋಟ ಚೆಲುವಾಯಿತು.

೬೨. ಕಾಮನು ಜೇನುತುಂಬಿದ ವರುಣಾಸ್ತ್ರವನ್ನು ಪ್ರಯೋಗಿಸಿದನೊ, ಅಥವಾ ಮನ್ಮಥನ ಮೋಹನರಸವೆ ಕಾಮತಾಪದಿಂದ ಉಕ್ಕಿಬಂದಿತೊ ಏನೊ ಎಂಬಂತೆ ಅವನನ್ನು ಕಂಡೊಡನೆ ಆ ಚೆಲುವೆ ಮೈ ಬೆವರೊಡೆಯಿತು.

ವ॥ ಚಂದ್ರೋದಯದಿಂದ ಹನಿಯೊಡೆವ ಶಶಿಕಾಂತ ಶಲಾಕೆಯಂತಿದ್ದ ಆಕೆಯನ್ನು ಕಂಡು ಮನಮೆಚ್ಚಿ -

೬೩. ದುಂಬಿಯು ಹೂವನ್ನು ಹಿಡಿದು ನವ ಪರಿಮಳವನ್ನು ಹೀರಿಕೊಳ್ಳುವಂತೆ, ಗಂಡುಕೋಗಿಲೆ ಕೊನರಿಂದ ರಸವನ್ನು ಪಡೆದುಕೊಳ್ಳುವಂತೆ, ಸೂರ್ಯನು ತಾವರೆಯ ಮೊಗ್ಗನ್ನು ಅರಳಿಸುವಂತೆ, ವನವೆಂಬ ಮುಗ್ಧಾಂಗನೆಯನ್ನು ವಸಂತನು ಉಲ್ಲಾಸಗೊಳಿಸಿ ಬೆರೆಯುವಂತೆ, ಪಾಂಡು ಕುಂತಿಯನ್ನು ಕೂಡಿದನು.

ವ॥ ಕೂಟದ ತರುವಾಯ ಸುಖಸ್ವಪ್ನದಂತೆ ಅದೃಶ್ಯನಾಗಿ ಹೊರಟುಹೋದನು. ಕೆಲದಿನಗಳಾದ ಮೇಲೆ -

---

೧ ಳೆ (ಮ), ಯ (ಕ). ೨ ರ್ದ (ಕಾ, ಮ). ೩ ಶಾ (ಕ, ಪ). ೪ ಬಿ (ಕಾ). ೫ ಳುಂ (ಕ, ಮ), ಬು (ಪ). ೬ ಮದ (ಕಾ). ೭ ಳೆ (ಕ). ೮ ಲಿ (ಕಾ, ಮ, ಪ). ೯ ಡೆ (ಕಾ, ಮ). ೧೦. ಕುಂ (ಕ). ೧೧ ಫಲ (ಕ, ಮ, ಪ). ೧೨ ಗಿ (ಕ, ಮ, ಪ).

ಎಳವಸಿ[೧]ಱಾಗೆ[೨] ಬಾಳಕಿಗೆ ಬೆಳ್ವಡರ್ದಂಗದೊಳಣ್ಪನಿಕ್ಕಿದ
ರ್ಮಳಯಜ ಪಂಕದಿಂ ಕಮಳಕುಟ್ಮಳದೊಳ್ ಮಱಿದುಂಬಿ ಪಾಯ್ದವೋ
ಲ್ತೊಳಪ ಕುಚಂಗಳೊಳ್ತುದಿಯ[೩] ಕತ್ತುರಿಯಂ ತೊಡೆದರ್ವಿದಗ್ಧೆಯ
ರ್ಕೆಳದಿಯರೊರ್ಮೆಯುಮ್ಮುಱಿಸಲೆಂದು ಕುಮಾರಿಯ ಗರ್ಭಚಿಹ್ನಮಂ ೯೪

ಪಡೆಯೆ ಮಗನಂ ನಿಧಾನಮ
ನಿಡುವಂತೆವೊಲಿಟ್ಟು ಪೊನ್ನ ಮಂದಸಿನೊಳಗಾ
ಗಡೆ ಗಡ ಬಿಟ್ಟರ್ಜಗುನೆಯ
ಮಡುವಿನೊಳೀ ಕೆಳದಿಯರ್ಗೆ ಕೊಂತಿಯೆ ನೋಂತಳ್ ೯೫

ವ|| ಅದನಾದಿತ್ಯನೆಂಬರಸನಾದಿತ್ಯನುದಯನಗಮನೇಱಿ ನಳಿನವನಮನಲರಿಸುವಂತಿರುತ್ತುಂಗ ಪ್ರಾಸಾದಮನೇಱಿ ಸೌಂದರರಾಜಪುರದ ಸೌಂದರಿಯರ ನಳಿನವನಮನಲರಿಸುತ್ತುಂ ಯಮುನಾ ಮನೋಹರತೆಯಂ ನಿರೀಕ್ಷಿಸುತ್ತುಮಿರ್ದು ಪರಿವ ಕರಿಯನಿಱಿ ಮುಗಿಲ ಮೇಗೆ[೪] ಪರಿವ ರವಿಮಂಡಳದಂತೆ ತೆರೆ ಮಸಗಿ ಪರಿವ ಜಗುನೆಯ ಪೊನಲೊಳೆ ಪೋಪ ಪೊನ್ನ ಮಂದಸಂ ಕಂಡು ತರಿಸಿ ಕಮಳ ಕುಟ್ಮಳದಳಪುಟಮಂ ತೆಱೆವಂತೆ ತಾನೆ ತೆಱೆದು ನಲಿದು ನೋಡಿ ಕೆಲದೊಳ್ಕುಪ್ಪೆಗೊಂಡ ಮಾಣಿಕಂಗಳ ಬೆಳಗಿನೊಡನೆ ಬಾಳಕನ ಮೆಯ್ಬೆಳಗು ದಳವೇಱಿ ಮಿಳ್ಳಿಸಿ ದೊಳ್ಳಿಱಿದಾ[೫]ಡುತ್ತುಂ

೯೪. ಆ ಬಾಲಕಿಗೆ ಬಸಿರಿನ ಲಕ್ಷಣಗಳು ತೋರತೊಡಗಲು, ಜಾಣೆಯರಾದ ಆಕೆಯ ಸಖಿಯರು ಆಕೆಯ ದೇಹ ಬಿಳುಪೇರುತ್ತಿರುವುದನ್ನು ಚಂದನಲೇಪದಿಂದಲೂ ತಾವರೆಯ ಮೊಗ್ಗಿನ ಮೇಲೆ ದುಂಬಿ ಬಂದು ಕುಳಿತಂತೆ ಮೊಲೆಯ ತೊಟ್ಟು ಕಪ್ಪಾದುದನ್ನು ಕಸ್ತೂರಿಯ ಲೇಪದಿಂದಲೂ ಮುಚ್ಚಿ, ಗರ್ಭಚಿಹ್ನವನ್ನು ಮರೆಮಾಡಿದರು.

೯೫. ಅನಂತರ ಆಕೆ ಮಗನನ್ನು ಹೆತ್ತಾಗ, ಚಿನ್ನದ ಪೆಟ್ಟಿಗೆಯಲ್ಲಿ ನಿಧಿಯಿಡುವಂತೆ ಆ ಕೂಸನ್ನು ಇಟ್ಟು ಯಮುನಾನದಿಯಲ್ಲಿ ಅದನ್ನು ತೇಲಿಬಿಟ್ಟರು. ಇಂತಹ ಸಖಿಯರನ್ನು ಪಡೆದುದು ಕುಂತಿಯ ಪುಣ್ಯ.

ವ|| ಸೂರ್ಯನು ಉದಯಪರ್ವತವನ್ನೇರಿ ಕಮಲವನವನ್ನು ಅರಳಿಸುವಂತೆ ಅರಮನೆಯ ಉಪ್ಪರಿಗೆಯನ್ನೇರಿ ಸೌಂದರರಾಜಪುರದ ಸುಂದರಿಯರೆಂಬ ತಾವರೆಗಳನ್ನು ಅರಳಿಸುತ್ತಿದ್ದ ಆದಿತ್ಯನೆಂಬ ಅರಸನು ಯಮುನಾನದಿಯ ಚೆಲುವನ್ನು ನೋಡುತ್ತಾ ಇದ್ದು, ತೇಲುವ ಕರಿಯ ಮೋಡದ ಮೇಲೆ ಮೂಡುವ ಸೂರ್ಯಬಿಂಬದಂತೆ ತೆರೆತೆರೆಯಾಗಿ ಹರಿಯುವ ಯಮುನಾ ಪ್ರವಾವಸದಲ್ಲಿ ತೇಲಿ ಬರುವ ಚಿನ್ನದ ಪೆಟ್ಟಿಗೆಯನ್ನು ಕಂಡು, ಅದನ್ನು ತರಿಸಿಕೊಂಡು, ತಾವರೆ ಮೊಗ್ಗಿನ ಎಸಳು ಬಿಡಿಸಿದಂತೆ ಅದರ ಮುಚ್ಚಳವನ್ನು ತಾನೆ ತೆರೆದು, ಉತ್ಸಾಹದಿಂದ ನೋಡಿದಾಗ ಪಕ್ಕಗಳಲ್ಲಿಯ ಮಾಣಿಕ್ಯ ರಾಶಿಯ ಕಾಂತಿಯೊಡನೆ ಅದರೊಳಗಿನ ಬಾಲಕನ ದೇಹಕಾಂತಿಯೂ ಬೆರೆತು ಥಳಥಳಿಸುತ್ತ -

---

೧. ಸು (ಕಾ. ೨ ಗಿ (ಕಾ). ೩ + ಪಿರಿದ (ಕ, ಮ), ಪೀರಿದ (ಪ). ೪ ಲೆ (ಕಾ, ಮ). ೫ ದೊ (ಕ, ಮ), ದುನೋ (ಪ).

ಕನಕ ಸರಸಿರುಹದೊಳ್[೧] ಸಿರಿ
ಮನಸಿಜನಂ ಪೆತ್ತು ಬಿಟ್ಟು ಪೋದಂತಿರೆ ಕಾಂ
ಚನ ಮಂಜೂಷೆಯೊಳೊಪ್ಪುವ
ಜನಪತಿಸುತನಂ ನೃಪಾಳ ಕೃಷ್ಣಂ[೨] ಕಂಡಂ ೯೬

ವ॥ ಕಂಡು ಮನಂಗೊಂಡು ಬಾಳಕಂ ನಿಮ್ಮೊಳಾರ ಕೆಯ್ಗೆ ನೆಗೆದು ನಗುತುಂ ಬಂದನವಳ್ಗೆ ಕುಡುವೆನೆಂಬುದುಮರಸಿಯರೆಲ್ಲ[೩]ಮೆಮಗೆ ತಮಗೆಂದು ಗೊಂದಳಿ[೪]ಸಿ ಕರಕಿಸಲಯಂಗಳನಡಸಿ ನೀಡುವುದುಂ ತಳಿರ ತುಱುಗಲಂ ತೊಱೆ[೫]ದು ತಾಮರೆಗೆಱಗಲ್ಮಱುಗುವ ಮಱಿದುಂಬಿಯಂತೆ ಮಂದಸಿನಿಂ ರಾಧೆಯೆಂಬರಸಿಯ ಪಾಣಿಪದ್ಮಕ್ಕೆ ಬಂದು ವಿಶಾಕೆಯಿಂದನುರಾಧೆಗೆ ಬಂದ ಬಾಳೇಂದುವಿನಂತೆ ಬಾ[೬]ಳಕಂ ದರಹಸಿತ ಧವಳ ದೀಧಿತಿಗಳಂ ಪರಪೆ ಪುತ್ರ ವಿಶೇಷದಿಂದಾಕೆ ಕೊಟಿಕ್ಕೊಗಂಗೊಂಡು ಕೊಂಡಾಡಿ ನಡಪೆ

ಕಿವಿವಿಡಿದು ಪುಟ್ಟಿ ಕನ್ನೆಗೆ
ದಿವಾಕರಂ ರಾಧೆಗೀಯೆ ಮಗನಾದುದಱಿಂ
ದವೆ ಕರ್ಣಂ ಕಾನೀನಂ
ರವಿಜಂ ರಾಧೇಯನೆಂಬ ಪೆಸರಂ ಪಡೆದಂ ೯೭

ಅವಿಹಿತ ಕುಮತಕಥಾಂಬು
ಪ್ರವೇಶದಿಂ ಕರ್ಣಶೂಲಮಾರ್ಗಾಗದೊ ಪೇ
ಟ್ಕಿವಿಯೊಳ್ ಕರ್ಣಂ ಗಡ ಸಂ
ಭವಿಸಿದನಿಂತಪ್ಪ ಪುಸಿಯ ಪೊಟ್ಟಳ[೭]ಮೊಳವೇ ೯೮

೯೬. ಹೊಂದಾವರೆಯಲ್ಲಿ ಲಕ್ಷ್ಮಿ ಮನ್ಮಥನನ್ನು ಹೆತ್ತು ಬಿಟ್ಟುಹೋದಳೊ ಏನೊ ಎಂಬಂತೆ ಚಿನ್ನದ ಪೆಟ್ಟಿಗೆಯಲ್ಲಿ ಶೋಭಿಸುತ್ತಿರುವ ರಾಜಕುಮಾರನನ್ನು ಆತನು ಕಂಡನು.

ವ॥ ಹೀಗೆ ಕಂಡು ಸಂತೋಷಪಟ್ಟು, "ನಿಮ್ಮಲ್ಲಿ ಯಾರಕೈಗೆ ಆ ಬಾಲಕನು ನೆಗೆದು ಬರುವನೊ ಅವಳಿಗೆ ಅವನನ್ನು ಕೊಡುವೆನು" ಎಂದನು. ಅರಸಿಯರೆಲ್ಲರೂ ನನಗೆ ತನಗೆಂದು ಮುಗಿಬಿದ್ದು ತಮ್ಮ ಕೋಮಲವಾದ ಕೈಗಳನ್ನು ತೆರೆದು ನೀಡಲಾಗಿ, ತಳಿರುಗಳ ಗೊಂಚಲಿನಿಂದ ತಾವರೆಗೆ ಎರಗುವ ಮರಿದುಂಬಿಯಂತೆ ಆ ಬಾಲಕನು ಪೆಟ್ಟಿಗೆಯಿಂದ ರಾಧೆಯೆಂಬ ಅರಸಿಯ ಕೈಗೆ ಬಂದು, ವಿಶಾಖಾನಕ್ಷತ್ರದಿಂದ ಅನುರಾಧಾ ನಕ್ಷತ್ರದೆಡೆಗೆ ಬಂದ ಬಾಲಚಂದ್ರನಂತೆ ಮುಗುಳ್ನಗೆಯ ಬೆಳ್ವೆಳಗನ್ನು ಪಸರಿಸಿದನು. ಪುತ್ರ ಮೋಹದಿಂದ ಆಕೆ ಅತ್ಯಂತ ಸಂತೋಷಪಟ್ಟು ಪ್ರೀತಿಯಿಂದ ಸಲಹಿದಳು.

೯೭. ಕನ್ಯಾ ಪುತ್ರನಾಗಿ ಕಿವಿಹಿಡಿದುಕೊಂಡು ಹುಟ್ಟಿ, ಆದಿತ್ಯನೆಂಬ ಅರಸನು ರಾಧೆಯೆಂಬವಳಿಗೆ ಅವನನ್ನು ಕೊಟ್ಟ ಕಾರಣವಾಗಿ, ಆ ಬಾಲಕನಿಗೆ ಕಾನೀನ, ಕರ್ಣ, ರವಿಜ ಹಾಗೂ ರಾಧೇಯನೆಂಬ ಹೆಸರು ಬಂದುವು.

೯೮. ಆ ಯೋಗ್ಯವಾದ ಕುಮತ ಕಥೆಯೆಂಬ ನೀರು ಕಿವಿಯಲ್ಲಿ ಹೊಕ್ಕರೆ ಯಾರಿಗೆ ಕರ್ಣ ಶೂಲೆಯಾಗಲಿಕ್ಕಿಲ್ಲ? ಕರ್ಣನೆಂಬವನು ಕಿವಿಯಲ್ಲಿ ಹುಟ್ಟಿದನಂತೆ! ಇಂತಹ ಸುಳ್ಳಿನ ಕಂತೆ ಇನ್ನೊಂದುಂಟೆ?

---

೧ ಳ್ (ಕ). ೨ ಷ್ಣಂ (ಮ). ೩ + ರು (ಮ). ೪ ಣಿ (ಕಾ). ೫ ಹ (ಕಾ). ೬ ಐ (ಕ, ಮ, ಪ),

ತನ್ನಂ ಪಾಂಡುಗೆ ಕೊಟ್ಟು ಕನ್ನೆಯೊಳಗಾರ್ಗೀ[1] ಸಾಹಸಂ ಕೂಡಿತೆಂ
ಬನ್ನಂ ಕೂಡಿದ ಕುಂತಿ ಕಂತುಮನದೊಳ್ತಾಂ[2] ರಚ್ಚೆಯೊಳ್ ಪುಟ್ಟಿ ಪೆ
ತ್ತಿ[3]ನ್ನಂ ತಾನೆನೆ [4]ತಾನೆದಾನಿ[4] ಸುಭಟಂ ಸೌಭಾಗಿನೇಯಂ ದಲೆಂ
ದೆನ್ನಂ ಕೀರ್ತಿಸನಾರ್ತುರ್ ಕೂರ್ತುರ್ ಕೃತಭೂಲೋಕರ್ಣನಂ ಕರ್ಣನಂ ೯೯

ಧರೆಗಿತ್ತುದು[5]ಸ್ಸ್ವನಾದನೆ
ಸಿರಿವಂತಂ ಕೀರ್ತಿಗಂಜುವನೆ ಕಲಿ ಪಿರಿದುಂ
ಪೊರೆದಾಳ್ದನ ಕಾರ್ಯಕ್ಕೋ
ಸರಿಸದೆ ಸತ್ತವನೆ ಬಲ್ಲನೆಂಬಂ ಕರ್ಣಂ ೧೦೦

ತೊಡರ್ದರಿಯಂ ಕೇಸರಿಯೊಳ್
ತೊಡರ್ದಿಭವಮೆಂತಂತೆ ಮಾ[6]ಡುವಂ ಭುಜಬಳದಿಂ
ಪಡೆದೊಡಮೆಯುಮಂ ಪೆಣ್ಣಂ
ಪಡೆದಂತಿರೆ ಬೇಡಿದವರ್ಗೆ ಕುಡುವಂ ಕರ್ಣಂ ೧೦೧

ವ॥ [7]ಮತ್ತಿತ್ತ[7] ಕೊಂತಿಯ ಕನ್ನೆ ಸಾಹಸದಿನಾದ ಕನ್ನೆವೇಟದೊಳ್

ತರುಣಿಯ ಮೆಯ್ಯ ಬೆಂಕೆಯೊಳೆ ಬಿರ್ದಮೃತಾಂಶು ಮರೀಚಿ ಸುಟ್ಟ ಕ
ರ್ಪುರದವೊಲಾಗಿ[8] ಸುಟ್ಟಪು[9]ದಿದ[9]ಲ್ಲದೊಡೆಲ್ಲಿಯದೆಲ್ಲಿ ತಾಪಮೋ
ಸರಿಸದೆ ಪುಷ್ಪಬಾಣನಿಸೆ ನಾಂಟಿ ಮುರುಂಟಿದ ಪೂವೆ ಪುಳ್ಳಿಯಾ
ಗಿರೆ ಮನಮೆಯ್ದೆ ಬೆಂದಪು[10]ದದಿ[10]ಲ್ಲದೊಡೆಲ್ಲಿಯದಂಗಜಾನಳಂ ೧೦೨

೯೯. ಕನ್ನೆತನದಲ್ಲಿ ಮನ್ಮಥ ಭಾವದಿಂದ ಕುಂತಿ ಪಾಂಡುರಾಜನಿಗೆ ತನ್ನನ್ನು ಸಮರ್ಪಿಸಿಕೊಂಡು ಹೆತ್ತ ಮಗನಾಗಿ, ಈತನು ತಾನೇ ದಾನಿ, ವೀರ, ಸೌಭಾಗ್ಯವಂತನೆಂದು ಪ್ರಸಿದ್ಧನಾದನು. ಭೂಲೋಕ ಸ್ತುತನಾದ ಇಂತಹ ಕರ್ಣನನ್ನು ಮೆಚ್ಚಿ ಹೊಗಳದವರಾರು?

೧೦೦. ಜನಕ್ಕೆ ದಾನಮಾಡಿ ಬಡವನಾದವನೇ ಶ್ರೀಮಂತ, ಕೀರ್ತಿಗೆ (ಅಪವಿತ್ರತೆ?)ಗೆ ಅಂಜುವವನೆ ಶೂರ, ತನ್ನನ್ನು ಸಾರಿ ಸಲಹಿದ ಒಡೆಯನ ಕಾರ್ಯಕ್ಕಾಗಿ, ಹಿಂದೆಗೆಯದೆ ಪ್ರಾಣಾರ್ಪಣೆ ಮಾಡಿದವನೆ ಬಾಳಿದವನು ಎಂಬುದು ಕರ್ಣನ ಮತ.

೧೦೧. ಏರಿ ಬಂದ ಆನೆಯನ್ನು ಸಿಂಹ ಹೇಗೆ ನಾಶಮಾಡುವುದೊ ಹಾಗೆ ತನ್ನನ್ನು ಎದುರಿಸಿದ ಶತ್ರುವನ್ನು ತನ್ನ ಭುಜದಿಂದ ಕರ್ಣನು ಕೊಂದು ಹಾಕುವನು. ಬೇಡಿ ಬಂದ ವರನಿಗೆ ತನ್ನ ಮಗಳನ್ನು ಕೊಡುವ ಕನ್ಯಾಪಿತೃವಿನಂತೆ ತಾನು ಗಳಿಸಿದ ಧನವನ್ನು ಬೇಡಿದವರಿಗೆಲ್ಲ ಆತನು ದಾನಮಾಡುವನು.

ವ॥ ಇತ್ತ ಕನ್ಯಾಸಾಹಸದಿಂದ ಉಂಟಾದ ಕುಂತಿಯ ಕಾಮತಾಪದಲ್ಲಿ -

೧೦೨. ಆ ಯುವತಿಯ ಮೈಯ ಬೆಂಕೆಯಲ್ಲಿ ಬಿದ್ದ ಚಂದ್ರಕಿರಣಗಳು ಉರಿವ ಕರ್ಪೂರದ ಹಾಗೆ ಸುಡುವುದು; ಹಾಗಲ್ಲವಾದರೆ ಬೆಳ್ದಿಂಗಳೇಕೆ ತಾಪದಾಯಕವಾಗಬೇಕು?

---

೧ ಗೀ (ಕ, ಮ), ದೀ (ಪ). ೨ ತಾ (ಕ, ಪ), ೩ ತ್ತೆ (ಕ, ಪ). ೪ ತಾನಿದಾನಿ (ಮ), ತಾಗಿದಾಗಿ (ಕ, ಪ). ೫ ದ (ಕ, ಮ, ಪ). ೬ ನೋ (ಮ). ೭ ಮತ್ತಂ (ಕ, ಮ, ಪ). ೮ ಗೆ (ಪ). ೯ ದದಿ (ಕಾ), ದಿದಿ (ಮ), ೧೦ ದಿದ (ಮ).

[೧]ಕಡು[೨]ದಣ್ಣೆಲರಲೆಯೆ ಬೆಮ
ರ್ತೊಡೆ ಬೀಸುವರಬ್ಜದಳದಿನಬಳೆಗೆ ಬೆಳ್ಳಂ
ಗೆಡೆ[೩]ದೆಳವೆಳ್ದಿಂಗಳೊಳಂ
ಕೊಡೆವಿಡಿದ[೪]ರ್ ಸಖಿ[೪]ಯರಂಗತಾಪಮದೆಂ[೫]ತೋ ೧೦೩

*ವ।। ಅದನಱಿದಭಿ[೬]ಮುಖ[೬]ಪ್ರಜಾತ ಪ್ರಜಾಪತ್ಯಸಂಬಂಧ ಬಂಧುರಮಪ್ಪ [೭]ಬಂಧು[೭] ಭಾವಮೆಸೆಯೆ

ಸಿಂಧು ಸಿರಿಯಂ[೮] ವಿಭೂತಿಯು
ಮಂ ಧರಣೀಧರಂಗೆ ಕೊಟ್ಟವೊಲ್ ಪಾಂಡುನೃಪಂ
ಗಂಧಕವೃಷ್ಣಿನೃಪಂ ಕೊ
ಟ್ಟಂ ಧರೆ ಮಿಗೆ ಪೊಗೞೆ[೯] ಕೊಂತಿಯಂ ಮಾದ್ರಿಯುಮಂ ೧೦೪

ಅಳಿನೀಲಜ್ಯಾಲೇಖೆಯುಂ[೧೦] ಕಾಮನ[೧೧] ಕುಸುಮಧನುರ್ಲೇಖೆಯುಂ[೧೨] ಪುಷ್ಪಬಾಣಾ
ವಳಿಯಂ ಪೆತ್ತಂತೆ ಪಾಂಡುಕ್ಷಿತಪನ ಸತಿಯರ್ ಕೊಂತಿಯುಂ ಮಾದ್ರಿಯುಂ ಕೋ
ಮಳೆಯರ್ಕಾಮಾನುರಾಗಂ ಪಡೆದು ಧರ್ಮಾತ್ಮಜಂ ಭೀಮಸೇನಂ
ಚ[೧೩]ಳದೊಳ್ತಳ್ತರ್ಜುನಂ ಸಂದ ನಕುಳ ಸಹದೇವರ್ಕಳಿಂದಾದರೈವರ್ ೧೦೫

ಎಡೆಬಿಡದೆ ಕಾಮನು ಹೊಡೆದ ಹೂಬಾಣಗಳೆ ಉರಿವ ಕೊಳ್ಳಿಗಳಾಗಿ ಮನಸ್ಸು ಬೇಯುತ್ತಿರುವುದು. ಹಾಗಲ್ಲವಾದರೆ ಮದನತಾಪವೆಲ್ಲಿಯದು?

೧೦೩. ಅತ್ಯಂತ ಶೀಲತವಾದ ಗಾಳಿಗೆ ಆಕೆ ಬೆವತಂತಲ್ಲ ಸಖಿಯರು ತಾವರೆ ಎಲೆಯಿಂದ ಅವಳಿಗೆ ಗಾಳಿ ಹಾಕುವರು; ಮಹಾಪೂರವಾಗಿ ಬಿದ್ದ ಬೆಳ್ದಿಂಗಳಲ್ಲಿಯೂ ಆಕೆಗೆ ಕೊಡೆ ಹಿಡಿಯುವರು. (ಎಂದ ಮೇಲೆ) ಆಕೆಯ ದೇಹದ ತಾಪವೆಷ್ಟಿದ್ದಿತು!

ವ।। ಅದನ್ನರಿತು ರಾಜರಾಜರಲ್ಲಿ ಪರಸ್ಪರ ರಕ್ತಸಂಬಂಧದ ಬಂಧುಭಾವ ಶೋಭಿಸುವಂತೆ -

೧೦೪. ಸಮುದ್ರರಾಜನು ಲಕ್ಷ್ಮಿಯನ್ನು ಸಂಪತ್ತನ್ನೂ ವಿಷ್ಣುವಿಗೆ ಧಾರೆಯೆರೆದಂತೆ, ಅಂಧಕವೃಷ್ಣಿರಾಜನು ಪಾಂಡುರಾಜನಿಗೆ ಕುಂತಿಯನ್ನು ಮಾದ್ರಿಯನ್ನೂ ಧಾರೆಯೆರೆದು ಕೊಟ್ಟನು.

೧೦೫. ಕಾಮನ ಪುಷ್ಪ ಧನಸ್ಸೂ ದುಂಬಿಗಳಿಂದಾದ ಹೆದೆಯೂ ಐದು ಪುಷ್ಪಬಾಣಗಳನ್ನು ಹೆತ್ತಂತೆ, ಪಾಂಡುರಾಜನ ಕೋಮಲ ಸತಿಯರಾದ ಕುಂತಿಯೂ ಮಾದ್ರಿಯೂ ಕಾಮಾನುರಾಗವನ್ನು ಹೊಂದಿ ಧರ್ಮ, ಭೀಮಸೇನ, ಛಲವಂತನಾದ ಅರ್ಜುನ, ನಕುಲ ಹಾಗೂ ಸಹದೇವರೆಂಬ ಐವರು ಮಕ್ಕಳನ್ನು ಹೆತ್ತರು.

---

೧. ಕುಡ (ಕ). ೨ ಡಯ್ (ಕ), ಡ (ಕಾ). ೩. ವ (ಪ), ೪ ತಿ (ಕಾ). ೫ ದೆನಿ (ಕಾ). * ಈ ವಚನ ಕಾ ಪ್ರತಿಯಲ್ಲಿಲ್ಲ. ೬ ಮತಪ್ರೀತಿ (ಮ). ೭ ಬಿಂದು (ಮ). ೮ ಯುಂ (ಕ, ಮ). ೯ ಯಂ (ಕ, ಮ). ೧೦ ದ (ಪ). ೧೧ ಯಂ (ಕ). ೧೨ ಯುಂ (ಕ, ಪ). ೧೩ ಬ (ಮ).

ಕಡುಗಲಿ ಧೃತರಾಷ್ಟ್ರಂಗಂ
ಕುಡೆ ನರಪತಿವೃಷ್ಣಿನೃಪತಿ ನೆಱೆ ನೂಱೆಸಳಂ
ಪಡೆವಂತಿರೆ ಪದ್ಮಿನಿ ತಾಂ
ಪಡೆದಳ್ ಗಾಂಧಾರಿ ನೂರ್ವರಂ ನಂದನರಂ ೧೦೬

ಸುತರೊಳ್ದುರ್ಯೋಧನನದಿ
ಕತೆ ದುಃಶಾಸನನ ದೃಢತೆ ದುರ್ಧರ್ಷಣನು
[೧]ದ್ಧತಧೃತಿ[೧] ದುರ್ಮರ್ಷಣನ
ಪ್ರತಿಮತೆ[೨] ಗಾಂಧಾರಿಗಿತ್ತುದತಿ ಸಮ್ಮ[೩] [೪]ದಮಂ[೪] ೧೦೭

ವ|| ಅಂತು ಹರಿವಂಶಮುಂ ಕುರುವಂಶಮುಂ ಸಿಂಧುಯುಗಳ ಸಂಭೇದದಂತೆ [೫]ಭೇದಿ[೫]ಸಲ್ಬಾರದಂತು ಕೂಡಿ ಕೊರ್ವುವಡೆದು ಸುಕೃತ ಫಲಮಂ ಪಲಕಾಲಮನುಭವಿಸುತ್ತುಮಿರೆ ಮತ್ತಮೊಂದು ದಿವಸಂ ಗಂಧಮಾದನಮೆಂಬುದಯಗಿರಿಯೊಳುದಯಿಸಿದ ಸುಪ್ರತಿಷ್ಠರೆಂಬ ಸೂರಿ ಸುಧಾಕರರ ಸಮೀಪದೊಳ್ ಸೂರವೀರಚಕೋರಂ ಪುತ್ರಪೌತ್ರಾದಿಗಳ್ವೆರಸು ನಿರ್ಮಳ ಧರ್ಮಾಮೃತ ಮನೀಂಟಿ ನಿಷ್ಠುರ ಸಂಸಾರ ಪರಿತಾಪತೃಷ್ಣೆಯಂ ತೂಳ್ದಿ ಸಂವೇಗಮಂ ಸಂವರಿಸಿಯಂಧಕವೃಷ್ಣಿ[೬]ಯಂ ಬರಿಸಿ[೬]

ಎತ್ತಿದನಧಿಕೋತ್ಸವದಿಂ
ದುತ್ತಮ ಸತ್ವಂ[೭]ಗೆ ರಾಜ್ಯಭರಮಂ ಪೊಱೆಯಂ
ಪೊತ್ತಿರ್ಪಂತಿರೆ ಗಾಂ[೮]ಪರೆ[೮]
ಮತ್ತಾಂಪವರುಳ್ಳೊಡಮಳ ಹರಿಕುಳತಿಳಕಂ ೧೦೮

೧೦೬. ನರಪತಿ ವೃಷ್ಣಿರಾಜನು ತನ್ನ ಮಗಳಾದ ಗಾಂಧಾರಿಯನ್ನು ಮಹಾ ಶೂರನಾದ ಧೃತರಾಷ್ಟ್ರನಿಗೆ ಕೊಟ್ಟನು. ತಾವರೆ ನೂರು ಎಸಳನ್ನು ಪಡೆಯುವಂತೆ ಆಕೆ ನೂರ್ವರು ಪುತ್ರರನ್ನು ಹಡೆದಳು.

೧೦೭. ಆ ಮಕ್ಕಳಲ್ಲಿ ದುರ್ಯೋಧನನ ಅಧಿಕತೆ, ದುಶ್ಶಾಸನನ ದೃಢತೆ, ದುರ್ಧರ್ಷಣನ ಮಹಾಧೈರ್ಯ, ದುರ್ಮರ್ಷಣನ ಅಪ್ರತಿಮತೆಗಳು ಗಾಂಧಾರಿಗೆ ಅತ್ಯಂತ ಸಂತೋಷವನ್ನಿತ್ತುವು.

ವ|| ಹೀಗೆ ಹರಿವಂಶವೂ ಕುರುವಂಶವೂ ಎರಡು ಸಮುದ್ರಗಳ ಸಂಯೋಗದಂತೆ ಅಭೇದ್ಯವಾಗಿ ಕೂಡಿಕೊಂಡು ಅಭ್ಯುದಯವನ್ನು ಹೊಂದುತ್ತ ಹಲವು ಕಾಲದವರೆಗೆ ಪುಣ್ಯಫಲವನ್ನು ಅನುಭವಿಸುತ್ತ ಇರುವಾಗ ಒಂದು ದಿವಸ ಗಂಧಮಾದನ ಪರ್ವತದಲ್ಲಿ ಉದಯಿಸಿದ ಸುಪ್ರತಿಷ್ಠರೆಂಬ ಯತಿಚಂದ್ರರ ಸನ್ನಿಧಿಯಲ್ಲಿ ಸೂರವೀರನು ಚಕೋರ ಪಕ್ಷಿಯಂತೆ ಮಕ್ಕಳು ಮೊಮ್ಮಕ್ಕಳು ಸಹಿತನಾಗಿ ಧರ್ಮಾಮೃತವನ್ನು ಸವಿದು ಕಠೋರವಾದ ಸಂಸಾರತಾಪವೆಂಬ ದಾಹವನ್ನು ಪರಿಹರಿಸಿಕೊಂಡು ವೈರಾಗ್ಯವನ್ನು ತಾಳಿ ಅಂಧಕ ವೃಷ್ಣಿಯನ್ನು ಕರೆತರಿಸಿ -

೧೦೮. ಅತ್ಯಂತ ವೈಭವದಿಂದ ಸಮರ್ಥನಾದ ಆತನಿಗೆ ರಾಜ್ಯಭಾರದ

೧ ದ್ಧತಿ (ಕಾ). ೨ + ಸತಿ (ಕಾ). ೩ ಮ್ಮು (ಮ). ೪ ದಿಂ (ಕಾ). ೫ ಬಿಡಿ (ಕ, ಮ), ಪಿಡಿ (ಪ), ೬ ಯೆಂ ಬರಸು (ಕ, ಪ). ೭ ತ್ವಂ (ಕಾ). ೮ ಪಂ (ಪ).

ವ|| ನರಪತಿವೃಷ್ಣಿಗಂ ಯುವರಾಜ[1]ಪದಮಂ ಕೊಟ್ಟು ತಪಂಬಟ್ಟನಲ್ಲಿಂ ಬಳಿಯಂ ಪನ್ನೆರಡು ವರ್ಷಂ ಪೋಗೆ

ಶತಪತ್ರಶ್ರೀಯನಿಂದುಪ್ರಭೆಯನಿಳಿಸೆ ವಕ್ತ್ರೇಂದು ಮೆಯ್ಸೂರ್ಯಕಾಂತ
ದ್ಯುತಿಯಂ[2] ಚಂದ್ರೋಪಳಚ್ಛಾಯೆ[3]ಯನೊಲಿಸೆ ಚಕೋರೌಘಮಂ ಚಕ್ರವಾಕೀ
ತತಿಯಂ ಪಂಚೇಂದ್ರಿಯಂಗಳ್ ಪಗಲುಮಿರುಳುಮೋರಂದದಿಂ ಪೋಲೆ ಪೂತ
ಪ್ರತಿಮಾಯೋಗೈಕನಿಷ್ಠಂ ನೆಲಸಿದನಗದೊಳ್ ಸುಪ್ರತಿಷ್ಠಂ ವರಿಷ್ಠಂ ೧೦೯

ಆ ಮುನಿಗೆ ಗಜಜಿ ಗರ್ಜಿಸಿ
ಜೀಮೂತಂ ಮೊಟಗಿ ಮುತ್ತುವಂತಿರೆ ಗಿರಿಯಂ
ಭೀಮೋಪಸರ್ಗಮಂ ಗಡ
ತಾಮಸದಿಂ ಮಾಡಿದಂ ಸುದರ್ಶನದೇವಂ ೧೧೦

ಆ ರಿಪುವಿನುಪದ್ರವಮಂ
ಸೈರಿಸಿ[4]ದಾ ಯತಿಗೆ ಪುಟ್ಟಿದತ್ತು ತಮಸ್ಸಂ
ಹಾರಕಮಮೃತಂ ಮಥಿತಾಂ
ಭೋರಾಶಿಗೆ ಪುಟ್ಟುವಂತೆ ಕೇವಲಬೋಧಂ ೧೧೧

ವ|| ಆಗಳಾ ಗಂಧಮಾದನಮೇದಿನೀಧರಕ್ಕೆ ಕೇವಳಿ[5] ಪ್ರಾಜ್ಯ ಪೂಜಾ ಪರಮೋತ್ಸವಮಂ

ಹೊರೆಯನ್ನು ವಹಿಸಿಕೊಟ್ಟನು. (ರಾಜ್ಯ) ಭಾರವನ್ನು ವಹಿಸಿಬಲ್ಲವರು ಬೇರೆ ಇರುವಾಗ, ತಾವೇ ಇನ್ನೂ ಅದನ್ನು ಹೊತ್ತುಕೊಂಡಿರಲು ಹರಿವಂಶದ ರಾಜಶ್ರೇಷ್ಠರೇನು ಮೂರ್ಖರೆ?

ವ|| ನರಪತಿವೃಷ್ಣಿಗೆ ಯುವರಾಜ ಪದವಿಯನ್ನು ಕೊಟ್ಟು ಆತನು ತಪಸ್ಸಿನಲ್ಲಿ ತೊಡಗಿದನು. ಅಲ್ಲಿಂದ ಹನ್ನೆರಡು ವರ್ಷಗಳಾದ ಮೇಲೆ -

೧೦೯. ತನ್ನ ಮುಖವು ತಾವರೆಯ ಸಿರಿಯನ್ನೂ ಚಂದ್ರಪ್ರಭೆಯನ್ನು ಹೀಗಳೆಯುವಂತೆ ಕಳೆದೋರಲಾಗಿ, ದೇಹವು ಸೂರ್ಯಕಾಂತ ಚಂದ್ರಕಾಂತಗಳ ಕಾಂತಿಯನ್ನು ಪಡೆಯಲಾಗಿ, ಪಂಚೇಂದ್ರಿಯಗಳು ಚಕೋರಪಕ್ಷಿಗಳನ್ನು ಹಗಲಿರುಳೂ ಹೋಲಲಾಗಿ, ಮಹಾತ್ಮನಾದ ಸುಪ್ರತಿಷ್ಠನು ಬೆಟ್ಟದ ಮೇಲೆ ಪ್ರತಿಮಾಯೋಗದಲ್ಲಿ ನೆಲಸಿದನು.

೧೧೦. ಬೆಟ್ಟಕ್ಕೆ ಗುಡುಗಿನ ಮೋಡಗಳು ಮುತ್ತುವಂತೆ ಅರಚುತ್ತಲೂ ಗರ್ಜಿಸುತ್ತಲೂ ಸುದರ್ಶನನೆಂಬ ದೇವನು ಆ ಮುನಿಗೆ ಅತ್ಯಧಿಕವಾಗಿ ಉಪಸರ್ಗವನ್ನುಂಟುಮಾಡಿದನು.

೧೧೧. ಮಥನ ಮಾಡಿದಾಗ ಸಮುದ್ರದಲ್ಲಿ ಅಮೃತ ಉದಿಸಿಬಂದ ರೀತಿಯಲ್ಲಿ ಆ ಶತ್ರುವಿನ ಉಪದ್ರವವನ್ನು ಸಹಿಸಿಕೊಂಡು ಯತಿಗೆ ಅಜ್ಞಾನ ಸಂಹಾರಕವಾದ ಕೇವಲಜ್ಞಾನವು ಉಂಟಾಯಿತು.

ವ|| ಆಗ ಆ ಗಂಧಮಾದನ ಗಿರಿಗೆ ಕೇವಲಿಯ ಪೂಜೋತ್ಸವ ಮಾಡಲೆಂದು

---

೧. ಜ್ಯ (ಕ, ಮ, ಪ). ೨. ಯಿ (ಪ). ೩. ಯಿಂ (ಪ) ೪ ಸ (ಪ). ೫ ಳ (ಮ).

ಮಾಡಲ್ಬರ್ಪ [ಪುರಹೂತನ] ದೇವನಿಕಾಯದ ದುಂದುಭಿಧ್ವಾನಾಹೂತನಾಗಿ[1] ಪಿರಿಯರಸಿವೆರಸಂಧಕ ವೃಷ್ಣಿಯುಮಂ ಬಂದು ಭುವನಬಂಧುವಂ[2] ದೇವದುಂದುಭಿ ದೇವಧ್ವನಿಪ್ರಭವವಿಭವ ವೈಡೂರ್ಯ ರತ್ನಾಕರ ಪ್ರರೋಹಣರೋಹಣ ನಗೇಂದ್ರ ಖಗೇಂದ್ರ ದೇವೇಂದ್ರ ಗವೇಂ[3]ದ್ರ ಸಮೂಹ ಸಮಸ್ತ[4]ಮಸ್ತ[4]ಕಪ್ರಕರ್ಷಣಘರ್ಷಣ ವಿಕೀರ್ಣ ಪಾದಪೀಠ ಪ್ರಕೀರ್ಣಮಣಿಗಣಾರುಣಕಿರಣರೇಣು ಕ್ರೀಡಾನುರಂಜಿತ ರಾಜಕುಂಜರಬೃಂದನಂ ಬಂದಿಸಿ ಮುಂದೆ ಕುಳ್ಳಿರ್ದು ಕೆಯ್‌ಗಳಂ ಮುಗಿದು

ಕೇವಳಿ[5] ಬಿನ್ನಪಮಿಂತೀ
ದೇವರ್ಕಳ್ ನಿನ್ನನೊಸೆದು ಪೂಜಿಸಿದಪರಾ
ದೇವಂ ಮಾಡಿದನೇಕೆಯೊ
ದೈವಗುರೂ[6]ಪೇಟಿ ನಿನ[6]ಗುರೂಪದ್ರವಮಂ ೧೧೨

ಎನೆ ಜಿನನೆಂದಂ ಕೇಳಾ
ತನೆ ಕ[7]ರಮುಪಕಾರಿಯೆನಗೆ ಪೀಡಿಸಿ[8]ದೊಡೆ[8] ಕಾಂ
ಚನ ಪಾಷಾಣಕಮಂ ಪೊ
ನ್ನನೆ ಮಾೞ್ಪಂ ಪೊಲ್ಲಕೆಯ್ದು[9]ನಪ್ಪನೆ ನೃಪತೀ ೧೧೩

ವ|| ಅದಂ ಪೇೞ್ವೆಮೀ ಜಂಬೂದ್ವೀಪದ ಭರತಕ್ಷೇತ್ರದ ಚಂಪಾಪುರದ [10]ಪರದರ್[10] ಸೂರದತ್ತನುಂ ಸುದತ್ತನುಮೆಂಬ[11]ರಿರ್ವರುಂ ಪರದುವೋಗಿ ಪಿರಿದಪ್ಪೊಡಮೆ[12]ಯಂ ಪಡೆದು ಪೊೞಲಂ ಪುಗುವಲ್ಲಿ ಸುಂಕಿಗರ್ಕಾಣ್ಬರೆಂಬ ಶಂಕೆಯಿಂದುಸಿರಂ ಬಿಡಲಾಱದಸುವಂ ಬಿಡುವಂತಾ ಪುರದ ಪೇರಡವಿಯೊಳೊಂದು ಪೊದ[13]ಟ್ಟು ಪರ್ವಿದ ಪೊದಱ ಮೊದಲೊಳ್

ಬರುವ ಇಂದ್ರನ ದೇವಸಮೂಹಗಳ ದುಂದುಭಿನಾದವನ್ನು ಕೇಳಿ ಅಂಧಕವೃಷ್ಣಿಯ ತನ್ನ ಹಿರಿಯರಸಿಯೊಡನೆ ಬಂದು, ದೇವ ದುಂದುಭಿಗಳ ಹಾಗು ದೇವತೆಗಳ ಧ್ವನಿಯಿಂದಲೂ ರತ್ನಖಚಿತವಾದ ನಗೇಂದ್ರ ಖಗೇಂದ್ರ ದೇವೇಂದ್ರ ಗವೇಂದ್ರ ಸಮಸ್ತರ ಕಿರೀಟಗಳು ಬಂದು ಬಾಗಿ ಬಾಗಿ, ಅವುಗಳಿಂದ ಹೊಮ್ಮುವ ರತ್ನಕಿರಣಗಳ ಕೆಂಬೆಳಕಿನ ಶೋಭೆಯಿಂದಲೂ ರಂಜಿಸುತ್ತಿರುವ ಆ ಮಹಿಮನನ್ನು ವಂದಿಸಿ ಮುಂದೆ ಕುಳಿತುಕೊಂಡು ಕೈಮುಗಿದು -

೧೧೨. "ಕೇವಲಿಗಳೆ, ಒಂದು ಬಿನ್ನಹವುಂಟು. ಸಕಲ ದೇವರು ಪ್ರೀತಿಯಿಂದ ನಿಮ್ಮನ್ನು ಪೂಜಿಸುತ್ತಿರುವರು. ಹೀಗಿರುವಾಗ ಒಬ್ಬ ಆ ದೇವನು ನಿಮಗೇಕೆ ಘೋರವಾದ ಉಪದ್ರವನ್ನುಂಟುಮಾಡಿದನು? ಹೇಳಿ"

೧೧೩. ಎಂದು ಕೇಳಲಾಗಿ ಆ ಜಿನನ ಹೀಗೆಂದನು - "ಆತನೇ ನಮಗೆ ತುಂಬ ಉಪಕಾರ ಮಾಡಿದವನು. ರಾಜನೇ, ಕೇಳು, ಚಿನ್ನದ ಅದಿರುಳ್ಳ ಕಲ್ಲನ್ನು ಮರ್ದಿಸಿ, ಹೊನ್ನನ್ನು ತೆಗೆಯುವವನ ಕೆಲಸವೇನು ಕೆಟ್ಟುದೆ?

ವ|| (ಪೂರ್ವದ ಕಥೆಯನ್ನು) ಹೇಳುವೆನು. ಕೇಳು. ಈ ಜಂಬೂದ್ವೀಪದ ಭರತಕ್ಷೇತ್ರದ ಚಂಪಾಪುರಕ್ಕೆ ಸೇರಿದವರಾದ ಸೂರದತ್ತ ಮತ್ತು ಸುದತ್ತ ಎಂಬ ಇಬ್ಬರು

---

೧ + ರೆ (ಕ, ಪ). ೨ ವೆಂದು (ಕ, ಪ). ೩ ಣೇಂ (ಮ). ೪ X (ಕ, ಕಾ ಪ). ೫ ಳ (ಪ). ೬ ಪೇಣನಿನ (ಮ), ಪ್ರೇರಣಂ (ಕ, ಪ) ೭ ಪ (ಕಾ) ೮ ದಯ್ (ಕಂ ದೊಂ (ಪ). ೯ ಯ್ತು (ಕ, ಪ). ೧೦ ಣ (ಕ). ೧೧ + ರವ (ಮ). ೧೨ ವೆ (ಕ, ಮ). ೧೩ ರ (ಕಾ).

ಎರೆದವರ್ಗಮನುಗ್ರಹಿಸುವ
ಪರಮ ಕವೀಶ್ವರರ್ಗ[೧]ಮೀವ[೧] ದಾನಿಗಳೇಂ[೨] ಬಂ
ದೆರೆಯದ ನೆಲಕಂ ಪೀಡಿಸು
ವರಸಿಂಗಂ ಕುಡುವ ಕೃಪಣನಗ್ಗಳಮಲ್ತೆ ೧೧೪

ವ|| ಎಂಬ ನೀತಿಯಂ[೩] [೪]ಪೂಣದೆ ಪೂಳ್ದು[೪] ಪೋಪುದುಮೊರ್ವಂ ಕಳ್ಳಸಿಗಂ ಕಳ್ಳಂ ಕೊರ್ವಿಸುವ ಬೇರುಂ ಬಿಕ್ಕೆ[೫]ಯುಮಂ [೬]ಬರುಂಟುತುಂ[೬] ಬಂದಾ ಪೊದಱ ಮೊದಲನಗು[೭]ೞ್ದು ನೆಗಪಿ ತನ್ನನೆ[೮]ನ್ನದೆಂದು ನಚ್ಚುವರಂ ನಗುವಂತು ಗ[೯]ಜಗಲಿಸುತ್ತುಮಿರ್ದ ಕಾಂಚನಪಂಚರತ್ನ ಸಂಚಯಮಂ ಕಂಡು[೧೦]ಕೊಂಡು ಶೌಂಡಿಕಂ ಧನಶೌಂಡನಾಗಿ ಪೋದನಿತ್ತಲಾ ಪರದರಿರ್ವರುಮಡವಿಯೊಳ್ ಮಡಗಿದೊಡಮೆಯುಂ ಕಾಣದೆ ಕಾಟ್ಕೋಣಂಗಳಂತೆ ಕೆಕ್ಕಳಗೆಳರ್ದು ಕೆಚ್ಚನಾದ ಕಣ್ಗಳಿಂ ಬಿಚ್ಚನೆ ಬಿಟ್ಟು ಬಿರಿವಿನಮೊದಱಿ [೧೧]ಕೆದಱಿ[೧೧] ಯೊರ್ವರೊರ್ವರಂ ನಂಬದ ಬಗೆಯಿಂ ಕನಕಾಸ್ವಾದಮಿಲ್ಲದೆಯುಂ ಮರುಳ್ಗಸಗಿ ಪಸುಗೆಗೆಟ್ಟು ಪಸಿಯ ಬಡಿಗೆಗಳನೆತ್ತಿಕೊಂಡು

ವ್ಯಾಪಾರಿಗಳು ವ್ಯಾಪಾರಕ್ಕೆ ಹೋಗಿ ಹೇರಳವಾಗಿ ಹಣವನ್ನು ಸಂಪಾದಿಸಿಕೊಂಡು ಪಟ್ಟಣಕ್ಕೆ ಪ್ರವೇಶ ಮಾಡುವಾಗ ಸುಂಕದವರು ಕಂಡಾರೆಂಬ ಭೀತಿಯಿಂದ ಉಸಿರು ಬಿಡಲಾರದೆ, ಪ್ರಾಣವನ್ನೆ ಬಿಡುವಂತೆ ಆ ಪಟ್ಟಣದ ಬಳಿಯ ಮಹಾರಣ್ಯದಲ್ಲೊಂದು ವಿಸ್ತಾರವಾಗಿ ಹಬ್ಬಿದ ಪೊದರಿನ ಬುಡದಲ್ಲಿ -

೧೧೪. ಬಂದು ಬೇಡಿಕೊಂಬವರಿಗೆ ಮಾತ್ರ ಧನವನ್ನು ದಾನ ಮಾಡುವ, ಹಾಗೂ ಮಹಾಕವೀಶ್ವರರಿಗೆ ನೀಡುವ ದಾನಿಗಳೇನು ಹೆಚ್ಚಿನವರು? ಬಂದು ಕೇಳದ ನೆಲಕ್ಕೂ, ಪೀಡಿಸುವ ರಾಜನಿಗೂ ತನ್ನ ಧನವನ್ನು ನೀಡುವ ಜಿಪುಣನು ಅವರಿಗಿಂತ ಮಿಗಿಲಲ್ಲವೆ?

ವ|| ಎಂಬ ನೀತಿಯನ್ನು ಬಿಡದೆ ಅಲ್ಲಿ ಹೂಳಿ ಹೋದರು. ಆನಂತರ ಒಬ್ಬ ಹೆಂಡ ಮಾರುವವನು ಹೆಂಡಕ್ಕೆ ಸೊಕ್ಕು ತರುವ ಬೇರು ಮೊದಲಾದುವನ್ನು ಹುಡುಕಲು ನೆಲವನ್ನು ಕೆದರುತ್ತ ಅಲ್ಲಿಗೆ ಬಂದು, ಆ ಹೊದರಿನ ಬುಡದಲ್ಲಿ ಅಗೆದನು. ಅಲ್ಲಿ ಸಿಕ್ಕುದನ್ನು ಮೇಲೆತ್ತಿದಾಗ ತನ್ನನ್ನು "ನನ್ನದೆಂ"ದು ನಚ್ಚಿದವರನ್ನು ಅಣಕಿಸಿ ನುಂಗುವಂತೆ ಜಗಜಗಿಸುತ್ತಿರುವ ಚಿನ್ನದ ಹಾಗೂ ರತ್ನಗಳ ನಿಧಿಯನ್ನು ಕಂಡು, ಎತ್ತಿಕೊಂಡು ಕೇವಲ ಶಾಂಡ (ಹೆಂಡ ಮಾಡುವವ) ನಾಗಿದ್ದವನು ಈಗ ಧನಶೌಂಡ (ಧನವಂತ)ನಾಗಿ ಹೊರಟು ಹೋದನು. ಇತ್ತ ಆ ವ್ಯಾಪಾರಿಗಳಿಬ್ಬರೂ ಮರಳಿ ಬಂದು ತಾವು ಬಚ್ಚಿಟ್ಟಿದ್ದ ಧನವನ್ನು ಹುಡುಕಿ ಕಾಣದೆ, ಕಾಡುಕೋಣಗಳಂತೆ ಪರಸ್ಪರರನ್ನು ಕೆಕ್ಕಳಿಸಿ ನೋಡಿ, ಕೂಗಾಡಿ ಅಬ್ಬರಿಸಿ ಒಬ್ಬರನ್ನೊಬ್ಬರು ನಂಬದೆ ಮುದ್ದುಗುಣಿಕೆ ಸೇವಿಸದಿದ್ದರೂ ಮರುಳುತನವಾವರಿಸಿ ಹಸಿ ಬಡಿಗೆಗಳನ್ನು ಎತ್ತಿಕೊಂಡು—

---

೧ ಮಿವು (ಕ, ಮ, ಪ). ೨ ಳುಂ (ಕ, ಮ). ೩ ಯುಂ (ಕ) ೪ ಪೂಣದೆ ಪೂಣ್ದು (ಮ, ಪ), ಪೂಣ್ದದೆ ಪೂಣ್ದು (ಕ), ಪೂಣದ ಪೂಳ್ದು (ಕಾ). ೫ ಕ್ಕೆ (ಕ, ಮ, ಪ). ೬ ಬೆರಟುತ್ತಂ (ಕ), ಬೆರಟುತ್ತುಂ (ಪ), ಬರಂಟುತ್ತಂ (ಮ). ೭ ಗ (ಕಾ). ೮ ದ (ಕ, ಪ). ೯ X (ಕಾ). ೧೦ + ಮದಂ (ಮ). ೧೧ X (ಕ, ಪ, ಮ).

ಮಿದುಳ್ಗಳು[೧]ಗೆ ತಲೆಯ ಸಿಪ್ಪುಗ
[೨]ಳುದು[೨]ರೆ ದೃಢಕ್ರೋಧ ಲೋಭ[೩]ವಶ[೩]ದಿಂದಂ ಮೋ
ದಿ[೪]ದ ಸೂರದತ್ತನುಂ ಕಲಿ
ಸುದತ್ತನುಂ ಸತ್ತು ಮೊದಲ ನರಕಕ್ಕಿಟಿದರ್ ೧೧೫

ಆ ನರದಿಂದೆ ಬಿಂಜದ
ಕಾನನದೊಳ್ ಬಂದು ತಗರ್ಗಳಾದರ್ಪರದರ್
ವಾನೇಯ ಮತ್ತ ವಾರಣ
ಪೀನಂಗಳ್ ಶೃಂಗಕುಲಿಶದಲಿತ ನಗಂ[೫]ಗಳ್ ೧೧೬

ಅಗಜ ಗಜಮದಿರೆ[೬] ಜಳಮುಗೆ
ಮಿಗೆ ಮೇ[೭]ಗೆ [೮]ಸಿಡಿ[೮]ಲ್ಲೊಡ್ಡುಣ್ಮೆ[೯] ಜೆಡೆಗೊಂಡುರಿ ನಾ
ಲಗೆವೊಲಿರೆ ದಹನನೇಱಿದ
ತಗರಂದದಿ ನಟ್ಟ ತಾಗಿ ತೆಗೆದುವು ತಗರ್ಗಳ್ ೧೧೭

ಮಲೆದ[೧೦]ಲೆದು ತಾಗೆ ಕೊಂಬಿನ
ತಲೆಯೊಳ್ ಕೋದೊ[೧೧]ಣಗಿ ಸಣಗಲಾ[೧೨]ದ ಮಿಗಂ[೧೩]ಗಳ್
ಗಲಗಲಕೆ ನಲುಗೆ ನಲಿದು[೧೪]ಲಿ
ವಲಿವಂ[೧೫] ಕಟ್ಟಿದವೊಲೆಸೆದುದಾ ಮೇಷಯುಗಂ ೧೧೮

೧೧೫. ಮಿದುಳು ಹೊರಬಿದ್ದು ತಲೆಬುರುಡೆಯ ಚಿಪ್ಪುಗಳು ಉದುರಿ ಬೀಳುವಂತೆ ಲೋಭ ಕ್ರೋಧವಶರಾದ ಅವರಿಬ್ಬರೂ ಹೊಡೆದಾಡಿ, ಸತ್ತು, ಮೊದಲನೆಯ ನರಕಕ್ಕೆ ಇಳಿದರು.

೧೧೬. ಆ ವ್ಯಾಪಾರಿಗಳು ನರಕವಾಸವನ್ನು ಮುಗಿಸಿಕೊಂಡು ವಿಂಧ್ಯಾರಣ್ಯದಲ್ಲಿ ತಗರುಗಳಾಗಿ ಹುಟ್ಟಿ ಕಾಡಾನೆಗಳಂತೆ ಕೊಬ್ಬಿ, ತಮ್ಮ ವಜ್ರದಂತಹ ಕೋಡುಗಳಿಂದ ಬೆಟ್ಟಗಳನ್ನು ಸೀಳುತ್ತಿದ್ದರು.

೧೧೭. ಬೆಟ್ಟದಲ್ಲಿಯ ಆನೆಗಳು ಗಾಬರಿಯಾಗಿ ಹಿಮ್ಮೆಟ್ಟುವಂತೆ ಆ ತಗರುಗಳು ಒಂದನ್ನೊಂದು ತಾಗಿ, ಸಿಡಿದೆದ್ದ ಬೆಂಕಿಯ ಜ್ವಾಲೆಗಳು ತಲೆಯ ಮೇಲೆ ಜಡೆಗಟ್ಟಿದಂತಿರಲಾಗಿ ಇವೇನು ಅಗ್ನಿಯೆ ಏರಿ ಕುಳಿತ ತಗರುಗಳೊ ಎಂಬಂತೆ ಹೋರಾಡಿದುವು.

೧೧೮. ರಭಸದಿಂದ ಬೆನ್ನಟ್ಟಿರುವ ಈ ತಗರುಗಳು ಮೃಗಗಳನ್ನು ಇರಿದೆತ್ತಲಾಗಿ, ಕೊಂಬುಗಳಲ್ಲಿ ಸಿಕ್ಕಿಕೊಂಡು, ಅಲ್ಲಿಯೆ ಒಣಗಿ ಸಣಕಲಾದ ಆ ಮೃಗಗಳ ಅಸ್ಥಿಪಂಜರಗಳು ಗಿಲಗಿಲುಕೆಂದು ಅಲುಗಿ ಸದ್ದು ಮಾಡುತ್ತ, ಗಿಲಿಕೆಯ ಕೋಡಣಸುಗಳೆಂಬಂತೆ ತೋರುತ್ತಿದ್ದುವು.

---

೧ ಳಿ (ಕ, ಮ). ೨ ಳದಿ (ಕಾ) ೩ ಧರ (ಕ, ಪ). ೪ ಹ (ಕ, ಮ, ಪ). ೫ ಖಂ (ಕ, ಪ). ೬ ರ (ಕಾ, ಮ). ೭ ಮಿ (ಕ, ಮ). ೮ ಸಿಡಿಲ (ಕ), ಸಡಿ (ಕಾ). ೯ ಣ್ಮೆ (ಕಾ), ೧೦ ದೊ (ಕಾ). ೧೧ ಡೊ (ಕ, ಪ) ೧೨ ಳಾಗ (ಕ, ಪ). ೧೩ ಗ (ಕ, ಪ), ಮಂ (ಕಾ) ೧೪ ನ (ಕ, ಮ, ಪ) ೧೫ ಲಂ (ಮ), .ಂ (ಕಾ).

ಕಣ್ಣುರಿ ಮುಟ್ಟೆ ನೆ[೧]ಟ್ಟನೆ ಮುರುಂಟಿದವೊಲ್ಮುರಿ[೨] [೩]ಗೊಂಡ[೩] ಕೋಡು ಮೆ
ಯ್ಯುಣ್ಣೆ ಕಟಿ[೪]ಲ್ದಿನಂ ಕುದಿ[೫]ದು ಕೆ[೬]ತ್ತುವ ಕಂಡದ ಕೊರ್ವು ಸೌ[೭]ತೆಯೊ
ಳ್ಪಣ್ಣಿ[೮]ವೊಲು[೯]ಬ್ಬರಂ ಬಿರಿ[೧೦]ಯೆ ರತ್ನಶಿಳಾಳಿ ನೆಟಿಲ್ಗೆ ಪಾಯ್ದು ಪೆ
ರ್ವುಣ್ಣೊಡೆಯುತ್ತುಮಿರ್ಪ ಪಣೆಯದ್ಭುತಮಾದುದುರಭ್ರಯುಗ್ಮದಾ ೧೧೯

ಅವು[೧೧]ತಾಮುರ್ಱ[೧೧]ಟ್ಟಿನೊಳೊರ್ಮೆ ಕಂಡು ಕಿಡಿಯುಂ[೧೨] ಕೆಂಡಂಗಳುಂ[೧೩]ಸೂ[೧೪]ಸಿ ತಾ[೧೪]
ಗು[೧೫]ವವೊಲ್ ಬೆಟ್ಟಿನೊಳೊಂದು ಬೆಟ್ಟು ಭವಬದ್ಧಕ್ರೋಧದಿಂ ಕಾಯ್ದು ತಾ
ಗುವುದುಂ ಕಂಠದೊಳಾಟಿ ತೋರದಲೆಗಳ್ ಸತ್ತಂದು ಮೇ[೧೬]ಷಂಗಳಾ
ದುವು ಗಂಗಾತಟ ಗೋಕುಲಕ್ಕೆ ಜಿತ ದಿಙ್ನಾಗಾಳಿಗಳ್ಗೊಳಿಗಳ್ ೧೨೦

ತಳೆದತ್ತುದ್ವೃತ್ತಿಯಂ ತದ್ವೃಷಭಯುಗಳಮಾಲಂಬಿ ಸಾಸ್ನಾಪಟಂ ಪಾ
ಟಳನೇತ್ರಂ ವೃದ್ಧವಂ[೧೭]ಶಾಂಕುರ[೧೭] ವಿಷಮವಿಷಾಣದ್ವಯಂ ಗೃಧ್ರಪಕ್ಷೋ
ಚ್ಛಳಿತಾದಭ್ರಶ್ರವಂ ದುಂದುಭಿನಿಭನಿನದತ್ಕಂಧರಂ ದೀರ್ಘನೀಲೋ
ತ್ಪಳನಾಳಾಲೋಲವಾಳಂ ವಿಪುಳ [೧೮]ಶಫ[೧೮]ಪರಿಸ್ಥೂಲಮಾಭೀಳಶೀಳಂ ೧೨೧

೧೧೯. ಕೋಪದಿಂದ ಕೆಂಪಾದ ಕಣ್ಣಿನ ಉರಿಗೆ ಮುರುಟಿಕೊಂಡವೊ ಏನೊ ಎಂಬಂತೆ ಮುರಿಗೊಂಡ ಕೋಡುಗಳಿಂದಲೂ, ಮೈಮೇಲಿನ ಉಣ್ಣೆ ಕಳಚಿ ಬೀಳುವಂತೆ ಕುದಿದು ಸುರಿಸುವ ಖಂಡಮಾಂಸಗಳಿಂದಲೂ ರತ್ನಶಿಲೆಗಳಲ್ಲಿ ಮೂಡಿರುವ ತಮ್ಮ ಪ್ರತಿಬಿಂಬಗಳಿಗೆ ಮುಳಿದು ಅವುಗಳನ್ನು ಇರಿಯಲು ಅಪ್ಪಳಿಸಲಾಗಿ ಸೌತೆಯ ಹಣ್ಣಿನಂತೆ ಶಿಲೆಗಳೊಡನೆ ಸೀಳಿ ಹುಣ್ಣಾದ ಹಣೆಗಳಿಂದಲೂ ಆ ಎರಡೂ ತಗರುಗಳು ಅದ್ಭುತ ವಾಗಿದ್ದುವು.

೧೨೦. ಹೀಗಿರುವ ತಗರುಗಳು ಒಮ್ಮೆ ಒಂದನ್ನೊಂದು ಎದುರೆದುರಾಗಿ ಕಂಡುವು. ಒಡನೆಯೆ ಪೂರ್ವಜನ್ಮದ ಕ್ರೋಧದಿಂದ ಬೆಟ್ಟಕ್ಕೆ ಬೆಟ್ಟ ಬಂದು ಅಪ್ಪಳಿಸುವಂತೆ ಕಿಡಿಸೂಸುತ್ತ ತಲೆಗೆ ತಲೆ ಘಟ್ಟಿಸಿ ಅವೆರಡರ ತಲೆಗಳೂ ಕಂಠದಲ್ಲಿ ಸಿಕ್ಕಿಕೊಳ್ಳುವಂತೆ ಹೋರಾಡಿ ಸತ್ತು, ಗಂಗಾತೀರದ ಗೋಕುಲದಲ್ಲಿ ಗೂಳಿಗಳಾಗಿ ಹುಟ್ಟಿದುವು.

೧೨೧. ಇಳಿಬಿದ್ದ ಗಂಗೆದೊಗಲು, ಕೆಂಗಣ್ಣು, ಬಲಿತ ಬಿದಿರ ಮೊಳೆಯಂತೆ ವಿಷಮವಾದ ಕೋಡು, ಹದ್ದಿನ ರೆಕ್ಕೆಗಳಂತೆ ಬೀಸಾಡುವ ತೋರ ಕಿವಿಗಳು, ದುಂದುಭಿ ಧ್ವನಿಯಂತೆ ಗರ್ಜಿಸುವ ಕೊರಳು, ನೀಳವಾದ ಕನ್ನೈದಿಲೆ ದೇಟಿನಂತೆ ಅಲ್ಲಾಡುವ ಬಾಲ, ಕೊಬ್ಬಿದ ಇಣೆ - ಇವುಗಳಿಂದ ಭಯಾನಕವಾಗಿ ಆ ಗೂಳಿಗಳೆರಡೂ ಉದ್ಧಟವಾಗಿ ವರ್ತಿಸುತ್ತಿದ್ದುವು.

---

೧ ನ (ಕ, ಪ) ೨ ಜೆ (ಕ). ೩ ಬೊಂದು (ಕಾ), ೪ ನ (ಕಾ). ೫ ಡಿ (ಕ, ಪ). ೬ ಕಿ (ಕ, ಮ, ಪ) ೭ ಸೋ (ಕ, ಪ). ೮ ರ್ವ (ಮ). ೯ ಲ (ಕ, ಮ, ಪ). ೧೦ ಜೆ (ಕ). ೧೧ ತಾಂ ಮು (ಕಾ), ತಾ ಮು (ಮ) ೧೨ ಯಂ (ಕ, ಪ). ೧೩ ಳಂ (ಕ, ಪ). ೧೪ ಸೆ ಗಂ (ಕ), ನೆ ನಂ (ಪ), ಸಿ ಗು (ಮ). ೧೫ ಟು (ಕ, ಪ) ಟ್ಟು (ಮ), ೧೬ ವೋ (ಕಾ) ೧೭ ಶಂ ಕುರು (ಕ, ಮ, ಪ). ೧೮ ಪರಿ (ಮ, ಪ).

ಪಣೆ[೧]ವರುಡಲ್ಕೆ ಪರ್ವಿದೆರ್ದೆ[೨]ಯೊಳ್ ಪೊರೆದಳ್ಗಿಸಱಿಂ ವೃಷಂಗಳೊಳ್
ಪೊಣದಿಱಿಯಲ್ಕೆ ಪತ್ತಿದರುಣೌಘದಿನಾ ವೃಷಶೃಂಗಯುಗ್ಮಮೊಂ
ದಣಿಯರಮಾಯ್ತು[೩] ಸಾರ[೪]ವಿ[೪] ನೆತ್ತರೊಳೊ[೫]ಕ್ಕೈಱ[೫]ದರ್ಚಿಸಿರ್ದ ಪೇ
ರಣೆ[೬]ಮಣಿಯೆಂಬ ಭೈರವನ ಲಿಂಗದ ಸೀಯದರಂಬೊಲದ್ಭುತಂ ೧೨೨

ಪ್ರತಿ ವೃಷಭ[೭] ಶೃಂಗಶೀರ
ಕ್ಷ[೮]ತಿಲೇಖಾಲಕ್ಷಿತಂ ತದೀಯ ಕ್ಷೇತ್ರ
ಕ್ಷಿತಿಯಾಯ್ತು ದರ್ಪಬೀಜಾ
ಕೃತಮೆನೆ ಬಸವಂಗಳುರ್ಕದೇನುಬ್ಬಸಮೋ ೧೨೩

ವ|| ಆ ಮದಕಳಕ್ರೂರ ಶೂರ ಸೌರಭೇಯಂಗ[೯](ಳದೊಂ)[೯]ದು ದಿವಸಮೊಂದೊಂದಱ ಕೆಲಪಂ[೧೦] ಕೇಳ್ದು ಕೆಳರ್ದು ಕೆಂಗಲ್ಮಸಗಿ ಮೂದಲಿಸಿದಂತೆ ಮಲೆತು ತಾಮಿರ್ದ ಮೊದಲ ನರ[೧೧]ಕಮಂ[೧೧] ತೆಱೆದು ತೋಱುವಂತೆ ಭೂತಳಮಂ [೧೨]ಕೊಳಗಿಂ ಪರು[೧೩]ಡು[೧೪]ತ್ತುಮನು[೧೪] ವಾಯು[೧೫]ಗೆ ಮಿ[೧೬]ದಿಲ್ದು ಕೆಯ್ಯಿ[೧೭]ಕ್ಕುವ ಸೊಕ್ಕಾನೆಗಳಂತೆ ತಲೆಯಿಕ್ಕಿ ತೊಲಗದ ಮನದ ಕನಲಿಕೆಯಿಂ ಕಾದಿ ಕೋ[೧೮]ದು ಬಿ[೧೯]ಟ್ಟು ಕಂಡಂ[೧೯]ಗಳೊಳ್ ನಡುಕೋಡುವರಂ ನಟ್ಟ ಕೋಡುಗಳಂ[೨೦] ಮಿಳಿಯಿಂ[೨೧] ಕಟ್ಟಿ ಗೋಕುಳಪಾಳಕರ್ಕಿಟೆ ಸತ್ತು ಸಮ್ಮೇದಗಿರಿಯ ಕಾ[೨೨]ಡೊಳ್ ಕೋಡಗಂಗಳಾಗಿ ಪುಟ್ಟಿದುವಿಂತು

೧೨೨. ಹಣೆಯಿಂದ ಕೆದರಿಕೆದರಿ ಹರವಾದ ಎದೆಯ ಮೇಲೆಲ್ಲ ಮೆತ್ತಿಕೊಂಡ ಕೆಸರಿನಿಂದಲೂ (ಕಾಡಿನ) ಗೂಳಿಗಳೊಡನೆ ಹೋರಾಡುವಾಗ ಕೋಡುಗಳಿಗೆ ಹತ್ತಿಕೊಂಡ ರಕ್ತದಿಂದಲೂ ಆ ಎರಡೂ ಗೂಳಿಗಳು, ಸಾರಿಸಿ, ನೆತ್ತರಿನ ಅಭಿಷೇಕ ಮಾಡಿ ಪೂಜಿಸಿದ ಭೈರವಲಿಂಗದ ಶಿವದ್ವಾರದಂತೆ ಅದ್ಭುತವಾಗಿದ್ದುವು.

೧೨೩. ಆ ಗೂಳಿಗಳು ತಮ್ಮ ಕೋಡುಗಳೆಂಬ ನೇಗಿಲುಗಳಿಂದ ಉತ್ತು ದರ್ಪದ ಬೀಜಗಳನ್ನು ಬಿತ್ತಿದುವೊ ಏನೊ ಎಂಬಂತೆ ಆ ಪ್ರದೇಶವೆಲ್ಲ ಕೋಡಿನ ಗೀರುಗಳಿಂದ ತುಂಬಿಹೋಯಿತು.

ವ|| ಆ ಕ್ರೂರವಾದ ಸೊಕ್ಕಿನ ಗೂಳಿಗಳು ಒಂದು ದಿವಸ ಪರಸ್ಪರ ಡುರುಕನ್ನು ಕೇಳಿ, ಕೆರಳಿ ಕೆಂಗಣ್ಣಾಗಿ ಒಂದನ್ನೊಂದು ಎದುರಿಸಿ ತಾವಿದ್ದ ಮೊದಲ ನರಕವನ್ನು ಇಲ್ಲಿ ತೆರೆದು ತೋರುವಂತೆ ಭೂಮಿಯನ್ನು ಕೊಳಗುಗಳಿಂದ ಹರಡುತ್ತ, ಮದದಾನೆಗಳ ಹಾಗೆ ತಲೆಗೆ ತಲೆ ತಾಗಿಸಿ ಮನಸ್ಸಿನಲ್ಲಿ ಕುಗ್ಗದ ಕ್ರೋಧದಿಂದ ಕಾದಾಡುತ್ತಿರಲಾಗಿ, ಒಂದರ ಕೋಡುಗಳು ಇನ್ನೊಂದರ ಖಂಡಗಳಲ್ಲಿ ನಟ್ಟ ನಿಂತುವು. ಅಲ್ಲಿಯ ಗೋಪಾಲಕರು ಮಿಳಿಗಳನ್ನು ಕಟ್ಟಿ ಅವುಗಳನ್ನು ಕೀಳಲಾಗಿ ಎರಡೂ ಸತ್ತು ಬಿದ್ದುವು. ಆ ಮೇಲೆ ಅವು ಸಮ್ಮೇದಗಿರಿಯ ಕಾಡಿನಲ್ಲಿ ಕಪಿಗಳಾಗಿ ಹುಟ್ಟಿದುವು.

---

೧ ಗೆ (ಕಾ). ೨ ಡೆ (ಕ, ಮ, ಪ). ೩ ಯ್ತ (ಕ, ಪ). ೪ ವಿಸಿ (ಕ, ಮ), ಬಿಸಿ (ಪ). ೫ ಕ್ಕಿರ (ಕ, ಮ, ಪ). ೬ ಣೆ (ಕ, ಪ). ೭ ಭ (ಕ, ಕಾ, ಪ). ೮ ಕ್ಷಿ (ಕ, ಕಾ, ಪ). ೯ ದೊಳಂ (ಕ, ಕಾ, ಮ), ಳೊಂ (ಪ). ೧೦ ಪಮಂ (ಕಾ). ೧೧ ಕಂ (ಕ, ಪ). ೧೨ + ಪದ (ಮ). ೧೩ ರ (ಕ, ಮ, ಪ). ೧೪ ತ್ತಮನಂ (ಕ), ತ್ತುಂ ಮನಂ (ಪ). ೧೫ ಯಿ (ಕಾ) ೧೬ ಮು (ಕಾ). ೧೭ ಯ್ಯು (ಕಾ). ೧೮ ಕೊಂ (ಕ, ಪ). ೧೯ ರ್ದು ಕಂದಂ (ಕ, ಮ, ಪ). ೨೦ ಳಿಂ (ಕ, ಪ). ೨೧ ಯಂ (ಕ, ಮ, ಪ). ೨೨ ಕೋ (ಕಾ, ಮ).

ಅವರ[1]ವಿವೇಕದಿಂ ಕುಜೆಯ ಪೋರಿಗಳಾದರವುಂ ಪರಸ್ಪರಾ
ಹವರಸಕಾಂಕ್ಷೆಯಿಂ ಕುಜೆಯ ಪೋರಿಗಳೆಟ್ಟು[2]ಗಳಾದು[3]ವೆಟ್ಟು[4]ಗ
ಳ್ತವದತಿ ಚಂಚಳಪ್ರಕೃತಿ ಪಾಕದಿನಕ್ಕಟ ಮರ್ಕಟಂಗಳಾ
ದುವು ಪಿರಿದುಂ ಶರೀರಿಗಳ ಪಾಪಮಿದೇಂ ಚರಿತಾನುರೂಪಮೋ ೧೨೪

ಪರಿಗತ ನಿರ್ಝರಿಣಿಯೊಳಾ
ಗಿರಿಯೊಳ್ ಕಿಸಲಯಿತ ಶಿಖರ ಕಾನನ ಕು[5]ಲದೊಳ್
ಶರನಿಧಿ ಸುತ್ತಿದ ಲಂಕೆಯ
ನುರುಪಿದ ಕಪಿಪತಿಯೊಲಿರ್ಪುವಾ ಕಪಿಯುಗಳಂ ೧೨೫

ವ॥ ಆ ವಿಪುಲ ಫಲಕುಸುಮ[6]ಕಿಸಲಯ[7] [7]ಕೋಶಂ[7]ಗಳುಂ ಕಪಿಶಕೇಶಂಗಳುಮಪ್ಪ [ಕೀ[8]]ಶಂಗಳುಂ ಶಿಲಾ[9]ಸಲಿಲನಿಮಿತ್ತ[10]ಮುನ್ನತ್ತ[10] ಪರ[11]ಪುರಾಣ ಪುರುಷ ಬ್ಯಾ[12]ಲೀಕೃತ ಬಾಲಿ ಸುಗ್ರೀವಂಗಳಂತೆ ಸುಗಿಯದಗಿಯದೆ ಸಂಗರ[13]ಮಂ ಮಾಡಿ

ಒಂದಾಗಳೆ[14] ಸತ್ತುದು ಮ
ತ್ತೊಂದಿರ್ದುದು ಸಾಯಲದಱ ತಮ[15]ಮಂ ಕಳೆಯಲ್
ಬಂದುದು ಗಗನದಿನಿೞಿದ ರ
ವೀಂದುಗಳವೊಲಾಗಳಂ[16]ತೆ ಚಾರಣಯುಗಳಂ ೧೨೬

೧೨೪. ಆ ವ್ಯಾಪಾರಿಗಳು ಅವಿವೇಕದಿಂದ ತಗರುಗಳಾದರು; ಆ ತಗರುಗಳು ಪರಸ್ಪರ ಹೋರಾಟದ ಬುದ್ಧಿಯಳಿಯದೆ ಗೂಳಿಗಳಾದುವು; ಆ ಗೂಳಿಗಳು ತಮ್ಮ ಚಂಚಲವಾದ ಪ್ರಕೃತಿ ಪಾಕದಿಂದ ಕೋತಿಗಳಾದುವು. ಜೀವಿಗಳ ಪಾಪವಿದು ಅವುಗಳ ನಡವಳಿಕೆಗೆ ಎಷ್ಟು ಅನುರೂಪವಾಗಿರುವುದು!

೧೨೫. ಸುತ್ತಲೂ ಹರಿಯುವ ಗಿರಿನಿರ್ಝರಗಳ ನಡುವಿನ ಗಿರಿಶಿಖರದಲ್ಲಿ ತಳಿರು ತುಂಬಿದ ಕಾಡಿನ ಸಮೂಹದೊಳಗಿರುವ ಆ ಎರಡೂ ಕೋತಿಗಳು, ಸಮುದ್ರ ಮಧ್ಯದ ಲಂಕೆಯನ್ನು ಸುಟ್ಟ ಮಹಾಕಪಿಯಂತೆ ಇದ್ದುವು.

ವ॥ ಸಮೃದ್ಧವಾದ ಹಣ್ಣು, ಹೂ, ತಳಿರುಗಳ ಭಂಡಾರವನ್ನು ಪಡೆದ, ಕಂದು ಬಣ್ಣದ ಕೂದಲುಳ್ಳ ಆ ಕಪಿಗಳು ಕಲ್ಲೊಳಗೆ ಒಸರುವ ನೀರಿಗಾಗಿ ಪುರಾಣ ಪುರುಷರಾದ ವಾಲಿಸುಗ್ರೀವರಂತೆ ಒಂದರೊಡನೊಂದು ತಾನೆ ಹೊಡೆದಾಡಿದುವು. ಆಗ -

೧೨೬. ಒಂದೂ ಕೂಡಲೆ ಸತ್ತುಹೋಯಿತು. ಮತ್ತೊಂದು ಮರಣೋನ್ಮುಖವಾಗಿರುವಾಗ ಅದರ ಮನದ ಕತ್ತಲೆಯನ್ನು ಕಳೆಯಲು ಬಂದ ಸೂರ್ಯಚಂದ್ರರೋ ಏನೊ ಎಂಬಂತೆ ಇಬ್ಬರು ಚಾರಣರು ಆಕಾಶದಿಂದ ಅಲ್ಲಿಗೆ ಇಳಿದು ಬಂದರು.

---

೧ ಱ (ಕಾ) ೨ ತ್ತು (ಕ, ಮ, ಪ). ೩ ಗಿ (ಕ). ೪ ತ್ತು (ಕ, ಮ, ಪ). ೫ ಕ (ಕ, ಮ, ಪ). ೬ X (ಕಾ). ೭ ಕೊಳಂ (ಕ), ಕುಳಂ (ಪ). ೮ ಕೇ (ಕ, ಕಾ, ಮ, ಪ). ೯ ಲೋ (ಕಾ). ೧೦ X (ಕಾ) ೧೧ ಠ (ಕ). ೧೨ ವ್ಯಾ (ಕ, ಪ), ವ್ಯೋ (ಮ) ೧೩ ತ (ಮ). ೧೪ ಡೆ (ಕಾ). ೧೫ ಪ (ಕ, ಮ, ಪ). ೧೬ ಡಂ (ಕಾ).

ವ॥ ಆ ಸುರಗುರುಗಳುಂ ದೇವಗುರುಗಳುಮೆಂಬ ಚಾರಣರಾ ಮರಣಾಭಿಮುಖನಪ್ಪ ಬಲೀಮುಖನಂ ಕಂಡು ಕರುಣಾಜಳಮುಮಂ ಕಮಂಡಳು ಜಳಮುಮಂ ಮೊಗದೊಳ್ತಳಿಯೆ ಕುಳಿರ್ಕೋಡಿ[೧] ಕೋಡಗಂ ಕಣ್ಣಂ ತೆಱೆದು ತಲೆಯನೆಱಗಿ ಪೊಡೆವಡೆ ಪರಸಿ [೨]ಪದಿರ[೨] ಮಾತಲ್ಲದಿದಿರ ಮಾತಿ[೩]ನೊಳ್ ಧರ್ಮಮಂ ತಿಳಿಪಿ[೪] ಪಂಚನಮಸ್ಕಾರಮಂ ಪೇೞೆ ಕೇಳ್ದು ಶುಭಸಂಸ್ಕಾರದಿಂ ಸತ್ತಾ ಸಮ್ಮೇದಗಿರಿತರುಶಿಖರದಿನಾ [೫]ಶಾಖಾ[೫]ಚರಂ ಸೌಧರ್ಮಕಲ್ಪತರು ಶಿಖರಕ್ಕೆ ಪಾಯ್ದು ಚಿತ್ರಾಂಗದ[೬]ನೆಂಬ ದೇವನಾಗಿ ದಿವ್ಯಸುಖಫಲರಸಮನಾಸ್ವಾದಿಸಿ ಬಂದೀ ಜಂಬೂದ್ವೀಪದ ಭರತಕ್ಷೇತ್ರದ ಸುರಮ್ಯವಿಷಯದ ಪೌದನಪುರದರಸಂ ಸುಸ್ಥಿತಂಗಂ ಸುಲಕ್ಷಣಾದೇವಿಗಂ ಸುಪ್ರತಿಷ್ಠನೆಂಬೊಂ ಸುತನಾಗಿ ಭೋಗೋಪಭೋಗಂಗಳನುಪಭೋಗಂಗಳನುಪಭೋಗಿಸುತ್ತುಮಿರೆ

ಕೇದಗೆ ಪೂವಂ ಚಾದಗೆ ಬಾಯಂ ಬಿಡೆ ಬಿಡುತ[೭]ರೆ ಕಡುವಿಸಿಲಿಂ
ಸೋದು ಬಿಸುರ್ಪಂ ಜಾದಿಯ ಕಂಪಂ ಕಡವಿನ ಕೊಡಸಿಗೆಯಲರ್ಗಳ ಸೊವಡಿಂ
ಕೋ[೮]ದಿದಿ[೯]ರ್ಗೊಳ್ವಾ[೯]ಹ್ಲಾದಕರಂ ಸೋಗೆಯ ದನಿ ಪೊಱಮಡೆ ಪಡುವಣ ದೆಸೆಯಿಂ
ದೂದೆ ಸಮುತ್ಸಾ[೧೦]ಮೋದಮೆಲರ್ಬಂದುದು ಮೊಳೆ [೧೧]ಪಸರಿಸಿ[೧೧] ಪೊಸ ಮೞೆಗಾಲಂ ೧೨೭

ವ॥ ಅಂದಸಿತಗಿರಿ[೧೨]ಯೊಳಾ ಪ್ರಾವೃಷೇಣ್ಯ ಜಳಧರಧ್ವನಿಗೆ ಮಸಗಿ ಮುಸುಱಿ ಮುತ್ತಿ ಮೊತ್ತಂಗೊಂಡು ಕಾದುವ ಕೋ[೧೩]ಡಗಂ[೧೩]ಗಳಂ ಕಂಡು ಜಿತಸ್ಮಯನುಂ ಸಂಜಾತ ವಿಸ್ಮಯನುಂ

ವ॥ ಸುರಗುರು ಮತ್ತು ದೇವಗುರು ಎಂಬ ಆ ಚಾರಣರು, ಮರಣಾಸನ್ನವಾದ ಆ ಕೋತಿಯನ್ನು ಕಂಡು ಕರುಣಾಜಲದೊಡನೆ ಕಮಂಡಲಜಲವನ್ನು ಅದರ ಮುಖದ ಮೇಲೆ ಸಿಂಪಿಸಿದರು. ತಂಪಿನ ಸ್ಪರ್ಶದಿಂದ ಆ ಕೋತಿ ಕೂಡಲೆ ಕಣ್ತೆರೆದು, ತಲೆಬಾಗಿ ನಮಸ್ಕರಿಸಿತು. ಅವರು ಗೂಢವಲ್ಲದ ನೇರಾದ ಮಾತಿನಲ್ಲಿ ಅದಕ್ಕೆ ಧರ್ಮವನ್ನು ತಿಳಿಸಿ ಪಂಚನಮಸ್ಕಾರವನ್ನು ಉಪದೇಶಿಸಿದರು. ಅದನ್ನು ಕೇಳಿ ಶುಭಸಂಸ್ಕಾರವನ್ನು ಹೊಂದಿ ಸತ್ತು, ಆ ಕಪಿಯು ಸೌಧರ್ಮಕಲ್ಪಕ್ಕೆ ಹೋಗಿ ಚಿತ್ರಾಂಗದನೆಂಬ ದೇವನಾಗಿ ದಿವ್ಯಸುಖವನ್ನು ಉಂಡು, ಅಲ್ಲಿಂದ ಒಂದು ಈ ಜಂಬೂದ್ವೀಪದ ಭರತಕ್ಷೇತ್ರದ ಸುರಮ್ಯವಿಷಯದ ಪೌದನಪುರದ ಅರಸನಾದ ಸುಸ್ಥಿತನಿಗೂ ಸುಲಕ್ಷಣಾದೇವಿಗೂ ಸುಪ್ರತಿಷ್ಠನೆಂಬ ಮಗನಾಗಿ ಹುಟ್ಟಿ ಭೋಗೋಪಾಯಗಳನ್ನು ಅನುಭವಿಸುತ್ತ ಇರಲಾಗಿ -

೧೨೭. ಕೇದಗೆ ಹೂವನ್ನೂ ಚಾತಕಪಕ್ಷಿ ಬಾಯನ್ನೂ ಬಿಡುತ್ತಿರಲಾಗಿ, ಬಿಡುಹನಿಗಳು ಉದುರುತ್ತಿರಲಾಗಿ, ಕಡು ಬಿಸಿಲಿನ ತಾಪವನ್ನು ನಿವಾರಿಸುತ್ತ, ಜಾಜಿ ಹೂವಿನ ಪರಿಮಳವನ್ನು ಕಡವು ಕೊಡಸಿಗೆ ಹೂಗಳ ಸೊಗಡನ್ನೂ ಬೆರಸಿಕೊಂಡು, ಇದಿರುಗೊಳ್ಳುವ ನವಿಲಿನ ಸಂತೋಷಕರವಾದ ಧ್ವನಿ ಹೊರಡುತ್ತಿರಲಾಗಿ, ಸುಗಂಧವಾದ ಗಾಳಿ ಪಶ್ಚಿಮದಿಂದ ಬೀಸುತ್ತಿರಲಾಗಿ, ಮಳೆಗಾಲ ಬಂದಿತು.

ವ॥ ಆ ಮಳೆಗಾಲದೊಂದು ದಿನ ಅಸಿತಗಿರಿಯಲ್ಲಿ ಮಳೆಮೋಡದ ಗುಡುಗಿನ ಧ್ವನಿಗೆ ಉದ್ರೇಕಗೊಂಡು ಮುಕ್ಕುರಿಕ್ಕಿ ಕಾದಾಡುವ ಕೋತಿಗಳನ್ನು ಕಂಡು ವಿಸ್ಮಿತನಾಗಿ,

---

೧ ಡೆ (ಮ). ೨ ಪ್ಪದಿಂ (ಪ), ತಿಬ್ಬದಿಂ (ಕ). ೩ ದಿ (ಕಾ). ೪ ಪೆ (ಕ, ಪ). ೫ X (ಕ, ಮ, ಪ). ೬ X (ಕಾ) ೭ ತಿ (ಕ). ೮ ತೋ (ಪ). ೯ ರೆಳ್ದಾ (ಕಾ, ಮ). ೧೦ + ಹಾ (ಕ), + ಹ (ಮ, ಪ) ೧೧ ಪೊಪರೆಸಿ (ಕಾ). ೧೨ ತು (ಕಾ). ೧೩ ಡಂಗಂ (ಕ). ಡಂ (ಕಾ).

ಜಾತಿಸ್ಮರನುಂ ವೈರಾಗ್ಯಪರನುಮಾಗಿ ಪೋಗಿ ಸುಧರ್ಮಾಚಾರ್ಯರ ಚರಣೋಪಾಂತದೊಳ್ ತಪಶ್ಚರಣಮಮಂ ಕೆಯ್ಕೊಂಡನಾ ಸೂರದತ್ತ[೧]ವನ[೧]ಚರರೆಮಾ[೨]ವತ್ತೆ[೨]ಸುದತ್ತ[೩] ಶಾಖಾಚರ [೪]ನುಮೀ[೪] ಚರಾಚರ ಸ್ವರೂಪಮಪ್ಪ ಸಂಸಾರಕಾಂತಾರದೊಳ್ತಿರಿದು ಬಂದು ಸಿಂಧು ತೀರದ ಋಷಿಪಳ್ಳಿಯೊಳ್ ಮೃಗಾಯಣನೆಂಬ ಮುನಿಗಂ ವಿಶಾಖೆ[೫]ಯೆಂಬ ಗೊರವಿ[೬]ತಿಗಂ ಗೌತಮನೆಂಬ ಮಗನಾಗಿ ಪುಟ್ಟಿ ತಪಂಬಟ್ಟು ಬೇಸಗೆಯಾಗೆ

ಭಗ್ನಮನೋರಥಂ ರತಿಸುಖಾಸವ ಸೇವೆಗೆ ಪಂಚಬಾಣ ಪಂ
ಚಾಗ್ನಿ ತಪಕ್ಕೆ ನಿಲ್ವ ವಿರಹಾತುರನಂತಿರೆ [೭]ಕುತ್ಸಿ[೭]ತಾಗಮ
ತ್ವಗ್ನಿಳೆಯಂ ನಿಳಿಂಪ ಸುಖಲಂಪಟ[೮]ನಾಗಿಯೆ ನಿಂದನಂದು ಪಂ
ಚಾಗ್ನಿ ತಪಕ್ಕೆ ತಾಪಸ ಸಮೂಹ ಮಹೋತ್ತಮನಪ್ಪ ಗೌತಮಂ ೧೨೮

ಪಱುಗಟಿದ ಪಾಪಮಂ ಕೆಯ್
ಗಟಿದ ತಪೋನಳನೆ ಸುಡುಗುಮೊಟ್ಟದ ಕಿಚ್ಚಿಂ
ತಟಪಟನೆ ಪುಳ್ಳಿಯೊಳಗಣ
ಪುೞು ಬೇಗಂ ಬೇಗುಮೆಗ್ಗ ಬೇಗುಮೆ ದುರಿತಂ ೧೨೯

ವ|| ಆತನಾ ತಪಃಫಲದಿಂ ಜ್ಯೋತಿರ್ಗಣದೊಳಗೆ ಸುದರ್ಶನನೆಂಬ ದೇವನೀತನಾಗಿ ಪೂರ್ವಜನ್ಮಜನಿತ ಪುರುಷರೋಷಾವೇಶದಿನೆಮಗೀಯುಪಸರ್ಗಮಂ ಮಾಡಿದನೆಂಬುದುಮದೆಲ್ಲಮನಾ ಸುದರ್ಶನದೇವಂ ಕೇಳ್ದು [೯]ಸದ್ದ[೯]ರ್ಶನಮಂ ಕೆಯ್ಕೊಂಡನಂಧಕವೃಷ್ಣಿಯುಂ ವಿರಕ್ತನಾಗಿ ಸಮುದ್ರವಿಜಯಂಗೆ ಪಟ್ಟಂಗಟ್ಟಿ ತಪಂಬಟ್ಟು ಮೋಕ್ಷಕ್ಕೆ ಪೋದನಿತ್ತಲ್

ಜಾತಿ ಸ್ಮರಣೆಯಿಂದ ವೈರಾಗ್ಯಪರನಾಗಿ ಹೋಗಿ ಸುಪ್ರತಿಷ್ಠನು ಸುಧರ್ಮಾಚಾರ್ಯರ ಪಾದ ಸನ್ನಿಧಿಯಲ್ಲಿ ತಪೋದೀಕ್ಷೆಯನ್ನು ಕೈಕೊಂಡನು. ಪೂರ್ವದಲ್ಲಿ ಸೂರದತ್ತನಾಗಿದ್ದು ಆಮೇಲೆ ಕೋತಿಯಾಗಿದ್ದವನು ನಾನೇ. ಅತ್ತ ಸುದತ್ತನು ಕಪಿಯಾಗಿ ಚರಾಚರಸ್ವರೂಪವಾದ ಈ ಸಂಸಾರವೆಂಬ ಅರಣ್ಯದಲ್ಲಿ ಸುತ್ತುತ್ತ ಬಂದು, ಸಿಂಧುತೀರದ ಋಷ್ಯಾಶ್ರಮದಲ್ಲಿ ಮೃಗಾಯಣನೆಂಬ ಮುನಿಗೂ ವಿಶಾಖೆಯೆಂಬ ಆತನ ಪತ್ನಿಗೂ ಗೌತಮನೆಂಬ ಮಗನಾಗಿ ಹುಟ್ಟಿ ತಪಸ್ಸು ಮಾಡುತ್ತ ಬೇಸಗೆಯಲ್ಲಿ -

೧೨೮. ಮನದಿಚ್ಛೆ ನೆರವೇರದ ವಿರಹಾತುರನಾದವನು ರತಿಸುಖಕ್ಕೆ ಹಾತೊರೆದು ಮನ್ಮಥನ ಪಂಚಬಾಣಗಳ ಪಂಚಾಗ್ನಿ ತಾಪವನ್ನೂ ಹೊಂದಿ ನಿಲ್ಲುವಂತೆ, ಸ್ವರ್ಗಸುಖದ ಲಂಪಟನಾದ ಗೌತಮನು ಕುತ್ಸಿತಮತಕ್ಕೆ ಒಳಗಾಗಿ ಪಂಚಾಗ್ನಿ ತಪಕ್ಕೆ ನಿಂತನು.

೧೨೯. ಸಂಚಿತವಾದ ಪಾಪವನ್ನು ಅತಿಶಯವಾದ ತಪಸ್ಸೆಂಬ ಅಗ್ನಿಯೆ ಸುಡುವುದು. ಸುತ್ತಲೂ ಒಟ್ಟಿಕೊಂಡ ಕಿಚ್ಚಿನಿಂದ ಪುಳ್ಳಿಯೊಳಗಿನ ಹುಳು ಮಾತ್ರ ಬೆಂದು ಹೋಗುವುದಲ್ಲದೆ ಪಾಪವೇನಾದರೂ ಸುಟ್ಟುಹೋಗುವುದೆ?

ವ|| ಆತನು ಆ ತಪಸ್ಸಿನ ಫಲದಿಂದ ಜ್ಯೋತಿರ್ಗಣದಲ್ಲಿ ಸುದರ್ಶನನೆಂಬ ದೇವನಾದನು. ಅವನೇ ಈಗ ಪೂರ್ವಜನ್ಮದ ರೋಷಾವೇಶದಿಂದ ನಮಗೆ ಈ

---

೧. X (ಕ, ಪ). ೨ ದೆವು ಮತ್ತೆ (ಕ), ದೆವು ಇತ್ತ (ಪ) ವು ಅತ್ತ (ಮ). ೩ + ಚರ (ಕ, ಮ, ಪ). ೪ ನುಂ ಖ (ಕಾ). ೫ ಳೆ (ಕ, ಮ, ಪ). ೬ X (ಕ, ಕಾ, ಪ) ೭ ಕುಶ್ಚಿ (ಕ, ಮ), ಪಶ್ಚಿ (ಪ). ೮ ಳ (ಕ, ಕಾ) ೯ ಸುದ (ಕಾ).

ಸೋದರರೆಣ್ಬರುಂ ಪಸುಗೆಯಂ ಪ್ರತಿಪಾಲಿಸಿ ಲೋಕಪಾಲರಂ
ತಾದರದಿಂದೆ ಬೆ[ಚ್ಚು[೧]] ಬೆಸಕೆಯ್ಯೆ ನಿಜಾಜ್ಞೆ[೨]ಗೆ ರತ್ನಗರ್ಭೆಯಂ
ಕಾದು ಸ್ಥುವರ್ಣಯುಕ್ತೆಯೆನೆ ತನ್ನ [೩]ಕರ[೩]ಕ್ಕೆ ಸಮುದ್ರ ಮೇಖಲಾ
ಮೇದಿನಿಯಂ ಸಮುದ್ರವಿಜಯಂ ಮಣಿಮುದ್ರಿಕೆಯಾಗೆ[೪] ಮಾಡಿದಂ ೧೩೦

ಪೊಸ ದೇಸೆ ಪೊಂಗು ಪಾಂ[೫]ಗೆಸೆ
ವೆಸಕಂ ಕಡುಗಾಡಿ ಗರುಡಿಯೆಂಬಿವಱಿಂದಂ
ವಸುಧೀಶನಣುಗದಮ್ಮಂ
ವಸುದೇವಂ ಧರೆಗೆ ಕಣ್ಣ[೬] ಮುಳ್ಳಾಗಿರ್ದಂ ೧೩೧

ಪದೆದಡಿಯಿಟ್ಟವೊಲ್ಕುಸುಮದೊಳ್ಮದನಾಯುಧಲಕ್ಷ್ಮಿ ಬಾಳಚೂ
ತದೊಳೆ ವಸಂತಲಕ್ಷ್ಮಿಯತಿವರ್ತಿಯೊಳುನ್ಮದ ಲಕ್ಷ್ಮಿ ಚಂದ್ರಬಿಂ
ಬದೊಳತಿ ಪೂರ್ಣ[೭]ಲಕ್ಷ್ಮಿ ನವಯೌವನ ಲಕ್ಷ್ಮಿ ವಿಳಾಸ ಲಕ್ಷ್ಮಿಯಂ
ದದಿನಡಿಯಿಟ್ಟುದಂದು ವಸುದೇವನ ಚೆಲ್ವಡರ್ದಂಗಯಷ್ಟಿಯೊಳ್ ೧೩೨

ವ|| ಅಂತು ಬಂದ ಯೌವನ ವಸಂತದೊಳ್ವಸುದೇವಕುಮಾರಂ ತನ್ನೋರಗೆಯ ಚೆನ್ನಿಗರಂ ಚದುರರಪ್ಪ ರಾಜಕುಮಾರರುಮಂ ಮಂತ್ರಿಪುತ್ರರುಮಂ [೮]ಕೂಡಿಕೊಂಡು[೮] [೯]ವನ[೯]ಕ್ರೀಡೆಗೆ ವಿನೋದಜಲಕೇಳಿಗಂ[೧೦] ಮೊಗಸಲೊಡನೆ

ಉಪಸರ್ಗವನ್ನು ಉಂಟುಮಾಡಿದನು." ವಿವರಣೆಯನ್ನೆಲ್ಲ ಕೇಳಿ ಸುದರ್ಶನನು ಸದ್ದರ್ಶನವನ್ನು ಪಡೆದನು. ಅಂಧಕವೃಷ್ಣಿಯೂ ವೈರಾಗ್ಯ ತಾಳಿ ಸಮುದ್ರವಿಜಯನಿಗೆ ಪಟ್ಟಗಟ್ಟಿ ತಪಸ್ಸು ಮಾಡಿ ಮೋಕ್ಷಕ್ಕೆ ಹೋದನು. ಇತ್ತ -

೧೩೦. ತನ್ನ ಎಂಟು ಜನ ತಮ್ಮಂದಿರು ಅಷ್ಟಲೋಕಪಾಲಕರಂತೆ ಕರ್ತವ್ಯನಿಷ್ಠರಾಗಿ ತನಗೆ ಗೌರವಪೂರ್ವಕವಾಗಿ ಭಯಭಕ್ತಿಯಿಂದ ನಡೆದುಕೊಳ್ಳುತ್ತಿರಲಾಗಿ, ಭೂಮಂಡಲವನ್ನೆಲ್ಲ ತನ್ನ ಅಂಕೆಗೆ ತಂದುಕೊಂಡು, ಸಮುದ್ರವಿಜಯನು ಸಮುದ್ರಿತ ಭೂಮಿಯನ್ನು ರತ್ನದ ಕಡಗದಂತೆ ತನ್ನ ತೋಳಲ್ಲಿ ಧರಿಸಿದನು.

೧೩೧. ನವೀನವಾದ ಚೆಲುವು, ಬೆಡಗು ವಿಲಾಸಗಳಿಂದ ಆ ರಾಜನ ಅಕ್ಕರೆಯ ಚಿಕ್ಕತಮ್ಮನಾದ ವಸುದೇವನು ಲೋಕದ ಜನಕ್ಕೆಲ್ಲ ಕಣ್ಣು ಮುಳ್ಳಾಗಿದ್ದನು.

೧೩೨. ಮದನನ ಆಯುಧಲಕ್ಷ್ಮಿ ಹೂವಿನಲ್ಲಿ ವಸಂತಲಕ್ಷ್ಮಿ ಎಳಮಾವಿನಲ್ಲಿ, ಮದಲಕ್ಷ್ಮಿ ಅತಿವರ್ತಿ ಆನೆಯಲ್ಲಿ, ಪೂರ್ಣಲಕ್ಷ್ಮಿ ಚಂದ್ರಬಿಂಬದಲ್ಲಿ ಉಲ್ಲಾಸದಿಂದ ಅಡಿಯಿಡುವಂತೆ, ನವಯೌವನಲಕ್ಷ್ಮಿಯು ವಿಲಾಸಲಕ್ಷ್ಮಿಯ ಬೆಡಗಿನಿಂದ ವಸುದೇವನ ಚೆಲುವೇರಿದ ದೇಹಯಷ್ಟಿಯಲ್ಲಿ ಅಡಿಯಿಟ್ಟಳು.

ವ|| ಹಾಗೆ ಬಂದ ಯೌವನ ವಸಂತದಲ್ಲಿ ವಸುದೇವಕುಮಾರನು ತನ್ನ ಓರಗೆಯ ಚೆಲುವರೂ ಚತುರರೂ ಆದ ರಾಜಕುಮಾರರನ್ನೂ ಮಂತ್ರಿ ಪುತ್ರರನ್ನೂ ಕೂಡಿಕೊಂಡು ವನಕ್ರೀಡೆಗೂ ಜಲಕ್ರೀಡೆಗೂ ಹೊರಟೊಡನೆ-

---

೧. ಚ್ಚ (ಕ), ರ್ಚಿ (ಕಾ, ಮ). ೨ ಗ್ನಿ (ಕಾ). ೩ ರಕ (ಮ). ೪ ಗಿ (ಕಾ), ೫ ಪೊಂ (ಕ, ಮ, ಪ) ೬ ಣ್ಣು (ಕ, ಮ, ಪ). ೭ ರ್ವ (ಕಾ). ೮ ಕ್ರೀಡಾ (ಕಾ). ೯ ನವ (ಕ, ಪ). ೧೦ ಗಳಂ (ಕ, ಪ).

ಅತನುವನತಿಶಯದಿಂ ಋತು
ತತಿಗಳ್ ಬಳಸುವವೊಲೆಳಸಿ ಬಳಸಿದಂತರಂತಾ
ಕ್ಷಿತಿಪತಿಸುತನಂ ವಿಟ ಪಂ
ಡಿತ ನಟ ಪರಿಹಾಸಕಾದಿ ನರ್ಮಸಹಾಯರ್ ೧೩೩

ಪರಗುಣಗಣಮಂ ಸೈರಿಸು
ವರಮಗನಂ ಮನುಜರೊ[ಲ್ವ][೧]ರಣಮೊ[೨]ಲ್ಲರ್ಮ
ಚ್ಚರಿಪನನುಡುನಿಕರಂ ಖರ
ಕರನಂ ಬಿ[೩]ಸುಟ[೩]ಮೃತಕರನನೋಲಗಿಸುವವೊಲ್ ೧೩೪

ವ|| ಒಂದು ದಿವಸಂ ಬಂದ ನಂದನವನಂ[೪] ತಳರ್ದು ಬರ್ಪಂತೆ ತಳ್ತು[೫] ಪಿಡಿದ ಪೀಲಿಯ ತಟಿ[೬]ಯ ತುಱುಗಲೊಳಗೆ

ಬಳೆದಿರೆ ವೃತ್ತಪಾಠಕಶುಕಧ್ವನಿ ತಳ್ತಿ[೬]ರೆ ಮತ್ತ ಕಾಮಿನೀ
ಕಳಕಳ ಕೋಕಿಳಾವಿರುತಿ ಗರ್ಭಕ ಗಂಧಭರಕ್ಕೆ ತುಂಬಿಗ
ಳ್ಬಳಸಿರೆ ಪೂವಿನಂತೆ ಮುಗುಳಂತಿರೆ ಕೆಂದಳಿರಂತೆ ಮಾಣಿಕಂ
ಗಳ ತೊಡವೊಪ್ಪೆ ಬರ್ಪನೊಸೆದಾ ವಸುದೇವ ವಸಂತವಲ್ಲಭಂ ೧೩೫

ವ|| ಮತ್ತಮೊಂದು ದಿವಸಂ

೧೩೩. ಋತುಗಳೆಲ್ಲವೂ ಮನ್ಮಥನನ್ನು ಉತ್ಸಾಹದಿಂದ ಬಳಸುವಂತೆ ವಿಟರೂ ಪಂಡಿತರು, ನಟರು, ಪರಿಹಾಸಕರು ಮೊದಲಾದ ನರ್ಮಸಹಾಯಕರೆಲ್ಲರೂ ಆ ರಾಜಕುಮಾರನನ್ನು ಬಳಸಿಹೊರಟರು.

೧೩೪. ಇತರರ ಗುಣಗಳನ್ನು ಸೈರಿಸುವ ರಾಜಪುತ್ರನನ್ನು ಜನರು ಮೆಚ್ಚಿ ಪ್ರೀತಿಸುವರಲ್ಲದೆ ಮತ್ಸರಿಸುವವನ್ನು ಒಲಿಯಲಾರರು, ನಕ್ಷತ್ರಗಳು ಉಗ್ರಕಿರಣನಾದ ಸೂರ್ಯನನ್ನು ಬಿಟ್ಟು ಅಮೃತಕಿರಣನಾದ ಚಂದ್ರನನ್ನೂ ಓಲೈಸುವುವು.

ವ|| ಒಂದು ದಿವಸ ಚಿಗುರಿದ ನಂದನವನವೆ ಎದ್ದು ಬರುವಂತೆ ಬಿಚ್ಚಿ ಹಿಡಿದ ನವಿಲ್ಗರಿಯ ಕೊಡಗಳ ಸಮೂಹದಲ್ಲಿ -

೧೩೫. ಸ್ತುತಿ ಪಾಠಕರೆಂಬ ಗಿಳಿಗಳ ಧ್ವನಿ ಹೊಮ್ಮುತ್ತಿರಲಾಗಿ, ಮತ್ತಕಾಮಿನಿಯರ ಕಲಕಲವೆಂಬ ಕೋಕಿಲನಾದ ಹೊರಡುತ್ತಿರಲಾಗಿ, (ಆ ಕುಮಾರನ) ಪರಿಮಳಾತಿಶಯಕ್ಕೆ ಮೋಹಗೊಂಡು ದುಂಬಿಗಳು ಬಳಸಿಕೊಂಡಿರಲಾಗಿ, ಹೂವಿನಂತೆ ಮೊಗ್ಗಿನಂತೆ, ಕೆಂದಳಿರಂತೆ ರತ್ನಾಭರಣಗಳು ಶೋಭಿಸುತ್ತಿರಲಾಗಿ, ವಸಂತರಾಜನೆ ಎಂಬಂತೆ ವಸುದೇವನು ಉಲ್ಲಾಸದಿಂದ ಬರುವನು.

ವ|| ಮತ್ತೊಂದು ದಿವಸ -

---

೧. ಲುವ (ಕ, ಮ), ಲವ (ಕಾ). ೨ ಮೆ (ಕ, ಮ, ಪ). ೩ ಟ್ಟ (ಕಾ). ೪ ನಮಂ (ಕ, ಪ). ೫ ಟ್ತು (ಪ). ೬ ಟ್ತೆ (ಪ).

ಕುಂಕುಮದಣ್ಪನೆಯ್ದೆ ಕಳೆದಾಗಳೆ ಚಂದನದಣ್ಪನಿಕ್ಕುವಂ
ಸೋಂಕುವ ಬಾಳಕೇಳಿ ಮೃಗಮಂ ತೆಗೆದಪ್ಪುವನಂಗಕಾಂತಿಯಿಂ[೧]
ತಾಂ ಕುಡುಕಿಕ್ಕುವಂ[೨] ಯುವತಿನೇತ್ರಚಕೋರಚಯಕ್ಕೆ ಭೋಂಕೆ[೩]ನೇ
ಣಾಂಕನ ಕೆಯ್ತದಿಂ ಕೃತಕ ಶೈಲಮನೇಱಿ ನರೇಂದ್ರಚಂದ್ರಮಂ ೧೩೬

ವ|| ಮತ್ತಮೊಂದು ದಿವಸಂ

ಕತ್ತುರಿಯಣ್ಪೆ ಕೆಂ[೪]ದಳಿರ ಕೆಯ್ಪೊ[೫] ಡೆ ಕೇದಗೆಯೊತ್ತೆವೂ[೬]ವಿನಿಂ
ದೆತ್ತಿದ ಮೀನಕೇತನಮಶೋಕೆಯ ಸೋರ್ಮುಡಿ[೭]ಗಟ್ಟು ಕೂಡೆ ತೂ
ಗುತ್ತ[೮]ರಲಂಬನಿಕ್ಕುಧನುವಂ ಗೊಲೆಗೆ[೯]ತ್ತಿ ತೊ[೧೦]ಬಿಲ್ಲ[೧೧]ನಂಗನಾ
ಚಿತ್ತದೊಳಂ ಪುರಾಂತರದೊಳಂ ವಸುದೇವಕುಮಾರ ಮನ್ಮಥಂ ೧೩೭

ಪುಗುವನದೊರ್ಮೆಯುಂ ನಗುವ ದೃಗ್ವನದಂತಿರೆ ತೊಟ್ಟ ಪೂವಿನಂ
ಗಿಗೆ ಪೊಳೆದೊಪ್ಪಿ ಕೆಂದಳದೊಳಂಕುಶ ವಜ್ರ [ಮಿ][೧೨] ಭಾದ್ರಿಭೇದಿ ಮು
ತ್ತುಗಳ ಗುಳಂ ತಳತ್ತಳಿಸುವೇಱಿದ ದಂತಿ ಸುರೇಂದ್ರದಂತಿಯ
ನ್ನಗೆ ಸುರರಂತೆ ನೋಡೆ ಜನಮಾ ಪೊಟಿಲಂ ವಸುದೇವವಾಸವಂ ೧೩೮

ವಿದಳಿತ ಪದ್ಮಲೋಚನ ನಮೋ ಗರುಡಧ್ವಜ ಕಾವುದೆಂದು ಲೋ
ಕದ ಜನಮೆಲ್ಲಮೊಲ್ದೆಱಗೆ ಕಟ್ಟಿದ ಚೌರಿಯೆಱಂಕೆ ಮೂಗು[೧೩] ರ
ನ್ನದ ಮೊಗಮುಟ್ಟ[೧೪]ನಾಂತ ಮೊಗಮಾಗಿರೆ ತಾರ್ಕ್ಷ್ಯನನೇಱುವಂ ಕದ
ಕ್ಕದಿಸಿ ನಿರರ್ಗಳಂ ಪೊಳೆದು ಪಾಱುವಿನಂ ವಸುದೇವವಲ್ಲಭಂ ೧೩೯

೧೩೬. ಆ ನರೇಂದ್ರಚಂದ್ರನು ಕೃತಕಗಿರಿಯನ್ನೇರಿ, ಕುಂಕುಮಲೇಪವನ್ನು ಕಳೆದು ಚಂದನಲೇಪವನ್ನು ಧರಿಸುವನು; ವಿನೋದಕ್ಕಾಗಿ ಸಾಕಿದ ಜಿಂಕೆಯ ಮರಿಯನ್ನು ಅಪ್ಪಿಕೊಳ್ಳುವನು; ತರುಣಿಯರ ಕಣ್ಣೆಂಬ ಚಕೋರಪಕ್ಷಿಗಳಿಗೆ ತನ್ನ ದೇಹಕಾಂತಿಯಿಂದ ಕುಟುಕನ್ನೀಯುತ್ತಾ ಚಂದ್ರನಂತೆ ಶೋಭಿಸುವನು.

ವ|| ಮತ್ತೊಂದು ದಿವಸ -

೧೩೭. ಕಸ್ತೂರಿಯನ್ನು ಲೇಪಿಸಿಕೊಂಡು ಕೆಂದಳಿರ ಮುಂಗೈಕಾಪನ್ನೂ ಕೇದಗೆಯ ಹೂವನ್ನೂ ಧರಿಸಿ, ಮೀನಧ್ವಜದಿಂದಲೂ ಅಶೋಕದ ಸೋರ್ಮುಡಿಯಿಂದಲೂ ಅಲಂಕೃತನಾಗಿ ಪುಷ್ಪಬಾಣಗಳನ್ನು ತೂಗುತ್ತ ಕಬ್ಬಿನ ಬಿಲ್ಲನ್ನು ಹೆದೆಯೇರಿಸಿಕೊಂಡು ಬಂದ ಮನ್ಮಥನಂತೆ ಅಂಗನೆಯರ ಚಿತ್ತದಲ್ಲಿಯೂ ಊರಿನ ಬೀದಿಗಳಲ್ಲಿಯೂ ವಿಹರಿಸುವನು.

೧೩೮. ಮತ್ತೊಮ್ಮೆ ಅರಳಿದ ಕಣ್ಣುಗಳ ಸಮೂಹದಂತೆ ಕಾಣುವ ಹೂವಿನಂಗಿಯನ್ನು ತೊಟ್ಟು, ವಜ್ರಾಯುಧದಂತೆ ತೋರುವ ಅಂಕುಶವನ್ನು ಕೈಯಲ್ಲಿ ಧರಿಸಿ, ಮುತ್ತಿನ ಗುಳವನ್ನು ತೊಡಿಸಿದ ತನ್ನ ಆನೆಯು ಐರಾವತವನ್ನು ಹೀಗಳೆಯುತ್ತಿರಲಾಗಿ, ದೇವತೆಗಳು ಇಂದ್ರನನ್ನು ನೋಡುವಂತೆ ಜನವೆಲ್ಲ ತನ್ನನ್ನೂ ನೋಡುತ್ತಿರಲಾಗಿ ವಸುದೇವನು ಇಂದ್ರನಾಗಿ ಪಟ್ಟಣದಲ್ಲಿ ಸಂಚರಿಸುವನು.

೧೩೯. ಪಕ್ಕಕ್ಕೆ ಕಟ್ಟಿದ ಅಲಂಕಾರದ ಕುಚ್ಚುಗಳಿಗೆ ರೆಕ್ಕೆಯಾಗಿ, ರತ್ನಖಚಿತವಾದ

೧ ಯಿಂ (ಕ, ಪ). ೨ ತಂ (ಕ)., ತುಂ (ಪ). ೩ ಕ (ಕ, ಮ, ಪ) ೪ ಚೆಂ (ಕಾ). ೫ ಯ್ಗೊ (ಮ). ೬ ಪೂ (ಮ, ಪ). ೭ ಕ (ಕ, ಮ, ಪ). ೮ ತ್ತಿ (ಕ, ಮ). ೯ ಗೊ (ಕಾ) ೧೦ ದಳ್ದ (ಕ, ಪ), ಳಲ್ವ (ಕಾ), ೧೧ ವಿ (ಕ, ಕಾ, ಪ), ನಿ (ಮ) ೧೩ ಗ (ಕ, ಪ), ವ (ಮ), ೧೪ ಟ್ಟೆ (ಕಾ).

ಕಾಜಿನ ಬೀಣೆಯಂ ಕಳಿದುಕೊಂಡು ತರಂ[೧]ಗಳನೆತ್ತಿಕೊಂಡು ನು[೨]
[ಣ್ಬೋ][೩]ಜೆ ಬೆಡಂಗು ಬಣ್ಣ ಸರಮೊಪ್ಪಿ ಕರಂ ಯತಿಧಾತು ಮೂರ್ಛನಾ
ವ್ಯಾ[೪]ಜದೊಳಾಡೆ ಕೂಡೆ ಕುಡುಪುಂ ಬೆರಲುಂ ಕೃತಕಾದ್ರಿಕೂಟದೊ
ಳ್ಬಾಜಿಸುವಂ ಜಸಂ [೫]ಪರೆ[೫]ಯೆ ಕಿನ್ನರನಂತೆ ನರೇಂದ್ರನಂದನಂ ೧೪೦

ವಾರಿಜಮನಿಟ್ಟು ಕಿವಿಯೊಳ್
ವಾರುವಮಂ ಪೀಲಿಯಿಂದೆ ಪಕ್ಕರಿಸಿ ಮನೋ
ಹಾರಿಯೆನೆಯಾಱುಮೊಗದ ಕು
ಮಾರನವೋಲ್ ನೃಪಕುಮಾರನೇಱುವನೊಲವಿಂ ೧೪೧

[೬]ಉಂತೆ[೬] ಕಡು ಚೆಲ್ವನಾ[೭]ಂತನ
ಗಿಂ[೮]ತಾಯ್ತಾದೆಸೆವ [೯]ಪಸದನಂ[೯] ವಸುಮತಿಯಂ
ಕಂತುಗೆ ಸನೆಗಣೆಯಲರ್ವಿ
ಲ್ಲಂತಿರೆ ಸೋಲಿಸುವದರ್ಕೆ ಸಂ[೧೦]ದೆಗ[೧೦]ಮುಂಟೇ ೧೪೨

ಆವೊಳ್ಗಾವುದು ಕೆಯ್ತಮಚ್ಚಿ ಮತಿಗೆಟ್ಟಾವಾಕೆ [೧೧]ತೊಳ್ತ[೧೧]ಪ್ಪಳೊ
ಲ್ದಾವೊಂದಾಕೃತಿಗಾವೊ[೧೨]ಳಾವೆಸೆವ ನೇಪಥ್ಯಕ್ಕೆ ಕಣ್ಸೋಲ್ವರಾ
ಭಾವಂ ಚೆಲ್ವವೊಲಂ[೧೩]ದ ಮ[೧೩]ಚ್ಚಿಜಿದವೋಲ್ ಶೃಂಗಾರವೊಲ್ದಿರ್ದವೋ
ಲ್ತೀವಿರ್ದಾ ರತಿರತ್ನ ಮೇರುಗೆ ಮ[೧೪]ರುಳ್ಗೊಂಡಿ[೧೪]ರ್ದರಬ್ಜಾಕ್ಷಿಯರ್ ೧೪೩

ಮೊಗವಡವನ್ನು ಧರಿಸಿದ ಮೂತಿಯೆ ಕೆಂಪು ಕೊಕ್ಕಾಗಿ ಗರುಡನಂತೆ ತೋರುವ ಕುದುರೆಯನ್ನೇರಿ, "ಪ್ರಸನ್ನ ಕಮಲಾಕ್ಷನೇ ನಮೋ ಗರುಡವಾಹನಾ ಕಾಪಾಡು" ಎಂದು ಲೋಕದ ಜನವೆಲ್ಲ ಒಲಿದು ನಮಸ್ಕರಿಸುತ್ತಿರಲಾಗಿ ವಸುದೇವ ಕುಮಾರನು ನಿರರ್ಗಳವಾಗಿ ವೈಹಾಳಿ ಮಾಡುವನು.

೧೪೦. ಕಾಜಿನ ವೀಣೆಯನ್ನು ತೆಗೆದುಕೊಂಡು ನುಣುಪು, ಓಜೆ, ಬೆಡಗು, ಬಣ್ಣಸರಗಳು ಒಪ್ಪಲಾಗಿ, ಯತಿ, ಧಾತು, ಮೂರ್ಛನೆಗಳು ಸಮರ್ಪಕವಾಗಿ ಮೂಡುವಂತೆ, ತನ್ನ ಬೆರಳೂ ವಾದ್ಯದಂಡವೂ ಸಂಗತವಾಗಿರಲು ಆ ನರೇಂದ್ರಕುಮಾರನು ಕೃತಕಶೈಲದ ಶಿಖರದಲ್ಲಿ ಕಿನ್ನರನಂತೆ ಬಾರಿಸುವನು.

೧೪೧. ಕಿವಿಯಲ್ಲಿ ತಾವರೆಯನ್ನಿಟ್ಟು, ಕುದುರೆಗೆ ನವಿಲುಗರಿಯ ಹಲ್ಲಣವನ್ನು ಅಳವಡಿಸಿ ಮನೋಹರನಾಗಿ ಷಣ್ಮುಖನಂತೆ ಆ ಕುಮಾರನು ಅಶ್ವಾರೋಹಿಯಾಗುವನು.

೧೪೨. ಮನ್ಮಥನಿಗೆ ಪುಷ್ಪಧನುಸ್ಸು ಸೇರಿದಂತೆ ಮೊದಲೇ ಅತ್ಯಂತ ಸುಂದರನಾದ ಆ ರಾಜಕುಮಾರನಿಗೆ ಇಂತಹ ಶೋಭೆಯ ಅಲಂಕರಣವೂ ಸೇರಿದ ಮೇಲೆ, ಅದು ಲೋಕವನ್ನೆಲ್ಲ ಸೋಲಿಸುವುದರಲ್ಲಿ ಸಂದೇಹವುಂಟೆ?

೧೪೩. ಯಾವಾಕೆಗೆ ಯಾವ ಚೇಷ್ಟೆ ಪ್ರಿಯವೊ, ಮತಿಗೆಟ್ಟಾಕೆ ಯಾವ ರೂಪಕ್ಕೆ

---

೧. ಳಂ (ಕ, ಮ, ಪ). ೨ ನೊ (ಕ, ಪ). ೩ ಳ್ಬೋ (ಕ, ಮ, ಪ), ಣ್ಬೋ (ಕಾಂ. ೪ ವೋ (ಕ, ಪ). ೫ ಪಡೆ (ಕ) ಬಡೆ (ಪ). ೬ ಇಂತು (ಕ, ಪ). ೭ ನಾಂ (ಕ, ಪ) ೮. ನಿಂ (ಪ) ೯ ಸದನನಂ (ಕ, ಪ), ಸದನಂ ನ (ಮ). ೧೦ ದೆಯ (ಪ), ದಯ (ಕ, ಮ) ೧೧ ತೋಳ (ಕ, ಪ). ೧೨ ವ (ಕಾ) ೧೩ ದು ಮೆ (ಕಾ). ೧೪ ರಳ್ದೊಂದಿ (ಮ).

ಆವೊ[೧]ಳನೆಸುವೆಂ ಕೆಡಪುವೆ
ನಾವೊ[೨]ಳನಿನ್ನಾವೊ[೩]ಳಂ ಪೊರಳ್ಚುವೆನೆನುತುಂ
ತೀವಿ ತೆಗೆದಿಕ್ಕುಧನುವಂ
ಕಾವಂ ಕಟಕಕ್ಕೆ ಸು[೪]ರಗಿ[೪]ಗಿಟ್ಟವೊಲಾದಂ ೧೪೪

ಅಲ[೫]ರ್ಗಣ್ಗಳ್[೫] ಬಾಳವೆಂದಿಕ್ಕುವ ಧನುಲತೆಯಂ ತುಂಬಿಯಂ ಬಿಟ್ಟು ಪಂಕೇ
ಜ ಲತಾಜ್ಯಾಲೇಖೆಯಂ ಕೆಂದಳಿರ ತಳಮಿದೇಕೆಂದು ಹಸ್ತಾಗ್ರದೊಳ್ ಪ
ಚ್ಚೆಲೆಯಂ ಕೊಂಡಿಟ್ಟು ಕಟ್ಟುತ್ತೊರೆದು ಸಿಡಿವಿನಂ [೬]ಕೆಯ್ವೆ[೬]ರಲ್ವೊಂಗಿ[೭] ಮುಂಗೈ
ಸುಲಿಸವನ್ನಂ ಕಾಮನೆಚ್ಚಂ ಪಡಲಿಡುವಿನೆಗಂ ಪೌರನಾರೀನಿಕಾಯಂ ೧೪೫

ಪುಸಿಯೆಂದಾದುನದಿರ್ಪಿ ತಪ್ಪಿಸಿ ಸರಲ್ಮತ್ತೊಂದು ತಾಂ ಪೋಗೆ ನು
ಣ್ಚಸೆಯಂ ಮುಟ್ಟ[೮]ದೆ ಮತ್ತಮೊಂದು ಕಣೆ ಕಲ್ಲಂ ತಾಗಿದಂತಾಗೆ ಕೊಂ
ಡಸಿಯಂಬೊಂದನೆ ದಡ್ಡುವಿರ್ದ ಹೃದಯಂ ಜಾಳಾಂದರಂಬೋಪಿನಂ
ಬೆಸೆದೆಚ್ಚಂ ಕಡುದೇಸೆ[೯]ವೆಂಡಿರನಿದೇಂ ಕಾಮಂ ಛಲಗ್ರಾಹಿಯೋ ೧೪೬

ಸೋತು ತೊತ್ತಾಗುವಳೊ, ಯಾವ ಅಲಂಕರಣವನ್ನು ಕಂಡು ಯುವತಿಯರ ಕಣ್ಣು ಸೋಲುವುವು, ಯಾವ ಭಾವ ಅವರಿಗೆ ಚೆಲುವಾಗುವುದೊ ಅವೆಲ್ಲವನ್ನೂ ಅಚ್ಚೊತ್ತಿದಂತೆ ಶೃಂಗಾರಮಯವಾಗಿ ತನ್ನಲ್ಲಿ ತುಂಬಿಕೊಂಡ ಆ ರತಿರತ್ನಶೇಖರನಿಗೆ ಕಮಲಾಕ್ಷಿಯರೆಲ್ಲ ಮರುಳಾಗಿದ್ದರು.

೧೪೪. ಯಾವಳನ್ನು ನನ್ನ ಬಾಣದಿಂದ ಹೊಡೆಯಲಿ, ಯಾವಳನ್ನು ಕೆಡಹಲಿ, ಇನ್ನಾವಳನ್ನು ಹೊಡೆಮಗುಚಲಿ ಎನ್ನುತ್ತ ತನ್ನ ಬಿಲ್ಲನ್ನೇರಿಸಿಕೊಂಡು ಇರಿಯುವುದಕ್ಕೆ ಪಾಳೆಯದಿಂದ ಕಾಮನೇ ಹೊರಟನೊ ಏನೊ ಎಂಬಂತೆ ಆಯಿತು.

೧೪೫. ಹೂವಿನ ಬಿಲ್ಲು, ಕೋಮಲವೆಂದು ಬಿಟ್ಟು ಕಬ್ಬಿನ ಬಿಲ್ಲನ್ನು ದುಂಬಿಯಹೆದೆ ಬೇಡವೆಂದು ತಾವರೆ ನಳದ ಹೆದೆಯನ್ನೂ, ಕೆಂದಳಿರು ತಾಳದೆಂದು ಹಸಿರೆಲೆಯ ಮುಂಗೈಕಟ್ಟನ್ನೂ ಧರಿಸಿಕೊಂಡು ತನ್ನ ಕೈಬೆರಳು ಸಿಡಿದು ಹೋಗುವವರೆಗೆ (ಹೆದೆ ತಾಗಿತಾಗಿ) ಮುಂಗೈ ಸುಲಿದು ಹೋಗುವವರೆಗೆ ಕಾಮನು ಬಾಣ ಹೊಡೆದೂ ಹೊಡೆದೂ ಪೌರಸ್ತ್ರೀಯರನ್ನೂ ಚೆಲ್ಲಾಪಿಲ್ಲಿಯಾಗಿ ದಿಂಡುರುಳಿಸಿದನು.

೧೪೬. ಒಂದು ಬಾಣ ಹುಸಿಹೋಯಿತೆಂದು, ಮತ್ತೊಂದು ಬಾಣ ಗುರಿಯನ್ನು ಭೇದಿಸದಾಯಿತೆಂದು ಇನ್ನೂ ಒಂದು ಬಾಣ ಕಲ್ಲಿಗೆ ತಾಗಿದಂತೆ ವ್ಯರ್ಥವಾಯಿತೆಂದು, ಹದನಾದ ಬೇರೊಂದು ಬಾಣವನ್ನು ಹೂಡಿ, ಜಡ್ಡುಗಟ್ಟಿದ ಹೃದಯ ತೂತಿನ ಕಿಡಿಕೆಯಾಗುವಂತೆ ಕಡು ಬೆಡಗಿಯರನ್ನು ಕಾಮನು ಬಾಣಗಳಿಂಜ ಹೊಡೆದೇ ಹೊಡೆದನು. ಅವನೆಂತಹ ಹಠವಾದಿಯೊ?

---

೧ ವ (ಕ, ಕಾ, ಪ). ೨ ವ (ಕ, ಕಾ. ಪ). ೩ ವ (ಕ, ಕಾ, ಪ). ೪ ರಿಗೆ (ಕಾ). ೫ ರ್ವಲರ್ಗಳ್ (ಕಾ), ರ್ಗಣ್ಣಂ (ಪ), ಗರ್ವಲರ್ಗಳ್ (ಮ). ೬ ಕೈಯ (ಮ) ೭ ಗೆ (ಕಾ). ೮ ಟ್ಟಿ (ಕ, ಮ). ೯ ಸಿ (ಕ, ಮ, ಪ)

ಕಡುಗೆಚ್ಚು ವಿರ್ದ ಮನಮಂ
ನಡದೊಡೆ ಬಿಸುಟಲರ ಸರಲನಿ[೧]ರದಸ[೨]ಮಶರಂ[೨]
ನಿಡುನನೆಯಂಬಿಂ ಕೆಡೆಕೆಡೆ
ಕೆಡೆಯೆಂದೆಚ್ಚಾರ್ದು ಕೆಡಪಿದಂ ಥಾ[೩]ಳೆಯರಂ ೧೪೭

ಕಂಟಣೆಪಿನಮಲರಿ[೪]ಸಿದಂ
ಕುಂಟಣಿಯರ ಕೊರಡುಗೊಂಡ ಮನಮಂ ಮದನಂ[೫]
ಗೆಂಟಾಗಿ ವಿಕಾಸಕ್ಕೆ ಮು
ರುಂಟಿದ ಮಲ್ಲಿಗೆಯನಲರಿಪಂತೆ ವಸಂತಂ ೧೪೮

ಕಿಸುರ ಕಸಗಳೆದು ಮೆ[೬]ತ್ತಿಸಿ
ಪೊಸ ಬಗೆಯಿಂ[೭] ಪೂಸಿ ರಾಗರಸದಿಂ ಪೊಕ್ಕಂ
ಪುಸಿದಟಿವೆಂಡಿರ ಬೇಟಂ
ಬಿಸುಟಿರ್ದೆಯಂ ಸ್ಮರನೆ ಪುಗುವವೋ[೮]ಲ್ಲಾಟ್ಟಿ[೮]ನೆಯಂ ೧೪೯

ನಟ್ಟುದುನೊಂದೆನೆಂದೆರ್ದೆಯನೊತ್ತಿಕೊಳುತ್ತಮೆ ಬಂದೊಡೇನುಮಂ
ನಿಟ್ಟಿಸಿ ನೋಡಿ ಕಾಣದೆಲೆ ನೋಡದದೆ ಮಾಣ[೯]ದೆ ಕೀಟುಮಾರನಂ[೯]
ಪುಟ್ಟ[೧೦]ರೆ ಪೆಂಡಿ[೧೧]ರೇಂ ತ[೧೧]ನಗೆ ಹೂಹೆಯನೆಚ್ಚಪನೆನ್ನನೆಂದವ
ಳ್ಕುಟ್ಟನಿ ಕೆಯ್ಗೆಳಂ ಮುಜಿದು ಬಯ್ದಳನಂಗನನಾ ಪ್ರಸಂಗದೊಳ್ ೧೫೦

೧೪೭. ಬಲವಾಗಿ ಕೆಚ್ಚುಗಟ್ಟಿದ ಮನವನ್ನು ನಾಟಲು ಪುಷ್ಪಬಾಣಗಳು ಅಸಮರ್ಥವಾದಾಗ ಕಾಮನು ನಿಡಿದಾದ ಮೊಗ್ಗಿನ ಬಾಣಗಳನ್ನು ಹೂಡಿ, 'ಬೀಳು, ಬೀಳು, ಬೀಳೆಂ'ದು ಆರ್ಭಟಿಸುತ್ತ ಧೂರ್ತನ ಹೆಣ್ಣುಗಳನ್ನು ಹೊಡೆದು ಕೆಡಹಿದನು.

೧೪೮. ಅರಳದ ಮುರುಟಿಹೋದ ಮಲ್ಲಿಗೆಯನ್ನು ವಸಂತನು ಬಂದು ಅರಳಿಸುವ ಹಾಗೆ ಕೊರಡಾಗಿದ್ದ ಕುಂಟಣಿಯರ ಮನವನ್ನು ರೋಮಾಂಚಗೊಳ್ಳುವಂತೆ ಮನ್ಮಥನು ಅರಳಿಸಿದನು.

೧೪೯. ಕಸವನ್ನೆಲ್ಲ ತೆಗೆದುಹಾಕಿ, ಬಿದ್ದಲ್ಲೆಲ್ಲ ಮೆತ್ತಿಸಿ, ಸುಣ್ಣಸಾರಿಸಿ ಹಾಳುಮನೆಯನ್ನು ಹೊಸದಾಗಿಸಿ ಹೋಗುವಂತೆ, ಪ್ರಣಯವನ್ನೊಲ್ಲದ ಹುಸಿಯಾಗಿದ್ದ ಹೀನಸ್ತ್ರೀಯರ ಹೃದಯದಲ್ಲಿ ಕೂಡಿಬಿದ್ದ ಅಸಹ್ಯತೆಯ ಕಸವನ್ನು ಕಳೆದು, ಹೊಸ ಬಗೆಯನ್ನು ಹುಟ್ಟಿಸಿ, ಅನುರಾಗರಸದಿಂದ ಲೇಪಿಸಿ ಕಾಮನೆ ವಾಸಮಾಡಲು ಪ್ರವೇಶ ಮಾಡುವಂತೆ, ವಸುದೇವನು ಅವರ ಹೃದಯಗಳನ್ನು ಹೊಕ್ಕನು.

೧೫೦. "ಅಯ್ಯೋ ನಟ್ಟಿತು, ನೊಂದೆನು" ಎಂದು ಎದೆಯನ್ನು ಒತ್ತಿಕೊಳ್ಳುತ್ತ ಬಂದು, ನಿಟ್ಟಿಸಿ ನೋಡಿದರೂ ನಟ್ಟಗಾಯವೇನು ಕಾಣದಂತಾಗಿ, "ಈ ಕಾಮನೆಂತಹ ಹೀನ! ಇವನ ಬಾಣಕ್ಕೆ ಗುರಿಯಾಗಲು ಬೇರೆ ಹೆಣ್ಣುಗಳೇನು ಹುಟ್ಟಿಲ್ಲವೆ? ನನ್ನಂಥವಳಿಗೆ ಬಾಣ ಬಿಡುತ್ತಾನೆ" ಎಂದು ಕುಂಟಣಿಯೊಬ್ಬಳು ನೆಟಿಗೆ ಮುರಿದು ಕಾಮನನ್ನು ಶಪಿಸಿದಳು.

---

೧ ನೀ (ಕ, ಪ). ೨ ರಮಂ (ಕ, ಪ). ೩ ಡಾ (ಕ, ಮ, ಪ) ೪ ಗಿ (ಕ, ಪ). ೫ ಮಂ (ಕಾ) ೬ ಮೊ (ಕ, ಮ, ಪ). ೭ ಸೆಯಂ (ಕ, ಪ). ೮ ಲ್ಲೊಸಮ (ಕಾ). ೯ ದಿರೇಣುಮಾರನಂ (ಕಾ), ದಿರೇಳುಮಾದನಂ (ಮ). ೧೦ ಟ್ಟಿ (ಕ, ಪ). ೧೧ ರಂತೆ (ಕಾ), ರೆಂತೆ (ಕ).

ಅರಸಂಗೀತಂಗೆ ಕಣ್ಸೋಲ್ವ[೧]ಬಲೆಯರವರೇನಿರ್ವರೋ ಮೂವರೋ ನಾ
ಲ್ವರೊ ಲೆಕ್ಕಂ ಲಕ್ಕೆಯುಂ ಕೋಟಿಯುಮೆನೆ ವಶವಾದಪ್ಪರೇಗೆಯ್ವೆನೊರ್ವಂ
ಸ್ಮರಕೋಟಾಕೋಟಿಯಂ ಪೂಣ್ದೆಸಲೆ ಪಡೆವೆನೆಂದಂದು [೨]ಪೆತ್ತಂ[೨] ಕರಾಬ್ಜಾಂ
ಕುರಸತ್ಸಂದರ್ಭದರ್ಭಂ ಧೃತ ಸಕಳಕಳಾಗರ್ಭನಂಭೋಜಗರ್ಭಂ ೧೫೧

ವ॥ ಅಂತು ಪಡೆಯಲೊಡನೆ

ಜಿನನಂಘ್ರಿದ್ವಂದ್ವದೊಳ್ ಧೂರ್ಜಟಿಯ ಜೆಡೆಗಳೊಳ್ ಬ್ರಹ್ಮನುತ್ತಂಸದೊಳ್ ಕೃ
ಷ್ಣನ ಕೇ[೩]ಶೋದ್ದೇ[೩]ಶದೊಳ್ ಬಂದೆಱಗಿ ತುಱುಗೆ[೪] ಪುಷ್ಪೇಷುಚಾರಂ ನಭಂ ಪೂ
ವಿನ ಪಂದರ್ ಭೂತಳಂ ಪೂವಿನ [೫]ಪೊಸ ಪಸೆಗಳ್ದೇಸಿ[೬]ವೆತ್ತಿರ್ದಿನಂ ಪೂ
ವಿನ ಕೇಳರಂತೆಚ್ಚುದಂ[೭]ತಾ ಪುರವರವನಿತಾ ಸೈನ್ಯಮಂ ಕಾಮಸೈನ್ಯಂ ೧೫೨

ಅಂತಿ[೮]ಸುವ ಮದನರಂ[೯] ಕಂ
ಡೆಂತೆಯ್ದಿಪೆನಿವರ್ಗೆ ಸರಲನೆನಿತುಂ ನನೆವೂ
ವಂ ತುಱುಗೆ ಪನಸ ಪಿಪ್ಪಲ
ಸಂತತಿಗಳೊಳಂ ವಸಂತರಾಜಂ ಪಡೆದಂ ೧೫೩

೧೫೧. ಈ ಅರಸನನ್ನು ಕಂಡು ಮರುಳಾಗುವ ಸ್ತ್ರೀಯರೇನು ಇಬ್ಬರೊ, ಮೂವರೊ, ನಾಲ್ವರೊ? ಅಲ್ಲ. ಲಕ್ಷ ಲಕ್ಷ ಕೋಟಿಕೋಟಿ ಸಂಖ್ಯೆಯಲ್ಲಿದ್ದಾರೆ. ಒಬ್ಬ ಕಾಮನಿಂದ ಏನಾದೀತು? ಇವರೆಲ್ಲರ ಮೇಲೆ ಬಾಣಬಿಡುವುದಕ್ಕೆ ಕೋಟಿ ಕೋಟಿ ಮನ್ಮಥರನ್ನು ಹುಟ್ಟಿಸುವೆನೆಂದು ಸಕಲಕಲಾಪ್ರವೀಣನಾದ ಬ್ರಹ್ಮನು ಅಸಂಖ್ಯ ಕಾಮರನ್ನು ಸೃಜಿಸಿದನು.

ವ॥ ಹಾಗೆ ಸೃಷ್ಟಿಮಾಡಲಾಗಿ -

೧೫೨. ಜಿನನ ಪಾದಗಳಲ್ಲಿ, ಶಿವನ ಜಟೆಗಳಲ್ಲಿ, ಬ್ರಹ್ಮನ ತಲೆಯಲ್ಲಿ, ಕೃಷ್ಣನ ಕೇಶದಲ್ಲಿ ಪುಷ್ಪಬಾಣಗಳು ಎರಗೆರಗಿ ಬಂದು ತುಂಬಿದುವು; ಆಕಾಶವು ಹೂವಿನ ಹಂದರವಾಯಿತು; ಭೂಮಿ ಹೊಸ ಹೂವಿನ ಹಾಸಿಗೆಯಾಯಿತು; ಹೀಗೆ ಆ ಪುರವನಿತೆಯರ ಸಮೂಹದ ಮೇಲೆ ಕಾಮಸೈನ್ಯವು ಬಾಣಗಳನ್ನು ಪ್ರಯೋಗಿಸಿತು.

೧೫೩. ಈ ಪರಿಯಾಗಿ ಬಾಣಬಿಡುವ ಈ ಮದನರಿಗೆಲ್ಲ ಹೇಗೆ ಬಾಣಗಳನ್ನು ಒದಗಿಸಿ ಕೊಡಲಿ ಎಂದು ಚಿಂತಿಸಿ, ವಸಂತನು ಹಲಸು - ಗೋಗಿ ಮರಗಳಲ್ಲಿಯೂ ಹೊಸ ಹೂವುಗಳನ್ನು ಹೊಮ್ಮಿಸಿದನು.

---

೧ ಲ್ತ (ಕ, ಮ, ಪ). ೨ ಪದ್ಮಾ (ಕ, ಪ) ೩ ಶಾದೇ (ಕ,) ಶಾಕೇ (ಪ). ೪ ಗಿ (ಕ, ಮ, ಪ). ೫ ಪಸೆಗಳ (ಕಾ) ೬ ತೇ (ಕ, ಪ). ೭ ವಂ (ಕ, ಪ). ೮ ತೆ (ಕ) ೯ ನಂ (ಕ, ಪ).

ನಿಕರಂ ತೆಂಕಣ ಗಾಳಿ ನಾಗರಿಕನಾಗಲ್ದರ್ಪಕಂ ಪೀಠಮ
ರ್ದಕನಾಗಲ್ಮಧುಮಾಸಮೊಲ್ದು ವಿಟನಾಗಲ್ಚಂದ್ರಬಿಂಬಂ ವಿದೂ
ಷಕನಾಗಲ್ಪರಿಹಾಸಕಂ ಕುಮುದಿನೀವೃಂದಕ್ಕೆ ಸೌಭಾಗ್ಯನಾ
ಯಕನಾದಂ ಶರ[1]ದೃಷ್ಟ ದಕ್ಷಿಣಗುಣಂ ಶೃಂಗಾರಕಾರಾಗೃಹಂ ೧೫೪

ವ|| ಇದು ಮೃದುಪದಬಂಧ ಬಂಧುರ ಸರಸ್ವತೀ ಸೌಭಾಗ್ಯಭ್ಯಂಗ ಭಂಗಿನೀನಿಧಾನ ದೀಪವರ್ತಿ ಚತುರ್ಭಾಷಾ ಕವಿಚಕ್ರವರ್ತಿ ನೇಮಿಚಂದ್ರಕೃತಮುಂ ಶ್ರೀಮತ್ಪ್ರತಾಪ ಚಕ್ರವರ್ತಿ ಶ್ರೀ ವೀರಬಲ್ಲಾಳದೇವ ಪ್ರಸಾದಾಸಾದಿತ ಮಹಾಪ್ರಧಾನ ಪದವೀ ವಿರಾಜಿತ ಸೆಜ್ಜೆವುಳ್ಳ ಪದ್ಮನಾಭದೇವ ಕಾರಿತಮುಮಪ್ಪ ನೇಮಿನಾಥ ಪುರಾಣದೊಳ್ ವಸುದೇವ ಪ್ರತಾಪ ವರ್ಣನಂ ಚತುರ್ಥಾಶ್ವಾಸಂ

೧೫೪. ತೆಂಕಣ ಗಾಳಿಯೆ ನಾಗರಿಕ, ಕಾಮನೆ ಪೀಠಮರ್ದಕ, ವಸಂತ ಮಾಸವೆ ವಿಟ, ಚಂದ್ರಬಿಂಬವೆ ವಿದೂಷಕನಾಗಲಾಗಿ, ಶರದೃಷ್ಟದಕ್ಷಿಣಗುಣದಿಂದ ಕೂಡಿದ ವಸುದೇವನು ಸೌಭಾಗ್ಯನಾಯಕನಾದನು.

ಮುಗಿಯಿತು

---

೧ ರ (ಕ, ಮ, ಪ)

ಶ್ರೀ

ಪಂಚಮಾಶ್ವಾಸಂ

ಶ್ರೀಯಂ ಸರಸತಿಯಂ ಜಯ
ಜಾಯೆಯನಾ ವೀರಲಕ್ಷ್ಮಿಯಂ ಜಸವೆಣ್ಣಂ
ಜ್ಯಾಯನೆಱಗಿಸಿದ ನೀಱಂ
ಸ್ತ್ರೀಯರನೆಱಗಿಸುವುದರಿದೆ ಮನುಜಮನೋಜಂ ೧

ಅರ[೧]ಸರಜಿದಾಳ್ವ[೧] ನಗರದ
ತರುಣಿಯರುಡೆಯುರ್ಚ[೨]ದೊಂ[೩] ಗಡೊ[೪]ರ್ವನೆ ಸುಮ [ನಃ][೫]
ಶರನೇಂ ಸೂರನೊ [೬]ಚೇತಃ[೬]
ಪುರಮಂ ನಿರ್ಧಾಮಧೂಮಮಾಗಿರೆ ಸುಟ್ಟಂ ೨

ವ|| ಎಂಬಿನಮಾ ಕುಮಾರಂ ಕಣ್ಗಿಕ್ಕಿದ ಟ[೭]ಕ್ಕುಂ ಮನಕಿಕ್ಕಿದ ಮೂರ್ಛೆಯುಂ ಸುದತಿಯರ್ಗಿಕ್ಕಿದ ಸೊರ್ಕುಮೆನೆ ಬರ್ಪುದಂ ಕಂಡು ಸೌಭಾಗ್ಯಕಾರ್ತಿಯರ್ ಸೌಭಾಗ್ಯಮಂ ಸೇಸಿಕ್ಕಿಯುಂ ಚಲ್ಲಕಾರ್ತಿಯ[೮]ರ್ಕಣ್ಣಲ[೮]ದಿಂ ನಿವಾಳಿಸಿ ನಾಣಂ ಬಟಿದೀಡಾಡಿಯುಂ ಸೋಲೆಕಾರ್ತಿಯರ್ಕಣ್ಸೋಲವಂ ಕಾಣ್ಕೆಗೊಟ್ಟು ಮನಮಂ ಮೆಚ್ಚುಗುಡೆಯುಂ ರಾಗರಸದೊಳ್ಮುಳುಂಗು[೯]ತುಂ ತೇಪಕಾರ್ತಿಯರ್ತೆಪ್ಪಂ ಬಿಡಿವಂತೆ ತಾಪದಿಂ ಮೃಣಾಳನಾಳದ

೧. ಲಕ್ಷ್ಮಿ, ಸರಸ್ವತಿ, ಜಯಲಕ್ಷ್ಮಿ, ವೀರಲಕ್ಷ್ಮಿ, ಯಶೋಲಕ್ಷ್ಮಿ - ಇವರೆಲ್ಲರನ್ನೂ ಒಲಿಸಿಕಂಡು ಆ ಮನ್ಮಥಸ್ವರೂಪನಾದ ಚೆಲುವನು (ಸಾಮಾನ್ಯ) ಸ್ತ್ರೀಯರನ್ನು ಒಲಿಸುರುದೇನು ಸೋಜಿಗ?

೨. ಅರಸರು ಎಚ್ಚರದಿಂದಾಳುವ ನಗರದ ಎಲ್ಲ ಯುವತಿಯರ ಉಡೆಯನ್ನೂ ಏಕಾಕಿಯಾಗಿ ಉಚ್ಚಿದ ಪುಷ್ಪಬಾಣನು ಎಂತಹ ಶೂರನೊ? ಮನವೆಂಬ ಪುರವನ್ನು ಅವನು ಪುಟ್ಟಪೂರ ಸುಟ್ಟುಬಿಟ್ಟನು.

ವ|| ಎಂಬಂತೆ ಆ ಕುಮಾರನು ಕಣ್ಣಿಗಿಕ್ಕಿದ ಮಾಯೆಯಂತೆ ಮನಕ್ಕಿಕ್ಕಿದ ಮೂರ್ಛೆಯಂತೆ ಸುಂದರಿಯರಿಗಿಕ್ಕಿದ ಮರುಳಿನಂತೆ ಬರುವುದನ್ನು ಕಂಡು, ಸೌಭಾಗ್ಯಕಾರ್ತಿಯರು ತಮ್ಮ ಸೌಭಾಗ್ಯವನ್ನು ಸೇಸೆದಳಿದರು; ಚಲ್ಲಗಾರ್ತಿಯರು ತಮ್ಮ ಕಣ್ಚಲ್ಲರಿದಿಂದ ನಿವಾಳಿಸಿ, ಲಜ್ಜೆಯನ್ನು ಬಳಿದು ಬಿಸಾಕಿದರು; ಸೋಲಿಸುವೆನೆಂಬ ಹೆಣ್ಣುಗಳು ಚಕ್ಷುಪ್ರೀತಿಯನ್ನೆ ಕಾಣಿಕೆಗೊಟ್ಟು ಮನವನ್ನು ಮೆಚ್ಚುಗೊಟ್ಟರು; ಚೆಲ್ಲಾಟದ ವೇಶ್ಯೆಯರು ರಾಗರಸದಲ್ಲಿ ಮುಳುಗೇಳುತ್ತ ತೆಪ್ಪವನ್ನು ಹಿಡಿದುಕೊಳ್ಳುವಂತೆ ತಾಪವನ್ನು ತಾಳಲಾರದೆ <u>ಕಮಲನಾಳ</u>ಗಳ ಹೊರಗೆ ಹೊರಹೊರಳಿ ತೆಕ್ಕೆಬಿದ್ದರು; ಬೆದೆಗಾರ್ತಿಯರು ತಾಯಿಲ್ಲದ

೧ ಸಜಿದಾಳುವ (ಕ, ಮ). ೨ ಬ್ಬೆ (ಕ, ಪ), ರ್ಚೆ (ಕಾ). ೩ ವ್ರೋ (ಪ). ೪ ದೊ (ಕ, ಪ). ೫ ನೋ (ಕ), ನೇ (ಕಾ, ಮ), ೬ ವೀರನೋ (ಕಾ), ೭ ಠ (ಕ, ಮ). ೮ ರ್ಕಳಚಲ್ಲ (ಕ), ರ್ಕಳುಚಲ್ಲ (ಮ), ರ್ಚಲ್ಲ (ಪ). ೯ ತ್ತುಂ ತೆಪೆಯರ್ತೆಪ್ಪಂ ಬಿಡಿವಂತೆ (ಮ), ತ್ತಂ ತೆಸೆಯೆ ತೆಪ್ಪಂ ಬಿಡಿವಂತೆ (ಕ).

ಪೊರಳಿಯಂ ಪೊರಳ್ದು ತಳ್ಕೈಸೆಯುಂ [೧]ಅತೀಯ[೧]ಕಾರ್ತಿಯರ್ತಾಯಿಲ್ಲದ ಕೂಸಿನಂತೆ ಬಾಯಂ ಬಿಡೆಯುಂ [೨]ಕಟ್ಟಾಯ[೨] ಕಾರ್ತಿಯರ್ಕೆಟ್ಟ ಮನಮನಱಸುವಂತೆ ಕಾಮಪಿಶಾಚದಿಂ ಪುಗದೆಡೆಯಂ ಪುಗೆಯುಂ ಪೊಸವೇಟಕಾರ್ತಿಯರ್ತಮ್ಮ ಕನ್ನೆವೇಟಮಿವನೊಳಾಗದೆ ಕೆಟ್ಟೆವೆಂದು[೩]ಕಟ್ಟುಕಡೆಯೆಯುಂ[೩] [೪]ಬೆಟ್ಟ[೪]ನನಿತು ಬೇಟಮಾದೊಡಂ ಮನದಾವೆಡೆಗಮೆಯ್ದದೆಂ[೫] ದಲವ[೬]ರಿಸುವ[೬] ಕಡುವೇಟಕಾರ್ತಿಯರ್ಕಾ[೭] ತರಿಕೆಯಂ[೭] ಕಡಳಿ[೮]ಯೊಳ್ಪ[೮]ಡೆದೆವೆಮ್ಮ ಮಕ್ಕಳ [೯]ಕಟ್ಟಿ[೯]ಲೆಗಮೀ ಬೇಟಮೆ ಸಾಲ್ಗುಮೆಂ[೧೦]ದು ಪಟಿ[೧೦]ವೇಟಮಂ [೧೧]ಪೊಱ[೧೧]ಗೊಕ್ಕು ಪೆಡೆ[೧೨]ಗೆ ಹಾರಂ ಪೊಸ ವೇಟಮಂ ಪೊಯ್ದುಕೊಳಲುಂ ಮತ್ತಿನ ಗಂಡರ್ಮೊಱೆಯಲ್ಲರೆಂ[೧೩]ದು ಮನ[೧೪]ದಾಣ್ಮಂಗೆ[೧೪] ಬಟಿನೀರ್ಗುಡಿದ ಬದ್ದೆಯರೀ[೧೫]ಭವಮಿಂತೆ ಪೋದುದು ಮಱು ಭವದೊಳಾಡೊಡಮೀತನೊಳೆ ಬೇಟಮಕ್ಕೆಂದು ಪರ[೧೬]ಸಿ ಪರಿಚ್ಛೇದಿಸಿ ಕಾಮಾಗ್ನಿಯಂ ಪುಗೆಯುಂ ಸತಿಯರ್ಪತಿವ್ರತಿಕೆಯಂ ನಂಬಿಯ[೧೭]ಲಗ[೧೭]ನಿಕ್ಕಿ[೧೮]ತೋಱು[೧೮]ಯೆಯುಂ ಕೂಂಟಣಿಯರ್[೧೯] ಸವಿಗಂಡು ಬೇಟಕ್ಕೆ ಕಂಟಕರಾದೆ[೨೦]ವೇ ಕೆಂದು[೨೧]ನೀ[೨೧]ಕರಿಸೆಯುಂ ಪಟಿವಂಡಿರೆಮ್ಮ ದೆವಸದೊಳೀತಂ ಪುಟ್ಟದೆ ಪರಿಜುಂ ಪ್ರಾಯಮುಂ ಸುಸಿಲುಂ ಬಸನಮುಂ ಬಱುದೊಱೆವೋದುದೆ[೨೨]ನೆಯುಂ ಸಿರಿಯೊಡೆಯರ

ಕೂಸಿನಂತೆ ಬಾಯಿ ಬಿಟ್ಟರು; ಮಹಾದೃಢಚಿತ್ತೆಯರೆಂಬವರು ತಮ್ಮ ಕಳೆದುಹೋದ ಮನವನ್ನು ಹುಡುಕವಂತೆ ಕಾಮಪಿಶಾಚಕ್ಕೆ ಒಳಗಾಗಿ ಹೊಗದೆಡೆಯನ್ನು ಹೊಕ್ಕರು; ಹೊಸ ಪ್ರಣಯಿನಿಯರು "ನಮ್ಮ ಮೀಸಲು ಪ್ರಣಯ ಇವನಲ್ಲಿ ಆಗದೆ ನಾವು ಹಾಳಾದೆವೆಂದು" ಮರಮರ ಮರುಗಿದರು; ಎಂತಹ ತೀವ್ರ ಪ್ರಣಯವಾದರೂ ಮನಸ್ಸಿನ ಒಂದು ಮೂಲೆಗೂ ಸಾಲದೆಂದು ಹಾತೊರೆಯುವ ಮಹಾ ಪ್ರಣಯಾಕಾಂಕ್ಷಿಣಿಯರು 'ನಮ್ಮ ಕಾತರವೆಲ್ಲ ಫಲಿಸದೆ ಕಳೆದುಹೋಗುವುದಕ್ಕೇ ಆಯಿತು. ಇವನಲ್ಲಾದ ನಮ್ಮ ಪ್ರಣಯಾಪೇಕ್ಷೆಯ ಅತಿಶಯ ನಮ್ಮ ಮಕ್ಕಳನ್ನು ಕಂಗೆಡಿಸುವಷ್ಟಿದೆ" ಎಂದುಕೊಂಡರು; ಹಳೆಯ ಪ್ರಣಯವನ್ನು ಹೊರಗೆ ಬಿಸಾಕಿ, ಹೊಸ ಪ್ರಣಯವನ್ನು ಹೊಯ್ದುಕೊಂಡೇವೆಂದರೆ ಇತರ ಪುರುಷರು ಆಗುವಂತಿಲ್ಲವಲ್ಲಾ ಎಂದು ಮನೋವಲ್ಲಭನಿಗೆ ನಿಷ್ಠಾಪೂರ್ವಕವಾಗಿ ತೀರ್ಥೋದಕ ಪಾನದೊಡನೆ ಪ್ರಮಾಣ ಮಾಡಿದ ಪ್ರೌಢೆಯರು "ಈ ಜನ್ಮವಂತೂ ಹೀಗೆ ವ್ಯರ್ಥವಾಯಿತು. ಮುಂದಿನ ಜನ್ಮದಲ್ಲಾದರೂ ಈತನಲ್ಲಿ ನಮ್ಮ ಪ್ರಣಯ ಫಲಿಸಲಿ" ಎಂದು ಹರಕೆ ಹೊತ್ತು, ನಿರ್ಧಾರದಿಂದ ಕಾಮಾಗ್ನಿಯನ್ನು ಹೊಕ್ಕರು; ಸತಿಯರು ತಮ್ಮ ಪಾತಿವ್ರತ್ಯವನ್ನು ನಂಬಿ ಇರಿದುಕೊಂಡು ಪ್ರಾಣಬಿಟ್ಟರು; ಕುಂಟಣಿಯರು ತಾವೇ ಮನಸೋತು ಹೋಗಿ, ಹೆರವರ ಪ್ರಣಯಕ್ಕೆ ನಾವು ಕಂಟಕರಾದೆವೇಕೆಂದು ಜುಗುಪ್ಸೆ ಹೊಂದಿದರು; "ನಮ್ಮ ಪ್ರಾಯದ

---

೧ ತಿಯ್ಯ (ಕ), ತಿಯ (ಮ), ತೀಯ (ಪ). ೨ ಕಟ್ಟೆಯ (ಕ, ಮ). ೩. ಕಟ್ಟಗಡೆಯೆಯುಂ (ಕ), ಕಟ್ಟುಗಡೆಯೆಯುಂ (ಮ). ೪. ಚೇಟಿಗ (ಕ, ಪ) ೫. ದಿಂ (ಕ, ಮ). ೬. X (ಮ). ೭. ಕಾ (ಕ, ಪ). ೮ ಯಿಂ (ಮ). ೯ ಕಳೆಯಲ್ಪ (ಕ, ಮ, ಪ). ೧೦. ಮಕ್ಕಳ ವೇಗ (ಕ, ಮ). ಮಕ್ಕಳ್ಗಾವಗ (ಪ). ೧೧. ಮಂ (ಮ). ೧೨. ಟೆ (ಕ, ಮ, ಪ). ೧೩. ಪೊಕ್ಕುಱ (ಕ, ಮ, ಪ). ೧೪. ಡ (ಕ, ಮ). ೧೫. ವೆಂ (ಮ). ೧೬. ದೊಳಗೆ (ಕ, ಮ, ಪ). ೧೭. ರೀ (ಕ, ಮ. ಪ.) ೧೮. ಠಿ (ಕ, ಪ). ೧೯. ಗಲ (ಕ, ಪ). ೨೦. ತೋಱು (ಮ). ೨೧ + ಸೋಲ್ತು (ಕ, ಪ), ಸೋತು (ಮ). ೨೨ ವೆಂದು (ಕ, ಪ).

ಪೆಂಡಿರೆಲ್ಲಂ ಪರಿಚಾರಕಿಯರುಂ ಕೂಡಿಕೊಂ[೧]ಡಜ್ಜ[೧]ಗಾಪಿನಜ್ಜ ರಂ ಪಿಡಿದುರುಳ್ಚಿ ಚೆ[೨]ನ್ನ ಸಂಕಲೆಯಂ[೩]ಪೆಡ[೪]ಗೆಯ್ಗಟ್ಟಿ ಪಲ್ಲಿಲಿವಾಯೊಳ್ ಕ್ರೀಡಾಕಂತುಕಮಂ ತುಂ[೫]ತಿ[೬]ತೊಟ್ಟ ತುಡು[೭]ಗೆಯಂ ಕಳೆದೀಡಾಡಿ ಕಣ್ಬೋಱಿ ಮಾಸಿದ ಸೀರೆಯಂ ಮುಸುಂಕಿ ತೊಟ್ತಿರೊಳಗಣ ತೊಟ್ತಿರಾಗಿ ಬೀದಿವರಿಯೆಯುಂ ಜೈ[೮]ನೆಯ[೬] ರ್ಜಿನಪತಿಯೆ ದೈವಮೆಂಬ ನಂಬುಗೆಯೆ ಸಾಲ್ವುದು ಪರಪುರುಷಪರಿತ್ಯಾಗವ್ರತಮಂ ಗುರುಗಳಂ ಬೇಡಿಕೊಂಡು[೭]ಬಿಡಿಸಿ[೭]ಕೊಂಡಪೆಮೆಂದು ಮನಂದರೆಯುಂ ಲೋಭಗೂಂ[೮]ಟಣಿ[೯]ಯರ ಗಾ[೯]ಯಿಲೆಯಪ್ಪ ಮಕ್ಕಳನೋವರಿಯೊಳ್ನೂಂಕಿ ಪಡಿಗೆತ್ತು ಪೊಱ[೧೦]ಕಟ್ಟಂ ಕಟ್ಟಿ ಮುಸುಂಕಿಟ್ಟು ಕುಳ್ಳಿರೆಯು ಮಾಕೆಗಳ್ಕೊ[೧೧]ಯ್ದಿಕ್ಕಿದ ಕುರುಳ್ಗಳಿಂ ತುಂಬಿಯ ಬಣಂಬೆಯನೊಟ್ಟಿದಂತಾಗೆ ಕಡಿದಿಕ್ಕಿದ ಬೆರಲ ಕೊಂ[೧೨]ಡಿಕೆಗಳಿಂ ಪಸಿಯರಿಸಿನದ ಕೊಂಬನುಡಿದು ಸುಣ್ಣಂದೊಡೆದೀಡಾಡಿದಂತಾಗೆ ಕಿಟ್ತಿಕ್ಕಿದ ಕೆಂಬಲ್ಗಳಿಂ ದಾಳಿಂಬದ ಬಿತ್ತಂ ರಾಶಿಗೆಯ್ದಂತಾಗೆ ಕಿಱುವೆರಲ್ಗಳಂ ಕಚ್ಚುವ ಮುಖಮುಕುರಂಗಳ್ಚಂದ್ರಮಂಡಳಂ ಪಾವಿನ ಪೆಡೆಯಂ ನುಂಗುವಂತಾಗೆ ಬಯಲ್ಪೊಱೆಯನೀಸುವ ಬಾಲೆಯರಿಂ ಸ್ತ್ರೀರಾಜ್ಯಮಂ ಸೂಱೆಗೊಂಡುಟ್ಟುದಂ ಸುಲಿವಂತಾಗೆ ಸ್ಮರಪರಿತಾಪಕ್ಕೆ ಪಕ್ಕಾಗಿ ಪೊಕ್ಕು ಪೊರಳ್ವ ನರಳ್ವ ನಾರಿಯರ ನೆರವಿಗಳಿಂ ಬನಂಗಳೆಲ್ಲಂ ಮದನವ್ಯಾಧನಾಱಿಡಿ ಗೊಂಡಡವಿಯಂತಾಗೆ ಕಮಳಕೇಸರದ ಕುಸವುಡಿಯಿಂ[೧೩] ಕೆಚ್ಚನಿರ್ದ ನೀರೊ ಳ್ದಿಬ್ಬು[೧೪]

ದಿನದಲ್ಲಿ ಈತನು ಹುಟ್ಟಲಿಲ್ಲವೇಕೆ? ನಮ್ಮ ರೂಪು, ಯೌವನ, ಬಯಕೆ, ಕೂಟಗಳೆಲ್ಲ ಬತ್ತಿದ ಹೊಳೆಯಾದುವು" ಎಂದು ಮುದುಕಿಯರು ಮರುಗಿದರು; ಶ್ರೀಮಂತರ ಹೆಂಗಳೆಯರೆಲ್ಲರೂ ಪರಿಚಾರಿಕೆಯರನ್ನು ಕೂಡಿಕೊಂಡು ತಮಗೆ ಅಜ್ಜಗಾವಲಾಗಿದ್ದ ಮುದಿ ಕಂಚುಕಿಗಳನ್ನು ಹಿಡಿದು ಉರುಳಿಸಿ ಹೆಡಮುರಿಗೆ ಬಿಗಿದು ಅವರ ಬಚ್ಚಬಾಯಲ್ಲಿ ಆಟದ ಚೆಂಡನ್ನು ತುರುಕಿ, ತೊಟ್ಟ ಆಭರಣಗಳನ್ನೆಲ್ಲ ಕಳೆದೊಗೆದು, ಮಾಸಿದ ಸೀರೆಯನ್ನು ಮುಸುಕಿಟ್ಟಿಕೊಂಡು ತೊತ್ತಿರೊಳಗಿನ ತೊತ್ತುಗಳಾಗಿ ಬೀದಿಬೀದಿ ಅಲೆದರು; ಜೈನಸ್ತ್ರೀಯರು "ಜಿನಪತಿಯ ದೈವವೆಂಬ ನಂಬಿಗೆಯೊಂದೆ ಸಾಕು. ಪರಪುರುಷತ್ಯಾಗವೆಂಬ ವ್ರತವೂ ಬೇಕೆ? ಗುರುಗಳನ್ನು ಬೇಡಿಕೊಂಡು ಆ ವ್ರತವನ್ನು ಪರಿಹರಿಸಿಕೊಳ್ಳೋಣ" ಎಂದು ಮನಸ್ಸು ಮಾಡಿದರು; ಲೋಭಿಗಳಾದ ಕುಂಟಣಿಯರು ಕಾಮ ಪೀಡಿತೆಯರಾದ ತಮ್ಮ ಪುತ್ರಿಯರನ್ನು ಕೋಣೆಯಲ್ಲಿ ನೂಕಿ, ಬಾಗಿಲಿಕ್ಕಿ, ಹೊರಗೀಲಿ ಹಾಕಿ ಮುಸುಕಿಟ್ಟುಕೊಂಡು ಕಾವಲು ಕುಳಿತರು; ದುಂಬಿಗಳ ಬಣವೆಯನ್ನು ಒಟ್ಟಿದಂತೆ ಕೊಯ್ದಿಕ್ಕಿದ ತಲೆಗೂದಲುಗಳು, ಹಸಿಯರಿಸಿನದ ತುಂಡುಗಳನ್ನು ಸುಣ್ಣ ತೊಡೆದು ಈಡಾಡಿದಂತೆ ಕಿತ್ತಿಕ್ಕಿದ ಕೆಂಬಲ್ಲುಗಳು (ಎಲ್ಲೆಲ್ಲೂ ತುಂಬಿದುವು); ಕಿರುಬೆರಳನ್ನು ಕಚ್ಚುವ ಮುಖಗಳು ಹಾವಿನ ಹೆಡೆಯನ್ನು ನುಂಗುವ ಚಂದ್ರಮಂಡಲದಂತೆ ತೋರುತ್ತಿರಲಾಗಿ ಮರೀಚಿಕೆಯಲ್ಲಿ ಈಸುವ ಬಾಲೆಯರಿಂದ ಸ್ತ್ರೀರಾಜ್ಯವನ್ನು ಸೂರೆ ಮಾಡಿ ಉಡೆಯನ್ನು ಸುಲಿದಂತಾದುವು; ಮದನತಾಪದಿಂದ ಹೊರಳುವ ನರಳುವ ನಾರಿಯರ ಸಮುದಾಯದಿಂದ ಬನಗಳೆಲ್ಲವೂ ಮನ್ಮಥನೆಂಬ

---

೧ ನಿರಾ (ಕ, ಪ). ೨ ದಿ (ಕ, ಪ). ೩ ಡುಜ್ಜು (ಕ, ಪ). ೪ ಚಿ (ಕ). ೫ ಯಿಂ (ಕ, ಪ). ೬ ಜಿ (ಮ). ೭ ತೂ (ಕ, ಮ, ಪ). ೮ ಕಾಲ್ದುಡು (ಕ, ಮ, ಪ). ೪ನೇಯ (ಪ). ೯ ಬಿಸುಡಿ (ಕ, ಪ). ೧೦ ಗುಂ (ಕ, ಪ). ೧೧ ರಗಾ (ಕ), ರ್ಗಾ (ಪ). ೧೨ ಡ (ಕ, ಪ). ೧೩ ಳ ಕೊ (ಕ, ಮ. ಪ). ೧೪ ಕಂ (ಕ, ಮ. ಪ).

ನೀರರುಹನಾಳಂಗಳನೊಟ್ಟಿಕೊಂಡು ಬೆಂಡು ನೆಗೆದ ಬೆಡಂಗಿಯರಿಂ ತಣ್ಮಡುಗಳೆಲ್ಲಂ ನೆತ್ತರುಂ ಕರುಳುಂ ಸುರಿಯೆ ಕಾಮ ಕಿರಾತಂ ಕೊಂದಿಕ್ಕಿದ ಮಡುಗಳಂತಾ[1]ಗೆ ತಂ[1]ಪಿಂಗೆ ಪಿಂಗಲಾಱದಂಗನೆಯರ್ಪೊ[2]ಟ್ಟುಕೊಂಡ ಪುಟೆ [5]ಲೆಲ್ಲಂ[5] ಚಿತ್ತಜಚೋರನರೆಯೆಱಗಿಱಿದುದರಿಗೆಡಪಿ ದಂತಾಗೆ ಕಾಪಳಿದು ಪೊಟಲೊಳುಳ್ಳ ಬೆಲೆವೆಂಡಿರುಂ ಕುಲವೆಂಡಿರುಂ ಮರುಳ್ಗೊಂಡುದಂ ಕಂಡು [6]ಪಾರ್ವರೆಲ್ಲರುಂ[6] ಗೃಹಿಣೀಗೃಹಮುಚ್ಯತೇಯೆಂಬುದು ಗರತಿಯಿಲ್ಲದೆ ಗೃಹಮೆಲ್ಲಿತ್ತೆಂದು ಗಾರ್ಹಸ್ಥ್ಯಕ್ಕೆಳ್ಳುನೀರೆಱೆ[2]ದು ಪರದರೆಲ್ಲಂ ಪೆಂಡಿರ್ಜೋಡಾ[3]ಡೆ ಪರದಾ[3]ಡುವುದುಱದೆಂದಂಗಡಿಯ ಪಡಿಯಂ [4]ಕೆತ್ತು[4] ತಳವರ್ಗಮೆಲ್ಲಂ ತಲೆಯಂ ಪೆಂಡತಿಯು ಮಂ ಕುಲಡುವೋಲಗಮೆಂದು ಕೈದುಮಂ ಬಿಸುಟ್ಟು[2] ಪುರಜನಮುಮಂ ನೆರಪಿಕೊಂಡು ಬಂದು ಸಮುದ್ರವಿಜಯಂಗೆ ಪುಯ್ಯಲ್ಚಿ ಮೆಯ್ಯನಿಕ್ಕಿ ತಂತಮ್ಮ ಮಕ್ಕಳಂ ಮುಂದಿಡುವುದುಮಾ ನೃಪಂ ನೋಡಿ ವಸುದೇವನ ದೇಹಮನಗೆ ವೊಯ್ದಂತೆಯುಂ [5]ಪಱಿದು ಪತ್ತಿಸಿದಂತೆಯುಂ[5] ಮೊಕ್ಕಳಮೀ ಮಕ್ಕಳೀಕಾದುವೆಂದು ಬೆಕ್ಕಸಂಬಟ್ಟು ನೋಡೆ ನುಡಿಯಲವಸರಂಬಡೆದು ಬಳಸಿರ್ದ ವಂದಿವೃಂದಮುಂ ಸೇವಕಸಮೂಹಮುಮೆಮ್ಮೆಮ್ಮ ಪುತ್ರ ಪೌತ್ರಾದಿಗಳುಮಿನ್ನರೆಂದಱಿವುದೀ ಪುರದ ಪುಣ್ಯಾಂಗನೆಯರುಂ ಮನಸಿಜನಂತೆ ಮನದೊಳಿರ್ಪ ವಸುದೇವನ ರೂಪು ಗರ್ಭದೊಳ್ಬಿಂಬಿಸಿ ಬಿತ್ತಾದಂತೆಯು ಮಚ್ಚೊತ್ತಿದಂತೆಯು ಮಾತನಂತಪ್ಪ ಪುತ್ರರಂ ಪಡೆವರೊತ್ತೆಯ ಗೂಂಟಂ ಸೊಡರಿಟ್ಟೇಱುವಂತೆರವಿನ ಸಿರಿಯನಱಿದು ಪೊಟಲೊಳಂ ಪೊಱವೊಟಲೊಳಂ ಬೀದಿಯೊಳಂ ಅಂಗಡಿಯೊಳಂ ಕೇರಿಯೊಳಂ ಸೂಳೆಗೇರಿಯೊಳಮೆಲ್ಲಿ

ಬೇಟೆಗಾರನು ಮುತ್ತಿ ಹಿಂಸಿಸಿದ ಅಡವಿಯಂತಾದುವು, ಕಮಲ ಪುಷ್ಪಗಳ ಪರಾಗದಿಂದ ಕೆಂಪಾದ ನೀರಲ್ಲಿ ಬಿದ್ದು ತಾವರೆನಾಳಗಳನ್ನು ಒಟ್ಟಿಕೊಂಡು, ಬೆಂಡು ಬೆಂಡಾದ ಬೆಡಗಿಯರಿಂದ ತಂಗೊಳಗಳೆಲ್ಲವೂ ನೆತ್ತರೂ ಕರುಳೂ ಸುರಿಯುವಂತೆ ಕಾಮ ಕಿರಾತನು ಕೊಂದಿಕ್ಕಿದ ಮಡುಗಳಂತಾದುವು. ಮಳಲ ತಂಪನ್ನು ಬಿಟ್ಟಿರಲಾರದೆ ಅಂಗನೆಯರು ಹೂಳಿಕೊಂಡ ಮರಳು ದಿನ್ನೆಗಳೆಲ್ಲವೂ ಕಾಮನೆಂಬ ಕಳ್ಳನು ಅರ್ಧಮರ್ಧ ಅಗಿದು ತನ್ನ ಕಳವಿನ ಸರಕನ್ನು ಅವಸರವಸರವಾಗಿ ಹೂಳಿದಂತೆ ತೋರಿದುವು; ಕಾವಲಿಲ್ಲದೆ ಪಟ್ಟಣದಲ್ಲಿದ್ದ ಕುಲಸ್ತ್ರೀಯರೂ ವೇಶ್ಯಾಸ್ತ್ರೀಯರೂ ಮರುಳಾದರು. ಇದನ್ನು ಕಂಡು ಹಾರುವರೆಲ್ಲರೂ "ಗೃಹಿಣಿಯಿಂದಲೇ ಗೃಹವೆಂಬರು. ಗರತಿಯಿಲ್ಲದೆ ಗೃಹವೆಲ್ಲಿಯದು?" ಎಂದು ತಮ್ಮ ಗೃಹಸ್ಥಿಕೆಗೆ ಎಳ್ಳುನೀರು ಬಿಟ್ಟರು; "ಹೆಂಡಿರೆಲ್ಲ ಹಾದರವಾಡಿದರೆ ನಾವು ವ್ಯಾಪಾರಮಾಡಿ ಏನು ಮಣ್ಣು?" ಎಂದು ವ್ಯಾಪಾರಿಗಳು ಅಂಗಡಿಯ ಬಾಗಿಲಿಕ್ಕಿ ಬಿಟ್ಟರು; "ನಮ್ಮೀ ರಾಜಸೇವೆಯೆಂಬುದು ನಮ್ಮ ತಲೆಗಳೊಡನೆ ಹೆಂಡಿರನ್ನುಪ್ಪಿಸಿಕೊಡುವುದಾಯಿತೆ?" ಎಂದು ಸೈನಿಕರು ತಮ್ಮ ಆಯುಧಗಳನ್ನು ಬಿಸಾಕಿ ಪುರಜನರನ್ನೂ ಕೂಡಿಸಿಕೊಂಡು ಬಂದು, ಸಮುದ್ರವಿಜಯನಿಗೆ ಮೊರೆಯಿಟ್ಟು, ನಮಸ್ಕರಿಸಿ, ತಂತಮ್ಮ ಮಕ್ಕಳನ್ನು ಅವನ ಮುಂದೆ ಇರಿಸಿದರು. ವಸುದೇವನ ರೂಪವನ್ನೆ ಅಗೆಹೊಯ್ದಂತೆಯೂ ಹರಿದು ಹಚ್ಚಿದಂತೆಯೂ ಇರುವ ಇಷ್ಟೊಂದು ಮಕ್ಕಳು ಏಕಾದುವೆಂದು ನಿಬ್ಬೆರಗಾಗಿ ಸಮುದ್ರವಿಜಯನು ನೋಡುತ್ತಿರಲಾಗಿ ನುಡಿಯುವುದಕ್ಕೆ ಅವಕಾಶ ಪಡೆದು ಅವನ ಸುತ್ತಲೂ ಇದ್ದ ಸ್ತುತಿಪಾಠಕರೂ ಸೇವಕರೂ "ದೇವ, ನಮ್ಮ ಮಕ್ಕಳು ಮೊಮ್ಮಕ್ಕಳೂ ಹೀಗೆಯೇ ಇವೆಯೆಂದು ಅರಿಕೆಯಿರಲಿ.

---

೧ ಯುಂ (ಕ, ಮ, ಪ). ೨ ರ್ದ (ಕ, ಪ). ೩ ರೆತ್ತಂ (ಕ, ಪ) ೩ ಮತ್ತಂ (ಮ). ೪ ಪೂ (ಕ, ಪ). ೫ ಲ್ಗಳೆಲ್ಲಂ (ಕ, ಮ, ಪ). ೬ X (ಮ).

ನೋಳ್ಪಡಂ ಕಾಮದೇವನೆ [೧]ಬವಣಿಗೆ[೧] ಬಂದಂತೆ ಬರ್ಪ ವಸುದೇವನನೆ ಕಾಣಲಕ್ಕುಮಿಲ್ಲಿಂ ಮೇಲೆ ದೇವರಱಿವಿರೆಂದುಸಿರದಿರ್ಪುದುಮರಸಂ ಅವರಂ ಸಂ[೨]ತಸಂ[೨]ಬಡೆ ನುಡಿದು ವಿಸರ್ಜಿಸಿ ವಸುದೇವಂಗಾಗಳೆ ಬಟೆಯಟ್ಟಿ ಬರಿಸಿ ಊರುಬ್ಬೆಯಾದ[೩] ತಮ್ಮ ನಗುರ್ವಿನುರ್ವಿಂಗುಬ್ಬೆಗಂಬಟ್ಟು [೪]ಬೇರು[೪]ವರಿದ ಸೊಬಗಿಂಗೆ ಸಂತೋಸಂ ಬಟ್ಟು ತೆಗೆದು ತಬ್ಕಯ್ಸಿ ತೂಪಿಱಿದು ಕೆಲದೊಳ್ಕುಳ್ಳಿರಿಸಿ ಬಾಯ್ವಾಯೊಳ್ತಂಬುಲಮನಿಕ್ಕಿ ಮೆಲ್ಲನಿಂತೆಂದಂ

ಪೃಥ್ವೀ ವೃತ್ತ ॥

ಇದೇಕೆ ಮುಖಚಂದ್ರನೀ ಪಗಲ ಚಂದ್ರನೊಂದಂದಮಾ
ಯ್ತಿದೇಕಧರಪಲ್ಲವಂ ವಿಧುರ ಪಲ್ಲವಚ್ಛಾಯಮಾ
ಯ್ತಿದೇಕನುಜ ನಿನ್ನ ಮೆಯ್ ಪೊಸೆದ ಪೂವಿನಂತಾದುದಾ
ನಿದಂ ಬಗೆದೆನಾಡುವ್ರೋ[೫] ಬಿಸಿಲೊಳೀಗಳಬ್ಜೇಕ್ಷಣಾ ೩

ಇಂತು ತೊಱಲ್ದಲ್ಲದೆ ನಿನ
[೬]ಗೇಂ ತೀರದೆ ತಮ್ಮ[೬] ನೀರೊಳಂ ನೆೞಲೊಳಮೊ
ಲ್ದಂತೆವೊಲುಟ್ಟುಂ ತೊಟ್ಟುಂ
ಸಂತಸದಿಂ ಪೂವಿನಂತೆ ಸುಖಮಿರಲಾಗಾ ೪

ವ॥ ದೇವಕುಮಾರರುಂ ರಾಜಕುಮಾರರುಮಾರ್ಕಂಡರಾರ್ಕೇಳ್ದರೆಂಬಂ ಮನ್ಮಥನಂತೆ ಮನವನ್ನು ಹೊಕ್ಕ ವಸುದೇವನ ರೂಪು ಗರ್ಭದಲ್ಲಿ ಬಿಂಬಿಸಿ ಅದೇ ಬೀಜವಾದಂತೆ, ಅಚ್ಚೊತ್ತಿದಂತೆ ಆಗಿ ಅವನಂತೆ ರೂಪುಳ್ಳ ಮಕ್ಕಳನ್ನು ಪುರಸ್ತ್ರೀಯರು ಹಡೆಯುವರು. ಒತ್ತಾಯ ಕುದುರೆಯನ್ನು ಹಿಲಾಲು ಹಿಡಿದೇರುವಂತೆ ತನ್ನ ಎರವಲು ಸಂಪತ್ತನ್ನು ಅರಿತು ಪಟ್ಟಣದ ಒಳಗೆ, ಹೊರಗೆ, ಬೀದಿಯಲ್ಲಿ, ಅಂಗಡಿಯಲ್ಲಿ, ಕೇರಿಯಲ್ಲಿ, ಸೂಳೆಗೇರಿಯಲ್ಲಿ ಎಲ್ಲೆಲ್ಲಿ ನೋಡಿದರೂ ಕಾಮದೇವನೆ ಮೆರವಣಿಗೆ ಬಂದಂತೆ ವಸುದೇವನೆ ಕಂಡುಬರುವನು. ಇದಕ್ಕೆ ಏನು ಮಾಡಬೇಕೋ ತಾವೆ ಬಲ್ಲಿರಿ" ಎಂದು ಮಾತು ಮುಗಿಸಿದರು. ಅರಸನು ಅವರನ್ನು ಸಂತೈಸುವಂತೆ ಮಾತಾಡಿ ಕಳಿಸಿ, ಆಗಿಂದಾಗಲೆ ದೂತನನ್ನು ಅಟ್ಟಿ ವಸುದೇವನನ್ನು ಕರೆತರಿಸಿಕೊಂಡು, ಊರಿಗೇ ಉಪದ್ರವಕಾರಿಯಾದ ಆತನ ಅತಿಶಯವನ್ನು ಕಂಡು, ಉಬ್ಬರಿಸುವ ಸೊಬಗಿಗೆ ಸಂತೋಷಪಟ್ಟು ಬಾಚಿ ತಬ್ಬಿಕೊಂಡು ತೂಪಿರಿದು, ಪಕ್ಕದಲ್ಲಿ ಕುಳ್ಳಿರಿಸಿಕೊಂಡು, ಬಾಯಿಗೆ ಬಾಯಿಟ್ಟು ತುಂಬುಲವಿಕ್ಕಿ ಮೃದುವಾಗಿ ಹೀಗೆ ನುಡಿದನು -

೩. "ತಮ್ಮಾ, ನಿನ್ನ ಮುಖಚಂದ್ರವೇಕೆ ಹಗಲು ಚಂದ್ರನಂತೆ ತೇಜಗುಂದಿತು? ನಿನ್ನ ತಳಿರಂತಹ ತುಟಿಗಳೇಕೆ ಬಾಡಿದ ತಳಿರಂತಾದುವು? ನಿನ್ನ ದೇಹವೇಕೆ ಹೊಸೆದಿಕ್ಕಿದ ಹೂವಿನಂತಾಯಿತು? ಬಿಸಿಲಲ್ಲಿ ಆಡುತ್ತಿರುವೆಯೊ?

೪. ಹೀಗೆ ತಿರುಗಾಡಿ ಬಳಲದಿದ್ದರೆ ಆಗದೆ? ತಮ್ಮಾ, ನೀರಲ್ಲಿಯೂ ನೆಳಲಲ್ಲಿಯೂ

---

೧ X (ಮ). ೨ (ಮ). ೩ ಬಣ್ಣಿಗೆ (ಕ, ಪ). ೪ ತೋಷಂ (ಕ, ಮ, ಪ). ೫ + ತನ್ನ (ಮ). ೬ ಬ್ಬರ (ಕ, ಮ, ಪ).

ತಿರವೇಳ್ಕುಂ ತಿಟ್ಟನೆ ತಿರಿದು ಬಟ್ಟ ಸರಿವಂದಡೆ ಮೆಯ್ಯ ಬಣ್ಣಮುಂ ಪುಣ್ಯಮುಂಮರಿಸಿನದ ಪಿಂಜೆ[1]ಯಂತೆ ಪಾಱೆ ಪೋಕುಂ ಲೋಕದ ಕಿಸುಱುಂ ಕಣ್ಣೆಂಜಲುಂ ಪತ್ತುಗುಮಿನ್ನೆಂದು ಮನೆಯ ಪೊಸತಿಲಂ ಪೊಱಮಡಲಾಗದು ನೀನೆತ್ತಲಾನುಮಲಸಿಕೆಯಾದೊಡೆ

ಹರಯದೊಳಾರುಮಾಡರೆ ಗೃಹಾಂಗಣ ದೀರ್ಘಿಕೆಯಲ್ಲಿ ಹಂಸನಂ
ತಿರೆಗೃಹವೇಣಿಕಾ ಕುಟಿಲ ನಿಃಕುಟದಲ್ಲಿ ವಸಂತರಾಜನಂ
ತಿರೆ ತೊಳಪೀ ಸುವರ್ಣಕೃತಕಾಚಳ ಮೇರುವಿನಲ್ಲಿ ದೇವನಂ
ತಿರೆ ವಸುದೇವ ನೀನೆಸಗು ನಿನ್ನ ವಿಹಾರವಿನೋದಮಂ ಗಡಾ ೫

ವ|| ಎಂದು ಸೌಭ್ರಾ [ತ್ರ] ಸುಭಗ ಸಹಜ ಸ್ನೇಹದಿಂ ನಿಜ ಹೃದಯಮುಮಂ ಮಱಿಸಿ ತಮ್ಮನಮನಮಱೆದೊಡೆ ನೋಗುಮೆಂದಾರುಮಱೆಯದಂತು [೧೦]ಸಕಳ[೧೦]ಸುಖ ಪರಿಕರಂಗಳಂ ಸಲಿಸಿ ಮನಮಂ ಸೆಱೆಗೆಯ್ವಂತೆ ಸುಖದೊಳ್ಸೆಱೆಗೆಯ್ದನಾತನುಮಣ್ಣನಿಕ್ಕಿದುಗುಳುಮಂ ದಾಂಟದೆ

ಬೇಕಾದಂತೆ ಉಟ್ಟು, ತೊಟ್ಟು ಸಂತೋಷದಿಂದ ಹೂವಿನಂತೆ ನೆಮ್ಮದಿಯಿಂದ ಇರಲಾಗದೆ?

ವ|| ದೇವಕುಮಾರರೂ ರಾಜಕುಮಾರರೂ "ಯಾರು ಕಂಡರು? ಯಾರು ಕೇಳಿದರು?" ಎಂಬಂತೆ ಇರಬೇಕು. ಪಿರಿಪಿರಿ ತಿರುಗಾಡಿದರೆ ಮೈಯ ಬಣ್ಣವೂ ಪುಣ್ಯವೂ ಅರಿಸಿನದ ಹುಡಿಯಂತೆ ಹಾರಿ ಹೋಗುವುವು. ಜನರ ಕಣ್ಣೆಂಜಲು ಹತ್ತುವುದು. ಇನ್ನು ಎಂದಿಗೂ ಮನೆಯ ಹೊಸತಿಲನ್ನು ದಾಟಿ ಹೋಗಬೇಡ. ನಿನಗೆ ಏನಾದರೂ ಬೇಸರವಾದರೆ-

೫. ಅರಮನೆಯ ಅಂಗಳದಲ್ಲಿರುವ ಕೊಳದಲ್ಲಿ ಹಂಸನಂತೆ, ರಾಜೋದ್ಯಾನದಲ್ಲಿ ವಸಂತರಾಜನಂತೆ, ಥಳಥಳಿಸುವ ಈ ಚಿನ್ನದ ಕೃತಕಗಿರಿಯ ಮೇಲೆ ದೇವನಂತೆ, ವಸುದೇವಾ, ನೀನು ವಿಹಾರ ಮಾಡಿ ವಿನೋದ ಪಡು ಹರಯದವರು ಹೀಗೆ ಮಾಡುವುದಿಲ್ಲವೆ?"

ವ|| ಹೀಗೆಂದು ಸಹಜವಾದ ಭ್ರಾತೃವಾತ್ಸಲ್ಯದಿಂದ ತನ್ನ ಮನೋಭಿಪ್ರಾಯವನ್ನು ಮುಚ್ಚಿಟ್ಟುಕೊಂಡು, ತಮ್ಮನಿಗೆ ತಿಳಿಸಿದರೆ ಅರನು ನೊಂದುಕೊಂಡಾನೆಂದು ಯಾರಿಗೂ ತಿಳಿಯದಂತೆ ಸಕಲಸುಖದ ಪರಿಕರಗಳನ್ನು ಒದಗಿಸಿ, ಮನಸ್ಸನ್ನು ಸೆರೆಯಲ್ಲಡುವಂತೆ ಆತನನ್ನು ಸುಖದ ಸೆರೆಯಿಟ್ಟನು. ವಸುದೇವನು ಕೂಡ ಅಣ್ಣನ ಮಾತನ್ನು ಎಷ್ಟೂ ಮೀರದೆ-

ಮನೆಯೊಳಗಿರ್ದು[೧]ಪುರಸ್ತ್ರೀ
ಜನಮುಮನಾತ್ಮಪ್ರಭಾವದಿಂದಲರಿಸಿದಂ
ಘನ ಪಟಲದ ಪೊರೆಯೊಳಗಿ
ರ್ದಿನನಲರಿಸುವಂತೆ ಕಮಳಿನೀ ಕಾನನಮಂ ೬

ವ॥ ಅಂತಿರ್ಪು[೨]ದುಮೊಂದು ದಿವಸಂ[೨]

ಈಳೆಯ [೩]ಸಾಂದು[೩]ಮಂ ಪಸಿಯ ಕತ್ತುರಿ ತೀವಿದ ಪೊನ್ನ ಸಿಪ್ಪುಮಂ
ಗಾಳಿಯುಮಣ್ಣದಂತಡರೆ ಕೆಂದಳದಿಂದಮೆ ಮುಚ್ಚಿಕೊಂಡು ಪಾಂ[೪]
ಚಾಳಿಕೆಯೊಂ[೪]ದು ನಕ್ಕು ನಡೆಗೊಳ್ವವೊಲಂತವುರಕ್ಕೆ ಪೋಪ ವಾ
ಚಾಳೆಯನೊರ್ವಳಂ ಚಟುಳ ಚೇಟಿಕೆಯಂ ವಸುದೇವವಲ್ಲಭಂ ೭

ವ॥ ಹಿಡಿದು ಹಿಟಕವಾಡೆ ಚೇಟಿಕೆ[೬]ಯೆಂದಳ್[೬] ಸೆಱೆ[೫]ಯೊಳಿರ್ದುಂ[೭] ವಿಕಾರಿತನಮನೊಂದಂ [೮]ಕೋಡಗಂ[೮]ಗಳೊಳ್ಕಂಡೆನೊಂದಂ ನಿನ್ನೊಳ್ಕಂಡೆನೆನೆ ಕುತ್ತುವಡೆ[೯]ದಂತೆ[೯] ನೊಂದು ಪೇಟಿದೇ[೧೦]ನೆಂಬುದುಂ ನಂಬಿಸಿ ಬೆಸಗೊಳುತ್ತುಮಿರೆ ಪೇಟದಿರೆ ಪೊಣರ್ವಕ್ಕಿಯುಂ ಪದ್ಮದಲರುಮನಟಲಿ[೧೧]ಸಲೆಂದು ಕಳ್ತಲೆಯಂ [೧೨]ತೊಡೆ[೧೨]ವಂತೆ ಕೆಯ್ಯ ಕತ್ತುರಿಯಂ ಕೊಂ[೧೩]ಡವಳ

೬. ಮೋಡದ ಮರೆಯಲ್ಲಿದ್ದರೂ ಸೂರ್ಯನು ಕಮಲವನ್ನು ಅರಳಿಸುವಂತೆ ಮನೆಯೊಳಗಿದ್ದರೂ ಆ ಕುಮಾರನು ತನ್ನ ಪ್ರಭಾವದಿಂದ ಪುರಸ್ತ್ರೀಯರ ಮನವನ್ನು ಅರಳಿಸಿದನು.

ಹೀಗಿರುತ್ತಿರಲಾಗಿ ಒಂದು ದಿವಸ -

೭. ಈಳೆಯ ಸಾದನ್ನು ಹಸಿ ಕಸ್ತೂರಿ ತುಂಬಿದ ಚಿನ್ನದ ಚಿಪ್ಪನ್ನೂ ಗಾಳಿಗೆ ಗೋಚರವಾಗದಂತೆ ಗಟ್ಟಿಯಾಗಿ ಕೈಯಿಂದ ಮುಚ್ಚಿಕೊಂಡು ನಡೆಗಲಿತ ಪುತ್ಥಳಿಬೊಂಬೆಯಂತೆ ಅಂತಃಪುರಕ್ಕೆ ಗಡಬಡೆಯಿಂದ ಹೊರಟಿದ್ದ ವಾಚಾಳೆಯಾದ ದಾಸಿಯೊಬ್ಬಳನ್ನು ವಸುದೇವಕುಮಾರನು

ವ॥ ಹಿಡಿದು ಚೇಷ್ಟೆ ಮಾಡಲಾಗಿ, ಆ ಚೇಟಿ ಎಂದಳು, "ಸೆರೆಯಲ್ಲಿಟ್ಟರೂ ಕುಚೋದ್ಯವನ್ನು ಬಿಡದಿರುವ ವರ್ತನೆ ನನಗೆ ಕಂಡದ್ದು ಒಂದು ಕೋತಿಯಲ್ಲಿ, ಇನ್ನೊಂದು ನಿನ್ನಲ್ಲಿ". ಈ ನುಡಿಯನ್ನು ಕೇಳಿದೊಡನೆ (ಚೂರಯಿಂದ) ಇರಿಸಿಕೊಂಡಂತೆ ನೊಂದು, "ಅದೇನು? ಹೇಳು" ಎಂದು ನಂಬಿಸಿ ಕೇಳಿದರೂ ಆಕೆ ಹೇಳಲಿಲ್ಲ, ಆಗ ಚಕ್ರವಾಕಗಳ ಹಾಗೂ ತಾವರೆ ಹೂವನ್ನೂ ಮನಸ್ಸು ನೋಯಿಸಲೆಂದು ಕತ್ತಲೆಯನ್ನು ಮುತ್ತುವಂತೆ ಆಕೆಯ ಕೈಯಲ್ಲಿದ್ದ ಕಸ್ತೂರಿಯನ್ನು ಕಿತ್ತುಕೊಂಡು, ಅವಳ ಮೊಲೆಗಳಿಗೂ ಮುಖಕ್ಕೂ

೧ ಗೆಂತಿರದೇ ನಮ್ಮ(ಪ). ೨ ರ (ಕ, ಮ, ಪ). ೩ ವದಂಡೆ (ಕಾ). ೪ ರೊಲ್ ಮ (ಕ), ರೊಲ್ವ (ಕಾ), ರೋನುಮುಮ (ಮ). ೫ ಜಿ (ಕಾ). ೬ ದುಂ (ಕ, ಪ). ೭ ಲಿಂ (ಕಾ). ೮ ಪಿಂ (ಮ). ೯ ಚ್ಛಾತ್ರ (ಕ, ಮ). ಭ್ರಾತ (ಕಾ). ೧೦ ನು (ಕಾ). ೧೧ ನಾ (ಕಾ). ೧೨ ಸಕಳ (ಕಾ). ೧೩ ರ್ದ (ಕ, ಮ, ಪ).

ಮೊಲೆಯಂ[೧] ಮೊಗಮುಮಂ ತೊಡೆದು [೨]ನೀಮರ[೨]ಸಿಗಟ್ಟಿದ ಕತ್ತುರಿಯನಿ[೩]ವಳ್ತೋಳ್ತೊಡೆಯೊ[೪]ಳ್ತೊಡೆದಳೆಂದರಸರ್ಗೆ ಪೇೞ್ವೆನೆನೆ ಭಯಮುತ್ತು ತೊಟ್ತು ಮಲಹಾರಿಯಾದ ತೊೞ್ತಿನಂತೆ ನೀರಾಗಿ ಕಾಲ್ವಿಡಿದಾನೆಂದುದಂ ಪೇೞ್ವೆ [೫]ನೀ[೫] ಪೊೞಲ ಪೆಂಡಿರೆಲ್ಲರಂ [೬]ಮಱಿದು ಮಱು[೬]ಗಿಸಿ ಮರಳ್ಗೊಳಿಸಿ ನಿಚ್ಚ[೭]ಲ್ಮೆಚ್ಚು ಗೊಳಿಸಿದುದಂ ಕಂಡು[೮] ಪೊೞಲ[೯]ವರೆಲ್ಲ[೯]ಮೊಲ್ಲನುಲಿದು ಮೊಱೆಯಿಟ್ಟು ನಿನ್ನ ಮೊಱೆಗೆಟ್ಟ ನಡವಳಿಯ[೧೦] [ನಾಕ್ಷೇಪಿಸೆ][೧೦] ನಿಮ್ಮಣ್ಣಂ ಮುನಿದು ನಿನ್ನನೀ ನೆವದಿಂ ಸೆಱೆಯಿಕ್ಕಿದನೆಂದು ಮತ್ತಮಿಂತೆಂದಳ್

ನಿಸ್ತ್ರಿಂಶ ನಿನ್ನ [೧೧]ಕತದ[೧೧] ಸ
ಮಾಸ್ತ್ರಾ[೧೨]ಗ್ನಿಯೊಳಗ್ಗಿ[೧೨] ವಿರಹ ಪಾಂಡುರಿತ ಪ್ರೌ
ಢಸ್ತ್ರೀಯರಗ್ನಿ [೧೩]ಶೌಚ[೧೩]ದ
ವಸ್ತ್ರದ[೧೪]ವೋಲ್[೧೪] ಜಲಕನಾ[೧೫]ದರೇನಿದನಱಿಯಾ ೮

ವ॥ ಎಂಬುದುಮೆರ್ದೆ ಪವ್ವನೆ ಪಾಱೆ ಬೆಱಗಾಗಿ ನೋೞ್ಪೆನೆಂದರಮನೆಯಂ ಪೊಱಮಡಲಡಿಯಿಡುವುದುಂ [೧೬]ಮಿಡುಕಲೀಯೆವೆಂದು[೧೬] ಮೊಗ

ಮೆತ್ತಿ, "ನೀವು ಅರಸಿಗೆ ಕಳಿಸಿಕೊಟ್ಟ ಕಸ್ತೂರಿಯನ್ನು ಇವಳು ತನ್ನ ತೋಳಿಗೂ ತೊಡೆಗೂ ತೊಡೆದುಕೊಂಡಳು ಎಂದು ರಾಜನಿಗೆ ದೂರಿಬಿಡುವೆನು" ಎಂದು ವಸುದೇವನು ಗದರಿಸಿದೊಡನೆ ಆ ದಾಸಿ ಭಯಗೊಂಡು ಅವನ ಕಾಲಿಗೆ ಬಿದ್ದು ಹೀಗೆಂದಳು - "ನಾನು ಆಡಿದ ಮಾತನ್ನು ವಿವರಿಸುತ್ತೇನೆ. ನೀನು ಈ ಪಟ್ಟಣದ ಸ್ತ್ರೀಯರನ್ನೆಲ್ಲ ಮರುಗಿಸಿ, ಮರುಳುಗೊಳಿಸಿ, ನಿತ್ಯನಿತ್ಯ ಮೆಚ್ಚುಗೊಳಿಸಿದುದನ್ನು ಕಂಡು ಪುರಜನರೆಲ್ಲರೂ ಒಟ್ಟಾಗಿ ಬಂದು ರಾಜನಲ್ಲಿ ಮೊರೆಯಿಟ್ಟು ನಿನ್ನ ದಾರಿಗೆಟ್ಟ ನಡೆವಳಿಕೆಯನ್ನು ಆಕ್ಷೇಪಿಸಿದರು. ಅದರಿಂದ ನಿಮ್ಮ ಅಣ್ಣನು ಕೋಪಗೊಂಡು ನಿನ್ನನ್ನು ಈ ನೆವದಿಂದ ಸೆರೆಯಿಕ್ಕಿದನು.

೮. ಎಲೈ ನಿರ್ದಯನೆ, ನಿನ್ನಿಂದಾಗಿ ಪ್ರೌಢಸ್ತ್ರೀಯರು ಕಾಮಾಗ್ನಿಯಲ್ಲಿ ಬಿದ್ದು ವಿರಹದಿಂದ ನಿಸ್ತೇಜರಾದರು. ಕುದಿಸಿ ಒಗೆದ ಬಟ್ಟೆಗಳಂತೆ ಬೆಳ್ಳಗಾದರು. ಇದು ನಿನಗೆ ಗೊತ್ತೆ?"

ವ॥ ಈ ಮಾತಿಗೆ ಎದೆ ಹವ್ವನೆ ಹಾರಿ, ವಿಸ್ಮಯಗೊಂಡು, (ಪರೀಕ್ಷಿಸಿ) ನೋಡೋಣವೆಂದು ಅರಮನೆಯಿಂದ ಹೊರಬೀಳಲು ಹೆಜ್ಜೆಯಿಟ್ಟೊಡನೆ ದ್ವಾರಪಾಲಕರು ಕೈಕೋಲುಗಳನ್ನು ಅಡ್ಡವಾಗಿ ಹಿಡಿದು "ಹೊರಗೆ ಹೋಗಗೊಡೆವು" ಎಂದು ತಡೆದರು.

---

೧ ದುಂ ದಿವಸಕ್ಕಂ (ಕ), ದುಂ ಕೆಲವು ದಿವಸಕ್ಕಂ (ಮ). ೨ ಸಾದು (ಕ, ಮ, ಪ). ೩ ಮಾ (ಕ, ಮ, ಪ). ೪ ಯೊ (ಕ, ಪ). ೫ X (ಕಾ). ೬ + ನಿಂ (ಕ, ಮ), ನಿನ್ನೀ (ಪ). ೭ ಕೊಡಂಗ (ಕಾ). ೮ ದರಂತೆ (ಕಾ). ೯ ದ (ಮ). ೧೦ ವಿ (ಮ). ೧೧ ತೊಡು (ಕ), ತೋಡು (ಪ), ತೋಱು (ಮ). ೧೨ ಕಂ (ಕ). ೧೩ ಯುಂ (ಕ, ಮ). ೧೪ ನಿಮ್ಮ (ಕ, ಮ, ಪ). ೧೫ ವಳ ಮೊಲೆಗಂ ತೋಳ್ತೊಡೆಗಳೊ (ಮ). ೧೬ ೞ್ವೆಂ ಈ (ಕ, ಮ, ಪ). ೞ್ವೆನೀ (ಮ).

[೧]ಮುಮಂ[೧] ಕಟ್ಟಿಗೆಯುಮನಡ್ಡಲಿಟ್ಟು ದೌವಾರಿಕರ್ನಿವಾರಿಸೆ ಸಿಗ್ಗಾಗಿ ಸುಗ್ಗಿಯಂತೆ[೨] [೩]ಮಗು[೩]ಳ್ದು ಬನಕೆ ವಂದು ತನ್ನೊಳಿಂತೆಂದಂ

ಇರು ಮಟ್ಟಮೆಂದು ತಾಂ ಚ
ಪ್ಪರಿಸಿದೊಡಾನಿರೆನೆ ಮುಚ್ಚುಮಱೆಯೇಕೆಯೊ ಶ
ರ್ಕರೆ ನಾಲಗೆ ನೃಪರೆ[೪]ರ್ದೆ ಕ
ತ್ತ[೫]ರಿಯೆಂಬುದು ಜಳಕನಾದುದೆಮ್ಮಗ್ರಜನಿಂ[೬] ೯

ತಾಂ ಗಡಮಿಕ್ಕುವಂ ಸೆಱೆಯೊಳಾಂ ಗಡಮಿರ್ಪೆನಿದಕ್ಕು[೭]ಮಕ್ಕುಮೆ[೭]
ನ್ನಂ ಗಡ ಕಂಡ [೮]ನಾಂ ನೆ[೮]ಗಟ್ಟಿ ತಪ್ಪದನುಳ್ಳೊಡೆ ತಪ್ಪೆ ಕಲ್ಪಿಸ
ಲ್ತಾಂ ಗುರವ[೯]ಲ್ಲನೇ ಮುನಿದನೀ ಪುರುಳಿಲ್ಲದ ಪೌರರೂಳ್ದೊಡ
ಣ್ಣಂ ಗಡ ಮುಂತೆ ತಪ್ಪನಿತುಮೆಮ್ಮದು ಸೈರಣೆ ತಮ್ಮದಲ್ಲದೇ ೧೦

ಕೂರ್ಮೆಯನೊಕ್ಕು ನಿರ್ಮಳರೊ[೧೦]ಳಿಲ್ಲದ ದೋಷಮನಿಟ್ಟು ಕಟ್ಟ ಸೌ
ಧರ್ಮಿಕೆಗೆಟ್ಟು ದೂಱಿ [೧೧]ಪೆಱ[೧೧]ರೆಂ[೧೨]ದುದುಗೇಳ್ವದುಮಗ್ರಜಂಗಿದೇಂ
ಧರ್ಮಮೆ ಕೆ[೧೩]ಮ್ಮಗೆಂದನಿದನಾತ್ಮ ಮಹೋದಯದೊಳ್ಸಹೋದರಂ
ಘರ್ಮ ಮರೀಚಿಯುಂ[೧೪]ಬೆಳಗ[೧೪]ಲಿತ್ತನೆ ಬಾಲಸುಧಾಮರೀಚಿಯಂ ೧೧

ಅದರಿಂದ ಜುಗುಪ್ಸೆಗೊಂಡು ವಸಂತನಂತೆ ಮರಳಿ ಉದ್ಯಾನಕ್ಕೆ ಬಂದು ತನ್ನಲ್ಲಿಯೆ ಹೀಗೆಂದುಕೊಂಡನು -

೯. ನನಗೆ ತೆಪ್ಪಗೆ ಇರು ಎಂದು ತಾನು ಹೇಳಿದ್ದರೆ ನಾನು ಹಾಗೆ ಇರುತ್ತಿರಲಿಲ್ಲವೆ? ಇದಕ್ಕೆ ಮುಚ್ಚುಮರೆಯೇಕೆ? "ಅರಸರ ನಾಲಗೆ ಸಕ್ಕರೆ, ಎದೆ ಕತ್ತರಿ" ಎಂಬ ಮಾತನ್ನು (ತನ್ನ ವರ್ತನೆಯಿಂದ) ನಮ್ಮ ಅಣ್ಣನು ಸ್ಪಷ್ಟಪಡಿಸಿದನು.

೧೦. ಇವನು ಸೆರೆಯಲ್ಲಿ ಇಡುತ್ತಾನಂತೆ! ನಾನು ಇರಬೇಕಂತೆ! ನನ್ನನ್ನು ಕಂಡವನೆ ಇವನು? ಒಂದು ವೇಳೆ ನಾನು ತಪ್ಪು ಮಾಡಿದ್ದರೆ, ಬುದ್ಧಿಹೇಳುವ ಹಿರಿತನ ಅವನಿಗಿಲ್ಲವೆ? ಪುರಜನರು ಬಂದು ಬೊಗಳಿದ ಹುರುಳಿಲ್ಲದ ದೂರನ್ನು ಕೇಳಿ ಕೋಪಗೊಂಡನಂತೆ! ತಪ್ಪೆಲ್ಲವೂ ನಮ್ಮದಾದರೆ ಸಹನೆ (ಹಿರಿಯರಾದ) ತನಗಿರಬೇಡವೆ?

೧೧. ಪ್ರೀತಿಯನ್ನು ಬಿಟ್ಟು, ನಿಷ್ಕಳಂಕರ ಮೇಲೆ ದೋಷಾರೋಪಣೆ ಮಾಡಿ, ಹಿರಿತನದ ಧರ್ಮಕ್ಕೆ ವ್ಯತಿರಿಕ್ತನಾಗಿ ಹೆರವರ ಮಾತಿಗೆ ಕಿವಿಯೊಡ್ಡಿ ದೂರುವುದೆಂದರೆ

---

೧ ಮರೆವಳು (ಕ, ಪ). ಮಱುವಳು (ಮ). ೨ ಲಜ್ಜೆಗಂಗೊಂಡು (ಕ, ಮ, ಪ). ೩ ಚರರೆಲ್ಲರು (ಕ, ಮ, ಪ). ೪ ನಪೇಕ್ಷಿಸಿ (ಕ, ಮ, ಪ). ನಪಕ್ಷೇಸಿ (ಕಾ). ೫ ಕಂಡ (ಕಾ). ೬ ಜ್ಜೆಯೊಳವರ್ಗೆ (ಕ, ಮ, ಪ). ೭ ಶೋಭ (ಕ, ಮ). ೮ ವೋ (ಕಾ). ೯ ರಾ (ಕಾ, ಮ). ೧೦ ಮಿಡುಕಲಿಲ್ಲವೆಂದು (ಕ, ಪ), ನಿನ್ನಂ ಪೋಗಲೀಯೆಮೆಂದು (ಮ). ೧೧ ಮುಂ (ಕ, ಮ). ಮಂ (ಪ). ೧೨ ನುಗು (ಕ), ನುಸು (ಪ). ೧೩ ರ (ಕ, ಕಾ, ಪ). ೧೪ ತ್ತು (ಕಾ).

ತಮ್ಮರಸೆಂಬುದಂಬುಧಿಪರೀತಮೆ ಮಾಣೆ[೧] ಮತಮಿದೊಂದು ದೇ
ಶಮ್ಮಿಹಿಗುಳ್ಳನಾದುದೆ ವಿದೇಶವಿಹಾರಮನೆಯ್ದೆ ಮಾಡುವೆಂ
ಸಮ್ಮದದಿಂ ಸ್ವದೇಶ ಪರದೇಶವಿಶೇಷಣಮುಂಟೆ ಮನ್ಮಥಂ
ಗ[೨]ಮ್ಮಳಯಾನಿಳಂಗಮೆನಗಂ ಮಧುಗಂ ಧರಣೀತಳಾಗ್ರದೊಳ್ ೧೨

ದೂಸಕರ ದೂಱುಗೇಳ್ದುಂ[೩]
ಸಾಸಿಗನೆನ್ನಳವನಱಿದುಮಱಿ[೪]ಯದೆ ಪಿರಿದುಂ
ದೋಸಿಗನಾದೊಡೆ ಕೊ[೫]ಲ್ಗುಂ
ಪೇಸುವನಲ್ಲಂ ಸಮುದ್ರವಿಜಯ[೬]ಮಹೀಶಂ[೭] ೧೩

ವ॥ ಸಾವಂತಪ್ಪ ಕನ[೨]ಸಂ ಕಂ[೮]ಡೊಡೆಟ್ಟು[೮] ಕುಳ್ಳಿರ್ಪುದು[೯] ಕಂಪುಮನೆನ್ನುಮಂ ಸೆಱಿಗೆಯ್ವ[೧೦]ನಾವನೆಂದು ಬೇರ್ನೆಲಕ್ಕೆವೋಪುದನೆ ನಿಶ್ಚೈಸಿ ವಸುದೇವನಿರ್ದನನ್ನೆಗಂ

ಪೂಡುವ ಕುದುರೆ ಬೆಸಂ ಕೊಂ
ಡೋಡುವ ತೇರ್ಗೊಂದೆ ಗಾಲಿ ಪೊಡೆವಂ ಪೆಟವಂ
ಕೇಡಿಂಗಲಸಿ[೧೦]ದೊಡ[೧೧]ಕ್ಕುಮೆ
ನೋಡಿರೆ ರವಿ ಕೆಡೆದನಸ್ತಗಿರಿಮಸ್ತಕದೊಳ್ ೧೪

ಇದೇನು, ಅಣ್ಣನಾದವನಿಗೆ ಧರ್ಮವೆ? ತನ್ನ ದೊಡ್ಡಸ್ತಿಕೆಯ ಅಧಿಕಾರದಿಂದ ನನ್ನನ್ನು ಅಣ್ಣನು ಹತ್ತಿಕ್ಕಿ ಇಟ್ಟನು. ಸೂರ್ಯನೂ ಕೂಡ ಬಾಲಚಂದ್ರನನ್ನು ಬೆಳಗಗೊಟ್ಟನೆ?

೧೨. ಇವರ ರಾಜ್ಯವೇನು? ಸಮುದ್ರಪರ್ಯಂತವಷ್ಟೆ ಅಲ್ಲವೆ? ಹೋಗಲಿ ಭೂಮಿಯಲ್ಲಿರುವುದು ಇದೊಂದೇ ದೇಶವೆ? ಹೊರಗಿನ ದೇಶಗಳಲ್ಲಿ ಹೋಗಿ ಸಂತೋಷದಿಂದ ವಿಹರಿಸುವೆನು. ಮನ್ಮಥನಿಗೂ ಮಲಯ ಮಾರುತನಿಗೂ ನನಗೂ ವಸಂತನಿಗೂ ಸ್ವದೇಶ - ಪರದೇಶವೆಂಬ ಭೇದವುಂಟೆ?

೧೩. ದುಷ್ಟರ ದೂರುಗಳನ್ನು ಕೇಳಿ ಈ ಸಾಹಸಿಗನು, ನನ್ನನ್ನು ಅರಿತೂ ಅರಿಯದವನಂತೆ ದೋಷಾರೋಪ ಬಂದಾಗ ಕೊಂದೇ ಬಿಡುವನು. ಸಮುದ್ರವಿಜಯ ಮಹಾರಾಜನು ಹೇಸುವನಲ್ಲ.

ವ॥ ಸಾವಿನ ಕನಸ್ಸು ಕಂಡಾಗ ಎದ್ದು ಕುಳಿತುಕೊಳ್ಳಬೇಕು. ಸುಗಂಧವನ್ನು ನನ್ನನ್ನು ಸೆರೆಯಲ್ಲಿಡುವವನು ಯಾವನು? ಎಂದು ವಿದೇಶಕ್ಕೆ ಹೋಗುವುದನ್ನೆ ವಸುದೇವನು ನಿರ್ಧರಿಸಿದನು. ಅಷ್ಟರಲ್ಲಿ -

೧೪. ಹೂಡುವ ಕುದುರೆಯ ಬೆಸಸಂಖ್ಯೆಯವು (ಏಳು), ಏರುವ ರಥಕ್ಕೆ ಒಂದೇ ಗಾಲಿ, ಸಾರಥಿಯೊ ಹೆಳವ. ಹೀಗಿರುವಾಗ ಕೇಡಿಗೆ ಒಲ್ಲೆನೆಂದರೆ ಆದೀತೆ? ಅಕೋ ನೋಡಿ. ಸೂರ್ಯನು ಅಸ್ತಾಚಲದ ಶಿಖರದಲ್ಲಿ ಬಿದ್ದುಬಿಟ್ಟನು.

---

೧ ನಾ (ಮ). ನಂ (ಕ). ನೊಳ್ (ಪ) ೨ ಮೆನ್ನತ (ಕ, ಪ). ೩ ನಿಂ ನೆ (ಕ), ನೀನೆ (ಪ) ನಾನೆ (ಕಾ). ೯ ವಿ (ಕಾ). ೧೦ ದೊ (ಕ, ಪ). ೧೧ ಪರ (ಕ), ಪರಿ (ಪ).

ಪುಟ್ಟುವಿನಂ [೧]ದನಿ[೧] ಬಸದಿಯ
ಬೆಟ್ಟುಗಳೊಳ್ಮೊಱಗೆ ಸಂಜೆ ವೇಳೆಯ ಪಱಿಗಳ್
ತೊಟ್ಟನೆ ತೀವಿದ ಘಳಿಗೆಯ
ಬಟ್ಟಲವೋಲ್ದಿನಪನಟ್ಟಿ[೨]ನಪರಾಂಬುಧಿಯೊಳ್ ೧೫

ವ॥ ಮತ್ತಮಿನಿಸಱಿಂ

ಸಾವಿತ್ರದ್ಯುತಿ ದಾವ ಶಿ
ಖಾವಳಿ ಪರಿದಟ್ಟಿ ಪೆಱಗೆ ಕರಿಕೆರ್ದವೊಲೇಂ
ತೀವಿದುದೊ ಭುವನ ತಳಮಂ
ಗೋವಳಗತ್ತಲೆ ಸಮಸ್ತ [೩]ಭೂತಾ[೩]ತ್ಮಕಮಂ ೧೬

ಪಸರಿಸಿದುದು ಕತ್ತಲೆ ದೆಸೆ
ದೆಸೆಗಂ ವ್ಯೋ[೪]ಕಾರನಂತೆ ಕಾಲಂ ಕಡಲೊ
ಳ್ಬಿಸುಪಡರ್ದ ತಪನ ತಪ್ತಾ
ಯಸಪಿಂಡಮನರ್ದೆ[೫] ನೆಗೆದ ಪೊಗೆಯೆಂಬಿನೆಗಂ ೧೭

ಚಳಚಕ್ರಾಂಕ ಮರಾಳಮೇಘಪಟಳ ಶ್ರೀ[೬] ವೃದ್ಧವೇಶ್ಯಾಂಗನಾ
ಪಳಿತಕ್ಕಿಕ್ಕಿದ ಕರ್ಪುರ್ ಸಾರಸರಸೀನೀಳಾಬ್ಜ ದೃಗ್ಜಾಳ ಕ
ಜ್ಜಳ[೭]ಪಂಕಂ[೭] ಪಟುಭೃಂಗಯಾಚಕ ಚಮೂ ಮೂರ್ತಾಂಬುಜಾಮೋದದಾ
ನಳಯೋತ್ಪಾದಕರಪ್ರದೋಷದಯಸಂ[೮] ಪೆರ್ಚಿತ್ತು ಭೀಮಂ ತಮಂ ೧೮

೧೫. ಬಸದಿಯ ಶಿಖರಗಳಲ್ಲಿ ಸಂಧ್ಯಾಕಾಲದ ಹರೆಗಳು ಶಬ್ದ ಮಾಡುತ್ತಿರಲಾಗಿ ತುಂಬಿದ ಗಳಿಗೆಬಟ್ಟಲಂತೆ ಸೂರ್ಯನು ಪಶ್ಚಿಮ ಸಮುದ್ರದಲ್ಲಿ ಮುಳುಗಿಹೋದನು.

ವ॥ ಸ್ವಲ್ಪ ಸಮಯದಲ್ಲಿ -

೧೬. ಸೂರ್ಯಪ್ರಭೆಯೆಂಬ ಕಾಡುಗಿಚ್ಚು ಉರಿದುರಿದ ಕುಸಿಬೀಳಲಾಗಿ ಕರಿಕೆದ್ದ ಹೊಗೆ ತುಂಬಿದಂತೆ ಲೋಕವನ್ನೆಲ್ಲ ಸಂಜೆಗತ್ತಲೆ ಆವರಿಸಿತು.

೧೭. ಕಾಲನೆಂಬ ಕಮ್ಮಾರನು ಸೂರ್ಯಬಿಂಬವೆಂಬ ಕಾದ ಕಬ್ಬಿಣದ ಪಿಂಡವನ್ನು ಕಡಲಲ್ಲಿ ಅದ್ದಲಾಗಿ ಎದ್ದ ಹೊಗೆಯೊ ಏನೊ ಎಂಬಂತೆ ಕತ್ತಲೆ ದಿಕ್ಕು ದಿಕ್ಕಿಗೆ ಹರಡಿಕೊಂಡಿತು.

೧೮. ಚಕ್ರವಾಕ ಪಕ್ಷಿಗಳ ಕಣ್ಣಿಗೆ ಕತ್ತಲೆಯನ್ನು ಕವಿಸುವ ಕಪ್ಪು ಮೋಡಗಳ ಪಟಲವಾಗಿ, ವೃದ್ಧ ವೇಶ್ಯೆಯರ ನರೆಗೂದಲಿಗೆ ಇಟ್ಟ ಕಪ್ಪು ಕಲಪಿನ ಲೇಪವಾಗಿ, ಸರೋವರ ವಧುವಿನ ಕನ್ನೈದಿಲೆಗಳೆಂಬ ಕಣ್ಣಿಗೆ ಲೇಪಿಸಿದ ಕಾಡಗೆಯಾಗಿ, ತಾವರೆಗಳ ಸುಗಂಧ

---

೧ ವೆಂ (ಕಾ). ೨ ಗೆ (ಕ, ಮ, ಪ). ೩ ಬಳಗ (ಕ, ಮ), ಬಳಸ (ಪ). ೪ ಣಿ (ಕ, ಪ). ೫ ಗೇಂ (ಕ, ಪ). ೬ ಳ್ದರಿ (ಕಾ). ೭ ಜೆ (ಕ, ಮ, ಪ). ೮ ಕ (ಮ).

ವ|| ಅಂತು ಪುಡಿಗತ್ತುರಿಯೆಂದು ಪಿಡಿಕೆಯ್ಸಿ ಪೂಸಲುಂ ಪಾಸಿ ಮೊಟ್ಟೆ ಗಟ್ಟಲುಂ ವಿಹಿರಂಗವಿಂದುಗಂ ಗುದ್ದಲಿಗೊಂಡ[೧]ಗುಟ್ಟು[೧] ಪೊಱಗು[೨]ಗಲುವಪ್ಪ ಕಾಳದ ಕಟ್ಟಿಲೆಯೊಳ್ವಸುದೇವನರಮನೆಯ ಮದಿ[೩]ಲಂ ವಿದ್ಯಾ[೪]ಧರ[೪]ಕರಣದಿಂ ಪೊಸಂತಿಲಂ ದಾಂಟುವಂತೆ ದಾಂಟಿ ಪೊಟಲಂ ಪೊಱಮಟ್ಟು ಪೊಱವೊಟಲೊಳಗನೆ[೫] ಕಿಱಿದೆಡೆಯಂ ಪೋಗೆವೋಗೆ

ಶಿಖರಿಣಿ ವೃತ್ತ ||

ನಿಶಾಚಾರ್ಯಾಧಾನಂ [[೬]ಶಬ[೬]] ಶಿಬಿ[೭]ರಮಾಕ್ರೋಶಮುಖರಂ
ಕೃಶಾನೂರ್ವೀದಾಹಶ್ರಮ[೮]ಸಭಯ[ಮು][೮]ದ್ರೇಕ ಪಿಶುನಂ
ಪಿಶಾಚಪ್ರೌಢಸ್ತ್ರೀ ರಸವತಿ [೯]ಶುನೀಖಾದ್ಯ[೯] ಸದನಂ
ಸ್ಮಶಾನಂ ದೃಷ್ಟವ್ಯಂ ನೃಪಸುತನ ಕಣ್ಗಾದುದಿರೊಳ್ ೧೯

ವಿಚಳದ್ವೇತಾಳತಾಳಂ ಶಬರಭ[೧೦]ರವೃತಂ ಧೂಮವಲ್ಲೀ ವಿಕೀರ್ಣಂ
ಶುಚಿರಕ್ತಾಶೋಕರ[೧೧]ಕ್ತಂ[ಶ್ವ[೧೨]] ಗಣಮೃಗಮಯಂ ಮುಗ್ಧಪೈಶಾಚ ಕೇತ[೧೩]
ಪ್ರಚಯಂ [೧೪]ದೀಪಾಗ್ನಿ[೧೪] ಭಾಗೋ[೧೫]ನ್ಮುಖ[೧೫]ಮಣಿಫಣಿಭೂತೋಗ್ರಮಾತಂಗ ಮುತ್ತುಂ
ಗ ಚಿತೋದ್ಯತ್ಕಾಷ್ಠಮಾಯ್ತಾ ಪಿತೃವನವನಮಾಯ್ತೂ[೧೬]ಷ್ಮಮತ್ಯಂತ ಭೀಷ್ಮಂ ೨೦

ದಾಸೆಯಿಂದ ಬರುವ ದುಂಬಿಗಳೆಂಬ ಯಾಚಕ ಸಮೂಹಕ್ಕೆ ದಾನವಿಲ್ಲದಂತೆ (ಆ ಹೂಗಳನ್ನು ಮುಚ್ಚಿಬಿಡುವ) ಪ್ರದೋಷದ ನೆರಳಾಗಿ ಭೀಕರವಾದ ಕತ್ತಲೆ ದಟ್ಟವಾಗಿ ಹಬ್ಬಿತು.

ವ|| ಕಸ್ತೂರಿಯ ಪುಡಿಯೆಂದು ತೆಗೆದುಕೊಂಡು ಹೂಸಿಕೊಳ್ಳಲೂ, ಹಾಸಿ ಮೊಟ್ಟೆಕಟ್ಟಲೂ, ಚಂದ್ರಸೂರ್ಯರು ಗುದ್ದಲಿಯಿಂದ ಅಗೆದು ಹಾದಿಮಾಡಿಕೊಳ್ಳಲೂ ಯೋಚಿಸುವಂತೆ ದಟ್ಟಸಿಯಿಸಿದ ಕತ್ತಲೆಯಲ್ಲಿ ವಸುದೇವನು ಅರಮನೆಯ ಗೋಡೆಯನ್ನು ವಿದ್ಯಾಧರ ವಿದ್ಯೆಯಿಂದ ಹೊಸಲು ದಾಟುವಂತೆ ಹಗುರವಾಗಿ ದಾಟಿ, ಹೊರಬಿದ್ದು ಪಟ್ಟಣದ ಹೊರವಲಯದಲ್ಲಿ ಸ್ವಲ್ಪ ಅಂತರದವರೆಗೆ ಹೋಗಲಾಗಿ -

೧೯. ನಿಶಾಚರಿಯರ ಬೀಡೂ ಶವಗಳ ಶಿಬಿರವೂ ಚಿತಾಗ್ನಿಯ ಬೆಂಕಿಯಿಂದ ನೆಲ ಕಾಯಲಾಗಿ ಉದ್ರೇಕದಿಂದ ಆಕ್ರೋಶಮಾಡುತ್ತಿರುವ ಪಿಶಾಚ ಪ್ರೌಢಸ್ತ್ರೀಯರ ಅಡುಗೆ ಮನೆಯೂ ನಾಯಿಗಳ ಭೋಜನಶಾಲೆಯೂ ಆಗಿ ಸ್ಮಶಾನವು ರಾಜಕುಮಾರನ ಕಣ್ಣುಗಳಿಗೆ ಎದುರಾಯಿತು.

೨೦. ಬೇತಾಳವೆಂಬ ತಾಳ ವೃಕ್ಷಗಳಿಂದಲೂ ಹೆಣಗಳನ್ನು ಸುತ್ತುವರಿದ ಹೊಗೆಯೆಂಬ ಬಳ್ಳಿಯಿಂದಲೂ ರಕ್ತವೆಂಬ ಅಶೋಕಪಲ್ಲವದ ಕೆಂಪಿನಿಂದಲೂ

---

೧ ಸುಗಂ (ಕ, ಮ.ಪ.) ೨ ರ್ದು (ಕ, ಮ, ಪ). ೩ ದುಂ (ಕ, ಪ.) ೪ ಯ್ವೊ (ಕ, ಪ.). ಯ್ವನ (ಮ). ೫ ದುದ (ಕಾ). ೬ ದಗಿ (ಕ, ಪ). ೭ ರ್ದ (ಕ). ೮ ಭುವನಾ (ಕ, ಪ.). ೯ ವ್ಯೋಂ (ಕಾ). ೧೦ ರ್ದಿ (ಮ). * ೧೧ + ಮತ್ತಮಿನಿಸಜೆಂ (ಮ). ೧೨ ಸ್ತ್ರೀ (ಕಾ). ೧೩ ಪ್ರಗ್ಯಂ (ಕ). ೧೪ ಶಂ (ಕಾ, ಪ). ೧೫ ಳುರ್ದು (ಕ), ಳಟ್ಟು (ಪ). ೧೬ ಗಾ (ಕ, ಪ).

ತೆರೆತೆರೆಗೊಂಡು ಬಾ[1]ಗ್ಗಡರ್ವ ಕರ್ವೊಗೆ ಕರ್ಗಿದ ನೀರ[2] ಕೊರ್ವುವಂ[3]
ತಿರೆವಿಚಳಚ್ಚಿತಾನಳ ಶಿಖಾವಳಿ ವಿದ್ರುಮವಲ್ಲಿ ಪರ್ವುವಂ
ತಿರೆ ತಲೆಯೋಡಿನೊಳ್ತೊಳೆವ ಪಲ್ಗಳೆ ಸಿಪ್ಪಿನ ಮುತ್ತು ತೋಱುವಂ
ತಿರೆ ಪರೆದಾ ಪರೇತವನಮಂಬುಧಿಯಂತಿರೆ ಭೀಕರಂ ಕರಂ ೨೧

ಅಲರ್ವ[4]ರಲೊ[4]ಕ್ಕ ಪಲ್ಪರೆಯದಿರ್ದಳಿಯಿರ್ದಿಲ ರಾಶಿ ಮೂಗಗೋ
ಗಿಲೆ ಕರಿಕೊಳ್ಳಿ ಕೆಂದಳಿರೆ ಕೇಸುರಿ ಕಾಮಶರಾಗ್ನಿಯೊಳ್ತೊರ
ಳ್ವಲಸ ವಿಯೋಗಿಯುಂ ಪೊಡರ್ದು ಬೇವ ಶಬಾವಳಿಯಾದವಸ್ಥೆಯೊ
ಳ್ಕಲಸಿ ಸಿಡಿಲ್ದು ಬಲ್ಮಿಡಿಗಳಿರ್ದ ಪರೇತವನಾಂತರಾಳದೊಳ್ ೨೨

ಪೊಗೆವ ಚಿತಾಗ್ನಿ ಪೊತ್ತುವ ಚಿತಾಗ್ನಿ [6]ಪೊದಟ್ಟಿ[6] ಚಿತಾಗ್ನಿ ಬಾಂಬರಂ
ನೆಗೆವ ಚಿತಾಗ್ನಿ ನಂದುವ ಚಿತಾಗ್ನಿ ಕನಲ್ವ ಚಿತಾಗ್ನಿ ಗಾಳಿಯಿಂ
ಮಗುಟ್ಟಿ ಚಿತಾಗ್ನಿ ಮಗ್ಗುವ ಚಿತಾಗ್ನಿ ಕಟಿಲ್ವ ಚಿತಾಗ್ನಿಯಲ್ಲಿಗ
ಲ್ಲಿಗೆ ಪುದಿದಿರ್ದುವಾ ಮಸಣದೊಳ್ ವಿಳಯಾಗ್ನಿಯ ಬಿಟ್ಟ ಬೀಡುವೋಲ್ ೨೩

ನಾಯಿಗಳೆಂಬ ಮೃಗಗಳ ಸಮೂಹದಿಂದಲೂ ಮುಗ್ಧ ಪಿಶಾಚಿಗಳೆಂಬ 'ಕೇಶಿ' (ಸಿಂಹ?)ಗಳಿಂದಲೂ ಉಗ್ರವಾಗಿ ಮೇಲೇಳುತ್ತಿರುವ ಬೆಂಕಿಗಳೆಂಬ (ಸರ್ಪಗಳ) ಹೆಡೆ ಮಣಿಗಳಿಂದಲೂ, ಉಗ್ರವಾದ ಭೂತಗಳೆಂಬ ಆನೆಗಳಿಂದಲೂ ಎತ್ತರವಾಗಿ ಪೇರಿಸಿದ ಕಾಷ್ಠಗಳಿಂದಲೂ ಆ ಸ್ಮಶಾನವು ಬೀಕರವಾದ ವನದಂತೆ ಇತ್ತು.

೨೧. ತೆರೆತೆರೆಯಾಗಿ ಆಕಾಶಕ್ಕೇರುವ ಕಪ್ಪು ಹೊಗೆ ಕಪ್ಪು ನೀರು ಉಕ್ಕುವಂತಿರಲಾಗಿ, ನೆಗೆಯುತ್ತಿರುವ ಚಿತೆಯ ಬೆಂಕಿ ಹವಳದ ಬಳ್ಳಿ ಹಬ್ಬುವಂತಿರಲಾಗಿ, ತಲೆ ಬುರುಡೆಯಲ್ಲಿ ಹೊಳೆಯುವ ಹಲ್ಲುಗಳು ಚಿಪ್ಪಿನ ಮುತ್ತುಗಳು ತೋರುವಂತಿರಲಾಗಿ, ವಿಸ್ತಾರವಾದ ಆ ಸ್ಮಶಾನ ಭೂಮಿಯು ಸಮುದ್ರದಂತೆ ಭಯಾನಕವಾಗಿತ್ತು.

೨೨. ಬಿದ್ದ ಹಲ್ಲುಗಳೇ ಅರಳು ಹೂಗಳು, ಇದ್ದಿಲ ರಾಶಿಗಳೆ ನಿಶಃಬ್ದ ಕೋಗಿಲೆಗಳೆ ಹಾರಿಹೋಗದೆ ಮುಸುರಿಕೊಂಡಿರುವ ಉರಿನಾಲಗೆಗಳ ಕೆಂಪಾದ ಚಿಗುರುಗಳು ಆಗಲಾಗಿ ಕಾಮನ ಬಾಣಾಗ್ನಿಯಲ್ಲಿ ಬಿದ್ದುಹೊರಳಾಡುವ ವಿರಹಿಗಳಂತೆ ಬೇಯುತ್ತಿರುವ ಶವಗಳು ಸ್ಮಶಾನದಲ್ಲಿ (ಸುಟ್ಟು) ಸಿಡಿಯುತ್ತಿದ್ದುವು (ಪದ್ಯದಲ್ಲಿ ಕ್ಲೇಶವಿದೆ)

೨೩. ಹೊಗೆಯುಗುಳುವ ಚಿತಾಗ್ನಿ, ಹೊತ್ತುವ ಚಿತಾಗ್ನಿ, ಹೊರಹೊಮ್ಮುವ ಚಿತಾಗ್ನಿ, ಆಕಾಶದವರೆಗೆ ನೆಗೆಯುವ ಚಿತಾಗ್ನಿ, ಆರುತ್ತಿರುವ ಚಿತಾಗ್ನಿ, ಕಿಡಿ ಮಸಗುವ ಚಿತಾಗ್ನಿ, ಗಾಳಿಯಿಂದ ಮರಳಿ ಉರಿಯೇಳುವ ಚಿತಾಗ್ನಿ, ಕುಗ್ಗುವ ಚಿತಾಗ್ನಿ, ಕುಸಿಬೀಳುವ ಚಿತಾಗ್ನಿ - ಹೀಗೆ ಆ ಸ್ಮಶಾನದಲ್ಲಿ ಪ್ರಳಯಾಗ್ನಿಯೆ ಬೀಡು ಬಿಟ್ಟಂತೆ ಚಿತಾಗ್ನಿಗಳು ತುಂಬಿಕೊಂಡಿದ್ದುವು.

---

೧ ಜಾ (ಕಾ). ೨ ರೆ (ಪ). ೩ ವಂ (ಕಾ, ಕ, ಪ). ೪ ಲರೊ (ಕ). ೫ ಯಳುರ್ವ (ಕಾ). ೬ ಯ (ಕ, ಮ, ಪ).

ತಾಪಸಭದ್ರವಾಂಬುಧಿಯನುಣ್ಬುರಿಬಾ [[1]ಡವ[1]] ವಹ್ನಿ ಬೇಗ ಪು[2]
ಲ್ಲಾಪೆಯ ಬೇಗೆ ಪತ್ತಿ ನೆಲನಂ ಸುಡುವಗ್ನಿ ದವಾಗ್ನಿ ಕೊಳ್ಳಿಗ
ಳ್ಳೋಪ ಮರುಳ್ಗಳಂ ಪಿಡಿದು ಪಾಯ್ವ[3] ಸಿಡಿಲ್ಪಲವಾಗೆ ವಹ್ನಿ ಮೇ
ಳಾಪಕವಾದವೋಲ್ ಪ್ರತಿಭಯಂ ಪ್ರತಿವಾಸರಮಾ ಶಬಾಲಯಂ ೨೪

ಉರಿದುದು ಚಿತಾಗ್ನಿ ನೆಲದಡಿ
ವರೆಗಂ ಬಾಂಬರೆಗಮವರ ಪೆಣನೆ[4]ಯ್ದುವ[4]ವೋಲ್
ನರಕಂಬೊಕ್ಕರುಮಂ ಸುರ
ಶರಣಂಬೊಕ್ಕರುಮನಳುರಲವ್ವಳಿಸುವವೋಲ್ ೨೫

ನೆಗೆದುರಿ [5]ಸೆದ[5]ಗೆಯ ತಲೆಯಂ
ಮೊಗ[6]ವಿಡೆ[6] ಮರುಳಲ್ಲಿ ಮೊಬಿಗೆ ಪೆಣವಜೆ[3] ಬೇತಾ
ಳಗಣಮುಗಿದೋಡೆ ರಕ್ಕಸ
ವಗರಣವಾಡಿದುದು ನೋಡೆ ಸೂಲದ ಪೆಣಗಳ್ ೨೬

ನಾಲಗೆ[7]ಯಾಡಿಸುತುಂ ಕೀ[8]
ಲಾಲಮನುಗುಬುತ್ತೆ ಶುಷ್ಕತನು ಬೇತಾಳಂ
ಸ್ಥೂಲಶಿರನಾರ್ದು ಕುಣಿದಂ
ಶೂಲದ ತಲೆ ಕುಣಿವ ತೆಱದೆ ಕುಣಪಾಲಯದೊಳ್ ೨೭

೨೪. ಕಡಲನ್ನು ನುಂಗುವ ವಡವಾಗ್ನಿ, ಹುಲ್ಲಿಗೆ ಹತ್ತಿಕೊಂಡು ಹಬ್ಬುತ್ತ ನೆಲವನ್ನು ಸುಡುವ ದವಾಗ್ನಿ, ಕೊಳ್ಳಿ ಹಿಡಿವ ಕ್ಷುದ್ರ ಪಿಶಾಚಗಳನ್ನು ಹಿಡಿದು ಮೇಲ್ಬರಿಯುವ ಸಿಡಿಲು - ಇವೆಲ್ಲ ಮೇಳವಾಗಿ ಕೂಡಿದಂತೆ ಆ ಮಸಣಗಾಡು ಪ್ರತಿನಿತ್ಯವೂ ಅತ್ಯಂತ ಭೀಕರವಾಗಿದ್ದಿತು ("ತಾಪನ ಭದ್ರವಾಂಬುಧಿ" ಎಂಬುದೇನೊ ತಿಳಿಯದು.)

೨೫. ನರಕಕ್ಕೆ ಇಳಿಯುವವರನ್ನೂ ಸ್ವರ್ಗಕ್ಕೆ ಸೇರುವವರನ್ನೂ ಅವರವರ ಹೆಣಗಳು ಹಿಂಬಾಲಿಸುತ್ತಿವೆಯೆಂದು ಅವುಗಳನ್ನು ಸುಡುವುದಕ್ಕೆ ಹಾತೊರೆಯುವುದೋ ಏನೊ ಎಂಬಂತೆ ಚಿತಾಗ್ನಿ ನೆಲದ ತಳದವರೆಗೂ ಹೊಕ್ಕು ಉರಿಯಿತು, ಆಕಾಶದವರೆಗೆ ಹಬ್ಬಿ ಉರಿಯಿತು.

೨೬. ನೆಗೆದ ಉರಿ ಸಿದಿಗೆಯ ತಲೆಯಲ್ಲಿ ಮರುಳುಗಳು ಮೊಗವಿಡಲಾಗಿ ಹೆಣದ ಹರೆ ನುಡಿಸುತ್ತಿರಲಾಗಿ, ಬೇತಾಳಗಳು ಹೆದರಿಕೊಂಡು ಹಿಂಡುಹಿಂಡಾಗಿ ಓಡಲಾಗಿ, ಸೂಲದ ಹೆಣಗಳೆ ಪ್ರೇಕ್ಷಕರಾಗಿರಲಾಗಿ ರಕ್ಕಸರು ಪಗರಣವನ್ನು ಕುಣಿದರು.

೨೭. ಒಣಗಿ ತೆಳುವಾದ ಮೈ ಹಾಗೂ ದಪ್ಪನಾದ ತಲೆಯುಳ್ಳ ಬೇತಾಳವೊಂದು ನಾಲಗೆಯಾಡಿಸುತ್ತ, ನೆತ್ತರು ಉಗುಳುತ್ತ ಶೂಲದ ತಲೆಯೆ ಕುಣಿಯುವರಂತೆ ಮಸಣದಲ್ಲಿ ಕುಣಿದಾಡಿತು.

---

೧ ಡವೆ (ಕ, ಪ), ಡುವ (ಕಾ, ಮ). ೨ ಮಿ (ಕ, ಮ, ಪ). ೩ ಯ್ದು (ಕಾ). ೪ ಯ್ದಿದ (ಕಾ). ೫ ಪೆದ (ಮ), ಪೆದೆ (ಕ), ಪಿದೆ (ಪ). ೬ ಮಿರೆ (ಕಾ). ೭ ದೋ (ಮ) ೮ + ಬಾ (ಕ, ಪ).

ಪಿಡಿದಡಸಿ ನುಂಗಿ ಪಸಿದಡ
ಪ[1]ಡಿಸುವ ಬೇತಾಳನುರಿವ ಪೆರ್ವೆಣನಂ ತ
ನ್ನೊಡಲಸ್ಥಿ ಕಾಷ್ಠದಿಂ ಪೆಣ
ದೊ[2]ಡವೆಂದುದು ಬಸಿಱನೊರಸಿ ಹಾಹಾಯೆನುತುಂ ೨೮

[3]ಇಡಿದು[3] ಕೊರಲ್ವರೆಗಂ[4] ಪೂ
ಣ್ದೊಡಮಸುವಂ ಕಳೆಯದಿರ್ಪ ಕಡುಗಳ್ಳರನೇಂ
ಪಿಡಿದುರ್ಚಿಕೊಂಡರೋ ಕೂ
ಗಿಡಿಯಿಡೆ ನರಕಕ್ಕೆ ನಾರಕರ್ ಪಿತೃವನದೊಳ್ ೨೯

ಅಸುವಿರ್ದಂತಿರೆ ಸೂಲಂ
ಬಸಿ[5]ದನುಮಂ[5] ಪಿಡಿದು ತೆಗೆದ[6] ಕಲಿಗಳುಮಂ ಪ
ಲ್ಮಸೆದು ತಿನಲ್ಮಸಗುವ ರ
ಕ್ಕಸರುಮನುಗ್ಗಡಿಸಿ ತಸ್ಕರರ್ ಪಿಡಿದು[7]ಯ್ವರ್ ೩೦

ಅರೆ ಮುಗಿದಿರ್ದ ಕಣ್ಮುರಿದ ಮೀಸೆ ತುಱುಂಬಿದ ಜಾದಿ[8] ಪತ್ತೆ ಕ
ತ್ತರಿಸಿದ ಗಡ್ಡವಿಟ್ಟ ತಿಲಕಂ ಬಳಪಂದೊಡೆದೋಲೆ ದೇಸೆ[9]ಯಂ
ತಿರೆ ಸುಲಿಪಲ್ತಳತ್ತಳಿಸಿ[10] ತಂಬುಲಮಂ ಪೊಳಕುತ್ತೆ ರಾಗ[11]ದಿಂ
ಪ[11]ರಕೆಗೆ ಕೊಟ್ಟ ಪಂದಲೆಯ[12]ಗುಂದಲೆಯಾದುದು ಬೀರನಣ್ಮಿನಾ ೩೧

೨೮. ಹಸಿವೆಯಿಂದ ಕಂಗಾಲಾದ ಬೇತಾಳವೊಂದು ಆತುರದಿಂದ ಉರಿಯುತ್ತಿರುವ ದೊಡ್ಡ ಹೆಣವನ್ನು ಹಿಡಿದುಕೊಂಡು ಗಬಕ್ಕನೆ ನುಂಗಲಾಗಿ, ಹೆಣದೊಡನೆ ಸೌದೆಯಂತೆ ತನ್ನ ಒಡಲ ಮೂಳೆಗಳೂ ಬೇಯಲಾಗಿ ಹಾಹಾ ಎಂದುಹೊಟ್ಟೆಯನ್ನು ಉಜ್ಜಿಕೊಳ್ಳುತ್ತಿತ್ತು.

೨೯. ಮಸಣದಲ್ಲಿ ಕೊರಳವರೆಗೆ ತುರುಕಿ ಹೂಳಿದ್ದರೂ ಸಾಯದುಳಿದ ಮಹಾಕಳ್ಳರನ್ನೂ ಅವರು (ಸಂಕಟದಿಂದ) ಕೂಗಿಕೊಳ್ಳುತ್ತಿರುವಂತೆಯೆ ನಾರಕರು ಹಿಡಿದೆಳೆದು ನರಕಕ್ಕೆ ಕೊಂಡೊಯ್ದರು.

೩೦. ಶೂಲಕ್ಕೇರಿದ್ದರೂ ಜೀವ ಹಿಡಿದಿರುವವರನ್ನೂ ಅವರನ್ನು ಹಿಡಿದು ತೆಗೆದ ಶೂರನನ್ನೂ ಹಲ್ಲು ಮಸೆದು ನುಂಗಲು ಹಾತೊರೆವ ರಕ್ಕಸರು ಬರಲಾಗಿ, ಅವರನ್ನು ಗದರಿಸಿ ಅಟ್ಟಿ, ಕಳ್ಳರು (ತಮ್ಮವರನ್ನು) ಹಿಡಿದುಕೊಂಡು ಹೋದರು.

೩೧. ಅರ್ಧಮುಚ್ಚಿದ ಕಣ್ಣು, ತಿರುವಿದ ಮೀಸೆ, ಮುಡಿದುಕೊಂಡ ಜಾಜಿ, ಹತ್ತೆಯಾಗಿ ಕತ್ತರಿಸಿದ ಗಡ್ಡ, ಇಟ್ಟುಕೊಂಡ ತಿಲಕ, ಬಳಪದ ಲೇಪವಿಕ್ಕಿದ ಓಲೆಯಂತೆ ಶೋಭಿಸುವ ಹಸನಾದ ಹಲ್ಲು, ತಳತಳಿಸಿ ತಂಬುಲವನ್ನು ಉಗುಳುತ್ತಿರುವ ಬಾಯಿ

೧ ಹ (ಕಾ, ಮ), ವ (ಪ). ೨ ತೊ (ಕ, ಮ, ಪ). ೩. ಇಡಿಗಿಡಿದು (ಕ) ಅಡಗಿಡಿದು (ಪ). ೪ ಗ (ಕ, ಮ, ಪ). ೫ ರ್ದಸುವಂ (ಕ, ಪ). ೬ ದು (ಕಾ). ೭ ದೊ (ಕ, ಮ). ೮ ದಿ (ಕಾ). ೯ ಸಿ (ಕಾ). ೧೦ ಸಿ (ಕ, ಮ, ಪ). ೧೧ ವಿಲ್ಪ (ಕ, ಮ, ಪ). ೧೨ ಯೆ (ಕಾ), ಯು (ಮ).

ತೊಡೆದು[1] ಸುಗಂಧಮಂ ನನೆಯ ಜಾದಿಯನೆತ್ತಿ ತುಱುಂಬಿ ಪಾಲ್ಗಳಂ
ಕುಡಿಯಿಸಿ ಕೂಡೆ ಕಾಸಿ ಬಿಸುಸುಯ್ಯೊಳೆ ತನ್ನನೆ ನೋಡಿ ಜೀವಮಂ
ಪಿಡಿದಿನಿಸಿರ್ಪ ಶೂಲದವನಂ ನಡೆನೋಡಿಯೆ ಮೀಸೆದಿರ್ದುತುಂ
ಮಡಿದೆಲೆಯಂ ನಖಾಗ್ರದೊಳೆ ಕಣ್ಬನಿಯಂ ಸಿಡಿಯುತ್ತೆ ನೀಡಿದಳ್ ೩೨

ಕಿವಿಗಿನಿದಾಗೆ ತಮ್ಮ ಕಳವಂ ಕತೆ[2] ಮಾಡಿ ಮರುಳ್ಗೆ ಪೇೞ್ವು ಪೊಂ
ಗುವ ರಸಮಗ್ಗಳಂ ಬಸಿಯೆ ತಂಬುಲಮಂ ಪಿಡಿದಿಕ್ಕಿ ಪಿಂಡಿ ತೋ
ಱುವ ತಿನಲೆಂದು ಸಾರ್ದ[3]ಸುರನಾಲಿಸೆ ಸೋಲ್ವಿನವಿಂಪು ಸೂಸೆ ಪಾ
ಡುವ ಪಿಶಿತಾಶರಂ ಪಿಡಿದು ಕಾಡುವ ಸೂಲದ ಬೀರರೊಪ್ಪಿದರ್ ೩೩

ಅಂ[4]ಗಡಿ[4]ಯಾನೆಯೆ ಬೀದಿಯ
[5]ಸಿಂಗಮೆ[5] ಲಲನೆಯರ ಕಣ್ಣ ಪುಣ್ಯಮೆ [6]ನಿನ್ನಂ[6]
ಜಂಗಮವಿಷಮಂ ಪಿಡಿದಾ
ವಂ ಗಡ ಪಿತೃವನಕೆ ತಂದು ತುಡಿಸಿದ ಬಂಟಂ ೩೪

ಊಡಿದೆನೋದಲಿಟ್ಟೆನುಡಕಲ್ವುದುಮಣ್ಣನ ಕೂಸುದಂದೆ ನಾಂ
ಬೇಡೆನೆ ಮೀಱೆ ಕಳ್ಳರೊಡನಾಡಿಯೆ ಪೆತ್ತ ಬಸಿರ್ಗೆ ಸಂತಸಂ
ಮಾಡಿದೆಯಿಂದಿದೇಂ ಮಗನೆ ಸು[7]ಣ್ಣನೆ ಸುಣ್ಣೊಗದಲ್ಲಿ ಮೀಸೆಗ
ಳ್ಮೂಡದ ಮುನ್ನ ನಿನ್ನ ಪೆಗಲೊಳ್ ಪೊಸ ಸೂಲಮಿದೆಂತು ಮೂಡಿತೋ ೩೫

ಇವುಗಳಿಂದ ಶೋಭಿಸುತ್ತ ವೀರನು ಸಂತೋಷದಿಂದ ಹರಕೆಯಾಗಿ ಒಪ್ಪಿಸಿದ ಹಸಿತಲೆ ಅತಿಶಯವಾಗಿ ಒಪ್ಪಿತು.

೩೨. ಸುಗಂಧವನ್ನು ಲೇಪಿಸಿ, ಜಾಜಿ ಹೂಗಳನ್ನು ಮುಡಿಸಿ, ಹಾಲು ಕುಡಿಸಿ, ತನ್ನ ಬಿಸಿಯುಸಿರಿನಿಂದಲೇ ಕಾಸಿ, ತನ್ನನ್ನೇ ನೋಡಿ ಇನ್ನೂ ಜೀವ ಹಿಡಿದಿರುವ ಶೂಲದವನನ್ನು ಕಣ್ಣೆಟ್ಟು ನೋಡಿ ನೋಡಿ, ಅವನ ಮೀಸೆಗಳನ್ನು ತಿದ್ದುತ್ತ, ಎಲೆ ಮಡಿಚಿ, ಕಣ್ಣೀರು ಒರಸಿಕೊಳ್ಳುತ್ತ, ಅವನಿಗೆ ಅದನ್ನು (ಪ್ರಿಯತಮೆ) ನೀಡಿದಳು.

೩೩. ಕಿವಿಗೆ ಸವಿಯಾಗುವಂತೆ ತಮ್ಮ ಕಳವುಗಳನ್ನು ಕತೆ ಮಾಡಿ ಪಿಶಾಚಿಗೆ ಹೇಳುವ, ತಾಂಬೂಲವನ್ನು ಅಗಿದು, ರಸವನ್ನು ಹಿಡಿದುಕೊಂಡು ಚರಟವನ್ನು ಮಾತ್ರ ತೋರುವ, ನುಂಗಲೆಂದು ಬಂದ ರಕ್ಕಸರನು ಮರುಳಾಗಿ ಕೇಳುವಂತೆ ಇಂಪಾಗಿ ಹಾಡುವ ಹಾಗೂ ಪಿಶಾಚಗಳನ್ನು ಹಿಡಿದು ಕಾಡುವ ಶೂಲದ ವೀರರು ಶೋಭಿಸಿದರು.

೩೪. "ಅಂಗಡಿಯ ಆನೆಯೆ, ಬೀದಿಯ ಸಿಂಹವೇ, ಚೆಲುವೆಯರ ಕಣ್ಣ ಪುಣ್ಯವೇ, ನಡೆದಾಡುವ ವಿಷದಂತಿರುವ ನಿನ್ನನ್ನು ಹಿಡಿದು ಮಸಣಕ್ಕೆ ತೊಡಿಸಿದ ಬಂಟನು ಯಾವನು?

೩೫. ನಿನಗೆ ಉಣಿಸಿದೆ, ಓದಲು ಕಳಿಸಿದೆ, ಉಡುವುದಕ್ಕೆ ಕಲಿತೊಡನೆ ಅಣ್ಣನ ಮಗಳನ್ನು ತಂದು ನಿನಗೆ ಮದುವೆ ಮಾಡಿದೆ. ಬೇಡವೆಂದು ನಾನು ಹೇಳಿದರೂ ಕೇಳದೆ

---

೧ ದ (ಕ). ೨ ಡೆ (ಕ, ಮ). ೩ ರ್ದು (ಕ, ಮ, ಪ). ೪ ತರಿ (ಮ). ೫ ಜಂಗಮ (ಕ, ಮ, ಪ). ೬ ನಿಲನಂ (ಕ, ಮ, ಪ). ೭ ಪ (ಪ).

ವ|| ಎಂದು ಬಾಯಂ ಬಡಿದು ಬಸಿಱಂ ಬಡಿದುಕೊಳ್ವ ತಾಯ್ಗೆ ತರಳನಿಂತೆಂದಂ

ಪಣವುಂಡೆಂ ಬಂದಿಯೊಳ್ಬಾಲಕನೆ [೧]ಪಲಗೆ[೧] ಜೂಜಾಡಿದೆಂ ಸೂಳೆಗೆಯ್ದೆಂ
ಪಣೆದಂಬೊಯ್ದೆಂ ತೊಟಲ್ದೆಂ ಪಿರಿಯ [೨]ಕಳವುಮಂ[೨] ಕಳ್ದ[೩]ನಿಂದಣ್ಮಿ ಸಾಯ
ಲ್ಕಣೆದೆಂ ಪೊತ್ತತ್ತು ಸೂಲಂ ಬಲದ ಪೆಗಲೊಳಾಂ ಬೀರನಾದೆಂ ಮರುಳ್ನಾಯ್
ಗುಣಿಸಾಗೆಂ[೪] ಮೆಚ್ಚಿದಂತುಳ್ಳವರನೆ ಪಿಡಿದುಂಡಪ್ಪೆನೆಂದುರ್ವುತಿರ್ದಂ[೫] ೩೬

ವ|| [೬]ಅಂತಿರ್ಪ[೬] ಮಗನ ನೆತ್ತರ್ಗೆ ಸಾರ್ವ ನಾಯಂ ನರಿಯುಮಂ ಸೋವುತುಂ ರಕ್ಕಸರ್ಗೆ ಕೆಯ್ಮುಗಿಯುತ್ತುಂ ರಕ್ಕಸಿ ತಾ[೭]ಯಿ ಕಾದುಕೊಂಡಿರ್ಪುದಂ[೮] ನೋಡುತ್ತುಂ ಪೋಗೆವೋಗೆ

ತಲೆ ಕೆಳಗಾಗಿ ನೇ[೯]ಲ್ವ[೯] ಶಬಾವಳಿ [೧೦]ಬಾವಲ[೧೦]ಪಿಂಡು ಬಲ್ಗರುಳ್
ನುಲಿಗಳೆಟಲ್ಕೆ ಬೀೞಲ ಬೞಲ್ಕೆ ಕರಂ ತು[೧೧]ಜಿತೊರ್ಕು[೧೧]ತಿರ್ಪ ಪಂ
ದಲೆಗಳೆ ಜೇನ ಪುಟ್ಟಿಯೆನೆ ಕೊರ್ವಿದ ಕೊಂಬುಗಳಲ್ಲಿ ಪಕ್ಕಿವೊ
ಲ್ಚಿಲಿಮಿಲಿಯೆಂದುವೆರ್ದ ಕೊಲೆಗಳ್ಕುಣಪಾಲಯದಾಲದೋಳಿಯೊಳ್ ೩೭

ಕಳ್ಳರ ಸಹವಾಸ ಮಾಡಿ ಹೆತ್ತ ಒಡಲಿಗೆ ಇಂದು ಈ ಸಂತೋಷವನ್ನು ತಂದೆಯಲ್ಲವೆ? ಮಗನೇ, ನಿನ್ನ ನುಣುಪಾದ ಮುಖದಲ್ಲಿ ತುಪ್ಪುಳುಮೀಸೆ ಮೂಡುವುದಕ್ಕೆ ಮುಂಚೆಯೆ ನಿನ್ನ ಹೆಗಲಲ್ಲಿ ಹೊಸ ಶೂಲ. ಅದು ಹೇಗೆ ಮೂಡಿತೋ!"

ವ|| ಎಂದು ಬಾಯನ್ನು ಬಸಿರನ್ನೂ ಬಡಿದುಕೊಳ್ಳುವ ತಾಯಿಗೆ ತರುಣನು ಹೀಗೆಂದನು -

೩೬. "ಹಣವನ್ನು ಉಂಡೆನು; ಹಲಗೆ (ಲೆತ್ತ) ಜೂಜಾಡಿದೆನು; ಸೂಳೆಯರ ಸಹವಾಸ ಮಾಡಿದೆನು; ಹಣೆದವಾಡಿದೆನೂ; ಅಲೆದಾಡಿದೆನು; ಹಿರಿಯ ಕಳವು ಮಾಡಿದೆನು; ಇಂದು ಕಲಿತನದಿಂದ ಸಾಯಲೂ ಬಂದೆನು; ಬಲದ ಹೆಗಲ ಶೂಲವು ನನ್ನನ್ನು ಹೊತ್ತು ನಿಂತಿದೆ; ನಾನು ವೀರನಾದೆನು; ಪಿಶಾಚಿನಾಯಿಗಳಿಗೆ ಆಹಾರವಾಗೆನು; ಮೆಚ್ಚಿದಂತೆ ಇರುವವರೆನ್ನ ಹಿಡಿದು ಉಣ್ಣುವೆನು"- ಹೀಗೆಂದು ಅವನು ಉತ್ಸಾಹಪಡುತ್ತಿದ್ದನು.

ವ|| ಹೀಗಿರುವ ಮಗನ ನೆತ್ತರಿಗೆ ಹರಿದು ಬರುವ ನಾಯಿ ನರಿಗಳನ್ನು ಹೊಡೆದಟ್ಟುತ್ತ ರಕ್ಕಸರಿಗೆ ಕೈಮುಗಿಯುತ್ತ ರಕ್ಕಸಿತಾಯಿ ಕಾದುಕೊಂಡಿರುವುದನ್ನ ನೋಡುತ್ತ ಮುಂದೆ ಮುಂದೆ ಹೋಗಲಾಗಿ, -

೩೭. ತಲೆ ಕೆಳಗಾಗಿ ನೇತಾಡುವ ಹೆಣಗಳೆ ಬಾವಲಿಗಳ ಹಿಂಡು, ಬಲವಾದ ಕರುಳಿನ ನುಲಿಗಳೆ ಬೀಳಲುಗಳು, ನೆತ್ತರು ತುಳುಕುತ್ತಿರುವ ಹಸಿತಲೆಗಳೆ ಜೇನ ಹುಟ್ಟುಗಳು

---

೧ ನಲನಿ (ಕ), ನಲಗಿ (ಮ). ೨ ವುಳವಂ (ಕ, ಮ). ೩ ಳ್ದ (ಕ). ೪ ದೆಂ (ಕ, ಪ). ೫ ದೆಂ (ಪ). ೬ ಇಂತಿರ್ಪಿ (ಪ), ಇರ್ಪ (ಕ, ಕಾ) ೭ ದಾ (ಕಾ). ೮ ದುಂ (ಕ). ೯ ಲ್ವುರು (ಕ), ಲ್ವುದು (ಪ). ೧೦ ಬಲ್ವಲ (ಕ, ಪ), ಬಲ್ದಲ (ಮ).

ಸೂಲಮನೆತ್ತಿ ಹೂಂಕರಿಪ ಭೈರವಿ ಕತ್ತಿಗೆಗೊಂಡು ಬರ್ಪ ಮಾ
ಕಾಲಿ ಕುಕಿಲ್ವ ಶಾಕಿನಿ ಶಬಾಳಿಗೆ ನಾಲಗೆಗಿಱ್ಕುಕೊಳ್ವ[೯] ಬೇ
ತಾಲರಟಿಲ್ದು ಪೆರ್ಮೊರೆವ ಪೂತಿನಿ ಫೂತ್ಕರಿಸುತ್ತೆ ಪೊತ್ತು ಕಂ
ಕಾಲಮನತ್ತಮಿತ್ತ ಪರಿದಾಡುವ ಕಂಡ ಕಪಾಳಿ ಕಾಡಿನೊಳ್ ೩೮

ಬಾಯ್ದೆಱೆಯುತ್ತೆ ತೂಂಕಡಿಪ ಕಿಂಕಿಣಿ ಬೇವ ಕರಂಕಜಾಳಮಂ
* ಪೊಯ್ದು ತಳಂಗಳಿಂ ಪೊಸೆದು ಮುಕ್ಕುವ ರಕ್ಕಸರೆರ್ದ ಕೌಱೆನ
ತ್ತೆಯ್ದುವ ಕಾಳ ರಕ್ಕಸಿ ಶುಭಂಕರಿ ಕತ್ತಿಗೆಯಿಂ ಗಂಟಲಂ
ಕೊಯ್ದು ಕಪಾಳದಿಂ ರುಧಿರಮಂ ಪಿಡಿದೀಂಟುವ ಭೂತಮದ್ಭುತಂ ೩೯

ಮರುಳೆತ್ತಿತ್ತೊಂದು ಬಿಕ್ಕಂ ಮುಱಿದು ಮರುಳ ಮುಂಗೆಯ್ಯುಮಂ ಬಿಕ್ಕುಮಂ ನಿ
ಬ್ಬರಿ ಬಾಯೊಳ್ಪೊಕ್ಕಡಂ ಕಂಡಿಸುವ ಸಿಡಿದ[೧೦] ಬೇತಾಳನಂ[೧೧] ಮಚ್ಚದಿಂ ಚಿ[೧೨]
ಚ್ಚರದಿಂದಂ ಕಿಱ್ತು ಬೇತಾಳನ ತಲೆಯನೆ ನಕ್ತಂಚರಂ ತಿಂದ ನಕ್ತಂ
ಚರನಂ ನುಂಗಿತ್ತು ಭೂತಂ ಬಹು ವಿಶಸನಮೇಕಾರ್ಥ[೧೩] ಲೋ[೧೪]ಲಾತಿರೇಕಂ ೪೦

ಎಂಬಂತೆ ಆಗಲಾಗಿ, ಕೊಬ್ಬಿದ ಮರಗೊಂಬೆಗಳಲ್ಲಿ ಚಿಲಿಮಿಲಿಯೆಂದು ಕೂಗುವ ಹಕ್ಕಿಗಳಂತೆ ಆ ಮಸಣದ ಆಲದ ಮರಗಳಲ್ಲಿ ಕೊಲೆಗೀಡಾದ ಜೀವಗಳಿದ್ದುವು.

೩೮. ಶೂಲವನ್ನೆತ್ತಿ ಹೂಂಕರಿಸುವ ಭೈರವಿ, ಕತ್ತಿ ಹಿಡಿದುಕೊಂಡು ಬರುವ ಮಹಾಕಾಳಿ, ಕೂಗುವ ಶಾಕಿನಿ, ಶವಗಳಿಗಾಗಿ ನಾಲಗೆ ಕಿತ್ತುಕೊಳ್ಳುವ ಬೇತಾಳರು, ನೊಂದು ಹಲ್ಲು ಕಡಿಯುತ್ತಿರುವ ಪೂತನಿ, ಅಸ್ಥಿಪಂಜರವನ್ನು ಹೊತ್ತು ಬುಸುಗುಟ್ಟುತ್ತ ಅತ್ತಿತ್ತ ಹರಿದಾಡುವ ಕಪಾಳಿಗಳು ಆ ಮಸಣಗಾಡಿನಲ್ಲಿ (ತುಂಬಿದ್ದರು).

೩೯. ಬಾಯಿ ತೆರೆದು ತೂಕಡಿಸುವ "ಕಿಂಕಿಣಿ", ಬೇತಾಳಗಳು ಬೇಯುತ್ತಿರುವ ಅಸ್ಥಿಪಂಜರವನ್ನು ಕೈಯಿಂದ ಬಡಿದು (ಉರಿ ಆರಿಸಿ) ಹೊಸೆದು ಮುಕ್ಕುವ ರಕ್ಕಸರು, ಎದ್ದ ಕೌರುನಾತವಿದ್ದೆಡೆಗೆ ಸಾಗುವ ಕಾಳ ರಕ್ಕಸಿ, ಕತ್ತಿಯಿಂದ ಗಂಟಲನ್ನು ಕೊಯ್ದು ತಲೆ ಬುರುಡೆಯಲ್ಲಿ ರಕ್ತವನ್ನು ಹಿಡಿದು ಕುಡಿಯುವ ಭೂತಗಳು ಅದ್ಭುತವಾಗಿದ್ದುವು.

೪೦. ಕ್ಷುದ್ರ ಪಿಶಾಚವೊಂದು ಮಾಂಸದ ತುಂಡನ್ನು ಎತ್ತಿಕೊಂಡಿತು; ಅದರ ಮುಂಗೈಯನ್ನು ಆ ಮಾಂಸದೊಡನೆ ಒಂದು ಬೇತಾಳವು ಬಾಯಲ್ಲಿಟ್ಟು ಕಡಿಯ ತೊಡಗಿತು; ಅದನ್ನು ಕಂಡು ನಿಶಾಚರವೊಂದು ಹೊಟ್ಟೆ ಉರಿದು ಆ ಬೇತಾಳನ ತಲೆಯನ್ನೆ ನುಂಗಿತು; ಭೂತವೊಂದು ಬಂದು ಆ ನಿಶಾಚರನನ್ನೆ ನುಂಗಿತು. ಒಂದಕ್ಕೋ ಹಲವರು ಹಾತೊರೆದರೆ ಆಗುವ ಕೋಲಾಹಲವೆ ಹೀಗೆ.

---

೧೨ ಕು (ಪ). ೧೩ ಱ್ಕು (ಕಾ). ೧೪ ಲ್ವ (ಮ).

ಕಬಳಿತ ವಲ್ಲೊ[೧]ರಂ ಗಿಳಿ
ತ ಬುಕ್ಕಮಾ *ಪೀತರಕ್ತಮೇಂ ತಿಂದುದೊ ಹ
ಸ್ತಬ್ಬೃಹನ್ಸ್ತ್ರಿಷ್ಕಂ ತಾ
ಯ ಬಾಯ ಮಾಂಸಮನೆ ತೋಡಿ ರಾಕ್ಷಸಲೋ[೨]ಕಂ ೪೧

ವII ಅಲ್ಲಿ[೩] ನೀರ್ಗು[೪]ಕುಮ[೫]ದ ಕೊಂಡ[೬]ದಂತಿ[೬]ರ್ಪ ನೆತ್ತರ ಕೊಳಂಗಳೊಳ್ ಜಲಕ್ರೀಡೆಯಾಡುವ ಶಾಕಿನಿಯರುಮಂ ಪ್ರಸ್ತಾವಕ್ಕೊಂದು ಪೆಣಂ ಪಕ್ಕೆಗೆರಡು ಪೆಣನೆಂದು ರಕ್ಕಸರ ಬೊಜಂ[೭]ಗರ ಶುಭಂಕರಿ[೮]ಗತ್ತಿ[೮]ಯನೊತ್ತೆಯಂ ಕೊಳ್ವ ರಕ್ಕಸಿಸೂಳೆಯರುಮಂ ಬೇವ ಪೆಣದ ಬಿಸಿಯಡಗಂ ತುತ್ತಿ ಬಾಯಿ ಬೇಯೆಯುಮುಗುಬಿದೆ ಮೀನಂತೆ ಮಿಡುಕೆ ಬೆರಲಂ ಮಿಡಿದು ಬಿರ್ದಟ್ಟಿ ತಮ್ಮ ಕೂಸುಗಳ ಬಾಯ ಬಿಸಿಯಡಗುಂ ತೋಡಿ ಕಳೆದು ತಮ್ಮ ತಿಂಬಡಗುಂ ಬಾಯ್ವಾಯೊಳಿಕ್ಕೆ ನಂಬಿಸುವ ನಿಶಾಚರಿಯರುಮಂ ಎನಿತಡಗನೂಡೆಯುಂ ಬಾಯಾಡಿ ನಲಿಯದೆ ತಿಂಬಡಗಂ ತೋಡಿಕೊಂಡು ಕಾಡುವ ಕೂಸಂ ದಸಿಯೊಳಸೆಯಿಱಿದು ಬಿಸಿಯಡಗುಂ ಬಾಯೊಳ್ಗಿ[೯]ಡಿದು ತಿನ್ ತಿನೆಂದವ್ರುಡಂ ತಿಂಬ ತಾಯಿ ರಕ್ಕಸಿಯರುಮಂ ಸ[೧೦]ಜಿಸ[೧೦]ಯ್ಯನೆ [೧೧]ಗಿಡದ[೧೧] [೧೨]ನಿಡು[೧೨]ಗಾಲ ಮೇಲೆ ಪಟ್ಟಿರಿಸಿ ಪೊಸ[೧೩] ಮಿದುಳಂ ಬೆಣ್ಣೆಯಿಕ್ಕಿ ತಲೆಯ ಸಿರ್ಪಿನಿಂ ನೆತ್ತರನೆಱೆ[೧೪]ದು ಬಾಯಂ ತೊಡೆದು ಕೆಯ್ಯಂ ನೀಡಿ[೧೪] ತೂಪಿಱಿದೆತ್ತಿ ಕೊಳ್ವ

೪೧. ಒಣಗಿದ ಮಾಂಸವನ್ನು ತಿಂದು, ಹೃದಯವನ್ನು ನುಂಗಿ, ನೆತ್ತರನ್ನು ಕುಡಿದ ದೊಡ್ಡ ತಲೆಯ ರಾಕ್ಷಸಶಿಶು ತಾಯಿಯ ಬಾಯಲ್ಲಿದ್ದ ಮಾಂಸವನ್ನು ಹೇಗೆ ತೋಡಿ ತೋಡಿ ತಿನ್ನುತ್ತಿತ್ತು!

ವII ಅಲ್ಲಿ ಕುಂಕುಮದ ನೀರಿನ ಕೊಳದಂತಿದ್ದ ನೆತ್ತರಿನ ಕೊಳಗಳಲ್ಲಿ ನೀರಾಟವಾಡುವ ಶಾಕಿನಿಯರನ್ನೂ ಪ್ರಸ್ತಾವಕ್ಕೆ ಒಂದು ಹೆಣ ಹಾಗೂ ಶಯನಕ್ಕೆ ಎರಡು ಹೆಣ ಎಂದು ರಾಕ್ಷಸ ವಿಟರ ಶುಭಂ ಕರಗತ್ತಿಯನ್ನು ಒತ್ತೆಯಾಗಿ ಹಿಡಿಯುವ ರಾಕ್ಷಸ ಸೂಳೆಯರನ್ನೂ ಬೇಯುವಹೆಣದ ಮಾಂಸವನ್ನು ಬಾಯಿಗಿಟ್ಟಿಕೊಂಡು ಬಾಯಿ ಸುಡುತ್ತಿರಲಾಗಿ ಅದನ್ನು ಉಗುಳಲೊಲ್ಲದೆ ಮೀನಿನಂತೆ ಒದ್ದಾಡುತ್ತ ಬಿದ್ದು ಅಳುವ ತಮ್ಮ ಕೂಸುಗಳ ಬಾಯಲ್ಲಿದ್ದ ಬಿಸಿ ಮಾಂಸವನ್ನು ಹೆಕ್ಕಿ ತೆಗೆದು, ತಾವು ತಿನ್ನುವ ಮಾಂಸವನ್ನು ಅವುಗಳ ಬಾಯಲ್ಲಿಟ್ಟು ಸಮಾಧಾನಪಡಿಸುವ ನಿಶಾಚರಿಯರನ್ನೂ ಎಷ್ಟು ಮಾಂಸವನ್ನು ತಿನಿಸಿದರೂ ತಿಂದು ತೃಪ್ತಿಹೊಂದದೆ ತಾಯಂದಿರ ಬಾಯಲ್ಲಿಯ ಮಾಂಸವನ್ನು ಎಳೆದು ಕೊಂಡು ಕಾಡುವ ಕೂಸುಗಳನ್ನು ದಸಿಯಿಂದ ಚುಚ್ಚಿ, ಸುಡುವ ಮಾಂಸರನ್ನು ಅವುಗಳ ಬಾಯಿಗೆ ತುರುಕಿ ತಿನ್ನು ತಿನ್ನೆಂದು ಅವುಡುಗಚ್ಚುತ್ತಿರುವ ತಾಯಿ ರಕ್ಕಸಿಯರನ್ನೂ ಚೆನ್ನಾಗಿ ಹಿಡಿದುತಮ್ಮ ಚಾಚಿದ ಕಾಲಮೇಲೆ ಮಲಗಿಸಿಕೊಂಡು ಹೊಸ ಮಿದುಳಿನ ಬೆಣ್ಣೆಯನ್ನು ಹೂಸಿ, ತಲೆಬುರುಡೆಯ ಚಿಪ್ಪಿನಿಂದ ನೆತ್ತರು ಎರೆದು, ಬಾಯಿ ಒರೆಸಿ, ಕೈಚಾಚಿ ತೂಪಿರಿದು

---

೧ ಲ್ಲೂ (ಮ). * ಪಿತ್ತ (ಮ). ೨ ತೋ (ಪ). ೩ ಲ್ಲಿಂ (ಕ, ಪ). ೪ ಗುರ್ಡಿ (ಕ), ಗೂರ್ಡಿ (ಮ), ಗುರ್ಂದಿ (ಪ). ೫ ಮು (ಕ, ಮ, ಪ). ೬ ತಿ (ಕ), ದಂತೆಸೆದಿ (ಪ). ೭ ಜ (ಕಾ, ಕ, ಪ). ೮ ಕತ್ತಿ (ಕ, ಪ), ಕತ್ತಲೆ (ಮ). ೯ ಳಿ (ಮ). ೧೦ ರಸ (ಕ), ರಸು (ಪ). ೧೧ ಪಿಡಿದು (ಪ), ಗಿಡಿದು (ಕ), ನಿಡಿದ (ಮ). ೧೨ ಸಿಡಿ (ಪ). ೧೩ ದ (ಕಾ). ೧೪ ವಿ (ಕ, ಮ, ಪ).

ಮರುಳ್ಬಾಣತಿಯರುಮಂ ಬೇವ ಪೆಣದುರಿವ ಬಾಯ್ಗೊಂಡದೊಳ್ತನ್ನ[೧] ತನುವಂ ಪಿಡಿಕಂ[೨]ಡಂಗೊಯ್ದು ಬೇ[೩]ಳ್ವ ಸಾಧಕರುಮಂ ಬಲದ ಕೆಯ್ಯ ಬಾಳ್ವಾಗಮುಮೆಡದ ಕೆಯ್ಯಡಗುಂಬೆರಸು ಮಹಾಮಾಂಸಮುಮಂ ಭೂತಬಲಿಗೊಡಲೆಂದು ತೊಟಲ್ವ ಧೀರ ಸಾಧಕರುಮಂ ತಿನಲಾಸೆಗೆಯ್ದು ತಮ್ಮ ಸೂಲದತ್ತಿ ಸಾರಲಣ್ಮದೆ ಸುತ್ತಿ ಸುೞಿವ ಭೂತಕ್ಕಂ ಪ್ರೇತಕ್ಕಂ ಮೆಯ್ಯ ಮಾಂಸಮಂ ಕೊಯ್ದೀಡಾಡುವ ಕಡುಗಲಿಗಳುಮಂ ಘಟೋ[೪]ತ್ಕಚ[೪]ನ ತಲೆಯಂತೆ ಮರುಳ[೫] ಕಾಳೆಗಕ್ಕಾರ್ವ ಸೂಲದ ತಲೆಗಳುಮಂ ತಮ್ಮಟ್ಟೆಯಾಟಕ್ಕೆ ಬಾಯ್ವ[೬]ಱಿಗುಟ್ಟುವ ಸಿಡಿದಲೆಗಳುಮಂ ಪೊರೆ[೭]ವಯ್ಕೆ[೭]ಳ್ವೆವ ಪೆಣದ ಪೊಗೆ ಕಣ್ಣೊಳ್ ಪುಗೆ ಸಮವಾಯಂ ಕಣ್ಬನಿಗ[೮]ಳ್ ಪಾಯ್ದೊಡೆ[೮] ಪಿಡಿಯೆಂಗು [೯]ಮೆಂದು[೯] ಕಾಲಡಗಂ [೧೦]ಕೆಯ್ಕಾಲಿ[೧೦]ಗೊಟ್ಟು ರಕ್ಕಸರಂ ಕರೆದು ತಮ್ಮ ನೆತ್ತರಿಂ ನಂದೆವೊಯ್ವುವತಿ ಪ್ರತ್ಯಗ್ರ ವಿಶಾಲ ಶೂಲಭಿನ್ನರಪ್ಪ ಸುಭಟರುಮಂ[೧೧] ನಿಂದು ನೋಡುತ್ತುಂ ಬಂದು ಮುಂದೊಂದೆಡೆಯೊಳ್ ಸೂಲದ ಪೆಣದ ಸೆಱಗಂ ಸೀ[೧೨]ಱಿಕೊಂಡದಱಬಾಯಿಂ ಬಸಿವ ನೆತ್ತರೊಳ್ಮರುಳ[೧೩]ಕರುಳಂ[೧೩]ಕಿಱುತ್ತುಪೊಸೆದು ತೂಕಳಿಯೊಳಟ್ಟೆ [೧೪]ಕೊಂಡು ಮರುಳ ಕೆಯ್ಯ ಕೊಳ್ಳಿಯ ಬೆಳಗಿನೊಳೆ ಬರೆದ ಬಿಳಿಯ ಪಟಮಂ ಪೊರೆಯ ಮರದ ಕೊಂಬಿನೊಳ್ಕಟ್ಟಿಯುರಿವ [೧೫]ಸೆದಗೆ[೧೫]ಯ ಕೆಲದೊಳ್ತನ್ನ ತೊಟ್ಟ ತೊಡವಂ ಕಳೆದಿಕ್ಕಿ [೧೬]ತಕ್ಕಂ[೧೬] ಮೆಟ್ಟಿ ಕಿರ್ಚಿನೊಳೆ ಪಾಯ್ದು[೧೭] ಪಜ್ಜೆಯಂ ಮಾಡಿ ಕಿಂಕಿಣಿಯ[೧೮] ಬೇತಾಳನನಿತ್ತ ಬಾಯೆಂದು ಕೆಲಕ್ಕೆ [೧೯]ಕರೆದು[೧೯]

(ಹಸು ಗೂಸನ್ನು) ಎತ್ತಿಕೊಳ್ಳುವ ಪಿಶಾಚಿ ಬಾಣಂತಿಯರನ್ನೂ ಬೇಯುತ್ತಿರುವ ಹೆಣದ ಉರಿವ ಬಾಯನ್ನು ಹೋಮಕುಂಡವೆಂದು ಅದರಲ್ಲಿ ತನ್ನ ಮೈಯ ಖಂಡವನ್ನು ಕತ್ತರಿಸಿ ಆಹುತಿಯಾಗಿ ಕೊಡುತ್ತಿರುವ ಸಾಧಕರನ್ನೂ ಬಲದ ಕೈಯ ಖಡ್ಗದಭಾಗವನ್ನು ಎಡಗೈಯ ಮಾಂಸದೊಡನೆ ಭೂತಬಲಿಗಾಗಿ ನರಮಾಂಸವನ್ನು ಕೊಡಬೇಕೆಂದು ಅಲೇದಾಡುವ ಧೀರ ಸಾಧಕರನ್ನೂ ತಿನ್ನುವ ಆಸೆಯಿದ್ದರೂ ಶೂಲದ ಬಳಿಗೆ ಬರಲಾರದೆ ಸುತ್ತಲೂ ಸುಳಿದಾಡುವ ಭೂತಪ್ರೇತಗಳಿಗೆ ತಮ್ಮ ಮೈಯ ಮಾಂಸವನ್ನು ಕೊಯ್ದೊಯ್ದು ಬೀಸಾಡುವ ಕೆಚ್ಚಿನ ಕಲಿಗಳನ್ನೂ ಘಟೋತ್ಕಚನ ತಲೆಯಂತೆ ಪಿಶಾಚಿಗಳ ಕಾಳಗಕ್ಕೆ ಹಾತೊರೆದು ಗರ್ಜಿಸುವ ಶಾಲದ ತಲೆಗಳನ್ನೂ ತಮ್ಮ ಅಟ್ಟೆಗಳ ಕುಣಿತಕ್ಕೆ ಬಾಯಲ್ಲಿಯೆ ತಾಳಹಿಡಿದು ಹರೆಕುಟ್ಟುವ ಸಿಡಿದಲೆಗಳನ್ನೂ ಹತ್ತಿರದಲ್ಲಿ ಸುಡುವ ಹೆಣದ ಹೊಗೆ ಕಣ್ಣಲ್ಲಿ ಹೊಕ್ಕು ಕಂಬನಿ ಸುರಿಯಲಾಗಿ ತಡೆಯಲಾರದೆ ರಾಕ್ಷಸರನ್ನು ಕರೆದು ತಮ್ಮ ಕಾಲಿನ ಮಾಂಸವನ್ನು ಕೈಕೂಲಿಯಾಗಿ ಕೊಟ್ಟು, ತಮ್ಮ ನೆತ್ತರಿಂದ ಆ ಹೆಣಮರಿಯನ್ನು ಆರಿಸುವ, ಎತ್ತರವಾದ ಶೂಲದಲ್ಲಿ ಸಿಕ್ಕಿಕೊಂಡ ವೀರರನ್ನೂ ನಿಂತು ನೋಡುತ್ತಾ ವಸುದೇವನು ನಡೆದನು. ಮುಂದೆ ಒಂದು ಸ್ಥಳದಲ್ಲಿ ಶೂಲದ ಮೇಲೆದ್ದ ಹೆಣದ ಸೆರಗನ್ನು ಹರಿದುಕೊಂಡು ಅದರ ಬಾಯಿಂದ ಬಿಸಿಲಿನ

೧ ದ್ಗಜ (ಕಾ, ಮ). ೨ ಳಂ (ಕ, ಪ). ೩ ಯ್ದಿ (ಕ, ಮ, ಪ). ೪ ಯೊ (ಕ, ಮ, ಪ). ೫ ಳೊಳ್ ಪೋದೊಡೆ (ಕ, ಮ,ಪ). ೬ ವೆಂಗು (ಕ, ಮ, ಪ). ೭ ಕಯ್ಗಾಲಿ (ಮ). ಕಾಯ್ಗಾಲಿ (ಕ, ಪ). ೮ ಮನಡಿಗಡಿಗೆ (ಕ, ಮ, ಪ). ೯ ಸೆ (ಕಾ). ೧೦ ಕೆಯ್ಯ (ಕಾ). ೧೧ ರ್ದಿ (ಕ, ಮ, ಪ). ೧೨ ಸಿದಿಗೆ (ಮ), ಸಿದ್ದಗೆ (ಕ), ಸಿದ್ದಿಗೆ (ಪ). ೧೩ ಪಾಯ್ದು ಪೋದದಕ್ಕಂ (ಕ, ಮ, ಪ). ೧೪ ಯ್ದು (ಕಾ). ೧೫ ಯೆ (ಕ, ಮ, ಪ). ೧೬ X (ಕ, ಮ, ಪ). ೧೭ ಪ್ರಭೆ (ಕ) ೧೮ + ನೊಡ (ಕ, ಮ, ಪ). ೧೯ ಳಂ (ಕಾ), ಳುಮಂ (ಕ, ಮ, ಪ).

ಕೆಯ್ಯಂ ನೀಡೆಂದು ನೀಡಿದ ಕೆಯ್ಯ ನಡುವಂ ಪಿಡಿದಡರ್ದು ಪೆಗಲನೇಱಿ ಪರೇತವನದಿಂ ಪೊಱಮಟ್ಟು ತನ್ನ [೧]ಪಜ್ಜೆ[೧]ಯಂ ಪಜ್ಜೆಕಾಱರಱಿಯದಂತು ವಸುದೇವಕುಮಾರಂ ಪಾಯ್ದು ಪೋದನಿತ್ತಲ್ ಸೂರ್ಯೋದಯಮಾಗಲೊಡ[೨] ನಾಡಿಗಳುಂ ಕಾಪಿನವರುಂ ಕಾಪಿನೋವರಿಯೊಳ್ವಸುದೇವನಂ ಕಾಣದೆಲ್ಲೆಡೆಯೊಳಮಱಸಿ ಸಮುದ್ರವಿಜಯಂಗೆ ಬಿನ್ನವಿಸುವ ಸಮಯದೊಳ್ ಬಂದು ಪಡಿಯಱಂ ಪೊಡೆವಟ್ಟು ಪರೇತವನದೊಳಗೆ ಪೊಸದೂವೆಯ ಕೆಲದೊಳ್ ಕಳೆದೊಟ್ಟಿದ ತೊಡವುಗ [ಳುಂ[೨]] ಮರದ ಕೊಂಬಿನೊಳ್ಬರೆದು ಕಟ್ಟಿದ ಕಪ್ಪಡಮುಮಿರ್ದಪ್ಪುವೆಂದು ಪಿತೃವನಪಾಳಕಂ ಕಪಾಳಕುಂಡಳಂ ದಾರವಟ್ಟಕ್ಕೆ ಬಂದು ಭಿನ್ನವಿಸಿಯು[೩]ಟ್ಟಿದನೆಂಬುದುಮರಸನಿಱಿದಂತಿರಗಿದು ಪಾಱಿ ಪೋಗಿಮೆಂದು ಕಿಂಕರರಂ ಕಳಿಪುವುದುಮವರ್ಪರಿತಂದವಮ್ಮುಂದಿಡಲೊಡನೆ[೩] ತಮ್ಮನ ಮಣಿಮಂಡನಮೆಂದಱಿದು ಮಂದರಾಗನಾಗಿಯುಂ ಧೃತಿಯಿಂ ಮಂದರಾಗನಾಗಿ ಪಟದ ಬರೆಪಮಂ ಬಾಚಿ[೪]ಸೆಂದು ಸಂಧಿವಿಗ್ರಹಿಂಗೆ ಬೆಸಸಲೊ[೪]ಡನೆ[೪]

ರಕ್ತದಲ್ಲಿ ಪಿಶಾಚಿಯ ಕರುಳನ್ನು ಕಿತ್ತು ಹೊಸೆದು ಕುಂಚವಾಗಿ ಮಾಡಿ ಅದ್ದಿಕೊಂಡು ಪಿಶಾಚಿಯ ಕೈಯ ಕೊಳ್ಳಿಯ ಬೆಳಕಿನಲ್ಲಿ ಬರೆದು ಆ ಬಿಳಿಯ ವಸ್ತ್ರವನ್ನು ಪಕ್ಕದ ಮರದ ಕೊಂಬೆಯಲ್ಲಿ ಕಟ್ಟಿ ಉರಿಯುವ ಬೆಲೆಯ ಮಗ್ಗುಲಲ್ಲಿ ತಾನು ಧರಿಸಿದದ ಆಭರಣಗಳನ್ನು ಕಳಚಿ ಇಟ್ಟು, ನೆಲವನ್ನು ಮುಟ್ಟಿ ಕಿಚ್ಚಿನಲ್ಲಿ ಹೋಗಿ ಬಿದ್ದಂತೆ ಹೆಜ್ಜೆ ಗುರುತು ಮೂಡಿಸಿ ಕಿಂಕಿಣಿ ಬೇತಾಳನನ್ನು ಪಕ್ಕಕ್ಕೆ ಕರೆದು ಕೈನೀಡೆಂದು ಹೇಳಿ ಅದರ ನೀಡಿದ ಕೈಯ ನಡುವನ್ನು ಹಿಡಿದು ಹೆಗಲಿಗೆ ಏರಿ ಪ್ರೇತವನದಿಂದ ಆಚೆಗೆ ಹೊರಬಿದ್ದು, ತನ್ನ ಹೆಜ್ಜೆ ಗುರುತು ಯಾರಿಗೂ ಗೋಚರಿಸದಂತೆ ವಸುದೇವ ಕುಮಾರನು ಹೊರಟು ಹೋದನು. ಇತ್ತ ಸೂರ್ಯೋದಯವಾದೊಡನೆ ಅರಮನೆಯಲ್ಲಿ ವಸುದೇವನ ಒಡನಾಡಿಗಳೂ ಕಾವಲುಗಾರರೂ ಕಾವಲಿಟ್ಟು ಮನೆಯಲ್ಲಿ ಆತನನ್ನು ಕಾಣದೆ ಎಲ್ಲಾ ಕಡೆಗೆ ಹುಡುಕಾಡಿ ಸಮುದ್ರ ವಿಜಯನಿಗೆ ಬಿನ್ನವಿಸುತ್ತಿದ್ದರು. ಅದೇ ಸಮಯಕ್ಕೆ ಒಬ್ಬ ಪ್ರತೀಹಾರಿಯು ಬಂದು, ನಮಸ್ಕರಿಸಿ "ಮಸಣ ಗಾಡಿನಲ್ಲಿ ಒಂದು ಹೊಸ ಚಿತೆಯ ಪಕ್ಕದಲ್ಲಿ ಕಳಚಿ ಇಟ್ಟ ಆಭರಣಗಳೂ ಮರದ ಕೊಂಬೆಗೆ ಬರೆದು ಕಟ್ಟಿದ ಬಟ್ಟೆಯೂ ಉಂಟೆಂದು ಸ್ಮಶಾನ ಪಾಲಕನಾದ ಕಪಾಲಕುಂಡಲನು ಬಾಗಿಲಿಗೆ ಬಂದು ಬಿನ್ನವಿಸಿ ನನ್ನನ್ನೂ ಕಳಿಸಿರುವನು" ಎಂದು ತಿಳಿಸಿದನು. ಅರಸನು ಇರಿತವಾದಂತೆ ನೊಂದುಕೊಂಡು ಕೂಡಲೆ ವೇಗವಾಗಿ ಹೋಗಿ ಎಂದು ಆಜ್ಞಾಪಿಸಿದೊಡನೆ ಸೇವಕರು ಹೋಗಿ ಮಸಣದ ಆ ವಸ್ತುಗಳನ್ನು ತಂದು ಅವನ ಮುಂದೆ ಇರಿಸಿದರು. ಅವು ತನ್ನ ತಮ್ಮನವೇ ಆದ ರತ್ನಾಭರಣಗಳೆಂದು ಮನವರಿಕೆಯಾಗಿ, ದುಃಖಿತನಾದರೂ ಮಂದರಗಿರಿಯಂತೆ ಧೈರ್ಯದಿಂದ ಸ್ಥಿರಚಿತ್ತನಾಗಿ "ಪಟದ ಮೇಲೆ ಬರೆದುದೇನು? ಓದಿಹೇಳು" ಎಂದು ಸಂಧಿವಿಗ್ರಹಿಗೆ ಹೇಳಲಾಗಿ (ಆತನು ಅದನ್ನು ಹೀಗೆಂದು ಓದಿದನು)-

---

೧ ನೆಮನ (ಮ), ಮು (ಕ, ಪ). ೨ + ತನ್ನ (ಕ, ಮ, ಪ). ೩ ರಿ (ಕಾ), ಜಿ (ಮ). ೪ ಡಂ (ಮ).

ಪಾದರಿಗನೆಂದು ಪರಪರ
ವಾದ[೧]ಪರ[೧]ಪ್ರಭುಗೆ ದೂಱಿದರ್ಗಡ ತಮಗಾಂ
ಸೋದರನಲ್ಲೆಂ ಬಸದಿಯೊ
ಳೋದೆಂ ಪರವೆಣ್ಗೆ ಮಱೆದುಮೆಱಗಿ[೨]ದ ದಿವಸಂ ೪೨

ಅಯಶಮಿದು ತೊಡೆವೊಡಖಿಲೋ
ರ್ವಿಯಿಂದಮಾಯ್ತಾಯೆ ಕೆಲಬರಿಂ ಬರ್ಕುಂ [೩]ಕೇ
ಲಿನ[೩] ಬಾಯಂ ಮುಚ್ಚಲ್ ಕೆರ
ಸಿಯ ಬಾಯಂ ಮುಚ್ಚಲಾರ್ಗಮೇಂ ಬಂದಪುದೇ ೪೩

ದೂಱಿದು ತಮ್ಮಯ[೪] ಚಿತ್ತ
ಕ್ಕೇಱಿದ ದಿವಸದೊಳೆ ಪೊಲ್ಲ ಕೆಯ್ದಂ ಮೊಲೆ ಮೇ
ಲೇಱಾಗಿ ಬರ್ದುಕಲಕ್ಕುಂ
ದೂಱುಂ[೫] ದುರ್ಯಶಮುಮಾಗೆ ಬಾೞ್ವಂ ಭಟನೇ ೪೪

ಪಿಡಿದೆಂ ತಮ್ಮಡಿಗಳ ಕೇ
ಸಡಿಯಂ ಸೈರಿಸುವುದಪ್ಪಿದೆಂ ಪುಳಕಂಗಳ್
ನಡುವಿನೆಗಂ ತಂಬುಲಮಂ
ಕುಡದೊಡಮಟ್ಟಿೞಿದುಕೊಂಡೆನಾಂ ಬಾಯ್ವಾಯೊಳ್ ೪೫

೪೨. "ನಾನು ಹಾದರಿಗನೆಂದು ಯಾರೋ ದೂಷಕರು ನಿಮಗೆ ದೂರು ಕೊಟ್ಟರು, ಮರೆತು ಕೂಡ ಪರಸ್ತ್ರೀಗೆ ಮನಸೋತ ದಿನವೇ ನಾನು ನಿಮ್ಮ ತಮ್ಮನಲ್ಲ; ಬಸದಿಯಲ್ಲಿ ಓದಿದವನೂ ಅಲ್ಲ.

೪೩. ಈ ಅಪವಾದವನ್ನು ನಿವಾರಿಸುವುದು ಹೇಗೆ ಇದು ಕೆಲವರಿಂದ ಬಂದಿತೆ? ಎಲ್ಲರಿಂದಲೂ ಬಂದಿತು. ಪಾತ್ರೆಯ ಬಾಯಿ ಮುಚ್ಚಬಹುದು; ಆದರೆ ಕೆರಸಿಯ ಬಾಯಿ ಮುಚ್ಚಲಾದೀತೆ?

೪೪. ಈ ದೂರು ತಮ್ಮ ಚಿತ್ತಕ್ಕೆ ಮುಟ್ಟಿದ ದಿನವೇ ನಾನು ಹೀನಕೃತ್ಯವೆಸಗಿ ದಂತಾಯಿತು. ಎದೆಯ ಮೇಲೆ ಗಾಯವಾಗಿ ಬದುಕಬಹುದು;ದೂರೂ ಕಲಂಕವೂ ಅಂಟಿಕೊಂಡಮೇಲೆ ಜೀವ ಇಟ್ಟುಕೊಂಡಿರುವವನು ವೀರನೇ?

೪೫. ತಮ್ಮ ಮೃದುವಾದ ಕೆಂಬಣ್ಣದ ಪಾದಗಳನ್ನು ಹಿಡಿದಿದ್ದೇನೆ; ರೋಮಾಂಚಗಳು ನಡುವಂತೆ ಅಪ್ಪಿಕೊಂಡಿದ್ದೇನೆ. ತಾಂಬೂಲವನ್ನು ಕೊಡದಿರಲು ಅತ್ತು, ಚಂಡಿತನಮಾಡಿ ಬಾಯಿಗೆ ಬಾಯಿಟ್ಟು ಎಳೆದುಕೊಂಡಿದ್ದೇನೆ. ಇದೆಲ್ಲವನ್ನೂ ತಾವು ಕ್ಷಮಿಸಬೇಕು.

---

೧ ಭವ (ಕ, ಮ, ಪ). ೨ ಗ (ಕ, ಮ, ಪ). ೩ ಕೇಲಿನ (ಮ), ಕೆಱೆಯ (ಪ), ಕೇಲಯೆ (ಕಾ). ೪ ಯ (ಕ, ಮ, ಪ). ೫ ಱೆಂ (ಕ, ಪ).

ಪ್ರಾಯಶ್ಚಿತ್ತಂ ಗಡ ತ
ಪ್ತಾಯಸಪುತ್ರಿಕೆಯನಂಜದಪ್ಪುವುದು ಪರ
ಸ್ತ್ರೀಯರ ನಲ್ಲರ್ಗೆ[೧]ನಗಿ[೧]ದ
ನೀಯರ್ತಾಮೆಂದು[೨] ಮಸಣದುರಿಯೊಳ್[೩] ಪೊಕ್ಕಂ ೪೬

ಇದು ತಮ್ಮಿಂದಾದುದೆ ಮ
ನ್ಮದನ ಮದಾವೇಶದಿಂದಮಾಯ್ತೆನ್ನಯೆ ತು
ಪ್ಪದೊಳಾನೆ ಬೆಂದೆನೆನಗಳಿ
ಲದಿರಿಂ ಗಡಮಱಿಯದಟಿದನೇ ವಸುದೇವಂ ೪೭

ಎನೆ ಮುನ್ನಂ ನೃಪತಿಸಭಾ
ಜನಮನಿತುಂ ಬಟಿಕ ಮೂರ್ಛೆವೋದುದು ಕಡು ನಂ
ಜಿನ ಗಾಳಿಯೊ ಮೇಣ್ಸಮ್ಮೋ
ಹನಾಸ್ತ್ರಮೋ ನೃಪಕುಮಾರಪಾತಶ್ರವಣಂ ೪೮

ಬಂದರನಿಮಿತ್ತಮ[೪]ಲ್ಲಿಗ[೪]
ರಿಂ[೫]ದಮರಂದ[೬]ತಿ ವಿ[೭]ಮುಗ್ಧ[೭] ಮಹಿಪತಿ ಸಭೆಗಾ
ರ್ತಂದರೊ[೮] ಮುಕಳಿತ ಕಮಲಾ
ನಂದಾರ್ಥಂ[೯] ಸುಪ್ರಭಾತದೊಳ್ ಭಾಸ್ಕರನಂ ೪೯

೪೬. ಪರಸ್ತ್ರೀಯರನ್ನು ಪ್ರೀತಿಸಿದವರು ಕಾಸಿದ ಕಬ್ಬಿಣದ ಪುತ್ಥಳಿಯನ್ನು ಅಂಜದೆ ಅಪ್ಪಿಕೊಳ್ಳಬೇಕು. ನನಗೆ ತಾವು ಈ ಶಿಕ್ಷೆಯನ್ನು ಕೊಡಲಾರಿರಿ ಎಂದು ಮಸಣದ ಉರಿಯನ್ನು ಹೊಕ್ಕೆನು.

೪೭. ಇದು ತಮ್ಮಿಂದ ಆದುದೆ? ನನ್ನ ಕಾಮಮದಾವೇಶದಿಂದ ಆಯಿತು. ನನ್ನ ತುಪ್ಪದಲ್ಲಿ ನಾನೇ ಬೆಂದೆನು. ನನಗಾಗಿ ದುಃಖಿಸಬೇಡಿ. ವಸುದೇವನೇನು ಅರಿಯದೆ ಪ್ರಾಣತ್ಯಾಗ ಮಾಡಿದನೆ?"

೪೮. ಹೀಗೆ ಓದಿದುದನ್ನು ಕೇಳಿ ಅರಸನೂ ಸಭಾಜನರೂ ಮೂರ್ಛೆ ಹೋದರು. ರಾಜಕುಮಾರನ ಮರಣವಾರ್ತೆಯು ಅದೇನು ವಿಷಯ ಗಾಳಿಯೋ ಅಥವಾ ಸಮ್ಮೋಹನಾಸ್ತ್ರವೊ ಎಂಬಂತಾಯಿತು.

೪೯. ಮೋಹಾವೇಶ ಮುಸುಕಿದ ಆ ರಾಜಸಭೆಗೆ ಆಗ ಅನಿಮಿತ್ತವಾಗಿ ಅರಿಂದಮ ಯತಿಗಳು ಬಂದರು. ಮುಚ್ಚಿಕೊಂಡ ಕಮಲಗಳನ್ನು ಅರಳಿಸಲೆಂದು ಸೂರ್ಯನನ್ನು ತಂದವರಾರು?

---

೧ ನೆರ (ಮ), ನಗ (ಕಾ), ಸಗಿ (ಪ). ೨ ದೆ (ಕಾ). ೩ ಳೆ (ಕಾ). ೪ ಲ್ಲನ (ಪ). ೫ ಲೆಂ (ಕ, ಮ, ಪ) ೬ ಗ (ಕ, ಪ). ೭ ಬುದ್ಧ (ಕ, ಮ, ಪ). ೮ ರ್ (ಕಾ). ೯ ತ್ತಂ (ಮ).

ಆ ಸಕಳರ್ದ್ಧಿಸಮೇತಂ
ವಾಸನೆಯಂ ಪೊತ್ತುಕೊಂಡ ಪಾವ[೧]ನ ಪವನಂ
ಬೀಸೆ ಬಸವಳಿದು ಸೋಂಕೆ[೨] ಸ
ಭಾ[೩]ಸಹಿತಂ ಲಬ್ಧಸಂಜ್ಞನಾಗಿ ನೃಪಾಳಂ ೫೦

ಹಾ ವಸುದೇವ ಹಾ ಹರಿಕು[೪]ಲಾಸ್ತ[೪]ಕ ಹಾ ಚಿರಜೀವಿ[೫] ನಿನ್ನನಿ
ನ್ನಾವೆಡೆಯಲ್ಲಿ ಕಾಣ್ಬೆನನುಜಂ ಪಡೆದಂತುಟನಗ್ರಜಂಗೆ ಮು
ನ್ನೀವುದು ಪಂತ[೬]ಮಿಂತು ವಿನಯಂಗಿಡಲ[೭]ಕ್ಕುಮೆ ವತ್ಸ ಪೊಕ್ಕು ಮುಂ
ಪಾವಕನೊಳ್ ಬಟಿಕ್ಕೆನಗೆ ಕೊಟ್ಟೆಯಿದೇಕೆಯೊ ಶೋಕವಹ್ನಿಯಂ ೫೧

ಮನಸಿಜಮನಂದು ಬೆಂದನೆ ಹರಾನ[೮]ಳನಿಂ ಪುಸಿಯಿಂದು ಬೆಂದನೇ
ವೆನೊ ವನಮಿಂದು ಶೂನ್ಯಮೆಳವೆಂಡಿರ್[೯]ಗಾವರ್[೯]ಮಿಂದು ಶೂನ್ಯಮಂ
ಗನೆಯು[೧೦]ರುಮಿಂದು[೧೦] ಶೂನ್ಯಮೆ[೧೧]ರುವನ್ಮೃಗಲಕ್ಷ್ಮನುಮಿಂದು ಶೂನ್ಯಮಿಂ[೧೨]
ಪಿ[೧೩]ನ ಪೆಸರಿಂದು ಶೂನ್ಯಮುರಿದೆನ್ನಯೆ ರಾಜ್ಯಮುಮಿಂದು ಶೂನ್ಯಮೇ ೫೨

ಬೇವುದಮುಂ[೧೪] ಪುಸಿ ಕಾಣಿರೆ
ಪಾವಕನುಂ ಕಂಡೊಡವನನೊಳಕೊಳ್ಳಂ[೧೫] ಸ್ವಾ
ಹಾ ವಧು ತನ್ನಿನಿಯಳ್ ವಸು
ದೇವನ ರೂಪಿಂಗೆ ಸೋಲ್ಗುಮೆಂಬೀ ಭಯದಿಂ ೫೩

೫೦. ಸಕಲ ಬುದ್ಧಿ ಸಂಪನ್ನನಾದ ಆ ಋಷಿಯೆಂಬ ಸುಗಂಧಮಯವಾದ ಪವಿತ್ರಗಾಳಿ ಬಂದು ಸೋಕಿದೊಡನೆ ಸಭಾಜನ ಸಹಿತವಾಗಿ ಅರಸನು ಮೂರ್ಛೆಯಿಂದ ಎಚ್ಚೆತ್ತನು.

೫೧. "ಹಾ ವಸುದೇವಾ, ಹಾ ಹರಿವಂಶನಿಲಯನೇ, ಹಾ ಚಿರಂಜೀವಿಯೆ, ಇನ್ನು ಎಲ್ಲಿ ನಿನ್ನನ್ನು ಕಂಡೇನು! ತಮ್ಮನಾದವನು ತಾನು ಪಡೆದುಕೊಂಡುದನನು ಮೊದಲು ಅಣ್ಣನಿಗೆ ಕೊಡಬೇಕು. ಇದು ಕ್ರಮವಾಗಿರುವಾಗ, ಮಗು, ನೀನು ಹೀಗೆ ವಿನಯಗೆಟ್ಟು ನಡೆಯಬೇಕೆ? ನೀನು ಮೊದಲು ಬೆಂಕಿಯಲ್ಲಿ ಬಿದ್ದು ನನಗೆ ಈ ಶೋಕದ ಬೆಂಕಿಯನ್ನೇಕೆ ಕೊಟ್ಟೆ?

೫೨. ಶಿವನ ಹಣೆಗಣ್ಣುರಿಯಿಂದ ಮನ್ಮಥನು ಅಂದುಸುಟ್ಟುಹೋದನೆಂಬುದು ಸುಳ್ಳು. ಮನ್ಮಥನು ಇಂದೇ ಬೆಂದನು. ನಾನೇನು ಮಾಡಲಿ? ಇಂದು ನನಗೆ ಉದ್ಯಾನ ಶೂನ್ಯವಾಯಿತು. ಯುವತಿಯರ ಮಧುರ ಗಾಯನ ಶೂನ್ಯ, ಸ್ತ್ರೀಯರು ಶೂನ್ಯ, ಚಂದ್ರನು ಶೂನ್ಯ ಇಂಪಿನ ಹೆಸರು ಶೂನ್ಯ, ನನ್ನ ರಾಜ್ಯವೂ ಶೂನ್ಯವೆ.

೫೩. ಅವನು ಬೆಂಕಿಯಲ್ಲಿ ಸುಟ್ಟುಹೋದನೆಂಬುದು ಸುಳ್ಳು, ಕಾಣಿರೇ. ತನ್ನ ಪ್ರಿಯತಮೆಯಾದ ಸ್ವಾಹಾವಧು ವಸುದೇವನ ರೂಪಕ್ಕೆ ಮನಸೋಲುವಳೆಂಬ ಭೀತಿಯಿಂದ ಅಗ್ನಿಯೂ ಅವನನ್ನು ತನ್ನೊಳಗೆ ಬರಗೊಡನು."

---

೧ ರ (ಕ, ಮ, ಪ). ೨ ಕಿ (ಕ, ಪ) ೩ ಲಾ (ಕ, ಮ, ಪ). ೪ ಲಾಸ್ಥ (ಕ, ಪ), ಲಾಂತ (ಕಾ). ೫ ವ (ಕಾ, ಮ, ಪ). ೬ ಥ (ಕ, ಪ). ೭ ಲಿ (ಕಾ). ೮ ನಿ (ಮ). ೯ ಗೋವರ (ಕಾ). ಗಾವಣೆ (ಕ, ಪ). ೧೦ ರೆ (ಪ). ೧೧ ಮೇ (ಪ), ಮ (ಕ). ೧೨ ಹಿಂ (ಕಾ). ೧೩ ಪ (ಕಾ). ೧೪ ವಂ (ಕ, ಪ). ೧೫ ಳ್ಗುಂ (ಪ).

ವ|| ಎಂದು ಶೋಕಿಸುವುದುಂ ನೀನೆಂದಂತೆ ವಸುದೇವನಂ ವಸುದೇವನೊಳಕೊಳ್ವನಲ್ಲಂ ಕೆಲವಾನುಂ ದಿವಸಕ್ಕೆ ನಿನ್ನ ತಮ್ಮಂ ಬಂದಪನಟಿಲುಂ[1] ಬ[1]ಟಿಲುಂ ಬೇಡೆಂದರಿಂದಮರರಸನಂ ಸಂತೈಸಿ ಪೋಗೆ

ಆ ನಿಯಮೆ ನಿಜಾಗತ ವಾ
ಣೀನದಿ ತೀವದೊಡೆ ತನ್ನೊಳೇನುಟೆವುದೆ ಯೋ
ಗ್ಯಾನುಜ ವಿಯೋಗಶೋಕೌ
ರ್ವಾನಳನಿಂದಾ ಸಮುದ್ರವಿಜಯ ಸಮುದ್ರಂ ೫೪

ಅತ್ತ ನಿರಂಕು[2]ಶಂಮೆಡ[3]ಱಿದಾಳಣೆಯಂ ಮುಱಿದಂ[4]ಗಜ[4]ನ್ಮನು
ನ್ಮತ್ತ ಮತಂ[5]ಗಜಂಬೊಲೆಸೆದಾ ವಸುದೇವನುಮುತ್ತಮಾಂಗನಾ
ವೃತ್ತಕುಚಾದ್ರಿಕಂಟಕವ[6]ನೋತ್ಕಟರಾಗನದೀ ಪ್ರಚಾರ ಚಿಂ
ತೋತ್ತರನೆಯ್ದಿದಂ ವಿಜಯಖೇಟಮನಂಗಜಸೌಖ್ಯವಾಟಮಂ ೫೫

ವ|| ಎಯ್ದಿ ಪೊಱವೊಟಲೊಳೊಂದು ನಂದನವನಮಂ ಪೊಕ್ಕು ಪದ್ಮಾಕರದೊಳೋ[7]ಲಾಡಿ ಕೊಳನ ತಡಿಯೊಳಿಕ್ಕಿರ್ದ ಮೃಗಮದಮುಮಂ ಸೆಳೆಗೊಂಬು ಕೊಂಬನೊರಸೆ ಸುರಿದ ಸಿರಿಕಂಡದ ರಸಮುಮನಣ್ಪಿಕ್ಕಿ ಪೂವಂ[8]ತುಱುಂಬಿ[8] ತುಱುಂಬಿಗೆ ತುಱುಗಿ ಮುಸುಱಿದ ಮಱಿದುಂಬಿಯಿಂ[9] [10]ಕಣ್ಬೇಲಿ[10]ಯ ತಲೆಸುತ್ತಂ ಸುತ್ತಿದಂತೆ ಸೊಗಯಿಸೆ ಸುರಯಿಯ ಸುರಹೊನ್ನೆಯಲರ ಬಿರಿಮುಗುಳ ಬೆರಕೆವಾಸಿಗಮಂ ತಲೆಸುತ್ತಿ ಕೇದಗೆಯ ಕುತ್ತುಂಗಱೆಗಳಂ ಕುತ್ತಿ ಕೇಶದ ಕೊನೆಯೊಳ್ ಕೇಸರದ

ವ|| ಹೀಗೆ ಅವನು ಶೋಕಿಸಲಾಗಿ, "ನೀನೆಂದಂತೆ ಅಗ್ನಿ ವಸುದೇವನನ್ನು ಒಳಕೊಳ್ಳುವವನಲ್ಲ, ಕೆಲವು ದಿನಗಳಾ ನಂತರ ನಿನ್ನ ತಮ್ಮನು ಬರುವನು. ನೀನು ಅಳಬೇಡ, ಆಯಾಸ ಪಡಬೇಡ" ಎಂದು ಅರಿಂದಮರು ಅರಸನನ್ನು ಸಮಾಧಾನಗೊಳಿಸಿ ಹೋದರು.

೫೪. ಮುನಿಗಳ ಬಾಯಿಂದ ಬಂದ ಆ ವಾಣಿಯೆಂಬ ನದಿ ತುಂಬದೆ ಹೋಗಿದ್ದರೆ ಸಮುದ್ರವಿಜಯನೆಂಬ ಸಮುದ್ರವು ತಮ್ಮನ ವಿಯೋಗ ಶೋಕವೆಂಬ ವಡವಾಗ್ನಿಯಿಂದ ಪಾರಾಗಿ ಉಳಿಯುತ್ತಿತ್ತೆ?

೫೫. ಕಟ್ಟಿದ ಕಂಬವನ್ನು ಮುರಿದೊಗೆದ ನಿರಂಕುಶ ಮದನಗಜದಂತೆ ಶೋಭಿಸುವ ವಸುದೇವನು ಸುಂದರಿಯರ ಬಟ್ಟಮೊಲೆಗಳೆಂಬ ಮುಳ್ಳು ಕಂಟಿಗಳಿಂದಲೂ ತೀವ್ರವಾದ ಅನುರಾಗವೆಂಬ ನದಿಯಿಂದಲೂ ತುಂಬಿದ (ಮೋಹ)ವನದ ಚಿಂತೆಯನ್ನು ಬಿಟ್ಟು ಮನ್ಮಥ ಸೌಖ್ಯಕ್ಕೆ ನೆಲೆಯಾದ ವಿಜಯಖೇಟಕ್ಕೆ ಬಂದನು.

ವ|| ಆ ಪಟ್ಟಣದ ಹೊರವಲಯದಲ್ಲೊಂದು ಉದ್ಯಾನವನ್ನು ಹೊಕ್ಕು, ಕಮಲ ಸರೋವರದಲ್ಲಿ ಈಜಾಡಿ, ಅದರ ತೀರದಲ್ಲಿ ಇದ್ದ ಕಸ್ತೂರಿಯನ್ನೂ ಕೊಂಬೆ ಕೊಂಬೆಗಳ ಘರ್ಷಣೆಯಿಂದ ಸುರಿದ ಶ್ರೀಗಂಧದ ರಸವನ್ನೂ ಮೈಗೆ ಲೇಪಿಸಿಕೊಂಡು, ಹೂವನ್ನು ಮುಡಿದು ಮರಿದುಂಬಿಗಳು ಮುತ್ತಿಕೊಳ್ಳಲಾಗಿ ನವಿಲುಗರಿಯ ಶಿರೋವಸ್ತ್ರವನ್ನು

---

೧ ಲುಮ (ಕಾ). ೨ ಕ (ಮ). ೩ ದ (ಕಾ). ೪ ಜನ (ಕ, ಮ, ಪ). ೫ ದಂ (ಕ, ಮ). ೬ ಮ (ಕ, ಮ, ಪ). ೭ ಳೊಲೆದೋ (ಕ, ಪ). ೮ X (ಕಾ). ೯ ಯಂ (ಕ). ೧೦ ಕರಿ (ಕಾ), ಕಂಬಿಲಿ (ಮ). ಕಣ್ಬೇಲಿ (ಪ).

ಕಿಸುವುಡಿಯಂ ಕೆದರಿ ತಿಳಕದ ತಿಳಕಮಂ ತಳೆದು ಕೇದಗೆಯ ಬಿಳಿಯೆಸಳ ಬಳಪದೋಲೆಯನಿಟ್ಟು ಪೂಗೊಂಚಲಂ ತೂಗಿ ತೊನೆಯೆ ಕನ್ನವುರಂದೀವಿ ಮುಗುಳ ಮುದ್ರಿಕೆಯನಿಕ್ಕಿ ಕುಸುಮಕಂಕಣಮನೇಱಿ ನೂಂಕಿ ನಿಱಿದಳಿರ ತೊಂಗಲಂ ತೋಳೊಳೊತ್ತಿಡರ್ಚಿ ಚಂಪಕಮಾಲೆಯೊಳ್ಬೆರಸಿ [1]ಕೋದ[1] ಮಲ್ಲಿಗೆಯ ತಿಸರಮಂ ತೊಟ್ಟು ತಾವರೆಯ ನೂಲ ತಿರುವಂ ತೀಡೆ ವಕುಳದ ಪೂತ ಸೆಳೆಯ ಸೆಳೆವಿಲ್ಲಂ ಗೊಲೆಗೊ[2]ತ್ತಿ ಪೊಸ ನನೆಯ ಪುಳುಂಬಂ ಪೊಸೆದು ಸಲಿಸಿ ಕಿಱಿದಳಿರಿಂ[3] ಕಂಗಱಿಗಟ್ಟಿದ[4] ಮಾವಿನಂಕುರದ ಕೂ[5]ರ್ಗಣೆಗಳಂ ತಳಂ ತೀವೆ ಪಿಡಿದು ಪೊಲಗೆಟ್ಟ ಕಾಮದೇವನಂತೆ ವಸುದೇವನಾ ವನದೊಳಗೆ ವರ್ಪಾಗಳೊಂದು ತಿಳಿಗೊಳದ ತಡಿಯೊಳ್

ಸುತ್ತುಂ [6]ನವ[6]ಪಲ್ಲವಮೆಱ
ಲುತ್ತಿರೆ ಮುತ್ತಿದ ಮದಾಳಿಕುಳದಿಂ ಮದನಂ
ಗೆತ್ತಿದ [7]ಪೊಸಗ[7]ಣ್ಬೇಲಿಯ[8]
ಸತ್ತಿಗೆಯೆನಿಸಿದುದು ಬಂದ ಚೂತಕುಜಾತಂ ೫೬

ಸುತ್ತಿಕೊಂಡಂತೆ ಶೋಭಿಸುತ್ತ, ಕೇದಗೆಯ ಚಿಕ್ಕ ಚಿಕ್ಕ ಗರಿಗಳನ್ನು ಕುಕ್ಕಿ ತಲೆಗೂದಲಿನ ತುದಿಯಲ್ಲಿ ಪರಾಗದ ಕೆಂಪು ಹುಡಿಯನ್ನು ಉದಿರಿಸಿಕೊಂಡು, ತಿಲಕದಿಂದ ಬೊಟ್ಟಿಟ್ಟಿಕೊಂಡು, ಕೇದಗೆಯ ಬಿಳಿಸೆಸಳನ್ನು ಓಲೆಯಾಗಿ ಧರಿಸಿ, ತೂಗಾಡುವ ಹೂಗೊಂಚಲನ್ನು ಕರ್ಣಪೂರ್ವಾಗಿ ಇಟ್ಟುಕೊಂಡು, ಮೊಗ್ಗಿನ ಉಂಗುರ ಮಾಡಿಕೊಂಡು, ಹೂವಿನ ಕಂಕಣವನ್ನು ಮುಂಗೈ ಮೇಲೆ ಏರಿಸಿಕೊಂಡು, ಕೋಮಲವಾದ ತಳಿರ ಗೊಂಚಲನ್ನು ತೋಳಿಗೆ ಅಳವಡಿಸಿ, ಸಂಪಗೆ ಮಾಲೆಯಲ್ಲಿ ಬೆರಸಿ ಹೆಣೆದ ಮಲ್ಲಿಗೆಯ ಮೂರೆಳೆಹಾರವನ್ನು ತೊಟ್ಟು, ತಾವರೆ ನೂಲಿನ ಹೆದೆಯನ್ನು ಹೂತುಂಬಿದ ಬಕುಳದ ಸೆಳೆಬಲ್ಲಿಗೆ ಕಟ್ಟಿ, ಹೊಸ ಹೂವಿನ ಬಾಣಗಳನ್ನು ಮಾಡಿಕೊಂಡು, ಚಿಕ್ಕ ಚಿಗುರೆಲೆಗಳಿಂದ ಗರಿಗಟ್ಟಿದ ಮಾವಿನ ಅಂಕುರದ ಹದನಾದ ಬಾಣಗಳನ್ನು ಕೈತುಂಬ ಹಿಡಿದುಕೊಂಡು ಹಾದಿತಪ್ಪಿದ ಕಾಮದೇವನಂತೆ ವಸುದೇವನು ಆ ವನದಲ್ಲಿ ಬರುತ್ತಿರುವಾಗ ಒಂದು ತಿಳಿಯಾದ ಕೊಳದ ತೀರದಲ್ಲಿ -

೫೬. ಸುತ್ತಲೂ ಹೊಸ ಚಿಗುರು ನೇತಾಡುತ್ತಿರಲಾಗಿ, ಸೊಕ್ಕಿದ ದುಂಬಿವಿಂಡುಗಳು ಮೇಲೆ ಮುಸುರಿಕೊಂಡಿರಲಾಗಿ ಮನ್ಮಥನಿಗೆ ಎತ್ತಿ ಹಿಡಿದ ನವಿಲ್ಗರಿಯ ಚತ್ತರಿಗೆಯೊ ಏನೊ ಎಂಬಂತೆ ಒಂದು ಮಾವಿನ ಮರವು ತೋರಿತು.

---

೧ ಕೊಳದ (ಕ, ಪ). ೨ ಗೆ (ಕಾ). ೩ ರಂ (ಕ, ಪ). ೪ X (ಕಾ). ೫ ಮಾ (ಕಾ). ೬ ವನ (ಮ). ೭ ಗ (ಕ, ಮ) ನ (ಪ). ೮ + ಪೊಸ (ಕ, ಮ, ಪ)

ವ|| ಆ ಮಾವಿನಡಿಯೊಳಡಿವಾಸಿ ಪೂವಿನ[೧] ಪುಡಿಯ ಪುಳಿಯಂ ಜಗಲಿಗಟ್ಟಿ ಪೊಸದಳಿರ ಪಾಸಂ ಕುಸುಮದೆಸಳಿಂ ಪಚ್ಚವಡಿಸಿ ಪೊಚ್ಚ[೨]ಪೊಸ[೨] ಪಚ್ಚಲೆಯಂ ತಲೆಗಿಂಬು[೩] ಮಾಡಿ ಬಾಳಬಿಸವಿಸರದಿಂ ಬಿತ್ತರಿಸಿದ ಬಿತ್ತರಿಗೆಯಂ ಕಾಲ ದೆಸೆಗೆ ಪೋಗೆ ನೂಂಕಿ ಪರಿಶ್ರಮಮಂ ಕಳೆಯಲೆಂದು ಪವಡಿಸಿ ಕರ್ಪೂರದ ಪರಲಂ ಬಾಯೊಳ್ಪೊಯ್ದು ತಂಬುಲಮಂ ಕಳೆದುಕೊಂಡು

ಅರಸಂ ಶೃಂಗಾರವೃತ್ತಂಗಳನೆ ಗಿಳಿಗಳೊಳ್ ರಾಗದಿಂದೋದುತುಂ ಗಾ
ವರಿಸುತ್ತುಂ ತುಂಬಿಯೊಳ್ ನುಣ್ಪಡರ್ದ ಶಿಖಿಪಿಕಾರಾವದೊಳ್ ಲೀಲೆಯಿಂದಂ
ಬೆರಸುತ್ತುಂ ಷಡ್ಜಮಂ[೪] ಪಂಚಮುಮನೆಲ* [ರದೋ]* ರಂದದಿಂ ತತ್ಸ[೫]ರಸ್ಸೀ
ಕರಮಂ ಮೇಲೊಟ್ಟಿ ಮೆಲ್ಪಿಂದಲೆಯೆ ಮುಕುಳಿತ ಸ್ವಾಂತ ನೇತ್ರಾಬ್ಜನಾದಂ ೫೭

ಪೃಚ್ಛಾಯಾ[೬]ಸುಪ್ತಂ[೬] ಮೃದು
ಳ[೭]ಚ್ಛದನಪ್ರಸರಶಯನ ಪೋ[೮]ಷಿತಮನಿಳ್[೯]
ಸ್ವೇಚ್ಛಾ ಸುಖಿತಂ ನಿದ್ರೆ[೧೦]ಯ
ತಚ್ಛಶ್ರಮಭರಮನಾಳ್ದುದೊಂದರೆ[೧೧]ಜಾವಂ ೫೮

ವ|| ಅಂತು ಸುಖನಿದ್ರಾಸಕ್ತನಾಗೆ

ವ|| ಆ ಮಾವಿನ ಮರದ ಅಡಿಯಲ್ಲಿ ಪುಷ್ಪಪರಾಗದಿಂದ ಜಗಲಿಯನ್ನು ರಚಿಸಿ, ಹೊಸ ತಳಿರಿನ ಹಾಸುಗೆಯ ಮೇಲೆ ಹೂವಿನೆಸಳುಗಳನ್ನು ಹೊದಿಸಿ, ಹೊಚ್ಚ ಹೊಸ ಹಸಿರೆಲೆಗಳಿಂದ ತಲೆಗಿಂಬು ಮಾಡಿ, ಎಳೆಯ ತಾವರೆ ನಾಳದಿಂದ ಮಾಡಿದ ದಿಂಬನ್ನು ಕಾಲದೆಸೆಗೆ ಇಟ್ಟುಕೊಂಡು ದಣಿವನ್ನು ಆರಿಸಿಕೊಳ್ಳಲೆಂದು ಮಲಗಿ, ಕಪ್ಪುರದ ಹರಳನ್ನು ಬಾಯಿಗೆ ಹಾಕಿಕೊಂಡು ತಾಂಬೂಲವನ್ನು ಸೇವಿಸಿ -

೫೭. ಗಿಳಿಗಳಿಂದ ಶೃಂಗಾರವೃತ್ತಗಳನ್ನು ಓದಿಸುತ್ತಲೂ, ದುಂಬಿಗಳಿಂದ ಮಧುರವಾಗಿ ಹಾಡಿಸುತ್ತಲೂ ನವಿಲು-ಗಿಳಿಗಳ ಮೃದು ಧ್ವನಿಯಲ್ಲಿ ಷಡ್ಜ ಪಂಚಮಗಳನ್ನು ವಿನೋದದಿಂದ ಬೆರಸುತ್ತಲೂ ಆ ಕೊಳದ ತುಂತುರು ಹನಿಗಳನ್ನು ಒಟ್ಟಿಕೊಂಡು ಗಾಳಿ ಮೆಲ್ಲಗೆ ಬೀಸಲಾಗಿ ರಾಜಕುಮಾರನು ಕಣ್ಣುಗಳು (ನಿದ್ದೆಯಿಂದ) ಮುಚ್ಚಿಕೊಂಡುವು.

೫೮. ನೆರಳಿನಲ್ಲಿ ಮೃದುವಾದ ಶಯ್ಯೆಯ ಹಾಗೂ ಹಿತವಾದ ಗಾಳಿಯ ಸುಖವನ್ನು ಅನುಭವಿಸುತ್ತ ದಣಿವಾರಿ ಬಂದು ಅರ್ಧಯಾಮದವರೆಗೆ ವಸುದೇವನು ಸುಖನಿದ್ರೆಗೊಳಗಾಗಿದ್ದನು.

ವ|| ಹಾಗೆ ಸುಖನಿದ್ರೆಯಲ್ಲಿರುವಾಗ -

---

೪ + ಮರದ (ಮ). ೫ X (ಕ, ಪ) ೬ ಬಂ (ಕಾ). ೭ ಮುಂ (ಕ), ೮ ತ್ಸ್ವ (ಕ, ಪ). ೯ ಸುಪ್ತಂ (ಪ). ೧೦ ನ (ಕ, ಮ). ನಿ (ಪ). ೧೧ ಶೋ (ಕ, ಮ, ಪ). ೧೨ ಷ (ಕಾ). ೧೩ ಶ್ರೆ (ಕಾ). ೧೪ ನೆ (ಕಾ). * ದೊಳೋ (ಕ, ಕಾ, ಮ. ಪ).

ಕೊಡೆ ಮಾವಿಂ ಪಾರಿಜಾತಂ ಕುಸುಮಶಯನದಿಂ ಶೇಷಶಯ್ಯಾತಳಂ ಕಿ
ಟ್ಟಡೆ ಪಂಕೇಜಾಕ್ಷನಂತಾ ಯುವತಿಯಮಳನೇತ್ರಪ್ರಭಾಪೂರಮಾ ಪಾ
ಲ್ಗಡಲಂ ಪೋಲ್ತೊಪ್ಪೆ ಲಕ್ಷ್ಮೀಲಲನೆಯ ತೆಱದಿಂ ಲೀಲೆಯಿಂ ತನ್ನ ಕಾಲಂ
ಪಿಡಿಕೆಯ್ಯುತ್ತಿರ್ದಳಂ ಕನ್ನೆಯನೆ ಕನಸಿನೊಳ್ ಕಂಡನಾ ರಾಜಪುತ್ರಂ ೫೯

ವ॥ ಕಂಡು ನಿದ್ರೆ ತಿಳಿಯೆ ತಳವೆಳಗಾಗದೆ

ಆ ವನಿತೆಯ ನಯನಜ್ಯೋ
ತ್ಸ್ನಾವಿಲಸಿತದಿಂದಮಲರ್ದು ಮಿ[೧]ಗೆ ಮು[೨]ಗಿದ ನವೇಂ
ದೀವರವಲರ್ದಪುದೆನೆ ವಸು
ದೇವಂ ಕಣ್ದೆಱೆದು ನೋಡಿ ವಿಸ್ಮಯದಿಂ[೩]ದಂ ೬೦

ನಿಜ ನಿದ್ರಾಮುದ್ರಿತಾಸ್ಯಾಂಬುಜಮನಱ[೪]ಕೆಯಿಂ ನೋಳ್ಪ[೫] ನಿಃಶಂಕ[೬]ನೇತ್ರಾಂ
ಬುಜಮಾ[೭]ಗಳ್ ಲಜ್ಜೆಯಿಂದಂ ತೆಗೆಯೆ ನೆಗೆಯೆ ರೋಮಾಂಕುರಂ ಪೊತ್ತಪೋಲ್ ಘ
ರ್ಮಜಳಂ ಕುಳ್ಳಿರ್ದು ತೋಳ್ಚಿತ್ತರಿಗೆಯ ಕೆಲದೊಳ್ಕಾಲನೊತ್ತುತ್ತುಮಿರ್ದಳ್
ವಿಜಯಶ್ರೀಯಂತಿರೊರ್ವಳ್ ಬಿಸಜವದನೆ ಬೇಱೊಂದವಷ್ಟಂಭದಿಂದಂ ೬೧

೫೯. ತಲೆಯ ಮೇಲಿರುವ ಮಾವಿನ ಮರವು ಪಾರಿಜಾತ ವೃಕ್ಷವನ್ನೂ ಹೂವಿನ ಹಾಸಿಗೆ ಶೇಷತಲ್ಪವನ್ನು ಧಿಕ್ಕರಿಸುತ್ತಿರಲಾಗಿ, ತರುಣಿಯ ಕಣ್ಬೆಳಗಿನ ಮಹಾಪೂರವು ಹಾಲ್ಗಡಲಿಗೆ ಸದೃಶವಾಗಿ ಒಪ್ಪುತ್ತಿರಲಾಗಿ ತಾನೇ ನಾರಾಯಣನೆಂಬಂತೆ ತನ್ನ ಕಾಲನ್ನು ಹಿಡಿದು ಒತ್ತುತ್ತಿರುವ ಲಕ್ಷ್ಮೀದೇವಿಯಂತಹ ಒಬ್ಬ ಕನ್ಯೆಯನ್ನು ಆತನು ಕನಸಿನಲ್ಲಿ ಕಂಡನು.

ವ॥ ಹೀಗೆ ಕನಸುಗಂಡು ವ್ಯಗ್ರನಾಗದೆ -

೬೦. ಆ ಚೆಲುವೆಯ ಕಣ್ಬೆಳಗೆಂಬ ಬೆಳ್ದಿಂಗಳಿನಿಂದ ತನ್ನ ಕಣ್ಣುಗಳೆಂಬ ಬೆಳ್ದಾವರೆಗಳು ಅರಳಿದುವೋ ಏನೊ ಎಂಬಂತೆ ವಸುದೇವನು ಕಣ್ದೆರೆದು ನೋಡಲಾಗಿ ವಿಸ್ಮಿತನಾದನು.

೬೧. ನಿದ್ದೆಗೊಳಗಾದ ತನ್ನ ಮುಖಕಮಲವನ್ನೆ ಆಸ್ಥೆಯಿಂದ ನೋಡುತ್ತಿದ್ದ ಕಣ್ಣುಗಳು ಈ ನಾಚಿಕೆಯಿಂದ, ಕೆಳನೋಟಕ್ಕೆ ಬಾಗಿ, ರೋಮಾಂಚ ನೆಗೆದಂತೆ ಬೆವರೊಡೆದು, ದಿಂಬಿನ ಪಕ್ಕದಲ್ಲಿ ಕಾಲನ್ನು ಒತ್ತುತ್ತ ವಿಜಯಲಕ್ಷ್ಮಿಯಂತಿರುವ ಕಮಲಮುಖಿಯೊಬ್ಬಳು ಬೇರೊಂದು ಬೆಡಗಿನಿಂದ ಕುಳಿತಿರುವುದನ್ನು ಅವನು ಕಂಡನು.

---

೧ ಗಿವು (ಕಾ). ೨ ನಾ (ಮ). ೩ ಜೆ (ಪ). ೪ ಡಿ (ಕ, ಪ), ಡೆ (ಮ). ೫ ಕೆ (ಕಾ). ೬ ನಾ (ಕ, ಪ). ೭ ಳ್ಪಿ (ಪ).

ಆವಳಾಂ ಮೆಲ್ಲನೆ ತೊಡೆಯಂ
ತಿವಿದಪೆ[೧]ನೆಚ್ಚಱದ ತೆಱದೆ ಕಣ್ಗಳ ಪಸವೋ
ಡುವಿನಂ ನೋೞ್ಪೆನಮೇಕು
ಪ್ಪವಡಿಸಿದನೊ ಕು[೨]ವರನೆಂದು ಬೆಚ್ಚನೆ ಸುಯ್ದಳ್ ೬೨

ಮೊಲೆ ಮೇಲಿಂ[೩] ಮೇಲುದಂ ತಂದೆಡದ ಮುಡು[೪]ಪಿನೊಳ್ಕೀ[೪]ಡುತುಂ ವಾಮ [೫]ಹಸ್ತೋ[೫]
ತ್ತಲಮಂ ಸ್ಸೈತುಂಬ ಬಿಂಬಸ್ಥಳದೊಳಿಟಿಪುತುಂ ಬಳ್ಕೆ ಮಧ್ಯಂ ಕಚಂ ಬಿ
ಟ್ಟ[೭]ಳಿಗಿ[೭]ಣ್ಪಂ ಸಾರೆ ಬೆನ್ನೊಳ್ಳಸು ಮುರಿಯೆ ಮೊಗಂ ಕೊಂಕಿನಿಂದಿರ್ದು[೮]ಚೆಲ್ವಿಂ[೯]
ಬಲಗೆಯ್ಯಿಂ[೧೦] ಬೀಸುತಿರ್ದಳ್ಬಿಸರುಹದಳದಿಂ ಕಾಂತೆ ಮತ್ತೊರ್ವಳಾಗಳ್ ೬೩

ವ॥ ಅಂತು ತನ್ನ ಬೞಿಯಲೆ ಬಂದ ಭಾಗ್ಯದೇವತೆಯಂತಿರ್ದಳಂ ಕಂಡು ಕನಸೆ ನೆನಸಾದುದೆಂದು ಪೆಂಡಿರ್ಕಾರಣಮೊನ್ನ ಬೀಡುಂ ನಾಡುಮಂ ಬಿಟ್ಟೋಡಿ ಬಂದೆಂ ಬಂದೊಂಡಮಿವಳ್ದಿರೆನ್ನ ಬೆನ್ನನೇಕೆ ತಗು[೧೧]ಳ್ದಪ[೧೧]ರಿನ್ನೇವೆನೆಂದೇವೈಸಿದಂತೆ

ಮೊಗದೊಳ್ನಾಂಟಿದ ಕಣ್ಣಂ
ತೆಗೆ[೧೧]ಯೆನೆ[೧೧] ಕಣ್ಣೊಡನೆ ಪರಿದು ನಾಂಟಿದ ಮನಮಂ
ತೆಗೆಯೆನೆ ಭೋಂಕನೆ ಕಾಲಂ
ತೆಗೆದಂ ವಸುದೇವನಂಕದಿಂದಗನೆಯಾ ೬೪

೬೨. "ಈತನಿಗೆ ಎಚ್ಚರವಾಗದಂತೆ ಮೆಲ್ಲಗೆ ತೊಡೆಯನ್ನು ತಿವಿಯುವೆನು. ಕಣ್ಣಿನ ಬರ ಹಿಂಗುವವರೆಗೆ ನೋಡುತ್ತಿರಬೇಕೆಂದಿದ್ದೆನು. ಈ ಕುಮಾರನೇಕೆ ಎಚ್ಚರಗೊಂಡನೊ!" ಎಂದು ಆಕೆ ನಿಟ್ಟುಸಿರಿಟ್ಟಳು.

೬೩. ಮೊಲೆಗಳ ಮೇಲಿನ ಸೆರಗನ್ನು ಎಡ ಹೆಗಲಿಗೆ ತಂದು, ಎಡಗೈಯನ್ನು ತನ್ನ ನಿತಂಬಕ್ಕೆ ಇಟ್ಟುಕೊಂಡು, ಬೆನ್ನಮೇಲೆ ತಲೆಗೂದಲು ದುಂಬಿಗಳಿಗೆ ಆಕರ್ಷಣೆ ನೀಡುತ್ತಿರಲಾಗಿ, ನಡು ಬಳುಕುತ್ತಿರಲಾಗಿ, ಮುಖವನ್ನು ಕೊಂಚ ಓರೆ ಮಾಡಿ, ಚೆಲುವಾಗಿ ತಾವರೆ ಎಲೆಯಿಂದ ಗಾಳಿ ಬೀಸುತ್ತ ಇನ್ನೊಬ್ಬ ಸುಂದರಿ ನಿಂತಿದ್ದಳು.

ವ॥ ಹಾಗೆ ತನ್ನ ಬಳಿಗೇ ಬಂದ ಭಾಗ್ಯದೇವತೆಯಂತಿದ್ದವಳನ್ನು ಕಂಡು, ಸ್ವಪ್ನವೇ ಸತ್ಯವಾಯಿತೆಂದುಕೊಂಡನು. ಹೆಣ್ಣುಗಳೆ ಕಾರಣವಾಗಿ ಮನೆಯನ್ನು ದೇಶವನ್ನೂ ಬಿಟ್ಟು ನಾನು ಓಡಿ ಬಂದೆನು. ನಾನು ಬಿಟ್ಟರೂ ಈಕೆಯರು ಅದೇಕೆ ನನ್ನ ಬೆನ್ನುಹತ್ತುವರು? ಇನ್ನೇನು ಮಾಡಲಿ? ಎಂದು ಜುಗುಪ್ಸೆಗೊಂಡಂತೆ -

೬೪. ವಸುದೇವನು ಬೇಗನೆ ಆ ಸ್ತ್ರೀಯ ತೊಡೆಯಿಂದ ತನ್ನ ಕಾಲನ್ನು ತೆಗೆದನು; ಆದರೆ ಆಕೆಯ ಮುಖದಲ್ಲಿ ನಟ್ಟ ತನ್ನ ನೋಟವನ್ನು ತೆಗೆಯಲಿಲ್ಲ, ಕಣ್ಣೊಡನೆ ಹೋಗಿ ಅವಳಲ್ಲಿ ನಟ್ಟ ಮನಸ್ಸನ್ನೂ ತೆಗೆಯಲಿಲ್ಲ.

---

೧ ಪ (ಕ, ಮ, ಪ). ೨ ಕೊ (ಕಾ, ಮ). ೩ ಲಂ (ಕ, ಮ, ಪ). ೪ ಡಿ (ಕಾ). ೫ ಶ್ರೋ (ಕ, ಪ). ೬ ಬಿಂಬೋ (ಕಾ). ೭ ಳ್ ವಿ (ಮ), ಳುವಿ (ಕಾ). ೮ ರ್ದ (ಕಾ). ೯ ಲ್ವಂ (ಮ). ೧೦ ಯ್ಯಿಂ (ಮ, ಪ). ೧೧ ಮ (ಕ, ಪ).

ವ॥ ಅದಂ ಕಂಡಾ ಚಿತ್ರಲೇಖೆಯೆಂಬಾಕೆಯ ಕೆಳದಿ ಬೀಸುವ ಬಿಸರುಹದೆಲೆಯ ಬಿಜ್ಜಣಿಗೆಯಂ ಮುಗುಳ್ಗಳಿಗೆಯಿಂ ಪೊದಯಿಸಿ[೧] ಪೂವಿನ ಬಿಜ್ಜಣಿಗೆ[೨] ಮಾಡಿ

[೩]ಬಿಡಿಸುವೆಯೇಂ[೪] ಕಾಲಂ ಕೆ
ಯ್ವಿಡಿದಪಳೀಗಳ್ಕುಮಾರಿ ನೀನೀಕೆಯ ಕಾ
ಲ್ವಿಡಿವಂತಾದಪುದಿನ್ನೇಂ
ತೊಡರ್ದ್ಯ ಕಡು ಗೆಲ್ಲಕಾರ್ತಿಯೀ ಕಾಂತೆ ಗಡಾ ೬೫

ವ॥ ಅರಸನಂ[೫]ತೆಂಬುದೇನೆನೆ ಮತ್ತಮಾಕೆ

ಈ ಮಾವೀಕೆಗೆ ಕಾಮನರ್ಚಿಸಿದ ಮಾ[೬]ವೆಯ್ತುಂ[೭]ದೊಡಂ ಭಾನುವೀ
ಭೂಮೀಜಾತದ ತಣ್ಣೆಳಲ್ತೊಲಗದಾವಂ ಬಂದು ಸಾರ್ದಿರ್ದೊಡು
ದ್ದಾಮಂ ಬಲ್ಲಿದರಾಣೆಯಿಟ್ಟ ತೆಱದಿಂದಿರ್ದಪ್ಪುದಾ ಶ್ರೀಮಹಾ
ಥಾ[೮]ಮಂ ವಲ್ಲಭನೀ ಕುಮಾರಿಗಿದು ಸಿ[೮]ದ್ಧಾದೇ[೮]ಶಮುರ್ವೀಶ್ವರಾ ೬೬

ವ॥ ಈ ಪುಣ್ಯವತಿಯುಮೀ ಪೊಟಲನಾಳ್ವ ಮಗಧಾಧಿಪತಿಯ ಮಗಳ್ ಶ್ಯಾಮಳೆಯೆಂಬ[೮]ಳೀ ಕೋಮಳೆಯಿಂದು ನಿನಗಿದಿರ್ವಪ್ಪಂತೆ ಬಂದೀ ಬನದೊಳಗೆ

ವ॥ ಅದನ್ನು ಕಂಡು ಚಿತ್ರಲೇಖೆಯೆಂಬ ಆಕೆಯ ಸಖಿ, ಬೀಸುತ್ತಿದ್ದ ತಾವರೆಯೆಲೆಯ ಬೀಸಣಿಗೆಯನ್ನು ಮುಗುಳ್ನಗೆಯಿಂದ ಹೊದಿಸಿ, ಅದನ್ನು ಹೂವಿನ ಬೀಸಣಿಗೆಯಾಗಿ ಪರಿವರ್ತಿಸಿ ಹೀಗೆ ನುಡಿದಳು -

೬೫. "ಕಾಲನ್ನೇಕೆ ಬಿಡಿಸಿಕೊಳ್ಳುವೆ? ಈ ಕುಮಾರಿ ಈಗಲೆ ನಿನ್ನ ಕೈಹಿಡಿಯುವಳು. ನೀನು ಈಕೆಯ ಕಾಲು ಹಿಡಿಯುವಂತಾಗುವುದು. ಸಿಕ್ಕಿಬಿಟ್ಟೆಲ್ಲ! ಇನ್ನೇನು? ಈ ಕಾಂತೆ ಸಾಮಾನ್ಯಳೆ? ಮಹಾ ಗೆಲ್ಲಕಾರ್ತಿ"

ವ॥ ನೀನು ಹೇಳುತ್ತಿರುವುದರ ಅರ್ಥವೇನೆಂದು ಕುಮಾರನು ಕೇಳಲಾಗಿ ಆಕೆ ಮತ್ತೆ ಹೀಗೆ ನುಡಿದಳು-

೬೬. "ಈ ಮಾವು ಈಕೆಗೆ ಕಾಮದೇವನ ಮಾವು. ಯಾವ ಮಹಾತ್ಮನು ಬಂದು ಇದರಡಿಯಲ್ಲಿದ್ದಾಗ ಸೂರ್ಯನಿಂದ ಬದಲಾಗದೆ ಇದರ ನೆರಳು ಆಣೆಯಿಟ್ಟಂತೆ ಸ್ಥಿರವಾಗಿ ಉಳಿಯುವುದೊ ಆ ಪುಣ್ಯವಂತನೇ ಈ ಕುಮಾರಿಗೆ ಪತಿಯಾಗುವನು. ಹೀಗೆಂದು ಸಿದ್ಧಾದೇಶವಾಗಿದೆ.

ವ॥ ಈ ಪುಣ್ಯವತಿಯು ಆ ಪಟ್ಟಣಕ್ಕೆ ಅರಸಾದ ಮಗಧಾಧಿಪತಿಯ ಮಗಳು. ಶ್ಯಾಮಳೆಯೆಂದು ಈಕೆಯ ಹೆಸರು. ಈ ಕೋಮಲೆ ಇಂದು ನಿನಗೆ ಇದಿರುಗೊಳ್ಳುವಂತೆ ಒಂದು ಈ ಉದ್ಯಾನದಲ್ಲಿ ವಿನೋದದಿಂದ ಆಡುತ್ತಿದ್ದು, ನೀವು ಈ ಮರದಡಿಗೆ ಬಂದುದನ್ನು

---

೧ ಳ್ದು ಬಂದಿಪಿ (ಕಾ). ೨ ಯದೆ (ಕಾ), ಯನೆ (ಕ). ೩ ಸೆ (ಕ, ಮ, ಪ). ೨ + ಯಂ (ಕ, ಪ). ೩ ಬಿಡುಯಿಂದೆಂ (ಕಾ). ೪ ನಂ (ಕ, ಮ, ಪ). ೫ ಯ್ತೆಂತೆ (ಕ, ಪ). ೬ ರಾ (ಕ, ಪ). ೭ ದರ್ಾವೇ (ಕ, ಪ). ೮. ಬೋ (ಕ, ಮ, ಪ).

ಬಿನದದಿನಾಡುತ್ತುಮಿರ್ದು ನೀಮೀ[೧] ಮರದಡಿಯೊಳ್ ಬಂದಿರ್ದುದುಮನೀ ತರುಣ [೨]ತರುಚ್ಛಾಯೆ ಪ್ರತಿ[೨]ಚ್ಛಾಯೆಯಂತೆಯುಂ ನೆಲದೊಳ್ ನಾಂಟಿ ಬೇಱೂರಿದಂತೆಯುಮೆತ್ತಲುಂ ತೊಲಗದಿರ್ದುದುಮಂ ಕಂಡು ಆದೇಶಪುರುಷನೆಂದಱಿದು ಪರಿತಂದು ಪೇೞ್ದ ವನಪಾಲಕಂಗೆ ಪಸಾಯನ[೩]ಮನಿತ್ತು ಮತ್ತಮಿದಂ ತಮ್ಮ ಬೊಪ್ಪಂಗಱಿಪಲ್ ಕಳುಪಿ ಕೆಳದಿಯರ ನೂಪುರ ಕ್ವಣಿತಮೆ ಬದ್ದವಣಮಾಗೆ ರಾಗದಿಂ ಬಂದಿಲ್ಲಿ ಬಸಂ[೪]ತನ[೪] ಮನೆಗೆ ಬಿರ್ದುವಂದ ಕಾಮದೇವನಂತೆ ಬೞಲ್ದು ಬೆಂದು ಬೆಱಗಾಗಿ ವಿಶ್ರಮಿ[೫]ಸೆ ಮಿಸುಗು[೫]ತ್ತಿರ್ದ ನಿನ್ನ [೬]ಪಥ[೬] ಪ್ರಚಾರಾತ್ಕರುಣ ಸರಸಿಜದ ಸಿರಿಯೆ ಸನ್ನಿದಮಾದಂತೆ ಸಮ್ಮದಮಪ್ಪುಕೆಯ್ದು

ಚಾಮರಮಿ[೭]ಕ್ಕುವಂತೆ ತನುಚಂಪಕಮಾಲಿಕೆಯಿಂ ಮುಸುಂಕುತುಂ
ಪ್ರೇಮವಿಳೋಕಮೆಂಬ ಪೊಸ ಮಾವಿನ ಪಚ್ಚಡದಿಂ, ಕರಾಬ್ಜ ಘ
ರ್ಮಾಮೃತದಿಂದೆ ನಿನ್ನಡಿಗಳಂ ನಯದಿಂದಮೆ ಪೊಸುತಿರ್ದಪ[೮]ಳ್
ಶ್ಯಾಮಳೆಪುಷ್ಪಕೋಮಳೆಯಿದೀ[೯]ಕೆಯ ವೃತ್ತಕಮೇ[೧೦]ಕೆ ಬೆರ್ಚುವೈ ೬೭

ಕೀರ [೧೧]ಕಳ[೧೧]ಸ್ವನಂ[೧೨] ಮಧುರ ಮಂಗಳಪಾಠಕ ನಾದಮಾಗೆ ಝೇಂ
ಕಾರಿಸುತಿರ್ಪ ತುಂಬಿಗಳ ಗಾವರಮೊಪ್ಪುವ ಗೇಯಮಾಗೆ ಕೆ
ಯ್ವಾರದಿನೀಕೆಯಂ ನಿನಗೆ ಚಿತ್ತಭವಾಗ್ನಿಯೆ ಸಾಕ್ಷಿಯಾಗೆ ಕೆಯ್
ನೀರೆಱೆವಂದದಿ ಸೊನೆಯ ನೀರ್ಸುರಿದಪ್ಪುದು[೧೩] ನೋಡೆ[೧೪] ಕೋಕಿಳಂ ೬೮

ಈ ಮರದ ನೆರಳು ಮರದ ಪಡಿನೆಳಲಂತೆ ನೆಲದಲ್ಲಿ ನಟ್ಟು ಬೇರೂರಿದ ಹಾಗೆ ಎತ್ತಲೂ ಸರಿಯದಿದ್ದುದನ್ನು ಕಂಡು, ನೀನೇ ಆದೇಶ ಪುರುಷನೆಂದು ಅರಿತು ಓಡಿ ಬಂದು ಹೇಳಿದ ವನಪಾಲಕನಿಗೆ ಮೆಚ್ಚಿಗೆಯ ಬಹುಮಾನವಿತ್ತು, ಈ ವಿಷಯವನ್ನು ತಮ್ಮ ತಂದೆಗೆ ತಿಳಿಸಲು ಆಳನ್ನು ಕಳಿಸಿ, ಸಖಿಯರ ಅಂದುಗೆ ದನಿಯೆ ಮಂಗಳವಾದ್ಯ ಧ್ವನಿಯಾಗಲಾಗಿ ಸಂತೋಷದಿಂದ ಬಂದು ಇಲ್ಲಿ ವಸಂತನ ಮನೆಗೆ ಅತಿಥಿಯಾಗಿ ಬಂದ ಕಾಮದೇವನಂತೆ ನೀನು ದಣಿದು ವಿಶ್ರಾಂತಿ ಪಡೆಯುತ್ತಿರುವಾಗ ನಡೆದು ನಡೆದು ಕಂಡು ಗೆಂಪಾದ ಪಾದಕಮಲಗಳ ಶೋಭೆಯನ್ನು ಕಂಡು ಸಂತೋಷಪಟ್ಟು -

೬೭. ತನ್ನ ದೇಹವೆಂಬ ಚಂಪಕಮಾಲೆಯ ಸುಗಂಧದಿಂದ ಚಾಮರವಿಕ್ಕುತ್ತಲೂ ಪ್ರೇಮ ದೃಷ್ಟಿಯೆಂಬ ಹೊಸ ಮಾವಿನ ಹಚ್ಚಡವನ್ನು ಪುಷ್ಪಕೋಮಲೆಯಾದ ಈ ಶ್ಯಾಮಲೆ ಹಸ್ತಕಮಲಗಳ ಬೆವರೆಂಬ ಅಮೃತದಿಂದ ನಿನ್ನ ಪಾದಗಳನ್ನು ನಯವಾಗಿ ಲೇಪಿಸುತ್ತ ಇದ್ದಾಳೆ. ಇದು ಈಕೆಯ ಸಂಗತಿ. ಏಕೆ ಬೆಚ್ಚುವೆ?

೬೮. ಗಿಳಿಗಳ ಮಧುರಧ್ವನಿಯೆ ಮಂಗಳ ಪಾಠಕರ ನಾದವಾಗಿ, ಝೇಂಕರಿಸುವ ದುಂಬಿಗಳ ಗುಂಜಾರವವೆ ಶೋಭಾನೆಯ ಗೀತವಾಗಿ, ಕೋಗಿಲೆಗಳು ನೋಡುತ್ತಿರಲಾಗಿ

---

೧ + ಮಾ (ಪ). ೨ X (ಕಾ). ೩ X (ಕ, ಪ). ೪ ತಂ ತನ್ನ (ಕ, ಪ). ೫ ಸು (ಮ). ೬ X (ಕ), ಪದ (ಪ, ಮ), ೭ ವಿ (ಕ, ಪ). ೮ ವ (ಮ). ೯ ದೇ (ಮ). ೧೦ ವೇ (ಕ). ೧೧ ಕರ (ಕ, ಪ). ಕುಳ (ಕಾ). ೧೨ ರಂ (ಕ, ಪ). ೧೩ ದು (ಕ, ಪ). ೧೪ ಡೆ (ಕ, ಪ).

ವ|| ಅನ್ನೆಗಂ

ಹರಿಸೈನ್ಯಂ ಹಸ್ತಿಸೈನ್ಯಂ ಪಱೆ ಪಱಿವಿ[೧]ಗೆ ಪಿಂಛಾತಪತ್ರೋತ್ಕರಂ ಚಾ
ಮರಮೆಯ್ತ[೨]ಪೊರ್ಱುರ್ಱು[೩]ರಂ ಕನ್ನಡಿ ತಳಿರ್ಗಳಸಂ ಪ[೩]ರ್ಪವರ್ಬರ್ಪ[೪]ಸತ್ತೆಂ[೪]
ಡಿರ ತಂಡಂ ಪೆಂಡವಾಸಂ ಪಡಿಯಱರಣುಗಾಳ್ ಮಂತ್ರಿಗಳ್ ತಂತ್ರಪಾಳ
ಬೆರಸಿಂದ್ರಂ ಬರ್ಪವೋಲ್ಮಾಗಧ[೫]ನಧಿಕಬಳಂ ಬಂ[೬]ದನಾನಂದದಿಂದಂ ೧೯

ವ|| ಬಂದು ಪೊಸ ಮಾವೆ ಪಸುರ್ವಂದರಾ[೭]ಗೆ ಮದುವೆ ಮಾಡಿ ತನ್ನ ಮಗಳು ಮನಳಿಯನುಮನೊಡಗೊಂಡು ಪೋಗಿಯರ್ಧರಾಜ್ಯಮಂ ಬೞು[೮]ವಟಿ ಗೊಟ್ಟು ಸುಖದಿನಿರೆ

ಅಲಸಿಕೆ ನೋಟದೊಳ್ತಣಿವು ಕೂಟದೊಳುಕ್ಕೆವಮಱ್ಕೆಱೊಳ್ ಚಲಂ
ಗೆ[೯]ಲವಿನೊಳಪ್ಪಿನೊ[೧೦]ಳ್ದರವುರುಂಟಿ ಮಕಂ[೧೦] ಬೆಸಕೆಯ್ವ ಭಂಗಿಯೊಳ್
ಪೊಲೆಗೆಳೆ ಸೋ[೧೧]ಲದೊಳ್ ಪದಿರೊಳೊತ್ತಿದಿರೊಳ್ ಪಲವಾತು ಮಾನದೊ
ಳ್ಕಲಿತನಮಾಗದಂತಬಲೆ ವರ್ತಿಸಿದಳ್ಕವಿತಾವಸಂತನೊಳ್ ೨೦

ಮದನಾಗ್ನಿಯೆ ಸಾಕ್ಷಿಯಾಗಲು ಸಂತೋಷದಿಂದ ಈಕೆಯನ್ನು ನಿನಗೆ ಧಾರೆಯೆರೆದು ಕೊಡುವಂತೆ ಸೊನೆಯ ನೀರು ಸುರಿಯುತ್ತಿದೆ ನೋಡು."

ವ|| ಹೀಗೆ ಆಕೆ ಹೇಳುತ್ತಿರುವಷ್ಟರಲ್ಲಿ -

೧೯. ಕುದುರೆ ಪಡೆ, ಆನೆಪಡೆ, ವಾದ್ಯ, ಧ್ವಜ, ನವಿಲ್ಗರಿಯ ಸತ್ತಿಗೆಗಳು, ಚಾಮರ, ಒಜ್ಜರ, ಕನ್ನಡಿ ತಳಿರ ಕಳಸಗಳು, ಸ್ತುತಿಪಾಠಕರು, ವಿಲಾಸಿನಿಯರು, ಅಂತಃಪುರಸ್ತ್ರೀಯರು, ಪ್ರತೀಹಾರಿಗಳು, ಆಪ್ತಸೇವಕರು, ಮಂತ್ರಿಗಳು, ಸೇನಾಪತಿಗಳು - ಇವರೆಲ್ಲರನ್ನೊಡಗೂಡಿ ದೇವೇಂದ್ರನೆ ಬರುವಂತೆ ಅಧಿಕ ಬಲಶಾಲಿಯಾದ ಮಾಗಧರಾಜನು ಆನಂದದಿಂದ ಅಲ್ಲಿಗೆ ಬಂದನು.

ವ|| ಹಾಗೆ ಬಂದು, ಹೊಸ ಮಾವಿನ ಮರವೆ ಹಸಿರ ಹಂದರವಾಗಲಾಗಿ, ಮದುವೆ ಮಾಡಿ ತನ್ನ ಮಗಳನ್ನು ಅಳಿಯನನ್ನೂ ಒಡಗೊಂಡು ಹೋಗಿ ಅರ್ಧರಾಜ್ಯವನ್ನು ಅವರಿಗೆ ಬಳುವಳಿಯಾಗಿ ಕೊಟ್ಟು ಸುಖದಿಂದ ಇರಲಾಗಿ -

೨೦. ನೋಟದಲ್ಲಿ ಅಲಸಿಕೆಯೂ ಕೂಟದಲ್ಲಿ ತೃಪ್ತಿಯೂ ಪ್ರೀತಿಯಲ್ಲಿ ವಂಚನೆಯೂ ಗೆಲವಿನಲ್ಲಿ ಛಲವೂ ಅಪ್ಪುಗೆಯಲ್ಲಿ ಶಿಥಿಲತೆಯೂ ಸೋಲದಲ್ಲಿ ಹೀನತೆಯೂ ಹದಿರಿನಲ್ಲಿ ಆಧಿಕ್ಯವೂ ಇದಿರಿನಲ್ಲಿ ಹಲವು ಮತೂ ಮುನಿಸಿನಲ್ಲಿ ಬಂಟತನವೂ ಆಗದಂತೆ ಕವಿತಾವಸಂತನಾದ ಆ ಕುಮಾರನೊಡನೆ ಆಕೆ ನಡೆದುಕೊಂಡಳು.

---

೧ ಯಿ (ಕ, ಮ, ಪ). ೨ ಪೊರ್ಱೆಜ (ಕ, ಪ) ಪೊರ್ಜ್ಜ (ಮ). ೩ ಪ (ಕಾ). ೪ ಸತ್ತೆಂ (ಕ, ಪ). ೫ ಧಿ (ಕಾ). ೬ ದಂ (ಕ). ೭ ಮಾ (ಪ), ಲಾ (ಮ). ೮ ಟಿ (ಕಾ). ೯ ನೆ (ಪ). ೧೦ ಳಧರಮಿಂಟಿಮತಂ (ಕ), ಳ್ದರ..... ಮಿಂಟಿಮತಂ (ಪ), ಳ್ದಳವುರಂಟಿ ಮಕಂ (ಮ). ೧೧ ಸಾ (ಕಾ).

ಚುಂಬನಮಪ್ಪು ಚಪ್ಪರಣೆ ಬೇಡುವ ಬಕ್ಕುಡಿ ಕಾಯ್ಪು ಕೂಡುವ
ಟ್ಟುಂಬರಿಯೆಂಬಿವಾಗೆ ಸಲೆ ತನ್ನವು ನಲ್ಲನ ಬಾಯದಂಬುಲಂ
ತಂಬುಲಮಿಕ್ಕಿದಣ್ಪು[೧]ತನಗಣ್ಪು[೧] ತುಱುಂಬಿದ ಪೂವೆ ಪೂವುಮು[೨]
ಟ್ಟಂಬರಮಂಬರಂ ನಿರುತಮಾಗಿರೆ ಕೊಂಡಳನಂಗಸೌಖ್ಯಮಂ ೭೧

ವ|| ಅಂತ[೩]ಪ್ಪುಕೆಯ್ದೊಂ[೩]ದು ದಿವಸಂ ವಿಷಮ ನೃತ್ಯಶ್ರಮ[೪]ಶ್ರಾಂತೆ[೪]ಯಾಗಿ

ಉಟ್ಟ ದುಕೂಲಮುಟ್ಟವೊಲತಿಸ್ಫುಟಮಾಗಿರೆ ತೊಟ್ಟ ಕುಪ್ಪಸಂ
ತೊಟ್ಟವೊಲಿಟ್ಟುದಿಟ್ಟವೊಲಣಲ್ ನಱುದಂಬುಲದಿಂದೆ ಬೀಗೆ ಸುಯ್
ಸು[೫]ಟ್ಟುರಿಡ[೫]ಲ್ಕೆ ಸಾ[೬]ರ್ತರೆ ಕಚಂ ಮೊಗದೊಳ್[೭]ಐದಿಂ[೭]ದೆ ತನ್ನ ಮೇ
ಲಿಟ್ಟೆಡದೋಳ್[೮]ನತ್ತ ಮೊಗಮಾಗಿಯೆ ನಿದ್ರೆಯೊಳಿರ್ದ ನಲ್ಲಳಂ ೭೨

*ವ|| ಕಂಡು ತಾಂ ನೆವಕಾರನಪ್ಪ ಕಾರಣಮೇವಯ್ಸಿ

ಶ್ರ[ವ[೯]]ದಿಂ ಭಾಳಕ್ಕೆ ಬಾನಲ್ವರಿದ ಕುರುಳ ಕಸ್ತೂರಿಕಾರೇಣುಜಾಳ
ದ್ರವಮಂ ಕಂಡರ್ದಿ[೧೦]ಕೊಂಡೊಳ್ನನೆಯ ಮೊನೆಯೊಳಾಂ ಬಂದಪೆಂ ಪೋಗಿ ತಾನ
ನ್ನೆವರಂ ನಿಶ್ಚಿಂತಮಿರ್ಕೆನಲಸಳೆ[೧೧] ನೆಲಸಿರ್ಪಾಗಳೆಂದಾ ಸುಕೇಶಿ
ಶ್ರವಣಶ್ರೀಪತ್ರದೊಳ್ ತಾಂ ಬರೆದಱಿಯದವೋಲ್ ಪೋದನಲ್ಲಿಂ ಕುಮಾರಂ ೭೩

೭೧. ಚುಂಬನ, ಅಪ್ಪುಗೆ, ಚಪ್ಪರಿಸುವಿಕೆ, ಬೇಡಿಕೆ, ತಲ್ಲಣ, ಉದ್ವೇಗಗೊಂಡು ಕೂಡುವ ಕೂಟ- ಈ ಎಲ್ಲವೂ ಒಂದರ ಹಿಂದೊಂದು ನಡೆಯುವ ರಭಸದಲ್ಲಿ, ನಲ್ಲನ ಬಾಯ ತಂಬುಲವೆ ತನ್ನ ತಾಂಬೂಲ, ಅವನ ದೇಹಕ್ಕೆ ಬಳಿದ ಸುಗಂಧ ಲೇಪವೆ ತನ್ನ ಲೇಪನ, ಅವನು ಮುಡಿದ ಹೂವೆ ತನಗೆ ಹೂವು, ಅವನು ಉಟ್ಟ ವಸ್ತ್ರವೆ ತನಗೆ ವಸ್ತ್ರವಾಗಲಾಗಿ ಆಕೆ ನಿರಂತರವಾಗಿ ಮನ್ಮಥಸೌಖ್ಯವನ್ನು ಅನುಭವಿಸಿದಳು.

ವ|| ಹೀಗೆ ಇರುತ್ತ ಒಂದು ದಿವಸ ನೃತ್ಯಮಾಡಿ ದಣಿದವಳಾಗಿ -

೭೨. ಉಟ್ಟ ರೇಷ್ಮೆ ಸೀರೆ ಉಟ್ಟಂತೆ ತೊಟ್ಟ ಕುಪ್ಪಸ ತೊಟ್ಟಂತೆ ಸ್ಫುಟವಾಗಿರಲಾಗಿ, ಬಾಯಲ್ಲಿಟ್ಟುಕೊಂಡ ಸುಗಂಧ ತಾಂಬೂಲ ಇಟ್ಟುದು ಇಟ್ಟಂತೆ ಬಾಯಲ್ಲಿ ಉಬ್ಬಿಕೊಂಡಿರಲಾಗಿ, ಉಸಿರು ಏರಿಳಿಯುತ್ತಿರಲಾಗಿ, ಮುಂಗುರುಳು ಹಣೆಯ ಮೇಲೆ ಚೆಲುವಾಗಿ ಹರಡಿಕೊಂಡಿರಲಾಗಿ, ತನ್ನ ಮೇಲೆ ಎಡದೋಳನ್ನಿಟ್ಟು ಅತ್ತ ಮುಖಮಾಡಿಕೊಂಡು ನಿದ್ರಿಸುತ್ತಿರುವ ನಲ್ಲೆಯನ್ನು

ವ|| ಕಂಡು, ತಾನು ನೆವಕಾರಣನಾಗಿದ್ದುದಕ್ಕೆ ಜುಗುಪ್ಸೆಗೊಂಡು -

೭೩. ಶ್ರಮದಿಂದ ಹಣೆಯ ಮೇಲೆ ಹರಡಿಕೊಂಡ ಕೂದಲಿನ ಕಸ್ತೂರಿ ಹುಡಿಯ ದ್ರವದಲ್ಲಿ ಒಂದು ಒಳ್ಳೆಯ ಮೊಗ್ಗಿನ ತುದಿಯನ್ನು ಎದ್ದಿಕೊಂಡು "ನಾನು ಹೋಗಿ ಬರುವೆನು.

---

೧ ತುಱುಬಿಂಗೆ (ಕ, ಪ). ೨ ವು (ಕಾ). ೩ ಪ್ಪಾಕೆಯೊಂ (ಕಾ, ಮ). ೪ ಶ್ರಮತೆ (ಮ), ಶ್ರಥೆ (ಕ, ಪ). ಟ್ಟಿರಿಡ (ಕ), ಟ್ಟಿದಿರ (ಪ). ೫ ಸೋ (ಕ, ಮ, ಪ). ೬ ಳೊ_ತ್ತ (ಪ). ೭ ಎಂ (ಕಾ, ಮ). ೮ ಳ್ತ (ಮ). * ಈ ವಚನವು ಕ, ಪ ಪ್ರತಿಗಳಲ್ಲಿಲ್ಲ. ೯ ಮ (ಕ, ಕಾ, ಮ). ೧೦ ಟ್ಟ್ದಿ (ಕಾ). ೧೧ ೞ (ಕ, ಮ, ಪ).

ವ॥ ಅಂತು ಶರೀರದಿಂ ಜೀವಂ ಪೊಱಮಟ್ಟು ಪೋಪಂತಾರುಮಱಿಯ[೧]ಲೀಯ[೧]ದೆ ಪೊಱಮಟ್ಟು ಪೋಗೆವೋಗೆ

ಶ್ರವ[೨]ದಂಭೋಧಾರಧಾರಾ[೨]ಗೃಹಮಚಳ ಘನಾಸಾರನಾಸೀ[೩]ರ ಝುಂಝಾ
ಪ[೪]ವನವ್ಯಾ[೫]ಧೂತ ಭೂಜವ್ಯಜನಮತುಳತಾಪಿಚ್ಛಪಿಂಛಾತಪತ್ರಂ
ಪ್ಲವಗಪ್ಲುತ್ಯುತ್ಪತದ್ವಿಃ [೬]ಕಿರನಿಕರ ಗುರು[೬]ಚ್ಛನ್ನ ಶಾ[೭]ಖಾಂತ[೭] ರಾಳಂ
ರವಿರುಕ್ಸಂಧುಕ್ಷಿತಾಂಗ ಕ್ಷಿತಿಪತಿತನಯಂಗಾಯ್ತರಣ್ಯಂ ಶರಣ್ಯಂ ೭೪

ಮಳಯಜಮಂ ಬಳಸಿದ ಫಣಿ
ಕುಳಮಂ ಕೇಕಿಗಳ ಕಳರವಂ ಸೋ[೮]ದುದು ಭೂ
ತಳನಾಥರನೋಲಗಿಸುವ
ಖಳರುಂ ಸೋವಂತೆ ಸುಕವಿ ಸೂ[೯]ಕ್ತಿಕಳಾಪಂ ೭೫

ಸೋಗೆಯ ಸೊಗಯಿಪ ದನಿಗಂ
ತಾ[೧೦]ಗುವ ಕೀಚಕದ ರುತಿ[೧೧]ಗಮೊಡ[೧೨]ಸೋಲ್ತು ಕರಂ
ಭೋ[೧೩]ಗಿಕುಲಮೊಲೆದು ತಲೆಯಂ
ತೂಗಿದುದರಿ[೧೪]ಮಿತ್ರವರ್ಜಿತಂ ಗುಣಮಲ್ತೇ ೭೬

ಅಲ್ಲಿಯವರೆಗೆ ನಿಶ್ಚಿಂತವಾಗಿರು ಬೇಸರ ಪಡೆಬೇಡ" ಎಂದು ಆ ಚೆಲುವೆಯ ಕರ್ಣಪತ್ರದಲ್ಲಿ ಬರೆದಿಟ್ಟು, ಅವಳಿಗೆ ಅರಿವಾಗದಂತೆ ಕುಮಾರನು ಅಲ್ಲಿಂದ ಹೊರಟು ಹೋದನು.

ವ॥ ದೇಹದಿಂದ ಜೀವ ಹೊರಬಿದ್ದು ಹೋಗುವಂತೆ ಯಾರಿಗೂ ತಿಳಿಯಗೊಡದೆ ಹೀಗೆ ಹೊರಟು ಹೋಗಹೋಗುತ್ತ -

೭೪. ಮಳೆಸುರಿಸುತ್ತಿರುವ ಮೋಡಗಳ ಧಾರಾಗೃಹದಿಂದಲೂ ಬೆಟ್ಟದ ಮೇಲಿಂದ ಚಂದನ ಸುಗಂಧವನ್ನು ಮುಂದಿಟ್ಟುಕೊಂಡು ಬೀಸುವ ಗಾಳಿಗೆ ತೂಗಾಡುವ ಮರಗಳೆಂಬ ಬೀಸಣಿಕೆಗಳಿಂದಲೂ ಅಸಮಾನವಾದ ಹೊಂಗೆಮರಗಳೆಂಬ ನವಿಲುಗರಿ ಸತ್ತಿಗೆಗಳಿಂದಲೂ, ನೆಗೆದಾಡುವ ಕೋತಿಗಳಿಂದ ಹಾಗು ಕುಪ್ಪಳಿಸುವ ಪಕ್ಷಿಗಳ ಹಿಂಡಿನಿಂದ ತುಂಬಿ, ದಟ್ಟವಾದ ಮರದ ನೆಳಲಿನಿಂದ ಶೋಭಿಸುತ್ತಿರುವ ಅರಣ್ಯವು, ಬಿಸಿಲಿಗೆ ಬೆಂದು ಆಯಾಸಗೊಂಡ ಆ ರಾಜಕುಮಾರನಿಗೆ ಆಶ್ರಯವಾಯಿತು.

೭೫. ಅರಸರನ್ನು ಓಲೈಸುವ ನೀಚರನ್ನು ಸತ್ಕವಿಯ ಸೂಕ್ತಿಗಳು ಹೊಡೆದಟ್ಟುವಂತೆ ಚಂದನ ವೃಕ್ಷಗಳಿಗೆ ಸುತ್ತಿಕೊಂಡಿದ್ದ ಸರ್ಪಗಳನ್ನು ನವಿಲುಗಳು ಮಧುರಧ್ವನಿ ಬೆದರಿಸಿ ಓಡಿಸಿತು.

೭೬. ನವಿಲಿನ ಸೊಗಸಾದ ದನಿಗೂ ತಾಗುವ ಬಿದಿರಿನ ದನಿಗೂ ಒಡನೊಡನೆ ಮನಸೋತು ಹಾವುಗಳು ಮೆಚ್ಚಿ ತಲೆದೂಗಿದುವು. ಗುಣ ಗ್ರಹಣಕ್ಕೆ ಶತ್ರು ಅಥವಾ ಮಿತ್ರ ಎಂಬ ಭೇದಭಾವವಿರುವುದಿಲ್ಲ. ಅಲ್ಲವೆ?

---

೧ X (ಮ). ೨ ದಾಮ್ರೋದಾರದಾರಾ (ಕಾ. ಮ). ೩ ನೀ (ಕ, ಮ, ಪ). ೪ ಷ (ಕಾ). ೫ ವೋ (ಮ). ೬ ಕಿರಕರಗರುತ (ಕ, ಪ). ೭ ಖಾಳ್ತ (ಕಾ). ೮ ಪೋ (ಮ). ೯ ಶೂ (ಕಾ). ೧೦. ತಾ (ಕ, ಮ, ಪ). ೧೧ ಚಿ (ಮ). ೧೨ ದಲು (ಮ). ೧೩. ಬಾ (ಕ, ಮ, ಪ). ೧೪ ತಿ (ಮ).

ಬಯಸಿ ರಸೆಯಹಿಗಳಂ ಮನ
ಮು[1]ಯೆ ನೆಲದೊಳೆ ಪೊಕ್ಕು ಬರ್ಹಿಣಾವಳಿಯ ಶಿಖಾ
ವಯವಮಿವೆ ತೋಱಿದಪುವೆನೆ
ಮಯೂರ ಶಿಖಿನಿಕರಮೆಸೆದುವಾ ಕಾನನದೊಳ್ ೭೭

ಆಹಿತ ಬಹು ಬದರದಳ
ವ್ಯೂ[2]ಹ ತಿರೋಹಿತ ಬುಭುಕ್ಷಿತೋತ್ತಾನ ಮುಖೋ
ಗ್ರಾಹಿ ಶಿರೋರುಣಮಣಿಯಂ
ಹಾ ಹಾ ಪಣ್ಗೆತ್ತು ಪಾಯ್ದುದೊಂದು ವಿಹಂಗಂ ೭೮

ಆಡಗೆಂದೆಲವದ ಪೂವಿಂ[3]
ಗಡಹಡಿಸಿಯೆ ಪಾಯ್ದು ಕಾಯ್ದು ಕಾದಿದುವೊಡಲಂ
ದಡ[4]ಗಡಗಪ್ಪಿ[5]ನಮೆಱಕೆಗ
ಳುಡಿವಿನೆಗಂ ಕಣ್ಗಳೊಡೆವಿನಂ ಕಾಕಂಗಳ್ ೭೯

ಅಡವಿಯ ಖಗನಿಕ[5]ರದ[6] ಬೞಿ
ವಿಡಿದುಱ[7]ಯಱಿಯಟ್ಟಿ ಪಿಡಿಯಲಾಱದೆ ಕಡುಪಿಂ
ಗುಡು ಗುಡು ಗುಡೆಂದು ಗಿಡಿ[8]ಗಂ
ಕೆಡೆದುದು ಗಱಿಯುಡಿಯೆ ಪೊಡ[9]ದು ತನ್ನಯ[10] ನೆೞಲಂ ೮೦

೭೭. ಅಧೋಲೋಕದ ಸರ್ಪಗಳನ್ನು ಬಯಸಿ ನೆಲದೊಳಗೆ ಹೊಕ್ಕ ನವಿಲುಗಳ ತಲೆ ಮಾತ್ರ ಮೇಲೆ ತೋರುತ್ತಿರುವೆಯೇನೊ ಎಂಬಂತೆ ಆ ಕಾಡಿನಲ್ಲಿ ನವಿಲುಗಳು ತಲೆಯೆತ್ತಿ ಹಿಂಡುಹಿಂಡಾಗಿ ತೋರಿದುವು.

೭೮. ಎಲಚಿಮರದ ಎಲೆಗೊಂಚಲಲ್ಲಿ ಮೈಯಡಗಿಸಿಕೊಂಡು ಹಸಿದು ಹೆಡೆಯನ್ನೆತ್ತಿಕೊಂಡಿರುವ ಉಗ್ರಸರ್ಪದ ಹೆಡೆಯಲ್ಲಿ ಕೆಂಪಗೆ ಹೊಳೆಯುತ್ತಿರುವ ರತ್ನವನ್ನು ಕಂಡು ಅದೊಂದು ಹಣ್ಣೆಂಬ ಭ್ರಮೆಯಿಂದ ಅಯ್ಯೊ! ಪಕ್ಷಿಯೊಂದು ಎರಗಿತು.

೭೯. ಬೂರುಗದ ಹೂವನ್ನು ಮಾಂಸವೆಂದು ಭ್ರಮಿಸಿ, ಅದರ ಮೇಲೆ ಎರಗುವ ಕಾಗೆಗಳು ನನಗೆ ತನಗೆಂಬ ಏರಾಟದಲ್ಲಿ ರೆಕ್ಕೆ ಮುರಿದು ಮೈಖಂಡ ಗಿಜಿಗಿಜಿಯಾಗುವವರೆಗೆ ಕಾದಾಡಿದುವು.

೮೦. ಅಡವಿಯ ಹಕ್ಕಿಗಳ ಹಿಂಡನ್ನು ಅನುಸರಿಸಿ, ಬೆನ್ನಟ್ಟಿಹೋದರೂ ಒಂದನ್ನು ಕೂಡ ಹಿಡಿಯಲಾರದೆ, ರೋಷದಿಂದ ಗಿಡುಗವೊಂದು ರೆಕ್ಕೆ ಮುರಿಯುವಂತೆ ತನ್ನ ನೆಳಲಿನ ಮೇಲೆಯೆ ಅಪ್ಪಳಿಸಿ ಬಿದ್ದಿತು.

---

೧ ಮೆ (ಪ). ೨ ವ್ಯಾ (ಕ). ೩ ವಿಂ (ಪ). ೪ ರ (ಮ). ೫ ಪ್ಪ (ಕ, ಮ, ಪ). ೬ ರಂ (ಕ, ಪ). ೭ ಱಿ (ಕ, ಮ, ಪ). ೮ ಡ (ಪ). ೯ ದೆ (ಕ, ಪ). ೧೦ ಯ (ಕ, ಮ, ಪ).

ಅರ್ಕಾಂಶುಗೆ ಪುಗಲಿಲ್ಲದೆ
ಸೀರ್ಕರಡಿಯ ಕಡುಪಿನಂದದಡವಿಯ ತಮಮಂ
ಮಾರ್ಕೊಂಡು ಸುಟಿವ ಕಾಡೆಳ
[೧]ವೆರ್ಕಿ[೧]ನ ಕಣ್ಣಡೆವ ಸೊಡರ್ಗಳೆನೆ ಜಲಜಲಿಕುಂ ೮೧

ಪೊರೆವಿಡಿದು ಪೊಕ್ಕ ಪಾವಿನ
ಪೆರೆಯಂ ಪೆತ್ತೊಂತಿಯೊಂದು ಪರಿತರೆ ತಿರಿದೇಂ
ಸರಟಶತಮೋಡಿ ಪೊಕ್ಕುವು
ಸುರನಹಿಂಗೆತ್ತುದಿರ್ದ ಖದಿರ ಬದರೋದರಮಂ ೮೨

ಗಿಡು ಪಿಡಿಯೆ ತನ್ನ ಬಾಲಂ
ತೊಡರ್ದೊಡೆ ಪರಿತಪ್ಪ ಬೇಗೆಗೋ[೨]ಡುವ ಚಮರಂ
ಬಿಡಿಸಿದಪೆನೆಂದು ನಿಂದುದು[೩]
ಕಡು ಲೋಭಂ ಜವನ ಬಂದಿಯೋ ಬಂಧನಮೋ ೮೩

ಅಡಸಿ ಬರೆ ಶಬರನುಡುಗಿದು
ದುಡು ಕಣ್ಣಂ ಮುಚ್ಚಿ ಪರಿಯನಾಗಡೆ ಗಡ ಕ
ರ್ದಡಿಗನ ಕಣ್ಣೊಳೆ ಪೂವಿನ
ಪುಡಿ ಪೊಕ್ಕುದು ಮಾ[೪]ರುತೇರಿತಂ[೪] ಕಾನನದೊಳ್ ೮೪

೮೧. ಸೂರ್ಯಕಿರಣಗಳಿಗೆ ಅವಕಾಶವಿಲ್ಲದಂತೆ ದಟ್ಟವಾಗಿ, ಸೀರ್ಕರಡಿಯಂತೆ ಕಡುಗಪ್ಪಾದ ಅಡವಿಯ ಕತ್ತಲೆಯನ್ನು ಪ್ರತಿಭಟಿಸಿ ಸುಳಿದಾಡುವ ಕಾಡುಬೆಕ್ಕಿನ ಕಣ್ಣುಗಳು ದೀಪಗಳಂತೆ ತಳತಳಿಸುತ್ತಿದ್ದುವು.

೮೨. ಹುತ್ತಿನಲ್ಲಿ ಹೊಕ್ಕ ಹಾವಿನ ಪೊರೆಯನ್ನು ಹೊತ್ತುಕೊಂಡು ಒಂದು ಓತಿ ಬರಲಾಗಿ, ಅದನ್ನು ಕಂಡು ಹಾವೆಂಬ ಭ್ರಮೆಯಿಂದ ಹೆದರಿಕೊಂಡು ನೂರಾರು ಓತಿಗಳು ಬಿದಿರಿನ ಹೊದರನ್ನು ಎಲಚಿಯ ಪೊಟರೆಯನ್ನು ಹೊಕ್ಕು ಅಡಗಿಕೊಂಡುವು.

೮೩. ಕಾಡುಗಿಚ್ಚಿನಿಂದ ತಪ್ಪಿಸಿಕೊಂಡು ಓಡಿಹೋಗುವ ಚಮರ ಮೃಗವೊಂದರ ಬಾಲ ಗಿಡುವಿನಲ್ಲಿ ತೊಡಕಿಕೊಂಡಿತು. ಅದನ್ನು ಬಿಡಿಸಿಕೊಳ್ಳಬೇಕೆಂದು ಆ ಮೃಗ ಅಲ್ಲಿ ನಿಂತಿತು. ಮಹಾಲೋಭವೆಂಬುದು ಯಮನ ಸೆರೆಯೋ, ಬಂಧನವೊ?

೮೪. ಬೇಡನೊಬ್ಬನು ಅಟ್ಟಿಕೊಂಡು ಬರಲಾಗಿ ಉಡು ಅಡಗಿಕೊಂಡಿತು. ಬೇಡನು ಅದರೆಡೆಗೆ ಓಡದೆ ಕಣ್ಣು ಮುಚ್ಚಿಕೊಂಡನು. ಏಕೆಂದರೆ ಗಾಳಿಯಿಂದ ಎದ್ದ ಹೂವಿನ ಹುಡಿ ಬಂದು ಅವನ ಕಣ್ಣಲ್ಲಿ ಹೊಕ್ಕಿತ್ತು.

೧ ವೊಕ್ಕಿ (ಮ). ೨ ಗಾ (ಕ, ಪ). ೩ ರು (ಮ). ೪ ರು ತೇರುತುಂ (ಮ), ಱುತೇಱುತಂ (ಪ).

ಅಹಿಯ ವಿಷವಹ್ನಿ [೧]ನೆಗೆದ[೧]ಹಿ
ಗೃ[೨]ಹಮಂ ಪೀರ್ದುರ್ಚುವಚ್ಛಭಲ್ಲನ[೩] ಬಾಯಂ
ದಹಿಯಿಸಿ 'ಪಾಪೀ ಪಾಪೇ
ನ ಹನ್ಯತೇ'ಯೆಂಬ ನುಡಿಯನೇಂ ನಡೆಯಿಸಿತೋ ೮೫

ಮಾವಿನ ತಳಿರೊಳಗೆ [೪]ಮುಗು[೪]
ಳ್ಮಾವಿನ ಮೊಗಮು[೫]ಳಿಯೆ ಮಿಸುಪ ತೊಡೆ ನಡು ಜಘನಂ
ತೀವಿ ಮೊ[೬]ಲೆಯೆಂಬಿವು ವಸು
ದೇವನ ಕಣ್ಗಿತ್ತುವತುನುರಾಗೋದಯಮಂ ೮೬

ಮಗಮಗಿಸಿ ಕವಿವ ಮದಗಂ
ಪುಗಳ[೭]ನೆ ಪೊಗಟ್ವಂತೆ ಮೊರೆ[೮]ದು ಮುಸು[೯]ಱುವ[೯]ಮಱಿ[೧೦]ದುಂ
ಬಿಗಳಿಂ ಕೊರ್ವಿದ ಕತ್ತುರಿ
ಮಿಗಮಿರ್ಪವೊಲಿರ್ದುದೊಂದು ಗಂಧಗಜೇಂದ್ರಂ ೮೭

ತದುಕಿನ ಸರಳದ ಸಪ್ತ
ಚ್ಛದದಾಮ್ರದ ತಳಿರನುಡಿದು [೧೧]ಮೇಯದೆ[೧೧] ಕರಿ ಮೇ
ದುದು ವಿರಹಿಯಱಿಸಿ ಪೊಸ ವೇ
ಟದ [೧೨]ಪಿಡಿ[೧೨] ನಸುಮೇದು ಬಿಸುಟು ಪೋದೊಣದಳಿರಂ ೮೮

೮೫. ಹಾವಿನ ಹುತ್ತಿನಲ್ಲಿ ಮೂತಿಯಿಟ್ಟು ಹೀರುವ ಕರಡಿಮರಿಯ ಬಾಯನ್ನು ಹಾವಿನ ವಿಷದ ಬೆಂಕಿ ಹತ್ತಿಕೊಂಡು ಸುಟ್ಟು, "ಪಾಪಿ ಪಾಪದಿಂದಲೆ ಕೊಲೆಯಾಗುತ್ತಾನೆಂ"ಬ ಮಾತನ್ನು ಸ್ಪಷ್ಟಗೊಳಿಸಿತು.

೮೬. ಮಾವಿನ ತಳಿರಲ್ಲಿ ಹೂಗೊಂಚಲೆಂಬ ಮುಖ ಮರೆಯಾಗಿರಲಾಗಿ, ನುಣ್ಣಗಿರುವ ಆ ಮರದ ಭಾಗಗಳು ತೊಡೆ, ನಡು, ಜಘನ ಹಾಗು ತುಂಬಿದ ಮೊಲೆಗಳಂತೆ ವಸುದೇವನ ಕಣ್ಣಿಗೆ ಕಾಮರಾಗವನ್ನು ಒದಗಿಸಿದುವು. (ಅಡಗಿದ ಹೂಗೊಂಚಲು, ನಾಚಿಕೆಯಿಂದ ಮರೆಮಾಡಿಕೊಂಡ ಪ್ರಿಯತಮೆಯ ಮುಖದಂತೆಯೂ ತಳಿರುಗಳ ನುಣುಪಾದ ಕಾಂತಿ ಆಕೆಯ ತೊಡೆ ಮೊದಲಾದವುಗಳ ಕಾಂತಿಯಂತೆಯೂ ಅವನಿಗೆ ತೋರಿದುವು)

೮೭. ಗಮಗಮಿಸಿ ಹೊಮ್ಮುವ ಮದೋದಕದ ಸುಗಂಧವನ್ನು ಹೊಗಳಿ ಹಾಡುವಂತೆ ಮುಸುರಿಕೊಂಡಿರುವ ಮರಿದುಂಬಿಗಳಿಂದಾಗಿ ಇದೇನು ಕೊಬ್ಬಿದ ಕಸ್ತೂರಿ ಮೃಗವೊ ಏನೊ ಎಂಬಂತೆ ಗಂಧಗಜವೊಂದು ತೋರಿತು.

೮೮. ಆನೆ ಬೇಲದ, ಸರಳ ವೃಕ್ಷದ, ಏಳೆಲೆ ವಾಳೆಯ, ಮಾವಿನ ಚಿಗುರುಗಳನ್ನು ಹರಿದುಕೊಂಡು ಮೇಯದೆ, ವಿರಹಿಯಾದ ಗಂಡಾನೆಯು ಬೆದೆಗೆ ಬಂದ ಹೆಣ್ಣಾನೆಯೊಂದು ತುಸುವೆ ತಿಂದು ಬಿಸಾಕಿ ಹೋದ ಒಣ ಎಲೆಯನ್ನು ಹುಡುಕಿ, ಹುಡುಕಿ, ತಿಂದಿತು.

---

೧ ಗೆಂದ (ಕಾ). ೨ ಗ್ರ (ಪ). ೩ ವ (ಕ, ಮ, ಪ). ೪ ಮಗ (ಮ). ೫ ಮ (ಕಾ). ೬ ವೊ (ಕ, ಮ, ಪ). ೭ ಳೆ (ಕ, ಪ). ೮ ಱಿ (ಕ, ಪ). ೯ ಱಿದ (ಕಾ). ೧೦ ಱು (ಕಾ). ೧೧ ಮೆಯ್ದುದೆ (ಕ), ಮೆಯ್ದದೆ (ಪ), ಮೆಯ್ದೆ (ಮ). ೧೨ ಪೆಂಡಿ (ಕಾ).

ಮಧುಪರಿಮಳಮಂ ಕಾದುದು
ಸುಧೇನು ಪೇಚಕಮನೊಂದು ಮದಗಜಹಸ್ತಂ
ಮಧುಸಖನ ಬಯ್ತ ರತಿಧನ
ನಿಧಾನಮಂ ಕಾವ ಕಾಳಸರ್ಪನ ತೆಱದಿಂ ೮೯

ತಾಳಸ್ಥೂಳಕರಂ ತಮಾಳ ವಿಸರಚ್ಛಾಯಂ ಸುರೂಪಂ ಸು[೧]ವ
ಕ್ತ್ರಾಳೋಕಂ ಶುಭಬಿಂದು ಶುಭ್ರರದನಂ ದಾನಾರ್ದ್ರಗಂಡಸ್ಥಳಂ
ಲೀಳಾಯಾನನುದಗ್ರಪಲ್ಲವನದೇಂ[೨] ತಾನಾಯ್ತೊ ನೂತಕ್ಷಮಾ
ಶೀಳಂ ಕೇಸರಿಗಂ ನಿರೀಕ್ಷಣಸುಖಶ್ರೀಪಂಜರಂ ಕುಂಜರಂ ೯೦

ಗಜಮೊಂದಿರ್ದುದು ರೋಹಣಾಚಲದವೋಲ್ ತತ್ಪದ್ಮರಾಗಪ್ರಭಾ
ರಜಮಿರ್ಪಂತಿರೆ ತೋರ್ಪ ಪದ್ಮಪಟಲಂ ತಳ್ತೊಪ್ಪಿಯ್ಕೆ ನೀಳೋತ್ಪಳ
ವ್ರಜಮಿರ್ಪಂತಿರೆ ಮತ್ತಭೃಂಗಮಿಳಿತಂ ದಾನದ್ರವಂ, ವಾಳವಾ[೩]
ಯಜಮಿರ್ಪಂತಿರೆ ಕಣ್ಣ ಪೆ[೪]ರ್ಮಳೆಯೊಳಂ ಮೇಲ್ವಾ[೫]ಯ್ದಪಾಂಗಾಂಶುವಿಂ ೯೧

ನೇಱಲ ಪಣ್ತ ಕೊಂಬುಡಿದು ಬಿರ್ದವೊಲೊಟ್ಟದ [೬]ಸೀವರ[೬]ಕ್ಕೆ ಪಾ
ಯ್ದಾಱಡಿವಿಂಡಿನಿಂ ಮುಱಿದು ಸೂ[೭]ಸಿದ ಮಾವಿನ ಕೊಂಬು ಮೇಲ್ಮದಂ[೮]
ಗಾಱಿ ಕಟಂಗಳುಣ್ಮಿ[೯]ಡೆ ಕಾಯ ಬಲಂ ಮಿಗೆ ಬೇಗೆಯಿಂದೆ ಬೆಂ
ದಾಱೇದ ಬೆಟ್ಟನಂತೆ ವನವಾರಣಮಿರ್ದುದದೊಂದು ತಾಣದೊಳ್ ೯೨

೮೯. ಮನ್ಮಥನು ಹೂಳಿಟ್ಟ ರತಿಧನದ ನಿಧಿಯನ್ನು ಕಾಯುವ ಕಾಳಸರ್ಪನಂತೆ ಮದವೇರಿದ ಆನೆಯ ಸೊಂಡಿಲು ಹೆಣ್ಣಾನೆಯ ಸುಗಂಧಯುಕ್ತವಾದ ಯೋನಿಯನ್ನು ಕಾಯುತ್ತಿತ್ತು.

೯೦. ತಾಪಳದಂತೆ ತೋರವಾದ ಸೊಂಡಿಲು, ಹೊಂಗೆಮರಗಳ ನೆರಳಿನಂತೆ ಕಪ್ಪಾದ ಮೈಬಣ್ಣ, ಸೊಗಸಾದ ರೂಪ, ಅಚ್ಚುಕಟ್ಟಾದ ಬಾಯಿ, ಹಾಗೂ ಕಣ್ಣುಗಳು, ಶೋಭಿಸುವ ಹಣೆಚಿಕ್ಕೆ, ಬೆಳ್ಳನೆಯ ಕೋರೆ, ಮದೋದಕದಿಂದ ನೆನೆದ ಗಂಡಸ್ಥಳ, ವಿಲಾಸದ ನಡಗೆ, ಎತ್ತಿಹಿಡಿದ ಪಲ್ಲವ ಇವುಗಳಿಂದ ಶೋಭಿಸುವ ಆನೆ ಮನೋಹರವಾಗಿ, ಕ್ಷಮಾಶೀಲವಾದ ಸಿಂಹಕ್ಕೂ ಕೂಡ ಕಣ್ಣ ಹಬ್ಬವೆನಿಸುವಂತಿತ್ತು.

೯೧. ಕೆಂದಾವರೆಯ ಪರಾಗದಂತೆ ಸೊಂಡಿಲ ಮೇಲಿನ ಬಣ್ಣದ ಚಿಕ್ಕೆಗಳಿರಲಾಗಿ, ಕನ್ನೈದಿಲೆಗಳ ಸಮೂಹದಂತೆ ಸೊಕ್ಕಿದ ತುಂಬಿಗಳಿಂದೊಡಗೂಡಿದ ಮದೋದಕವಿರಲಾಗಿ, 'ವೀತವಾಯಜ'ವೆಂಬ ರತ್ನದಂತೆ ಕಣ್ಣುಗಳಿರಲಾಗಿ, ಸುರಿಯುತ್ತಿರುವ ಮಳೆಯಂತೆ ಕಡೆಗಣ್ಣಿನ ಕಾಂತಿ ಸೂಸುತ್ತಿರಲಾಗಿ ರೋಹಣಗಿರಿಯೆಂಬಂತೆ ಒಂದು ಆನೆ ಶೋಭಿಸುತ್ತಿತ್ತು.

೯೨. ಸಿಡಿದೇಳುವ ತುಂತುರುಹನಿಗಳಿಗೆ ಮುಗಿಬಿದ್ದ ದುಂಬಿಗಳ ಹಿಂಡಿನಿಂದಾಗಿ ಹಣ್ಣು ತುಂಬಿದ ನೇರಿಳೆಯ ಕೊಂಬೆಯೆ ಬಿದ್ದಂತೆ ತೋರುವ ಮಾವಿನ ಮುರಿದೊಗೆದ

---

೧ ಸ (ಕಾ). ೨ ದಿಂ (ಕ, ಪ). ೩ ನಾ (ಮ). ೪ ಪ (ಕಾ, ಮ). ೫ ಲ್ವಾ (ಕಾ). ೬ ಸೀದಱ (ಪ), ಶೀವರ (ಕ). ೭ ಪೂ (ಕ, ಪ). ೮ ಡಂ (ಕಾ). ೯ ವು (ಕ).

ಚೂತಾಮೋದಕ್ಕೆ ಮೂಗಂ [1]ತದು[2]ಕಿನ[1] ತಳಿರ್ಗಾಸ್ವಾದಮಂ ಸ[3]ತ್ತುಳಿಂದೀ
ಗೀತಕ್ಕುತ್ಕರ್ಣಮಂ ಕುಟ್ಮಳಿತ ನಯನಮಂ ಕೇಕಿ ಲಾಸ್ಯಕ್ಕೆ ಮೆಯ್ಯಂ
ಸ್ರೋತಃಶೀತಾನಳಂಗೊಪ್ಪಿಸಿ ಸುಖಮಯನಾಗಿರ್ದುದಸ್ಪಂದಮಂದೀ
ಭೂತಂ ಕರ್ವೆಟ್ಟ[4]ಮಂ ಕಂಡರಿ[5]ಸಿ ಸಮೆದವೋಲ್ ನೀರದಾಭಂ ಮದೇಭಂ ೯೩

ನನೆವೆರಸು ಗುಜ್ಜ[6]ಮಾವಿನ
ಕೊನರ್ಗಳನುಡಿದುಡಿದು ನೀಡೆ ಬೆಟ್ಟದ ಪಿಡಿಯೇಂ
ಮನವೊಸೆದು ಮೇವುತಿರ್ದುದೊ
ವನಕರಿ ಪರಿ[7]ದಂತೆ[8] [9]ದತ್ತ[9]ಹಸಿತ ಕಟಾಕ್ಷಂ ೯೪

ಕಡೆವಾಯಿಂ[10] ಪ್ರತಿ[11]ಮಾನ[12]ದೊ
ಳಡಸಿದ ತಳಿರುದಿರೆ ತಳ್ತ ಕೆಯ್ಯೊಳೆ ಕೆಯ್ಯಂ
ಪಿಡಿದು ಪಿಡಿ ತುಱಿಸುತಿರ್ದುದು
ಕಡೆಗಣ್ಣಿಂ ಸಮೆದ ಕರಿಯ ಕೊಂಬಿನ ಕೊ[13]ನೆಯೊಳ್ ೯೫

ಅನುಸಿಂ[14]ಚತ್ಸಲ್ಲಕೀಶೀಕರ ಪರಿಚಯದಿಂ ಶೀತಶೀತಂ ಲತಾಲಿಂ
ಗನದಿಂದಾಮಂದಮಂದಂ ಫಣಿ ವಿಶ[15]ಸನದಿಂ ಭೀತಭೀತಂ ಚಳಚ್ಚಂ
ದನ ಶಾಖಾಂದೋಳದಿಂದಂ ಚಕಿತಚಕಿತಮಾಯ್ತುಚ್ಚರತ್ಕೀಚಕ ಪ್ರ
ಸ್ವನಿತಂ[16] ವಾನೇಯನಾಗಸ್ಫುಟಿತ ಕಟಮದಾಮೋದಭಾರಂ ಸಮೀರಂ ೯೬

ಕೊಂಬೆ, ಮದಜಲ ಸೂಸಿ ಸೂಸಿ ಉಬ್ಬಿದ ಗಂಡಸ್ಥಳ, ಸೊಕ್ಕಿದ ದೇಹ- ಇವುಗಳಿಂದಾಗ ಕಾಡಾನೆಯೊಂದು ಬೇಗೆಯೆಂದು ಬೆಂದು ಆರಿದ ಬೆಟ್ಟದಂತೆ ಒಂದು ಪ್ರದೇಶದಲ್ಲಿ ಗೋಚರಿಸಿತು.

೯೩. ಮಾವಿನ ಪರಿಮಳಕ್ಕೆ ಮೂಗನ್ನೂ ಆನೆಬೇಲದ ತಳಿರಿಗೆ ನಾಲಗೆಯನ್ನೂ ಬೇಡಿತಿಯರ ಹಾಡಿಗೆ ಕಿವಿಗಳನ್ನೂ ನವಿಲ ನಾಟ್ಯಕ್ಕೆ ಕಣ್ಣುಗಳನ್ನೂ ನದಿಯ ತಣ್ಣೀರಿಗೆ ಮೈಯನ್ನೂ ಒಪ್ಪಿಸಿ ಸುಖದಲ್ಲಿ ಮಗ್ನವಾಗಿ ನೀಲಪರ್ವತವನ್ನು ಕಂಡರಿಸಿಟ್ಟರೂ ಏನೊ ಎಂಬಂತೆ ಕಪ್ಪಾದ ಮದಗಜವೊಂದು ನಿಶ್ಚಲವಾಗಿತ್ತು.

೯೪. ಗಂಡಾನೆಯೊಂದು ಗುಜ್ಜುಮಾವಿನ ಚಿಗುರುಗಳನ್ನು ಹರಿಹರಿದು ಕೊಡುತ್ತಿರಲಾಗಿ ಪ್ರೀತಿಯ ಕುಡಿನೋಟ ಬೀರುತ್ತ ಕಾಡಿನ ಹೆಣ್ಣಾನೆಯು ಮನಮೆಚ್ಚಿ ಮೇಯುತ್ತಿತ್ತು.

೯೫. ತುಂಬಿಕೊಂಡ ತಳಿರು ಕಟಬಾಯಿಯಿಂದ ಕೋರೆಯ ಮಧ್ಯಭಾಗದಲ್ಲಿ ಉದುರುತ್ತಿರಲಾಗಿ, ಕಡೆಗಣ್ಣಿನನೋಟವನ್ನು ಬೀರುತ್ತಾ ಹೆಣ್ಣಾನೆಯೊಂದು ಗಂಡಾನೆಯ ಸೊಂಡಿಲಲ್ಲಿ ಸೊಂಡಿಲನ್ನು ತೊಡಕಿಸಿಕೊಂಡು ಅದರ ಕೋರೆಯ ತುದಿಯಲ್ಲಿ ತುರಿಸುತ್ತಿತ್ತು.

೯೬. ಸಿಡಿಯುತ್ತಿರುವ ತದುಕಿನ ತುಂತುರುಗಳಿಂದ ತಂಪು ತಂಪಾಗಿ, ಬಳ್ಳಿಗಳ ಅಪ್ಪುಗೆಯನ್ನು ಹೊಂದುತ್ತ ಮಂದಮಂದವಾಗಿ ಹಾವುಗಳ ವಿಷಕ್ಕೆ ಭೀತಿಗೊಳ್ಳುತ್ತ,

೧ ಕದಿ (ಕ, ಪ). ೨ ಪ (ಪ). ೩ ತ (ಕ, ಪ). ೪ ಟ್ಟು (ಕಾ). ೫ ರ (ಪ). ೬ ಜ್ಜು (ಮ). ೭ ತಿ (ಕಾ). ೮ ತಿ (ಕಾ, ಮ). ೯ ದತ್ತ (ಕಾ). ೧೦. ಯಂ (ಕಾ). ೧೧ ಹಸ್ತ (ಕ, ಪ). ೧೨ ಮೊ (ಮ). ೧೩ ಸಂ (ಮ). ೧೪ ಳ (ಕಾ), ರ (ಮ). ೧೫ ಕಂ (ಪ).

ತಳಿರಂ ತೂಗಿ ಪರಾಗಮಂ ಪೂರೆದು ಪೂನೀರಂ ತಡಂಗೂಡಿ ಗು
ಗ್ಗುಳ ನಿರ್ಯಾಸಮನಾಂತು ಚಂದನರಸಕ್ಷೋದಂಗಳಂ[೧] ಪೊತ್ತು ಶೀ
ತಳ ಕರ್ಪೂರ ಮೃಗೋದ್ಭವಾಗು[೨]ರು ಕುಮುಸ್ತಾಗ್ರಂಥಿ ಗಂಧಂಗಳಂ
ತಳೆ [ದೇಂ[೩]]ಗಂದಿಗರಂತೆ ಬಂದ[೪]ಲೆದುದೋ ಮತ್ತೊಂದು ಮಂದಾನಿಳಂ ೯೭

ವನಜಮನೊಕ್ಕಿ[೫]ಲಿಕ್ಕಿ ಮಱಿದುಂಬಿಯನಾಳ್ದು ತರಂಗಮೆಂಬ ತ
ಕ್ಕಿನ ಪರಿಕಾಱರಂ ತುೞಿದು ಸೀಕರಮಂ ತಳೆದೊಟ್ಟಿಕೊಂಡು ಪೂ
ವಿನ ಪುಡಿಯಂ ಮೃಗೇಂದ್ರಭಯದಿಂದೆ[೬] ತಿರೋಹಿತನಾಗಿ ಬರ್ಪ ಕಾ
ನನ ಕರಿಯಂತೆ ಬಂದುದೆಲರೊಯ್ಯನೆ ರಯ್ಯನೆ ವಾರಿದೇಶದಿಂ ೯೮

ಆ ಗಾಳಿವೆಸ[೭]ಗಿ ನಿಂದಮೆ
ಪೋಗಿ ಪರಿಶ್ರಮವಶಾತುರಂ ವಸುದೇವಂ
ನಾಗೇಂದ್ರನಂತೆ ಮದಲೀ
ಲಾಗಮನಂ ಕಂಡನೊಂದು ಕಮಳಾಕರಮಂ ೯೯

ಗಂಗೆಯ ಗೋತ್ರಮೋ ಸೊ[೮]ದೆಯ ಸಾರಮೊ ಬೆಳ್ನಗೆಯೊಂದು ಬಿತ್ತೊ ಮ
ತ್ತಿಂಗಳ್[೯]ಲೆಟ್ಟ್ ಬೇರೊ ಪೊಸಮುತ್ತಿನ ಪುಟ್ಟುವ ನೀರೊ ತೋರ್ಪ ಬೆ
ಳ್ದಿಂಗಳ ಬಯ್ಕೆಯೋ [೧೦]ಬನ[೧೦]ದ ಧೀವರೆಯರ್ಕಳ ಕಣ್ಣ ಬೆಳ್ಪು[೧೧] ಬೆ
ಳ್ಪಂಗೆಡೆದತ್ತೊ ಪೇೞಿಮೆನೆ ನಿರ್ಮಳಮಾದುದು ನೀರಜಾಕರಂ ೧೦೦

ಹೊಯ್ದಾಡುವ ಮರಗೊಂಬೆಗಳಿಂದ ಚಕಿತವಾಗಿ, ಬಿದಿರುಗಳ ಗಟ್ಟಿಯಾದ ಧ್ವನಿಯನ್ನೊಡಗೊಂಡು, ಕಾಡಾನೆಗಳ ಗಂಡಸ್ಥಳಗಳಿಂದ ಹೊಮ್ಮುವ ಮದೋದಕದ ಸುಗಂಧದಿಂದ ಭಾರವಾಗಿ ಗಾಳಿ ಸುಳಿಯುತ್ತಿತ್ತು.

೯೭. ತಳಿರನ್ನು ತೂಗಿ, ಪರಾಗವನ್ನು ಕೆದರಿ ಹೂ ನೀರನ್ನು ಬೆರಸಿಕೊಂಡು, ಗುಗ್ಗುಳ ರಸವನ್ನು ಹೂಸಿಕೊಂಡು ಚಂದನರಸವನ್ನು ಹೊತ್ತುಕೊಂಡು, ತಂಪಾದ ಕರ್ಪೂರ, ಕಸ್ತೂರಿ, ಅಗುರು, ಮುಸ್ತೆ ಗಡ್ಡೆಗಳ ಸುಗಂಧವನ್ನು ಅಳವಡಿಸಿಕೊಂಡು ಗಂದಿಗರಂತೆ ಒಂದು ಮೆಲುಗಾಳಿ ಬೀಸುತ್ತ ಬಂದಿತು.

೯೮. ಕಮಲಗಳನ್ನು ಕಿತ್ತಾಡಿ, ಮರಿದುಂಬಿಗಳನ್ನು ಏರಿಸಿಕೊಂಡು, ನೀರಿನ ಅಲೆಗಳೆಂಬ ಹರಿಕಾರವನ್ನು ತುಳಿದು, ತುಂತುರುಹನಿಗಳನ್ನು ಎತ್ತಿಕೊಂಡು ಪುಷ್ಪಪರಾಗವನ್ನು ಒಟ್ಟಿಕೊಂಡು, ಸಿಂಹಭಯದಿಂದ ಅಡಗಿ ಮರೆಯಲ್ಲಿ ಸುಳಿಯುವ ಕಾಡಾನೆಯೆಂಬಂತೆ ನೀರಿನ ಮೇಲಿಂದ ಹಾಯ್ದು ಮೆಲ್ಲ ಮೆಲ್ಲಗೆ ಗಾಳಿ ಬೀಸಿತು.

೯೯. ಆ ಗಾಳಿಯ ಸ್ಪರ್ಶದಿಂದ ದಣಿವನ್ನು ಕಳೆದುಕೊಂಡು ವಸುದೇವನು ಸಲಗನಂತೆ ವಿಲಾಸದಿಂದ ನಿಧಾನವಾಗಿ ನಡೆಯುತ್ತ ಬಂದು, ಒಂದು ತಾವರೆಗೊಳವನ್ನು ಕಂಡನು.

೧೦೦. ಗಂಗಾದೇವಿಯ ನೆಲೆಮನೆಯೋ ಅಮೃತರಸಸಾರವೋ ಅಟ್ಟಹಾಸದ ಬೀಜವೋ ಕ್ಷೀರಸಮುದ್ರದ ಬೇರೋ ಹೊಸ ಮುತ್ತುಗಳ ಜನ್ಮಸ್ಥಾನವೋ ಬೆಳ್ದಿಂಗಳ

---

೧ ಳಿಂ (ಮ). ೨ ಗ (ಕ, ಮ). ಕು (ಕಾ). ೩ ರ್ದೇಂ (ಕಾ). ದಾ (ಕ, ಪ). ದಂ (ಮ). ೪ ದೊ (ಕ, ಪ). ೫ ಕ್ಕ (ಪ). ೬ ದ (ಕಾ). ೭ ರ (ಕಾ, ಮ). ೮ ಸು (ಮ). ೯ ಲಿರ್ದ (ಕ, ಮ, ಪ). ೧೦ ಜನ (ಕ, ಮ). ಜಗ (ಪ). ೧೧ ಳ್ಪೊ (ಕಾ).

ತೆರೆಯಿಂ [೧]ಕೆಯ್ನಿ[೧]ಱಿದಾಡುವಂತಿರೆ ಚಳನ್ಮೀನಂಗಳಿಂ ನೋಡುವಂ
ತಿರೆ ನಾನಾ ಮಧುಪಾನಮತ್ತ ಮಧುಲಿಟ್ ಝೇಂಕಾರದಿಂ ಪಾ[ಡು[೨]]ವಂ
ತಿರೆ [೩]ಮೇಲ್ವಾಱು[೩]ವ ಕುಂಕುಮಾರುಣರಥಾಂಗದ್ವಂದ್ವದಿಂ ತತ್ಪಯೋ
ಧರೆ ಸೆಂಡಂ ಪೊಡೆದಾಡುವಂತಿರೆ ಸರಃಶ್ರೀಕಾಂತೆ ಕಣ್ಗೊಪ್ಪಿದಳ್ ೧೦೧

ನೆಱೆ ಜಳಕೇಳಿಯಾಡಿ ಪೊಱಮಟ್ಟ[೪] ವನೇಚರಿಯರ್ಕಳೆಂಬಿನಂ
ತುಱುಗಿರೆ ತೀರದೊಳ್ ನವತಮಾಳ ಲತಾವಳಿಯಬ್ಜಷಂಡದೊಳ್
ಪೊಱಮಡದಿರ್ದುವಾಕೆಗಳ ಕಣ್ಮ[೫]ಲರುಂ ಮೊಲೆವಿಂಡು[೬]ಮೆಂಬಿನಂ
ಮಿಱುಗಿದುವೊರ್ಮೆಯುಂ ಪೊಳೆವ ಮೀಂಗು[೭]ಲಮುಂ ಪೊಣರ್ವಕ್ಕಿಯೊ[೮]ಕ್ಕಲುಂ[೮] ೧೦೨

ಹರಿಯ ನಳಿನಾಭಿನಳಿನಂ
ವಿರಿಂ[೯]ಚಿಯಂ[೯] ಪಡೆದುದರ್ಕೆ ಪುರುಡಿಸಿ ತಾನಾ
ಹ[೧೦]ರಿಯನೆ ಪಡೆದವೊಲೆಸೆದುದು
ಸರೋವರಾವ[೧೧]ರ್ತನಳಿನಮೊಂದಳಿಗರ್ಭಂ ೧೦೩

ತರುಣ ಬಿಸ[೧೨]ಸದ[೧೨]ನಮುಬ್ಜಾ[೧೩]
ಕರಕರಿ ಮೇಗೊಟ್ಟಿಕೊಂಡುದದು ನೀರ್ವೂವಂ
ಸರಸಿರುಹ ಪತ್ರಕರ್ಣಂ
ತರಂಗತರಮುಚ್ಯಮಾನ ಶೀಕರನಿಕರಂ ೧೦೪

ನಿಧಾನವೋ ಅಥವಾ ಕಾಡಿನ ಬೇಡಿತಿಯರ ಕಣ್ಬೆಳಗೇ ಮಹಾಪೂರವಾಯಿತೋ ಏನೊ ಎಂಬಂತೆ ಆ ತಾವರೆಗೊಳವು ನಿರ್ಮಲವಾಗಿತ್ತು.

೧೦೧. ತೆರೆಗಳಿಂದ ಕೈಬೀಸುತ್ತಿರುವಂತೆ ಚಂಚಲವಾದ ಮೀನುಗಳಿಂದ ನೋಡುತ್ತಿರುವಂತೆ, ಮಕರಂದವನ್ನು ಕುಡಿದು ಮದವೇರಿದ ದುಂಬಿಗಳ ಝೇಂಕಾರದಿಂದ ಹಾಡುತ್ತಿರುವಂತೆ, ಮೇಲೆ ಹಾರುವ ಕೆಂಬಣ್ಣದ ಚಕ್ರವಾಕದಂಪತಿಗಳಿಂದ ಚೆಂಡಾಟವಾಡುವಂತೆ ಆ ಸರೋವರವೆಂಬ ಲಕ್ಷ್ಮಿ ಕಂಗೊಳಿಸಿದಳು.

೧೦೨. ಚೆನ್ನಾಗಿ ಜಲಕ್ರೀಡೆಯಾಡಿ ಹೊರಬಂದ ಕಿರಾತಕನ್ಯೆಯರೋ ಏನೊ ಎಂಬಂತೆ, ತೀರದಲ್ಲಿ ಹೊಂಗೆಯ ಎಳೆಯ ಬಳ್ಳಿಗಳಿದ್ದುವು; ಆದರೆ ಆ ಕಮಲಾಕರದಿಂದ ಅವರ ಕಣ್ಣುಗಳೂ ಮೊಲೆಗಳೂ ಇನ್ನೂ ಹೊರಬರಲಿಲ್ಲವೋ ಏನೊ ಎಂಬಂತೆ ಅಲ್ಲಿ ಹೊಳೆಯುವ ಮೀನುಗಳೂ ಚಕ್ರವಾಕಗಳೂ ಶೋಭಿಸುತ್ತಿದ್ದುವು.

೧೦೩. ವಿಷ್ಣುವಿನ ಹೊಕ್ಕುಳಲ್ಲಿ ಹುಟ್ಟಿದ ತಾವರೆ ಬ್ರಹ್ಮನನ್ನು ಹೆತ್ತಿತು; ಅದಕ್ಕೆ ಪ್ರತಿಸ್ಪರ್ಧಿಯಾಗಿ ಆ ವಿಷ್ಣುವನ್ನೆ ತಾನು ಹೆತ್ತೆನೆಂಬಂತೆ ಒಡಲಲ್ಲಿ ಕರಿಯ ದುಂಬಿಯನ್ನೊಡಗೊಂಡ ತಾವರೆಯೊಂದು ಸರೋವರದ ಸುಳಿಯಲ್ಲಿ ಕಂಗೊಳಿಸಿತು.

೧ ಕಣ್ಣೆ (ಕ, ಪ). ೨ ಱು (ಕ, ಮ, ಪ). ೩ ಮೆಲ್ವಾಡು (ಕಾ). ೪ ಟ್ಟು (ಕಾ). ೫ ಣ್ಣ (ಕಾ). ೬ ಡು (ಕ, ಮ, ಪ). ೭ ಗು (ಪ) ೮ ಕ್ಕಿಲಂ (ಮ), ಕ್ಕಲುಂ (ಕಾ). ೯ ಚನಂ (ಕಾ, ಮ). ೧೦ ಪ (ಕ, ಪ). ೧೧ ಕ (ಮ). ೧೨ ದಶ (ಕಾ, ಮ). ೧೩ ಜ್ಯಾ (ಕಾ).

ವನರುಹ ಸಹಸ್ರನೇತ್ರನ
ನನಿಮಿಷಸೇವಿತನ[೧]ನಾ ಸರೋವರಸುರನಾ
ಥನನಾಂತ ಕರಿವೊಲೆಸೆದುದು
ವನಕರಿ [೨]ಯುನ್ಮ[೨]ಗ್ನಪೂರ್ವಕಾಯಂ ಕ್ಷಣದಿಂ ೧೦೫

ಸೊಗಯಿಸಿದುದು ಕನಕಾಬ್ಜ[೩][ದ]
ಮುಗುಳ್ಗನೆ[೪][ಯಿಂ[೫]] ಕರಿಯ ಬಿಳಿಯ ಕೆಂಪಿನ ನೀರ್ವೂ
ವುಗಳಿಂದೆ ಪಂಚರತ್ನದ
ಪಗವಂ ತೆಱಿ[೬]ದಂತೆ ಸರಸಿ ಸರಸಿಜದೆಲೆ[ಯಿಂ[೭]] ೧೦೬

ನೀಲದ ಪೊಳೆವ ಪರಲ್ಗಳ
ಕೀಲಣೆಯಿಂ ಜಲಕನಾದ ಜಳದೇವಿಯ ಪೊ
ನ್ನೋಲೆಯೆನಿಸಿದುದು ಪತ್ರ ಕ
ಪೋಲಗತಂ ಕನಕನಳಿನಮೊಂದಳಿಮ[೮]ಳಿನಂ ೧೦೭

ಕೊಳದೊಳ್ ಮೆಯ್ಗರೆದಬ್ಜ[೯]
[೧೦]ಕುಳಮಿಪ್ಪ[೧೦]ವೊಲಿಂದು ಕೂಡಿದುದು ಕುಮುದಿನಿಯೊಳ್
ಜಳರುಹಮಂ ಕಡಿದುದು ಸೈ
ವಳತರು[೧೧]ವಂ ಕೊಂಬು[೧೧]ಗೊಂಡುದೊಂದು ಮರಾಳಂ ೧೦೮

೧೦೪. ಎಳೆಯ ತಾವರೆ ನಾಳಗಳನ್ನೂ ತಾವರೆಗಳನ್ನೂ ಮೈಮೇಲೆ ಒಟ್ಟಿಕೊಂಡು, ತಾವರೆಯೆಲೆಗಳೆ ಕಿವಿಗಳಾಗಿ ತುಂತುರುಗಳನ್ನು ಅಲೆಗಳಿಂದ ಚಿಮ್ಮುತ್ತಾ ತಾವರೆಗೊಳವು ಆನೆಯಂತೆ ಕಂಗೊಳಿಸಿತು.

೧೦೫. ಕಮಲಗಳೆಂಬ ಸಾವಿರ ಕಣ್ಣುಗಳನ್ನು ಹೊಂದಿ, 'ಅನಿಮಿಷ' (೧. ದೇವತೆ ೨. ಮೀನು) ವರ್ಗಕ್ಕೆ ಒಡೆಯನಾದ ಆ ಸರೋವರವೆಂಬ ಇಂದ್ರನನ್ನು ಹೊತ್ತ ಆನೆಯೋ ಏನೊ ಎಂಬಂತೆ ಮುಂಭಾಗವನ್ನು ನೀರಲ್ಲಿ ಮುಳುಗಿಸಿಕೊಂಡ ಕಾಡಾನೆಯೊಂದು ಕಂಗೊಳಿಸಿತು.

೧೦೬. ಹೊಂದಾವರೆಯ ಬಿರಿ ಮೊಗ್ಗುಗಳಿಂದಲೂ ಕರಿಯ, ಬಿಳಿಯ, ಕೆಂಪಿನ ತಾವರೆಗಳಿಂದಲೂ ತಾವರೆಯೆಲೆಗಳಿಂದಲೂ ಕೂಡಿದ ಆ ಸರೋವರವು ಪಂಚರತ್ನಗಳ ಹಗೆಯವನ್ನು ತೆರೆದಿಟ್ಟಂತೆ ಶೋಭಿಸಿತು.

೧೦೭. ನೀಲರತ್ನಗಳ ಕುಂದಣದಿಂದ ಹೊಳೆಯುವ ಜಲದೇವಿ ಚಿನ್ನದೋಲೆಯೂ ಏನೊ ಎಂಬಂತೆ ಎಲೆಯ ಮಧ್ಯದಲ್ಲಿ ದುಂಬಿಗಳನ್ನೊಡಗೊಂಡ ಹೊಂದಾವರೆಯೊಂದು ಕಂಗೊಳಿಸಿತು.

೧೦೮. ಕೊಳದಲ್ಲಿ ಮರೆಯಾಗಿ ಒಂದು ನೈದಿಲೆಯೊಡನೆ ನೆರೆದ ಚಂದ್ರನಂತೆ ಹಂಸವೊಂದು ಬೆಳ್ದಾವರೆಯನ್ನು ಹೊಂದಿ, ಕೆಂದಾವರೆಯನ್ನು ಕಡಿದು, ಹಾವಸೆಯನ್ನು ಆಶ್ರಯಿಸಿತು.

---

೧ ದಿ (ಕ, ಪ). ೨ ಮುನ್ಮ(ಕ), ಯುನ್ಮ(ಪ). ೩ ಬ್ಜಂ (ಕ, ಮ). ೪ ಗೆ (ಮ, ಪ). ೫ ಯಂ (ಕ, ಕಾ, ಮ). ೬ ಗೆ (ಪ). ೭ ಯಂ (ಕ, ಕಾ, ಮ). ೮ ನ (ಪ). ೯ ವೋ (ಕ, ಪ). X (ಮ). ೧೦ X (ಮ). ೧೧ ಮಂ ಕುಟುಕು (ಕ, ಮ).

ಗಲ್ಗಲನೆ ಕರಗುವಾಲಿಯ
ಕಲ್ಗಳವೊ[೧]ಲ್ ಕರಗಿ ಪರೆವ ಜೊನ್ನದ ತಿಂಗ
ಳ್ಗಲ್ಗಳೊಸರ[೨]ದೆನೆ ಕ[೩]ಟಿಲ್ದ[೩]
ಯ್ಕಲ್ಗೊಳನೆನೆ ಕುಳಿರ್ದುದಾ ಜಳಂ ತಿಳಿಗೊಳದಾ ೧೦೯

ಊದೆ ಕರಿಗಳ್ ಸ[೪]ರಃಸ್ವ[೪]
ಚ್ಛೋದಕಮಂ ನೆತ್ತಿಗಡರ್ದ ಪನಿಗಳೆ [೫]ಪೊಸಮು
ತ್ತಾದುವ[೬]ಲ್ಲದೊಡಡವಿಯ
ವೇದಂ[೭]ಡದ ನೆತ್ತಿಯಲ್ಲಿ ಮುತ್ತುಗಳೊಳವೇ ೧೧೦

ತರುಣ ತರಂಗೋತ್ಥಿತ ಸೀ
ಕರಹಿಮದಿಂ ಸೇದೆಗೊಂಡವೋಲ್ಪೊಕ್ಕು ಸರೋ
ಜರಜಃಪಟ[೮]ಗುಂಠಿ[೯]ತಮೆನ
ಲರಳಿದುದದು ಕುಮುದ ಮುಕುಳಕೋಟ[೧೦]ರಕುಟ[೧೦]ಯೊಳ್ ೧೧೧

ವ॥ ಆ ಕುಸುಮಾ[೧೧]ಕರ[೧೧]ಮೆಂಬ ಕಮಳಾಕರಮಂ ಕುಮಾರಂ ಪೊಕ್ಕು ಪ್ರಕ್ಷಾಲಿತ ಪಾದಮುಖಕಮಳಂ ಪೀತಶೀತಜಳನುಮಾಗಿ ನೀರಜರಜದ ನೀರ್ಗುಂಕುಮಮಂ ತೊಡೆದು ತಡಿಯೊಳೊ[೧೨]ಕ್ಕಿರ್ದ [೧೩]ಮದ[೧೩]ಗಜಮದದಿಂ ತಿಳಕಮಿಕ್ಕಿ ಸಿಂದುರದ ಬಿರಿಮುಗುಳಂ ತುಱುಂಬಿ

೧೦೯. ಸರಸರನೆ ಕರಗುವ ಆಲಿಕಲ್ಲುಗಳ ಹಾಗೆ ಕರಗಿ ಹರಿಯುವ ಚಂದ್ರಕಾಂತಶಿಲೆಗಳ ನೀರೇ ತುಂಬಿ ತುಂಬಿ ತಂಗೊಳವಾಯಿತೊ ಏನೊ ಎಂಬಂತೆ ಆ ತಿಳಿನೀರಿನ ಕೊಳವು ತಂಪಾಗಿತ್ತು.

೧೧೦. ಆಸರೋವರದ ತಿಳಿನೀರನ್ನು ತಮ್ಮ ಸೊಂಡಿಲಲ್ಲಿ ಹೀರಿಕೊಂಡು ಮೇಲೆತ್ತಿ ಊದಿ ಬಿಡಲಾಗಿ ಆನೆಗಳ ನೆತ್ತಿಗೆ ಹತ್ತಿಕೊಂಡ ಹನಿಗಳೆ ಹೊಸಮುತ್ತಾದುವು. ಹಾಗಲ್ಲದೆ ಕಾಡಾನೆಯ ನೆತ್ತಿಯಲ್ಲಿ ಮುತ್ತುಗಳಿರುವುದುಂಟೆ?

೧೧೧. ಚಿಕ್ಕ ಅಲೆಗಳಿಂದೆದ್ದ ತುಂತುರುಗಳ ಶೀತಕ್ಕೆ ಸೇಡುಗೊಂಡಂತೆ ಸರೋವರದ ಒಳಹೊಕ್ಕು ತಾವರೆ ಹುಡಿಯಲ್ಲಿ ಅಡಗಿಕೊಂಡಿತೊ ಏನೊ ಎಂಬಂತೆ ಬಿಳಿಯ ನೈದಿಲೆ ಮೊಗ್ಗುಗಳ ಸಂದಿನಲ್ಲಿ ಅರಳಿತು.

ವ॥ ಕುಸುಮಾಕರವೆಂಬ ಆ ಕಮಲಸರೋವರವನ್ನು ಹೊಕ್ಕು ಕುಮಾರನು ಕೈಕಾಲು ಮುಖಗಳನ್ನು ತೊಳೆದುಕೊಂಡು, ತಂಪಾದ ನೀರನ್ನು ಕುಡಿದು ಕಮಲಪರಾಗದ ನೀರುಕುಂಕುಮವನ್ನು ತೊಡೆದುಕೊಂಡು ತೀರದಲ್ಲಿ ಒಟ್ಟಿದ್ದ ಮದೋದಕದಿಂದ ತಿಲಕವಿಟ್ಟುಕೊಂಡು ಸಿಂದುರದ ಬಿರಿಮೊಗ್ಗುಗಳನ್ನು ಮುಡಿದು, ನಾಳಸಹಿತವಾದ

೧ ಮೆ (ಮ), ವ (ಕ, ಪ). ೨ ರೆ (ಕಾ). ೩ ಳಿದ (ಕ, ಮ, ಪ). ೪ ರತ್ನ (ಕಾ). ೫ ಪೊಸ (ಕ, ಮ, ಪ). ೬ ವು (ಕಾ). ೭ ದಕ (ಕ). ೮ ರ (ಕ, ಪ). ೯ ದಿ (ಪ). ೧೦.... ದಿಕೆ (ಕಾ), ಟರಕುಡಿ (ಮ). ೧೧ ರಣ್ಯ (ಕ, ಪ). ೧೨ ಳಿ (ಪ). ೧೩ X (ಕ, ಮ, ಪ).

ಕಮಳಪತ್ರಮಂ ರಾಶಿ[೧] ವಟ್ಟ್ಕಿ ಕ[೨]ಟ್ಟಿ ಕಾ[೩]ವುವೆರಸಿರ್ದ ಕರಿಯ ನೆಯ್ದಿಲನಂಕುಶಂ ಮಾಡಿ ಪಿಡಿದು ವಿನೋದದಿ ನಾ[೪]ನೆ ವಸದನಂಗೊಂಡು ಆ ಕೊಳ[೫]ನ ತಡಿಯೊಳ್ ಸಮವಸರಣದ ಶೋಕೆಯುಂತಿರ್ದಶೋಕೆಯ ನೆಬಿಲೊಳ್[೬] ಬೆಸದ ಮೆಯ್ಯುಂ ಮುರಿ[೭]ದು ಕಾಯ್ತೊಱಗಿದ [೭]ಬಳ್ಳಿಗವುಂಗಂ[೭] ಮಲಂಗಿ ಕುಮಾರಂ ಕುಳ್ಳಿರ್ದನನ್ನೆಗಂ

> ಕೊನೆಗೊಂಬಲ್ತು ಬಿಸಾಂಕುರಂ ಶಿರಮದಲ್ತುತ್ಕಚ್ಛಪಂ ನೇತ್ರಮ
> ಲ್ತನಿಮೇಷಂ ಮದಮಲ್ತು ವಾರಿ ಕಿವಿಯಲ್ತಬ್ಜಚ್ಛದಂ ಪದ್ಮಕಾ
> ನನಮಲ್ತಂಬುಜಮಾನೆಯಲ್ತು ಸರದೊಳ್ ಲೀಲಾ[೮]ಸರಂ[೮] ಪುಟ್ಟಿದ
> ತ್ತೆನೆ ಮೂಡಿತ್ತವಗಾಹಮಿರ್ದು ಕೊಳದಿಂ ಕಾಯ್ದೊಂದು ದಂತಾವಳಂ ೧೧೨

> ತೋರದೆರೆ[೯] ಮುಱಿಯೆ ಮೂಡುವ
> ವಾರಣಮುಂ[೧೦] ಪೋಲ್ತುದಡಸಿ ನಿಡುಗೆಯ್ಯಿಂ ಭಂ
> ಡಾರಿಸಿ ಮೆಡಱಿದ ತ[೧೧]ಳಿಯಂ[೧೧]
> ಬಾರಿ[೧೨]ಯುಮಂ ಮುಱಿ[೧೩]ಯೆ ಪೊಯ್ದು ಪೊಱಮಡುವಿಭಮಂ ೧೧೩

ವ|| ಅಂತು [೧೪]ಮಕರಾಕರದಿಂ ಪೊಱಮಡುವ ಕರಿಮಕರದಂತೆ[೧೪] ಕಮಳಾಕರದಿಂ ಪೊಱಮಟ್ಟು ದ[೧೫]ಡಂಗೊಳ್ವಲ್ಲಿ ಕಿಬ್ತು ಕೆಡೆದು ಕಾಲೊಳ್ತೊಡರ್ದು ಬಂದ ಬಿಸವಲ್ಲಿಗಳ್

ಕನ್ನೈದಿಲೆಯನ್ನು ಅಂಕುಶದಂತೆ ಹಿಡಿದುಕೊಂಡು ವಿನೋದದಿಂದ ಆನೆ ಸವಾರನ ವೇಷವನ್ನು ತಾಳಿ, ಆ ಸರೋವರದ ತೀರದಲ್ಲಿ ಸಮವಸರಣದ ಅಶೋಕವೃಕ್ಷದಂತಿದ್ದ ಒಂದು ಅಶೋಕದ ನೆಳಲಲ್ಲಿ ಮೈಮುರಿದು ಕಾಯಿಗಳ ಭಾರದಿಂದ ಬಾಗಿದ ಬಳ್ಳಿಯಂತಹ ಅಡಕೆ ಮರವನ್ನು ಆತುಕೊಂಡು ಕುಳಿತನು. ಅಷ್ಟರಲ್ಲಿ -

೧೧೨. ಕೋರೆಯ ತುದಿಯಲ್ಲಿ, ಅದು ತಾವರೆ ದೇಟಿನ ಅಂಕುರ; ತಲೆಯಲ್ಲ, ಮೇಲೆದ್ದು ಬಂದ ಆಮೆ; ಕಣ್ಣುಗಳಲ್ಲ, ಮೀನುಗಳು; ಮದಜಲವಲ್ಲ, ನೀರು; ಕಿವಿಗಳಲ್ಲ, ಅವು ತಾವರೆಯೆಲೆಗಳು; ಕೆಂಬಣ್ಣದ ಚುಕ್ಕೆಗಳಲ್ಲ, ತಾವರೆಗಳೆ; (ಹೀಗೆ) ಸರೋವರದಲ್ಲೊಂದು ಕ್ರೀಡಾಸರೋವರ ಹುಟ್ಟಿತೊ ಏನೊ ಎಂಬಂತೆ ಅದರಲ್ಲಿ ಮುಳುಗಿದ್ದ ಮದದಾನೆಯೊಂದು ಮೇಲೆದ್ದಿತು.

೧೧೩. ಬಂಧಿಸಿ ಸುತ್ತಲೂ ಹಣೆದ ತೊಲೆಗಳ ಬೇಲಿಯನ್ನು ಮುರಿದೊಗೆದು ಹೊರಬರುವ ಆನೆಯೊ ಏನೊ ಎಂಬಂತೆ ದೊಡ್ಡ ದೊಡ್ಡ ನೀರಿನಲೆಗಳನ್ನು ಮುರಿಯುತ್ತಾ ಆ ಆನೆ ಕೊಳದಿಂದ ಹೊರಹೊಮ್ಮಿತು.

ವ|| ಹೀಗೆ ಸಮುದ್ರದಿಂದ ಹೊರಬೀಳುವ "ಕರಿಮಕರ"ದಂತೆ ಕಮಲ ಸರೋವರದಿಂದ ಹೊರಬಿದ್ದು ದಂಡೆಗೆ ಬರುವಾಗ ಕಿತ್ತು ಕಾಲಿಗೆ ತೊಡಕಿಕೊಂಡ ತಾವರೆ

---

೧ ಗೆ (ಕಾ), ಗ (ಮ, ಪ). ೨ ಗ (ಕಾ). ೩ ತಾ (ಮ). ೪ ನಾ (ಕ, ಮ, ಪ). ೫ ಣ (ಕಾ). ೬ ಜೆ (ಕ, ಪ). ೭ ಬಟಿಕಂಗಂ (ಕ, ಪ). ೮ ಲಸಂ (ಕ, ಮ, ಪ). ೯ ಱಿ (ಕಾ). ೧೦ ಮಂ (ಕ, ಮ, ಪ). ೧೧ ಲೆಯುಂ (ಕ). ಳಿಯುಂ (ಮ, ಪ). ೧೨ ರೆ (ಕ, ಮ, ಪ). ೧೩ ರಿ (ಕ, ಪ). ೧೪ X (ಕಾ). ೧೫ ದಂ (ಕಾ).

ನೆಲನನೊಡೆದು ನಾಗಲೋಕಮಂ ಪುಗವೇಡೆಂದು ಗರುಡನ ಕಾಲಂ ಪತ್ತಿ ಬಿಡದ ಪಾವುಗಳಂತಿರ್ದುವದಱ ಗಾಳಿಗೆ ವನಗಜಘಟೆಗಳೆಲ್ಲಂ ಘನಘಟೆಗಳಂತಿ[೧]ರೊಡೆ[೧]ದೋಡಿದುವು ಮೇಲ್ವಾಯ್ದ ಸಿಂಗಂಗಳೆಲ್ಲಮಾದಿಯ ಪಂದಿಯ[೨] ಪೇಱಿದ ಗ್ರಾಮಸಿಂಹಂಗಳಂತಿರ್ದುವು ಪೆಳ[೩]ಱೆ ಬೆಂಗುಡುವ ಬಟ್ಟಾ[೪]ನೆಗಳಿಂ ಮಣಿಯೇಱಿಂದಿಱಿದೆತ್ತಿದಲ್ಲಿ ಮದದ ಮಸಿಯಿಂ ಮಳೀಮಸಮಾದ ಮುಸುಂಬು ಮುಸುಪಿನ ಮುಸುಂಬಿನಂತೆ [೫]ಕಡಲಂ ಕಟ್ಟಲೆಂದು ಬೆಟ್ಟಮಂ ಕಿೞ್ತೆತ್ತಿದ ಸುಗ್ರೀವನಂತಿರ್ದುದು ವನಮಂ ಪೊಕ್ಕು ಮರಮಸಕದಿಂ ಮರವಾಯ್ದು ಮರದುಱುಗಲಂ [೬]ಕಿೞ್ತೀಡಾಡುವಲ್ಲಿ ದಶಗ್ರೀವನ ವನಮಂ[೬] ಕಿೞ್ತೀಡಾಡುವಣುವನಂತಿರ್ದುದು ಪಲ್ಲವಮನು[೭]ಡಿದು ಸೂಸುವಲ್ಲಿ ದೆಸೆಯಾನೆಯಾನೆಗಾಳಗಕ್ಕೆ ಪುಲ್ಲಂ ಸೂಸುವಂತಿರ್ದುದಂತು ಮಾಮಸಮಸಗಿ[೮] ಬಿಸಟಂಬರಿವ ಮದಕರಿಯಂ ಕುಮಾರಂ ಕಂಡೀ ಕಟ್ಟಾನೆಯನೇಱಿದೊಡಾನೆ ಯಾನೆವಿನ್ನಾ[೯]ಣಿಯೆಂದು ಸರಂದೋಱಿದ ಸರದ ಬೞಿಯನೆ ಗಱಿವಡೆಯ ಪಾವಿನಂತೆ ಮೊಗದ ಬಿಗಿ[೧೦]ಪುಂ ಕಣ್ಣ ಬೀಡುಂಬೆರಸು ಗಾಳಿಗೆ ಗಱಿ ಮೂಡಿದಂತೆ ಗಿಱ್ಱನೆ[೧೧]ಯುತ್ತಾರ್ಪಾನೆಯಂ ಚಪ್ಪರಿಸಿ ಪಿಡಿದಾಸೆಗೊಟ್ಟು ಪುಷ್ಕರಣದೊಳ್ ಕೆಂದಳಂ ಕೆಂದಳಿರಂತೆ ತೊಳಗೆ ದೀರ್ಘಾಂಗುಳಿಯಿಂ[೧೨] ಪಿಡಿದು ಗರುಡನೊಪ್ಪಮಂ ಗಾಳಿಯ ನುಸುಳುಮಂ ಕೆಯ್ಕೊಂಡು ಕೊಂಡಾಡಿ ಮನಮೆ ಮಾನಸನಾದಂತೆ

ಬಳ್ಳಿಗಳು, "ನೆಲವನ್ನು ಸೀಳಿಕೊಂಡು ಸರ್ಪಲೋಕವನ್ನು ಹೊಗಬೇಡ" ಎಂದು ಬೇಡಿಕೊಳ್ಳುತ್ತ ಗರುಡನ ಕಾಲಿಗೆ ಹತ್ತಿಕೊಂಡು ಬಿಡದಿರುವ ಹಾವುಗಳಂತೆ ಇದ್ದುವು. ಆ ಆನೆಯ ಗಾಳಿಗೆ ಕಾಡಾನೆಗಳ ಹಿಂಡುಗಳು ಮೋಡಗಳ ಹಿಂಡಿನಂತೆ ಓಡಿ ಹೋದುವು; ಸಿಂಹಗಳೆಲ್ಲವೂ ಆದಿವರಾಹನ ಮುಂದಿನ ನಾಯಿಗಳಂತಿದ್ದುವು; ಹೆದರಿ ಓಡುತ್ತಿರುವ ಗಜಗಳನ್ನು ಕೋರೆಗಳಿಂದ ಚುಚ್ಚಿ ಎತ್ತಿದಾಗ ಆ ಆನೆಯ ಮದಜಲದ ಮಸಿಯಿಂದ ಕಪ್ಪಾದ ಮುಸುಡು ಮುಸುವಿನ ಮುಸುಡಿನಂತಾಗಲಾಗಿ, ಸಮುದ್ರಕ್ಕೆ ಸೇತುವೆಗಟ್ಟಲು ಬೆಟ್ಟವನ್ನು ಕಿತ್ತೆತ್ತಿದ ಸುಗ್ರೀವನಂತಿದ್ದಿತು; ಕಾಡನ್ನು ಹೊಕ್ಕು ಮದಾವೇಶದಿಂದ ಅಬ್ಬರಿಸಿ ಮರಗಳನ್ನು ಹಿಂಡು ಹಿಂಡಾಗಿ ಕಿತ್ತು ಈಡಾಡುವಾಗ ರಾವಣನ ವನವನ್ನು ಕಿತ್ತು ಈಡಾಡುವ ಹನುಮಂತನಂತಿದ್ದಿತು; ತಳಿರುಗಳನ್ನು ಹರಿದು ಸೂಸುವಾಗ ದಿಗ್ಗಜವು ಆನೆಗಾಳೆಗಕ್ಕೆ ಹುಲ್ಲನ್ನು ಸೂಸುವಂತಿದ್ದಿತು; ಹೀಗೆ ಮದೋನ್ಮತ್ತವಾಗಿ ರಭಸದಿಂದ ಮನಬಂದಂತೆ ಹರಿದಾಡುವ ಮದದಾನೆಯನ್ನು ಕಂಡು ಕುಮಾರನು "ಈ ಆನೆಯನ್ನು ಏರಿದರೇ ನಾನು ಗಜವಿದ್ಯಾನಿಪುಣನು" ಎಂದು ಆನೆಗೆ ಧ್ವನಿದೋರಿದನು. ಗಳಿಯ ಬಳಿಯ ಹಾವಿನಂತೆ ಧ್ವನಿಮೂಲವನ್ನೇ ಅರಸಿಕೊಂಡು ಬಿಗಿದ ಮೊಗದಿಂದಲೂ ಬಿಟ್ಟ ಕಣ್ಣುಗಳಿಂದಲೂ ಗಾಳಿಗೆ ರೆಕ್ಕೆ ಮೂಡಿದಂತೆ ಗಿರ್‍ರನೆ ಏರಿಬರುವ ಆನೆಯನ್ನು ಚಪ್ಪರಿಸಿ, ಹಿಡಿದು, ಆಸೆ ತೋರಿ ಅದರ ಸೊಂಡಿಲ ತುದಿಯಲ್ಲಿ ಕೆಂದಳಿರಿನಂತೆ ತನ್ನ ಅಂಗೈ ಹೊಳೆಯುತ್ತಿರಲಾಗಿ ಬೆರಳಿಂದ ಹಿಡಿದು ಗರುಡನ ರೀತಿಯನ್ನೂ ಗಾಳಿಯ ಚಪಲತೆಯನ್ನೂ ಅಳವಡಿಸಿಕೊಂಡು ಮನಸ್ಸೆ

---

೧ ರೋಡಿ (ಮ, ಪ). ೨ ಯಂ (ಕಾ). ೩ ಣ (ಕಾ), ಳ್ಳ (ಪ). ೪ ಟ್ಟು (ಮ). ೫ + ತ್ತಿರೆ (ಕ, ಮ, ಪ). ೬ X (ಕಾ). ೭ ನೊ (ಕಾ). ೮ ಕಿ (ಕಾ). ೯ ನ್ನ (ಕಾ, ಮ). ೧೦ ಸು (ಕಾ). ೧೧ + ಪಾ (ಕಾ). ೧೨ ಯಂ (ಮ).

ಪರೆದು[೧]ಪರಿಯೊಳ್ [೨]ಬಳಿಲ್ಚಿ[೨] ಕುಡೆಂಬಂ[೩]ತಿಂಕು[೩] ಮೊಳಗಿಂ ಬೆಂಗೆ ಬಾ[೪] ಯೆಂಬಂತೆ ಭೂತಾಟನಂ ಗೆಯ್ದು ಗಜದ ಬೆಂಗೆ ಸಿಂಗದಂತೆ ಲಂಘಿಸಿದಾ[೫]ನೆಯೆ ಪೊರಜೆಯಾಗೆ ಪೂರ್ವಾಸನದೊಳ್ ಪದುಳಮಿರ್ದು ಮರ್ಚು[೬]ಬಾ [ಪ್ಪು[೭]] ಬಾ[ಪ್ಪೆ[೮]]ದು ಕುಂಭಸ್ಥಳಮನಾಸ್ಫಾಳಿಸಿ ಬೀರ ಸಿರಿಯ ಗುರುಕುಚಮನು ಗುರೊಳುಗಿ[೯]ದಂತೆ[೯] ಕೋ[೧೦]ಡಗಂಗಳೆ ಜೋ[೧೧]ಡಗವಾ[೧೧]ಗೆ ಹರಿಣಂಗಳೆ ಹರಿಕಾಜಿರಾಗೆ ಪರ್ವಂತಗಳೆ ಪ್ರತಿಗಜಂಗಳಾಗುರುಳೆ ನೂಂಕಿ[೧೨]ಯುಂ [೧೩]ಸುರುಳೆ ನೂಂಕಿಯು[೧೩]ಮಡ್ಡಲಿ[೧೪]ಕ್ಕಿಯುಂ ಪೊಕ್ಕು ಪರಿಯಿಸಿಯುಂ ಅಂತಪ್ಪ ಕಟ್ಟಾನೆಯುಂ ಕೆಪ್ಪನ[೧೫]ಳವಡಿಸುವಂತೆ ಮಡದೊಳುಂ ಮುಂಗುಟದೊಳಳವಡಿಸಿದ ರಾಜಪುತ್ರನ ಬಲ್ಪಿಂಗಂ ಬಿನ್ನಣಕ್ಕಂ ಬೆಕ್ಕಸಂಬಟ್ಟು

ಆ ಪ್ರಸ್ತಾವದೊಳಿರ್ವರ
ತಿ ಪ್ರೌಢಖಚರರಚಿರರುಚಿ ದಿವಿಜಧನು
ರ್ದೀಪ್ರಮಣಿಮಕುಟವಿಕಟ ಪ
ಟುಪ್ರಭೆಯಿಂ ಭೂಪಭಾನುಗರ್ಘ್ಯಮನಿತ್ತರ್ ೧೧೪

ಮದಪುರುಷರಗಿದು ರದನಿಯ
ಮದಮಿಟೆದಪುದಿ[೧೬]ಟೆವುದೆಂದು ಮೆಯ್ಯಿಕ್ಕಿದವೋ
ಲ್ವಿದಳಿತ ವದನಪಯೋಜ
ರ್ಪದೆದಚಿರಂ ಖಚರರಿರ್ವರವನತರಾದರ್ ೧೧೫

ಮನುಷ್ಯನಾದಂತೆ ವೇಗವಾಗಿ ಚಲಿಸಿ, ಬೆನ್ನಿಗೆ ಬಾ ಎಂಬಂತೆ ನೆಲವನ್ನು ಗಟ್ಟಿಸುವ ಆನೆಯ ಬೆನ್ನಿಗೆ ಸಿಂಹದಂತೆ ನೆಗೆದು, ಅದರ ಕತ್ತಿನ ಮೇಲೆ ಸುಖವಾಗಿ ಕುಳಿತು, ಭಾಪು ಭಾಪೆಂದು ಕುಂಭಸ್ಥಳವನ್ನು ಚಪ್ಪರಿಸಿ, ವೀರಶ್ರೀಯ ತೋರ ಮೊಲೆಗಳೆಂಬಂತೆ ನೆತ್ತಿಯ ಕುಂಭಗಳನ್ನು ಉಗುರಿಂದ ಉಗಿದು, ಕೋತಿಗಳೆ ವಿದೂಷಕ (ಽ) ರಾಗಲಾಗಿ, ಜಿಂಕೆಗಳೆ ಹರಿಕಾರರಾಗಲಾಗಿ, ಬೆಟ್ಟಗಳೆ ಶತ್ರುಗಳಾಗಲು, ಉರುಳುವಂತೆಯೂ ಹೊರಳುವಂತೆಯೂ ನೂಕಿ ನೂಕಿ, ಅಡ್ಡವಾಗಿ ತಿರುಗಿಸಿ, ಓಡಿಸಿ, ಅಷ್ಟೊಂದು ಉಗ್ರವಾದ ಆನೆಯನ್ನು ಕೆರವನ್ನು ಅಳವಡಿಸಿಕೊಳ್ಳುವಷ್ಟು ಲೀಲಾಜಾಲವಾಗಿ ಮಡದಿಂದಲೂ ಉಂಗುಟದಿಂದಲೂ ಅಳವಡಿಸಿಕೊಂಡ ರಾಜಪುತ್ರನ ಪರಾಕ್ರಮಕ್ಕೂ ಗಜವಿದ್ಯಾಪರಿಣತಿಗೂ ಬೆರಗಾಗಿ -

೧೧೪. ಮಿಂಚಿನಂತೆ ಕಾಂತಿಯುಳ್ಳ ಹಾಗೂ ಕಾಮನಬಿಲ್ಲಿನಂತೆ ಉಜ್ವಲವಾದ ರತ್ನಖಚಿತ ಕಿರೀಟಗಳನ್ನು ಧರಿಸಿದ ಅತಿ ಪ್ರೌಢರಾದ ಖೇಚರರಿಬ್ಬರು ಆ ರಾಜಕುಮಾರನಿಗೆ ಅರ್ಘ್ಯವಿತ್ತರು.

೧೧೫. "ಆನೆಯ ಮದ ಇಳಿಯುವುದು, ನೀನು ಇಳಿ"ಯೆಂದು ನಮಸ್ಕರಿಸುವಂತೆ ಮುಖಕಮಲಗಳನ್ನು ಅರಳಿಸಿಕೊಂಡ ಆ ಖೇಚರರಿಬ್ಬರೂ ತಲೆಬಾಗಿದರು.

---

೧ + ಪೊರೆದು (ಕಾ). ೨ ಬಿಳಲ್ಚಿ (ಕ ಪ). ಬಿಳ್ಚಿ (ಮ). ೩ ತಿಕ್ಕು (ಕ, ಪ). ೪ ಯಿಂ (ಕ, ಪ), ಯಿ (ಮ). ೫ ಯಾ (ಕ, ಪ). ೬ ಜ (ಕ, ಕಾ). ೭ ಷ್ಪು (ಕ, ಕಾ, ಮ). ೮ ಷ್ಪೆಂ (ಕ, ಕಾ, ಮ). ೯ ದು (ಕ, ಮ, ಪ). ೧೦ ತೊ (ಪ). ೧೧ ಡವಾ (ಕ). ೧೨ ಕೆ (ಮ). ೧೩ x (ಕಾ). ೧೪ ವಿ (ಕ, ಮ, ಪ). ೧೫ ವ (ಕ, ಪ). ೧೬ ದ (ಕ, ಮ, ಪ).

ವ॥ ಆಗಿ ಕೆಯ್ಗಳಂ ಮುಗಿದು ದೇವ ಬಿನ್ನಪಮೀಯಾನೆಯನೇಱುವೆನೆಂಬನ[೧]ಸು ನೆತ್ತಿಗೇಱುಗುಮುಗಿ[೨]ವನ [ನು[೩]]ಗಿಗುಂ ಪರೆಯಿಸುವೆನೆಂಬನ ಪಸಿರ್ಪರೆಗುಮೀಯತಿವರ್ತಿಯಂ ವಶವರ್ತಿಮಾಡಲುಮಂಕುಶಮಿಲ್ಲದಂಕಿಸಲ್ ನಿನಗೆ ತೀರ್ವುದು [೪]ನೀನಲ್ಲದ[೪] ದೇವನುಮೇತಱ ದೇವನೆಂದು ಗಳಗರ್ಜರಂತೆ ಪೊಗೞ್ದು ಬೇಗಮೀ ಗಜದಿನಿೞಿದೆಮ್ಮಧೀಶನಾ ದೇಶಭಾಗಮನಿೞಿಪುವುದೆನೆ ವಸುದೇವನಿೞಿದು ನೀಮಾರ್ಗ್ದೇ[೫]ನೆಂಬುದೆನೆ ವಿದ್ಯಾಧರರಿಂತೆಂದರ್

ಮಾಣಿಸೆ ನಿದ್ದ[೬]ಯಂ ಜಿನಪತಿಸ್ನಪನೋತ್ಸವ ಮಂಗಳಾನಕ
ಕ್ವಾಣಮದೊರ್ಮೆಯುಂ ಜಿನಮಹಾಮಹಮಂ ನಲವಿಂದೆ ನೋೞ್ಪ ಕ
ಣ್ಣಾಣೆಮೆಯಿಕ್ಕಲೀಯದಿರೆ ತಾನ[೭] ನಗೇಂದ್ರದ ದಕ್ಷಿಣೋತ್ತರ
ಶ್ರೇಣಿಗೆ ತಂದು[೮] ಮುಂದಿಡುವುದಾರುಹತಂ ಸುರಲೋಕಶೋಭೆಯಂ ೧೧೬

ವ॥ ಆ[೯] ವಿಜಯಾರ್ಧ ಪರ್ವತದ ದಕ್ಷಿಣಶ್ರೇಣಿಯ ನಿ[೧೦]ಳಿಂಪ[೧೦] ಕಿನ್ನರ ಗೀತಮೆಂಬ ಪೊೞಲನಾಳ್ವೊಂ ಮಹಾಭಾಗನಶನಿವೇಗನೆಂಬೊನಂಬರಚರನಾತನ ಮಗಳ್ ಪರಪುರುಷಶುಕಶಾಲ್ಮಲಿ ಶಾಲ್ಮಲಿಯೆಂಬೊಳಾಕೆಗನುರೂಪನಪ್ಪ ಪುರುಷನಂ ಖಚರಕುಲದೊ[೧೧]ಳಂ ಭೂಚರಕುಲದೊಳಂ[೧೨]

ವ॥ ಹಾಗೆ ಬಾಗಿ ಕೈಮುಗಿದು "ದೇವಾ, ಚಿತ್ತಯಿಸು. ಈ ಆನೆಯನ್ನು ಏರುವನೆಂಬವನ ಪ್ರಾಣವೆ ನೆತ್ತಿಗೇರುವುದು; ಸೀಳುವನೆಂಬವನನ್ನು ಇದು ಸೀಳುವುದು; ಇದನ್ನು ಓಡಿಸುವೆನೆಂಬುವನ ಹಸಿಯೇ ಹಾರಿಹೋಗುವುದು. ಮದವೇರಿದ ಈ ಆನೆಯನ್ನು ವಶಪಡಿಸಿಕೊಳ್ಳುವದೂ ಅಂಕುಶವಿಲ್ಲದೆ ಹತೋಟಿಯಲ್ಲಿಟ್ಟುಕೊಳ್ಳುವುದೂ ನಿನಗೊಬ್ಬನಿಗೆ ಸಾಧ್ಯ. ನಿನ್ನನ್ನು ಬಿಟ್ಟು ಬೇರೆಯ ದೇವರು ಏತರ ದೇವರು?" ಎಂದು 'ಗಳಗರ್ಜ' (ಸ್ತುತಿಪಾಠಕ?)ರಂತೆ ಹೊಗಳಿ, "ಬೇಗನೆ ಈ ಆನೆಯಿಂದ ಇಳಿದು ನಮ್ಮ ಅರಸನ ಆದೇಶಭಾರವನ್ನು ಇಳಿಸಬೇಕು" ಎಂದರು. ವಸುದೇವನು ಇಳಿದು, "ನೀವು ಯಾರು? ಅದೇನು ವಿಷಯ?" ಎಂದು ಕೇಳಲಾಗಿ ಆ ವಿದ್ಯಾಧರರು ಹೀಗೆಂದರು -

೧೧೬. ಜಿನೇಂದ್ರನ ಅಭಿಷೇಕೋತ್ಸವದ ಮಂಗಳವಾದ್ಯ ಧ್ವನಿಯಿಂದ ನಿದ್ದೆಗೆ ಅವಕಾಶವೆ ಇಲ್ಲದಾಗಿ ಜಿನನ ಮಹಾಪೂಜೆಯನ್ನು ನೋಡುವ ಉತ್ಸಾಹದಲ್ಲಿ ರೆಪ್ಪೆ ಹೊಯ್ಯುವುದನ್ನೆ ಮರೆಯಿಸಿ, ತನ್ನ ದಕ್ಷಿಣೋತ್ತರ ಶ್ರೇಣಿಗಳಿಗೆ ಆ ಪರ್ವತವು ದೇವಲೋಕದ ಶೋಭೆಯನ್ನು ತಂದು ಕೊಡುವುದು. ದೇವಲೋಕನಿವಾಸಿಗಳಿಗೆ ನಿದ್ದೆಯಿಲ್ಲ; ಅವರು ರೆಪ್ಪೆ ಹೊಯ್ಯುವುದಿಲ್ಲ. ದಕ್ಷಿಣೋತ್ತರ ಶ್ರೇಣಿಯ ಜನವೂ ಹಾಗೆ ಆಗಿರುವುದರಿಂದ ಅವರು ದೇವತೆಗಳೆನಿಸಿ, ಅವರ ನಿವಾಸ ದೇವಲೋಕವೆನಿಸುವುದು.

ವ॥ ಆ ವಿಜಯಾರ್ಧ ಪರ್ವತದ ದಕ್ಷಿಣ ಶ್ರೇಣಿಯ ದೇವ ಕಿನ್ನರಗೀತವೆಂಬ ಪಟ್ಟಣವನ್ನು ಆಳುವ ಮಹಾತ್ಮನು ಅಶನಿವೇಗನೆಂಬ ವಿದ್ಯಾಧರನು ಪರಪುರುಷರೆಂಬ ಗಿಳಿಗಳಿಗೆ ಬೂರುಗದ ಮರವೆನಿಸಿದ ಶಾಲ್ಮಲಿಯೆಂಬವಳು ಆತನ ಮಗಳು. ಆಕೆಗೆ ತಕ್ಕ

೧ + ನ (ಕ, ಪ). ೨ ನಿ (ಪ). ೩ ಮು (ಕ, ಕಾ, ಮ, ಪ). ೪ ನೀನಲ್ಲಿ (ಕಾ), ನಿನಗಲ್ಲದ (ಕ, ಪ). ೫ ದಿ (ಕ), ದ (ಕಾ). ೬ ರ್ದ (ಕ, ಮ, ಪ). ೭ ನ (ಕಾ, ಮ). ೮ ಮ (ಕಾ). ೯ ಈ (ಮ), x (ಕಾ). ೧೦ ಳಿಪ್ಪ (ಕಾ, ಮ). ೧೧ ಳ್ (ಕಾ). ೧೨ ಭಿ (ಕಾ).

ಕಾಣದೆ ಖಿ[೧]ನ್ನನಾಗಿರ್ಪುದುಮಾದೇಶ [೨]ಪುರುಷನುಮೀ[೨] ಮದಗಜಮನೇಱಿದನೇ ನಿಜಾತ್ಮಜೆಗೆ ಮದವನಿಗನೆಂದೊಡಾನಂದದಿನೆಮ್ಮಾಳ್ದನೆಮ್ಮಿರ್ವರುಮನೀ ಕರಿಪತಿಗೆ ಕಾಪಂ ಪೇೞ್ದನಂದಿಂದಿತ್ತಲೀಯಡವಿಯೊಳಡಿ ಮಿಡುಕದೆ ಮೃಗಂಗಳಾಗಿರ್ದೆವಿಂದೆಮ್ಮ ಪುಣ್ಯಂ ಬರ್ಪಂತೆ ಬಂದು ಸಾಹಸಪುರುಷನುಮಾದೇಶಪುರುಷನುಮಾ[೩]ಗೆ ಯೆ[೩]ಮ್ಮ ತಪಮುಂ ಶಾಲ್ಮಲಿದತ್ತೆಯ ಕಾಮತ[೪]ಪಮುಂ ಸಫಲಮಾದುದು

ಇದು ದಿವ್ಯ ಶ್ರೀವಿಮಾನಂ ಮನಮೊಸೆದಿದನೀನೇಱು ಬಾ ಪೋಪಮಾ ತೋ
ರ್ಪುದೆ ಕಂಡ್ಯೆ ಖಂಡಿತಾರಿಸ್ಮಯ ಜಯವಿಜಯಾರ್ಧಾಚಲಂ ನಿನ್ನನೆಯ್ತಂ
ದಿದಿರ್ಗೊಳ್ವಂತಿ[೫]ತ್ತ ಬರ್ಪುಜ್ವಳಜಳಧರದಿಂ ನಿನ್ನ ಬರ್ಪುತ್ಸವಕ್ಕೆ
ತ್ತಿದವೊಲ್ಕೂಟಾಗ್ರದೊಳ್ ನಿರ್ಝರಪಟಳ ಪತಾಕಾಳಿಯಂ[೬] ಲೀಲೆಯಿಂದಂ ೧೧೭

ಆನೆಯನೇಱಿದೆಯೇಱು ವಿ
ಮಾನಮನೇಱಿದಪೆಯಚಳಪತಿ ಚೂಳಿಕೆಯಂ
ತಾನೆ ಕುಡುಗುಂ ಮಹೋನ್ನತ
ಮಾನೋನ್ನತಿ[೨]ಯುನ್ನ[೨]ತೋನ್ನತಾರೋಹಣಮಂ ೧೧೮

ಪುರುಷನನ್ನು ಖೇಚರರಲ್ಲಿಯೂ ಭೂಚರರಲ್ಲಿಯೂ ಕಾಣದೆ ಆತನು ಖಿನ್ನನಾಗಿದ್ದನು. ಆಗ "ಈ ಮದಗಜವನ್ನು ಏರಿದವನೇ ನಿನ್ನ ಮಗಳಿಗೆ ತಕ್ಕವನಾಗುವನು" ಎಂಬ ಆದೇಶ ವಚನವಾಯಿತು. ನಮ್ಮ ಅರಸನು ಆನಂದ ಪಟ್ಟು ನಮ್ಮಿಬ್ಬರನ್ನು ಈ ಗಜೇಂದ್ರಕ್ಕೆ ಕಾವಲಿರಲು ಆಜ್ಞಾಪಿಸಿದನು. ಆ ದಿನದಿಂದ ಇಂದಿನವರೆಗೆ ಈ ಅಡವಿಯಲ್ಲಿ ಅತ್ತಿತ್ತ ಮಿಸುಕಲಾಗದೆ ನಾವು ಮೃಗಗಳಾಗಿದ್ದೆವು. ನಮ್ಮ ಪುಣ್ಯವೆ ಬಂದಂತೆ ಬಂದು ನೀನು ಸಾಹಸ ಪುರುಷನೂ ಆದೇಶ ಪುರುಷನೂ ಆಗಿರುವುದರಿಂದ ಇಂದಿಗೆ ನಮ್ಮ ತಪಸ್ಸು ಶಾಲ್ಮಲಿದತ್ತೆಯ ಕಾಮತಪಸ್ಸು ಸಫಲವಾದುವು.

೧೧೭. ಇದು ದಿವ್ಯವಾದ ಶ್ರೀವಿಮಾನ. ಸಂತೋಷದಿಂದ ಇದನ್ನು ಏರು ಬಾ ಹೋಗೋಣ. ಅಕೊ! ಅಲ್ಲಿಕಾಣುವುದು ವೈರಿಗಳಿಗೆ ವಿಸ್ಮಯವನ್ನುಂಟುಮಾಡುವ ವಿಜಯಾರ್ಧಪರ್ವತ. ನಿನ್ನನ್ನು ಎದಿರುಗೊಳ್ಳುವಂತೆ ಇತ್ತ ಬರುತ್ತಿರುವ ಉಜ್ವಲವಾದ ಮೋಡವನ್ನು ನೋಡು. ನಿನ್ನ ಆಗಮನೋತ್ಸವಕ್ಕೆಂದು ಎತ್ತಿದ ಧ್ವಜಗಳಂತೆ ಶಿಖರದಲ್ಲಿ ನಿರ್ಝರಗಳ ಸಮೂಹಗಳನ್ನು ಇಟ್ಟುಕೊಂಡು ಶೋಭಿಸುತ್ತದೆ.

೧೧೮. ಆನೆಯನ್ನು ಏರಿದೆ, ಈಗ ಈ ವಿಮಾನವನ್ನು ಏರು. ಮಹಾಪರ್ವತದ ಶಿಖರವನ್ನು ಇನ್ನು ಏರುವೆ. ಮಹೋನ್ನತವಾದ ಗೌರವವೂ ಅಭ್ಯುದಯವೂ ಇನ್ನು ನಿನಗೆ ದೊರೆಯಲಿವೆ.

---

೧ ವಿದರೀ (ಕಾ). ೨ ದೆನೀಗಳೆ (ಮ), ದೆ (ಕಾ). ೩ ತಾ (ಕ, ಮ, ಪ). ೪ ದಿ (ಕ, ಮ, ಪ). ೫ ಯಿಂ (ಕ, ಮ, ಪ). ೬ ಯಂ (ಕ, ಪ).

ವ॥ ಎಂದಾ[೧] ಖಚರಯುಗಳಮವಟಯಿಸಿದ ಮಣಿಮಯ ವಿಮಾನಮನೇಱೆ

ಪವನಪ್ರೇಂ[೨] ಖೋಳನ ಪ್ರೋಚ್ಚಳಿತ ಮರಕತಸ್ಥೂಲ ರತ್ನಾವಳೀ ಪ
ಲ್ಲವಮಾಳಾ ತೋರಣಂಗಳ್ಪಸುರ್ಗುದುರೆಗಳಂ ಪೂಡಿದಂತೊಪ್ಪೆ ಕೆಯ್ಯೊ
ಳ್ಳವ ಲೀಲಾನೀರಜಂ ರಂಜಿಸೆ ೩ನವಙ ರಥಮಂ ಬಂದು ಮಾರ್ತಂಡನೊಲ್ದೇ
ಱುವವೋಲ್ತಾನೇಱಿದಂ ಕಾಂಚನಖಗರಥಮಂ ಮೂರ್ತಿಮಾರ್ತಂಡದೇವಂ ೧೧೯

ಗದ್ಯ ॥ ಇದು ಮೃದುಪದಬಂಧ ಬಂಧುರ ಸರಸ್ವತೀ ಸೌಭಾಗ್ಯಭ್ಯಂಗ ಭಂಗಿನೀ ನಿಧಾನ ದೀಪವರ್ತಿ ಚತುರ್ಭಾಷಾಕವಿಚಕ್ರವರ್ತಿ ನೇಮಿಚಂದ್ರಕೃತಮುಂ ಶ್ರೀಮತ್ಪ್ರತಾಪಚಕ್ರವರ್ತಿ ಶ್ರೀ ವೀರಬಲ್ಲಾಳದೇವಪ್ರಸಾದಾಸಾದಿತ ಮಹಾಪ್ರಧಾನಪದವೀವಿರಾಜಿತ ಸೆಜ್ಜೆವಳ್ಳ ಪದ್ಮನಾಭದೇವ ಕಾರಿತಮುಮಪ್ಪ ನೇಮಿನಾಥ ಪುರಾಣದೊಳ್ ವಸುದೇವ ವನಪ್ರವೇಶವರ್ಣನಂ ಪಂಚಮಾಶ್ವಾಸಂ.

೧೧೯. ಗಾಳಿಯ ರಭಸಕ್ಕೆ ಹೊಯ್ದಾಡುವ ಸ್ಥೂಲವಾದ ಹಸಿರು ರತ್ನದ ತೋರಣಗಳು, ರಥಕ್ಕೆ ಹೂಡಿದ ಹಸಿರುವರ್ಣದ ಕುದುರೆಗಳಂತೆ ಶೋಭಿಸಲಾಗಿ, ಕೈಯಲ್ಲಿ ಲೀಲೆಗಾಗಿ ಹಿಡಿದ ಕಮಲದ ಹೂವು ಒಪ್ಪುತ್ತಿರಲಾಗಿ, ಸೂರ್ಯನು ತನ್ನ ರಥವನ್ನೇರುತ್ತಿರುವನೊ ಏನೊ ಎಂಬಂತೆ ಚಿನ್ನದ ವಿದ್ಯಾಧರ ವಿಮಾನವನ್ನು ಸೂರ್ಯ ಸದೃಶನಾದ ಆ ಕುಮಾರನು ಏರಿದನು.

ಮುಗಿಯಿತು

---

೧ ದು (ಕಾ). ೨ ಖೋಳನ (ಕಾ). ೩ ನಿಜ (ಕ, ಮ, ಪ)

ಶ್ರೀ

ಷಷ್ಠಾಶ್ವಾಸಂ

ಶ್ರೀಪತಿಪಾದಂ ಗಗನಾ
ಕೂಪಾರದ ಮುತ್ತು ಬೆಟ್ಟಮಾದವೊಲೆಸೆದಿ
ರ್ಪಾ ಪರ್ವತಕ್ಕೆ ಕೃತಿಕುಳ
ದೀಪಂ ಕವಿತಾವಸಂತ[೧]ನವನೀ[೧]ಕಾಂತಂ ೧

ತುಱುಗಿ[೨] ಕಡಲಂತೆ[೩] ಸೂಸುವ
ನಿಱಿಮುಗಿಲೊಳ್ ಪರಿವ ಗಗನಯಾನದೊಳರಸಂ
ನೆಱೆ[೩] ಪೋಲ್ತಂ ಸ್ತ್ರೀರತ್ನಮ
ನಱಸುತ್ತಾಂ[೪] ಪಾಱೆ[೫] ಪೋಪ [೬]ಸಾಂಯಾ[೬]ತ್ರಿಕಮಂ (ನಂ) ೨

ಕುಲಗಿರಿಸಂಕುಳಂ ಸುಕವಿಶೇಕರನುನ್ನತಿ[೭]ಗಂಡು ಲಜ್ಜೆಯ
ಗ್ಗಲಿಸೆ ಕುನುಂಗುವಂತೆಸೆದು ತೋಱಿದುವಂದು, ಮಿಸುರ್ಪ ಸರ್ಪಸಂ
ಕುಲಮೆಲನೆ ಕೂಡೆ ಕೊಂಕಿ ಪರಿಗೊಳ್ವ ನದೀನದಜಾಳದಿಂ ಮಹೀ
ತ್[೮]ಲಮಹಿಲೋಕದಂತೆಸೆದುದಾ ಜಗತೀಪತಿಗೂರ್ಧ್ವಯಾನದೊಳ್ ೩

ವ॥ ಅಂತುಮಲ್ಲದೆ

೧. ಆಕಾಶವೆಂಬ ಸಮುದ್ರದ ಮುತ್ತು ಬೆಟ್ಟವಾಯಿತೊ ಏನೋ ಎಂಬಂತೆ ಕಂಗೊಳಿಸುವ ಪರ್ವತಕ್ಕೆ ದೀಪಕನಾದ ಹಾಗೂ ಕವಿತಾವಸಂತನಾದನೂ ಆದ ಆ ರಾಜನು ಹೊರಟನು.

೨. ಸ್ತ್ರೀರತ್ನವನ್ನು ಹುಡುಕುವುದಕ್ಕೆ ಹಡಗಿನ ಮೇಲೆ ಹೊರಟ ಸಮುದ್ರ ವ್ಯಾಪಾರಿಯೋ ಏನೋ ಎಂಬಂತೆ ಮೋಡಗಳಿಂದ ಕಿಕ್ಕಿರಿದ ಆಕಾಶದಲ್ಲಿ ಹಾರುತ್ತ ಹೊರಟ ವಿಮಾನದಲ್ಲಿ ಆ ಅರಸನು ಕಂಗೊಳಿಸಿದನು.

೩. ಆಕಾಶದಲ್ಲಿ ಹಾರುತ್ತ ಹೋಗುವ ಆ ರಾಜೇಂದ್ರನ ಕಣ್ಣಿಗೆ ಸತ್ಕವಿ ಶ್ರೇಷ್ಠನ ಉನ್ನತಿಯನ್ನು ಕಂಡು ನಾಚಿಕೆಯಿಂದ ಕುಸಿದುವೊ ಏನೊ ಎಂಬಂತೆ ಕುಲಪರ್ವತಗಳು ತೋರಿದುವು; ಅಂಕುಡೊಂಕಾಗಿ ಹರಿಯುವ ನದೀನದಗಳ ಜಾಲದಿಂದ ಕೂಡಿದ ಭೂಮಿಯ ಸರ್ಪಗಳಿಂದ ಕೂಡಿದ ಅಧೋಲೋಕದಂತೆ ತೋರಿತು.

ವ॥ ಅಷ್ಟೆ ಅಲ್ಲದೆ -

---

೧ ವನಿತಾ (ಕ, ಪ). ೨ + ದ (ಕ, ಪ). ೩ X (ಕ, ಪ). ೪ ಲ್ತಾಂ (ಕ, ಪ), ಲ್ (ಮ). ೫ + ಸೇ (ಮ). ೬ ಸಾಯಾಂ (ಕ). ೭ ತ (ಕ, ಪ). ೮ ಮ (ಕ, ಮ, ಪ). ೯ ವ (ಕ, ಪ).

ಸಾಗರಮೊಂದು ಕಂಕಣದಿನುರ್ವರೆ ಕಾವಲಿಯಿಂ[1] ಕುಳಾದ್ರಿಗಳ್
ಪಾಗಲ ಕಾಯ್ಗಳಿಂ ಮದಗಜಾವಳಿ ಪಂದಿಗಳಿಂ ನದೀವ್ರಜಂ
ಭೋಗಿಗಳಿಂ ತಡಾಗ [ತ[2]] ತಿ ಕ[3]ಣ್ಗಳಿನು[4]ನ್ನತ ಪಾದಪೋತ್ಕರಂ
[4]ಸೀಗುರಿ[4]ಯಿಂ ಕರಂ ಕಿಱಿಯವಾದುವು ಕಣ್ಗೆ ಗುಣಾವಲೋಕನಾ ೪

ಮಾಲಿನೀ ವೃತ್ತ॥

ಪರಿಗತ ಬಹುವರ್ಣಂ ತತ್ಸಮೀಭೂತಪದ್ಮಾ
ಕರಸಲಿಲ[5]ಚಳಾರಣ್ಯ [೦ವಿ][6] ನಿಮ್ನೋನ್ನತಶ್ರೀ
ಕರಮೆಸೆದುದು ಜಂಬೂದ್ವೀಪಮಾದಂ ಬೆಡಂಗಂ
ಬೆರಸಿ ಬರೆದ ಜಂಬೂದ್ವೀಪದಂತೀಕ್ಷಣೀಯಂ ೫

ವ॥ ಅಂತು ಕಿನ್ನರಗೀತಕ್ಕೆ ಪೋಗಿ ಶಾಲ್ಮಲಿದತ್ತೆಯೊಳ್ ಮದುವೆ ನಿಲೆ

ತುದಿ ಮೊದಲಪ್ಪುದಿಂಪಡರೆ ಕೂಡುವ ಕೂಟದೊಳೀಕ್ಷಣಕ್ಕೆ ರೂ
ಪದೆ ಪೊಸತಪ್ಪುದೊಲ್ದೆಳಸಿ[7] ನೋಡುವ ನೋಟದೊಳೇನನಿತ್ತನಿ
ತ್ತುದೆ ಬೆಲೆಯಪ್ಪುದೆನ್ನಸುಗೆ ಬೇಡುವ ಬೇಟದೊಳೆನ್ನ ನಲ್ಲನಂ
ಮದನವಿಕಾರ ಸಾರಸುಖದಿಂದಮೆ ಮಾಡದೆ ಮಾಣನಬ್ಜಜಂ ೬

೪. ಆ ಗುಣವಂತನ ದೃಷ್ಟಿಗೆ ಸಾಗರವೊಂದು ಕಡಗಕ್ಕಿಂತಲೂ, ಭೂಮಿ ಹೆಂಚಿಗಿಂತಲೂ ಕುಲಪರ್ವತಗಳು ಹಾಗಲಕಾಯಿಗಳಿಂದಲೂ ಮದದಾನೆಗಳು ಹಂದಿಗಳಿಗಿಂತಲೂ ನದಿಗಳು ಹಾವುಗಳಿಗಿಂತಲೂ ಕೆರೆಗಳು ಕಣ್ಣಿಗಿಂತಲೂ ಎತ್ತರವಾದ ಮರಗಳು ಸೀಗುರಿಗಿಂತಲೂ ಚಿಕ್ಕವಾಗಿ ತೋರಿದುವು.

೫. ಕಮಲ ಸರೋವರಗಳು, ಬೆಟ್ಟಗಳು, ಅರಣ್ಯಗಳು, ಏರುತಗ್ಗುಗಳು ಎಲ್ಲವೂ ಒಂದೇ ಪಾತಳಿಗೆ ಇಳಿದು ಚಪ್ಪಟೆಯಾಗಿ ಬಹುವರ್ಣ ಮಿಶ್ರಿತವಾಗಿ ತೋರುವ ಜಂಬೂದ್ವೀಪವು ಚೆಲುವಾಗಿ ಬರೆದ ಜಂಬೂದ್ವೀಪದ ಚಿತ್ರವೆಂಬಂತೆ ಕಂಗೊಳಿಸಿತು.

ವ॥ ಹೀಗೆ ಹಾರುತ್ತ ಕಿನ್ನರ ಗೀತಕ್ಕೆ ಹೋಗಿ ಶಾಲ್ಮಲಿದತ್ತೆಯನ್ನು ಮದುವೆ ಮಾಡಿಕೊಳ್ಳಲಾಗಿ -

೬. ಸವಿಯೇರುವ ಸುರತಸುಖದಲ್ಲಿ ತುದಿಯೆಂಬುದು ಆರಂಭವೆ ಆಗುವುದು. ಬಯಸಿ ನೋಡುತ್ತಿರುವಂತೆ ರೂಪ ಹೊಸ ಹೊಸದಾಗಿಯೆ ತೋರುವುದು; ಬೇಡುವ ಬೇಟದಲ್ಲಿ ಅವನು ಏನಿತ್ತರೂ ನನ್ನ ಜೀವಕ್ಕೆ ಅದು ಬೆಲೆಯುಳ್ಳುದೇ ಎನಿಸುವುದು. ಈ ನನ್ನ ಪ್ರಿಯತಮನನ್ನು ಮದನವಿಕಾರದ ಸಾರಸುಖದಿಂದಲೆ ಬ್ರಹ್ಮನು ನಿರ್ಮಿಸಿರಬೇಕು.

---

೧ ಯೆಂ (ಕ, ಮ). ೨ ಗ (ಕ, ಮ, ಕಾ). ೩ ಣ್ಗೊಳಿಗು (ಕ, ಪ). ೪ ಶ್ರೀಗಿರಿ (ಕ, ಪ, ಮ). ೫ + ದ (ಕ, ಪ). ೬ X (ಕ, ಕಾ, ಮ, ಪ). ೭ ಸೆ (ಕ, ಮ).

[೧]ಬಾಯ್ವಸವೋಡದಂತಡರೆ[೧] ಚುಂಬಿಸೆಯುಂ ಬಗೆದಂತು ತಳ್ತೊಡಂ
ಮೆಯ್ವಸ [[೨]ವೋ]ಡ[೨]ದಪ್ಪ ಗಡ ಕಣ್ಬಸವೋಡದಿದಂ[೩]ತು ನೋಡೆಯುಂ
ಕೆಯ್ವಸದಂ[೪]ತಮ [೫]ನೆರೆ[೫]ದೊಡಮ್ಮನಮಾಜಿದದರ್ಕೆ [೬]ಸಕ್ಕಿ[೬]ಯಿಂ[೭]
ಸೆಯ್ವೆಱಗಾದ ಮೆಯ್ನವಿರ್ಗಳೆಂಬವೊಲಂಗನೆ ಕೂರ್ತು ಕೂಡಿದಳ್ ೭

ಮಂದಾನಿಲ ರಗಳೆ॥

[೮]ಸುರಯಿಯ ಬಿರಿಮುಗುಳೊಳು ರ್[೯]ವ್[೧೦]ದಳಿಪತಿ[೧೧]
ಬಿರಿಯಿಸೆ ಬೆರಸುವ ಬಸದನ ಬೆಸನಿರೆ
ಸುರತ ಸುರಭಿರಸ ಪರಿಮಳಮಿಟೆತರೆ
ಬೆರಸಿದನರಮಗನರಸಿಯೊಳೆಸೆದಿರೆ ೮

ವ॥ ಅಂತು ಬಂದ ಬಸಂತದೊಳ್ವನಜಲ[೧೨]ಕೇಳಿಯನಾಡಿ [೧೩]ಬಟಿಲ್ದು ಬಂದು[೧೩]ಮಲ್ಲದೆ ಸುರತಶ್ರಾಂತರಾಗಿ ಶಾಲ್ಮಲಿದತ್ತೆಯುಂ ವಸುದೇವನುಂ ದೇವ ದಂಪತಿಯಂ[೧೪]ತೆ ಸೌಧಾಗ್ರತಳದೊಳ್ ತಳ್ತು ಪವಡಿಸುತ್ತುಮಿರೆ

ಬಿಡಿಸಿ ಭುಜಂಗಿಯ ತಳ್ಪಂ
ಪಿಡಿದುಯ್ವಂತೆಳೆಯ ಮಳಯಜಾತಮನಳಿ[೧೫]ಪಿಂ
ತೊಡರ್ದಾ ಖಚರಿಯ ತಳ್ಪಂ
ಬಿಡಿಸಿ ನೃಪಾತ್ಮಜನನೊರ್ವನುಯ್ದಂ ಖಚರಂ ೯

೭. ಎಷ್ಟು ಚುಂಬಿಸಿದರೂ ಬಾಯ ಬರ ಹಿಂಗದು; ಎಷ್ಟು ಬಿಗಿಬಿಗಿದು ಅಪ್ಪಿಕೊಂಡರೂ ಮೈಯ ಹಸಿವು ಹಿಂಗದು; ಎಷ್ಟು ನೋಡಿದರೂ ಕಣ್ಣಿನ ಬರ ಹಿಂಗದು; ಎಷ್ಟು ಕೈವಶ ಮಾಡಿಕೊಂಡರೂ ಮನಸ್ಸಿಗೆ ತೃಪ್ತಿಯಾಗದು. ನಿಮಿರಿ ನಿಂತ ಮೈನವಿರೇ ಅದಕ್ಕೆ ಸಾಕ್ಷಿಯೆಂಬಂತೆ ಆ ಅಂಗನೆ ಒಲಿದು ಕೂಡಿದಳು.

೮. ಸುರಗಿಯ ಬಿರಿ ಮೊಗ್ಗಿನಲ್ಲಿ ಗುಂಯಿಗುಡುವ ದುಂಬಿ ಕುಳಿತು ಅದನ್ನು ಅರಳಿಸಿ ಬೆರೆಯುವ ರೀತಿಯಲ್ಲಿ ಸುರತದ ಸುಗಂಧರಸವಿಳಿಯುತ್ತಿರಲಾಗಿ ಆ ರಾಜಕುಮಾರನು ಅರಸಿಯನ್ನು ಕೂಡಿದನು.

ವ॥ ಹೀಗಿರುತ್ತ ಒಮ್ಮೆ ವಸಂತಮಾಸ ಬರಲಾಗಿ, ಉದ್ಯಾನದಲ್ಲಿ ನೀರಾಟವಾಡಿ, ದಣಿದು, ಜೊತೆಗೆ ಸುರತ ಶ್ರಮದಿಂದಲೂ ಬಳಲಿ ಶಾಲ್ಮಲಿದತ್ತೆಯೂ ವಸುದೇವನೂ ದೇವದಂಪತಿಗಳಂತೆ ಉಪ್ಪರಿಗೆಯ ಹಜಾರದಲ್ಲಿ ಅಪ್ಪಿಕೊಂಡು ನಿದ್ರಿಸುತ್ತಿದ್ದರು. ಆ ಹೊತ್ತಿನಲ್ಲಿ -

೯. ನಾಗಿಣಿಯ ಅಪ್ಪುಗೆಯನ್ನು ಬಿಡಿಸಿ ಎಳೆಯ ಚಂದನವನ್ನು ಎಳೆದುಕೊಂಡು

---

೧ ಬಾಯ್ವವೊಡವಂದಂ ತಳ್ತಡರೆ (ಕಾ). ೨ ಮೋದ (ಕಾ), ದೋಡ (ಮ). ತೋಡ (ಕ). ೩ ರೆಂ (ಕಾ). ೪ ದೆಂ (ಕಾ). ೫ ನಡೆ (ಮ). ೬ ಶಕ್ತಿ (ಕಾ). ಸಕ್ತಿ (ಪ). ೭ ಯು (ಕಾ). ೮ + ಛಂದ (ಮ), + ಚಂದಸು (ಕಾ), ೯ ರು (ಕ, ಮ, ಪ). ೧೦ + ಳಿ (ಕ, ಪ). ೧೧ X (ಮ). ೧೨ X (ಕ). ೧೩ ಬಂದು ಬಟಿಲ್ದುದು (ಕ, ಮ, ಪ). ೧೪ ಗಳಂ (ಕ). ೧೫. ಳು (ಕಾ)

ವ|| ಆಗಳಾ ಶಾಲ್ಮಲಿದತ್ತೆಯುಮೆಚ್ಚತ್ತು ಚಂ[1]ದನ[2]ಗ್ರಾಹಿಯಂ ಬೆನ್ನಟ್ಟುವ ಭುಜಂಗಿಯಂತೆ

ಒಕ್ಕ ಸೆಱಂಗಿನಿಂ ಮೊಲೆಯನಾ[3]ಳಿಸಿ[3] ಗಂಡುಡೆಯು[4]ಟ್ಟು [5]ಪಚ್ಚು[5]ಗಂ
ಟಿಕ್ಕಿ ಬಟಿಲ್ವ ಬಲ್ಪಿಣಿಲನೊತ್ತಿದೆಱಂಕೆವೊಲೆತ್ತಿಕೊಂ[6]ಡೆರ[6]
ಟ್ಟ[7]ಕ್ಕದ ಬಾಳುಮ[8]ತ್ತಪರಮುಂ[8] ಪೊ[10]ಳೆಯುತ್ತಿರೆ ಪಾಱಿದಳ್ನಭೋ
ಗ್ರಕ್ಕತಿವೇಗದಿಂ ಖಚರಕಾಮಿನಿ ಕಾಮನ ವೀರಲಕ್ಷ್ಮಿವೋಲ್ ೧೦

ಅತ್ತಪರಂ ಸಹಸ್ರಕಿರಣಂ ಪೊಣರ್ವಕ್ಕಿಯನಪ್ಪಿದಂತೆ ಪೊ
ನ್ನತ್ತಪರಂ ತಳತ್ತಳಿಸೆ ಪೆರ್ಮೊಲೆಯೊಳ್ಪೊಳಪಿಂ ತೊಡಂಕೆ ಕ
ಣ್ಗತ್ತಿಗೆಗೊಂಬಿನೊಳ್ನಲಿದು ನರ್ತಿಸುವೊಂದೆಳಮಿಂಚಿನಂತೆ ಮಿಂ
ಚುತ್ತಿರೆ ತೋಳಬಾಳನೊಲೆ[11]ಯುತ್ತುಮೆ ಶಾಲ್ಮಲಿದತ್ತೆ ತೂಗಿದಳ್ ೧೧

ವ|| ಅಂತು ಪಾಱೆ ಪೋಗಿ ಕಿಱಿದಂತರದೊಳ್ ಕುಮಾರನಂ ಕವುಂಕುಳೊಳೌಂಕಿಕೊಂಡು ಪೋಪ ಖಚರನಂ ಕಂಡು ಕಡುಮುಳಿದೆಲೆಲೆ ಪ[12]ತ್ತೆ ಯಿನ್ನೆತ್ತವೋದಪೆಯೆಂದು ಮಧುಮತ್ತ ಕೋಕಿಳಕುಮಾರಿಯಂತೆ [13]ಖಚರ[13] ಕುಮಾರಿ ಗಜಱೆ ಗರ್ಜನಂಗೆಯ್ದು

ಹೋಗುವಂತೆ ವಿದ್ಯಾಧರಿಯ ಅಪ್ಪುಗೆಯನ್ನು ಬಿಡಿಸಿ, ಆ ರಾಜಕುಮಾರನನ್ನು ಒಬ್ಬ ಖೇಚರನು ಎತ್ತಿಕೊಂಡು ಹೋದನು.

ವ|| ಆಗ ಆ ಶಾಲ್ಮಲಿದತ್ತೆಯೂ ಎಚ್ಚತ್ತು. ಚಂದನವನ್ನು ಹಿಡಿದೆಳೆದವನನ್ನು ಬೆನ್ನಟ್ಟುವ ಸರ್ಪಿಣಿಯಂತೆ -

೧೦. ಗಂಡುಡೆಯುಟ್ಟು, ಸೆರಗಿನಿಂದ ಮೊಲೆಗಳನ್ನು ಬಿಗಿದು ಗಂಟಿಕ್ಕಿಕೊಂಡು, ಜೋಲುವ ಭಾರಿ ಕೇಶಪಾಶವನ್ನು ರೆಕ್ಕೆಯಂತೆ ಎತ್ತಿಕೊಂಡು, ಒಂದು ಪಕ್ಕದಲ್ಲಿ ಖಡ್ಗವು ಇನ್ನೊಂದರಲ್ಲಿ ಗುರಾಣಿಯೂ ಹೊಳೆಯುತ್ತಿರಲಾಗಿ ಕಾಮನ ವೀರಲಕ್ಷ್ಮಿಯಂತೆ ಆ ಖೇಚರ ಕಾಮಿನಿಯು ವೇಗದಿಂದ ಆಕಾಶಕ್ಕೆ ಹಾರಿದಳು.

೧೧. ಸೂರ್ಯನು ಚಕ್ರವಾಕದಂಪತಿಗಳನ್ನು ಅಪ್ಪಿಕೊಂಡಂತೆ ತೋರ ಮೊಲೆಗಳ ಮೇಲೆ ಗುರಾಣಿ ಒಪ್ಪುತ್ತಿರಲಾಗಿ, ನಲಿದು ನರ್ತಿಸುವ ಕುಡಿಮಿಂಚಿನಂತೆ ಕಣ್ಣಕಾಂತಿ ಖಡ್ಗದ ಧಾರೆಯಲ್ಲಿ ಮಿಂಚುತ್ತಿರಲಾಗಿ ಶಾಲ್ಮಲಿದತ್ತೆಯು ತನ್ನ ತೋಳನ್ನೂ ಖಡ್ಗವನ್ನೂ ತೂಗಿದಳು.

ವ|| ಹೀಗೆ ಹಾರುತ್ತ ಹೋಗಿ ಸ್ವಲ್ಪ ದೂರದಲ್ಲಿಯೆ, ಕುಮಾರನನ್ನು ತನ್ನ ಕಂಕುಳಲ್ಲಿ ಅಮುಕಿಕೊಂಡು ಹೋಗುತ್ತಿರುವ ವಿದ್ಯಾಧರನನ್ನು ಕಂಡು ಕಡುಕೋಪದಿಂದ, "ಎಲಲೇ! ಸತ್ತೆ ನೀನು! ಇನ್ನೆತ್ತ ಹೋಗುವೆ?" ಎಂದು ವಸಂತ ಮಾಸದ ಮತ್ತ ಕೋಕಿಲೆಯಂತೆ ಗದರಿಸಿ ಕೂಗಿ, -

---

೧. ದನಾ (ಕ), ದ್ರನಾ (ಮ). ೨ ಗಾ (ಕ, ಪ). ೩ ಸೆ (ಕ, ಮ). ೪ ಮೆ (ಕಾ), ಯಿ (ಕ). ೫ ಸಚ್ಚು (ಕ), ಸಜ್ಜು (ಪ) ೬ ಡವ (ಮ), ಡವೊ (ಕ, ಪ). ೭. ಲ್ಪ (ಪ). ೮. ಮ (ಕ, ಮ, ಪ). ೯. ಮಂ (ಕ, ಪ). ೧೦ ಪೆ (ಕ, ಮ, ಪ), ೧೧ ಱೆ (ಮ). ೧೨ ಪ (ಕಾ) ೧೩ X (ಮ)

ಬಿಡು ಬಿಡು ಮನ್ಮನಃಪ್ರಿಯನನಲ್ಲದೊಡಣ್ಮೆನುತಾಕೆ ಖಡ್ಗಮಂ
ಜಡಿದೊ[೧]ಡೆದಾ[೨]ಲಿಯುಂ ಜಲಮುಮೊರ್ಕುವಿನಂ ಶತಖಂಡಮಪ್ಪಿನಂ
ಸಿಡಿಲೆಳೆಮಿಂಚು ನುಚ್ಚುನುಱೆಯಪ್ಪಿನೆಗಂ ಕಡಿಖಂಡಮಪ್ಪಿನಂ
ಪೊಡೆದಳದೊಂದು ನೀಳಘನಮಂ ಪೊಡೆವಂತಿರೆ ಮತ್ತದಂತಿಯಂ ೧೨

ಸೋಗೆಯ ಕಳರುತಿಗಳ್ಕಿದ
ನಾಗರವೊಲ್ ಗಜಱುವವಳ ದನಿಗಳ್ಕಿ ಖಗಂ
ಪೋಗಲ್ಪಡೆಯದೆ ಖಚರಿಯ
ಮೇಗವನೀಡಾಡಿ ಪೋದನರಸರ ಮಗನಂ ೧೩

ವ|| ಈಡಾಡೆ ಬಿಟ್ವ ಬಾಳಭೂಪಾಳಚಂದ್ರನಂ ಪೆರ್ಮೊಲೆಯೊ[೩]ಳಾಂತು ಪಿಡಿದು ಪುಳಕದಿಂ ಕೀಲಿಸಿಕೊಂಡು ಕುಸುಮಸ್ತಬಕಮಂ ಕುಂಭಸ್ಥಳದೊಳೊಟ್ಟಿ ಕೊಂಡ ಕಾಮಕರಿಣಿಯಂತೆ ಪೋಪ ಶಾಲ್ಮಲಿದತ್ತೆಯನೊಂದು ದಿವ್ಯಧ್ವನಿ

ಎಲೆ ಖಚರಿ [೪]ಕೊಮರನಂ ನೀಂ[೪]
ನೆಲಕಿೞಿಪಳಿಪಿಂದಮುಯ್ಯದಿರು ಬಂದೀ ಭೂ
ತಲಮಂ ತೊೞಲ್ದು ನಿಮ್ಮಯ
ಕುಲಪತಿಯ ಮನೋರಥಕ್ಕೆ ಸಾರಥಿಯಕ್ಕುಂ ೧೪

ವ|| ಎನೆ ನಾಲ್ಕುಂ ದೆಸೆಯುಮಂ ನೋಡಿಯಿದು ದೇವತಾವಚನಮಲಂಘ್ಯಮೆಂದು ವಸುದೇವನಂ ವಿದ್ಯಾಧರಿ ಪರ್ಣಲಘುವಿದ್ಯೆಯ ಕೆಯ್ಯೊಳ್ಕೊಟ್ಟೊಡದು ಚಂಪಾಪುರದ ಪೊಱವೊೞಲ ಪದ್ಮಷಂ[೫]ಡದ ನಡುವಣ ಪುಳಿನ ತಳದೊಳಿರಿ[೬]ಸಿ ಪೋಗೆ ಬೞೆಯಮಿನಿಸಾನುಂ ಬೇಗಕ್ಕೆ ನಿಶಾವಸಾನಮಾಗೆ

೧೨. "ಬಿಡು, ನನ್ನ ಮನೋವಲ್ಲಭನನ್ನು ಬಿಡು. ಇಲ್ಲವಾದರೆ ವೀರನಾಗಿ ನಿಲ್ಲು" ಎಂದು ಆಕೆ ಖಡ್ಗವನ್ನು ಜಳಪಿಸಿ ಮದದಾನೆಯನ್ನು ಇರಿಯುವಂತೆ ಆಲಿಕಲ್ಲೂ ನೀರೂ ಚಿಮ್ಮಿ, ಸಿಡಿಲೂ ಮಿಂಚೂ ನುಚ್ಚುನೂರಾಗುವಂತೆ ಒಂದು ಕಪ್ಪು ಮೋಡವನ್ನು ಹೊಡೆದಳು.

೧೩. ನವಿಲಿನ ಧ್ವನಿಗೆ ಬೆದರಿದ ನಾಗರಹಾವಿನಂತೆ ಅವಳ ಗರ್ಜನೆಗೆ ಹೆದರಿ ಆ ವಿದ್ಯಾಧರನು ಅಸಹಾಯನಾಗಿ ಕುಮಾರನನ್ನು ಅವಳ ಮೇಲೆ ಬಿಸಾಕಿ ಓಡಿಹೋದನು.

ವ|| ಹೀಗೆ ಅವನು ಬಿಸಾಡಲಾಗಿ ಬೀಳುವ ಕೋಮಲ ರಾಜಕುಮಾರನನ್ನು ತನ್ನ ತೋರಮಲೆಗಳ ಮೇಲೆ ಆತುಕೊಂಡು, ರೋಮಾಂಚಿತಳಾಗಿ, ಕುಂಭಸ್ಥಳದಲ್ಲಿ ಹೂವಿನ ಗೊಂಚಲನ್ನು ಒಟ್ಟಿಕೊಂಡ ಕಾಮಹಸ್ತಿನಿಯಂತೆ ಶಾಲ್ಮಲಿದತ್ತ ಹೋಗುತ್ತಿರಲಾಗಿ ಒಂದು ದಿವ್ಯಧ್ವನಿಯು -

೧೪. "ಎಲೈ ವಿದ್ಯಾಧರಿಯೆ, ಕುಮಾರನನ್ನು ನೆಲಕ್ಕೆ ಇಳಿಸಿಬಿಡು. ಆಸೆಯಿಂದ ನಿನ್ನೊಡನೆ ಎತ್ತಿಕೊಂಡು ಹೋಗಬೇಡ. ಈತನು ಭೂಮಿಯಲ್ಲಿ ಸುತ್ತಾಡಿ ಬಂದು ನಿಮ್ಮ ಕುಲಪತಿಯ ಮನೋರಥವನ್ನು ಈಡೇರಿಸುವನು."

ವ|| ಎಂದು ನುಡಿಯಿತು. ವಿದ್ಯಾಧರಿ ನಾಲ್ಕೂ ದಿಕ್ಕುಗಳನ್ನು ನೋಡಿ, "ಇದು ದೇವವಾಣಿ, ಇದನ್ನು ಮೀರಲಾಗದು" ಎಂದುಕೊಂಡು ಪರ್ಣಲಘುವಿದ್ಯೆಯ ಕೈಯಲ್ಲಿ ವಸುದೇವಕುಮಾರನನ್ನು ಕೊಟ್ಟಳು. ಆ ವಿದ್ಯೆ ಅವನನ್ನು ಚಂಪಾಪುರದ ಹೊರವಲಯದಲ್ಲಿದ್ದ

೧ ಡೆವಾ (ಕ). ಡನಾ (ಪ) ೨ ದೆ (ಕಾ). ೩ ಳ್ತಾನು (ಕಾ). ೪ ಕುಮಾರಕನಂ (ಕ, ಮ, ಪ). ೫ ಕುಂ (ಕ). ೬ ಳಿ (ಮ).

ಕೊಳರ್ವಕ್ಕಿಗಳ ಕಳಕಳಕ್ಕೆ ಬೆರ್ಚಿದಂತೆಚ್ಚತ್ತು ಬೆಕ್ಕಸಂ ಬಟ್ಟಿದೇನೆಂದು ನಿರವಿಸಿ ನೀರಜ ವನದ ರಮಣೀಯತೆಗೆ ಮನಮೆಳದುವರಿಯೆ ಮಜ್ಜನಂಬೊಕ್ಕು ಜಿನಪತಿಯಂ ಚಿತ್ತಚೈತ್ಯಾಲಯಾ[1]ಳಂಕಾರನಂ ಕಾಣಲುತ್ಸುಕನಾಗಿ ಮೋಹಮೆಂಬ ಮುಖವಸ್ತ್ರಮಂ ಕಳೆದು ಶುದ್ಧಧ್ಯಾನಮೆಂಬ ಸುಧಾ[2]ರಸ[2]ದಿಂ ಸ್ನಪನಂಗೆಯ್ದು ಸತ್ಸಲಿಲದಿನಾರಾಧಿಸಿ ಸಹಜಾನಂದಚಂದನದಿನಣ್ಪೆಕ್ಕಿ ನಿರೀಕ್ಷಿತಾಕ್ಷತಂಗಳಿನರ್ಚಿಸಿ ವಿಕಸಿತವಾಕ್ಪುಷ್ಪದಿಂ ಪೂಜಿಸಿ[3] ಪರಮ[4]ಭಕ್ತಿಪರಾನ್ನಮಂ ಮುಂದಿಟ್ಟು ವಿಮಲಜ್ಞಾನಮಣಿದೀಪದಿಂ ನಿವ[5]ಳಿಸಿ ದಶಧರ್ಮದಶಾಂಗಧೂಪಮಂ ಸಮರ್ಪಿಸಿ ಪುಣ್ಯಫಲ ನಿಚಯದಿನ[6]ರ್ಚಿಸಿ[6] ಕೃತಕೃತ್ಯನಾಗಿ ಕಣ್ದೆಱೆ[7]ದು ಕೆಯ್ಯೆತ್ತಿಕೊಂಡು ಕೊಳನ ತಡಿಯೊಳ್ಕಾಲ್ಮೊಗಂ ದೊಳೆವ ಮಾನಸಂ ಸರೋವರಮಂ ಪಾಯ್ವ ಪೊಳೆಯಾವುದೆನೆ ಕಳಕಳಿಸಿ ನಗುತ್ತುಮವರೀಯಣ್ಣ ನಾಗಸದಿನೊಡೆದು ಬಿಟ್ಟಂತೆ ನುಡಿದಪನೆಂದೊಡರಸಂ ನಿಮ್ಮ ಮಾತು ಮತ್ತ[8]ನಿಸದೆಂದು ಹನೂಮ [ತ್ಪು[9]] ದಾಂಟಿದಂ ಸಿದ್ಧಾಲಯಮಂ ಕಾಣ್ಬಂತೆ ವಾಸುಪೂಜ್ಯಭಟ್ಟಾರಕರ ನಿರ್ವಾಣ ಭೂಮಿಯೊಳ್ ವಾಸವಾದೇಶದಿಂ ಧನಪತಿ ಸಮೆದ ವಿಚಿತ್ರಚೈತ್ಯಾಲಯಮಂ ಕಂಡು ಬಲಗೊಂಡು ಸರ್ವಜ್ಞ ಬಿಂಬಕ್ಕಭಿಮುಖನಾಗಿ ಮುಗಿದ ಕೆಯ್ಯಂ ಮಸ್ತಕಕ್ಕೊಯ್ದು

ಜಯತ್ಯಮಲತಾವಾಸೋ ವಾಸುಪೂಜ್ಯೋ ಜಿನೇಶ್ವರಃ
ಯದ್ಬುದ್ಧಿಕಾಮಿನೀ ಮಧ್ಯೇ ತ್ರಿಲೋಕೀ ತ್ರಿವಲೀಯತೇ ೧೫

ಒಂದು ಕಮಲ ಸರೋವರ ಮಧ್ಯದ ಮರಳು ದಿಣ್ಣೆಯ ಮೇಲೆ ಇಳಿಸಿ ಹೋಯಿತು. ಮುಂದೆ ಸ್ವಲ್ಪ ಹೊತ್ತಿಗೆ ಬೆಳಗಾಯಿತು. ಜಲಪಕ್ಷಿಗಳ ಕಳಕಳಕ್ಕೆ ಕುಮಾರನು ಎಚ್ಚತ್ತು ವಿಸ್ಮಿತನಾಗಿ, ಇದೇನೆಂದು ಯೋಚಿಸುತ್ತ, ತಾವರೆಗೊಳದ ಚೆಲುವಿಗೆ ಮನಸೋತು, ಅದರಲ್ಲಿ ಸ್ನಾನ ಮಾಡಿ, ಚಿತ್ತವೆಂಬ ಬಸದಿಯಲ್ಲಿ ಶೋಭಿಸುವ ಜಿನೇಂದ್ರನನ್ನು ಕಾಣುವ ಉತ್ಸಾಹದಿಂದ ಮೋಹವೆಂಬ ಮುಖವಸ್ತ್ರವನ್ನು ಕಳೆದು, ಶುದ್ಧಧ್ಯಾನವೆಂಬ ಅಮೃತದಿಂದ ಅಭಿಷೇಕಮಾಡಿ, ಸಹಜಾನಂದವೆಂಬ ಚಂದನವನ್ನು ಲೇಪಿಸಿ, ನಿರೀಕ್ಷಣವೆಂಬ ಅಕ್ಷತೆಗಳಿಂದ ಅರ್ಚಿಸಿ, ವಿಕಸಿತ ವಾಣಿಯೆಂಬ ಹೂಗಳಿಂದ ಪೂಜಿಸಿ, ಪರಮಭಕ್ತಿಯೆಂಬ ಅನ್ನವನ್ನು ನೈವೇದ್ಯ ಮಾಡಿ, ನಿರ್ಮಲ ಜ್ಞಾನವೆಂಬ ರತ್ನದೀಪದಿಂದ ನಿವಾಳಿಸಿ, ದಶಧರ್ಮಗಳೆಂಬ ದಶಾಂಗಧೂಪವನ್ನು ಸಮರ್ಪಿಸಿ, ಪುಣ್ಯಫಲ ಸಮೂಹದಿಂದ ಅರ್ಚಿಸಿ, ಕೃತಕೃತ್ಯನಾಗಿ ಕಣ್ಣು ತೆರೆದು, ಕೈಯೆತ್ತಿಕೊಂಡು ಕೊಳದ ತೀರದಲ್ಲಿ ಕಾಲುಗಳನ್ನು ಮುಖರನ್ನು ತೊಳೆದುಕೊಳ್ಳುತ್ತಿದ್ದ ಜನರಿಗೆ, "ಈ ಸರೋವರವನ್ನು ದಾಟುವ ಹಾದಿ ಯಾವುದು?" ಎಂದು ಕೇಳಿದನು. ಅವರು ಕಿಲಕಿಲನೆ ನಕ್ಕು "ಈ ಅಣ್ಣನು ಆಕಾಶದಿಂದ ಕಡಿದುಕೊಂಡು ಬಿದ್ದವನಂತೆ ನುಡಿಯುತ್ತಿರುವನು" ಎನ್ನಲಾಗಿ ಕುಮಾರನು, "ನಿಮ್ಮ ಮಾತು ಸಟೆಯಲ್ಲ" ಎಂದು ನುಡಿದು. ಹನುಮಂತನಂತೆ ನೆಗೆದು ದಾಟಿ, ಸಂಸಾರವನ್ನು ದಾಟಿದವನು ಸಿದ್ಧಲೋಕ ವನ್ನು ಕಾಣುವಂತೆ, ವಾಸುಪೂಜ್ಯಭಟ್ಟಾರಕರ ನಿರ್ವಾಣ ಭೂಮಿಯಲ್ಲಿ ಇಂದ್ರನ ಅಪ್ಪಣೆಯಿಂದ ಕುಬೇರನು ನಿರ್ಮಿಸಿದ್ದ ವಿಚಿತ್ರವಾದ ಬಸದಿಯನ್ನು ಕಂಡನು. ಅದಕ್ಕೆ ಪ್ರದಕ್ಷಿಣೆ ಹಾಕಿ, ಜಿನಮೂರ್ತಿಗೆ ಎದುರಾಗಿ ಮುಗಿದ ಕೈಯನ್ನು ಹಣೆಗೆ ಇಟ್ಟುಕೊಂಡು-

೧೫. "ಯಾವಾತನ ಬುದ್ಧಿಯೆಂಬ ಕಾಮಿನಿಯ ಮಧ್ಯದಲ್ಲಿ ಮೂರು ಲೋಕಗಳು ತ್ರಿವಳಿ ಗೆರೆಗಳಾಗಿರುವುವೂ ಅಂತಹ ನಿರ್ಮಲ ಸ್ಥಿತ ವಾಸುಪೂಜ್ಯಜಿನೇಶ್ವರನಿಗೆ ಜಯವಾಗಲಿ.

---

೧ ಯದೊಳ (ಕ, ಮ, ಪ). ೨ ಸಾರ (ಕ, ಮ, ಪ). ೩ + ದ (ಕ, ಮ). ೪ + ನ (ಮ). ೫ ವಾ (ಕ, ಮ, ಪ). ೬ ನರ್ಚನಂಗೆಯ್ದು (ಕ, ಮ, ಪ). ೭ ತ್ತೆ (ಕ, ಮ). ೮ ಪ್ಪನ್ನ (ಕ, ಮ). ೯ ಪ್ಪ (ಕಾ)ಯ

ವ|| ಎಂದಭಿಸ್ತುತಿಗೆಯ್ದಲ್ಲಿರ್ದ ಬೋಧಸಿಂಧುಭಟ್ಟಾರಕರಂ ವಂದಿಸಿ ಧರ್ಮ[೧]ಮುಮಂ[೧] ವಿದ್ಯಾಧರಲೋಕದಿಂದಲ್ಲಿಗೆ [೨]ತನ್ನ[೨] ಬಂದ ವೃತ್ತಾಂತಮು ಮಂ ಕೇಳ್ದು[೩] ಪೊಡೆವಟ್ಟು ಬಸದಿಯಂ ಪೊಱಮಡಲೊಡನೆ

ಇದು ವಾಣೀಮತ್ತಹಂಸೀಸ್ವನಮಿದು ಮದನಜ್ಯಾಲತಾಸಿಂಜಿತಂ ಮ
ತ್ತಿದು ನೃತ್ಯದ್ಭಾರತೀನೂಪುರರು[೪]ತಿಯಿ[೪]ದು ಪುಷ್ಪಾಯುಧಾಮೋದಮುಹ್ಯ[೫]
ನ್ಮದಭೃಂಗೀರಂಜಿತಂ ತಾನೆನೆ ನನೆಗಣೆಯಂ ತೋಱಿ ಬಂ[೬]ದಿಂಪು ನುಣ್ಪಿಂ
ದುದಿರ್ವಂತಾ ರಾಜಪುತ್ರಶ್ರುತಿಗತಿಥಿಯದೊಂದಾಯ್ತು ವೀಣಾಪ್ರಣಾದಂ ೧೬

ವ|| ಆ ವೀಣಾರವಂ ಬಂದ ಬಟ್ಟೆವಿಡಿದು ಪೋಗಿ ಬಸದಿಯೆಂಬಸಿಯಳ್ಪು[೭]ಟ್ಟ ಪಸಿಯ ನೇತ್ರಮನಸಕಟಿವಂತಿರ್ದುಪವನದ ನಡುವೆ ಪೂವಿನ ಪುಡಿಯೊಳೊಟ್ಟಿ ಬೆಟ್ಟದಂತಿರ್ದುದೊಂದು ಪೊಂಬಸದಿಯ ಮತ್ತವಾರಣದ ಮೇಲೆ

ಅಳಕಾಸಕ್ತೈಕಹಸ್ತಂ ಪ್ರಿಯಶುಕಪರಿಹಾಸಪ್ರಫುಲ್ಲೈಕ ಗಂಡ
ಸ್ಥಳಮಾ[೮]ದರ್ಶಾರ್ಪಿತೈಕೇ[೮]ಕ್ಷಣಮುಚಿತ ಸಖೀ ವಾಗ್ವಿತೀರ್ಣೈಕ ಕರ್ಣಂ
ಕಳವೀಣಾಲಿಂಗಿತೈಕಸ್ತನಮೆಸೆದುದು ಕಾಂತಾಜನಂ ರತ್ನಪೀಠಂ
ಗಳೊಳೇಕೈಕಾಂಗಲೀಲಾಬಲಮ[೯]ನೆರತಿನಾಥಂಗೆ ತೋರ್ಪಂದದಿಂದಂ ೧೭

ವ|| ಎಂದು ಸ್ತೋತ್ರಮಾಡಿ ಅಲ್ಲಿದ್ದ ಬೋಧಸಿಂಧುಭಟ್ಟಾರಕರನ್ನು ವಂದಿಸಿ, ಅವರ ಮುಖದಿಂದ ಧರ್ಮಬೋಧೆಯನ್ನು ವಿದ್ಯಾಧರಲೋಕದಿಂದ ತಾನು ಇಲ್ಲಿಗೆ ಹೇಗೆ ಬಂದನೆಂಬ ವೃತ್ತಾಂತವನ್ನೂ ಕೇಳಿ ತಿಳಿದುಕೊಂಡು ನಮಸ್ಕರಿಸಿ ಬಸದಿಯಿಂದ ಹೊರ ಬಂದೊಡನೆ -

೧೬. ಇದು ಸರಸ್ವತಿಯ ಮತ್ತು ಹಂಸಿಯ ಧ್ವನಿಯೋ ಮನ್ಮಥನ ಹೆದೆಯ ಝೇಂಕಾರವೋ ನರ್ತಿಸುತ್ತಿರುವ ಭಾರತಿಯ ನೂಪುರ ಧ್ವನಿಯೋ ಪುಷ್ಪಬಾಣಗಳ ಸುಗಂಧಕ್ಕೆ ಮರುಳಾದ ಭೃಂಗೀನಿನಾದವೋ ಎಂಬಂತೆ ಪುಷ್ಪಬಾಣವನ್ನು ತೋರಿ ಬಂದ ಇಂಪು ಮಧುರವಾಗಿ ಮೆಲ್ಲಮೆಲ್ಲನೆ ಇಳಿಯುವ ಹಾಗೆ ವೀಣಾ ಧ್ವನಿಯೊಂದು ಅವನ ಕಿವಿಗೆ ಕೇಳಿಸಿತು.

ವ|| ಆ ವೀಣಾಧ್ವನಿ ಬಂದ ಜಾಡು ಹಿಡಿದು ಹೋಗಲಾಗಿ, ಬಸದಿಯೆಂಬ ಚೆಲುವೆ ಉಟ್ಟುಕೊಂಡ ಹಸಿರು ರೇಷ್ಮೆ ಸೀರೆಯನ್ನು ಮೀರುವಂತಿದ್ದ ಉಪವನದ ನಡುವೆ ಹೂವಿನ ಪರಾಗವನ್ನು ಒಟ್ಟಿ ರಚಿಸಿದ ಬೆಟ್ಟದಂತಿದ್ದ ಚಿನ್ನದ ಬಸದಿಯ ಮುಖಮಂಡಪದ ಜಗಲಿಯ ಮೇಲೆ -

೧೭. ತಲೆಗೂದಲಿಲ್ಲಿಟ್ಟ ಒಂದು ಕೈ, ಪ್ರೀತಿಯ ಗಿಳಿಯೊಡನೆ ಪರಿಹಾಸ ಮಾಡುತ್ತ ಪ್ರಫುಲ್ಲವಾಗಿ ತೋರುವ ಒಂದು ಕೆನ್ನೆ, ಕನ್ನಡಿಯಲ್ಲಿ ನಟ್ಟ ಒಂದು ಕಣ್ಣು, ಸಖಿಯ ಉಚಿತವಾದ ಮಾತಿಗೆ ಗಮನವಿತ್ತ ಒಂದು ಕಿವಿ, ಮಧುರವಾದ ವೀಣೆಯನ್ನು ಒರಗಿಸಿಕೊಂಡ ಒಂದು ಮೊಲೆ - ಹೀಗೆ ರತ್ನಪೀಠಗಳಲ್ಲಿ ಕುಳಿತು, ಒಂದು ಪಾರ್ಶ್ವದ ವಿಲಾಸವನ್ನೇ ಮನ್ಮಥನಿಗೆ ತೋರುವಂತಿರುವ ಕಾಂತೆಯರನ್ನು ಕಂಡನು.

---

೧ ಮಂ (ಕ, ಮ. ಪ). ೨ X (ಕ, ಪ). ೩ + ಸಂತೋಷಂಬಟ್ಟು (ಮ). ೪ ತಮಿ (ಕಾ, ಮ). ೫ ದ್ಯ (ಕ, ಪ). ೬ ಬಾ (ಕ, ಪ). ೭ ಳು (ಕ, ಮ, ಪ). ೮ ದಾಶಾರ್ಪಿತಂ ಲ (ಕ, ಪ). ದಶೋರ್ಪಿತಂ ವೀ (ಮ). ೯ ಮ (ಕ, ಮ. ಪ).

ವ|| ಮತ್ತಮಾ ಬಸದಿಯೊಳಗೆ ಬಿದಿ ಬಯ್ತ ಭುವನಭಾಗ್ಯದೇವತೆಯಂತಿರ್ದ ಪದ್ಮಾವತಿಯ ಮುಂತೆ[೧] ಚಂದ್ರಬಿಂಬಮಂ ತುಂಬಿ ಮಾಡಿ ಬಿಸತಂತುಸಿಂಜಿನಿಯಂ ತಂತಿ ಮಾಡಿ ಇಕ್ಷುಚಾಪದಂಡಮಂ ದಂಡಿಗೆ ಮಾಡಿ ಪಂಚಸರಂಗಳಂ ಸಪ್ತಸ್ವರಂಗಳಂ ಮಾಡಿ ಜಿನಪತಿಯುಮನೆನ್ನ ಗಂಡನೊಳೆ ಪಡೆದು ಕುಡುವುದೆಂದು ದೇವಿಯನಾರಾಧಿಸಿ ಬೀಣೆಯಂ ಬಾಜಿಸುವ ರತಿಯಂತಿರ್ದಳನೊರ್ವಳಂ ಸೌಂದರ್ಯಸುಕುಮಾರಿಯಂ [೨]ಕುಮಾರಿಯಂ[೨] ಕಂಡುಮಾಕೆಯ ವೀಣಾವಾದನ ವೈದ[೩]ಗ್ಧತೆ[೩]ಗಂ ಸಕಳ ತ್ರಿಭುವನಾತಿಶಯ ರೂಪಾಕೃತಿಗಂ ಕುಮಾರಂ ಮೆಚ್ಚಿಮೆ[೪]ಱಿದು ಕಂಬದ ಮಱಿಯುಂ ಸಾರ್ದು ಕೇಳುತ್ತುಮಿರ್ಪುದನಾಕೆಯ ಗುರು ಮನೋಹರನೆಂಬ ಗಂಧರ್ವಾಚಾರ್ಯಂ ಕಂಡು ವಸುದೇವನಂ ದೇವನೆಂದೇ ಬಗೆದು[೫] ಕುಳ್ಳಿರಲ್ಕುಡಿಸಿ ಕುಮಾರನಾಕಾರಮುಮನೇಱಿಯುಮಿಟಿಯೆಯುಂ ನೀಡುಂ ಭಾವಿಸಿ ನೋಡಿ

ಶ್ರೀಯಂ ತಾಳ್ದಿರ್ದ ವಕ್ಷಂ, ಕಿಸುಸೆರೆವರಿದಿರ್ದಕ್ಷಿಯುಗ್ಮಂ ಪಯೋಜ
ಪ್ರಾಯಂ ತಾಮ್ರಾಧರೋಷ್ಠಂ ವದನಮಿಭಕರಸ್ಪರ್ಧಿಗಳ್ತೋಳ್ಗಳಂ[೬] ಗ
ಯ್ಯಾ [ಯೂ[೭]] ರೇಖಾಭಿರಾಮಂ ಪೊಱ [೮]ಡಿ ಕಮಠಾ[೮]ಕಾರ[೯]ಮಾಕಾರಮತ್ಯಾ[೯]
ದೇ[೧೦]ಯಂ ಸಾಮಾನ್ಯನಲ್ಲಂ ತ್ರಿಭುವನ ಜನತಾಮಾನ್ಯನೀತಂ ವಿನೀತಂ ೧೮

ವ|| ಎಂದು ಮನದೊಳೆ ಮೆಚ್ಚುತ್ತುಮಿರ್ಪನ್ನೆಗಂ ಪನ್ನಗ ಪೂಜಿತೆ ವೀಣಾವಾದನ ಪ್ರವೀಣತೆಗೆ ಮೆಚ್ಚಿ ಮನವೊಸೆದು ಪಸಾಯಮನಿತ್ತ ಮಕುಟದ ಮುಕುಳಮನಾ ಕುಮಾರಿ

ವ|| ಆ ಬಸದಿಯೊಳಗೆ ವಿಧಾತನು ಬಚ್ಚಿಟ್ಟ ಭುವನಭಾಗ್ಯದೇವತೆಯಂತಿದ್ದ ಪದ್ಮಾವತಿಯ ಮುಂದೆ ಚಂದ್ರಬಿಂಬವನ್ನೆ ತುಂಬಿ (ಬುರುಡೆ) ಮಾಡಿ, ಕಾಮನ ಧನುರ್ದಂಡವನ್ನೆ ದಂಡಿಗೆ ಮಾಡಿ, ಐದು ಪುಷ್ಪಬಾಣಗಳನ್ನೆ ಸಪ್ತಸ್ವರಗಳನ್ನಾಗಿ ಪರಿವರ್ತಿಸಿ ಕೊಂಡು, "ಜಿನಪತಿಯನ್ನು ನನ್ನ ಗಂಡನಲ್ಲಿಯೆ ಅಳವಡಿಸಿಕೊಡು" ಎಂದು ದೇವಿಯನ್ನು ಆರಾಧಿಸುತ್ತ ವೀಣೆಯನ್ನು ನುಡಿಸುವ ರತಿಯೊ ಏನೊ ಎಂಬಂತೆ ಇದ್ದ ಸುಕುಮಾರ ಸುಂದರಿಯಾದ ಕುಮಾರಿಯನ್ನು ಕಂಡು, ಆಕೆಯ ವೀಣೆ ನುಡಿಸುವ ನೈಪುಣ್ಯಕ್ಕೂ ಲೋಕಾತಿಶಯವಾದ ರೂಪಕ್ಕೂ ಕುಮಾರನು ಮೆಚ್ಚಿ ಕಂಬದ ಮರೆಯಲ್ಲಿ ಕೇಳುತ್ತ ನಿಂತನು. ಆಕೆಯ ಗುರುವಾದ ಗಂಧರ್ವಾಚಾರ್ಯನು ಈತನನ್ನು ಕಂಡು, ದೇವನೆಂದೇ ಭಾವಿಸಿ, ಕುಳ್ಳಿರಲು ಆಸನವನ್ನಿತ್ತು, ಕುಮಾರನ ಆಕಾರವನ್ನು ತಲೆಯಿಂದ ಕಾಲ್ತುದಿಯವರೆಗೆ ಚೆನ್ನಾಗಿ ಭಾವಿಸಿ ನೋಡಿ -

೧೮. "ಶೋಭೆಯುಳ್ಳ ಎದೆ, ಕೆನ್ನಗೆ ಹರಡಿರುವ ಕಣ್ಣು, ಕೆಂಪಾದ ತುಟಿ, ಕಮಲದಂತಹ ಮುಖ, ಆನೆಯ ಸೊಂಡಿಲಿಗೆ ಸಮಾನವಾದ ತೋಳುಗಳು, ಆಯೂರೇಖೆ ಯಿಂದ ರಮಣೀಯವಾದ ಅಂಗೈ, ಆಮೆಯಾಕಾರದ ಹೊರ ಅಡಿ- ಎಂತಹ ರೂಪವಿದು! ಈತನು ಸಾಮಾನ್ಯನಲ್ಲ. ವಿನಯಶಾಲಿಯಾದ ಈ ಪುರುಷನು ಜನತೆಗೆ ಮಾನ್ಯನಾದವನು"

ವ|| ಎಂದು ಮನಸ್ಸಿನಲ್ಲಿಯೆ ಮೆಚ್ಚುತ್ತ ಇರುವಾಗ, ನಾಗಪೂಜಿತನಾದ

---

೧ ದೆ (ಕ, ಮ. ಪ) ೨ X (ಕಾ). ೩ ಗ್ಧಿಕೆ (ಕ, ಮ, ಪ). ೪ + ಯ್ಮ (ಕ, ಮ, ಪ). ೫ + ತನ್ನ ಕೆಲಕ್ಕೆ ಕರೆದು (ಮ), ಕೆಲಕ್ಕೆ ಕರೆದು (ಕ, ಪ). ೬ ಳುಂ (ಕಾ), ೭ ಯುಂ (ಕ, ಕಾ. ಮ). ೮ ವಡಿ ಮಕರಾ (ಮ), ಮಡಿಮಕರಾ (ಕ, ಪ). ೯ ಮತ್ಯಾಯತಂಗಳ್ (ಕ, ಮ. ಪ). ೧೦ ಶ್ದೀ (ಕ, ಮ. ಪ).

ಮುಡಿಯೊಳಿಟ್ಟು[೧]ಭಟಾರಿ[೧]ಗೆ ಪೊಡೆವಟ್ಟು ಬಂದುಪಾಧ್ಯಾಯಂಗಮೆಱಗಿ ದೇವಿಯೆನಗೆಂದು ಮೀಯದ ವರಪ್ರಸಾದಮನಿಂದು ಗುರುಚರಣಪ್ರಸಾದದಿನಿತ್ತಳೆಂದು ಪೋಪುದುಮುಪಾಧ್ಯಾಯನೀ ಮಹಾನುಭಾಗ[೨]ನ ಬರವು ದೇವತೆಯ ಬರವುಮೀಯಿಂದುವದನೆಗಿಂದು ಸಮನಿಸಿದ ಕಾರಣದಿನೀ ಕಾರಣಪುರುಷನೀ ವರಾಂಗನೆಗೆ ವರನಾಗಲ್ವೇೞ್ಕುಮೆಂದು ಮಂದಸ್ಮಿತ ವದನನಾಗೆ[೩] ವಸುದೇವನಱಿದೀ ಕುಮಾರಿಯಾರ ಮಗಳಾರ್ಗೆ ಕುಡಲಿರ್ದಪರೀ ಪರಮೇಶ್ವರಿಯ ಪರಿ[೪]ಜನಮೇಕೆ ಬಾಳಕರನೆತ್ತಿದಂತೆ ವೀಣೆಯಂ ಕವುಂಕುಳೊಳವುಂಕಿಕೊಂಡಿರ್ದಪಳೆಂಬುದುಮೋಜನೆಂದನೀಕೆಯೀ ಪುರಮನಾಳ್ದಂ ಚಾರುಚರಿತಂ ಚಾರುದತ್ತನೆಂಬ ಪರದನಮಗಳೀ ವಾಣಿಗೀ [೫]ವೀಣೆ[೫]ಯೊಳ್ ವಾ[೬]ಣೆಯಿಂ[೬] ಬಲ್ಲಳ್ ವೀಣಾವಾದನದಿಂ ತನ್ನನಾವಂ ಗೆಲ್ದನವಂಗಲ್ಲದೆ ಪೆಂಡತಿಯಾಗೆನೆಂದು ಪ್ರತಿಜ್ಞೆಯಂ ಮಾಡಿದಳಿವರಯ್ಯನುಂ ರಯ್ಯಮಾಗಿ ತಿಂಗಳ್ಗೊರ್ಮೆ ವೀಣಾಸ್ವಯಂಬರಮಂ ಮಾಟ್ಟನೆನ್ನರಪ್ಪ ಕಿನ್ನರರುಮೀ ಕನ್ನೆಗೆ ಸೋಲ್ತು ಕನ್ನೆಗೆವಂದ ರವಿಯಂತೆ ನಿಃಪ್ರಭ[೭]ರಾಗಿ ಪೋಪರಿದು ವಿಪಂಚೀ ಪ್ರಪಂಚಮೆನೆ ಕುಮಾರನೊಸೆದು ತನ್ನೊಳಿಂತೆಂದಂ

ಪರದರ ಸುತೆಗಿನಿತು ಕಳಾ
ಪರಿಣತೆಯುಂ[೮] ರೂಪುಮಾಗದೆಳಗೊಸಗಿನ ಪೂ
ಮರದಡಿಯೊಳಿರ್ದ ಸಂಪಗೆ
ಯರಲ್[೯]ರ್ಪವೊಲಿರ್ದಳೀಕೆಯಾವನ ಮಗಳೋ ೧೯

ಪದ್ಮಾವತೀದೇವಿಯು ವೀಣಾವಾದನ ಕೌಶಲಕ್ಕೆ ಮೆಚ್ಚಿ, ಸಂತೋಷದಿಂದ ಅನುಗ್ರಹಿಸಿದ ಕಿರೀಟದ ಹೂವನ್ನು ಆ ಕುಮಾರಿ ತನ್ನ ಮುಡಿಯಲ್ಲಿಟ್ಟುಕೊಂಡು ದೇವಿಗೆ ನಮಸ್ಕರಿಸಿ ಬಂದು, ಗುರುವಿಗೂ ನಮಸ್ಕಾರ ಮಾಡಿ "ಎಂದೂ ಕೊಡದ ವರ ಪ್ರಸಾದವನ್ನಿಂದು ದೇವ ನನಗೆ ಗುರುಗಳ ಪಾದಾನುಗ್ರಹದಿಂದ ಕೊಟ್ಟಳು" ಎಂದು ಹೇಳಿ ಹೋದಳು. ಆ ಉಪಾಧ್ಯಾಯನು "ಈ ಮಹಾನುಭಾವನ ಆಗಮನವೂ ಆ ಚಂದ್ರಮುಖಿಗೆ ದೇವತೆಯ ವರಪ್ರಸಾದವೂ ಇಂದು ಏಕಕಾಲದಲ್ಲಿ ಸಂಭವಿಸಿದ್ದರಿಂದ, ಈ ಕಾರಣಪುರುಷನು ಈ ಸ್ತ್ರೀರತ್ನಕ್ಕೆ ವರನಾಗಬೇಕು" ಎಂದು ಮುಗುಳ್ನಕ್ಕನು, ಅದನ್ನರಿತ ವಸುದೇವನು 'ಈ ಕುಮಾರಿ ಯಾರ ಮಗಳು? ಯಾರಿಗೆ ಕೊಡುವುದಿದೆ? ಈ ಪರಮೇಶ್ವರಿಯ ಪರಿಜನರು ಕೂಸುಗಳನ್ನು ಎತ್ತಿಕೊಳ್ಳುವಂತೆ ವೀಣೆಯನ್ನು ಕಂಕುಳಲ್ಲಿ ಅಮುಕಿಕೊಂಡಿರುವುದೇಕೆ?" ಎಂದು ಕೇಳಲಾಗಿ ಉಪಾಧ್ಯಾಯನು ಹೀಗೆಂದನು - "ಈಕೆ ಈ ಪುರದ ಅರಸನಾದ ಚಾರುದತ್ತನೆಂಬ ವ್ಯಾಪಾರಿಯ ಮಗಳು. ವೀಣೆಯಲ್ಲಿ ಸರಸ್ವತಿಗೂ ಮಿಗಿಲಾದವಳು. ವೀಣಾವಾದನದಲ್ಲಿ ತನ್ನನ್ನು ಗೆದ್ದವನನ್ನಲ್ಲದೆ ಬೇರೆ ಯಾರನ್ನೂ ಮದುವೆಯಾಗೆನೆಂದು ಪ್ರತಿಜ್ಞೆ ಮಾಡಿರುವಳು. ಇವಳ ತಂದೆಯು ತಿಂಗಳಿಗೊಮ್ಮೆ ರಮ್ಯವಾಗಿ ವೀಣಾ ಸ್ವಯಂವರವನ್ನು ಏರ್ಪಡಿಸುವನು. ಎಂತೆಂತಹ ಕಿನ್ನರರೂ ಕೂಡ ಈ ಕನ್ನೆಯ ಮುಂದೆ ಸೋತು, ಕನ್ಯಾರಾಶಿಗೆ ಬಂದ ಸೂರ್ಯನಂತೆ ನಿಸ್ತೇಜರಾಗಿ ಹೋಗವರು. ಇದು ವೀಣಾವೃತ್ತಾಂತ." ಈ ಮಾತನ್ನು ಕೇಳಿ ಕುಮಾರನು ತನ್ನಲ್ಲಿಯೆ ಹೀಗೆಂದುಕೊಂಡನು -

೧೯. "ವ್ಯಾಪಾರಿಯ ಮಗಳಿಗೆ ಇಷ್ಟೊಂದು ಕಲಾಪರಿಣತಿಯೂ ರೂಪವೂ

---

೧ ಭಟ್ಟಿತ್ತಿ (ಕ, ಪ). ಭಟ್ಟರಿ (ಮ). ೨ ವ (ಮ). ೩ ಗಿರ್ದುದಂ (ಮ). ೪+ಚೆಯ (ಕ). ೫ ವಾಣೆ (ಕಾ). ೬ ಣ (ಕಾ). ೭ ಭಾವ (ಮ). ೮ ಯಂ (ಕ). ೯ ಲಾ (ಕಾ).

ವ|| ಎಂದು ಮನದೊಡನೆ ಮಾತಾಡುವ ಕುಮಾರಂಗೆ ನಿನ್ನನುಮಾನಮನಱಿದೆ[೧]ನೆಂದು ಮನೋಹರ[೨]ನೆಂದನೀ ಪರದನ ಪರಮಮಿತ್ರನಮಿತಗತಿಯೆಂಬನಂಬರಚರನಾತನ ಮಗಳೀಕೆ ಗಂಧರ್ವದತ್ತೆಯೆಂಬೊಳೀ ಚಾರುದತ್ತನ ಚಾರಿತ್ರಕ್ಕಂ ಚತುರತೆಗಮಗಲಲಾಱದಮಿತಗತಿ ವಿದ್ಯಾಧರಲೋಕಕ್ಕೊಡಗೊಂಡು ಪೋಗಿ ತನ್ನ ರಾಜ್ಯಮಂ ಕುಡೆ ಕಡೆಗಣಿಸಿ ಗಂಧರ್ವದತ್ತೆಯ ಗಾಂಧರ್ವಗಂಧಿಯಪ್ಪ ಕಳಾಕೇಳಿಗಂ ವಲ್ಲಕೀ[೩]ವಲ್ಲಭತೆಗಂ ಬೆಡಂಗಿಂಗೆಡೆಗೊಂಡ ಗಾಡಿಗಂ ಬಯಸಿ ಕೊ[೪]ಳ್ಕೃಗಳ್ಗೊಂಡನಿ[೫]ದೀಕೆಯ ವೃತ್ತಕಮೆಂದು ವಸುದೇವನಂ ತನ್ನ ಮನೆಗೊಡಗೊಂಡು ಪೋಗಿ ಮಜ್ಜನಭೋಜನಾದಿಗಳಿಂ ಮನ್ನಿಸಿ ಮನೋಹರಂಗೆ ಮನೋಹರನಾಗಿ ಮಱುದಿವಸಂ ವೀಣಾ ಸ್ವಯಂಬರಮಾಗೆ ವೀಣೋಪಾಧ್ಯಾಯನೊಡಗೂಡಿ ಸ್ವಯಂಬರ ಮಂಡಪದೊಳ್ ಕುಳ್ಳಿರ್ದನನ್ನೆಗಂ ನೆರೆದ ಕಿನ್ನರ ಕಿಂಪುರುಷ ಗರುಡ ಗಾಂಧರ್ವ ಸಿದ್ಧ ವಿದ್ಯಾಧರರಂ "ವೀಣೆಯೆಂಬ" ಕರ್ಬಿನ ಬಿಲ್ಲನೇಱಿಸುವಂತೆ ಕಳೆಯನೇಱಿಸಿ ಜೇವಡೆ[೬]ವಂತೆ ಮಿ[೬]ಡಿದು ನನೆಗಣೆಯಂ ಕೊಳ್ವಂತೆ ಕೋಣಮಂ ಕೊಂಡು ಮಗ[೭]ಮಗಿಸುವಂತೆ ಬಾಜಿಸಿ ಮನೋಜವಿಜಯಾಧಿದೇವತೆಯಂತೆ ಗಂಧರ್ವದತ್ತೆ ಸೋಲಿಸೆ ವಸುದೇವಂ ಕಂಡು ಮನೋಹರನನುಮತದಿಂ ಕಳನೇಱುವಂತೆ ವಿದ್ಯಾಪೀಠಮನೇಱಿ ಬೀಣೆಯಂ ಬೇಡುವುದುಮುಪಾಧ್ಯಾಯನೊಳ್ಳಿದುವೆಂದಾ[೮]ಯ್ದು ತಂದಿತ್ತ ಬೀಣೆಯಂ ಮಿಡಿದು ನೋಡಿ 'ತಂತಿಯೊಳ್ತನುರೋಮಮುಮಂ ಸೋರೆಯೊಳ್ ಶಲ್ಯಮಂ ಪ್ರವಾಳದೊಳ್ಪಾಷಾಣಮಂ ತೋಱಿ ಕುಡುವಡೆ ನಿರ್ದೋಷಮಪ್ಪ ವೀಣೆಯಂ ಕುಡಿಮೆನೆ

ಇರುವುದು ಅಸಂಭವ, ಎಳೆಯ ಕೊಸಗಿನ ಹೂಮರದ ಕೆಳಗೆ ಸಂಪಗೆ ಅರಳಿದ ಹಾಗೆ ಇರುವ ಈಕೆ ಯಾವನ ಮಗಳೋ?"

ವ|| ಹೀಗೆ ತನ್ನ ಮನದೊಡನೆ ಮಾತಾಡುವ ಕುಮಾರನನ್ನು ಉದ್ದೇಶಿಸಿ, ಆ ಮನೋಹರನೆಂದನು - "ನಿನ್ನ ಅನುಮಾನ ನನಗೆ ತಿಳಿಯಿತು. ಈ ವ್ಯಾಪಾರಿಗೆ ಪರಮಮಿತ್ರನಾದ ಅಮಿತಗತಿಯೆಂಬ ವಿದ್ಯಾಧರನಿರುವನು. ಅವನ ಮಗಳೇ ಈಕೆ; ಗಂಧರ್ವದತ್ತೆಯೆಂದು ಹೆಸರು. ಚಾರುದತ್ತನ ಚಾರಿತ್ರಕ್ಕೂ ಚಾತುರ್ಯಕ್ಕೂ ಮನಸೋತು ಅವನನ್ನು ಬಿಟ್ಟಲಾರದೆ ಅಮಿತಗತಿಯು ಅವನನ್ನು ವಿದ್ಯಾಧರಲೋಕಕ್ಕೆ ಕರೆದೊಯ್ದು ತನ್ನ ರಾಜ್ಯವನ್ನು ಕೊಡಲು ಮುಂದಾದನು. ಅದನ್ನು ಕಡೆಗಣಿಸಿ ಗಂಧರ್ವದತ್ತೆಯ ಗಾಂಧರ್ವ ವಿದ್ಯಾಪೂರ್ಣವಾದ ಕಲಾಕ್ರೀಡೆಗೂ ವೀಣಾಪಾಂಡಿತ್ಯಕ್ಕೂ ಬೆಡಗನ್ನೊಡಗೊಂಡ ಚೆಲುವಿಗೂ ಬಯಸಿ ಚಾರುದತ್ತನು ಈಕೆಯನ್ನು ದತ್ತುಕ ಮಗಳಾಗಿ ಸ್ವೀಕರಿಸಿದನು. ಇದು ಈಕೆಯ ವೃತ್ತಾಂತ" ಎಂದು ತಿಳಿಸಿ ವಸುದೇವನನ್ನು ತನ್ನ ಮನೆಗೆ ಒಡಗೊಂಡು ಹೋಗಿ, ಸ್ನಾನಭೋಜನಾದಿಗಳಿಂದ ಉಪಚರಿಸಿದನು. ಮರುದಿವಸ ವೀಣಾಸ್ವಯಂವರ ನಡೆಯಲಾಗಿ ಮನೋಹರನಿಗೆ ತಾನೆ ಮನೋಹರನಾಗಿ ವಸುದೇವನು ಆ ಉಪಾಧ್ಯಾಯನೊಡನೆ ಸ್ವಯಂವರ ಮಂಡಪದಲ್ಲಿ ಕುಳಿತನು. ಕಬ್ಬಿನ ಬಿಲ್ಲನ್ನು ಏರಿಸುವಂತೆ ವೀಣೆಗೆ ಕಳೆಯೇರಿಸಿ, ಬಿಲ್ಲನ್ನು ಠೇಂಕರಿಸುವಂತೆ ಮಿಡಿದು ಪುಷ್ಪಬಾಣವನ್ನು ತೆಗೆದುಕೊಳ್ಳುವಂತೆ 'ನಖಿ'ಯನ್ನು ತೆಗೆದುಕೊಂಡು ಮಧುಮಧುರವಾಗಿ ನುಡಿಸಿ ಮನ್ಮಥನ ಜಯದೇವತೆಯಂತೆ ಗಂಧರ್ವದತ್ತೆಯು, ಸ್ವಯಂವರಕ್ಕೆ ಬಂದ ಕಿನ್ನರ, ಕಿಂಪುರುಷ, ಗರುಡ, ಗಾಂಧರ್ವ, ಸಿದ್ಧ, ವಿದ್ಯಾಧರರನ್ನೆಲ್ಲ ಸೋಲಿಸಿದಳು. ಅದನ್ನು ಕಂಡು ವಸುದೇವನು ಮನೋಹರನ

---

೧ X (ಕಾ). ೨ ನೆ (ಮ). ೩ ಕಾ (ಕಾ). ೪ ನಿಂತಿ (ಮ). ೫ X (ಕಾ), ೬ ದಂತೆ ವಿ (ಕಾ). ವಂತು ಮಿ (ಕ. ಪ). ೭ ನ (ಮ) ೮ ದೊ (ಕಾ).

ಮನೋಹರನೆಂದನೀ ಲೋಕದೊಳಿವಲ್ಲದಿಲ್ಲ ನಿಮ್ಮ ಮೆಚ್ಚುವ ಬೀಣೆಯಾವ ಲೋಕದೊಳುಂಟೆನೆ ವಸುದೇವನೊಂದಾಖ್ಯಾನಮಂ ಪೇೞಲೆ ತಗುಳ್ದಿನದೆಂತೆನೆ

ನುತ ಹಸ್ತಿನಾಖ್ಯಪುರದಧಿ
ಪತಿ ಮೇಘರಥಂಗಮೆಸೆವ ಪದ್ಮಾವತಿಗಂ
ಸುತರಾದರ್ ಜಗತೀ ವಿ
ಶ್ರುತ ವಿಷ್ಣುಕುಮಾರ ಪದ್ಮರಥಗರತಿಸೇವ್ಯರ್[೧] ೨೦

ವ|| ಮೇಘರಥಂ ಮೇಘೇಕ್ಷಣೇಕ್ಷಣದರ್ಶನದಿಂ ವೈರಾಗ್ಯಪರನಾಗಿ ವಿಷ್ಣುಕುಮಾರಂ ಬೆರಸು ತಪಂಬಟ್ಟಂ[೨] ಪೆಱಗೆ ರಾಜ್ಯದೊಳ್ನಿಂದ ಪದ್ಮರಥನ ಮೇಲೆ [೩]ಮಲೆ[೩]ದೆತ್ತಿ ಬಂದ ಪ್ರತ್ಯಂತ ಭೂಪಾಳರ ಬಲಮಂ ಬಲಿಯೆಂಬ ಮಂತ್ರಿಯುಂ ಮಂತ್ರಬಲದಿಂ ಬಾರದಂತು ಬಾರಿಸೆ ಪದ್ಮರಥಂ ಮೆಚ್ಚಿ ಮೆಚ್ಚಿತಂ ಬೇಡಿಕೊಳ್ಳೆನೆ ಬಲಿಜೋ[೪]ಕೋಱನಂ[೫]ತಿರೇ[೬]ೞು ದಿವಸದರಸುತನಮಂ [೭]ಬೇಡಿ[೭] ಪಡೆದನನ್ನೆಗಮಾ ಪುರದ ಪೊಱವೊೞಲ ಸೌಮ್ಯಗಿರಿಯೊಳ್

ಧೃತಿಯಿಂ ಮಚ್ಚರಿಸುವ ಪ
ರ್ವತಮಂ ತಾನಿಕ್ಕಿ ಮೆಟ್ಟಿದಂತಿರೆ ಯತಿ ಸಂ
ತತಿವೆರಸಕಂಪನವ್ರತಿ
ಪತಿಯಿರ್ದಂ ಯೋಗ[೮]ಧುರ್ಯನಚಳಿತಧೈರ್ಯಂ[೮] ೨೧

ಅನುಮತಿಯಿಂದ ಕಣವನ್ನೇರುವಂತೆ ವಿದ್ಯಾಪೀಠವನ್ನು ಏರಿ, ವೀಣೆಯನ್ನು ಬೇಡಲಾಗಿ, ಉಪಾಧ್ಯಾಯನು ಉತ್ತಮವೆಂದು ಆಯ್ಕೆ ಮಾಡಿ ತಂದ ವೀಣೆಯನ್ನು ಮಿಡಿದು ನೋಡಿ, ತಂತಿಯಲ್ಲಿ ಮೈಗೂದಲನ್ನೂ ಸೋರೆಯಲ್ಲಿ ಶಲ್ಯವನ್ನೂ ಪ್ರವಾಳ (ವೀಣೆಯ ಕೊರಳು)ದಲ್ಲಿ ಕಲ್ಲನ್ನೂ ತೋರಿಸಿ "ಕೊಡುವುದಾದರೆ ದೋಷವಿಲ್ಲದ ವೀಣೆಯನ್ನು ಕೊಡಿ" ಎಂದನು. ಆಗ ಮನೋಹರನು, "ಲೋಕದಲ್ಲಿ ಇವಲ್ಲದೆ ಬೇರೆ ವೀಣೆಗಳಿಲ್ಲ. ನೀವು ಮೆಚ್ಚುವ ವೀಣೆ ಯಾವ ಲೋಕದಲ್ಲಿ ಉಂಟು?" ಎಂದನು. ಅದಕ್ಕುತ್ತರವಾಗಿ ವಸುದೇವನು ಒಂದು ಕತೆಯನ್ನು ಹೀಗೆ ಹೇಳತೊಡಗಿದನು -

೨೦. "ಪ್ರಸಿದ್ಧವಾದ ಹಸ್ತಿನಪುರದ ಅರಸು ಮೇಘರಥನಿಗೂ ಪದ್ಮಾವತಿಗೂ ಜಗದ್ವಿಖ್ಯಾತರಾದ ವಿಷ್ಣುಕುಮಾರ ಮತ್ತು ಪದ್ಮರಥ ಎಂಬಿಬ್ಬರು ಮಕ್ಕಳಾದರು.

ವ|| ಮೇಘರಥನು ಮೋಡಗಳನ್ನು ನೋಡುತ್ತ ವೈರಾಗ್ಯಪರನಾಗಿ ವಿಷ್ಣುಕುಮಾರನೊಡನೆ ತಪಸ್ಸಿಗೆ ಹೊರಟನು. ರಾಜ್ಯಕ್ಕೆ ಅಧಿಪತಿಯಾಗಿ ನಿಂತ ಪದ್ಮರಥನ ಮೇಲೆ ನೆರೆರಾಜ್ಯಗಳ ಅರಸುಗಳು ದಾಳಿ ಮಾಡಿದರು. ಆ ಪ್ರಸಂಗದಲ್ಲಿ ಬಲಿ ಎಂಬ ಆತನ ಮಂತ್ರಿಯು ಮಂತ್ರಬಲದಿಂದ ಅವರನ್ನು ನಿವಾರಿಸಲಾಗಿ ಪದ್ಮರಥನು ಮೆಚ್ಚಿ "ನಿನಗೆ ಇಷ್ಟವಾದುದನ್ನು ಕೇಳು, ಕೊಡುವೆನು" ಎಂದು ನುಡಿದನು. ಬಲಿಯು ಜೋಕುಮಾರನಂತೆ ಏಳುದಿನದ ಮಟ್ಟಿಗೆ ಅರಸುತನವನ್ನು ಬೇಡಿ ಪಡೆದುಕೊಂಡನು. ಅಷ್ಟರಲ್ಲಿ ಆ ಪುರದ ಹೊರವಲಯದ ಸೌಮ್ಯಗಿರಿಯ ಮೇಲೆ -

೨೧. ದೃಢತೆಯಲ್ಲಿ ತನ್ನೊಡನೆ ಸ್ಪರ್ಧಿಸುವ ಪರ್ವತವನ್ನು ಅಡಗಿಕ್ಕಿ ಮೆಟ್ಟಿದಂತೆ, ಅಚಲ ಧೈರ್ಯಶಾಲಿಯಾದ ಅಕಂಪನೆಂಬ ಮುನಿಯು ಯತಿಸಮೂಹದೊಡನೆ ತಪಸ್ಸಿಗೆ

---

೧ ವಸುಮತಿಯೊಳ್ (ಮ). ೨ X (ಕಾ), ೩+ ಮತ್ತಂ (ಮ). ೪ X (ಕಾ). ೫ ಚೋ (ಕ), ೬ ತೇ (ಮ). ೭ X (ಕಾ). ೮ ನಿಷ್ಪನವನೀಶ್ರೇಷ್ಠಂ (ಕಾ). ನಿಷ್ಪನಚಳಿತ ಧೈರ್ಯಂ (ಮ).

ವ॥ ಅದು ಕಾರಣದಿಂದಕಂಪನ ಮುನೀಶ್ವರಂಗೆ ಬಲಿಯುಪಸರ್ಗಮಂ ಮಾಟ್ಪಿ ಮನಮನೆತ್ತಿಕೊಂಡು ಕೋಟಿ ಹೋಮಮುಮಂ ಬ್ರಾಹ್ಮಣಭೋಜನಮುಮಂ ಸೌಮ್ಯಗಿರಿ ಗುಹಾಗೇಹಂಗಳೊಳ್ ಮಂತ್ರಿ ಮಾಡಿದಪನಲ್ಲಿಯಲ್ಲದೊಡೆಲ್ಲಿ[1]ಯುಂ ಗರಗರಿಕೆಯುಮಿಲ್ಲೆಂದು ಡಂಗು[2]ರಮಂ ಪೊ[3]ಯ್ಸೆ ಬಾಯ್ಸುವಿಗೆ ಪಾರ್ವರೆಲ್ಲಂ ಪರ್ವತಕ್ಕೆ ಮೂಷೆ[4]ಯಿಡುವಂತೆ ಸುತ್ತಿ ಮುತ್ತಿ ಬೇಳ್ವೆ[5] ಯುಮನಡುಗೆಯುಮನೆಡೆಯುಡುಗದೊಡರಿಸೆ

ಮುಗಿ[6]ಲಗ[6] ಶೃಂಗಮಂ ಮುಸುಜೆ ಮೇವವೊಲುರ್ವಿ ಪೊದಟ್ಟು ಪರ್ವೆ ಪೆ
ರ್ವೊಗೆ ಭಗಣಂ [7]ಕರಂ[7] ಬಳಸಿದಿಂದುವಿನಂತೆ ಮಯೂಖಮಾಲೆಯೋ
ಲಗಿಸುವ ಸೂರ್ಯನಂತೆ ಸೆಕೆ[8] ಸುತ್ತಿಜಿದಗ್ನಿ ಭಟಾರನಂತೆ ಯೋ
ಗಿಗಣ ಪರೀತನಸ್ಖಳಿತನಿರ್ದನಕಂಪನಯೋಗಿ ಯೋಗದೊಳ್ ೨೨

ವ॥ ಆ ಮುನಿಜನೋಪಸರ್ಗಮಂ ಮಾಟ್ಪುದು[9]ಮಂ ಕಂ[9]ಡಿಂತೇಕೆಂದು ವಿಷ್ಣುಕುಮಾರ ನಜಿದು ಪದ್ಮರಥನಲ್ಲಿಗೆ[9]ವಂದು[9] ಪೊಡೆವಟ್ಟೊಡಂ ಪರಸದೆ ವೀತರಾಗಾಸನಮನಿ[10]ಕ್ಕಿದೊಡಂ[10] ಕುಳ್ಳಿರದೆ ಕನಲ್ದಿಂತೆಂದಂ

ಮಂತ್ರಿ ಮುನಿದೀ ಮಹಾಮುನಿ
ಸಂತತಿಗೆ ಮಹೋಪಸರ್ಗಮಂ ಮಾಟ್ಪುದುಗಂ
ಡಿಂತೇಕೆ ಮ[11]ಣ್ಣ[11]ಮಂತು[12]ವಿ
ನಂತಿರ್ದಪೆಯರಸನಾದುದರ್ಕಿದು ಫಲಮೇ ೨೩

ನಿಂತಿದ್ದನು: ವ॥ ಅಕಂಪನ ಮುನಿಗೆ ಉಪಸರ್ಗವುಂಟುಮಾಡುವ ಉದ್ದೇಶದಿಂದ ಬಲಿಯು, "ಸೌಮ್ಯಗಿರಿಯ ಗವಿಮನೆಗಳಲ್ಲಿ ಕೋಟಿ ಹೋಮವನ್ನೂ ಬ್ರಾಹ್ಮಣ ಭೋಜನವನ್ನೂ ಮಂತ್ರಿಯು ಮಾಡಿಸುತ್ತಾನೆ. ಆ ಪ್ರದೇಶವನ್ನು ಬಿಟ್ಟು ಬೇರೆಲ್ಲಿಯೂ ಅಷ್ಟು ಸೊಗಸಾಗಿರುವುದಿಲ್ಲ" ಎಂದು ಡಂಗುರ ಹೊಯ್ಸಲಾಗಿ ಬಾಯ್ಸುವಿಗೆ ಹಾರುವರೆಲ್ಲರೂ ಬೆಟ್ಟಕ್ಕೆ ಮೂಸೆಯಿಡುವಂತೆ ಸುತ್ತಮುತ್ತಲೆಲ್ಲಾಕಡೆಗೆ ಹೋಮವನ್ನೂ ಅಡುಗೆಯನ್ನೂ ಹೂಡಿದರು.

೨೨. ಗಿರಿಶಿಖರವನ್ನು ಮೇಯಲೆಂದು ಮೋಡಗಳು ಮುಗಿಬಿದ್ದಿವೆಯೊ ಏನೊ ಎಂಬಂತೆ ದಟ್ಟವಾದ ಹೊಗೆ ಆವರಿಸಲಾಗಿ, ನಕ್ಷತ್ರಗಳ ಬಳಗದಲ್ಲಿರುವ ಚಂದ್ರನಂತೆ, ಕಿರಣಗಳ ಕಾಂತಿಯೊಡಗೂಡಿದ ಸೂರ್ಯನಂತೆ, ಸೆಕೆ ಸುತ್ತಿದ ಅಗ್ನಿಭಟ್ಟಾರಕನಂತೆ ಯತಿ ಸಮೂಹದಿಂದ ಪರಿವೃತನಾಗಿ ಅಕಂಪನನ ಮುನಿಯು ಯೋಗದಲ್ಲಿ ನಿಂತಿದ್ದನು.

ವ॥ ಆ ಮುನಿಜನಕ್ಕಾಗುವ ಉಪಸರ್ಗವನ್ನು ಕಂಡು, ಅದರ ಕಾರಣವನ್ನರಿತ ವಿಷ್ಣುಕುಮಾರನು ಪದ್ಮರಥನ ಬಳಿಗೆ ಬಂದನು; ನಮಸ್ಕರಿಸಿದರೂ ಅವನನ್ನು ಆಶೀರ್ವದಿಸದೆ, ವೀತರಾಗಾಸನವನ್ನು ಇಕ್ಕಿದರೂ ಕುಳಿತುಕೊಳ್ಳದೆ ಕೋಪದಿಂದ ಹೀಗೆಂದನು -

೨೩. "ನಿನ್ನ ಮಂತ್ರಿಯು ರೋಷದಿಂದ ಮಹಾಮುನಿಗಳ ಸಮೂಹಕ್ಕೆ ಇಷ್ಟೊಂದು

---

೧ X (ಕ, ಪ). ೨ ರಂಬೊ (ಕಾ). ೩ ಸೆ (ಕ, ಪ). ೪ ಳಿ (ಕ, ಪ). ೫ ಲ್ಗಳ (ಕ, ಪ). ಲ್ಗಲ್ (ಮ). ೬ ಗಳಂ (ಕ, ಪ). ೭ ಖೆ (ಮ), ಯೆ (ಕ, ಪ). ೮ ಗಂ (ಕಾ, ಕ, ಪ). ೯ ವೋದೊಡಂ (ಕ), ಪೋದೊಡಂ (ಪ), ವಂದಡಂ (ಮ). ೧೦ ತ್ತು ಕೊಂಡು (ಕ), ಕ್ಕಿ ಕೊಂಡು (ಪ), ಕ್ಕೆ ಕೊಂಡು (ಮ). ೧೧ ಯ (ಪ). ೧೨ ಮತ್ತು (ಕ),

ವ॥ ಎನೆ ಪದ್ಮರಥಂ ನಡುಗಿ ಮೂಱುಂಲೋಕಮು[೧]ಮನೆಱಗಿಸುವ ನಿಮ್ಮಡಿಯ ತಪೋರಾಜ್ಯಮೆಡೆಯು ಕಡೆಯು ಬಡವರುಮನೆಱ[೨]ಗಿಸಲಾ[೨]ಱದೆಮ್ಮ ರಾಜ್ಯಮೇತಱ ರಾಜ್ಯಮಿಂದ್ರೋಪೇಂದ್ರಾದಿಗಳ್ಗಾಸನಕಂಪಂ ಮಾಡ್ಪ ನಿಮ್ಮಡಿಯ ತಪಸ್ತೇಜದ ಪೊರೆಯೊಳ್ ಮನ್ನೆಯ ಮಂತ್ರಿಯುಮಂ ನಡುಗಿಸಲಾಱ[೩]ದೆಮ್ಮನ್ನರಪ್ಪ ನರಕೀಟಂಗಳ ತೇಜವಾದಿತ್ಯನ ತೇಜದ ಪೊರೆಯ ಮಿಂಬುಳುವಿನ ತೇಜದಂತಕ್ಕುಮಲ್ಲದೆಯುಂ ಬೇಗೆ ಪರ್ವಿದ[೪] ಪರ್ವತಂಗಳ ತಾಪಮಂ ಕಳೆವೊಡವಱಿಂದುನ್ನತಂಗಳಪ್ಪ ಜಳಧರಂಗಳೆ ಕಳೆಗುಂ [೫]ಕಿಟ್ಟಿ[೫]ದುವಪ್ಪ ತೊಱ[೬]ಯುಂ ಬಾವಿಯುಂ ಬಗರಗೆಯುಂ ಕಳೆಯಲಾಱವೀ ಮಹಾನುಭಾವರುಪಸರ್ಗಮಂ ಪಿಂಗಿಸುವೊಡೆ ಸಾಮರ್ಥ್ಯವಂತರಪ್ಪ ನಿಮ್ಮ[೬]ಡಿಗಳ್[೬] ಪಿಂಗಿಸು[೭]ವಿರ್ವಂದರಪ್ಪೆ[೭]ಮ್ಮಂದಿಗರಿಂದೇನಪ್ಪುದೆನೆ ವಿಷ್ಣುಕುಮಾರನಂತಾದೊಡಾಮೆ ನಿಯಮಿಸಿದಪೆಮೆಂದು ಪೋಗಿ

ಒ[೮]ಗೆಯೆ ಕವಿ[೯]ಲ್ತ ಕಾಸೆ ಪೊಸ ಜನ್ನಿವರಂ ಶಿಖಿ ಕೋವಣಂ ಕರಂ
ಡಗೆ ಕಿಸುವೊನ್ನ ಬಟ್ಟಗೊಡೆ [೧೦]ಬಾರಸ[೧೦]ನಾಮದ ಬೊಟ್ಟು [೧೧]ಬೊಟ್ಟಿ[೧೧]ನೊಳ್
ನೆಗೆವ[೧೨] ಕುಶಾಂಕುರಂ ಮಿಸುಪ ಮಂಜಿ ಪಲಾಶದ ದಂಡ[೧೩] ಕುಂಡಳಂ
ಬಗೆವುಗೆ ಬಂದನಂದು ಬಲಿಯಲ್ಲಿಗೆ ವಾಮನನಾಗಿ ಕಾಮ[೧೪]ದಂ ೨೪

ವ॥ ಆ ಮಾಣಿಕದಂತಪ್ಪ ಮಾಣಿ ಮಂತ್ರಿಯ ಮುಂದೆ ನಿಂದು ಮಂತ್ರಮಂ ಪೇಳ್ದಕ್ಷತೆಯಂ ಕೊಟ್ಟು

ಘೋರವಾದ ಉಪಸರ್ಗವನ್ನುಂಟುಮಾಡುತ್ತಿರುವನು. ಅದನ್ನು ಕಂಡರೂ ಕೂಡ, ಹೀಗೇಕೆ ಮಣ್ಣಿನ ಮೂರ್ತಿಯಂತೆ ತೆಪ್ಪಗೆ ಕುಳಿತಿರುವೆ? ನೀನು ಅರಸನಾಗಿದ್ದದಕ್ಕೆ ಇದೇ ಫಲವೇ?"

ವ॥ ಹೀಗೆನ್ನಲಾಗಿ ಪದ್ಮರಥನು ಭಯದಿಂದ ನಡುಗಿ, "ಮೂರು ಲೋಕಗಳಿಂದ ಎರಗಿಸಿಕೊಳ್ಳುವ ತಮ್ಮ ತಪೋರಾಜ್ಯವೇ ರಾಜ್ಯ, ಸಂದಿಗೊಂದಿಯ ಬಡವರನ್ನು ಕೂಡ ಬಾಗಿಸಲಾರದ ನಮ್ಮ ರಾಜ್ಯವೇತರ ರಾಜ್ಯ? ಇಂದ್ರನಿಗೂ ಉಪೇಂದ್ರನಿಗೂ ಆಸನ ಕಂಪವನ್ನುಂಟುಮಾಡುವ ತಮ್ಮ ತಪಸ್ತೇಜದ ಮುಂದೆ, ಮನ್ನೆಯ ಮಂತ್ರಿಯನ್ನು ಕೂಡ ನಡುಗಿಸಲಾರದ ನಮ್ಮಂತಹ ನರಕೀಟಗಳ ತೇಜವೇನು? ಸೂರ್ಯನ ಮುಂದೆ ಮಿಂಚುಹುಳುವಿನ ತೇಜವಿದ್ದಂತೆಯೆ. ಬೇಗೆ ಹತ್ತಿಕೊಂಡ ಬೆಟ್ಟಗಳ ತಾಪವನ್ನು, ಅವುಗಳಿಗಿಂತ ಮೇಲಿರುವ ಮೋಡಗಳೆ ನಿವಾರಿಸಬಲ್ಲುವಲ್ಲದೆ ಕೆಳಗಿರುವ ಹೊಳೆ, ಬಾವಿ, ಒರತೆಗಳು ನಿವಾರಿಸಲಾರವು. ಈ ಮಹಾನುಭಾವರ ಉಪಸರ್ಗವನ್ನು ತಮ್ಮಂತಹ ಸಮರ್ಥರೇ ಹಿಂಗಿಸಬೇಕಲ್ಲದೆ ನಮ್ಮಂತಹರಿಂದ ಏನಾದೀತು?" ಹೀಗೆನ್ನಲಾಗಿ ವಿಷ್ಣುಕುಮಾರನು ಹಾಗಾದರೆ ನಾವೇ ಮಾಡುವೆವು" ಎಂದು ನುಡಿದು ಹೋಗಿ,

೨೪. ಕಪಿಲವರ್ಣದ ಕಾಸೆ, ಹೊಸ ಜನಿವಾರ, ಚಂಡಿಕೆ, ಕೌಪೀನ, ಕರಡಗೆ, ತಾಮ್ರವರ್ಣದ ಸತ್ತಿಗೆ, ದ್ವಾದಶನಾಮದ ಬೊಟ್ಟು, ಬೆರಳಲ್ಲಿ ಒಪ್ಪುವ ದರ್ಭೆ, ಶೋಭಿಸುವ ಮುಂಜದುಡಿದಾರ, ಪಲಾಶದ ದಂಡ, ಕುಂಡಲ - ಇವುಗಳಿಂದ ಅಲಂಕೃತನಾದ ವಾಮನನಾಗಿ ಬಲಿಯ ಬಳಿಗೆ ಬಂದನು.

ವ॥ ಮಾಣಿಕ್ಯದಂತಿರುವ ಆ ವಟು ಮಂತ್ರಿಯ ಮುಂದೆ ನಿಂತು ಮಂತ್ರಘೋಷ ಮಾಡಿ ಅಕ್ಷತೆಯನ್ನು ಕೊಟ್ಟು -

---

೧ X (ಕ, ಪ). ೨ ಸಾ (ಕ, ಮ, ಪ). ೩ ರ್ಪರೆ (ಮ). ೪ X (ಕ, ಮ, ಪ). ೫ ಕೀಟಿ (ಕ, ಪ). ೬ ಂದಿಗರಿಗೆ (ಕಾ). ೭ ವಿರಿನ (ಮ). ೮ ಬ (ಪ). ೯ ವ (ಕ, ಪ). ೧೦ ಭಾಸುರ (ಪ) ಭಾರಸ (ಕ). ೧೧ ಕೊಪ್ಪಿ (ಪ). ೧೨ ದ (ಕ, ಮ, ಪ). ೧೩ ಡು (ಮ, ಪ). ೧೪ ಮು (ಕಾ).

ಬ[1]ಲಿಂ ವಿ[1]ಷ್ಣುರಯಂ ಕುರ್ಯಾದವಿಲಂಬಂ ಧನಂ ತವ
ಸಮಾಶ್ಲಿಷ್ಯತಿ ಯತ್ಪಾದಂ ಪ[2]ದ್ಮಭ್ರಾಂ[2]ತ್ಯಾ ತಪ[3]ಸ್ವಿಷಂ[3] ೨೫

ವ|| ಎಂದುಪಶ್ಲೋಕಿಸಿದ ವಟುವಿನ ವಾಕ್ಪಟುತ್ವಕ್ಕಂ ಬ್ರಹ್ಮವರ್ಚಸಕ್ಕಂ ಬೆಕ್ಕಸಂ ಬಟ್ಟು ಬಲಿ ಬಲಗೊಂಡು ಪೊಡೆವಟ್ಟು ಬೇಡಿಮೆನೆ ವಾಮನನೆಮಗೆ ಕುಳ್ಳಿರ್ದನುಷ್ಠಾನಮಂ ಮಾಡಲ್ತಕ್ಕನಿತನೆಮ್ಮ[4]ಕಿತ್ತಳಡಿಯೊಳ್ಮೂಱಡಿ ನೆಲನನೀವುದೆನೆ ಬಲಿ ಬೆಚ್ಚನೆ ಸುಯ್ದೆನಗದೃಷ್ಟ ಮೆಯ್ದದಿರ್ಕುಂ[5] ಕಿಱಿದಂ ಬೇಡಿದಿರ್ಕೊಟ್ಟೆನಳೆದುಕೊಳ್ಳಿಮೆನೆ

ವಟು ಮರದು[6]ದ್ದವಾದನ[7]ನಿತಲ್ಲ[8]ದಲೇ[8] ತಲೆಯುದ್ದವಾದನ
ಕ್ಕಟ ಮದಿಲುದ್ದವಾದನಿವನಾದನೊ ಪೇರ್ಮರದುದ್ದವಾದನಿಂ
ತುಟು ಗಿರಿಯುದ್ದವಾದನಿದು ವಿಸ್ಮಯಮಾ ಮುಗಿಲುದ್ದವಾದನೋ
ವಟಮಟಗಂ ದಿಟಕ್ಕೆನೆ ಕರಂ ಬಳೆದಂ ಮನದಂತೆ ವಾಮನಂ ೨೬

ವ|| ಅಂತುಮಲ್ಲದೆ

ಮರನಂ ಮುಟ್ಟಿದನಿಲ್ಲ ಮೇಘಘಟೆಯೊಳ್ಕಾಲ್ಗೋದನಿಲ್ಲಿಲ್ಲ ಭೂ
ಧರಮಂ ದಾಂಟಿದನಿಲ್ಲ ಬಾಂದೊಱೆಯೊಳಿಟ್ಟಂ ಕಾಲ[9]ನಿಲ್ಲಿ[9]ಲ್ಲ ಭಾ
ಸ್ಕರನಂ ಮಾಯದ ಮಾಣಿ[10]ಸೆಂಡೊದೆದನಾ[10]ಯಿಲ್ಲೆಂಬಿನಂ ನೀಡಿದಂ
ತರದಿಂ ಪಾದಮನುರ್ವಿ ಕೊರ್ವಿ ಬಲಿಯಂ ಗೆಲ್ವಾ ಮನಂ ವಾಮನಂ ೨೭

೨೫. "ಯಾರ ಪಾದವನ್ನು ಕಮಲವೆಂಬ ಭ್ರಾಂತಿಯಿಂದ ಸೂರ್ಯನು ಆಲಿಂಗಿಸುವನೊ ಅಂತಹ ವಿಷ್ಣು ಈತನು. ತಡ ಮಾಡದೆ ನಿನ್ನ ಧನವನ್ನು ದಾನಮಾಡಬೇಕು"

ವ|| ಎಂದು ಶ್ಲೋಕವನ್ನು ಹೇಳಿದನು. ಆ ವಟುವಿನ ವಾಕ್ಚಾತುರ್ಯಕ್ಕೂ ಬ್ರಹ್ಮತೇಜಕ್ಕೂ ಬೆಕ್ಕಸಬೆರಗಾಗಿ, ಬಲಿಯು ಪ್ರದಕ್ಷಿಣಪೂರ್ವಕವಾಗಿ ನಮಸ್ಕರಿಸಿ "ಏನು ಬೇಕೋ, ಕೇಳಿ" ಎನ್ನಲಾಗಿ, ವಾಮನನು, "ನಮಗೆ ಕುಳಿತುಕೊಂಡು ಅನುಷ್ಠಾನ ಮಾಡುವುದಕ್ಕೇ ನಮ್ಮ ಚಿಕ್ಕ ಪಾದಗಳ ಅಳತೆಯಿಂದ ಮೂರು ಅಡಿ ಭೂಮಿ ಸಾಕು. ಅಷ್ಟನ್ನು ಮಾತ್ರ ಕೊಡು"ಎಂದನು. ಬಲಿ ನಿಟ್ಟುಸಿರಿಟ್ಟು, "ನನಗೆ ಅದೃಷ್ಟ ಒದಗಿ ಬರಲಿಲ್ಲ. ತುಂಬ ಚಿಕ್ಕ ದಾನವನ್ನು ಕೇಳಿದಿರಿ. ಸರಿ ಕೊಟ್ಟಿದ್ದೇನೆ. ಅಳೆದುಕೊಳ್ಳಿ" ಎನ್ನಲಾಗಿ -

೨೬. ಆ ವಟು ಮರದೆತ್ತರವಾದನು; ಅಷ್ಟೇ ಅಲ್ಲ, ಅದರ ತುದಿಯೆತ್ತರವಾದನು. ಅಯ್ಯೋ! ಗೋಡೆಯ ಎತ್ತರಕ್ಕೆ ಮುಟ್ಟಿದನು. ಇವನು ಯಾವನೊ! ಹೆಮ್ಮರದೆತ್ತರವಾದನು. ಅಕೊ! ಬೆಟ್ಟದೆತ್ತರವಾದನು; ಆಕಾಶದೆತ್ತರವಾದನು! ಏನಿದು ವಿಸ್ಮಯ! ಇವನಾರೋ ಮಾಯಾವಿಯೊ ಏನೊ! ಮನಸ್ಸಿನಂತೆ ವಾಮನನು ಬೆಳೆಯುತ್ತಹೋದನು.

ವ|| ಅಷ್ಟೇ ಅಲ್ಲದೆ -

೨೭. ಮರವನ್ನು ಮುಟ್ಟಿದನು. ಅಲ್ಲ - ಮೋಡಗಳ ಗುಂಪಿನಲ್ಲಿ ಕಾಲು ತೂರಿದನು. ಅಲ್ಲಲ್ಲ. ಬೆಟ್ಟವನ್ನು ದಾಟಿದನು. ಅಲ್ಲವಲ್ಲ - ಆಕಾಶಗಂಗೆಯಲ್ಲಿ ಕಾಲಿಟ್ಟನು. ಛೇ! ಈ

---

೧ ಲಿಂದಿ (ಕಾ, ಮ). ಸ್ವಿ (ಪ), ಗ್ವಿ (ಕ). ೨ ದ್ಮಾಭಾ (ಕ, ಪ). ದ್ಮಭಾಂ (ಮ). ೩ ಸ್ವಿಷಾ (ಕ), ತ್ವಿಷಾ (ಪ), ಸ್ವಿಷಾಂ (ಮ). ೪ ಕಿಱ್ತಿ (ಕ), ಕುತ್ತ (ಪ). ೫ ದರ್ಕಂ (ಕಾ), ದಕ್ಕುಂ (ಮ). ೬ ದು (ಪ). ೭ ನೆ (ಕ, ಮ). ೮ ದೆಲೀ (ಕ), ದೆತೀ (ಮ), ದೊಡಿ (ಪ). ೯ ಮನಲ್ಲ (ಕ). ೧೦ ಸೆಂಡೊಡೆದನಃ (ಮ), ಸೇದೊಡದನೇ (ಪ).

ಅದೆ ಪೊಸ ಪೊನ್ನ ಸತ್ತಿಗೆಯದಲ್ಲದು ರತ್ನಹಟತ್ತ್ರಿ[೧]ರೀಟಮ
ಲ್ಲದು ವರವಜ್ರಕುಂಡಳಮದಲ್ಲದು ಕೌಸ್ತುಭರತ್ನಮಂತದ
ಲ್ಲದು ಕರಚಕ್ರವಲ್ಲದದು ನಾಭಿಸರೋಜಮೆನಲ್ದಿನೇಶ ಬಿಂ
ಬದ ನೆಲೆ[೨]ತರ್ಗಿ[೨]ತಪ್ಪಿನಮನುಕ್ರಮದಿಂ ಬಳೆದಂ ತ್ರಿವಿಕ್ರಮಂ ೨೮

ಇದು ಲೀಲಾದೃತಭೂಕರೇಣುಕರಮಲ್ತಭ್ರೋ[೩]ತ್ಪಟೀ ಕೇ[೩]ತುವ
ಲ್ತದು ಸೂರ್ಯಾಂಬುಜನಾಳಮಲ್ತು ಶಶಿ[೪]ಲೇಖಾ[೪]ದೀಪಿಕಾಸ್ತಂಭಮ
ಲ್ತದು ತಾರಾಕುಸುಮಾವಳೀ ವಿಟಪಮಲ್ತಭ್ರಾವನೀ ಶೇಷಮ
ಲ್ತದೆನಲ್ ತಾಂ ಬಳೆಯಿ[೫]ತ್ತನುಕ್ರಮದಿನಾ ಪಾದಂ ಪಯೋಜಾಕ್ಷನಾ ೨೯

ತರುವಿಂದತ್ತತ್ತ ನೀಳ್ದಂ ಘನಪಟಳದಿನತ್ತತ್ತ ಮಿಕ್ಕಂ ಹಿಮೋರ್ವೀ
ಧರದಿಂದತ್ತತ್ತ ಪೋದಂ ರವಿಯ ರಥದಿನತ್ತತ್ತ ಮೆಯ್ವೆರ್ಚಿದಂ ಸು
ಟ್ಟುರೆಯಿಂದತ್ತತ್ತ ಮತ್ತಂ ನಿಮಿರದಿರನಿದೇನೆಂದು ಜಾದಾದ್ಭುತಂ ನೋ
ಟ್ಟರ ಕಣ್ಣುಂ ಚೇ[೬]ತಮುಂ[೬] ಕಾಲ್ಗಿ[೭]ಡೆ ಕಡುಜವದಿಂ ವಿಷ್ಣು ವರ್ಧಿಷ್ಣುವಾದಂ ೩೦

ಮಾಯದ ವಟು ಸೂರ್ಯಬಿಂಬವನ್ನು ಚೆಂಡಿನಂತೆ ಒದೆದನು. ಅಲ್ಲ ಅದಕ್ಕೂ ಮೇಲೆ ಕಾಲು ನೀಡಿರುವನು - ಎಂಬಂತೆ ಬಲಿಯನ್ನು ಗೆಲ್ಲುವ ಉದ್ದೇಶದಿಂದ ವಾಮನನು ರಭಸದಿಂದ ಅತಿಶಯವಾಗಿ ಬೆಳೆಯುತ್ತ ಹೋದನು.

೨೮. ಅದು ಈತನ ಹೊಸ ಚಿನ್ನದ ಛತ್ರಿಯೆ? ಅಲ್ಲ, ಉಜ್ವಲವಾದ ರತ್ನಕಿರೀಟವೆ? ಅಲ್ಲ. ವಜ್ರಕುಂಡಲವೆ? ಅಲ್ಲ. ಕೌಸ್ತುಭರತ್ನವೆ? ಅಲ್ಲ, ಕೈಯಲ್ಲಿಯ ಚಕ್ರವೆ? ಅಲ್ಲ. ಹೊಕ್ಕುಳದ ಕಮಲ ಪುಷ್ಪವೊ ಏನೊ! ಎಂಬಂತೆ ಸೂರ್ಯಬಿಂಬ ಕೆಳಗೆ ಕೆಳಗೆ ಇಳಿದು ತೋರಲಾಗಿ ತ್ರಿವಿಕ್ರಮನು ಎತ್ತರೆತ್ತರವಾಗಿ ಬೆಳೆದನು.

೨೯. ಇದು ಲೀಲೆಯಿಂದೆತ್ತಿ ಹಿಡಿದ ಭೂಮಿಯೆಂಬ ಹೆಣ್ಣಾನೆಯ ಸೊಂಡಿಲು! ಅಲ್ಲ; ಮೋಡಗಳ ಮೇಲೆ ಏರಿಸಿದ ಆಕಾಶಧ್ವಜ! ಅಲ್ಲ, ಸೂರ್ಯನೆಂಬ ತಾವರೆಯ ನಾಳ ಅಲ್ಲ, ಚಂದ್ರಬಿಂಬವೆಂಬ ದೀಪವನ್ನು ಇಡುವ ಕಂಬ! ಅಲ್ಲ, ನಕ್ಷತ್ರವೆಂಬ ಹೂಗಳುಳ್ಳ ವೃಕ್ಷ! ಅಲ್ಲ. ಆಕಾಶಲೋಕದ ಸರ್ಪ! ಅಲ್ಲ. ಎಂಬಂತೆ ಆ ವಿಷ್ಣುಕುಮಾರನ ಪಾದವು ಎತ್ತರೆತ್ತರಕ್ಕೆ ಬೆಳೆಯುತ್ತ ಹೋಯಿತು.

೩೦. ಅಗೊ! ಮರದಿಂದ ಅತ್ತತ್ತ ಎತ್ತರಕ್ಕೆ ಹೋದನು. ಮೋಡಗಳಿಂದಾಚೆಗೆ ಮೇಲುಮೇಲಕ್ಕೆ ಹೋದನು. ಹಿಮವಂತ ಪರ್ವತದ ತುದಿಯನ್ನು ಮೀರಿ ಎತ್ತರಕ್ಕೆ ಬೆಳೆದನು. ಸುಟ್ಟುರೆಗಳಿಯ ತುದಿಯನ್ನೂ ಮೀರಿ ಇವನು ಬೆಳೆಯದೆ ಇರಲಾರನು. ಇದೇನು ಅದ್ಭುತವೆಂದು ಬೆರಗಾಗಿ ನೋಡುವವರ ಕಣ್ಣೂ, ಮನಸ್ಸೂ ಕಂಗೆಡುವಂತೆ ವೇಗವೇಗವಾಗಿ ವಿಷ್ಣುವು ಬೆಳೆದನು.

---

೧ ತ್ಕಿ (ಕ, ಪ). ೨ ತಗ್ಗಿ (ಪ). ೩ ತ್ತಟೀಕೇ (ಕಾ), ತ್ತಟಿತ್ಕೇ (ಕ). ೪ ಲೋಕಾ (ಕ, ಪ). ೫ ಯು (ಕ, ಮ). ದ (ಪ). ೬ ತ್ತಮುಂ (ಮ), ತ್ತಮಂ (ಕಾ). ೭ ಲಿ (ಕ).

ವ॥ [೧]ಅಂತುಮಲ್ಲದೆ[೧]

ಬಲಗೊಂಡತ್ತಮರಾದ್ರಿಗೆ[೨]ತ್ತೆಡೆಯೊಳಾ ಜ್ಯೋತಿರ್ಗಣಂ ಬಂದಿರು
ಳ್ತಲೆದೋಱೆತ್ತೆಳಮಿಂಗಳೊಂದು ದೆಸೆಯೊ[೩]ಳ್ಮಿಯ್ದೋ[೩]ರ್ಪಿನಂ ತಪ್ತ ಕಂ
ದಳಿತಂ ಸಂದಣಿಗೊಂಡು[೪]ದೊಂದು ದೆಸೆಯೊಳ್ಸೂರ್ಯಾತಪಂ ವಿಕ್ರಿಯಾ
ಬಳದಿಂ ತಾಂ ಬಳೆಯಲ್ಕೆ ಭಂಜಿತ ಮಹಾ ಮಂತ್ರಿಕ್ರಮಂ ತ್ರಿಕ್ರಮಂ ೩೧

ರವಿಯಶ್ವಂ ದೆಸೆವಾಯ್ದು ಪಾಯ್ದೆಟಿ[೫]ವಿನಂ ತೇರಂ ನಯಂ ಪೆರ್ಚೆ ಬೆ[೬]
ರ್ಚುವಿನಂ ಚಂದ್ರನ ಬೆಳ್ಮ[೭]ಗಂ ಬೆದಱೆದಾತ್ಮಸ್ತ್ರೀಯರಂ ಪೇಱೆ ಪಾ
ಱುವಿನಂ ತಾಂ ಪೊಲಗೆಟ್ಟು ಖೇಚರಚಯಂ ದಿಕ್ಪಾಲಕರ್ ಭೋಂಕನಂ
ಜುವಿನಂ ವಿಷ್ಣುಕುಮಾರನೇಂ ಬೆಳೆದನೋ ಬ್ರಹ್ಮಾಂಡಮಂ ತಾಪಿನಂ ೩೨

ಈ ವಟುವಿಂಗೆ ಮಿಂಚುವೆಳಮಿಂಚಿನ ವಾರಿದ ರೇಖೆ [೮]ಮುಂಜಿ[೮]ಯುಂ
ಕೋವಣಮಾಯ್ತು ಮುಟ್ಟಿ ರವಿಗರ್ಘ್ಯಮನೀವ ಪೊಡರ್ಪುಮಾಯ್ದು ಮಾ
ಯಾವಿಗ[೯]ನೊಲ್ದು[೯] ಗುಂಡಿಗೆಯನಾಗಸಗಂಗೆಯ ದಿವ್ಯತೋಯಮಂ
ತೀವುವ ಬುದ್ಧಿಯೊಳ್ ಬಳೆದನಕ್ಕಟ ಮಾಣ[೧೦]ವನ[೧೦] ಪ್ರಮಾಣವಂ ೩೩

ಇಂತಪ್ಪ ಸಿತಗನೀ ವಟು
ವಿಂತಪ್ಪತಿವರ್ತಿ ಮಾಣಿಯುಂ ಕೋಡಗಮುಂ
ಸಂತಮಿರ[೧೧]ಲಾರ್ಕುಮೇ ರವಿ
ಯಂತಪ್ಪನ ಪರಿವ ಭಂಡಿಯೊಳ್ಕಾ[೧೨]ಲ್ದೋದಂ[೧೨] ೩೪

ವ॥ ಮೇರು ಪರ್ವತವೆಂಬ ಭ್ರಮೆಯಿಂದ ಜ್ಯೋತಿರ್ಗಣವು ಅವನಿಗೆ ಪ್ರದಕ್ಷಿಣೆ ಹಾಕಿತು. ಒಂದು ಪಕ್ಕದಲ್ಲಿ ರಾತ್ರಿಯಾಗಿ ಚಿಕ್ಕ ಚಿಕ್ಕ ನಕ್ಷತ್ರಗಳು ಕಾಣಿಸಿಕೊಂಡುವು; ಇನ್ನೊಂದು ಪಕ್ಕದಲ್ಲಿ ಚಿಗುರಿದ ಬಿಸಿಲು ಕಾಣಿಸಿಕೊಂಡುತು. ಹೀಗೆ ವಿಕ್ರಿಯಾಬಲದಿಂದ ಮಂತ್ರಿಯನ್ನು ಭಂಗಿಸುವ ತ್ರಿವಿಕ್ರಮನು ಬೆಳೆದನು.

೩೨. ಬೆಳೆಯುತ್ತಿರುವ ಆತನನ್ನು ಕಂಡು ಸೂರ್ಯನ ಕುದುರೆಗಳು ಕಂಗೆಟ್ಟು ದಿಕ್ಕುದಿಕ್ಕಿಗೆ ರಥವನ್ನು ಎಳೆದುವು; ಚಂದ್ರನ ಒಡಲಲ್ಲಿದ್ದ ಜಿಂಕೆ ಬೆಚ್ಚಿಬಿದ್ದಿತು; ಬೆದರಿದ ತಮ್ಮ ಹೆಂಡಂದಿರನ್ನು ಎತ್ತಿಕೊಂಡು ಖೇಚರರು ಹಿಂಡುಹಿಂಡಾಗಿ ಹಾದಿಗೆಟ್ಟು ಹಾರಿದರು; ದಿಕ್ಪಾಲಕರು ಭೀತರಾದರು. ವಟುವೇಷದ ವಿಷ್ಣುಕುಮಾರನು ಬ್ರಹ್ಮಾಂಡವನ್ನು ತಾಗುವಂತೆ ಅದೇನು ಅದ್ಭುತವಾಗಿ ಬೆಳೆದನು!

೩೩. ಈ ವಟುವಿಗೆ ಕುಡಿಮಿಂಚು ಮುಂಜಿ (ಉಡಿದಾರ)ಯಾಯಿತು; ಮೋಡವೆ ಕೌಪೀನವಾಯಿತು. ಸೂರ್ಯನನ್ನು ಮುಟ್ಟಿ ಅರ್ಘ್ಯ ಕೊಡುವ ಸಾಮರ್ಥ್ಯ ಹೊಂದಿದ ಈ ಮಾಯಾವಿಯು ತನ್ನ ಕಮಂಡಲುವಿನಲ್ಲಿ ಆಕಾಶಗಂಗೆಯ ದಿವ್ಯ ಜಲವನ್ನೆ ತುಂಬಿಕೊಳ್ಳುವ ಉದ್ದೇಶದಿಂದ ಅಳತೆಗೆ ನಿಲುಕದಂತೆ ಬೆಳೆದನು.

೩೪. ಸೂರ್ಯನಂತಹ ಓಡುವ ರಥದಲ್ಲಿಯು ಕಾಲು ಹಾಯಿಸಿದನಲ್ಲ! ಇಂತಹ

೧ X (ಕ). ೨ ಗಿ (ಕಾ). ೩ ಳ್ಮಿಯ್ದಿ (ಕ), ಳ್ಕಯ್ದಿ (ಪ), ಳ್ಮಿಯ್ದಿ (ಮ). ೪ ಡ (ಕ, ಮ, ಪ). ೫ ಪೆ (ಕಾ). ೬ ಳ್ಮೊ (ಕ, ಮ, ಪ). ೭ ಮಂಚಿ (ಕ), ಮೌಂಜಿ (ಪ). ೮ ನೊಲ್ದು (ಪ), ತನ್ನ (ಕಾ, ಮ). ೯ ಗೆ (ಕ, ಪ). ೧೦ ಸವ (ಕ, ಪ). ೧೧ ಡ (ಕ, ಪ). ೧೨ ಲ್ದೊಂಡಂ (ಕ).

ಅಂಬರ ತಳಕ್ಕೆ ಬಳೆದು ತೆ
ಱಂಬೊಳೆವಚ್ಯುತನ ಚರಣದಂಡಂ ನಕ್ಷ
ತ್ರಂ ಬಳಸೆ ದೀಪಮಾಲೆಯ
ಕಂಬದವೊಲ್ ತೊಳಗಿ ಬೆಳಗುತಿರ್ದತ್ತಾಗಳ್ ೩೫

ಬಲಿಹರನ ಚರಣದಂಡದ
ತಲೆಯೊ[೧]ಳ್ಕಿಱೆ[೧]ಗೊಂಡೆಟಿಲ್ವ ಬಾಂದೊಱೆ[೨]ಯೆ[೨]ಲರಿಂ
ದೊಲೆದುದು ವಿಷ್ಣುಕುಮಾರನ
ಗೆಲವಂ ಕಂಡಮರರೊಸೆದು ಕಟ್ಟಿದ ಗುಡಿವೊಲ್ ೩೬

ವಾಮನ ಪದಹತಿ[೩] ವಿದ[೪]ಳಿತ
ಜೀಮೂತವಿಮುಕ್ತ ಬಹುಳ[೫] ಧಾರೆಗಳಿಂದಂ[೬]
ತಾ[೭] ಮುನಿಜನಾ[೮]ಪಕಾರಕ
ಧೂಮಧ್ವಜನೆಯ್ದೆ ನಂದಿ ಪೋದತ್ತಾಗಳ್ ೩೭

ವ॥ ಅಂತಾ [೯]ಮಹಾ[೯]ಮುನಿಜನೋಪಸರ್ಗಮಂ ಮಾಣಿಸಲೆಂದು ವೈಕುರ್ವಣ ಋದ್ಧಿಯಿಂ ಬ್ರಹ್ಮಾಂಡಮನೊದೆ[೧೦]ದು ಬಳೆದಾ ತ್ರಿವಿಕ್ರಮ ನುತ್ತ[೧೧]ಮಾಂಗುಷ್ಠ ಘಾತದಿಂ ತ್ರಿದಿವಮುದಿರ್ಗುಮೆಂಬ ಭಯ[೧೨]ಮಾಗೆ[೧೨] ಬಳವಿರೋಧಿ ಬೆಸಸಿದ ಗಂಧರ್ವದೇವರ್ಬಂದು ಗಾಂಧಾರಗ್ರಾಮಮನಾಳ್[೧೩] ವಿ[೧೩]ಸಲೆಂದು ಧಾರಾ[೧೪]ವಿಯುಂ ಶಾ[೧೫]ರಿರಿಯುಮೆಂಬೆರಡುಂ ಬೀಣೆಯು ಮನಳವಡಿಸಿ

ತುಂಟ ವಟುವಿವನು! ಇಂತಹ ಅಂಕೆ ಮೀರಿದ ಮಾಣಿಯೂ ಕೋತಿಯೂ ತೆಪ್ಪಗೆ ಇರುವುದುಂಟೆ?

೩೫. ಆಕಾಶಕ್ಕೆ ಬೆಳೆದು ಉಜ್ವಲವಾಗಿ ಹೊಳೆಯುವ ವಿಷ್ಣುವಿನ ಕಾಲು ನಕ್ಷತ್ರಗಳ ಬಳಸಿನಿಂದಾಗಿ ದೀಪಮಾಲೆಯ ಕಂಬದಂತೆ ಬೆಳಗುತ್ತಿತ್ತು.

೩೬. ವಿಷ್ಣುಕುಮಾರನ ಗೆಲವನ್ನು ಕಂಡು ದೇವತೆಗಳು ಕಟ್ಟಿದ ಪತಾಕೆ ಪಟಪಟಿಸುವುದೊ ಎನೊ ಎಂಬಂತೆ ಆತನ ಪಾದ ತಳದಲ್ಲಿ ಚಿಕ್ಕವಾಗಿ ತೋರುವ ಆಕಾಶಗಂಗೆ ಗಾಳಿಯಿಂದ ಅಲೆಯಲೆಯಾಗಿ ಕಂಗೊಳಿಸಿತು.

೩೭. ವಾಮನ ಪಾದ ಪ್ರಹಾರದಿಂದ ಮೋಡಗಳು ಒಡೆದು ಧಾರಾಕಾರವಾಗಿ ಸುರಿದು ನೀರಿನಿಂದ ಆ ಮುನಿಜನಕ್ಕೆ ತಾಪಕರವಾಗಿದ್ದ ಬೆಂಕಿಯೆಲ್ಲಾ ಆರಿಹೋಯಿತು.

ವ॥ ಹೀಗೆ ಮಹಾಮುನಿಗಳ ಉಪಸರ್ಗವನ್ನು ನಿವಾರಿಸಲೆಂದು ವಿಕ್ರಿಯಾ ಬುದ್ಧಿಯಿಂದ ಬ್ರಹ್ಮಾಂಡವನ್ನು ಒದೆದು ಬೆಳೆದ ಆ ತ್ರಿವಿಕ್ರಮನ ಪಾದಾಂಗುಷ್ಠ ತಾಕಿ ಸ್ವರ್ಗಲೋಕವು ಉದಿರು ಬಿದ್ದೀತೆಂದು ಹೆದರಿ, ಇಂದ್ರನು ಆಜ್ಞಾನುಸಾರವಾಗಿ ಗಂಧರ್ವ ದೇವತೆಗಳು ಬಂದು, ಗಾಂಧರ್ವ ಗಾಯನವನ್ನು ನುಡಿಸಲೆಂದು ಧಾರಾವಿ ಮತ್ತು ಶಾರಿರಿ ಎಂಬೆರಡು ವೀಣೆಗಳನ್ನು ಅಳವಡಿಸಿಕೊಂಡು

---

೧ ಳ್ದಿಜೆ (ಮ), ಳ್ಕಿಂ (ಕಾ). ೨ ಯ (ಕ, ಪ). ೩ ತ (ಕಾ). ೪ ಗ (ಕಾ). ೫ + ಜಲ (ಪ). ೬ X (ಪ). ೭ ದಾ (ಪ). ೮ ನೋ (ಮ). ೯ X (ಕಾ, ಮ). ೧೦ ಡೆ (ಕಾ). ೧೧ ತ್ತ (ಕ). ೧೨ ದಿಂ (ಮ). ೧೩ ಳಾಪಿ (ಕ, ಪ). ೧೪ ರ (ಕಾ). ೧೫ ಸಾ (ಕ, ಪ).

ಕಳೆಯಂ ಪತ್ತಿಸಿ ಜೀವಿ[೧]ಯಂ ನಿಜೆ[೨]ಸಿ ಮೆಲ್ಪಿಂ ತಂತಿಯಂ ತೀಡಿ ಕಾ
ಕಳಿಯೊಳ್ ಬೀಣೆಯನಾಗುಮಾಡಿ ಮಿಡಿಯುತ್ತಾಳೆರ್ದ ನುಣ್ಣಾವರ[೩]
ಕ್ಕಳಿ ಪೂವಂ ಗಿಳಿ ಪಣ್ಮನಾಲಿಸಿ ಲಸಚ್ಚೂತಾಂಕುರಾ[೪]ಸ್ವಾದಮಂ
ಕಳಕಂಠಂ ಬಿಡೆ[೫]ದೇವ[೬]ರಾಳವಿಸಿದರ್ ತ್ರಿ[೭]ಸ್ಥಾನ ಸಂಶುದ್ಧಿಯಿಂ[೮] ೩೮

ವ|| ಆ ಗಂಧರ್ವವಾದನಕ್ಕೆ [೯]ವಿಷ್ಣುಗಂಧಿಯಪ್ಪ[೯] ವಿಷ್ಣುಕುಮಾರನತಿ ಪ್ರಸನ್ನನಾಗಿ ನಿಜೋದ್ರೇಕಮುಮಂ ವೈಕುರ್ವಣಮುಮನುಪಸಂಹರಿಸಿ ಬಲಿಯಂ ಬಂಧನದೊಳಿರಿಸಿದನಾ ವೀಣೆಯ ವಂಶದ ವೀಣೆಯುಂ[೧೦]ಟಕ್ಕಮ[೧೦]ಪ್ಪೊಡೆ[೧೦] ತನ್ನಿಮೆಂದ[೧೧] ವಸುದೇವನಾ[೧೨] ವಿಪಂಚೀ ಪ್ರಪಂಚವಾಚಾ[೧೩]ಕ್ವಣಿತಾ[೧೪]ಕಾರಕ್ಕ ಮತಿ ಮನೋಹರಾಕಾರಕ್ಕಮತ್ಯಂತಾ[೧೫]ಸಕ್ತೆಯಾಗಿ

ಅತಿ ಮುಗ್ಧಾಪಾಂಗಭೃಂಗಂ ಮುಖಸರಸಿಜದೊಳ್ತನ್ನ ಬಾಹುಭುಜಂಗಂ
ಸು[೧೬]ತನು ಶ್ರೀಖಂಡಶಾಖಾಂತರದೊಳಧರ ಸದ್ವಿದ್ರುಮಂ ದಂತಮುಕ್ತಾ
[೧೭]ತತಿ[೧೭]ಯೊಳ್ [೧೮]ಪಾಣಿ[೧೮]ಪ್ರವಾಳಂ ಕುಚಕಳಶದೊಳಿಂಬಾಗೆ ತಟ್ಟಿರ್ದನಿಂದ್ರ
ಪ್ರತಿಮಂ ಗಾಂಧರ್ವದತ್ತಾಮೃದುಹೃದಯದೊಳಾ ರೂಪಕಂದರ್ಪದೇವಂ ೩೯

ವ|| [೧೯]ಇರ್ದೊಂದು[೧೯] ದಿವಸಂ ವಸುದೇವಕುಮಾರಂ ವಿದ್ಯಾಮಂಡಪ[೨೦] ಮಂಡನೀ[೨೧]ಭೂತ [೨೨]ಜಗ[೨೨]ತ್ಯಾಗ್ರ ಸಿಂಹಾಸನದೊಳ್ ಸಿಂಹಕಟೀತಟಮನುಪಮೆಗೆ ತರ್ಪಂತುಪವೇಶ[೨೩] ದಿನಳಂಕರಿಸಿಪ್ಪು

೩೮. ಕಳೆಯನ್ನು ಹತ್ತಿಸಿ, ಜೀವಿಯನ್ನು ಅಳವಡಿಸಿ, ಮೃದುವಾಗಿ ತಂತಿಯನ್ನು ತೀಡಿ, ಕಾಕಲಿ ನಾದಕ್ಕೆ ವೀಣೆಯನ್ನು ಹೊಂದಿಸಿ ಮಿಡಿಯುತ್ತ, ದುಂಬಿಗಳು ಹೂವನ್ನೂ ಗಿಳಿಗಳು ಹಣ್ಣನ್ನೂ ಕೋಗಿಲೆಗಳು ಮಾವಿನ ಚಿಗುರನ್ನೂ ಮರೆತು ಕಿವಿಗೊಟ್ಟು ಆಲಿಸುವಂತೆ ತ್ರಿಸ್ಥಾನ ಶುದ್ಧಿಯಿಂದ ಆಲಾಪನೆ ಮಾಡಿದರು.

ವ|| ವಿಷ್ಣುವಿನಂತಿದ್ದ ವಿಷ್ಣುಕುಮಾರನು ಗಂಧರ್ವರ ಆ ವಾದನಕ್ಕೆ ಮೆಚ್ಚಿ, ತನ್ನ ಉದ್ರೇಕವನ್ನೂ ವಿಕ್ರಿಯೆಯನ್ನೂ ಉಪಶಮನಗೊಳಿಸಿ, ಬಲಿಯನ್ನು ಸೆರೆಯಲ್ಲಿಟ್ಟನು. ಆ ವೀಣೆಯ ವಂಶದ ವೀಣೆ ನಿಮ್ಮ ಬಳಿಯಿಲ್ಲಿದ್ದರೆ ತೆಗೆದುಕೊಂಡು ಬನ್ನಿ." ಹೀಗೆಂದು ವಸುದೇವನು ವಿವರಿಸಿದ್ದ ವೀಣಾವೃತ್ತಾಂತಕ್ಕೂ ಆತನ ಮನೋಹರವಾದ ರೂಪಕ್ಕೂ ಗಂಧರ್ವದತ್ತೆ ಮನಸೋತು, ಅತ್ಯಂತ ಆಸಕ್ತೆಯಾದಳು.

೩೯. ಅತಿ ಮುಗ್ಧವಾದ ಕಡೆಗಣ್ಣೆಂಬ ದುಂಬಿ ಮುಖಕಮಲದಲ್ಲಿಯೂ ಬಾಹುಗಳೆಂಬ ಸರ್ಪ ಸುಂದರವಾದ ದೇಹವೆಂಬ ಚಂದನ ಶಾಖೆಯಲ್ಲಿಯೂ ತುಟಿಯೆಂಬ ಹವಳವು ಹಲ್ಲುಗಳೆಂಬ ಮುತ್ತುಗಳಲ್ಲಿಯೂ ಕೈಗಳೆಂಬ ತಳಿರುಗಳು ಕುಚಕುಂಬಗಳಲ್ಲಿಯೂ ಇಂಬಾಗಿ ಹೊಂದಿಕೊಂಡಿರಲಾಗಿ ರೂಪದಲ್ಲಿ ಮನ್ಮಥನೂ ಇಂದ್ರಸದೃಶನೂ ಆದ ಕುಮಾರನು ಗಾಂಧರ್ವದತ್ತೆಯ ಮೃದು ಹೃದಯದಲ್ಲಿ ನೆಲಸಿದ್ದನು.

ವ|| ಹೀಗಿರುತ್ತ ಒಂದು ದಿವಸ ವಸುದೇವ ಕುಮಾರನು ವಿದ್ಯಾಮಂಡಪದ

---

೧ ವೆ (ಪ). ೨ ಲಿ (ಮ). ೩ ದ (ಕ). ೪ ರಂ (ಕ). ೫ ಡ (ಕ, ಕಾ). ೬ ರೋಲಗಿದ ಸ್ತ್ರೀ (ಕಾ). ೭ ಯಂ (ಕ, ಮ). ೮ X (ಕ, ಪ). ೯ ಮುಂ (ಕ). ೧೦ ದಂ ತರ್ಪೊಡೆ (ಪ). ೧೧ ದು (ಕಾ). ೧೨ ನ (ಕ, ಮ, ಪ). ೧೩ + ೪ (ಕಾ). ೧೪ ತ (ಕ, ಮ, ಪ). ೧೫ ತಮಾ (ಕಾ). ೧೬ ಸ (ಕ). ೧೭ ವಳಿ (ಕಾ). ೧೮ ಹಸ್ತ (ಕಾ, ಮ). ೧೯ ಅಂತಿರ್ಪುದುಮೊಂದು (ಮ). ೨೦ ಪ (ಕಾ, ಮ). ೨೧ ನೀಯ (ಕಾ, ಮ). ೨೨ ಜಿ (ಕಾ). ೨೩ ಜಿ (ಕಾ). ೨೪ ಷ (ಪ).

ದುಮಾ ಪ್ರಸ್ತಾವದೊಳ್ ಕುಂಕುಮನುಂ ಕುಚಕಳಶನುಮೆಂಬರಿರ್ವರಕ್ಕರಿಗರ್ವಂದು ಶು[೧]ಭೋದಯ ಮೆಂದು

ಕೀರ್ತಾವಾ[೨]ಜಿತ[೨] ಸೆಜ್ಜೆ[೩]ವಳ್ಳ ಸಚಿವಃ[೪] ಶ್ರೀಪದ್ಮನಾಭ ಪ್ರಭೋ[೫]
ತ್ರೈಲೋಕೇ[೬]ಶ್ವಪ[೭]ತಿಂ ವಿಜೇ[೭]ಯ ಸುಚಿರಂ ದೃಷ್ಟ್ವಾ[೮]ಸವೀ[೯]ಭಿಸ್ಫುಟಂ
ಕಸ್ತೂರೀ ತಿಲಕೇನ ಲ[೧೦]ಕ್ಷಣೇ[೧೦]ಕೃತೀ[೧೧] ಚಂದ್ರಃ ಸಲಕ್ಷ್ಮಾ ಭ್ರತೇ
ಕಂಠೇ[೧೨]ಕಾಳಯತಿ ಪ್ರಸಿದ್ಧಮ[೧೩]ಗಮತ್ಸೇಷೋಪಿ[೧೪] ಭೂಷೋಪಿಚ ೪೦

[೧೫]ಸಿರಿ[೧೫]ಯ ಸರಸಿಯ್ಯ ಸಯಿಯೆ[೧೬] ವಿರಲಂ
ತಿ[೧೭]ಯ [೧೮]ವಚ್ಚೋವ[೧೮] ಮುಹ[೧೯]ಮಿಹ ಭ[೨೦]ಯದಂಡೋ
ಸಂಜಿ[೨೧]ಯ್ಯಯ ಜಿಣಾ[೨೧] ಸೆಂಜಾಜೆಯ್ ಪವುಮಣಾಹೋ
ವೀರಬಲ್ಲಾಳದೇವಂಪುಡಿಯ [೨೨]ಪುಡು[೨೨] ವಿಣಾ ಹಂಸಂ ಜಳೋ [೨೩]ಸೆಜ್ಜೆ[೨೩]ವಳ್ಳೊ ೪೧

ಅಲಂಕೃತವಾದ ಜಗಲಿಯ ಮೇಲಿರುವ ಸಿಂಹಾಸನದಲ್ಲಿ ಸಿಂಹಮಧ್ಯವನ್ನು ನೆನಪಿಗೆ ತರುವ ರೀತಿಯಲ್ಲಿ ಸೊಗಸಾಗಿ ಕುಳಿತಿರುವಾಗ ಕುಂಕುಮ ಹಾಗೂ ಕುಚಕಳಶ ಎಂಬ ಇಬ್ಬರು ವಿದ್ವಾಂಸರು ಬಂದು ಶುಭೋದಯವನ್ನು ಹಾರೈಸಿ -

೪೦. ಶ್ರೀ ಪದ್ಮನಾಭ ಪ್ರಭುವೇ, ಬಹುಕಾಲ ಹುಡುಕಿದರೂ ಅತ್ಯಂತ ಶುಚಿಯಾದವರು ಬೇರೆ ಯಾರೂ ದೊರೆಯಲಿಲ್ಲವಾದುದರಿಂದ ಕೀರ್ತಿಯು ಸೆಜ್ಜೆವಳ್ಳಸಚಿವನಾದ ನಿನ್ನನ್ನೆ ಬಯಸುತ್ತದೆ. ಏಕೆಂದರೆ (ವಿಷ್ಣುವಿಗೆ) ಅವನಿಟ್ಟುಕೊಂಡ ಕಸ್ತೂರೀ ತಿಲಕದಿಂದ ಲಕ್ಷಣವೇನೂ ಆಗದು. ಚಂದ್ರನು ಕಳಂಕವುಳ್ಳವನು, ಶೇಷಸರ್ಪವನ್ನೆ ಆಭರಣವಾಗಿ ಮಾಡಿಕೊಂಡು ಶಿವನು ಕೊರಳಲ್ಲಿ ಕಪ್ಪು ಕಲೆಯುಳ್ಳವನೆಂದೇ ಪ್ರಸಿದ್ಧನಾಗಿದ್ದಾನೆ.

---

* ಈ ಶ್ಲೋಕವನ್ನು ಈ ಕೆಳಗಿನಂತೆ ತಿದ್ದಿಕೊಳ್ಳಲಾಗಿದೆ

ಕೀರ್ತಿವಾಂಛತಿ ಸೆಜ್ಜೆವಳ್ಳಸಚಿವಂ ಶ್ರೀ ಪದ್ಮನಾಭಪ್ರಭೋ
ತ್ರೈಲೋಕ್ಯತೇಟತಿಶುಚಿಂ ವಿಚಿತ್ಯ ಸುಚಿರಂ ದೃಷ್ಟ್ವೋನ ಕೋಪಿ ಸ್ಫುಟಂ ।
ಕಸ್ತೂರಿ ತಿಲಕೇನ ಲಕ್ಷಣ ಕೃತೇ ಚಂದ್ರಃ ಸ ಲಕ್ಷ್ಮಾಯತಃ
ಕಂಠೇ ಕಾಲ ಇತಿ ಪ್ರಸಿದ್ಧಿಮಗಮತ ಶೇಷಾಹಿಭೂಷೋಟಪಿ ಚ ॥

೧ ಶೋ (ಕ). ೨ ಜಿತ (ಕಾ). ೩ ಳ್ಳೆ (ಕ, ಮ). ೪ ವ (ಕಾ). ೫ ಭಾ (ಕ, ಮ, ಪ). ೬ ಕ್ಯೇ (ಕಾ). ೭ ತಿನ್ನಿಚಿ (ಕಾ, ಮ). ತೀನ್ ವಿಜೇ (ಪ). ೮ ಷ್ಟ್ವಾ (ಮ, ಪ) ೯ ತಿ (ಕಾ, ಮ). ೧೦ ಕ್ಷ್ಮಣೇ (ಕಾ). ಕ್ಷಣ (ಮ, ಪ). ೧೧ ತೆ (ಕಾ). ೧೨ ಶೀ (ಮ). ೧೩ ದು (ಕ, ಮ). ೧೪ ಪಿ (ಪ). ೧೫ ಸಿಂಠಿ (ಕಾ). ೧೬ ಯೋ (ಮ), ಯೈ (ಕಾ). ೧೭ ಥಿ (ಕಾ). ೧೮ ಪಂ ಛೋ (ಕಾ), ವಚ್ಛೋ (ಮ). ೧೯ ಹ (ಕಾ, ಮ). ೨೦ ಭು (ಕಾ, ಮ). ೨೧ ಜೀಯಾ ದೇಣ (ಕಾ). ಜೀಯಾ ಜೇಣ (ಮ). ಜೀಯಾಯ ಜಿಣ (ಪ). ೨೨ ಪುಂಡ (ಕಾ). ಪುಢ (ಮ), ಪುದು (ಪ). ೨೩ ಸೆಂಜೆ (ಕಾ).

ವ|| ಎಂದೋದಿದ ಭಟ್ಟರ್ಗೆ ತುಡಲಾರ್ಪನಿತು ಮಣಿಭೂಷಣಂಗಳುಮನುಡಲಾರ್ಪನಿತು ಪಟ್ಟಾಂಬರಂಗಳುಮಂ ಮೊಟ್ಟೆಗಟ್ಟಿ[೧]ಪೊತ್ತು[೧] ಕೊಂಡು ಪೋಗಲಾರ್ಪನಿತು ಪೊನ್ನುಮನಿತ್ತು ನೀಮೆತ್ತಣಿಂ ಬಂದಿ[೨]ರಿ[೨]ಲ್ಲಿಗೆಪೋದ[೩]ರೆಂಬುದುಂ[೩] ಕುಚಕಳಶ[೪]ನೆಂದಂ[೪] ವಂಶವಿಷಯ ದೊಳ್ಮಾಗಧಿಯೆಂಬ ಪೊಟಲನಾಳ್ವಂ[೫]ರಕ್ತಾಕ್ಷನೆಂಬರಸಂಗಂ [೬]ಸುಮಿತ್ರೆಯೆಂಬರಸಿಗಂ[೬] ರೋಹಿಣಿ ಯೆಂಬ ಮಗಳಾದಳಾ ತ್ರಿಭುವನ ಸೌಂದರ್ಯ ಸಂಕೇ[೭]ತಭೂಮಿಯಪ್ಪ ಭಾಮಿನಿಯ ಶೃಂಗಾರ ಸ್ವಯಂವರಕ್ಕೆ ಜರಾಸಂಧ ಚಕ್ರವರ್ತಿಯುಂ ಸಮುದ್ರವಿಜಯಂ ಮೊದಲಾದ ಮಂಡಳಿಕರುಂ ನೆರೆದರಿವರಂ ಬೇಡುವೆವೆಂಬ ಬಗೆಯಿಂ ಬಂ[೮]ದೆವೀ[೮] ಭವ[೯]ಕ್ಕೆನಾಮಾರುಮಂ ಬೇಡದಂತು ಮಾರ್ಬೇಡಿದೊಡಂ ಬೇಡಿದನಿತನಾಮೆ[೧೦] ಕುಡುವಂತೆ[೧೧] ಕೊಟ್ಟೆ[೧೨] ನೀನೆ ದಾನಿಯೆಂದು ಪೊಗಟ್ದು ಪೋದರಿತ್ತ ವಸುದೇವನಾ ಪೊಟ್ಟಿ ಪೊಟ್ಟಾಗಿ ಪರ್ಣಲಘು ವಿದ್ಯೆಯಿಂ ಸುಪರ್ಣನಿಂ ಬೇಗಮಾಗಿ ಮಾಗಧಿ[೧೩]ಗೆ ಪೋಗಿ[೧೩] ಪ್ರಾಕೃತಕಾವ್ಯದಂತೆ ಸಹಜಸೌಭಾಗ್ಯಭಂಗಿನೀ[೧೪] ಭಾವಾಳಂಕಾರದಿನಳಂಕೃತನಾಗಿ ಸ್ವಯಂವರ ಮಂಟಪಮಂ ಪುಗುವುದುಮಾ[೧೫]ಗಳಾ[೧೫] ಸ್ವಯಂವರಸಭೆಯಾದ[೧೬] ಪಾದಶ ಸಂಪ್ರದಾಯದೊಳೊರ್ವ ಪಾಣವಿಕನ ಪೆಗಲ ಪಣವಮಂ ತನ್ನ ಪೆಗಲೊಳ್ತ[೧೭] ಗುಳ್ಳಿಕೊಂಡು ಮೂಱುಂ ತೆಱದ ಜತಿಯೊ[೧೮]ಳಮನಿತೆ[೧೮] ಲಯದೊಳಂ ವಿವಿಧ ವಾದ್ಯವಿಧಿಯೊಳಂ ಮಧುರಾತಿಮಧುರಮುಂ ಚಿತ್ರಾತಿ[೧೯]ಚಿತ್ರಮಾಗೆ ಬಾಜಿಸುವ ವಾದ್ಯವಿಧ್ಯಾದರನವಾ[೨೦]ದನ[೨೦]ವೈದಗ್ಧಿಗಂ ಮರುಳ್ಗೊಂಡು ಗಂಡ ಗಾಡಿಗಂಡು[೨೧]ವೇಟಂಗೊಂಡು[೨೧] ಸ್ವಯಂವರಸಂಭ್ರಮಮುಮಂ ರಾಜಪುತ್ರಿ [೨೨]ಯುಮಂ[೨೨] ಕೆಯ್ಗೆ[೨೩] ಮಾಟಿ[೨೪]ವೆಂದು[೨೪] [೨೫]ಬಂದುಬರೆವುಮಂ[೨೫] ಮ[೨೬]ಱಿದು [೨೭]ಮೆಯ್ ಮಱೆದು[೨೭] ನೆರೆದ ರಾಜಲೋಕಮೆಲ್ಲಂ ರಾಜಸುತೆಯನೀಡಾಡಿ ಬಂದು ದೊಮ್ಮಳಿಸಿ ಮಮ್ಮಟಿ[೨೮]ಗೊಂಡು ನೋಡುತ್ತು ಮಿರ್ಪುದುಮಲ್ಲಿಗೆ

ವ|| ಹೀಗೆಂದು ಹೊಗಳಿದ ಭಟ್ಟರಿಗೆ ತೊಡುವುದಕ್ಕೆ ಬೇಕೆಂಬಷ್ಟು ರತ್ನಾಭರಣಗಳನ್ನೂ ಉಡುವುದಕ್ಕೆ ಬೇಕೆಂಬಷ್ಟು ರೇಷ್ಮೆ ವಸ್ತ್ರಗಳನ್ನೂ ಮೊಟ್ಟೆ ಕಟ್ಟಿ ಹೊತ್ತುಕೊಂಡು ಹೋಗಬಹುದಾದಷ್ಟು ಚಿನ್ನವನ್ನೂ ಕೊಟ್ಟು, "ನೀವು ಎಲ್ಲಿಂದ ಬಂದಿರಿ? ಎಲ್ಲಿಗೆ ಹೋಗುತ್ತೀರಿ?" ಎಂದು ಕೇಳಲಾಗಿ, ಕುಚಕಳಶನು ಹೀಗೆನುಡಿದನು - "ವಂಶವಿಷಯದಲ್ಲಿ ಮಾಗಧಿಯೆಂಬ ಪಟ್ಟಣವನ್ನು ರಕ್ತಾಕ್ಷನೆಂಬ ರಾಜನು ಆಳುವನು. ಅವನಿಗೆ ಸುಮಿತ್ರೆಯೆಂಬ ಅರಸಿಯಲ್ಲಿ ರೋಹಿಣಿಯೆಂಬ ಮಗಳಾದಳು. ತ್ರಿಲೋಕ ಸೌಂದರ್ಯಕ್ಕೆ ಸಂಕೇತಭೂಮಿಯಂತಿರುವ ಆ ಚೆಲುವೆಯ ಸ್ವಯಂವರಕ್ಕೆ ಜರಾಸಂಧ ಚಕ್ರವರ್ತಿಯೂ ಸಮುದ್ರ ವಿಜಯನೆ ಮೊದಲಾದ ಮಾಂಡಲಿಕರೂ ನೆರೆದಿರುವರು. ಇವರಲ್ಲಿ ಯಾಚಿಸಬೇಕೆಂದು ನಾವು ಬಂದೆವು. ಈ ಜನ್ಮದಲ್ಲಿ ನಾವು ಇನ್ನು ಯಾರನ್ನೂ ಕೇಳಬೇಕಾಗಿಲ್ಲವೆಂಬಂತೆಯೂ ಯಾರಾದರೂ ಬಂದು ಕೇಳಿದರೆ ನಾವೇ ಕೊಡುವಂತೆಯೂ ನೀನು ನಮಗೆ ಕೊಟ್ಟೆ. ದಾನಿಯೆಂದರೆ

---

೧ X (ಮ). ೨ ರೆ (ಕ, ಪ). ರಿನ್ನೆ (ಮ). ೩ ಪ್ಪಿರೆಂದು ಕೇಳ್ವುದುಂ (ಮ). ೪ ನೆಂದಂ (ಕ, ಪ). ನೆಂದಪಂ (ಮ). ೫ ಳ್ವ (ಕ, ಮ, ಪ). ೬ X (ಕಾ). ೭ ಕಿ (ಕಾ). ೮ ದೆವುಮಿನ್ನೀ (ಮ), ದೆನಿನ್ನೀ (ಕ), ದೊಂ ನಿನ್ನೀ (ಪ). ೯ + ನ (ಕ, ಪ). ೧೦ ವೆ (ಮ). ೧೧ ತು (ಕ, ಮ), ತುಂ (ಪ). ೧೨ ಟ್ಟ ದಾನಿ (ಮ). ೧೩ ಯೆಂಬ ಪುರಮನೆಯ್ದಿ (ಮ). ೧೪ X (ಕ, ಮ, ಪ). ೧೫ X (ಮ). ೧೬ ದ (ಕ, ಪ). ೧೭ ಳ್ಬ (ಕಾ). ೧೮ ಳಂ ಮೂಱುಂ ತೆಱದ (ಮ). ೧೯ X (ಕಾ). ೨೦ ದ್ಯ (ಮ). ೨೧ ವಟ್ಟಂಗೊಟ್ಟು (ಕ), ವೆಟ್ಟಂಗೊಂಡು (ಪ). ೨೨ ಯಂ (ಮ), ಯ (ಕ, ಪ). ೨೩ + ವಶಂ (ಮ). ೨೪ ಳಿಯೊಂ (ಕ, ಪ). ೨೫ ಬಂದ ಭರಮುಮಂ (ಮ), ಬಂದ ಭರಮಂ (ಪ), ಬರವುಮಂ (ಕ). ೨೬ ಮೆ (ಪ). ೨೭ X (ಪ).

ಕಾತರ[೧]ಯ[೨]ಚಿತ್ತೆಯಾಗಿ ಕಿವಿ[೩]ಯಳದುವರಿಯೆ[೪] ಕೇಳ್ದು ಮನವೆಳದುವರಿಯೆ ಬಂದು ಕಣ್ಣೆಳದುವರಿಯೆ ನೋಡಿ

ಪಾಡುವ ಗೀತಮಂಜರಿ[೫]ಗಳಂ ಶ್ರುತಿ ಸೂಡೆ ವಿಳಾಸಲಕ್ಷ್ಮಿಯಂ
ಸೂಡೆ ವಿಳೋಚನೋತ್ಪಳದಳಂ ಪುಳಕಾಂಕುರಸಂಕುಳಂಗಳಂ
ಸೂಡೆ ನಿಜಾಂಗವಲ್ಲಿ ಮನಮುತ್ಸವದಿಂ ಕುಸುಮಾಸ್ತ್ರಮಾಲೆಯಂ
ಸೂಡೆ ವಿರೋಧಿರಾಜಕಳ ರಾಹುಗೆ ರೋಹಿಣಿ ಮಾಲೆ ಸೂಡಿದಳ್ ೪೨

ವ।। ಸೂಡಲೊಡನೆ ರಾಜಕುಮಾ[೬]ರರ[೬] ಮನದೊಳ್ ಸೂಡೆ[೭]ರ್ದಂತಾಗೆ ಚಕ್ರವರ್ತಿಗಂ ಮಂಡಳಿಕರ್ಗಂ ಕುಡಲಿರ್ದ ಕೂಸಂ ದೇಸಿಗಂ ಕೊಂ[೮]ಡಪನಿದೇನೆಂದು ಮಾಮಸಕಂ ಮಸಗಿ ಮುಳಿದು ಬಾಳಭಾಸ್ಕರನ ಮೇಲೆ ದೊಡ್ಡಿತಪ್ಪ ತಮದೊಡ್ಡು ಕವಿವಂತೆ ಕಿಶೋರಕೇಸರಿಯ ಮೇಲೆ ದಂತಾವಣದೊಡ್ಡು ಕವಿದು[೯] ಮುಸುಱೆ ಮು[೯]ತ್ತುವಂತೆ[೯] ವಸುದೇವನ ಮೇಲೆ ರಾಜಕುಮಾರರೊಡ್ಡು ಕವಿದು ಮುಸುಱೆ ಮುತ್ತಿರ್ದು[೧೦]ದಾಗಳ್

ನೀನೇ" ಹೀಗೆಂದು ಅವರಿಬ್ಬರೂ ಅವನನ್ನು ಹೊಗಳಿ ಹೊರಟುಹೋದರು. ಇತ್ತ ವಸುದೇವನು ಇದೇ ಸಮಯವೆಂದು ಪರ್ಣಲಘುವಿದ್ಯೆಯ ಬಲದಿಂದ ಗಾಳಿಗಿಂತಲೂ ವೇಗವಾಗಿ ಮಾಗಧಿ ಪಟ್ಟಣಕ್ಕೆ ಹೋಗಿ, ಪ್ರಾಕೃತ ಕಾವ್ಯದಂತೆ ಸಹಜ ಸುಂದರವಾದ ಭಂಗಿ ಭಾವಾಲಂಕಾರಗಳಿಂದ ಅಲಂಕೃತನಾಗಿ, ಸ್ವಯಂವರ ಮಂಟಪವನ್ನು ಪ್ರವೇಶಿಸಿದನು. ಆ ಮಂಡಪದಲ್ಲಿ ಸಭೆಯಾಗಿ ಸೇರಿದ್ದ ಒಬ್ಬ ವಾದ್ಯಗಾರನ ಹೆಗಲ ಮೇಲಿದ್ದ ಪಣವ ವಾದ್ಯವನ್ನು ತನ್ನ ಹೆಗಲಿಗೆ ಅಳವಡಿಸಿಕೊಂಡು ಮೂರು ಬಗೆಯ ಜತಿಯಲ್ಲಿಯೂ ಮೂರು ಲಯದಲ್ಲಿಯೂ ವಿವಿಧ ವಾದನ ವಿಧಿಗಳಲ್ಲಿ ಅತ್ಯಂತ ಇಂಪಾಗಿಯೂ ಅತ್ಯಧಿಕ ವಿಚಿತ್ರವಾಗಿಯೂ ಆ ವಾದ್ಯವನ್ನು ನುಡಿಸಿದನು. ಆ ವಾದ್ಯವಿಶಾರದನ ವಾದನ ಪ್ರಾವೀಣ್ಯಕ್ಕೆ ಮರುಳಾಗಿ, ಆತನ ಪುರುಷಸೌಂದರ್ಯಕ್ಕೆ ಮುಗ್ಧರಾಗಿ, ಸ್ವಯಂವರ ಸಂಭ್ರಮವನ್ನು ರಾಜಪುತ್ರಿಯನ್ನು ಪಡೆಯುವುದಕ್ಕೆ ಬಂದಿದ್ದೇವೆಂಬುದನ್ನೂ ಮರೆತು, ಪರವಶರಾಗಿ ಅಲ್ಲಿಯ ರಾಜರೆಲ್ಲರೂ ರಾಜಕುಮಾರಿಯ ಗೊಡವೆಯನ್ನು ಬಿಟ್ಟು ಬಂದು, ಗುಂಪು ಗುಂಪಾಗಿ ಅವನನ್ನೆ ನೋಡುತ್ತ ನಿಂತಿರು. ರೋಹಿಣಿಯು ಕಾತರೆಯಾಗಿ ಆ ವಾದನದ ಇಂಪಿಗೆ ಕಿವಿಸೋತು, ಕೇಳಿ ಮನಸೋತು ಬಂದು, ಕಣ್ಸೋತು ನೋಡಿ -

೪೨. ಹಾಡುವ ಗೀತ ಮಂಜರಿಗಳನ್ನು ಕಿವಿಗಳು ಧರಿಸಲಾಗಿ, ವಿಲಾಸದ ಸೊಬಗನ್ನು ನೇತ್ರ ಕಮಲಗಳು ಧರಿಸಲಾಗಿ, ರೋಮಾಂಚಸಮೂಹವನ್ನು ತನ್ನ ದೇಹ ಧರಿಸಲಾಗಿ, ಮನ್ಮಥನ ಬಾಣಗಳನ್ನು ಮನಸ್ಸು ಸಂತೋಷದಿಂದ ಧರಿಸಲಾಗಿ, ಶತ್ರುರಾಜರಿಗೆ ರಾಹುವಾದ ವಸುದೇವನಿಗೆ ರೋಹಿಣಿ ಮಾಲೆ ಹಾಕಿದಳು.

ವ।। ಹಾಗೆ ಅವಳು ಮಾಲೆಯಿಕ್ಕಿದೊಡನೆ ರಾಜಕುಮಾರರ ಮನಸ್ಸಿನಲ್ಲಿ ಕಿಚ್ಚಿದ್ದಂತಾಗಿ, "ಚಕ್ರವರ್ತಿಗಾಗಲಿ, ಮಂಡಲಿಕನಿಗಾಗಲಿ, ಕೊಡಬೇಕಾಗಿದ್ದ ಮಗಳನ್ನು ಯಾವನೊ ನಿರ್ಗತಿಕನು ಪಡೆಯುತ್ತಿರುವನು! ಇದೇನು?" ಎಂದು ಅತ್ಯಂತ ಕ್ರುದ್ಧರಾಗಿ

---

೧ + ಗೆ (ಕ). ೨ X (ಕ, ಪ). ೩ ಯೊಳ್ (ಕಾ). ೪ ತಿ (ಕ, ಮ, ಪ). ೫ ರಂ (ಕಾ), ೬ ಡಿ (ಕಾ). ೭ ಕು (ಕ). ೮ ವಂತೆ (ಕಾ). ೯ ತ್ತಿ (ಕಾ), ೧೦ X (ಕ, ಮ, ಪ).

ಕಿವಿಕೋಲಂ ಕೋಟಿಯಂ ಕಾಱಿದಪುವೊ ಬೆರಲೇಂ[೧] ಬಾಣಮಂ ಭೋರೆನೀಂ[೨]ದ
ಪ್ಪುವೊ ಚಂಚನ್ಮೌ[೩]ರ್ವಿ ಚುಮ್ಮೆಂದುಗುಳ್ದಿ[೪]ಪುವೊ[೫] ಶರ[೫]ಶ್ರೇಣಿಯಂ[೬] ಮಾಣದೆಂಬಂ
ತೆವೊಲಡ್ಡಂ ಕಾಯ್ಪಿನಿಂದಂ ಕವಿಯೆ ಜವಕೆ [೭]ಕೆಯ್ವೊ[೭]ಯ್ದು ಪಾಯ್ವಂಬನಂಬ
ಟ್ಟುವವೋಲ್ ಪುಂಖಾನುಪುಂಖಂ ಮೊಟಕಲಿಸೆ[೮] ಮನೋವೇಗದಿಂ ಬೇಗಮೆಚ್ಚಂ ೪೩

ನೀಡಿದ ನಾಲಗೆಯಂತಿರೆ
ಪೂಡಿದ ಕಣೆ ಕುಣಿದು ತೆಗೆದು [೯]ಕೊಮ[೯]ರನ ಬಿಲ್ಲೊ[೧೦]
ಳ್ಕೊ[೧೧]ಡಿದುದು ನುಂಗಲಹಿತರ
ಪಾಡಿಗಳಂ ಮಸಗಿ ಮಿಟ್ತು ಬಾಯ್ದೆಱೆ[೧೨]ದ ತೆಱಂ ೪೪

ಅಲಗುನ[೧೩]ಡೆ ಪ[ರಿ[೧೪]]ದ ಬಿಸಿಲವೊ
ಲಲಗಲಗಿನೊಳೊರಸಿ ಪುಟ್ಟದುರಿ ಸುರಿದುವು ಕ
ತ್ತಲಿಸಿದುದು ದೆಸೆ ದಿನೇಶಂ
ಪೊಲಗೆಟ್ಟಂ[೧೪] ಮಸಗಿ[೧೫] ಮಿಸುಕ[೧೬]ದಿಸೆ[೧೬] ವಸುದೇವಂ ೪೫

ಮಱಿದುಂಬಿಯಲರ್ದ ಸಂಪಗೆ
ಗೆಱಗದವೋಲ್ತಪ್ಪಿ[೧೭] ಪಾಱಿದುವು ಪಿರಿಯಣ್ಣಂ
ಪೊಱಮು[೧೮]ಯ್ಯುವ[೧೮]ರಂ ತೆಗೆದೆ
ಚ್ಚಱಿಕೆಯ ಪೊಸ ಗಱಿಯ ಕಣೆಗಳವನವರಜನಂ ೪೬

ಬಾಲಸೂರ್ಯನ ಮೇಲೆ ದೊಡ್ಡದೊಂದು ಕತ್ತಲೆಯ ರಾಶಿ ಮುಗಿಬಿದ್ದಂತೆ, ಸಿಂಹದ ಮರಿಯ ಮೇಲೆ ಆನೆಗಳ ಹಿಂಡು ಆಕ್ರಮಿಸುವಂತೆ, ವಸುದೇವನ ಮೇಲೆ ರಾಜಕುಮಾರರ ಸಮೂಹವು ಕವಿದು ಧಾಳಿಯಿಟ್ಟಿತು. ಆಗ -

೪೩. ಈತನ ಕಿವಿಯೇನು ಬಾಣಗಳನ್ನು ಕಾರುತ್ತಿದೆಯೋ, ಬೆರಳೇನು ಬಾಣಗಳನ್ನು ಹೆರುತ್ತಿವೆಯೋ ಕಂಪಿಸುತ್ತಿರುವ ಹೆದೆಯೆ ಚುಮ್ಮೆಂದು ಸಾಲುಸಾಲಾಗಿ ಬಾಣಗಳನ್ನು ಉಗುಳುತ್ತಿರುವುದೋ ಎಂಬಂತೆ ಕೈಚಳಕದಿಂದ ಬಾಣವನ್ನು ಬಾಣ ಬೆಂಬತ್ತುವಂತೆ ಪುಂಖಾನುಪುಂಖವಾಗಿ ಮನೋವೇಗದಿಂದ ವಸುದೇವನು ಬಾಣಪ್ರಯೋಗ ಮಾಡಿದನು.

೪೪. ಚಾಚಿದ ನಾಲಗೆಯಂತಿರುವ ಬಾಣವು ಶತ್ರುಗಳ ಸೈನ್ಯಗಳನ್ನು ನುಂಗಲೆಂದು ಮೃತ್ಯುವೇ ಬಾಯ್ತೆರೆದಂತೆ ಕುಮಾರನ ಬಿಲ್ಲಿನಲ್ಲಿ ಮೂಡಿತು.

೪೫. ವಸುದೇವನು ಎಡೆಬಿಡದೆ ಬಾಣ ಹೊಡೆಯುತ್ತಿರಲಾಗಿ, ಅಲಗಿಗೆ ಅಲಗು ಘರ್ಷಿಸಿ ಹುಟ್ಟಿದ ಉರಿ ಬಿಸಿಲಂತೆ ಹರಡಿತು. ದಿಕ್ಕುಗಳಲ್ಲೆಲ್ಲ ಕತ್ತಲೆ ಮುಸುಕಿತು. ಸೂರ್ಯನು ಹಾದಿ ತಪ್ಪಿದನು.

೪೬. ಅರಳಿದ ಸಂಪಗೆ ಹೂವಿಗೆ ಮರಿದುಂಬಿ ಎರಗದಂತೆ, ಸಮುದ್ರವಿಜಯನು ಹೆಗಲವರೆಗೆ ಸೆಳೆದು ಬಿಟ್ಟು ಹೊಸಗರಿಯ ಬಾಣಗಳು ಅವನ ತಮ್ಮನಿಗೆ ತಾಕದೆ ಹಾರಿಹೋದುವು.

---

೧ ಲಿಂ (ಕ, ಪ). ೨ ನೆಂ (ಮ). ೩ ನ್ಮೋ (ಕ, ಮ). ೪ ವೊ (ಕಾ). ೫ + ನಿ (ಕಾ). ೬ ಯಿಂ (ಪ). ೭ ಯ್ಯೊಯ್ದು (ಕ), ಯ್ಯೋದು (ಕಾ). ೮ ಸಿ (ಕ). ೯ ಕುವ (ಕ, ಮ), ಕುಮ (ಪ). ೧೦ ಲ್ಯೋ (ಕಾ). ೧೧ ಲ್ಕೂ (ಕಾ). ೧೨ ವ (ಕ, ಮ), ವೊ (ಪ). ೧೩ ಜೆ (ಕ, ಕಾ, ಮ). ೧೪ ಲ್ಲಂ (ಕ, ಮ, ಪ). ೧೫ ಕಿ (ಕಾ). ೧೬ ದೆಸೆ (ಕ, ಮ), ದೆನೆ (ಪ). ೧೭ ಪ್ಪೆ (ಕ). ೧೮ ಯ್ಯುವ (ಮ), ಯ್ವ (ಕಾ).

ಆದಟರನೊಂದೆ ಶಾ[1]ತಶರದಿಂ ತುರಗಂಗಳನೊಂದೆ ಬಾಣದಿಂ
ಮದಗಜದೊಡ್ಡನೊಂದೆ ಕಣೆಯಿಂದೆ ನಿವಾರಿಸಿ[2] ಪೊರ್ದೆ ಪಾದಪ
ದ್ಮದ ಮೊದಲೊಳ್ ನಿಜಾಗ್ರಜನನೆಚ್ಚ ಶಿಳೀಮುಖಮಾಗಳಂಬು ತ
ಪ್ಪಿದೊಡಭಿವಾದೆಯೆಂಬ ತೆಱದಿಂ ಪೊಡೆವಟ್ಟನಪಾರ ಪೌರುಷಂ ೪೭

ವ|| ಪೊಡೆವಡುವುದುಂ ನಿರವಿಸಿ ವಸದೇವನೆಂದಱಿದು

ಕೆಯ್ತಪ್ಪಾದುದು ಕಾದಲೊರ್ವನೆ ಸಮಗ್ರಾನೀಕದೊಳ್ ಕೋದು ಕೋ
ಲ್ವೊ[3]ಯ್ದಂ ಬಾಳಕನೊಕ್ಕ ತು (ತ?)ಪ್ಪ ಮು[4]ಡುಗಲ್ಕೇಂ ಬರ್ಕುಮೇ ಗಂಟಲಂ
ಕೊಯ್ದಂ ಕೆಯ್ತವದಿಂದಮೆಂದೊಗೆದ ನೋವಂ ಸಂತಸಂ ನೂಂಕೆ[5] ಮೇ
ಲ್ವಾಯ್ದಿಂ[6]ದ್ರೇಭ ಸಮಂ ಸಮುದ್ರವಿಜಯಂ ತಳ್ಕೈಸಿದಂ ತಮ್ಮನಂ ೪೮

ಮಿಸಿಸೆ ಸುಖದಶ್ರು ಪುಳಕಂ
ಪಸರಿಸೆ ಬ[7]ಲ್ಲೊಂದು ಜಾವಮಪ್ಪಿನ[8] ಪಸವೋ
ಡೆ ಸಮುದ್ರವಿಜಯನಪ್ಪಿರೆ[9]
ವಸುದೇವನುಮಪ್ಪಿಕೊಂಡು[10] ತೋಷಿದನಳವಂ ೪೯

ವ|| ಬಟಿಯಂ ಬಳಮುಖ್ಯರಪ್ಪ ಜರಾಸಂಧನಂಗಮಗ್ರಜನ ಬೆಸದಿನೆಱಗಿ ಮಱುದಿವಸಂ ಸ್ವಯಂವರಕ್ಕೆ ನೆರೆದರಸುಮಕ್ಕಳೆಲ್ಲಂ ನಿಬ್ಬಣಿಗರಾಗೆ ರೋಹಿಣಿಯೊಳ್ಮದುವೆ ನಿಂದು ಮಗುಳ್ದು

೪೭. ಒಂದೇ ಬಾಣದಿಂದ ವೀರಾಗ್ರಣಿಗಳನ್ನೂ ಇನ್ನೊಂದೇ ಬಾಣದಿಂದ ಕುದುರೆಗಳನ್ನೂ ಮತ್ತೊಂದೇ ಬಾಣದಿಂದ ಮದದಾನೆಗಳ ಪಡೆಯನ್ನೂ ನಿವಾರಿಸಿ, ಅಣ್ಣನಿಗೆ ಬಿಟ್ಟ ಬಾಣವು ಅವನ ಪಾದದ ಸನ್ನಿಧಿಯನ್ನು ಸೇರಲಾಗಿ, ಬಾಣದ ನಮಸ್ಕಾರ ಒಂದು ವೇಳೆ ತಪ್ಪಿದರೂ ಪ್ರತ್ಯಕ್ಷ ನಮಸ್ಕಾರವಿರಲೆಂದು ಆ ಅಮಿತ ಪರಾಕ್ರಮಿ ವಸುದೇವನು ನಮಸ್ಕಾರ ಮಾಡಿದನು.

ವ|| ಹಾಗೆ ನಮಸ್ಕರಿಸಿದವನು ವಸುದೇವನೆಂದರಿತು -

೪೮. "ಅಜ್ಞಾನದಿಂದ ಅಪರಾಧವಾಯಿತು. ಸಮಸ್ತ ಸೈನ್ಯಕ್ಕೆ ಎದುರಾಗಿ ಈ ಬಾಲಕನೊಬ್ಬನೇ ಬಿಲ್ಲು ಹಿಡಿದು ಹೋರಾಡಿದನು. ಚೆಲ್ಲಿ ಹೋದ ತುಪ್ಪವನ್ನೇನು ಬಳಿದುಕೊಳ್ಳಲಾದೀತೆ? ಮೋಸದಿಂದ ಗಂಟಲು ಕೊಯ್ದನು" ಎಂಬ ನೋವನ್ನು (ತಮ್ಮನನ್ನು ಕಂಡ ಸಂತೋಷವು ಹಿಮ್ಮೆಟ್ಟಿಸಲಾಗಿ) ಗಜೇಂದ್ರಸದೃಶನಾದ ಸಮುದ್ರ ವಿಜಯನು ಅಡಬರಿಸಿ ಬಂದು ತಮ್ಮನನ್ನು ತಬ್ಬಿಕೊಂಡನು.

೪೯. ಸುಖದಿಂದ ಉಕ್ಕುವ ಕಣ್ಣೀರಸ್ನಾನದಲ್ಲಿ, ರೋಮಾಂಚ ಉಬ್ಬರಿಸಿ, ಅಪ್ಪುಗೆಯ ಬರ ಹಿಂಗುವಂತೆ ಒಂದು ಯಾಮಕಾಲದವರೆಗೆ ಸಮುದ್ರವಿಜಯನು ಅಪ್ಪಿಕೊಂಡಿರಲಾಗಿ, ವಸುದೇವನೂ ಆ ಅಪ್ಪುಗೆಯಲ್ಲಿ ಸುಖಿಸಿದನು.

ವ|| ಆ ನಂತರ ಸೇನೆಯಲ್ಲಿ ಮುಖ್ಯನಾದ ಜರಾಸಂಧನಿಗೂ ಅಣ್ಣನಪ್ಪಣೆಯಂತೆ ನಮಸ್ಕರಿಸಿದನು. ಮರುದಿವಸ ಸ್ವಯಂವರಕ್ಕೆಂದು ನೆರೆದಿದ್ದ ರಾಜಕುಮಾರರೆಲ್ಲರೂ

---

೧ ಶಾಂ (ಕ). ೨ ಸೆ (ಕ, ಪ). ೩ ಲ್ವಾ (ಪ). ೪ ಮ (ಮ). ೫ ಕೆ (ಕ, ಪ). ೬ ಯ್ದಂ (ಕ, ಮ). ೭ ಬಿ (ಪ). ೮ + ನಂ (ಪ). ೯ ರಿ (ಕ) ೧೦ ಡ (ಮ)

ಸೂರ್ಯಪುರಕ್ಕೆ ಪೋಗಿ ಸುಖಸಂಕಥಾವಿನೋದದಿಂದಮಿರ್ದನಾ ಮಹಾನುಭಾವ[೧]ನ ಸೌಭಾಗ್ಯ ಭಾಗ್ಯಸಂಭೋಗಮಂ ಪೇೞ್ವೊಡೆ

ಬರೆ ಭರ[೨]ದಿಂದೆ ನಿಬ್ಬಣಕೆ ಚಿತ್ತಜನುಂ ರತಿಯುಂ ವಸಂತನುಂ
ವರ ವನಲಕ್ಷ್ಮಿಯುಂ ಶಶಿಯುಮಾತನ ರೋಹಿಣಿಯುಂ ಶಿರೀಷಮುಂ
ಸುರಯಿಯುಮಾಮ್ರಮುಂ ಮಿಸುಪ ಮಲ್ಲಿಗೆಯುಂ ವಸುದೇವನಾಳ್ದ ನೀ
ಧರೆ ಪೊಗೞಲ್ಕೆ ಷೋಡಶಸಹಸ್ರ ವಿವಾಹಮಹೋತ್ಸವಂಗಳಂ ೫೦

ಗುಣನಿಧಿಯುದಯಿಸಿದಂ ರೋ
ಹಿಣಿಗಂ ವಿಧುವಿಂಗಮುದಯಿಪಂತೆ ಬುಧಂ ರೋ
ಹಿಣಿಗಂ ವಸುದೇವಂಗಂ
ರಣರಸಿಕಂ ಪ್ರಬಲನತಿಬಲಂ ಬಲದೇವಂ ೫೧

ವ॥ ಅಂದಾ ಸ್ವಯಂವರದೊಳ್ ತನ್ನ ಬಲ್ಲ ಬಿಲ್ಲ ಬಿನ್ನಣಂ[೩]ಗಳಂ[೩] ಕಂ[೪]ಡು ಬಂಟರಾಗಿ [೫]ಬಳಸಿ ಬಂದು[೫] ಬೆಸಕೆಯ್ದು[೬] ಬೇಡಿ[೭]ಕೊಂಡ[೭] ರಾಜ ಕುಮಾರಕರ್ಗೆ ಬಿಲ್ವಿ[೮]ದ್ಯೆಯಂ ಕಲಿಸುತ್ತುಮಿರ್ಪ ವಸುದೇವನಲ್ಲಿಗೆ

ಸುಡುರ್ದ[೯]ಲೆ ಬಟ್ಟ[೧೦] ಕಣ್ಕಲಿಮೊಗಂ ಕಲಿ[೧೧]ಗೊಂಡುಡೆ ಬೆ[೧೨]ಟ್ಟಿತಪ್ಪ ಕೆ
ಯ್ಯಿಡಿದು ಪೊರಳ್ಚಿ ಮಾಡಿದವೊಲಪ್ಪೊಡಲೊಪ್ಪುವ ರೂಪು ತು[೧೩]ಪ್ಪಮಂ
ತೊಡೆದವೊಲಪ್ಪ ಮೀಸೆ ಮಿಸುಗುತ್ತಿರೆ ಬಂದನದೊರ್ವನೊಂದು ಬಿ
ಲ್ವಿಡಿದು ಯುವಾನನಲ್ಲಿಗೆ ನವೀನ ನವೀ[೧೪]ನರ[೧೪]ದೋತ್ಕಟಂ ಭಟಂ ೫೨

ನಿಬ್ಬಣಿಗರಾಗಲಾಗಿ, ರೋಹಿಣಿಯನ್ನು ಮದುವೆಯಾಗಿ, ಸೂರ್ಯಪುರಕ್ಕೆ ಮರಳಿ ಹೋಗಿ, ವಸುದೇವನು ಸುಖಸಂಕಥಾ ವಿನೋದಿಂದ ಇದ್ದನು. ಆ ಮಹಾನುಭಾವನ ಸೌಭಾಗ್ಯಭಾಗ್ಯ ವೆಂತಹುದೆಂದರೆ -

೫೦. ರತಿಯೊಡನೆ ಕಾಮನೂ ವನಲಕ್ಷ್ಮಿಯೊಡನೆ ವಸಂತನೂ ರೋಹಿಣಿಯೊಡನೆ ಚಂದ್ರನೂ ಸುರಗಿಯೊಂದಿಗೆ ಶೇಷವೂ ಮಲ್ಲಿಗೆಯೊಡನೆ ಮಾವೂ ನಿಬ್ಬಣಿಗರಾಗಿ ಬರಲು, ಲೋಕವೆಲ್ಲ ಮೆಚ್ಚಿ ಹೊಗಳುವಂತೆ ವಸುದೇವನು ಹದಿನಾರು ಸಾವಿರ ವಿವಾಹಗಳನ್ನು ಮಹೋತ್ಸವದಿಂದ ಮಾಡಿಕೊಂಡನು.

೫೧. ರೋಹಿಣಿಗೂ ಚಂದ್ರನಿಗೂ ಬುಧನು ಹುಟ್ಟಿದಂತೆ, ರೋಹಿಣಿದೇವಿಗೂ ವಸುದೇವನಿಗೂ ರಣರಸಿಕನೂ ಬಲಿಷ್ಠನೂ ಆದ ಬಲದೇವನು ಹುಟ್ಟಿದನು.

ವ॥ ಅಂದು ಆ ಸ್ವಯಂವರ ಪ್ರಸಂಗದಲ್ಲಿ ತಾನು ತೋರಿದ ಧನುರ್ವಿದ್ಯಾ ಪ್ರಾವೀಣ್ಯವನ್ನು ಕಂಡು, ಹಿಂಡುಹಿಂಡಾಗಿ ಬಂದು ವಿನಯಪೂರ್ವಕವಾಗಿ ಬೇಡಿಕೊಂಡ ರಾಜಕುಮಾರರಿಗೆ ವಸುದೇವನು ಬಿಲ್ವಿದ್ಯೆಯನ್ನು ಕಲಿಸುತ್ತಿದ್ದನು. ಹೀಗಿರುವಾಗ ಆತನ ಬಳಿಗೆ - ೫೨. ಕೆಂಗೂದಲಿನ ತಲೆ, ಅಗಲವಾಗಿ ತೆರೆದಕಣ್ಣು, ವೀರಗಚ್ಚೆಯ ಗಂಡುಡೆ, ಬಲಿಷ್ಠವಾದ ಕೈ, ಒತ್ತಿ ತೀಡಿ ಮಾಡಿದಂತಹ ಮೈ, ಒಪ್ಪುವ ರೂಪ, ತುಪ್ಪವನ್ನು ತೊಡೆದಂತಿರುವ ಮೀಸೆ ಕಂಗೊಳಿಸುತ್ತಿರಲಾಗಿ, ನವೀನವಾದ ವೀರರಸದಿಂದ ವಿಜೃಂಭಿಸುವ ಯುವಕನೊಬ್ಬನು ಬಂದನು.

---

೧ ವ (ಕಾ). ೨. ಯ (ಕಾ). ೩ X (ಕ, ಮ, ಪ). ೪ ಗಂ (ಕ, ಪ) ಗೊಂ (ಮ). ೫ ಬಟೆಸಂದು (ಕ, ಪ), ಬಟೆಸಂದು ಬಂದು (ಮ). ೬ ಯ್ವ (ಪ). ೭ ಕೊಳ್ವ (ಪ). ೮ ಲುವಿ (ಮ), ಲ್ಲವಿ (ಪ). ೯ ದ (ಕ, ಮ, ಪ). ೧೦ ಟ್ಟು (ಕ). ೧೧ ಲಿ (ಮ). ೧೨ ಬ (ಕಾ, ಮ). ೧೩ ತೊ (ಕಾ). ೧೪ ರನ (ಕ, ಪ).

ವ|| ಬಂದು ವಸುದೇವಂಗೆ ತುಱಿಲ್ಗೆಯ್ದುದುಮರಸನೆತ್ತಣಿಂ ಬಂದೆಯೆತ್ತವೋದಪೆ ನಿನ್ನ ಪೆಸರೇನೆಂಬು[೧]ದುಂ[೧]ಭಟನಿಂತೆಂದಂ

ಜನನಾಥಾ ನಿತ್ಯ ಚಂದ್ರೋದಯ ಧರಣಿಪತೀ ನಾಡು ನಾಡಂ ತೊೞಲ್ದಿಂ
ಧನುವಂ ಕಲ್ವಟ್ಟೆಯಿಂ ಬಿಲ್ಲೋ[೨]ಜನನಱಸಿ[೩] ಬಿಲ್ವಲ್ಮೆಯೊಳ್ ದೇವ ನೀಂ ದೇ
ವನೆಯಾನುಂ ಚಟ್ಟನಾಗಲ್ನಿನಗೆ ಬಗೆದೆ[೪] ಯು[೫]ಷ್ಮದ್ವಿ[೫]ಷದ್ಧ್ವಂಸನೆಂ ಕಂ
ಸನೆ[೬]ನೆಂಬೆಂ ನಿನ್ನ ವಿಖ್ಯಾತಿಯ[೭]ನಖಿಳದಿಶಾಚಕ್ರದೊಳ್ಕೇಳ್ದು ಬಂದೆಂ ೫೩

ವ|| ಎನೆ ಕೆಯ್ಕೊಂಡು ಕೋದಂಡವಿದ್ಯೆಯುಂ ಕಲಿಸುತ್ತುಮಿರೆ ಕಂಸಂ ವಸುದೇವಂಗೆ ಚಟ್ಟನಾಗಿ ಮಿಕ್ಕ ಚಾಪಾಚಾರ್ಯರ್ಗೋಜನಾಗಿ ಧನುರ್ವಿದ್ಯೆಯುಂ ಸಾಧಿಸುತ್ತುಮಿರ್ದನನ್ನೆಗಂ

ಪೌದನಪುರ ವನಿತೆಗೆ ಸ
ಮ್ಮೇದನಗ[೮]ಶ್ರೀನಿತಂಬಕಳ[೮]ಕಾಂಚಿಗೆ ತಾ
ನಾದನಭಿನವ ಪಯೋಧರ
ನಾದಂ ಪತಿ ತಾಳಹಸ್ತನೆಂಬನಳುಂಬಂ ೫೪

ಅವನೊರ್ಮೆ ಪಿಡಿದು ಕಂಠೀ
ರವಪೋತಮನೋತು ಪೊರೆದು ಪಿರಿಯಪ್ಪುದುಮೇ
ಱುವನಾಗಿ [೯]ಪರೆದುದೀ ಭೂ[೯]
ಭುವನದೊಳಾತಂಗೆ ಸಿಂಹರಥನೆಂಬ ಪೆಸರ್ ೫೫

ವ|| ಹೀಗೆ ಬಂದು ವಸುದೇವನಿಗೆ ನಮಸ್ಕಾರ ಮಾಡಲಾಗಿ ಅರಸನು, "ಎಲ್ಲಿಂದ ಬಂದೆ? ಎತ್ತ ಹೋಗುವವನು? ನಿನ್ನ ಹೆಸರೇನು?" ಎಂದು ಕೇಳಿದೊಡನೆ ಆ ವೀರನು ಹೀಗೆಂದನು -

೫೩. "ನಿತ್ಯ ಚಂದ್ರೋದಯವುಳ್ಳ ಭೂಮಿಗೆ ಅಧಿಪತಿಯಾದ ರಾಜನೇ, ಬಿಲ್ವಿದ್ಯೆಯನ್ನು ಕಲಿಯುವ ಆಸಕ್ತಿಯಿಂದ ಧನುರ್ವಿದ್ಯಾಗುರುವನ್ನು ಹುಡುಕುತ್ತಾ ಅನೇಕ ನಾಡುಗಳನ್ನು ಸುತ್ತಿ ಬಂದೆನು. ಬಿಲ್ವಿದ್ಯೆಯಲ್ಲಿ ನೀನು ದೇವನಾಗಿರುವೆ. ನಾನೂ ನಿನ್ನೊಬ್ಬ ಶಿಷ್ಯನಾಗಲು ಬಯಸಿದ್ದೇನೆ. ನಿನ್ನ ಶತ್ರುಗಳನ್ನು ಧ್ವಂಸ ಮಾಡುವ ಕಂಸನೆಂಬುದು ನನ್ನ ಹೆಸರು. ದಿಕ್ಕುದಿಕ್ಕಿಗೆ ಹಬ್ಬಿರುವ ನಿನ್ನ ವಿಖ್ಯಾತಿಯನ್ನು ಕೇಳಿ ಬಂದಿದ್ದೇನೆ."

ವ|| ಹೀಗೆನ್ನಲು ಅವನನ್ನು ಶಿಷ್ಯನೆಂದು ಸ್ವೀಕರಿಸಿ ಬಿಲ್ವಿದ್ಯೆಯನ್ನು ಕಲಿಸುತ್ತಿರಲಾಗಿ, ಕಂಸನು ವಸುದೇವನಿಗೆ ಶಿಷ್ಯನಾಗಿ, ಮಿಕ್ಕ ಧನುರ್ವಿದ್ಯಾಗುರುಗಳಿಗೆ ಗುರುವಾಗಿ ಧನುರ್ವಿದ್ಯೆಯನ್ನು ಅಭ್ಯಾಸ ಮಾಡುತ್ತಿದ್ದನು. ಹೀಗಿರುವಾಗ -

೫೪. ಸಮ್ಮೇದ ಗಿರಿಯ ನಿತಂಬ ಪ್ರದೇಶಕ್ಕೆ ಹೊಸ ಮೋಡವೊಂದು ಒಡ್ಯಾಣವಾಗಿ ಶೋಭಿಸುವಂತೆ ಕಂಗೊಳಿಸುವ ಪೌದನಪುರಕ್ಕೆ ತಾಳಹಸ್ತನೆಂಬ ಅರಸು ಒಪ್ಪಿದನು.

೫೫. ಒಮ್ಮೆ ಅವನು ಸಿಂಹದ ಮರಿಯೊಂದನ್ನು ಹಿಡಿದು ಪ್ರೀತಿಯಿಂದ ಸಾಕಿದನು. ಅದು ದೊಡ್ಡದಾದಾಗ ಅದರ ಮೇಲೆ ಸವಾರಿ ಮಾಡತೊಡಗಿದನು. ಅದರಿಂದಾಗಿ ಅವನಿಗೆ ಸಿಂಹರಥನೆಂದು ಹೆಸರಾಯಿತು.

---

೧ ದುಮೆನೆ (ಮ), ದುಂ (ಕ). ೨ ಲ್ವೋವ (ಕಾ). ೩ + ದೆ (ಕಾ, ಮ) ೪ ದು (ಕಾ). ೫ ಷ್ಕಂ ದ್ವಿ (ಕ, ಮ). ಕ್ಕಂ ದ್ವಿ (ಪ). ೬ ನ (ಕಾ). ೭ ಯಿ (ಕ). ೮..... (ಕಾ). ೯ ಪರಿಯುತಿರ್ದಂ (ಪ), ಪರೆದು ಪುದಿದೀ (ಕ).

ಕುಱಿಯ ಕಡಿಯಣಕೆ ಬಾಯಂ
ತೆಱ[1]ಯದಿರಿಂ ಬಾಯ ಕರುಳೆ ಕಡಿಯಣಮಾಯ್ತೆಂ
ದುಱದೆ ನೃಪಸಿಂಹನೇಱ *
ಲ್ಮಱುಗುವನೇಱನೆ ಕಡಂಗಿ ಸಿಂಹಮನಾತಂ ೫೬

ಕರಿಯಂ ಸಂಕ್ರಂದನಂ, ಮೇಷಮನಸಿತಪದಂ, ಕೋಣನಂ ಕಾಳನಾಳಂ
ತ[1]ರಸಾದಂ ಯಾದ[2]ವೋದಂ[2] ವರುಣನೆರಲೆಯಂ ವಾಯು ಪಾಱಿಂ[3] ಕುಬೇರಂ
ಪಿರಿಯೆಟ್ಟಂ ರುದ್ರನಾರ್ದೇಱಿಯುಮೊದವಿದಪರ್ದೇವರೆಂ[4]ದೆನ್ನವೋಲ್ಕೇ
ಸರಿಯಂ ಪಾಯ್ದೇಱಿದಂದೆಂತೊಡರ್ವರೊ ಜಡರೆಂದೇಟಿಪಂ ತಾಳಹಸ್ತಂ ೫೭

ಹರನೆಟ್ಟಂ ಯಕ್ಷನೇಱಿಂ[5] ಪವನನೆರಲೆಯಂ ಸಾಗರಾವಾಸನಂಭ
ಶ್ಚರಮಂ ನೈರುತ್ಯನಾಳಂ ಯಮನು[6] ಮಹಿಷಮಂ ವಹ್ನಿಯಾ[6]
ಮೇಷ[7]ಮಂ ಕೊ
ಕ್ಕರಿಕುಂ ಸಂಗ್ರಾಮದೊಳ್ ಮನ್ಮೃಗಪತಿಯುಗುರುಂ ತಾಗಲಿಂದ್ರೇಭಕುಂಭಂ
ಬಿರಿವನ್ನಂ ಪೊಯ್ಯುಮೆಂದೇಂ ಗಜಱುವನೊ ನಿಜಾ[8]ಸ್ಥಾನದೊಳ್ ತಾಳಹಸ್ತಂ ೫೮

೫೬. "ಕುರಿಯ ಕಡಿವಾಣಕ್ಕೆ ಬಾಯಿ ತೆರೆಯುವುದೇಕೆ? ಬಾಯಿಗೆ ಬಂದ ಕರುಳೇ ಕಡಿವಾಣವಾಯಿತು" ಎಂದು ಹೆದರಿಕೊಂಡು ಆ ನೃಪಸಿಂಹನು ಏರಲು ಹಿಂದೆಗೆಯುವನೆ? ಉತ್ಸಾಹದಿಂದ ಆತನು ಸಿಂಹವನ್ನು ಏರುವುದಿಲ್ಲವೆ?

೫೭. ಆನೆಯನ್ನು ಇಂದ್ರನೂ ತಗರನ್ನೂ ಅಗ್ನಿಯೂ ಕೋಣವನ್ನು ಯಮನೂ ಮನುಷ್ಯನನ್ನು ನೈಋುತಿಯೂ ಮೊಸಳೆಯನ್ನು ವರುಣನೂ ಜಿಂಕೆಯನ್ನು ವಾಯುವೂ ವಿಮಾನವನ್ನು ಕುಬೇರನೂ ಹಿರಿಯ ನಂದಿಯನ್ನು ರುದ್ರನೂ ಏರಿದರು. ಹೀಗಿದ್ದರೂ ಅವರು ದೇವರೆನಿಸಿಕೊಂಡರು, ನನ್ನ ಹಾಗೆ ಸಿಂಹವನ್ನು ಏರಿದ್ದರೆ ಇನ್ನೂ ಏನೆಂದು ಕೊಳ್ಳುತ್ತಿದ್ದರೊ? ಎಂದು ತಾಳಹಸ್ತನು ದಿಕ್ಪಾಲಕರನ್ನೆಲ್ಲ ಹೀಯಾಳಿಸಿದನು. (ಎರಡನೆಯ ಚರಣದಲ್ಲಿಯ "ಯಾವವೋದಂ" ಎಂಬುದು "ಯಾದನಾದಂ" (ಯಾದಃನಾದಂ) ಎಂದಿರಬಹುದೆ? ಕುಬೇರನು ನರವಾಹನನೆಂಬುದು ಪ್ರಸಿದ್ಧ. ಆದರೆ ಇಲ್ಲಿ ವಿಮಾನ ಅವನ ವಾಹನವಾಗಿದ್ದು ನೈಋುತಿ ನರವಾಹನನೆಂದು ಉಕ್ತವಾಗಿದೆ)

೫೮. ಶಿವನ ನಂದಿಯನ್ನೂ ಕುಬೇರನ ವಾಹನವನ್ನೂ ವಾಯುವಿನ ಜಿಂಕೆಯನ್ನೂ ವರುಣನ ಮೊಸಳೆಯನ್ನೂ ಯಮನ ಕೋಣವನ್ನೂ ಅಗ್ನಿಯ ತಗರನ್ನೂ ಸಂಗ್ರಾಮದಲ್ಲಿ ಸಿಂಹವು ಧಿಕ್ಕರಿಸುವುದು. ಇದರ ಉಗುರು ತಾಗಿದರೂ ಸಾಕು, ಇಂದ್ರನ ಐರಾವತದ ನೆತ್ತಿ ಸೀಳಿ ಹೋಗುವುದು - ಎಂದು ಅದೇನು ಆಢ್ಯತೆಯಿಂದ ತಾಳಹಸ್ತನು ತನ್ನ ಒಡ್ಡೋಲಗದಲ್ಲಿ ಗರ್ಜಿಸುವನು !

---

* ಕಾ ಪ್ರತಿಯಲ್ಲಿ ಈ ಪದ್ಯವಿಲ್ಲ. ೧ ಕ (ಕ, ಪ). ೨.... (ಕಾ) ೩ ವುಂ (ಕ), ಱುಂ (ಮ). ೪ ರಿಂ (ಮ). ೫ ಟಿಂ (ಪ). ೬ ನ (ಕ, ಮ). ೭ ವೇಶ (ಮ). ೮ ಜ (ಮ).

ಉಕ್ಕಿಟ್ಟುದಕ್ಕೆನೆಂಬವ
ನುಕ್ಕಂ ತಾಂ ಬಿಟ್ಟನಾಗಿ ಸಿಂಗಮನೇಱಿ
ಲ್ಕೊಟ್ಟೆನಾವಿರೆ ಗಜಾರಿಯ
ಮಟ್ಟಂ ಬೆನ್ನೇಱುವಂಗೆಯೆಂಟೆರ್ದೆಯುಂಟೇ X ೫೯

[೧]ನಾಡೊಳಗೆ ಮೀಸೆದೆಱೆಯಂ[೧]
ಬೇಡಿಸುವಂ ಬೀರರಸಿಯರವೆಸರಿಂ ಕೂ
ಸಾಡಿಸಲೀಯಂ ಪುಲ್ಲುರಿ
ಯಾಡಿಸುವಂ ತೇಜದುರಿಯಿ[೨]ನರಮೀಸೆಗಳಂ ೬೦

ವ|| ಎಂಬಗುರ್ವಿನ[೩] ಸಿಂಹರಥನಾಂ ಜೀವಿಸುತ್ತುಮಿರೆ ಮ[೪]ತ್ತ ಮೊ[೪]ರ್ವನ ನೆತ್ತಿಯೊಳ್ ಸತ್ತಿ[೫]ಗೆಯುಂ ಕೆಯ್ಯೊಳ್[೫] ಕೆಯ್ದು ಉಂಟೆಂಬುದೆ[೬] ಮದೀಯ ರಾಜವೃತ್ತಿಗಂ[೭] ವೀರವೃತ್ತಿಗಂ ಭಂಗವೆಂದು ಸಿಂಹದ ಸಹಾಯು ಬಳವುಂ ಕೂರ್ಪುವಡೆದ ಕೆಯ್ದುವಿನ ಬಳವುಂ ಮುಪ್ಪುರಿಗೂಡಿದಂತಾಗೆ ಮೇಗೆ[೮] ಮೆಯ್ಯಱಿಯದೆ

೫೯. ಇದು ಎರಡು ಪದ್ಯಗಳ ಪೂರ್ವಾರ್ಧ ಉತ್ತರಾರ್ಧಗಳ ಮಿಶ್ರಣವಾಗಿದೆ. ಈಗಿದ್ದಂತೆ ಅನ್ವಯ ಮಾಡಲಾಗುವುದಿಲ್ಲ.

೬೦. ನಾಡಿನಲ್ಲಿ ಆತನು ವೀರರಿಂದ ಮೀಸೆಯ ಸುಂಕ ಕೇಳುವನು. "ಅರಸಿಯರೆಂದು" ವಿನೋದ ಮಾಡುವುದಕ್ಕೂ ಅವಕಾಶವೀಯುವುದಿಲ್ಲ. ತನ್ನ ತೇಜಸ್ಸಿನ ಉರಿಯಿಂದ ಅರಸರ ಮೀಸೆಗಳನ್ನು ಹುಲ್ಲಿನಂತೆ ಸುಟ್ಟುಬಿಡುವನು.

ವ|| ಹೀಗೆ ವಿಜೃಂಭಿಸುವ ಸಿಂಹರಥನು "ನಾನು ಬದುಕಿರುವಾಗ ಇನ್ನೊಬ್ಬನ ತಲೆಯ ಮೇಲೆ ರಾಜಚ್ಛತ್ರವೂ ಕೈಯಲ್ಲಿ ಆಯುಧವೂ ಉಂಟೆಂದರೆ ನನ್ನ ಅರಸುತನಕ್ಕೆ ವೀರತನಕ್ಕೂ ಅದು ಅಪಮಾನ"ವೆಂದುಕೊಂಡು, ಸಿಂಹದ ಸಹಾಯುಬಲವೂ ಹರಿತವಾದ ಆಯುಧದ ಬಲವೂ ಸೇರಿ ಮುಪ್ಪುರಿಗೂಡಿದಂತಾಗಲಾಗಿ ಮರಹಂಕಾರದಿಂದ ಉಬ್ಬಿ -

---

೧...... ಸೆದೆಯಂ (ಕಾ). ೨ ಯ (ಮ). ೩ + ಗರ್ವ (ಕ, ಮ, ಪ). ೪ ತ್ತೊ (ಕ, ಪ). ೫ ಗ.... ಳು (ಕಾ). ೬ ದುಂ (ಮ). ೭ ಗೆ (ಮ). ೮. ಗು (ಕಾ), ಗುಂ (ಮ).

X ಇದು ಮ ಪ್ರತಿಯ ಪಾಠವು. ಕ ಪ್ರತಿಯ ಪಾಠವೂ ಸುಮಾರಾಗಿ ಹೀಗೆಯೇ ಇದೆ. (ಉಕ್ಕಿಟ್ಟು ಎಂಬಲ್ಲಿ ಉಟ್ಟುಕ್ಕಿ ಎಂದು ಮಾತ್ರ ಭೇದ). ಕಾ ಪ್ರತಿಯ ಪಾಠವು ಕೆಳಗಿನಂತಿದೆ;
ಉಟ್ಟುದಿರ್ಕಿಜೀವ X X X ನುರ್ಕಂ
ಬಿಟ್ಟನಾಗಿ ಸಲೆ ಸಿಂಗಮನೇಱಿ
ಲ್ಕೊಟ್ಟೆನಾನಿರೆ ಗಜಾರಿಯ ಬೆನ್ನಂ
ಮೆಟ್ಟಿವಮೀಱುವರ್ಗೆಂಟೆರ್ದೆಯುಂಟೇ || ಪ ಪ್ರತಿಯವರು ಈ ಪದ್ಯವನ್ನು
ಎರಡು ಪದ್ಯಗಳ ಪೂರ್ವಾರ್ಧ ಉತ್ತರಾರ್ಧಗಳ ಸೇರುವೆಯೆಂದು ಊಹಿಸಿದ್ದಾರೆ.

ಬಿಡುವೆಸರ ಚಕ್ರಿ[1]ಯಪ್ಪೊಡೆ[1]
ಮ[2]ಡಕೆಗಳಂ ಮಾಡಿ ಕಳಿಪುಗಲ್ಲದೊಡೀಗ
ಳ್ಮಡಕೆಗೆಡೆಮಾಡಿಕೊಳ್ಗೆಂ
ದಡದರ್ಜು ಜರಾಸಂಧಚಕ್ರಿ[3]ಗಾತಂ ಬೂ[3]ತಂ ೬೧

*ವ|| ಅಟ್ಟುವು[4]ದುಂ ಪೊಜಿ[4]ಮಟ್ಟಾಸುರಂ ಮಸಗಿ ಮೀಸೆಯಂ ಕಡಿದು [5]ಕಿಡಿ[5]ಕಿಡಿಯೋಗಿ ಕಡೆಗಣ್ಣ ಕೋಪದುರಿ ಪತ್ತಿ ಪರಕಲಿಸಿ ಪರ್ವಿದಂತೆ ತಳತ್ತಳಿಸುವ ಚಕ್ರಕ್ಕೆ ಚಕ್ರವರ್ತಿ ಕೆಯ್ಯಂ ನೀಡುವುದುಮಾತನಿತಂದೆಂ

ಖಳನಂ ಗೆಲ್ವುದೆ ಭಂಗಂ
ಕೆಳೆಗೊಳ್ವುದೆ ಕಷ್ಟಮವನೊಳಾಗದು ಪಗೆಯುಂ
ಕೆಳೆಯುಂ [6]ಕರಮರಿ[6]ಯನೆ ನೀಂ
ಮುಳಿವನ್ನಂ ನೃಪತಿಮೌಳಿಮಣಿಖಚಿತ ಪದಾ ೬೨

ಕರಿಗೆ ಹರಿ ಹರಿಗೆ ಶರಭಂ
ಶರಭ[7]ಕ್ಕೆಲೆ[7] ನೃಪತಿ ಮುಳಿಗುಮಾ ಭೇರುಂಡಂ
[8]ನರಿಗೆ ಹರಿ[8] ಕರಿಗೆ ಶರಭಂ
ಹರಿಗೆಂದುಂ ಮುಳಿಯಲಱಿಯದಾ ಭೇರುಂಡಂ ೬೩

೬೧. "ಚಕ್ರಿ (೧. ಚಕ್ರವರ್ತಿ ೨. ಕುಂಬಾರ) ಎಂಬ ಹೆಸರಿಟ್ಟುಕೊಂಡುದಕ್ಕೆ ಅನುಗುಣವಾಗಿ ಮಡಕೆಗಳನ್ನು ಮಾಡಿ ಕಳಿಸು, ಇಲ್ಲವಾದರೆ ಈಗ ಮಡಕೆಗೆ ಏರ್ಪಾಟು ಮಾಡಿಕೊ" ಎಂದು ಆತನು ಜರಾಸಂಧ ಚಕ್ರವರ್ತಿಯ ಬಳಿಗೆ ದೂತನನ್ನು

ವ|| ಅಟ್ಟಿದನು. ಆ ದೂತನು ಬಂದು ತಿಳಿಸಿದೊಡನೆ ಚಕ್ರವರ್ತಿಯು ಕೋಪೋದ್ರಿಕ್ತನಾಗಿ ಮೀಸೆಯನ್ನು ಕಡಿದು, ಕಿಡಿ ಕಿಡಿಯಾಗಿ ಕಡೆಗಣ್ಣಿನ ಕೋಪದ ಉರಿ ಹತ್ತಿ, ಹರಡಿ, ಹಬ್ಬಿದಂತೆ (ತಳತಳಿಸುವ ತನ್ನ ಚಕ್ರಕ್ಕೆ ನೀಡಲಾಗಿ ಆತನ ಸೇನಾಪತಿಯು) ಹೀಗೆಂದನು.*

೬೨. "ಅಧಮನನ್ನು ಗೆದ್ದರೆ ಭಂಗ; ಸ್ನೇಹ ಮಾಡಿಕೊಂಡರೆ ಕಷ್ಟ. ಆದುದರಿಂದ ಅವನೊಡನೆ ಹಗೆತನವೂ ಕೂಡದು. ಗೆಳೆತನವೂ ಕೂಡದು. ರಾಜಾಧಿರಾಜರನ್ನು ತಲೆಬಾಗಿಸಿಕೊಳ್ಳುವ ಮಹಾರಾಜನೇ, ನೀನು ಉರಿದೇಳುವಷ್ಟು ಅಸಾಧ್ಯನೆ ಅವನು?

೬೩. ಆನೆಗೆ ಸಿಂಹವೂ ಸಿಂಹಕ್ಕೆ ಶರಭವೂ ಶರಭಕ್ಕೆ ಭೇರುಂಡವೂ ಮುನಿಯುವುದಲ್ಲದೆ ನರಿಯ ಮೇಲೆ ಸಿಂಹವೂ ಆನೆಯ ಮೇಲೆ ಶರಭವೂ ಸಿಂಹದ ಮೇಲೆ ಭೇರುಂಡವೂ ಎಂದೂ ಕೋಪಗೊಳ್ಳಲಾರದು.

---

೧ ಯುಂ..... (ಕಾ), ೨. (ಕಾ). ೩ ಗಂ ತಾಂ ಭೂ (ಕಾ), ಗಾತಂ ಬೂ (ಮ), ಗಾತಂ ದೂ (ಪ). * ಕಾ ಪ್ರತಿಯಲ್ಲಿ ಈ ವಚನವಿಲ್ಲ. ೪ ದು (ಮ). ೫ X (ಕ, ಪ). ೬ ಕರಿಮುರಿ (ಕಾ), ಕರಮಱಿ (ಪ). ೭ ಕ್ಕೆರೆ (ಕ), ಕ್ಕಿರೆ (ಪ). ೮ ನರಿ ಹರಿಗೆ (ಕ).

ವ|| ಎಂಬುದುಮನಂತ ಚಾತುರ್ವಲಮಮಂ ಬೆಸಸೆ ನೆಲಂ ಬೆ[೧]ಸಲೆಯಾದಂತೆ ಪೋಗಿ ಪೌದನಪುರದ ಪೊಱಗೊ[೨]ಡ್ಡಿ ನಿಲ್ವು[೨]ದುಂ ಅಟ್ಟಿ ತಿಂಬ ದೆಯ್ವಕ್ಕೆ ಪಾಳಂಬ[೩]ಟ್ಟಂತಾ[೩]ದುದೆಂದು ಸಿಂಹರಥಂ ಬಳದ ಕಳಕಳ[೪]ಕ್ಕೆ ಕೆಳರ್ದು

ತುೞಿಯೆ ಪದಾತಿಯಂ ತವೆ ತುರಂಗದಳಂ ತುರಗಂಗಳಂ ರಥಂ
ತುೞಿಯೆ ರಥಂಗಳಂ ತುೞಿಯೆ ದಂತಿಗ[೫]ಳಿಂತರಿ[೫]ಸೇನೆ ಮಿೞ್ತು ತೊ
ತ್ತ[೬]ೞಿದುೞಿದಂತೆ ತಮ್ಮೊಳಗೆ [೭]ಮುಮ್ಮೞಿ[೭]ಯಾಗಿರೆ ಗರ್ಜಿ[೮]ಸಿತ್ತು[೮] ಸೊ
ಕ್ಕೞಿ[೯]ಯೆ ದಿಶಾಗಜಂ ರಣದೊಳೇಱಿದ ಕೇಸರಿ ತಾಳಹಸ್ತನಾ ೬೪

ವ|| ಅದನೊರ್ವಂ ಮಾರಿ[೧೦]ಯುಳಿದಾಡಿನಂತೋಡಿ ಪೋಗಿ ಪೇೞೆ ಕೇಳ್ದು ಜರಾಸಂಧಂ ಜರಾಜರ್ಜರನಂತೆ ಜಕ್ಕನೆ ಜರಿದು ಸ್ವಯಂಬರದನುವರದೊಳ್ ವಸುದೇವನ ಕೂರ್ಪಂ ಕಂಡನಪ್ಪುದ[೧೧]ಱೆ[೧೧]ನವನಲ್ಲದಿವನ ಮಿೞ್ತುವಂ ಮಿಡಿ[೧೨]ಯಲಾ[೧೨]ರ್ಪರಿಲ್ಲೆಂದು [೧೩]ಶೌರ್ಯಪುರಕ್ಕೆ ಪುರುಷರಂ ಕಳಿಪಿ ಸಿಂಹರಥನನಾವೊಂ ಪಿಡಿದು ತಂದನವಂಗೆ ತನ್ನ ಮಗಳುಮಂ ಬೇಡಿದ ನಾಡುಮಂ ಚಕ್ರವರ್ತಿ ಕೊಟ್ಟಪನೆಂದು ಗೋಸನೆಯಿಡಿಸೆ ಕಂ[೧೪]ಸನಾ ಗೋಸನೆಯಂ[೧೪] ಪಿಡಿದು[೧೫] ವಸುದೇವನಲ್ಲಿಗೆ ತಪ್ಪುದುಮಾನಕದುಂದುಭಿ ಧ್ವನಿಯಿಂ[೧೬] ಚಟ್ಟರೊಳಗೆ ಪೆಸರಂ ನಿಲಿಸಿದೆಯೆಂದು ನಲಿದು ಪ್ರಸ್ಥಾನಭೇರಿಯಂ ಪೊಯಿಸಿ ಪೊಱಮಡುವಾಗಳ್ ನೀಂ[೧೭]ಬರಮಿದಾವ ಬವರಮೆಂದು

ವ|| ಹೀಗೆನ್ನಲು ಆತನು ಅಸಂಖ್ಯವಾದ ಚತುರಂಗಬಲಕ್ಕೆ ಆಜ್ಞೆ ಮಾಡಲಾಗಿ, ಅದು ಭೂಮಿಯೆ ಹೆತ್ತಂತೆ ಅತ್ಯಧಿಕವಾಗಿ ಹೋಗಿ ಪೌದನಪುರದ ಹೊರವಲಯದಲ್ಲಿ ಯುದ್ಧಕ್ಕೆ ಅಣಿಯಾಗಿ ನಿಂತಿತು ಬೆನ್ನಟ್ಟಿ

* ಈ ವಚನದಲ್ಲಿ ಕೆಲವು ಪದಗಳು ಲುಪ್ತವಾಗದಂತೆ ತೋರುತ್ತಿದೆ. "ತಳತ್ತಳಿಸುವ ಚಕ್ರಕ್ಕೆ ಚಕ್ರವರ್ತಿ ಕೆಯ್ಯಂ ನೀಡುವುದುಂ" ಎಂದಿರಬಹುದು. 'ಆತನಿಂತೆಂದಂ' ಎಂಬಲ್ಲಿ 'ಆತ' ಯಾರೆಂಬುದರ ಸೂಚನೆಯಿಲ್ಲ. ಮುಂದಿನ ಸಂದರ್ಭದಲ್ಲಿ ಕೂಡ ಹೆಸರಿಸದಿದ್ದರೂ ಆತನು ಸೇನಾಪತಿಯೆ ಆಗಿರಬೇಕು.

ಹಿಡಿದ ತಿನ್ನುವ ದೆವ್ವಕ್ಕೆ ತಾನೆ ಹರಕೆ ಒಪ್ಪಿಸಿಕೊಂಡಂತಾಯಿತೆಂದು ಸಿಂಹರಥನು ಆ ಸೈನ್ಯದ ಕೋಲಾಹಲಧ್ವನಿಗೆ ಕೆರಳಿ -

೬೪. ದಿಗ್ಗಜದ ಸೊಕ್ಕಿಳಿದು ಹೋಗುವಂತೆ ತಾಳಹಸ್ತನೇರಿದ ಸಿಂಹವು ಗರ್ಜಿಸಿದೊಡನೆ ಕಾಲಾಳುಗಳನ್ನು ಕುದುರೆಗಳೂ ಕುದುರೆಗಳನ್ನು ರಥಗಳೂ ರಥಗಳನ್ನು ಆನೆಗಳೂ ತುಳಿದು ತಂತಮ್ಮೊಳಗೆ ತುಳಿದಾಡಿ ಮೃತ್ಯುದೇವತೆಯೆ ತುಳಿದಾಡಿದಂತೆ ಆ ಸೈನ್ಯವೆಲ್ಲ ಮಣ್ಣುಗೂಡಿಹೋಯಿತು.

ವ|| ಮಾರಿಯ ಬಲಿಯಲ್ಲಿ ತಪ್ಪಿಸಿಕೊಂಡ ಆಡಿನಂತೆ, ಬದುಕಿ ಉಳಿದ ಒಬ್ಬನು ಓಡಿಹೋಗಿ ಈ ವೃತ್ತಾಂತವನ್ನು ತಿಳಿಸಲಾಗಿ ಜರಾಸಂಧನು ಮುಪ್ಪಡರಿದವನಂತೆ ಜರ್ರನೆ ಜರಿದನು. ಸ್ವಯಂವರದಲ್ಲಿ ಯುದ್ಧದಲ್ಲಿ ವಸುದೇವನ ಶೌರ್ಯವನ್ನು ಕಂಡವನಾದ್ದರಿಂದ,

---

೧ ಬ (ಕಾ). ೨ ಡ್ಡುವ (ಕ, ಮ, ಪ). ೩ ಟ್ಬಾ (ಕಾ). ೪ + ರವ (ಮ). ೫. ಳಿಂದವೆ (ಕ), ಳಿಂದಂ (ಮ), ಳಂ ದಮೆ (ಪ). ೬ ಳ್ತ (ಕಾ). ೭ ಮಮ್ಮದಿ (ಕಾ), ಮಮ್ಮೞಿ (ಮ). ೮ ಸುತ್ತ (ಕ, ಮ), ಸುತ್ತೆ (ಪ). ೯ ಪಿ (ಕ, ಕಾ), ಪೆ (ಪ). ೧೦ ಱೆ (ಕಾ, ಮ). ೧೧ ದ (ಕ). ೧೨ ಯಾ (ಕ, ಪ). ೧೩ ಸೌರ (ಕಾ) ೧೪ X (ಕ, ಕಾ, ಪ). ೧೫ ದಂ (ಕ). ೧೬ ಯಂ (ಮ). ೧೭ ನೀಂ (ಪ).

ಕಂಸಂ ನಿವಾರಿಸಿ ಪೇೞ್ದು ಪಡೆವೆರಸು ಪೌದನಪುರಕ್ಕೆತ್ತಿವರ್ಪುದುಂ ಸಿಂಹರಥಂ ಕೇಳ್ದು ಗಹಗಹಿಸಿ ಬಾಯ ತಂಬುಲಂ ಸೂಸೆ ೧ನಕ್ಕಾ೧ನೆದಿಂ೨ಬರ್ಗಾಡೋ೨ಳಿಗೆ ಎಂಬಂತೆ ಚಕ್ರವರ್ತಿಯ ಬಲಮಂ ಬಱಿಕೆಯ್ದೆನ್ನ ಸಿಂಹಕ್ಕೆಡೆಯ೩ಬಡವರ ಬಲಮೊಂದು ಪಲ್ಲ ಕೊನೆಗಂ ಬಾರದೆಂದು ಮದದಿಂ ಮುಂದುಗಾಣದೆ ಕದನಕ್ಕಿದಿರ್ವಂದು ಕಂಸನ ಮೇಲೆ೪ ಸಿಂಹರಥಂ ಸಿಂಹಮಂ ಪಾಯ್ಸೆ

ಕಂಚ೫ನಱಿದೆಚ್ಚ ಕೂರ್ಗಣೆ
ಪಂಚಾಸ್ಯನನುರ್ಚಿ ಪಾಱಿ ಪೋದುದೆ ನೆಱ೬ ಪಾ
ಯ್ವಂಚೆವೊಲಂಬಿನ ಬಱಿಯನೆ
ಬಂ೭ಚಿಸಿ ಗಱಿ೬ವಱಿಯ ಪಾವಿನಂತಿರೆ ಸಿಂಹಂ ೬೫

ಮುರಿದಂಗಂ ನೀಳ್ದ ಗಾತ್ರಂ ಮೊಱಿಕಲಿಸಿ ಕರಂ ದಂಡೆಯಂ ನೀಡಿದಂದಂ
ಕರುವಿಟ್ಟಂತಿರ್ಪಿನಂ ಚಪ್ಪರಿಸಿ ಬೆರಸಿ ಕಂಠಾಗ್ರದೊಳ್ ನಾಲ್ಕು ಬಾಯಂ
ತೆರದೇ೭ಅಪ್ಪನ್ನೆಗಂ ಕಿಟ್ಟಲಗನೊ೮ದಱಿ ಮೇಲ್ವಾಯ್ದ೯ ಪಂಚಾಸ್ಯನಂ ವೀ
ರರಸಾಂಗಂ ಶೂದ್ರ೧೦ಕಂಬೋಲ್ಕದನದೊಳಿಱಿದಂ ಕಂಸನುತ್ಸುನ್ನತಾಂಸಂ ೬೬

ಅವನಲ್ಲದೆ ಈ ತಾಳಹಸ್ತನನ್ನು ಕೊಲ್ಲಬಲ್ಲವರಾರೂ ಇಲ್ಲವೆಂದುಕೊಂಡು ಶೌರಿಪುರಕ್ಕೆ ಆಳು ಕಳುಹಿಸಿ, "ಸಿಂಹರಥನನ್ನು ಯಾವನು ಹಿಡಿದು ತರುವನೊ ಅವನಿಗೆ ಚಕ್ರವರ್ತಿ ತನ್ನ ಮಗಳನ್ನು ಬೇಡಿದ ನಾಡನ್ನೂ ಕೊಡುವನು" ಎಂದು ಡಂಗುರವಿಡಿಸಿದನು. ಕಂಸನು ಆ ಡಂಗುರದಿಂದ ಆಹ್ವಾನವನ್ನು ವಸುದೇವನಲ್ಲಿಗೆ ಬಂದು ತಿಳಿಸಲಾಗಿ, ವಸುದೇವನು ಭೇರಿಯಂತೆ ಗಂಭೀರವಾದ ಧ್ವನಿಯಿಂದ, "ನನ್ನ ಶಿಷ್ಯರಲ್ಲಿ ನೀನೇ ಹೆಸರನ್ನು ನಿಲ್ಲಿಸಿದೆ" ಎಂದು ಸಂತೋಷಪಟ್ಟು, ಯುದ್ಧ ಪ್ರಯಾಣ ಸೂಚಕವಾದ ಭೇರಿಯನ್ನು ಹೊಯ್ಸಿ, ಹೊರಡಲು ಸಿದ್ಧನಾದಾಗ, "ನೀವೇ ಹೊರಡ ಬೇಕಾದಂತಹ ಪ್ರಸಂಗವೇನು? ಇದಾವ ದೊಡ್ಡ ಕಾಳಗ?" ಎಂದು ಕಂಸನು ಅವನನ್ನು ನಿಲ್ಲ ಹೇಳಿ ಸೈನ್ಯ ಸಮೇತನಾಗಿ ಪೌದನ ಪುರಕ್ಕೆ ದಾಳಿಯಿಡಲು ತಾನೇ ಬಂದನು. ಈ ವೃತ್ತಾಂತವನ್ನು ಕೇಳಿ ಸಿಂಹರಥನು ಬಾಯ ತಂಬುಲ ಸೂಸುವಂತೆ ಗಹಗಹಿಸಿ ನಕ್ಕು "ಆನೆ ತಿಂಬವರಿಗೆ ಆಡು ಈಡಾದೀತೆ' ಚಕ್ರವರ್ತಿಯ ಬಲವನ್ನೆ ಒರಸಿಹಾಕಿದ ನನ್ನ ಸಿಂಹಕ್ಕೆ ಯಾವುದೂ ಮೂಲೆಯ ಈ ಬಡವರ ಸೈನ್ಯವೇನು ಒಂದು ಹಲ್ಲಿನ ತುದಿಗೂ ಸಾಲದು" ಎಂದು ಸೊಕ್ಕಿನಿಂದ ಮುಂಗಾಣದೆ ಯುದ್ಧಕ್ಕೆ ಏರಿಬಂದು ಕಂಸನ ಮೇಲೆ ತನ್ನ ಸಿಂಹವನ್ನು ಹಾಯಿಸಿದನು.

೬೫. ಕಂಸನು ಗುರಿಯಿಟ್ಟು ಬಿಟ್ಟ ಹರಿತವಾದ ಬಾಣವು ಸಿಂಹವನ್ನು ನಟ್ಟು ಪಾರಾಗಿ ಹಂಸಪಕ್ಷಿಯಂತೆ ಹಾರಿಹೋಯಿತು. ಕೋಲಿನ ಬಳಿಯ ಹಾವಿನಂತೆ ಸಿಂಹವು

೬೬. ಹೊರಳಿ ದೀರ್ಘವಾಗಿ ಮೈಚಾಚಿ, ದಂಡೆಗೊಟ್ಟ ರೀತಿಯಲ್ಲಿ ವಿಗ್ರಹದಂತೆ ಇರಲಾಗಿ, ಚಪ್ಪರಿಸಿ ಅದರ ಕೊರಳಲ್ಲಿ ನಾಲ್ಕು ಬಾಯ ಗಾಯವಾಗುವಂತೆ ತನ್ನ ಕಿತ್ತಲಗನ್ನು

೧ ನಾಕಾ (ಕ), ಸೊರ್ಕಾ (ಪ). ೨ ಬರ್ಗೆಡೋ (ಕ), ಬರ್ಗೆ ಆಡೋ (ಮ), ಬಂಗಾಡೆ ಹೋ (ಪ). ೩ + ಕಡೆಯ (ಕಾ). ೪ ಗೆ (ಕಾ) ೫ ಜ (ಪ) ೬ ಪಿಂ (ಪ). ೭ ಡೆ (ಕ, ಮ). ೮ ಮೊ (ಕಾ), ೯ ಯ್ದು (ಕಾ). ೧೦ ಧ್ರಿ (ಕ).

ಕೇಸರಿಯುಗುರ್ವೊಯ್ಲಿಂ ಪೊಸ
ವಾ[೧]ಸುಳವೇಂ ಕಂಸನಂಗದೊಳ್ ನೆಗೆದುವೊ ಕೂ
ರ್ತಾಸತ್ತು ನೆರೆದ ವೀರ
ಶ್ರೀ ಸೆಳೆದೊಂದಸಿಯ ಪಸಿಯ ಕೂರುಗು[೨]ರುಗಿ[೨]ವೋಲ್ ೬೭

ವ|| ಅಂತು ಸಿಂಹಮಂ ಸಂಹರಿಸಿ ಸಿಂಹದಿಂ ಮುನ್ನಮೆ ನೆಲದೊಳ್ ಬಿಟ್ಟಿ[೩]ರ್ದ ಸಿಂಹರಥನಂ ಮೇಗಳವಕ್ಕುಮೇಕೆ ಬಿರ್ದೆ[೪]ಯೆರ್ದು ನಿನ್ನ ಸಿಂಹದ ಪಲ್ಲನೆಣಿಸಿ ನೋಡೆಂದದಱ ಪಲ್ಗಳಂ ಕಳೆದು ತಳದೊಳಿಕ್ಕಿ ಮಂದಮತಿ[೫]ಯ ಮುಂದೆ[೫] ತಲೆಯ[೬] ಚುಂಚಂ ಪಿಡಿದು ಚರೆ[೭]ಯಕ್ಕೆ ಬಿಟ್ಟು ಗೂಂಟನೆೞೆದು ತಪ್ಪಂತೆ ತಂದು ನಿಮ್ಮ[೮] ಸಿತಗನಪ್ಪ ಸಿಂಹರಥನಿವನಪ್ಪನೆ ಬೆಸಗೊಳ್ಳಿಮೆಂದು ಬೆಸನನೊಪ್ಪಿಸಿದ್ ಕಂಸಂಗೆ ವಸುದೇವನಂಗಚಿತ್ತಮನಿತ್ತು ಸಿಂಹಮುಮಂ ಸಿಂಹರಥನುಮಂ ಬಂಡಿಯೊಳಿಕ್ಕಿಕೊಂಡೊಯ್ದು ಜರಾಸಂಧನ ಮುಂದಿಡುವುದುಂ ಮಂದಸ್ಮಿತ [೧೦]ಮುಖ[೧೦]ನಾಗಿ [೧೧]ಚಕ್ರವರ್ತಿ[೧೧] ಬೆಕ್ಕಸಂಬಟ್ಟಿತ್ತ ಬಾಯೆಂದು [೧೨]ವಸುದೇ[೧೨]ವಂಗೋರಾಸನ ಮನಿತ್ತು ಮೆಚ್ಚಿದೆಂ[೧೩] ಬೇಡಿಕೊಳ್ಳೆನೆ ವಸುದೇವಂ ದೇವ ಬಿನ್ನಪಮಿದೆನ್ನ ಬೆಸನಲ್ತೆ[೧೪]ನ್ನ ಚಟ್ಟನ ಬೆಸನೆಂದು ಕಣ್ಸನ್ನೆಯಿಂ ಕಂಸನಂ ಪೊಡೆವಡಿಸೆ

ಜಳಪಿಸಿ ಮೇಲೆ ಬಿದ್ದು ವೀರನಾದ ಕಂಸನು ಶೂದ್ರಕನಂತೆ ಸಿಂಹವನ್ನು ಇರಿದು ಕೊಂದನು.

೬೭. ಆಸತ್ತು ನೆರೆದ ವಿಜಯಲಕ್ಷ್ಮಿಯು ಕೂಟದ ರಭಸದಲ್ಲಿ ಎಳೆದ ಉಗುರಿನ ಗೀರುಗಳೊ ಏನೊ ಎಂಬಂತೆ ಕಂಸನ ಮೈಮೇಲೆ ಸಿಂಹದ ನಖಗಳಿಂದಾದ ಬಸುಳುಗಳೆದ್ದುವು.

ವ|| ಹೀಗೆ ಸಿಂಹವನ್ನು ಕೊಲ್ಲಲಾಗಿ, ಸಿಂಹಕ್ಕಿಂತ ಮೊದಲೆ ನೆಲಕ್ಕೆ ಬಿದ್ದಿದ್ದ ಸಿಂಹರಥನಿಗೆ "ನಿನ್ನ ಬಂಟತನಕ್ಕೆ ಮೇಲೆ ಇದ್ದರೇ ಆಗುತ್ತಿತ್ತು. ಕೆಳಗೇಕೆ ಬಿದ್ದೆ? ಎದ್ದು ಬಂದು ನಿನ್ನ ಸಿಂಹದ ಹಲ್ಲು ಎಣಿಸಿನೋಡು" ಎಂದು ಅದರ ಹಲ್ಲುಗಳನ್ನು ಕಿತ್ತು ಅವನ ಕೈಯಲ್ಲಿಟ್ಟು, ಮೇಯುವುದಕ್ಕೆ ಕುದುರೆಯನ್ನು ಎಳೆದು ತರುವಂತೆ ಅವನ ಮುಂದಲೆಯನ್ನು ಹಿಡಿದು ಎಳೆದುಕೊಂಡು ಬಂದು "ನಿಮ್ಮ ತುಂಟನಾದ ಸಿಂಹರಥನೆಂಬುವನು ಇವನೆ ಅಹುದೊ ಅಲ್ಲವೋ ಅವನನ್ನು ಕೇಳಿ ತಿಳಿಯಿರಿ" ಎಂದು ತನ್ನ ಕರ್ತವ್ಯವನ್ನು ನೆರವೇರಿಸಿದ ಕಂಸನಿಗೆ ವಸುದೇವನು ತನ್ನ ಮೈಮೇಲಿನ ಆಭರಣವನ್ನೆ ಮೆಚ್ಚಾಗಿ ಕೊಟ್ಟು, ಸಿಂಹವನ್ನೂ ಸಿಂಹರಥನನ್ನೂ ಬಂಡಿಯಲ್ಲಿ ಹೇರಿಕೊಂಡು ಒಯ್ದು ಜರಾಸಂಧನ ಮುಂದೆ ಇಳಿಸಿದನು. ಚಕ್ರವರ್ತಿಯು ಮುಗುಳ್ನಕ್ಕು, ವಿಸ್ಮಯದಿಂದ "ಇತ್ತ ಬಾ" ಎಂದು ವಸುದೇವನನ್ನು ತನ್ನೊಂದಿಗೆ ತನ್ನ ಪೀಠದಲ್ಲಿಯೆ ಕುಳ್ಳಿರಿಸಿಕೊಂಡು, "ಮೆಚ್ಚಿದ್ದೇನೆ, ನಿನಗೇನು ಬೇಕು ಬೇಡು" ಎನ್ನಲಾಗಿ, ವಸುದೇವನು, "ದೇವರು ಚಿತ್ತೈಸಬೇಕು, ಇದು ನನ್ನ ಕೆಲಸವಲ್ಲ. ನನ್ನ ಶಿಷ್ಯನದು" ಎಂದು ನುಡಿದು ಕಣ್ಸನ್ನೆಯಿಂದ ಕಂಸನಿಗೆ ಚಕ್ರಿಗೆ ನಮಸ್ಕಾರ ಮಾಡಿದನು.

೧ ಬಾ (ಮ). ೨ ರಿನ (ಕ, ಮ, ಪ). ೩ ರ್ದಿ (ಕ, ಮ, ಪ). ೪ ಟ್ಟೆ (ಕಾ). ೫ ಯು ಮುಂದರ (ಕಾ). ೬ ಯುಂ (ಪ). ೭ ರೈ (ಮ). ೮ ನ್ನ (ಮ). ೯ X (ಕಾ). ೧೦ X (ಕ). ೧೧ ಕ್ರಿ (ಕಾ). ೧೨ X (ಮ). ೧೩ ದಂ (ಕಾ), ೧೪ ಲ್ಲೆ (ಕಾ, ಮ).

ಪರಚಕ್ರಹರಿಗೆ ರಣಕೇ
ಸರಿಗೆನ್ನಂ ಕರ್ಚಿ ಪಾಱಲಾರ್ಪದ[1]ಟಿಸ[1] ಚ
ಟ್ಟ[2]ರದೆನಿಬರುಮೊಳ[3]ರಾನೇ
ದೊರೆಯಾನೇಗಣಿತಮವರೊಳಾನೇವಿ[4]ರಿಯೆಂ[4] ೬೮

ವ|| ಎನೆ ಕಂಸನಂ [5]ಜರಾಸಂಧಂ[5] ನೀನೆತ್ತಣ[6]ನಾರ ಮಗನೆನೆ ಕಂಸಂ ಕೆಯ್ಮುಗಿದು[7] ಕೌಶಂಬಿಯ ಕಳ್ವತ್ತಿ* ಮಂಡೋ[8]ದರಿಯ ಮಗನೆಂಬುದುಮರಸನವನ [9]ಮೇಱಿಯು ಮಿಟಿಯೆಯುಂ[9] ನೋಡಿ ನೀಡುಂ ನಿರವಿಸಿ ನಿಜಾಂತರ್ಗತದೊಳ್

ಸಿಂಗಮನಿಱಿವೀ ಸಾಹಸ
ಮೀಂಗುಲಿಗರ ಮಗನೊಳಾಗದಾ[10]ರ್ಪೊಡೆ ಪಿಡಿಗುಂ
ಮೀಂಗಳ[11]ನಾಕೃತಿಯೊಳ[12]ಮು
ತ್ತುಂಗನಿವಂ ರಾಜಪುತ್ರನಾಗಲ್ವೇಳ್ಕುಂ ೬೯

ಕಾಗೆ ಪೊರೆದನಿತಱಿಂದಂ
ಕೋಗಿಲೆ ತಾಸದಱ [13]ಪಿಳ್ಳೆ[13]ಯಕ್ಕುಮೆ ಬೇಗಂ
ನೀಗಿ[14] ನವಚೂತವನದೊ
ಳ್ಪೋಗಿರ್ಕುಂ ಕರ್ಮಘಟಿತಮಘಟಿತ ಘಟಿತಂ ೭೦

ವ|| ಎಂದು ಮಂಡೋ[15]ದರಿಯಂ ತರಿಸಲ್ಪಟ್ಟದರಸಾಳ್ಪೋಗಿ ಬೇಗಂ ಪೊಱಮಡು

೬೮. "ಶತ್ರುರಾಜ್ಯಹರನೂ, ರಣಸಿಂಹನೂ ಆದ ನಿನಗೆ ನನ್ನನ್ನು ಕಚ್ಚಿಹಾಕಬಲ್ಲ ಸಾಮರ್ಥ್ಯವುಳ್ಳ ಎಷ್ಟೋ ಶಿಷ್ಯರುಂಟು. ಅವರಲ್ಲಿ ನಾನು ಎಷ್ಟರವನು? ಯಾವಲೆಕ್ಕ? ಏನು ಹಿರಿಯ?"

ವ|| ಎಂದು ನುಡಿದ ಕಂಸನನ್ನು ನೋಡಿ ಜರಾಸಂಧನು, "ನೀನು ಎಲ್ಲಿಯವನು? ಯಾರ ಮಗನು?" ಎಂದು ಕೇಳಿದನು. ಕಂಸನು ಕೈಮುಗಿದು "ಕೌಶಂಬಿಯಲ್ಲಿರುವ ಮಂಡೋದರಿಯೆಂಬ ಈಡಿಗಿತ್ತಿಯ ಮಗನು ನಾನು" ಎಂದನು. ಚಕ್ರಿಯು ಅವನನ್ನು ತಲೆಯಿಂದ ಕಾಲ್ಬುದಿಯವರೆಗೆ ಚೆನ್ನಾಗಿ ನಿಟ್ಟಿಸಿ ನೋಡಿ ತನ್ನ ಮನಸ್ಸಿನಲ್ಲಿಯೆ ಹೀಗೆಂದುಕೊಂಡನು –

೬೯. "ಮೀನುಗಾರನ ಮಗನು ಮೀನು ಹಿಡಿದಾನಲ್ಲದೆ ಸಿಂಹವನ್ನು ಇರಿಯುವ ಸಾಹಸಿಯಾದಾನೆ? ಇವನ ಆಕೃತಿಯೂ ಭವ್ಯವಾಗಿದೆ. ಈತನು ರಾಜಪುತ್ರನೆ ಆಗಿರಬೇಕು.

೭೦. ಕಾಗೆಯ ಪೋಷಣೆಯಲ್ಲಿದ್ದ ಮಾತ್ರಕ್ಕೆ ಕೋಗಿಲೆ ಕಾಗೆ ಮರಿಯಾದೀತೆ? ಬಲಿತೊಡನೆ ಹಾರಿಹೋಗಿ ಹೊಸ ಮಾವಿನ ತೋಪಿನಲ್ಲಿ ವಾಸ ಮಾಡುವುದು. ಕರ್ಮನಿಂದಾಗುವ ಘಟನೆ ಅದ್ಭುತವಾಗಿರುತ್ತದೆ."

---

೧ ಟೆನ್ನಂ (ಕ), ಟೆಂಬ (ಪ). ೨ ಬ (ಕ), ಟ್ಟೆ (ಪ). ೩ ರಾನೇ (ಕಾ). ೪ ಕೆಯೆಂ (ಕ, ಮ), ಕೆಯಂ (ಪ). ೫ X (ಕ, ಪ). ೬ ಣ (ಕ, ಪ). ಣವ (ಮ). ೭ + ನಾನುಂ (ಮ). * ತಿ (ಕ, ಕಾ. ಪ). ೮ ದೋ (ಮ, ಪ). ೯ ನೆಱಲಿಟಿಯೆಯುಂ (ಕ), ನೆರಲಿಟಿಯೆಯಂ (ಪ), ನೆಱಮಿಟಿಯುಮಂ (ಮ). ೧೦ ರಾ (ಕ, ಪ). ೧೧ ಗ (ಕ, ಪ). ೧೨ ಳು (ಮ). ೧೩ ಪೆಳ್ಕೆ (ಕ, ಮ). ೧೪ ವಿ (ಕಾ). ೧೫ ದೋ (ಮ, ಪ).

ನಿನ್ನಂ ಚಕ್ರವರ್ತಿ ಚಕ್ಕನೆ ಪಿಡಿದು ತರವೇೞ್ದನೆನೆ ಪಿಡಿಪೆ[೧]ತ್ತ ಕಳ್ಳನಂತೆ ಕಳ್ಳವತ್ತಿಗೆ ತಳವೆಳಗಾಗಿ [೨]ವೊೞಗೆ[೨]ತ್ತಣ ಮಿೞ್ತು[೩]ಮೇನಿ[೩]ಮಿತ್ತ ಮನೆ [೪]ಸತ್ತೆನಂಜುವೆಡೆ[೪]ಯೊ[೫]ಳ್ಬೆಳ[೫]ಗಾದುದಾವ ಕಳ್ಳೆ[೬]ಯ ಬಸಿಱಿಂ[೭] ಬಂದನೆಂದಱಿಯೆನೆನ್ನ ಬಸಿಱೊಳ್ ಕಿರ್ಚಂ ತಗುಳ್ಚಿದನಟ್ಟಿ ಕಳೆದೊಡಂ ಬೆನ್ನಟ್ಟಿದಪಂ ಮುನ್ನಿನ ಭವದ ಪಗೆಯೊಂದು ಮಂಡೋ[೮]ದರಿ ಮಂದಸಂ ಪೊತ್ತು ತಂದು ಜರಾಸಂಧನ ಮುಂದೀಡಾಡಿ ಬಿಟ್ಟ ತಲೆಯುಂ ಬೆಮರ್ತ ಮೆಯ್ಯುಂ ಬೆಳ್ಮೊಗಮುಂ ಬೆರಸು ಕಾವುದು ದೇವಾಯೆಂದು ಪುಲ್ಗರ್ಚಿ [೯]ಪುಯ್ಯಲ್ಚಿ[೯] ಮೆಯ್ಯನಿಕ್ಕಿ

ಸೊಂದಿಯ[೧೦]ವನೆನ್ನ ಮಗನ
ಲ್ಲಂ ದೇವರ ಪಾದದಾಣೆ ಬಿನ್ನಪಮಾ ಕಾ
ಳಿಂದಿಯೊಳಿರ್ದೀ ಕಂಚಿನ
ಮಂದಸಿನೊಳ್ ಪುಟ್ಟಿ ಕಂಸವೆಸರಂ ಪಡೆದಂ ೭೧

ವ॥ [೧೧]ಈ ಮಂದಸಿನೊಳಗಣ ತಾಯಿ[೧೨] ಕಲ್ಗಳೀ ಕೊಲೆಯೊಡವುಟ್ಟಿದವೆಂದು ತೀವಿ ತಂದ ಮಾಣಿಕಂಗಳಂ ಮುಂದೆ ಸರಿದು ಕೊಲ್ವಡಂ ಕಾವೊಡಂ ದೇವರ ಬಲ್ಲಿರೆಂಬುದುಮರಸಂ ದರಹಸಿತ ಮುಖನಾಗಿ ನಾಗಸಂಪಗೆಯೆಸಳಂತಿರ್ದ ಕನಕಪತ್ರಮನಲ್ಲಿ ಕಂಡು ಬೀಸುಂಬಳ್ಳಿಯು ಮಿಲ್ಲದೆ ನಿಬಿಡಮಾಗಿ ಬರೆದಿರ್ದಕ್ಕರಂಗಳನನುಮಾನಿಸಿ ತಾನೆ ನೋಡಿ

ವ॥ ಹೀಗೆಂದುಕೊಂಡು ಮಂಡೋದರಿಯನ್ನು ಕರೆತರಲು ಆಜ್ಞಾಪಿಸಲಾಗಿ, ಆ ಆಳು ಹೋಗಿ, "ಬೇಗ ಹೊರಟು, ತಟ್ಟನೆ ನಿನ್ನನ್ನು ಹಿಡಿದು ತರಬೇಕೆಂದು ಚಕ್ರವರ್ತಿಗಳ ಅಪ್ಪಣೆಯಾಗಿದೆ" ಎಂದನು. ಸಿಕ್ಕಿಬಿದ್ದ ಕಳ್ಳನಂತೆ ಆಕೆ ತಲ್ಲಣಿಸಿ, "ಇದೆಲ್ಲಿಯ ಸಾವು? ಏನು ಕಾರಣ? ಅಯ್ಯೊ ನಾನು ಸತ್ತೆನು. ಇನ್ನೇನು ಗತಿ"ಯೆಂದು ಅಂಜುತ್ತಿರುವ ಹೊತ್ತಿಗೆ ಬೆಳಗಾಗಿ ಹೋಯಿತು. "ಯಾವ ಕಳ್ಳಿಯ ಬಸಿರಿಂದ ಬಂದನೋ ಏನೊ! ನನ್ನ ಬಸಿರಿಗೆ ಕಿಚ್ಚಿಟ್ಟನು. ಹೊಡೆದು ಓಡಿಸಿದ್ದರೂ ಮತ್ತೆ ಬೆನ್ನಟ್ಟಿಕಾಡುವ ಇವನು ನನ್ನ ಪೂರ್ವಜನ್ಮದ ವೈರಿಯೆ ಸರಿ" ಎಂದು ಮಂಡೋದರಿ ಒಂದು ಪೆಟ್ಟಿಗೆಯನ್ನು ಹೊತ್ತು ತಂದು ಜರಾಸಂಧನ ಮುಂದೆ ಇಟ್ಟಳು. ತಲೆ ಕೆದರಿ, ಮೈಬೆವತು, ಮುಖ ಬಿಳುಪೇರಿ "ದೇವರೇ ನನ್ನನ್ನು ಕಾಪಾಡಿ" ಎಂದು ಹುಲ್ಲು ಕಚ್ಚಿ, ಮೊರೆಯಿಟ್ಟು ಅಡ್ಡಬಿದ್ದು -

೭೧. "ಈ ತುಂಟನು ತನ್ನ ಮಗನಲ್ಲ, ನಿಮ್ಮ ಪಾದದಾಣೆಯಾಗಿಯೂ ಇದು ಸತ್ಯ. ಚಿತ್ತೈಸಿ ಯಮುನಾನದಿಯಲ್ಲಿದ್ದ ಈ ಕಂಚಿನ ಪೆಟ್ಟಿಗೆಯಲ್ಲಿ ದೊರೆತುದರಿಂದ ಕಂಸನೆಂದು ಇವನಿಗೆ ಹೆಸರಾಯಿತು.

ವ॥ ಪೆಟ್ಟಿಗೆಯೊಳಗಿನ ಈ ರತ್ನಗಳೂ ಈ ಕೊಲೆ ಪಾತಕನ ಜೊತೆಗೇ ದೊರೆತುವು" ಎಂದು ತುಂಬಿಕೊಂಡು ಬಂದ ಮಾಣಿಕಗಳನ್ನು ಮುಂದೆ ಸುರಿದು, "ನನ್ನನ್ನು ಕೊಲ್ಲುವುದು ಕಾಪಾಡುವುದು ತಮ್ಮ ಚಿತ್ತಕ್ಕೆ ಸೇರಿದ್ದು" ಎಂದು ನುಡಿದಳು. ಅರಸನು ಮುಗುಳ್ನಗುತ್ತ ನಾಗಸಂಪಗೆಯ ಎಸಳಂತಿದ್ದ ಚಿನ್ನದ ಫಲಕವೊಂದನ್ನು ಅದರಲ್ಲಿ ಕಂಡು, ನಡುವೆ ಜಾಗ

---

೧ ವೆ (ಪ). ೨ ವೊಲಿದೆ (ಕ, ಮ). ಒಲಿದುದೆ (ಪ), ೩ ಮೇನನಿ (ಮ), ವೇನಿ (ಪ). ೪ ಸತ್ತೆವೆನಂಜವೆಡೆ (ಕ), ಸತ್ತವೆನಂಜವೆಡೆ (ಪ), ಸತ್ತೆನಂಜವೆಡೆ (ಮ). ೫ ಳ್ಬಳೆ (ಕ, ಪ). ೬ ಟ್ರಿ (ಪ), ೭ ಱಿಂ (ಕ, ಕಾ). ೮ ದೋ (ಕಾ, ಮ, ಪ). ೯ X (ಕ, ಪ). ೧೦ ಯಿ (ಕಾ, ಮ). ೧೧ + ಎಂದು (ಕಾ). ೧೨. ಯ (ಕ, ಪ).

ಉಗ್ರಧೀರುಗ್ರಸೇನಾಂಕಾನ್ಮ[1]ಧುರಾನ್ಮ[2]ಧುರೇಶಿತುಃ
ಪದ್ಮಾ[3]ವತ್ಯಾಮ[4]ಭೂಚ್ಚಂ[5]ದ್ರಾದು[6]ತ್ಪಾಯಃ[7] ಕಾಮವಹ್ನಿವತ್ ೨೨

ದುರ್ಮುಹೂರ್ತ ಪ್ರಭೂತ[8]ತ್ವಾದೇಶ[9]ದೋಷಗು[10]ಣೇಕ್ಷಣಾಃ
ಮಂಜೂಷಾಯಾಂ ವಿನಿಕ್ಷಿಪ್ಯ ಯಮುನಾಯಾಂ ವಿಸರ್ಜಿತಃ ೨೩

ವ|| ಎಂದು [11]ಬಾಜಿಸಿ[11] ಭಾಗಿನೇಯನಪ್ಪುದನ[12]ಱಿದು ಸಂತೋಷದಂತನೆಯ್ದಿ ಬೇಡಿದ ಕಾಡೊಳೆ ಮೞೆಕೊಂಡುದೆಳಕುಟೆಗೊಳ್ವಂ[13]ಗೆರಂ[13]ಗೊಟ್ಟಂತಾಯ್ತು *ಕವರು [14]ಕತ್ತಿಗೆ[14] ಕಡಿತಂ ಬಂದಂತಾಯ್ತು* ಪ್ರದ್ಯೋತಂಗೆ ಪದ್ಮಿನಿಯಂ ಪಣಿದಂಬೊಯ್ದಂತಾಯ್ತು ಈ[15] [16]ಮುಹೂರ್ತಮೆ ಶುಭ[16]ಮುಹೂರ್ತ[17]ಮೆಂದು[17] ಮಂಡೋದರಿ ಬೆಕ್ಕಸಂ[18] ಬೆಱಗಾಗಿ ನೋಡುತ್ತುಮಿರೆ

ನಿಸದಂ ನೀನೆನ್ನ ಕೂಸಿಂಗೊಡೆಯನೆಯೆನಗಿನ್ನುಂಟೆ ತೇಜಂ ಭವತ್ಸಾ
ಹಸ ಸಿಂಹಕ್ರೀಡೆಗಂ ಪಂಗಿ[19]ಗನೆನಱಿದಿರೆಂದುತ್ಸವಾತೋದ್ಯಗೀತಾ
ನುಸರಂ ಟಂಕಾರಮಂ ಮುಂದಿಡೆ ಮದನಧ[20]ನುರ್ಮಂಜರೀಜೀವೆ ಜೀವಂ
ಜಸೆಯಂ ಕಂಸಂಗೆ ಕೊಟ್ಟಂ ಜಸಮೆಸೆಯೆ ಜರಾಸಂಧನಾನಂದದಿಂದಂ ೨೪

ಬಿಡದೆಯೂ ಸಾಲಾಗದೆಯೂ ಸಾಂದ್ರವಾಗಿ ಬರೆದಿದ್ದ ಅಕ್ಷರಗಳನ್ನು ಅನುಮಾನಿಸಿ ತಾನೇ ನೋಡಿ -

೨೨. "ಬುದ್ಧಿವಂತನಾದ ಹಾಗೂ ಮೃದುಸ್ವಭಾವದ ಉಗ್ರಸೇನನಿಗೆ ಪದ್ಮಾವತಿಯಲ್ಲಿ ಈತನು, ಚಂದ್ರನಿಂದ ಕಾಮಾಗ್ನಿ ಹುಟ್ಟಿದಂತೆ ಹುಟ್ಟಿದನು.

೨೩. ಕೆಟ್ಟ ಮುಹೂರ್ತದಲ್ಲಿ ಜನಿಸಿದ್ದರಿಂದಲೂ, ಭವಿಷ್ಯವಾಣಿಯಲ್ಲಿ ತಿಳಿದು ಬಂದ ದೋಷನಿಮಿತ್ತವಾಗಿಯೂ ಈತನನ್ನು ಯಮುನಾನದಿಯಲ್ಲಿ ಬಿಡಲಾಯಿತು."

ವ|| ಎಂದು ಓದಿಕೊಂಡು ತನಗೆ ಈತನು ಸೋದರಳಿಯನೆಂದು ಅರಿತು ಅತ್ಯಂತ ಸಂತುಷ್ಟನಾಗಿ ಬೇಡಿದ ನೆಲದ ಮೇಲೆಯೆ ಮಳೆ ಸುರಿಯಿತು. ಎಳೆದುಕೊಳ್ಳುವನಿಗೆ ಕರೆದು ದಾನಮಾಡಿದಂತಾಯಿತು. ದೋಚಿಕೊಳ್ಳುವವನಿಗೆ ಉಂಬಳಿ ಹಾಕಿ ಕೊಟ್ಟಂತಾಯಿತು. ಸೂರ್ಯನಿಗೆ ಪದ್ಮಿನಿಯನ್ನು ಒಪ್ಪಿಸಿದಂತಾಯಿತು. ಈ ಮುಹೂರ್ತವೇ ಶುಭಮುಹೂರ್ತವೆಂದುಕೊಂಡನು. ಮಂಡೋದರಿ ನಿಬ್ಬೆರಗಾಗಿ ನೋಡುತ್ತಿರುವಂತೆಯೆ -

೨೪. "ನಿಃಸಂಶಯವಾಗಿ ನೀನು ನನ್ನ ಮಗಳಿಗೆ ಒಡೆಯನಾದೆ. ಇದಕ್ಕಿಂತ ಹೆಚ್ಚಿನ ತೇಜ ನನಗೆ ಇನ್ನುಂಟೆ? ಸಿಂಹದೊಡನೆ ಹೋರಾಡಿ ಗೆದ್ದ ನಿನ್ನ ಸಾಹಸಕ್ಕೆ ನಾನು ಋಣಿಯಾಗಿದ್ದೇನೆ." ಎಂದು ಮಂಗಳವಾದ್ಯೋತ್ಸವದೊಂದಿಗೆ ಜರಾಸಂಧನು ಮನ್ಮಥನ ಧನುಸ್ಸಿಗೆ ಸಂಜೀವನೆಯಾದ ಜೀವಂಜಸೆಯನ್ನು ಕಂಸನಿಗೆ ಧಾರೆಯೆರೆದುಕೊಟ್ಟನು.

---

೧ ಮ (ಕಾ). ೨ ನಾಮ (ಕಾ). ೩ ದ್ಮ (ಕಾ, ಮ). ೪ ಯ (ಕಾ). ೫ ಶ್ಚಂ (ಕಾ, ಕ). ೬ ರು (ಮ). ೭ ಯಾ (ಕಾ, ಮ). ೮ ತಾ (ಕ). ೯ ಷ (ಕ, ಕಾ, ಪ). ೧೦ ಷಾರು (ಕಾ, ಮ). ೧೧ ವಾಚಿಸಿ (ಪ). ೧೨ ಱಿಂದ (ಮ). ೧೩ ತೆಗೆರ (ಕಾ), ಗೆಱಂ (ಪ). ೧೪ ವರಿ (ಮ). * ಕಾ ಪ್ರತಿಯಲ್ಲಿ ಇಲ್ಲ. ೧೫ X (ಕ, ಪ). ೧೬ X (ಕಾ). ೧೭ ಮೆಂಬುದು (ಮ). ೧೮ + ಮಾಡಿ (ಕಾ). ೧೯ ನ್ನಿ (ಕ). ೨೦ ಜ (ಮ).

ವ॥ ಅದಂ ಕಂಡು ಗಲ್ಲದೊಳ್ಕೆಯ್ಯನಿಟ್ಟು ಮರವಟ್ಟಿರ್ದ ಮಂಡೋದರಿಗುಡಲುಂ ತೊಡಲುಂ ಕೊಟ್ಟು ಕಳಿಪುವುದು[೧]ಮಟ್ಟು[೧]ಪಡದ ಮರೆ ಬೆಳೆ[೨]ಗೆಯ್ಗಂಡಂತೆ ಬಟಿ[೩]ನೆಂದು ಕಳ್ಳಳತ್ತಿಗೆ ಚಿತ್ತವಡೆದು [೪]ಹೋದಳಿತ್ತ[೪] ನಿನ್ನ ಮೆಚ್ಚಿದ ನಾಡಂ ಬೇಡಿಕೊಳ್ಳೆನೆ ಕಂ[೫]ಸಂ ತ[೫]ನಗೆ ತನ[೬]ಯ ಪ್ರಿಯನಪ್ಪ[೭] ತಂದೆಯ ನಾಡನೆ ದಯೆಗೆಯ್ವುದೆನೆ[೮] ಕಂಸನ ಕೋಪನಕೋಪ ಗ[೯]ರ್ಭಗರ್ಭೋದೀರಿತ ಮನವಧಾರಿಸಿ ಧರಣೀಪತಿ ತನ್ನಂತರ್ಗತದೊಳ್

ವಿಸಮನುಗುಟ್ದಿಪ್ಪನೀ ಸಾ
ಹಸಿ ತಂದೆಗೆ ಕಾಣ[೧೦]ದೇನನೆನಗೀ[೧೦] ಸಂಸಾ
ರಸಮುದ್ರದೊಳಗಿದೇ ತಾ
ಮಸವೆಸಡಿಯ ಬಸಿಱನೊಡೆದು ಪುಟ್ಟವೆ ಮರಿಗಳ್ ೭೫

ಎನಿತು ಮುನಿ[೧೧]ದಳುರ್ದೊಡಂ ನೀ
ರನಿಧಿಯೊಳೊಗೆದಗ್ನಿ [೧೨]ವಾರ್ಧಿಯಂ[೧೨] ತವೆ ಸುಡದಂ
ತೆನಿತು ತನೂಜಂ ತಂದೆಗೆ
ಮುನಿದೊಡಮಟಿವಂತು ಪೊಲ್ಲ ಕೆಯ್ಗುಮೆ ಪಿರಿದುಂ ೭೬

ವ॥ ಬಿಸಿನೀರ್ಮನೆಯಂ ಸುಡುಗಮೆ ಕು[೧೩]ಡುವೆನೆಂದು ಕೊಟ್ಟು ಕಳಿಪೆ ಕಂಸಂ ಜರಾಸಂಧ ಚಕ್ರವರ್ತಿ[೧೪]ಪೇಟ್ದು[೧೪] ಚತುರಕ್ಷೌಹಿಣೀ ಬಲಂಬೆರಸು ವಸುದೇವಸಹಿ[೧೫]ತಮೆ[೧೫]ತ್ತಿ ಪೋಗಿ ಮಧುರಾಪುರಮಂ [೧೬]ಮಹೀನೂಪುರ ಮಂ[೧೭] ಕೊಳ್ವಂತೆ ಲೀಲಾಮಾತ್ರದಿಂ ಕೊಂಡು

ವ॥ ಅದನ್ನು ಕಂಡು ಗಲ್ಲದಲ್ಲಿ ಕೈಯಿಟ್ಟುಕೊಂಡು ಮರಗಟ್ಟಿದಂತಿದ್ದ ಮಂಡೋದರಿಗೆ ವಸ್ತ್ರಾಭರಣಗಳನ್ನು ಕೊಟ್ಟು ಕಳಿಸಲಾಗಿ, ಉಪವಾಸವಿದ್ದ ಜಿಂಕೆ ಬೆಳೆದ ಹೊಲವನ್ನು ಕಂಡಂತೆ ಬದುಕಿದೆನೆಂದು ಆ ಈಡಿಗರ ಹೆಂಗಸು ಸಂತೋಷದಿಂದ ಹೊರಟು ಹೋದಳು. ಇತ್ತ ನಿನಗೆ ಇಷ್ಟವಾದ ನಾಡನ್ನು ಬೇಡಿಕೋ ಎಂದಾಗ ಕಂಸನು "ಪುತ್ರಪ್ರಿಯನಾದ ನನ್ನ ತಂದೆಯ ನಾಡನ್ನೆ ದಯಪಾಲಿಸಿ" ಎಂದನು. ಕಂಸನ ಅಂತರಾಳದಲ್ಲಡಗಿರುವ ಜನ್ಮಸ್ಥ ಕೋಪವನ್ನು ಭಾವಿಸಿ, ಜರಾಸಂಧನು ತನ್ನ ಮನಸ್ಸಿನಲ್ಲಿಯೆ ಹೀಗೆಂದುಕೊಂಡನು -

೭೫. "ಈ ಸಾಹಸಿ ತಂದೆಯೆಂದರೆ ವಿಷಕಾರುತ್ತಾನೆ. ಸಂಸಾರಸಮುದ್ರದಲ್ಲಿ ಇದೇ ತಾಮಸ ನನಗೆ ಕಾಣದೆ? ಏಡಿಯ ಹೊಟ್ಟೆಯನ್ನು ಸೀಳಿಕೊಂಡೇ ಮರಿಗಳು ಹುಟ್ಟುವವಲ್ಲವೆ?

೭೬. ಎಷ್ಟೊಂದು ರೋಷದಿಂದ ಭುಗಿಲೆದ್ದರೂ ಕಡಲಲ್ಲಿ ಹುಟ್ಟಿದ ವಡವಾಗ್ನಿ ಕಡಲನ್ನೇನು ಪೂರ್ತಿ ಸುಡಲಾರದು. ತಂದೆಯ ಮೇಲೆ ಎಷ್ಟೇ ಕೋಪಗೊಂಡರೂ ಮಗನಾದವನು. ಅವನನ್ನು ಕೊಲ್ಲುವಂತಹ ನೀಚಸಾಹಸಕ್ಕಿಳಿದಾನೆ?

ವ॥ ಬಿಸಿನೀರೇನು ಮನೆಯನ್ನು ಸುಡುವುದೆ? ಎಂದು ಆಲೋಚಿಸಿ ಕೊಡುವುದನ್ನು ಕೊಟ್ಟು ಕಳಿಸಲಾಗಿ, ಕಂಸನು ಜರಾಸಂಧನು ಒದಗಿಸಿದ ನಾಲ್ಕು ಅಕ್ಷೌಹಿಣಿ ಸೈನ್ಯದೊಂದಿಗೆ

---

೧ ದುಂ (ಪ). ೨ ಳ (ಕಾ). ೩ ಳ್ದೆ (ಕಾ). ೪ ಹೇೞೆ (ಕ, ಕಾ, ಪ). ೫ ಸನೆ (ಕಾ) ೬ ನ್ನ (ಮ). ೭ + ತನ್ನ (ಮ). ೮ + ಜರಾಸಂಧಂ (ಮ). ೯ ಯಿ (ಕಾ). ೧೦ ದೇವನೆನಸುಂ (ಮ), ದೇನನೇನಂ (ಪ), ರೇನನೆನ್ನಂ (ಕಾ) ೧೧ ಳಿ (ಕಾ). ೧೨ ಯುಂ (ಕಾ). ೧೩ ಕೆ (ಕ). ಕೊ (ಪ). ೧೪ + ಗೆ (ಮ). ೧೫ ಟ್ಟಿ (ಮ). ೧೬ ತಂ ದಂಡೆ (ಮ). ೧೭ X (ಕಾ).

ಅರಣಿಯನುರಿಪುವ ವೈಶ್ವಾ
ನರನಂ[೧]ತಿರೆ[೧] ಮನಮನಿಸುವ ಮನಸಿಜ[೨]ನೆಂತಂ[೨]
ತಿರೆ ಪಿಡಿದು ಕಟ್ಟಿ ಕಂಸಾ
ಸುರನಿಕ್ಕಿದನಕಟ ಜನಕನಂ ಸಂಕಲೆಯೊಳ್ ೭೭

ವ॥ ಅಂತು ಪುಳ್ಳಿಳೆ ಪಾಲಂ ಕಿ[೩]ಡಿಸುವಂತುಗ್ರಸೇನನಂ ಕಿಡಿಸಿ ಮಧುರಾಪುರದ[೪] ಗೋಪುರದ್ವಾರದೊಳ್[೫] ಸಂಕಲೆಯೊಳ್ ಸೆಱೆ[೬]ಗೆ[೬]ಯ್ದುದೆ[೬] ಸಂಸಾರ ಶರೀರಭೋಗ ನಿರ್ವೇಗಕ್ಕೆ ಕಾರಣಮಾಗೆ [೭]ಯೌವರಾಜ್ಯ[೭]ಲಕ್ಷ್ಮಿಯನುಟಿದತಿ[೮] ಮುಕ್ತಕಂ[೯] ತಪಃಸಾಮ್ರಾಜ್ಯ ಲಕ್ಷ್ಮೀಸಂಭೋಗಶೃಂಗಾರ ಪಯಃಪಯೋನಿ[೧೦]ಧಿ ನಿರ್ಮಗ್ನ [೧೧]ಮನಃ[೧೨]ಸರೋಜನಾಗೆ ಕಂಸಂ ವಸುದೇವನಂ ಬರಿಸಿ ಸಿಂಹಾಸನಾಳಂಕೃತನಂ ಮಾಡಿ ಸಾಷ್ಟಾಂಗಪ್ರ[ಣ[೧೩]]ತನಾಗಿ ನಿಟಿಳತಟ[೧೪]ಘಟಿತ ಕರ ಕುಶೇಶಯ ಕುಟ್ಮಳನಿಂತೆಂದು ಬಿನ್ನವಿಸೆ

ಹರಿವಂಶಂ ಹರಿವಂಶದಂತತುಳ ಭೋಗಖ್ಯಾತಮಾಯ್ತುರ್ವರಾ
ಧರದಂತೆಸ್ಥಿರಮಾಯ್ತು ಶಾಸ್ತ್ರಮಯಮಾಯ್ತಾನರ್ತಮೆಂಬಂತೆ ಪು
ಷ್ಕರಿಯಂತಾ[೧೫]ಯತ[೧೫]ದಾನಮಾಯ್ತುದಧಿಯಂ[೧೬]ತುದ್ಯ[೧೬]ತ್ಸುಧಾಧಾಮಮಾ
ಯ್ತರವಿಂದಾಕರದಂತೆ ಲಕ್ಷ್ಮಿಗಿರಲಾಯ್ತೋ[೧೭] ನಿಮ್ಮ ಕಾರುಣ್ಯದಿಂ ೭೮

ವಸುದೇವಸಹಿತನಾಗಿ ಎತ್ತಿಹೋಗಿ ಮಧುರಾಪುರವನ್ನು ಲೀಲಾಜಾಲವಾಗಿ ವಶಪಡಿಸಿ ಕೊಂಡ.

೭೭. ತನ್ನನ್ನು ಹುಟ್ಟಿಸಿದ ಅರಣಿಯನ್ನೆ ಸುಡುವ ಅಗ್ನಿಯಂತೆ, ತನ್ನ ಜನ್ಮಸ್ಥಳವಾದ ಮನಸ್ಸನ್ನೆ ಇರಿಯುವ ಮನ್ಮಥನಂತೆ ಕಂಸನೆಂಬ ರಾಕ್ಷಸನು ತನ್ನ ತಂದೆಯನ್ನು ಹಿಡಿದು ಕಟ್ಟಿ ಸಂಕೋಲೆ ತೊಡಿಸಿದನು.

ವ॥ ಹುಳಿ ಮಜ್ಜಿಗೆ ಹಾಲನ್ನು ಕೆಡಿಸುವಂತೆ ಉಗ್ರಸೇನನ್ನನ್ನು ನೆಲೆಗೆಡಿಸಿ ಮಧುರಾಪುರದ ಗೋಪಾರದ್ವಾರದಲ್ಲಿ ಸೆರೆಯಿಟ್ಟನು. ಅದನ್ನು ಕಂಡು ಅದೇ ವೈರಾಗ್ಯಕ್ಕೆ ಕಾರಣವಾಗಲಾಗಿ ಅತಿಮುಕ್ತದೇವನು ಯುವರಾಜಪದವಿಯನ್ನು ತೊರೆದು, ತಪಸ್ಸಿನಲ್ಲಿ ನಿರತನಾದನು. ಕಂಸನು ವಸುದೇವನನನು ಕರೆತಂದು ಸಿಂಹಾಸನದಲ್ಲಿ ಕುಳ್ಳಿರಿಸಿ, ಸಾಷ್ಟಾಂಗವೆರಗಿ, ಹಣೆಗೆ ಕೈಜೋಡಿಸಿ ಮುಗಿದು ಹೀಗೆಂದು ಬಿನ್ನವಿಸಿದನು -

೭೮. "ನಿಮ್ಮ ಅನುಗ್ರಹದಿಂದ ನಮ್ಮ ಹರಿವಂಶವು ನಾಗವಂಶದಂತೆ ಅಸದೃಶವಾದ 'ಭೋಗ' (೧. ಸುಖಸಂಪತ್ತು ೨. ಹಾವಿನ ಹೆಡೆ)ಗಳಿಂದ ಕೂಡಿ ವಿಖ್ಯಾತವಾಯಿತು; ಪರ್ವತದಂತೆ ಸ್ಥಿರವಾಯಿತು; ನೃತ್ಯಮಂದಿರದಂತೆ ಶಾಸ್ತ್ರ ಸಮನ್ವಿತ (೧. ನೀತಿ ಶಾಸ್ತ್ರಕ್ಕೆ ಅನುಸಾರವಾದುದು ೨. ನೃತ್ಯಶಾಸ್ತ್ರವನ್ನೊಳಗೊಂಡುದು)ವಾಯಿತು; ಆನೆಯಂತೆ ಹೇರಳವಾದ ದಾನ" (೧. ದತ್ತಿ ೨. ಮದೋದಕ)ವನ್ನು ನೀಡುವುದಾಯಿತು; ಸಮುದ್ರದಂತೆ

---

೧ ತೆನೆ (ಕ). ೨ ನಂತಿ (ಕ, ಪ). ೩ ಕೆ (ಕಾ, ಮ). ೪ X (ಕ, ಪ). ೫ + ಶೃಂಖಲಾ (ಕಾ, ಮ). ೬ ಯ್ದಂದೆ (ಮ). ಯ್ಯೆ (ಕಾ). ೭ ಯುವರಾಜ್ಯ (ಕ, ಮ), ಯುವರಾಜ (ಪ). ೮ ದಯತಿ (ಕ), ದುಯತಿ (ಮ, ಪ). ೯ ರುಂ (ಕಾ). ೧೦ X (ಕಾ). ೧೧ ರ್ಮ (ಕಾ. ಮ). ೧೨ X (ಕ, ಪ). ೧೩ ಣು (ಕ, ಕಾ, ಮ). ೧೪ + ವಿ (ಕ, ಪ). ೧೫ ಯಿತು (ಮ). ೧೬ ತದ್ಯು (ಕಾ). ೧೭ ಯ್ತೋ (ಕ).

ಆನೆತ್ತ[೧]ರ್ಕಸುತಾ[೨]ಪ್ರವಾಹಭರಮೆತ್ತಲ್ಲಿರ್ದ ಮಂಜೂಷಮೆ
ತ್ತಾ ನೀಚಾಶ್ರಯಮೆತ್ತ ನಿಮ್ಮ ಬರವೆತ್ತೀ [೩]ಶಸ್ತ್ರಶಾ[೪]ಸ್ತ್ರಮಂ[೪]
ತಾನೆತ್ತಿಕ್ಕುವುದೆತ್ತ ಸಿಂಹರಥನಂ ಚ[೫]ಕ್ರಿಪ್ರಸಾ[೫]ದೋದಯಾ
ಧೀನಂ ರಾಜ್ಯಮಿದೆತ್ತ ದೇವಿ[೬]ದಿನಿ[೬]ತುಂ ಯುಷ್ಮತ್ಪ್ರಸಾದೋದಯಂ ೭೯

ಆದಱಿಂದೆನ್ನುಮನೆನ್ನ ರಾಜ್ಯಭರಮಂ ಸಪ್ತಾಂಗಮಂ ಸಸ್ಯಸಂ
ಪದಮಂ ವಾರಿದಮಂಬುಜಾತವನಮಂ ತಿಗ್ಮಾಂಶು ನೀಳೋತ್ಪಳಾ
ಸ್ಪದಮಂ ಶೀತಮರೀಚಿ ರಕ್ಷಿಸುವವೋಲ್ನೀಂ ರಕ್ಷಿಸೆಂದೆಂದು ಬೇ
ಡಿದನಾತ್ಮ[೭]ನತಮೌಲಿರತ್ನರುಚಿಗಳ್ತೞ್ಪೊಯ್ಯೆ ದಿಗ್ಭಾಗಮಂ ೮೦

ವ|| ಅಂತು ಬೇಡಿಕೊಂಡು ತನ್ನರ[೮]ಮನೆಯ ಬಲದ ಕೆಲದೊಳ್[೯]ನೇಕ ನೂತ್ನರತ್ನರಾಜಿ ರಾಜಿತ ಚಂಚತ್ಕಾಂಚನಮಯ ಮಹಾರಾಜಭವನ[೧೦]ಮಂ ಮಾಡಿಸಿಕೊಟ್ಟು ಮುನ್ನಮೆ ವಸುದೇವನ ರೂಪವಿಳಾಸಸೌಭಾಗ್ಯಭಾಗ್ಯೋದಯಮಂ ಕೇಳ್ದು ಕಿವಿವೇಟಂಗೊಂಡು ಕಾಮಕಾರ್ಮುಕ[೧೧]ನಿರ್ಮುಕ್ತ[೧೧] ಶಿಳೀಮುಖಸಹಸ್ರಸಮಾಘ್ರಾತ ಮನಃಸರೋಜಸಂಭಾವಕಿಯಾದ ದೇವಕಿಯ[೧೨] ಭಾವಮನಂತಃ ಪುರದ ಪರಿಚಾರಕಿಯರಿಂ ಕೇಳ್ದು

"ಉದ್ಯತ್ಸುಧಾಧಾಮ" (೧. ಉನ್ನತವಾದ ಸೌಧಗಳಿಂದ ತುಂಬಿದುದು ೨. ಅಮೃತವನ್ನು ಹೊಮ್ಮಿಸುವ ನೆಲೆ)ವಾಯಿತು; ಕಮಲ ಸರೋವರದಂತೆ 'ಲಕ್ಷ್ಮಿ' (೧. ಐಶ್ವರ್ಯ ೨. ಲಕ್ಷ್ಮೀದೇವಿ)ಗೆ ವಾಸಸ್ಥಾನವಾಯಿತು.

೭೯. ನಾನೆತ್ತ! ಯಮುನಾನದಿಯೆತ್ತ! ಅದರಲ್ಲಿದ್ದ ಪೆಟ್ಟಿಗೆಯೆತ್ತ! ಹೀನ ಜನರ ಆಶ್ರಯವೆತ್ತ! ನಿಮ್ಮ ಆಗಮನವೆತ್ತ! ಶಸ್ತ್ರಶಾಸ್ತ್ರಗಳ ವ್ಯಾಸಂಗವೆತ್ತ! ಸಿಂಹರಥನನ್ನು ನಾನು ಹಿಡಿದಿರುವದೆತ್ತ! ಚಕ್ರವರ್ತಿಯ ಮೆಚ್ಚಿಗೆಯಿಂದ ಬಂದ ಈ ರಾಜ್ಯವೆತ್ತ! ದೇವಾ, ಇದೆಲ್ಲವೂ ನಿನ್ನ ಅನುಗ್ರಹದಿಂದಲೆ ನನಗೆ ಒದಗಿತು.

೮೦. ಆದುದರಿಂದ ಸಸ್ಯಸಂಪತ್ತನ್ನು ಮೋಡವೂ ಕಮಲವನ್ನು ಸೂರ್ಯನೂ ಕನ್ನೈದಿಲೆಗಳನ್ನು ಚಂದ್ರನೂ ರಕ್ಷಿಸುವಂತೆ ನನ್ನನ್ನೂ ನನ್ನ ಸಪ್ತಾಂಗ ರಾಜ್ಯವನ್ನೂ ನೀನೇ ರಕ್ಷಿಸು" ಎಂದು ರತ್ನಕಿರೀಟದಿಂದೊಪ್ಪುವ ತಲೆಯನ್ನು ಬಾಗಿ ಬೇಡಿಕೊಂಡನು.

ವ|| ಹೀಗೆ ಬೇಡಿಕೊಂಡು, ತನ್ನ ಅರಮನೆಯ ಬಲಗಡೆಯ ಪಾರ್ಶ್ವದಲ್ಲಿ ಅನೇಕ ನೂತನ ರತ್ನಗಳ ಕುಂದಣದಿಂದ ಶೋಭಿಸುವ ಉಜ್ವಲವಾದ ಚಿನ್ನದ ಮಹಾರಾಜ ಭವನವನ್ನು ಮಾಡಿಸಿಕೊಟ್ಟು, ಈ ಮೊದಲೆ ವಸುದೇವನ ರೂಪವಿಲಾಸಗಳನ್ನು ಸೌಭಾಗ್ಯ ಭಾಗ್ಯೋದಯವನ್ನೂ ಕೇಳಿ ಕೇಳಿ ಮನಸೋತು, ಕಾಮ ತಾಪಕ್ಕೆ ಗುರಿಯಾಗಿದ್ದ ದೇವಕಿಯ ಭಾವವನ್ನು ಅಂತಃಪುರದ ಪರಿಚಾರಿಕೆಯರಿಂದ ತಿಳಿದು,

---

೧ ತ (ಕ). ೨ ಧಾ (ಮ). ೩ ಶಾಸ್ತ್ರಶ (ಕ, ಕಾ, ಪ). ೪ ಸ್ತ್ರಾಶ್ರಯಂ (ಮ). ೫ ಕ್ರಪ್ರಣಾ (ಕಾ). ೬ ವಿಡಿದಿ (ಕ), ವುದಿನಿ (ಪ). ೭ ತಂ (ಪ). ೮ ಯ (ಕ, ಪ). ೯ ಳುಮ (ಮ). ೧೦ + ಮು (ಕ, ಪ). ೧೧ X (ಕಾ). ೧೨ + ಹಾವ (ಮ).

ಭೂವರ ವಸುದೇವಂಗೆ ಮ
ಹೀವಿಶ್ರುತ ಕಂಸರಾಜನಿತ್ತಂ ಬುಧಸಂ
ಭಾವಕಿಯಂ [೧]ಮನ್ಮಥ[೧]ಸಂ
ಜೀವಕಿಯಂ ವಿಹಿತ ವಿಭವದಿಂ ದೇವಕಿಯಂ ೮೧

ಸರಸಿಜಸಂಭವಂ ಕುಸುಮಸಾಯಕನಾಗಿ ಸುಧಾಂಶುಚಂದನಂ
ಸರಸಿಜಮುತ್ಪಳಂ ಸರಸಿ ಚಂದ್ರಿಕೆ ಮಾಳತಿ ಚಂದ್ರಕಾಂತ ಬಂ
ಧುರ ಪರಮಾಣುವೆಂಬಿವಜೆನಾತ್ಮಮನಃಸುಕುಮಾರಹಸ್ತದಿಂ
ವಿರಚಿಸಿದಂ ನಿಜೇಶಮುಖ ಸೌ[ರ[೨]]ಭ ಭೃಂಗಿಯನಾ ಲತಾಂಗಿಯಂ ೮೨

ವ॥ ಮತ್ತಮಾ ಮನೋಜರಾಜಯೌವನ ವನವಸಂತಲಕ್ಷ್ಮಿಯ ಚರಣ ಪಲ್ಲವಾರುಣಿತ ನಖಮಯೂಖಮಣಿಮಾಲಾಮಂಜರಿಯಾ ರಾಜ[೩]ಶೇಖರ[೩]ರತ್ನನ [೪]ಚೂಡಾಮಣಿಗೆ[೪] ಚೂಡಾಮಣಿಯಾಗೆಯುಮಾ ರತಿಪತಿಕೃತಕಗಿರಿಸಾನು ಕಲ್ಪಲತೆಯ ಜಾನುಕಲ್ಪಲತೆಯಾ ಹರಿವಂಶಪಾರಿಜಾತನ ಪಾರಿಜಾತಶಾಖಾನುಕಾರಿಜಾನುಶಾಖಾದ್ವಯಮನಾವೇಷ್ಟಿಸೆಯುಮಾ ಮನ್ಮಥ[೫]ಮಹಾ[೫]ರಾಜ[೬] ರಾಜ[೬]ಭವನ[೭]ಮೂಲ[೭]ಸ್ತಂಭಪಾಂಚಾಳಿಕೆಯ ರಂಭಾಸ್ತಂಭಾನುಕಾರಿಯಾದೂರು[೮]ಶಾಖೆ[೮]ಯಾ [೯]ಯದು[೯]ಕುಮಾರಕುಂಜರನ ಮನಃಕುಂಜರಾ[೧೦]ಲಾನಸ್ತಂಭಮಾಗೆಯುಮಾ ಕಂತುಕೇಳೀತರಂಗಿಣೀ[೧೧]ಪುಳಿನಸ್ಥಳಿಯ ನಿತಂಬ[೧೧]ಪುಳಿನಸ್ಥಳ ಮಹಾರಾಜ ರಾಜಹಂಸನ ಲೀಲಾರಾಜಹಂಸೀವಿನೋದಕ್ಕೆ ಪುಳಿನಸ್ಥಳಮಾಗೆಯುಮಾ ಕಾಮಕಾರ್ಮುಕಾಯಮಾನ ಭ್ರೂಲೇಖೆಯ[೧೨] ಮುಷ್ಟಿಗ್ರಾಹ್ಯ ಮಧ್ಯಮಾ[೧೩] ಧನುರ್ವಿದ್ಯಾವಿಶಾರದ ಪ್ರತ್ಯಾದೇಶನ ಕೋದಂಡಮಧ್ಯಪ್ರದೇಶಮಾಗೆಯುಮಾ ಕುಸುಮಾಯುಧ ಕುಂಭಿಲೀಲಾಕುಂಭಿನಿಯ ಕುಚಕುಂಭಮಾ ರಾಜನ್ಯ[೧೪] ಮೂರ್ಧಾಭಿ[೧೫]ಷಿಕ್ತ[೧೫]ನ ಸಾಮ್ರಾಜ್ಯಾಭಿಷೇಕ ಶಾತಕುಂಭಕುಂಭಮಾಗೆಯುಮಾ ಶೃಂಗಾರಸಂಭವ ಶರಚ್ಚಂದ್ರ ಚಂದ್ರಿಕೆಯ ಮುಖಚಂದ್ರನಾ ಹರಿವಂಶ

೮೧. ವಿದ್ವಾಂಸರನ್ನು ಗೌರವಿಸುವವಳೂ ಮನ್ಮಥನಿಗೆ ಸಂಜೀವನವೆನಿಸುವವಳೂ ಆದ ದೇವಕಿಯನ್ನು ವೈಭವದಿಂದ ವಸುದೇವನಿಗೆ ಧಾರೆಯೆರೆದನು.

೮೨. ತನ್ನ ಪತಿಯ ಮುಖಕಮಲಕ್ಕೆ ಭೃಂಗಿಯಾದ ಆ ಲತಾಕೋಮಲೆಯನ್ನು ಬ್ರಹ್ಮನೇ ಮನ್ಮಥನಾಗಿ ನಿಂತು, ಅಮೃತಕಿರಣ ಚಂದನ, ತಾವರೆ, ಉತ್ಪಲ, ಸರೋವರ, ಬೆಳ್ದಿಂಗಳು, ಮಾಲತಿ, ಚಂದ್ರಕಾಂತದ ಮನೋಹರವಾದ ಪರಮಾಣುಗಳು - ಎಂಬಿವುಗಳಿಂದಲೆ ತನ್ನ ಅಂತರಂಗವೆಂಬ ಕೋಮಲ ಹಸ್ತದಿಂದ ನಿರ್ಮಿಸಿದ್ದನು.

ವ॥ ಆ ಮನ್ಮಥರಾಜನ ಯೌವನಕ್ಕೆ ವಸಂತಲಕ್ಷ್ಮಿಯಂತಿದ್ದ ಆಕೆಯ ತಳಿರಡಿಯಿಂದ ಕೆಂಪಡರಿದ ಉಗುರಿನ ಕಾಂತಿಗಳೆಂಬ ರತ್ನಮಾಲಾಮಂಜರಿಯು ಆ ರಾಜಶೇಖರನ ಚೂಡಾಮಣಿಗೆ ಚೂಡಾಮಣಿಯಾಗಲಾಗಿ, ಮನ್ಮಥನ ಕ್ರೀಡಶೈಲದ ಸಾನುವಿನಲ್ಲಿ ಹುಟ್ಟಿದ ಕಲ್ಪಲತೆಯಂತಿರುವ ಆ ಚೆಲುವೆಯ ಮೊಳಕಾಲೆಂಬ ಕಲ್ಪಲತೆಯು ಹರಿವಂಶಕ್ಕೆ ಪಾರಿಜಾತನಾದ ವಸುದೇವ ಕುಮಾರನ ಪಾರಿತಾಜ ಶಾಖಾಸದೃಶವಾದ ಮೊಳಕಾಲನ್ನು ಆವರಿಸಲಾಗಿ, ಮನ್ಮಥ ಮಹಾರಾಜನ ಅರಮನೆಯ ಮೂಲಸ್ತಂಭದ ಪುತ್ಥಳಿಯಾದ

---

೧ ಮನಸಿಜ (ಕಾ). ೨ ರು (ಕ, ಕಾ, ಮ). ೩ ಶಿರೋ (ಕಾ), ಶಿಖರರೋಹಣ (ಮ), ೪ X (ಕಾ). ೫ X (ಕಾ). ೬ X (ಕ, ಕಾ). ೭ ಮಾಲಾ (ಕಾ). ೮ ಶೋಭೆ (ಮ, ಪ). ೯ ದ (ಕ, ಮ, ಪ). ೧೦ ರಕಾ (ಕಾ, ಮ). ೧೧ X (ಕಾ). ೧೨ ಯು (ಕ, ಮ). ೧೩ + ದ (ಕಾ), ೧೪ X (ಪ), ನೆ (ಕ, ಮ). ೧೫ ಷೇಕ (ಕಾ).

ಚಕೋರೀಚಂದ್ರನ್[೧] ಚಂದ್ರಿಕಾವಿಹರಣಕ್ಕೆ ಸಂಪೂರ್ಣಚಂದ್ರನಾಗೆಯುಮನೂನ ಕಾಮಸಾಮ್ರಾಜ್ಯ ಸುಧಾಪಯೋನಿಧಿಯೊಳೋಲಾಡುತ್ತುಮಿರೆಯಿರೆ

ತನುಸೋಂಕಿಂ ಮಧುರಾಧರಾಮೃತದೆ ಸರ್ವಾಂಗೀಣಸೌಗಂಧದಿಂ
ಘನಲಾವಣ್ಯ ಸಮೃದ್ಧಿಯಿಂ[೨] ಪಿಕನಿನಾದಖ್ಯಾತಿಯಿಂದೀಯೆ ಕಾ
ಮಿನಿ ಪಂಚೇಂದ್ರಿಯ ಸೌಖ್ಯಮಂ ತಳೆ[೩]ದನುರ್ವೀಪಾಳಮೌಳಿಪ್ರಭಾ
ದ್ಯುನದೀದ್ಯೋತ ಪದಾಂಬುಜಂ ಪ್ರತಿದಿನಂ ಸಾಹಿತ್ಯವಿದ್ಯಾಧರಂ ೮೩

ವ॥ ಇದು ಮೃದುಪದಬಂಧ ಬಂಧುರ ಸರಸ್ವತೀ ಸೌಭಾಗ್ಯಭೃಂಗ ಭಂಗಿನೀನಿಧಾನ ದೀಪವರ್ತಿ ಚತುರ್ಭಾಷಾ ಚಕ್ರವರ್ತಿ ನೇಮಿಚಂದ್ರಕೃತಮುಂ ಶ್ರೀಮತ್ಪ್ರತಾಪ ಚಕ್ರವರ್ತಿ ಶ್ರೀ ವೀರಬಲ್ಲಾಳದೇವ ಪ್ರಸಾದಾಸಾದಿತ ಮಹಾಪ್ರಧಾನ ಪದವೀವಿರಾಜಿತ ಸೆಜ್ಜೆವಳ್ಳ ಪದ್ಮನಾಭದೇವ ಕಾರಿತಮುಮಪ್ಪ ನೇಮಿನಾಥ ಪುರಾಣದೊಳ್ ದೇವಕೀದೇವಿ ವಿವಾಹ ಮಹೋತ್ಸವಂ ಷಷ್ಠಾಶ್ವಾಸಂ

ಆಕೆಯ ಬಾಳೆದಿಂಡುಗಳಂತಹ ತೊಡೆಗಳು ಯಾದವ ಕುಮಾರರಲ್ಲಿ ಮದದಾನೆಯಂತಿರುವ ಆತನ ಮನಸ್ಸೆಂಬ ಆನೆಗೆ ಕಟ್ಟುಗಂಬವಾಗಲಾಗಿ, ಮದನನ ಲೀಲಾನದಿಯ ಮರಳು ದಿಣ್ಣೆಯಾದ ಆಕೆಯ ನಿತಂಬವೆಂಬ ಮರಳುದಿಣ್ಣೆಯು ಮಹಾರಾಜನ ರಾಜಹಂಸನಾದ ಆತನ ಲೀಲಾಹಂಸೀವಿನೋದಕ್ಕೆ ಮರಳುದಿಣ್ಣೆಯಾಗಲಾಗಿ, ಕಾಮನ ಬಿಲ್ಲಿನಂತೆ ಬಾಗಿದ ಹುಬ್ಬುಗಳುಳ್ಳ ಆಕೆಯ ಮುಷ್ಟಿ ಗ್ರಾಹ್ಯವಾದ (ಒಂದು ಮುಷ್ಟಿಯಲ್ಲಿ ಹಿಡಿಯಬಹುದಾದಷ್ಟು ತೆಳುವಾದ) ನಡುವು ಆ ಧನುರ್ವಿದ್ಯಾ ಪ್ರವೀಣರನ್ನು ಧಿಕ್ಕರಿಸುವ ಆತನ ಬಿಲ್ಲಿನ ಮಧ್ಯಪ್ರದೇಶವಾಗಲಾಗಿ, ಮನ್ಮಥನ ಮೆಚ್ಚಿನ ಹೆಣ್ಣಾನೆಯಾದ ಆಕೆಯ ಕುಚಕುಂಭಗಳು ಅಭಿಷಿಕ್ತರಾಜನಾದ ಆತನ ಸಾಮ್ರಾಜ್ಯಾಭಿಷೇಕಕ್ಕೆ ಚಿನ್ನದ ಕುಂಭಗಳಾಗಲಾಗಿ, ಶೃಂಗಾರಜನಕವಾದ ಶರತ್ಕಾಲದ ಚಂದ್ರನಂತಿದ್ದ ಆಕೆಯ ಮುಖಚಂದ್ರನು ಹರಿವಂಶದ ಚಕೋರಿಗಳಿಗೆ ಚಂದ್ರನಾದ ಆ ಕುಮಾರನ ಬೆಳ್ದಿಂಗಳ ವಿಹಾರಕ್ಕೆ ಪೂರ್ಣ ಚಂದ್ರನಾಗಲಾಗಿ ಅವರಿಬ್ಬರೂ ಸಮಗ್ರ ಕಾಮಸಾಮ್ರಾಜ್ಯದ ಅಮೃತಸಮುದ್ರದಲ್ಲಿ ಓಲಾಡುತ್ತ ಇರುವಾಗ-

೮೩. ದೇಹದ ಸ್ಪರ್ಶದಿಂದ, ಸವಿಯಾದ ಅಧರಾಮೃತದಿಂದ, ಸರ್ವಾಂಗಗಳ ಸುಗಂಧದಿಂದ ಅತಿಶಯವಾದ ಸೌಂದರ್ಯ ಸಮೃದ್ಧಿಯಿಂದ ಹಾಗೂ ಕೋಗಿಲೆಯಂತಹ ಮೃದುಧ್ವನಿಯಿಂದ ಆ ಕಾಮಿನಿ ಪಂಚೇಂದ್ರಿಯಗಳಿಗೂ ನೀಡುವ ಸೌಖ್ಯವನ್ನು ಅನುಭವಿಸುತ್ತ ಭೂಪಾಲಕರ ಕಿರೀಟ ರತ್ನಪ್ರಭೆಯಿಂದ ತನ್ನ ಪಾದಕಮಲಗಳನ್ನು ಬೆಳಗಿಸಿಕೊಳ್ಳುತ್ತ ಆ ಸಾಹಿತ್ಯ ವಿದ್ಯಾಧರ (ವಸುದೇವ)ನು ಸುಖಿಸುತ್ತಿದ್ದನು.

ಮುಗಿಯಿತು

---

೧. X (ಕಾ). ೨ ಯುಂ (ಮ). ೩ ಣೆ (ಕಾ).

ಶ್ರೀ

ಸಪ್ತಮಾಶ್ವಾಸಂ

ಶ್ರೀವೆರಸು ಬಂದು[೧] ಚಂದ್ರಮ[೨]
ನೀವಮೃತಮನೀಯೆ ತನಗೆ ಮಧುರಾಧರದಿಂ
ದೇವಕಿಯ ನಗೆಮೊಗಂ ವಸು
ದೇವಂ ದೇವಂಬೊಲಿರ್ದನಪ್ರತಿಮಲ್ಲಂ ೧

ವ॥ ಒಂದು ದಿನ ಮ[೩]ಧ್ಯಂದಿನ[೩] ಸಮಯದೊಳ್ ಮಧುರಾಪುರಕ್ಕೆ

ಬಳರಿ[೫]ಯಲ್ಬೇ[೫]ಱಿಟ್ಟಿ ಕಂಕಾಳಿಕೆ ಪೆಡತಲೆ[೬]ಯೊಳ್[೬] ಪೊಕ್ಕ ಕಣ್ಣೋರ್ಪ ಕೆಯ್ಕಾ
ಲ್ನರೆ ಪಾತಾಳಕ್ಕೆ [೭]ಪತ್ತಿ[೭]ದೊರ್ಣವಸಿಱುದುಗಿರ್ದೊಂದುರಂ ಪೂಟ್ಟಿ[೮] ಬಾಯ್ಬೇ[೯]
ಕರಿವೋದಂತಿರ್ದ[೧೦]ಬಾನ[೧೦]ಗುಳಿ [೧೧]ಗಿಡಿಗಿಡಿ[೧೧] ಜಂತ್ರಂಬೊಲಾಗಿರ್ದ ಮೆಯ್ ಮೆ
ಯ್ಸಿರಿ ಚಿದ್ರೂಪಕ್ಕೆ ಪಕ್ಕಾಗಿರೆ ಚರಿಗೆಗುಣಲ್ಬಂದನೊರ್ವಂ ಮುನೀಂದ್ರಂ ೨

[೧೨]ಬಿಸಿಲಿಂ[೧೨] ಬೆಂ[೧೩]ದಳುರ್ದೊ[೧೪]ಡಲಂ[೧೫]
ಪಸಿವೆಂಬಸಿತಾರ್ಚಿ[೧೬] ಶಾಂತರಸದಿಂ ಮಸಿಯಾ
ಯ್ತಸದಳಮೆನೆ ಮೆಯ್ಯ ಮಲಂ
[೧೭]ಮಿಸುಗಿದುದಾ[೧೭] ಮದನ[೧೮]ಕರಟ[೧೮]ಕಂಠೀರವನಾ ೩

೧. ಶೋಭಾಕರನಾದ ಚಂದ್ರನು ನೀಡುವ ಅಮೃತವನ್ನೆ ದೇವಕಿಯ ಮೊಗವು ತನ್ನ ಸವಿದುಟಿಯಿಂದ ನೀಡಲಾಗಿ ಅಪ್ರತಿಮಲ್ಲನಾದ ವಸುದೇವನು ದೇವತೆಯಂತೆ ಇದ್ದನು.

ವ॥ ಒಂದು ದಿನ ಮಧ್ಯಾಹ್ನದ ಸಮಯದಲ್ಲಿ ಮಧುರಾಪುರಕ್ಕೆ -

೨. ಪಕ್ಕೆಯಲ್ಲಿ ಬೇರೆದ್ದ ಮೂಳೆಯ ಹಂದರ, ಹೆಡೆತಲೆಯಲ್ಲಿ ಹೊಕ್ಕ ಕಣ್ಣು, ನರಗಳು ಎದ್ದು ಕಾಣುವ ಕೈಕಾಲುಗಳು, ಪಾತಾಳಕ್ಕೆ ಹತ್ತಿ ಒಣಗಿದ ಹೊಟ್ಟೆ, ಉಡುಗಿದ ಎದೆಗೂಡು, ಹೂತು ಹೋದ ಬಾಯಿ, ಸುಟ್ಟು ಕರಿಕಾದಂತಿದ್ದ ಹೊಕ್ಕುಳು, ಮುರಕಲು ಯಂತ್ರದಂತೆ ಶಿಥಿಲವಾದ ಮೈ, ಇವುಗಳಿಂದ ಕೂಡಿ ಚಿದ್ರೂಪಕ್ಕೆ ದೇಹ ಶರಣಾಗಿರಲಾಗಿ ಮುನೀಂದ್ರನೊಬ್ಬನು ಚರಿಗೆಯ ಆಹಾರಕ್ಕಾಗಿ ಬಂದನು.

೩. ಬಿಸಿಲಿಂದಲೂ ಹಸಿವೆಯಿಂದಲೂ ಮೈಗೆ ಹತಿಕೊಂಡಿದ್ದ ಉರಿ ಶಾಂತರಸದಿಂದ ಆರಿ ಮಸಿಯಾಯಯಿತೊ ಏನೊ ಎಂಬಂತೆ ಆ ಜಿತೇಂದ್ರಿಯನ ಮೈಮಲವು ಕಂಗೊಳಿಸಿತು.

---

೧ ದು (ಕಾ). ೨ ಮು (ಕಾ). ೩ ಧ್ಯಾಹ್ನ (ಕ), ಧ್ಯ ದಿನ (ಪ). ೪ ಪಿ (ಕ). ೫ ಯೊಳ್ಬೇ (ಕಾ). ೬ ಯಂ (ಕಾ). ೭ ಪೊಕ್ಕಿ (ಕ, ಮ, ಪ). ೮ ಣ್ದ (ಕ, ಮ). ೯ ಯ್ಬಂ (ಮ). ೧೦ ಬೆನ್ನಂ (ಮ). ೧೧ ಗಿಡಿಗಿಡಿ (ಕಾ). ೧೨ ಬಸಿಜೆಂ (ಕಾ). ೧೩ X (ಕ, ಸಾ. ಪ). ೧೪ + ಡೆದೊ (ಪ), ಡದೊ (ಕ). ೧೫ + ತಾಂ (ಕಾ). ೧೬ ಸತರ್ಥಿ (ಕ), ಸಿತರ್ತಿ (ಕಾ, ಮ). ೧೭ ಮಸುಳಿಸಿತಾ (ಕಾ). ೧೮ ರದನಿ (ಕಾ).

ಕೆಳರ್ದು ಮಿಳಿರ್ದುರಿದು ಗಗನಮ
ನಳುರ್ದು ತಪೋಧನನ ತಪದ ಸೆಕಳಿ ಕನಲ್ದ
ವ್ವಳಿಸೆ ತನಗೋಡಿ ಕಾಡುವ
ಜಳಧರಮಂಡಳದ ಮಱೆಯನರ್ಕಂ ಪೊಕ್ಕಂ ೪*

ವ|| ಅಂತುಮಲ್ಲದೆ

ಅಡವಿಯ ಕಿರ್ಚು ಕರ್ಚಿದುದು ಪುಲ್ಗಳನುಕ್ಕು[1]ವ ನೀರ ಕಿರ್ಚು ಪೆ
ರ್ಗಡಲೊಳಡಂಗಿ ಪೋದುದು ಪುರಾಂತಕನಗ್ಗಳ[2]ಗಣ್ಣ ಕಿರ್ಚು ಕೆಂ
ಜೆಡೆಯೊಳಗಿರ್ಪ ಗಂಗೆಯೊಳ್[3]ಗಿರ್ದುದು[4] ತನ್ನುರಿಪಕ್ಕೆನಲ್ಕಳರಂ
ಕಿಡಿಕಿಡಿವೊಱಗುತಿರ್ದುದು ಮಹೋಗ್ರತಪಂ ತಪದಂಕಕಾಱನಾ[5] ೫

ವ|| ಅಂತಪ್ಪ ತಪೋಧನನತಿಮುಕ್ತಕನೆಂಬೊನುಗ್ರಸೇನನಗ್ರಜನಪ್ಪ ದೇವಸೇನನ ಸೂನು ದೇವಕಿಯಗ್ರಜಾತ [6]ಕಂಸಂ[7] ತನ್ನ ತಂದೆ[8]ಯುಂ ಸೆಱೆಗೆ ತಂದುದೆ ತನಗೆ ನಿರ್ವೇಗಮಂ ತರೆ ತಪಂಗೆಯ್ಯುತ್ತಿರ್ದು ಮಾಸೋಪವಾಸದ ಪಾರಣೆಯೊಳ್ ಬಾರಿಸಲೆಂದು ಕಂಸನರಮನೆಯ ಮುಂದಣಿಂ ಚರಿಗೆಗೊಡುವುದುಮಾ ಪ್ರಸ್ತಾವದೊಳ್ ಪೊಸ ತಳಿರಂ ಪಿಡಿದಾಡುವೆಳೆಲತೆಯಂತೆ ದೇವಕಿಯಾನಂದ ವಸ್ತ್ರಮಂ ಪಡಲ್[9]ಗೆಯಾಳ್ ಪಿಡಿದೊಸಗೆ ಮರುಳ್ಗೊಂ[10]ಡು ದೆಸೆವರಿವರಿ[10]ದಾಡುವ ಜೀವಂಜಸೆ ಬಿಸಿಲ್ವತ್ತಿದತಿಮುಕ್ತಕದಂತೆ ಬಂಬಳ ಬಾಡಿರ್ಪ[11]ತಿಮುಕ್ತಕನಂ ಕಂಡು ಬೇಗದಿಂದಿರ್ವರೆ ತಮ್ಮಂ ನಿಲಿಸಲ್ಬಂದಪಳೆಂದು ಮುನಿ ಮನದೆಗೊಂಡು ಬರ್ಪನ್ನೆಗಂ

(ಮೊದಲೆರಡು ಚರಣಗಳಲ್ಲಿ ಪಾಠ ಕ್ಲೇಶವಿದೆ)

೪. ಆ ತಪಸ್ವಿಯ ತಪದ ಉರಿ ತಳತಳಿಸಿ ಕೆರಳಿ, ಆಕಾಶವನ್ನು ಆವರಿಸಿ, ಸುಡತೊಡಗಲಾಗಿ ಸೂರ್ಯನು ಗಾಬರಿಯಾಗಿ ತನ್ನನ್ನು ಕಾಡುತ್ತಿದ್ದ ಮೋಡಗಳ ಹಿಂದೆ ಅಡಗಿಕೊಂಡನು.

ವ|| ಅಷ್ಟೇ ಅಲ್ಲದೆ -

೫. ತನ್ನ ಉರಿಗೆ ಹೆದರಿ ಕಾಳ್ಗಿಚ್ಚು ಹುಲ್ಲು ಕಚ್ಚಿತು, ಉಕ್ಕುವ ವಡವಾಗ್ನಿ ಕಡಲಲ್ಲಿ ಅಡಗಿಹೋಯಿತು. ಶಿವನ ಪ್ರಚಂಡವಾದ ಹಣೆಗಿಚ್ಚು ಆತನ ತಲೆಯಲ್ಲಿದ್ದ ಗಂಗೆಯಲ್ಲಿ ಅವಿತುಕೊಂಡಿತು ಎಂಬಂತೆ ಆ ಮಹಾತಪಸ್ವಿಯ ಅತ್ಯುಗ್ರರಾದ ತಪಸ್ಸು ಪ್ರಚಂಡವಾಗಿ ಕನಲುತ್ತಿತ್ತು.

ವ|| ಹೀಗಿರುವ ತಪಸ್ವಿಯು ಉಗ್ರಸೇನನ ಅಣ್ಣನಾದ ದೇವಸೇನನ ಮಗಳು ದೇವಕಿಯ ಅಣ್ಣನೂ ಆಗಿದ್ದು, ಕಂಸನು ತನ್ನ ತಂದೆಯನ್ನು ಸೆರೆಯಲ್ಲಿಟ್ಟುದೆ ವೈರಾಗ್ಯ ಕಾರಣವಾಗಿ ತಪಸ್ಸು ಮಾಡುತ್ತಾ ಮಾಸೋಪವಾಸದ ನಂತರ ಪಾರಣೆ ಮಾಡಲೆಂದು ಕಂಸನ ಅರಮನೆಯ ಮುಂಭಾಗದಲ್ಲಿ ಚರಿಗೆ ಹೊರಟಿದ್ದನು. ಆ ಸಮಯದಲ್ಲಿ ಹೊಸ ಚಿಗುರೆತ್ತಿ ಆಡುವ ಎಳೆಯ ಬಳ್ಳಿಯಂತೆ ದೇವಕಿಯ ಮುಟ್ಟಿನ ಕಲೆಯುಳ್ಳ ವಸ್ತ್ರವನ್ನು

* ಕಾ ಪ್ರತಿಯಲ್ಲಿ ಈ ಪದ್ಯವಿಲ್ಲ. ೧ ರ್ಚು (ಕಾ). ೨ ದ (ಕಾ). ೩ ಗರ್ದಿದು (ಕ, ಪ). ೪ ಲ್ಬ (ಕ). ೫ ತಾ (ಕ, ಮ, ಪ). ೬ ನಂ (ಕ). ೭ X (ಕಾ). ೮ ಗೆ (ಕಾ). ೯ ಲಿ (ಮ). ೧೦ ಡಾ (ಕಾ). ೧೧ + ಯ (ಕ, ಮ, ಪ).

ಭಾವಾ ನಮೋಸ್ತು ನಿಮ್ಮಡಿ
ದೇವಕಿ ಮೆಯ್ನೆಱೆ[೧]ದಳೆಂದು ಬಂದಿರೆ ಲೇಸಾ
ಯ್ತಾವುದನುಡ[೨]ತಂದಿರೆ[೨]ನು
ತ್ತಾ[೩] ವಧು ಮೆಯ್ದುನಿಸಿ ನಗುತುಮಡ್ಡಂ ಬಂದಳ್ ೬

ಬತ್ತಲೆ ಬಂದಿರ್ಪಿಡಿಯಿಂ[೪]
ಸುತ್ತಿಮಿದಂ ನಿಮ್ಮ ತಂಗೆಯುಡಲಟ್ಟಿದಳೆಂ
ದೆತ್ತಿದಳವಂ[೫] ಮೊಗಂ[೬] ಮುರಿ
[೭]ವೃತ್ತಿರಲಾ[೭]ನಂದವಸ್ತ್ರಮಂ ದೇವಕಿಯಾ ೭

ವ|| ಅಂತು ತನ್ನ ಕುಲವಲ್ಲರಿಯಂ ಬೇರ್ವೆರಸು ಕಿೞ್ತಿತ್ತುವಂತೆ ವಿರಕ್ತರ ಮೊಗಕ್ಕೆ ರಕ್ತವಸ್ತ್ರಮನೆತ್ತೆ ನಾಣ್ಚ[೮]ದರುಂ ನಾಣ್ಚೆ [೯]ಸು [ಣ್]ನೆಲನಂ[೯] ನೋಡಿ ಪುಗುವಂತಾಗೆ ಕೀಱೆ ಕೊಱಚಾಡಿ ಕಾಡಿದ ಜೀವಂಜಸೆಯ ವಚನಮೆ ವಾಚಾಸಮಿತಿಗೆ ಮಿೞ್ತುವಾಗೆ ಭಿಕ್ಷುವಿನ ಬುಭುಕ್ಷಾನಳನೆ ರೋಷಾನಳನಾದಂತೆ ಮುನಿ ಮುನಿಯದೊಡು ಮುನಿಯದೆ[೧೦] ಮುನಿದಿಂತೆಂದಂ

ಅತ್ತಿಗೆ ಕೇಳ್ವೇೞಿರೆ ನೈ
ಮಿತ್ತಿಕರೆ[೧೧]ನವೇಡ ಪೇೞ್ದೆಮೀ ಬದ್ಧವಣ
ಕ್ಕೆತ್ತಿದ ಕೆಯ್ಯ[೧೨]ನೆ ಬಸಿಱಿಂ
ಗೆತ್ತುವೆಯಿದು ಕೂಡದಂದು ಕಾಡೆಲೆ ಕುಲಟೇ ೮

ಹಡಲಿಗೆಯಲ್ಲಿ ಇಟ್ಟುಕೊಂಡು ಉತ್ಸವದಿಂದ ಹರಿದಾಡುವ ಜೀವಂಜಸೆಯು ಬಿಸಿಲು ಹತ್ತಿದ ಅದಿಮೂರ್ತಿಯಂತೆ ಬಾಡಿ ಬಳಲಿದ ಅತಿಮುಕ್ತಕನನ್ನು ಕಂಡು ವೇಗವಾಗಿ ಆತನ ಎದುರಿಗೆ ಬಂದಳು. ಆಕೆ ತನ್ನನ್ನು ಪಾರಣೆಗೆ ನಿಲ್ಲಿಸಲೆಂದೇ ಬಂದಳೆಂದು ಮುನಿಯು ಪ್ರಸನ್ನನಾಗಿ ಬರುತ್ತಿರಲಾಗಿ,

೬. "ಭಾವಾ, ನಮಸ್ಕಾರ, ದೇವಕಿ ಮೈನೆರೆದಳೆಂದು ಬಂದಿರಾ? ಲೇಸಾಯಿತು. ಉಡುವುದಕ್ಕೆ ಏನು ತಂದಿದ್ದೀರಿ?" ಎಂದು ವಿನೋದವಾಡುತ್ತ ಅಡ್ಡ ಬಂದಳು.

೭. "ಬತ್ತಲೆ ಬಂದಿರುವಿರಿ ಹಿಡಿಯಿರಿ ಇದನ್ನು ಸುತ್ತಿಕೊಳ್ಳಿ. ನಿಮ್ಮ ತಂಗಿ ನಿಮಗೆ ಉಡಲೆಂದು ಕಳಿಸಿರುವಳು" ಎಂದು ನುಡಿಯುತ್ತ ಮುನಿಗಳು ಮುಖಮುರಿಯುವಂತೆ ದೇವಕಿಯ ಮುಟ್ಟಿನ ವಸ್ತ್ರವನ್ನು ಎತ್ತಿ ಹಿಡಿದಳು.

ವ|| ಹೀಗೆ ತನ್ನ ವಂಶವೆಂಬ ಬಳ್ಳಿಯನ್ನು ಬೇರುಸಹಿತವಾಗಿ ಕಿತ್ತು ಎತ್ತುವಂತೆ ಆ ವಿರಾಗಿಗಳ ಮುಖಕ್ಕೆ ರಕ್ತವಸ್ತ್ರವನ್ನು ಎತ್ತಿ ಹಿಡಿಯಲಾಗಿ ನಾಚದವರು ನಾಚಿ, ನೆಲದೊಳಗೆ ಹೊಗುವಂತಾಗಲಾಗಿ, ಚೇಷ್ಟೆ ಮಾಡಿಕಾಡಿದ ಜೀವಂಜಸೆಯ ಮಾತುಗಳೆ ಅವಳ ವಾಕ್ಸಮಿತಿಗೆ ಮೃತ್ಯುವಾದುವು. ಭಿಕ್ಷುವಿನ ಹಸಿವೆಯ ಬೆಂಕಿಯೆ ರೋಷದ ಬೆಂಕಿಯಾದಂತೆ ಮುನಿಗಳು ಮುನಿಯುವವರಲ್ಲದಿದ್ದರೂ ಈಗ ಮುನಿದು ಹೀಗೆಂದರು -

---

೧ X (ಕಾ). ೨ ರೆಂದೆ (ಕಾ). ೩ ತಾ (ಕಾ). ೪ ಯಂ (ಕಾ). ೫ + ಗೆ (ಕ, ಮ, ಪ). ೬ ಗ (ಕ, ಮ, ಪ). ೭ ದತ್ತತ್ತಾ (ಕ, ಪ). ೮ ಣ್ಚೆ (ಕ, ಮ, ಪ). ೯ ಸುಣ್ಚೆ ನೆಲನಡಿಯೊಗುತ್ತಿರ್ದುದೆ ತನಗೆ ನಾ (ಕ). ೧೦ ದ (ಕ), ದಮುನಿ (ಮ, ಪ). ೧೧ ಗೆ (ಕ, ಪ). ೧೨ ಯ್ಯೆ (ಕ, ಪ).

ತೋಱೆಸುಗುಮೆಮಗೆ ತೋರ್ಪೀ
ಕೂಱೆಯೆ ದೇವಕಿಯ ತನಯನಿಂದು ನೆತ್ತ
ರ್ಗಾಱುವ ಕಂಸನ ನೆತ್ತರ
ಕೂಱೆಯನಿದು ತಪ್ಪಿ[೧]ದಂದು ನೀಂ ನಗು ಮಗಳೇ ೯

ವ|| ಎಂದೊಡಾಕೆ[೨] ಕೆಕ್ಕ[೩]ಳಗೆ[೩]ಳರ್ದಿ[೪]ಟ್ಟಂಗಾ[೪]ಱದೆ [೫]ಪೆಂಟೆ[೫]ಯಂ ಕರ್ಚುವಂತೆ ಪುಟ್ಟಿದ ಮನೆ ಪೊಕ್ಕ ಮನೆಯೆರಜ[೬]ಕೇಡನಾಡಿ ತೋರ್ಪಂತಾ ಕಪ್ಪಡಮನೆರಟ್ಕ[೭]ಡಿಯಾಗೆ ಸಿ[೮]ಱ್ಱನೆ ಸೀಳ್ದೀಡಾಡುವುದಮವರ್ಮತ್ತಮಿಂತೆಂದರ್

ಜೀವಂಜಸೆ [೯]ದುರ್ಧರ ಯು[೯]
ದ್ಧಾ[೧೦]ವನಿಯೊಳ್ ನಿನ್ನ ಗಂಡನಂ ತಂದೆಯುಮಂ
ದೇವಕಿಗೆ ಪುಟ್ಟಿದಾತನೆ
ದೇವರ್ಕಾವೊ[೧೧]ಡಮಡುರ್ತು ಕೊಲ್ಲದೆ ಮಾಣಂ ೧೦

ವ|| ಎನೆ ತನ್ನ ಕಿವಿಗಾ[೧೨] ಮಾತು[೧೨] ಪ್ರಳಯಂ ಕವಿ[೧೩]ದು ತಾಗಿ[೧೩] ದಂತಾಗೆ [೧೪]ಕಾಲ ಮೇಲೆ ಬಿರ್ದ[೧೪]ಱಿಯದೆ[೧೫] ಗೆಯ್ದೆಂ ಕ್ಷಮಿಯಿಸುವು[೧೬]ದುದೆಂ[೧೬]ದ ಜೀವಂಜಸೆಗವರಿಂತೆಂದರೆಮ್ಮ ಪರಕೆಗೆ ತೆಱೆ[೧೭]ವ ಬಾಯಂ ಬಯ್ಯು[೧೮]ಳಿಂಗೆ ತೆಱಯಿಸಿದೆ[೧೯] ಕ್ಷಮೆಗೆ ಬಂದ ಮನಮಂ ಮುನಿಸಿಂಗೆ

೮. "ಅತ್ತಿಗೆಯೆ, ಕೇಳು. ನಿಮಿತ್ತಜ್ಞರು ಹೇಳಲಿಲ್ಲವೆನ್ನಬೇಡ. ಈಗ ಹೇಳುತ್ತೇವೆ. ಉತ್ಸವಕ್ಕೆಂದು ಎತ್ತಿದ ಈ ಕೈಯನ್ನೇ ನೀನು ನಿನ್ನ ಹೊಟ್ಟೆ ಬಡಿದುಕೊಳ್ಳಲು ಎತ್ತುವೆ. ಇದು ಸುಳ್ಳಾದಾಗ ಬಂದು ನನ್ನು ಕಾಡುವೆಯಂತೆ.

೯. ದೇವಕಿಯ ಮಗನಿಂದಲೆ ನೆತ್ತರು ಕಾರುವ ಕಂಸನ ರಕ್ತಮಯ ವಸ್ತ್ರವನ್ನು ನೀನು ಎತ್ತಿ ಹಿಡಿದ ಈ ಮಲಿನ ವಸ್ತ್ರವು ನನಗೆ ತೋರಿಸುತ್ತಿದೆ. ಮಗಳೇ ಈ ಭವಿಷ್ಯ ಸುಳ್ಳಾದರೆ, ನಗುವೆಯಂತೆ."

ವ|| ಹೀಗೆನ್ನಲಾಗಿ ಆಕೆ ಕೋಪಾವಿಷ್ಟೆಯಾಗಿ ಹೊಡೆದವರ ಮೇಲೆ ಕೈ ಮಾಡಲಾರದವನು ಹೆಂಟೆಯನ್ನು ಕಚ್ಚಿ ಕೋಪತೀರಿಸಿಕೊಂಡಹಾಗೆ, ಹುಟ್ಟಿದ ಮನೆ ಹಾಗೂ ಹೊಕ್ಕಮನೆ ಎಂಬೆರಡರ ಕೇಡನ್ನೂ ಅಭಿನಯಿಸಿ ತೋರುವಂತೆ ಆ ವಸ್ತ್ರವನ್ನು ಎರಡು ತುಂಡುಗಳಾಗಿ ಸರ್ರನೆ ಸೀಳಿ ಒಗೆದಳು. ಅದನ್ನು ಕಂಡು ಮುನಿಗಳು ಮತ್ತೆ ಹೀಗೆಂದು ನುಡಿದರು -

೧೦. "ಜೀವಂಜಸೇ, ದುರ್ಧರವಾದ ಯುದ್ಧಭೂಮಿಯಲ್ಲಿ ದೇವಕಿಪುತ್ರನು ನಿನ್ನ ಗಂಡ ಹಾಗೂ ನಿನ್ನ ತಂದೆ ಇಬ್ಬರನ್ನೂ - ಯಾವದೇವರು ರಕ್ಷಿಸಬಂದರೂ ಉಗ್ರವಾಗಿ ಕೊಲ್ಲದೆ ಬಿಡನು"

---

೧ ಪ್ಪ (ಪ). ೨ X (ಮ). ೩ ಟಗೆ (ಕ), ಳಗೆ (ಮ), ಟಿಗೆ ಕೆಟ್ಟಗಿ (ಪ). ೪ ಟ್ಟಗರ್ಗಾ (ಕಾ). ೫ ಪೆಟ್ಟೆ (ಕಾ, ಮ). ೬ ಡುಮಂ (ಮ), ಡುಂ (ಕ, ಪ). ೭ ಡುಕ (ಕ, ಮ, ಪ). ೮ ಸ (ಕ, ಮ, ಪ). ೯ ಯುದ್ಧನಿಯು (ಮ), ಯುದ್ಧನಿವ (ಕ), ಯುದ್ಧನಿಬ (ಪ). ೧೦ ದ್ಧಾ (ಕ). ೧೧ ದೊ (ಕ, ಪ). ೧೨ ಗೆ ಮಹಾ (ಕ, ಪ), ಗಾ ಮಾತು ಮಹಾ (ಮ). ೧೩ X (ಕ, ಮ, ಪ). ೧೪ ಕವಿದು ಅ (ಕಾ). ೧೫ ದ (ಕಾ). ೧೬ ದೆಂ (ಕಾ). ೧೭ ದ (ಮ). ೧೮ ಯ್ಗ (ಕ, ಮ). ೧೯ ದ (ಕ, ಮ).

ಬರಿಸಿ[೧]ದೆ[೨]ಯಿನ್ನು[೨] ಕ್ಷಮಿಯಿಸು[೩]ವುದೆಂದೊಡಮಿದು[೩] ನಿನ್ನ ನಸು[೪]ನಗೆ ನಗುವ[೫] ಮೊಗಮನಟಿ[೬]ಸಿದಲ್ಲ[೬]ದೆ ಮಾಣದು

ದೇವಕಿಗಪ್ಪ ತನೂಜಂ
ಭೂವಳಯಮನೆಱಗಿಪಂ ನಿಜಾಂಘ್ರಿಸರೋಜ
ಕ್ಕೀ ವಿಧದಿಂದಮಿದಾತನ
ಭಾವಿಶಿಲಾಲಿಖಿತಮೆಂದು ಮುನಿಪತಿ ಪೋದಂ ೧೧

ಎಂಬುದುಮಂಬು ಕೊಂಡ ಮಱಿವುಲ್ಲೆವೊಲಾಕೆ ನೆಲಕ್ಕೆ ಬಿಬ್ಬು ಬಾ
ಯುಂ[೭] ಬಸಿಱಿಂಬಿವಂ [೮]ತದೆ[೮]ದುಕೊಂಡು ಪೊದಟ್ಟಳೆ ನಂಬಿ ತೊಟ್ಟ ಹಾ
ರಂ ಬೆರಸಿಟ್ಟ ಕೆಯ್ಯ ಕಡಗಂ ಬೆರಸಿಕ್ಕಿದ ಕರ್ಣತಾಳ ಪ
ತ್ರಂ ಬೆರಸಶ್ರುಗಳ್ಕಿಡೆದುವಾಕೆಯ ಗಂಡನ ಸಾವುಗಂಡವೋಲ್ ೧೨

ವ|| ಅಂತಾ ಬಾಲೆ ನೀರ್ಪೊಱಗಿಟೆದ ಬಾಳೆಯಂತೆ ಮಿಡುಮಿಡು ಮಿಡುಕಿ [೯]ಪುಡಿ[೯]ಯೊಳ್ ಪೊರಬ್ಬು ಮೂರ್ಛೆವೋಗಿ ಪರಿಚಾರಕಿಯರ್ ಪರಿತಂದೆತ್ತಿಕೊಂಡು [೧೦]ಪೋಗಿ[೧೦] ಪಾಸಿನೊಳ್ಪವಡಿಸಿ ಬಿಜ್ಜಣಿಗೆಯೊಳ್ ಬೀಸಿಯುಂ ತಣ್ಣನಿಯಂ ಸೂಸಿಯುಮೆಂತಾನುಮೆಚ್ಚಱಿಸಿ ಮೂರ್ಛೆ ತಿಳಿಯೆ ತಾನುಂ [೧೧]ತಿಳಿದು[೧೧] ಪಟುಗಟೆದಟಲ ಕಿರ್ಚು ಪೊಳ್ಮರದ ಕಿರ್ಚಿನಂತೊಳಗೊಳಗಳುರೆ[೧೨] ಕನ್ನದೊಳ್ಸತ್ತ ಕಳ್ಳನ ತಾಯಂತೊಳಗೊಳಗಟ್ಟು[೧೩] ತನ್ನ ಗೆಯ್ದ[೧೩] ಪಾತಕದಂತಾರ್ಗಮುಸಿರಲಣ್ಮ[೧೪]ದೆ ತನ್ನೊಳಿಂತೆಂದಳ್

ವ|| ಆ ಮಾತು ತನ್ನ ಕಿವಿಗೆ ಪ್ರಳಯ ಕವಿದಂತಾಗಲಾಗಿ, ಮುನಿಗಳ ಕಾಲಮೇಲೆ ಬಿದ್ದು "ಅರಿಯದೆ ತಪ್ಪುಮಾಡಿದೆನು. ಕ್ಷಮಿಸಿ" ಎಂದು ಬೇಡಿಕೊಂಡ ಜೀವಂಜಸೆಗೆ ಅವರು ಹೀಗೆಂದರು - "ಆಶೀರ್ವದಿಸಬೇಕೆಂದು ತೆರವ ಬಾಯನ್ನು ಬಯ್ಗುಳಿಗೆ ತೆರೆಯಿಸಿದೆ. ಕ್ಷಮೆಗೆ ಬಂದ ಮನವನ್ನು ಕೋಪಕ್ಕೆ ಬರಿಸಿದೆ. ಇನ್ನು ಕ್ಷಮಿಸೆಂದರೆ ಇದು ನಸುನಗೆ ತುಂಬಿದ ನಿನ್ನ ಮುಖವನ್ನು ಅಳಿಸದೆ ಬಿಡದು.

೧೧. ದೇವಕಿ ಹಡೆಯುವ ಮಗನು ಭೂಮಂಡಲವನ್ನು ತನ್ನ ಪಾದಕಮಲಕ್ಕೆ ಎರಗಿಸಿಕೊಳ್ಳುವನು. ಇದು ಮುಂಬರುವ ಆತನ ಶಿಲಾಲಿಖಿತವೆಂದು ತಿಳಿ" ಎಂದು ನುಡಿದು ಮುನೀಂದ್ರನು ಹೊರಟುಹೋದನು.

೧೨. ಹೀಗೆಂದ ಕೂಡಲೆ ಬಾಣ ನಟ್ಟ ಜಿಂಕೆಯಂತೆ ಆಕೆ ನೆಲಕ್ಕೆ ಬಿದ್ದು ಬಾಯನ್ನೂ ಬಸಿರನ್ನೂ ಬಡಿದುಕೊಳ್ಳುತ್ತ ಭೋರಾಡಿ ಅಳುತ್ತಿರಲಾಗಿ ಆಕೆಯ ಪತಿಯ ಸಾವನ್ನು ಮುಂಗಂಡಂತೆ ಅವಳ ಕೊರಳ ಹಾರವೂ ಕೈಯ ಕಡಗವೂ ಕಿವಿಯ ಓಲೆಗಳೂ ಕಣ್ಣೀರೊಡನೆ ಕಳಚಿಬಿದ್ದುವು.

ವ|| ಹೀಗೆ ಆ ಯುವತಿಯು ನೀರಿಂದ ಹೊರಬಿದ್ದ ಬಾಳೆಮೀನಿನಂತೆ ಮಿಡುಕುತ್ತ, ಹುಡಿಯಲ್ಲಿ ಹೊರಳಾಡಿ ಮೂರ್ಛೆ ಹೋದಳು. ಪರಿಚಾರಿಕೆಯರು ಓಡಿಬಂದು ಎತ್ತಿಕೊಂಡು ಹೋಗಿ ಹಾಸುಗೆಯ ಮೇಲೆ ಒರಗಿಸಿ ಬೀಸಣಿಗೆಯಿಂದ ಬೀಸುತ್ತಲೂ

೧ ಸಿ (ಪ). ೨ ಯೆಂದು (ಕ, ಮ). ಯೆಂತು (ಪ). ೩ ವೆಮದು (ಕ), ವೆನಿದು (ಮ), ವೆಂಅದು (ಪ). ೪ ಗು (ಕಾ). ೫ + ನಗೆ (ಕಾ). ೬ ಸ (ಮ). ೭ ಯಂ (ಕ, ಪ). ೮ ಬಡಿ (ಮ). ೯ ಪೊಡವಿ (ಕಾ). ೧೦ X (ಮ). ೧೧ X (ಕಾ). ೧೨ ತೆ (ಕ, ಪ). ೧೩ ಟುತ್ತೆನಗೆಯ್ದಿದ (ಕ). ೧೪ ಮ್ಮ (ಕ).

ಕಂಜದಳಾಕ್ಷಿ ಮೆಯ್ನೆ[೧]ಱಿವುದೇಕೆ ಮಹಾವ್ರತಿ ಬರ್ಪುದೇಕೆ ಬಂ
ದಂಜದೆ ಮೂರ್ಖನಂ ಮಿಗೆ [೨]ಕೆರಳ್ಚಿ[೨]ದೆನೇಕೆನಗಾ ತಪೋಧನಂ
ನಂಜಿಡಲೇಕೆ ಭಾವಿಪೊಡಿದೆನ್ನ ಪುರಾಕೃತಕರ್ಮಮೆಂದು ಜೀ
ವಂಜಸೆ ಜೀವಮಂ ಪದುಳಮಿಟ್ಟು ವಿಷಾದದೊಳಿರ್ದಳಿರ್ಪಿನಂ ೧೩

ವ|| ಕಂಸನಾಕೆಯಿರ್ದವಸ್ಥಾಂತರಮಂ[೩] ಬಂದು ಕಂಡು ಬೆರ್ಚಿ ಬೆಗಡುಗೊಂಡು

ಮೊಗಮಿನಿತಾದುದೇಕೆ ನಗೆ ಪೋಗಲಿದೇಕೆ ಕಡಂಗಿ ಕಣ್ಣ ನೀ
ರ್ಗೆದಪುವೇಕೆ ಸುಯ್ ಬಿಸಿಯವಾದುವಿವೇಕೆ ಕದಂಪು ಕೆಂಪನಾ
ಳ್ದುಗುಟ್ಟಿಪುವೇ[೪]ಕೆ ಗಗ್ಗರಿ[೫]ಕೆಯುಗ್ಗಳವಾದುವಿದೇ[೬]ಕೆ ನೀಂ ಕರಂ
ಪೊಗೆದಪೆಯೇಕೆ ಪೇೞನಗೆ ಪಂಕಜಪತ್ರ ವಿಶಾಲಲೋಚನೇ ೧೪

ವ|| ಎಂಬುದುಂ

ನಿ[೭]ಡುಸುಯ್ಲೆ ಮೊಗದ ಕಂಪಂ
ಕುಡಿವಳಿಪಾಱಿದವು ಮೊಗದೊಳುಳ್ಳಕ್ಕರಮಾ
ಗಡೆ ಪಾಱಿದಂತಿರಿವು ಪೋ
ದೊಡೆ ನುಡಿಯಲ್ಕಱಿಯದಂತೆ ಮೋನದೊಳಿರ್ದಳ್ ೧೫

ತಣ್ಣೀರನ್ನು ಸೂಸುತ್ತಲು ಪ್ರಯಾಸದಿಂದ ಅವಳನ್ನು ಎಚ್ಚರಿಸಿದರು. ಮೂರ್ಛೆ ತಿಳಿದೆದ್ದ ಜೀವಂಜಸೆಯು ಪೊಳ್ಳು ಮರದ ಒಳಗಿನ ಕಿಚ್ಚಿನಂತೆ ಮಿತಿಮೀರಿದ ದುಃಖಾಗ್ನಿ ಒಳಗೊಳಗೆ ಧಗಧಗಿಸುತ್ತಿರಲಾಗಿ ಕನ್ನದಲ್ಲಿ ಸತ್ತ ಕಳ್ಳನ ತಾಯಿಯಂತೆ ಒಳಗೇ ಅತ್ತು, ತಾನು ಮಾಡಿದ ಪಾಪದಂತೆ ಈ ದುಃಖವನ್ನು ಯಾರಿಗೂ ಹೇಳಲಾರದೆ -

೧೩. "ಈ ಕಮಲಾಕ್ಷಿ ಮೈನೆರೆಯುವುದೇಕೆ? ಆ ಮಹಾಮುನಿ ಬರುವುದೇಕೆ? ನಾನು ಬಂದು ಅಂಜದೆ ಆ ಮೂರ್ಖನನ್ನು ಕೆರಳಿಸಿದ್ದೇಕೆ? ಆ ತಪಸ್ವಿ ನನಗೆ ವಿಷವಿಡುವುದೇಕೆ? ಇದೆಲ್ಲ ನನ್ನ ಪೂರ್ವಾರ್ಜಿತ ಕರ್ಮದ ಫಲವೇ" ಎಂದು ತನ್ನಷ್ಟಕ್ಕೆ ಎಂದುಕೊಂಡು ಜೀವಕ್ಕೆ ಸಮಾಧಾನಮಾಡಿಕೊಂಡರೂ ವಿಷಣ್ಣಳಾಗಿಯೆ ಇದ್ದಳು.

ವ|| ಆಕೆಯ ದುರವಸ್ಥೆಯನ್ನು ಕಂಡು ಕಂಸನು ಬೆಚ್ಚಿ, ಬೆರಗಾಗಿ -

೧೪. "ಮುಖವೇಕೆ ಇಷ್ಟು ಚಿಕ್ಕದಾಯಿತು? ನಗೆ ಹೋಯಿತೇಕೆ? ಕಣ್ಣೀರು ಉಕ್ಕುವುದೇಕೆ? ಬಿಸಿಯುಸಿರೇಕೆ? ಕೆನ್ನೆಕೆಂಪಾರಿ, ಬಿಕ್ಕುತ್ತಿರುವುದೇಕೆ? ಏನು ಸಂತಾಪವಾಗುತ್ತಿದೆ ನಿನಗೆ ? ಕಮಲಾಕ್ಷಿಯೆ ಹೇಳು ನನಗೆ"

ವ|| ಎಂದು ಕೇಳಲಾಗಿ -

೧೫. ಆಕೆ ನಿಟ್ಟುಸಿರಿಟ್ಟಳು. ಹಣೆಯ ಬರಹದ ಅಕ್ಷರಗಳೆ ಹಾರಿ ಹೋಗುವುವು ಏನೋ ಎಂಬಂತೆ, ಆಕೆಯ ಮುಖದ ಕಂಪಿಗೆರಗಿದ್ದ ದುಂಬಿಗಳು ಆ ನಿಟ್ಟುಸಿರಿನ ಬಿಸಿಗೆ ಹೆದರಿ ಹಾರಿಹೋದುವು. ಆಕೆ ಮಾತಾಡಲರಿಯದಂತೆ ಮೌನವಾಗಿದ್ದಳು.

---

೧ ಯ್ಮ (ಮ). ೨ ಕೆಳಲ್ಚಿ (ಕ), ಕಳಲ್ಚಿ (ಪ). ೩ ಮನಜೆದು (ಮ). ೪ ದೇ (ಕಾ). ೫ ಳಿ(ಕಾ). ೬ ವೇ (ಮ). ೭ ನು (ಮ).

ವ॥ ಅಂತಾಕೆ ಮೂಗರ್ಕಂಡ ಕನಸಿನಂತೇನು[೧]ಮನೆ[೧]ನಲಱಿಯದೆ ಕಿಱಿದು ಬೇಗಮಿ[೨]ರ್ದಿದು ನಿನಗೆ ನುಡಿಯಲ್ತಕ್ಕ ಮಾತಲ್ತೆ[೩]ದು ತಲೆವೀಸಿಯುಮವನ[೪]ನಿವಕ್ಕಿರಲಾಱದದೆಂದು ಬಾರದುದಂ ಬಂದನೆಂದು ಮೆಯ್ದುನಿಸಿ ದೇವಕಿ[೫]ಯಹಾನಂದ ವಸ್ತ್ರಮಂ ತೋಱಿ ತಱಕ[೬]ಟಗಾ[೭]ಡಿದೊಡೆನಗೆ[೮] ನಗೆಯೆಂದಱಿಯದತಿಮುಕ್ತಕಮುನಿ ಮುನಿದಿಂತೆಂದನೆಂದ [ಧೋರ್[೯]] ಕ್ತಿಯೊಳೆ ಮೋನಂಗೊಂಡೆಡೆ ಗೆ[೧೦]ಡೆಗೆ[೧೦] ಗುಡುಗುಡನೆ ಕವಿವ ಕಣ್ಬನಿಗಳಂ ಸೆಳ್ಳುಗುರಿಂ ಪಿಡಿ[೧೧]ಪಿಡಿದು

ತನ್ನನುಜೆಗೆ ನಂದನನ
ತ್ಯುನ್ನತನಪ್ಪೊಂ ಗಡಾಗಿ ಸೀಂಟ[೧೨]ದುವೀ ಮಾ
ತೆನ್ನದಿರೆನ್ನಯೆ ತಾಯುಮ
ನೆನ್ನುಮನವನೋಲೆಗಳಸು[೧೩]ವಂ ಗಡ ಕೇಳಾ ೧೬

ವ॥ ಎನೆ ಕೇಳ್ದ ಕಂಸಂ ಮೊೞಗಂ ಕೇಳ್ದ ಹಂಸನಂತೆ ಕುತ್ತು ಪಡೆದಂತಾಗಿ

ಕದಡೆ ಕಲಂಕದಿರ್ಕುಮೆ ಮರುನ್ನದಿಯುಂ ಪೊಸೆದಿಕ್ಕೆ ಕಂದು ನಾ
ಱದೆ ಪೊಸಪೂವುಮೇನ [ರೆ[೧೪]]ಯೆ ಚಂದನದೊಳ್ಕಿಡಿ ಪುಟ್ಟದೇ ಸುರರ್
ಸೊದೆಗಡಲಂ ಕರಂ ಕಡೆಯೆ ಪೇಟ್ವಿಷ[೧೫]ಮೇೞಿದೆ ಶಾಂತರಪ್ಪರುಂ[೧೬]
ಮದಮು[೧೭]ದಿತಾತ್ಮರೇೞಿಸೆ ವಿಕಾರಮನೆಯ್ದದದೇಕೆ ಸೈರಿಪರ್ ೧೭

ವ॥ ಹೀಗೆ ಆಕೆ ಮೂಗರು ಕಂಡ ಕನಸಿನಂತೆ ಏನನ್ನೂ ಅರಿಯದೆ ಸ್ವಲ್ಪ ಹೊತ್ತು ಇದ್ದು, ಬಳಿಕ, "ಇದು ನಿನಗೆ ಹೇಳತಕ್ಕ ಮಾತಲ್ಲ"ವೆಂದು ತಲೆಕೊಡಹಿದಳು. ಅವನು ಒತ್ತಾಯ ಪಡಿಸಿ ಕೇಳಲಾಗಿ, "ಅದೆಂದೂ ಬಾರದವನು ಮನೆಗೆ ಬಂದನೆಂದು ನಾನು ಮೈದುನನೆಂಬ ಸಲುಗೆಯಿಂದ ದೇವಕಿಯ ಮುಟ್ಟಿನ ಬಟ್ಟೆಯನ್ನು ತೋರಿ ವಿನೋದ ಮಾಡಿ ಕಾಡಿದೆನು. ಅದನ್ನು ವಿನೋದವೆಂದು ಭಾವಿಸದೆ ಅತಿಮುಕ್ತಮುನಿ ಕೋಪಗೊಂಡು ಹೀಗೆಂದನು"- ಎಂದು ಅರ್ಧಕ್ಕೆ ಮಾತು ನಿಲ್ಲಿಸಿ, ಮೌನವಾಗಿ, ದಡದಡಿಸಿ, ಉರುಳುವ ಕಣ್ಣೀರನ್ನು ಕೈಯುಗುರಿಂದ ಮಿಡಿಯುತ್ತ ಮಾತನ್ನು ಮುಂದುವರಿಸಿದಳು -

೧೬. "ತನ್ನ ತಂಗಿಗೆ ಅತ್ಯುನ್ನತನಾದ ಮಗನಾಗುವನಂತೆ! ಈ ಮಾತು ಸುಳ್ಳೆನ್ನಬೇಡ. ನನ್ನ ಹಾಗೂ ನನ್ನ ತಾಯಿಯ ಓಲೆಗಳನ್ನು ಅವನು ಕಳಚಿಬಿಡುವನಂತೆ!"

ವ॥ ಈ ಮಾತನ್ನು ಕೇಳಿದೊಡನೆ ಕಂಸನು ಮೋಡದ ಗುಡುಗನ್ನು ಕೇಳಿದ ಹಂಸಪಕ್ಷಿಯಂತೆ ಅಘಾತಕ್ಕೊಳಗಾಗಿ -

೧೭. "ದೇವಗಂಗೆಯೆ ಆದರೂ ಕದಡಿದರೆ ಕಲಕುವುದಿಲ್ಲವೆ? ಹೊಸ ಹೂವಾದರೂ ತಿಕ್ಕಿ ಬಿಟ್ಟರೆ ಕಂಪುವಾಸನೆ ಬಿಡದೆ? ಚಂದನದ ಕೊರಡಾದರೂ ರಭಸದಿಂದ ಉಜ್ಜಿದರೆ ಕಿಡಿಸೂಸದೆ? ದೇವತೆಗಳು ಹಾಲ್ಗಡಲನ್ನು ಕಡೆದಾಗ ವಿಷ ಹೊಮ್ಮಿ ಬರಲಿಲ್ಲವೆ? ಶಾಂತಪುರುಷರೂ ಕೂಡ ಮದೋನ್ಮತ್ತರು ಕೆರಳಿಸಿದಾಗ ವಿಕಾರಹೊಂದದೆ ಸೈರಿಸುವರೇಕೆ?

೧ ಮೆ (ಕಾ). ೨ ಮೆ (ಪ). ೩ ಲ್ಲೆಂ (ಕ, ಮ, ಪ). ೪ ನಗಿ (ಕ), ನೆನಿ (ಮ) ೫ + ದೇವಿ (ಪ). ೬ ತ (ಪ). ೭ ವಾ (ಕಾ). ೮ + ನಗೆ (ಮ). ೯ ಧೋರ್ (ಕ, ಕಾ, ಮ). ೧೦ X (ಕ, ಮ, ಪ). ೧೧ + ದು (ಕ, ಮ, ಪ). ೧೨ ಡಿ (ಕಾ). ೧೩ ಪು (ಕಾ). ೧೪ ರಿ (ಕ, ಕಾ, ಮ). ೧೫ ವೇಗ (ಕಾ). ೧೬ ರಂ (ಕ, ಪ). ೧೭ ಮು (ಕ, ಮ, ಪ).

ಮರುಳೆ ಕಡುಪೊಲ್ಲ ಕೆಯ್ದೆಯ್
ಪಿರಿಯಂಗಂ ಮರ್ಮವೇದಿಗಂ ಮೂರ್ಖಂಗಂ
ನರಪತಿಗಂ [೧]ಧನಪತಿಗಂ[೧]
ಗುರುಗಂ ದೆಯ್ವಕ್ಕಮಂಜವೇಟ್ಕುಮಮೋಘಂ ೧೮

ವ॥ ಇದರ್ಕೊವಜರೇಕೆ ಜಗಮೆಲ್ಲ[೨]ಮೆ[೨]ಱಗುವ[೩]ಗೆಱಗುವು[೩]ದವರುಱ[೪]ದರುಱ[೫] ದಿರ್ಪುದನೀ[೬] ಮೊಲೆಯುಣ್ಬ ಮಕ್ಕಳೊಳಗಾಗಿ ಬಲ್ಲರ್ ಸವ[೬]ಣೋ ಅಮೋಘವಯಣೋಯೆಂಬುದು ನಗುತೆಂದೊಡಂ ಸವಣರ ಮಾತು ಸತ್ಯಮಾದೊಡಮೇನಾ[೭]ಯಿತ್ತಿ[೮]ದಕ್ಕೊಂದುಪಾಯಮಂ ನೆನೆದೆಂ ಕಾರಣಮಿಲ್ಲದೆ ಕಾರ್ಯಮೆಂತಾದಪುದಿದಕ್ಕೆ ಕಾರಣಭೂತಮಪ್ಪ ದೇವಕಿಯನೆ ಕೊಲ್ವೆನೆಂದು ಮನದೊಳೆತ್ತಿಕೊಳ್ವುದುಮೊಂದು ದಿವ್ಯಧ್ವನಿ[೯]ಯಾಗದಾಗದೆನೆ[೯] ಕೇಳ್ದವಧರಿಸಿ ದಿವ್ಯಕ್ಕೆ ಪ[೧೦]ಲ್ದಿನು[೧೦]ತ್ತುಮಾಗಳೆ ವಸುದೇವಸ್ವಾಮಿಯ ಸಮೀಪಕ್ಕೆ ಪೋಗಿ ವಿನೀತಿರ್ಧೂರ್ತಲಕ್ಷಣ ಮೆಂಬಂತೆ ಭಯಸ್ಥನಾಗಿ ತುಟಿಲ್ಗೆಯ್ದು ಕಾಲ ಕೆಳಗೆ ಕುಳ್ಳಿದರ್ಂ [೧೧]ಕೆಯ್ಗಳಂ ಮು[೧೧]ಗಿ[೧೨]ದು ಕಂಸನಿಂ[೧೨]ತೆಂದಂ

ತವರುಂ ಪೊಕ್ಕಿಲ್ಲುಮಾಗಿ ಮದ್ಗೃಹಮಿವಳ್ಗೀ[೧೩] ಸಂತಸಕ್ಕಿಲ್ಲದು
ಕ್ಕೆವ ಸೌಧರ್ಮಿಕೆಯಿಂ[೧೪]ದಮೇಂ[೧೪] ಭಗಿನಿಯರ್ಪೆತ್ತುತ್ಸವಕ್ಕಾದ ಬ
ದ್ದವಣಂ ಪೆರ್ಮನೆಗುದ್ಭವಂ ಪಡೆಗೆ ಸಾಸಿರ್ಮಕ್ಕಳಂ ಪೊತ್ತು[೧೫]ತೀ
ವುವುದುಂ ಪೋ ಕಳಿಪಿಂ[೧೬] ಮದೀಯ ಭವನಕ್ಕೀ ದೇವಕೀದೇವಿಯಂ ೧೯

೧೮. ದಡ್ಡೆಯೆ, ತುಂಬ ಹೀನ ಕೆಲಸ ಮಾಡಿದೆ, ಹಿರಿಯನಿಗೂ ಮರ್ಮಜ್ಞನಿಗೂ ಮೂರ್ಖನಿಗೂ ಅರಸನಿಗೂ ಶ್ರೀಮಂತನಿಗೂ ಗುರುವಿಗೂ ದೈವಕ್ಕೂ ಅಂಜಿ ನಡೆಯಬೇಕು.

ವ॥ ಇದನ್ನು ಕಲಿಸುವುದಕ್ಕೆ ಗುರುಗಳು ಬೇಕೆ? ಜಗತ್ತಿನಲ್ಲಿ ಜನವೆಲ್ಲ ಯಾರಿಗೆ ಎರಗುವುದೊ ಅವರಿಗೆ ನಾವೂ ಎರಗಬೇಕು. ಯಾರು ಇಷ್ಟರಲ್ಲವೊ ಅವರ ಗೋಜಿಗೆ ಹೋಗಬಾರದು. ಮೊಲೆ ಕುಡಿಯುವ ಕೂಸು ಮೊದಲಾಗಿ ಇದನ್ನು ಎಲ್ಲರೂ ಬಲ್ಲರು, ಸವಣನ ಮಾತು ಸುಳ್ಳಾಗದೆನ್ನುತ್ತಾರೆ. ನಗುತ್ತ ನುಡಿದರೂ ಸವಣರ ಮಾತು ಸತ್ಯವೇ. ಈಗೇನಾಯಿತು? ಅದಕ್ಕೊಂದು ಉಪಾಯವನ್ನು ನೆನೆದಿದ್ದೇನೆ. ಕಾರಣವಿಲ್ಲದೆ ಕಾರ್ಯ ಹೇಗಾಗುವುದು? ಅನಾಹುತಕ್ಕೆ ಕಾರಣವಾಗಿರುವ ದೇವಕಿಯನ್ನೆ ಕೊಲ್ಲುವೆನು" ಎಂದು ನಿರ್ಧರಿಸಿಕೊಳ್ಳಲು "ಕೂಡದು! ಕೂಡದು!" ಎಂದೊಂದು ದಿವ್ಯಧ್ವನಿಯಾಯಿತು. ಅದನ್ನು ಕೇಳಿ, ದಿವ್ಯಧ್ವನಿಗೆ ಹಲ್ಕಿಡಿಯುತ್ತ, ಕೂಡಲೆ ವಸುದೇವನ ಬಳಿಗ ಹೋಗಿ, 'ವಿನಯವು ಧೂರ್ತಲಕ್ಷಣ' ಎಂಬುಕ್ತಿಗೆ ಅನುಸಾರವಾಗಿ ಭಯದಿಂದ ನಮಸ್ಕಾರ ಮಾಡಿ, ಕಾಲಕೆಳಗೆ ಕುಳಿತು ಕೈಮುಗಿದು ಕಂಸನು ಹೀಗೆಂದನು -

೧೯. "ತಂಗಿಗೆ ತವರುಮನೆಯ ಸಂತೋಷವನ್ನು ಕೊಡದೆ ಇದ್ದರೆ ನನ್ನ ಮನೆಯಿದ್ದು ಪ್ರಯೋಜನವೇನು? ನಾನು ಮನೆಯ ಯಜಮಾನನಾಗಿದ್ದು ಏನು ಮಾಡಿದಂತಾಯಿತು?

೧ X (ಕಾ). ೨ ಮೆ (ಕ, ಮ, ಪ). ೩ ಗೆಱಗ (ಕ, ಮ, ಪ). ೪ ರ (ಪ). ೫ ರ (ಪ). ೬ ನಿತ (ಮ). ೭ ವ (ಮ). ೮ ಯ್ತು (ಕಾ). ೯ ಯಾಗಸದೊಳೊಗೆದುದನೆ (ಕ, ಪ), ಯಾಗಸದೊಳೆದ್ದುದನೆ (ಮ). ೧೦ ಲ್ದಿನಿ (ಕಾ), ಲ್ವಿನು (ಕ). ೧೧ ಕೆಯ್ಯು (ಕ, ಪ). ೧೨ ದಿಂ (ಮ). ೧೩ ಳ್ಕೀ (ಕಾ). ೧೪ ದೆಯುಂ (ಕಾ). ೧೫ ಕ್ಕು (ಕಾ). ೧೬ ಸಿಂ (ಕ, ಪ).

ಎಂದು ಪಯೋಮುಖವಿಷಕುಂ[1]
ಭಂ ದೈನ್ಯಂಬಟ್ಟು ಬೇಡಿಕೊಂಡಂ ದಯೆಗೆ
ಯ್ಯೆಂದೊಡೆ ಮನಮಲ್ಲದ ಮನ
ದಿಂದಾ ವಸುದೇವನಿತ್ತನಾತಂ ಪೆ[2]ತ್ತಂ ೨೦

ಸಿರಿವಂತರ್ತಂಗೆವಿ[3]ರಂ
ತರಿಸಿ ತವರ್ಮನೆಗೆ ಪಿಂಗಲುಂ ಪೆರಲುಂ ಬಿ
ತ್ತರಿಪುದ[4]ನೆ ಬಲ್ಲರೆ[5]ರ್ದೆ ಕ
ತ್ತರಿ ನಾಲಗೆ ಬೆಲ್ಲಮೆಂದು ಬಲ್ಲವರೊಳರೇ ೨೧

ವಿನಯಮೆ ಸಾಧು [6]ಚಿಂತೆ[6] ಕರಮರ್ಥಮೆ ತಾನಪಕೀರ್ತಿಹೇತು ದು
ರ್ಜನನತಿ[7] ವಾಕ್ಪಟುತ್ವಮೆ ಲಸದ್ಗುಣ ದೂಷಣದಾಯಿ, ರೂಪು ಯೌ
ವನಮೆ ಪರಾಂಗನಾಪಹರದಿಂ ಬೆಱಗಾದಪೆನಾತನಿಂದಮಾ
ತನ ಗುಣದೊಂದು ದುರ್ಜನಿಕೆ ಮಿಕ್ಕುದು ಲೋಕದ ಪಾಪವಲ್ಲದೇ ೨೨

ಖಳನೇಂ[8] ಕಾಣ್ಗುಮೆ ಗುಣಮಂ
ಕಳಂಕಮಂ[9] ಕಾಣದಂತೆ ಸುಜನನು[10]ಳೂಕಾ
ವಳಿ ಬಿಸಿಲಂ ಸೂರ್ಯಂ ಕ
ತ್ತಲೆಯಂ ಮರ್ದಿಂಗಮಱಸಿ ಕಂಡೆಡೆಯುಂಟೇ ೨೩

ತಂಗೆಂದಿರ ಹೆರಿಗೆಯ ಉತ್ಸವವು ತವರಿಗೆ ಅಭ್ಯುದಯವನ್ನುಂಟುಮಾಡಲಿ. ಸಾವಿರ ಮಕ್ಕಳನ್ನು ಹೆತ್ತು ನನ್ನ ಮಹಾಮನೆ ತುಂಬಲಿ. ದೇವಕೀದೇವಿಯನ್ನು ಹೆರಿಗೆಗೆ ನನ್ನ ಮನೆಗೆ ಕಳಿಸಿಕೊಡಿ."

೨೦. ಹಾಲಿನ ಮುಖದ ವಿಷಪಾತ್ರೆಯಂತಿದ್ದ ಕಂಸನು ಹೀಗೆ ದೈನ್ಯದಿಂದ ಬೇಡಿಕೊಂಡು ದಯಮಾಡಿಯೆಂದು ಕೇಳಲಾಗಿ, ಮನವಿಲ್ಲದಿದ್ದರೂ ವಸುದೇವನು ಒಪ್ಪಿದನು.

೨೧. ಸಿರಿವಂತರು ತಂಗೆಂದಿರನ್ನು ಹೆರಿಗೆಗಾಗಿ ತವರು ಮನೆಗೆ ಕರೆ ತರುವುದನ್ನು ಎಲ್ಲರೂ ಬಲ್ಲರು ಆದರೆ ನಾಲಗೆ ಬೆಲ್ಲ, ಎದೆ ಕತ್ತರಿಯೆಂದು ಬಲ್ಲವರುಂಟೆ?

೨೨. ದುರ್ಜನನ ವಿನಯವೆಂಬುದು ಸಾಧುಜನರಿಗೆ ಭೀತಿ; ಧನವೆಂಬುದು ಅಪಕೀರ್ತಿಗೆ ಸಾಧನ; ವಾಕ್ಚಾತುರ್ಯವು ಗುಣಗಳನ್ನು ತೆಗಳುವುದಕ್ಕೆ ಹಾಗೂ ರೂಪು ಯೌವನಗಳು ಪರಸ್ತ್ರೀಯರ ಅಪಹಾರಕ್ಕೇ (ಮೀಸಲಾಗಿರುತ್ತವೆ) ಇದಕ್ಕೆ ನಾನು ಬೆರಗಾಗುತ್ತೇನೆ. ಆ ದುಷ್ಟನಿಗಿಂತ ಆತನ ಸ್ವಭಾವವಾದ ದುಷ್ಟತನ ಹೆಚ್ಚಾಗಿರುವುದು ಲೋಕದ ಪಾಪವಲ್ಲವೆ?

೨೩. ದುಷ್ಟನು ಗುಣವನ್ನು ಕಾಣುವನೆ? ಸಜ್ಜನನಿಗೆ ಕಳಂಕ ಕಾಣುವುದುಂಟೆ? ಗೂಗೆ ಬಿಸಿಲನ್ನೂ ಸೂರ್ಯನು ಕತ್ತಲೆಯನ್ನೂ ಔಷಧಿಗೆ ಬೇಕೆಂದು ಹುಡುಕಿದರೂ ಕಂಡುದುಂಟೆ ಎಲ್ಲಿಯಾದರೂ?

---

೧ ಕಂ (ಕ, ಮ, ಪ). ೨ ಪೊ (ಕ, ಪ). ೩ ನಿ (ಮ). ೪ ದೆ (ಪ). ೫ ದೆ (ಕ, ಮ, ಪ). ೬ ಭೀತಿ (ಕಾ). ೭ ಲಿ (ಕಾ). ೮ ನುಂ (ಕಾ). ೯ ಮುಂ (ಕಾ). ೧೦ ನ (ಕಾ).

ಜನಪ[೧]ರ ಕಿವಿಯೊಳ್ ಪಿಸುಣನೆ
ಜಿನುಗುಗುಮದು ಕುಡುವ ಭೀತಿಯಿಂ[೨] ದಿಕ್ಕರಿ ಕ
ರ್ಣನಿಕಾ[೩]ಯ ಸ್ಫಾಟನಪಟು[೩]
ಘನಕಂಠೀರವ ರವಂಗಳುಂ ಕೊಟ್ಟಪುವೇ ೨೪

ಚಿಂತಿಸಿದಂ ಕಿಱುದಂಗೆ[೪]ಯ
ಸಂತತಿಯಂ ಕೊಂದು ಕೂಗಲಿರುಳುಂ ಪಗಲುಂ
ಚಿಂತಸನೇಕೊಳ್ಳಿತು[೫]ಪರ
ಚಿಂತಾಕರಯೇಹಿಯೆಂಬ ನುಡಿಯಂ ಕಂಸಂ ೨೫

ತಂಗೆಯ ಮಕ್ಕಳನೇ ಕೊಲ
ಲುಂಗುರವಿಕ್ಕನೆ ಕನಲ್ದು ತಂದೆಯುಮಂ ತಾಂ
ನುಂಗಲ್ಬಗೆವಂ ಪಸುದಿಂ
ಬಂಗಾಡಂ ತಿಂಬುದೆಂಬುದೇಂ ಪಾತಕಮೇ ೨೬

ವ॥ ಅಂತಾತನತಿ ಕುಪಿತ ಕ್ರೂರ ಕರಾಳ ಕಾಳಾಹಿ ತನ್ನ ತತ್ತಿಯಂ ತಾನೆ ತಿನ[೬]ಲಿರ್ಪಂ[೬]ತೆಯುಮತಿ ಪ್ರಕಟವಿಕಟಭೀಕರ ಭ್ರುಕುಟಿಯಾಗಿ ಮನದ ಮುನಿಸೊರ್ಮೆಯುಮಡಂಗದೊಳಗೊಳಗೆ ಕಿನಿಸಿ ಕಿಂಕಿನಿ[೭]ವೋಗಿ ಕೆಳರ್ದ ಮಹಾಕಾಳನೆನ್ನವರ್ತನ್ನವರೆನ್ನದು[೮]ಗಿದು ಕೊಂದು[೯] ಸರ್ವಗ್ರಾಸಂಗೊಳಲಿರ್ಪಂತೆಯುಂ ತನಗೆ ತೋರ್ಪರಿಷ್ಟಚಿಹ್ನದಂತಪ್ಪ ದೇವಕೀದೇವಿಯಗರ್ಭ ಚಿಹ್ನ[೧೦] ದತ್ತಾವಧಾನನಾಗಿ ಕಂಸಂ ಕಿಲುಂಬೇಱಿದ ಕಾಂಸ್ಯದಂತೆ ಕಲುಷವೇಱಿರ್ದುದನಱಿದು

೨೪. ಅರಸರ ಕಿವಿಯಲ್ಲಿ ಚಾಡಿಯ ಮಾತು ಪಿಸುಗುಟ್ಟುವುದು. ಅದು ಹುಟ್ಟಿಸುವ ಭೀತಿ ಸಾಮಾನ್ಯವಲ್ಲ. ದಿಗ್ಗಜಗಳ ಕಿವಿಗಳಿಗೂ ಅಪ್ಪಳಿಸುವಂತಹ ಸಿಂಹದ ಮಹಾಗರ್ಜನೆ ಕೂಡ ಅಂತಹ ಭೀತಿಯನ್ನು ಹುಟ್ಟಿಸಲಾರದು.

೨೫. ತನ್ನ ಚಿಕ್ಕ ತಂಗಿಯ ಮಕ್ಕಳನ್ನು ಕೊಂದು ಕೂಗಬೇಕೆಂದು ಕಂಸನು ಹಗಲಿರುಳೂ ಚಿಂತಿಸದೆ ಇರುವನೆ? 'ಹೆರವರಿಗೆ ಚಿಂತೆಯುಂಟು ಮಾಡುವವನೆ ಬಾ' ಎಂಬ ಉಕ್ತಿಯೇನು ಅವನಿಗೆ ಹೊಳೆಯದೆ?

೨೬. ಮುಳಿದು ತಂದೆಯನ್ನೇ ನುಂಗಲೆಳಸಿದವನು ತಂಗಿಯ ಮಕ್ಕಳನ್ನು ಕೊಲ್ಲಲು ಹವಣಿಸದಿರುವನೆ? ದನವನ್ನೇ ತಿನ್ನುವವನಿಗೆ ಆಡುತಿಂದರೆ ಪಾಪವೆ?

ವ॥ ಹೀಗೆ ಆತನು ಅತ್ಯಂತ ಕುಪಿತನಾಗಿ, ಹುಬ್ಬುಗಂಟಿಕ್ಕಿಕೊಂಡಿದ್ದ ತನ್ನ ತತ್ತಿಯನ್ನು ತಾನೇ ತಿನ್ನುವ ಕ್ರೂರ ಕಾಳಸರ್ಪನಂತೆಯೂ ನನ್ನವರು ತನ್ನವರು ಎನ್ನದೆ ಸೀಳಿಕೊಂದು, ಎಲ್ಲರನ್ನೂ ನುಂಗುವಂತೆ ಮಹಾಕಾಳನಂತೆಯೂ ಅಂತಸ್ಥ ಕೋಪದಿಂದ ಒಳಗೊಳಗೇ ಉರಿಯುತ್ತಿದ್ದು, ತನಗೆ ಅರಿಷ್ಟಸೂಚಕ ಚಿಹ್ನೆಯಂತಿರುರ ದೇವಕೀ ದೇವಿಯ ಗರ್ಭಚಿಹ್ನೆಯನ್ನೇ ಗಮನಿಸುತ್ತಾ ಕಿಲುಬೇರಿದ ಕಂಚಿನಂತಿದ್ದನು. ಅದನ್ನು ಅರಿತು -

---

೧ ಕ (ಕಾ). ೨ ಯಂ (ಕಾ). ೩ ಯಾಸ್ಪ ಟನಪಟಂ (ಪ). ಯಾಸ್ಫಟನಪಟುಂ (ಕ). ಯಾಸ್ಫುಟನೆ ಪಟುಂ (ಮ). ೪ ಗಿ (ಮ). ೫ ತೆಕೆ (ಕಾ). ಮ (ಮ). ೬ ಲಿಪ್ಪಂ (ಕ, ಪ). ೭ ಣೆ (ಕ). ೮ ನು (ಕ, ಮ). ೯ ಡು (ಕಾ), ೧೦ ಹ್ನತ (ಕ), ಹ್ನಂತ (ಮ), ಹ್ನಿತ (ಪ).

ಪೂವಂ [೧]ತೋಱದೆ[೧] ಪನಸು[೨] ಫ
ಲಾವಳಿಯಂ ಪಡೆವ ತೆಱದೆ ಪಡೆಗಾ[೩]ತ್ಮಜರಂ
ತೀವಿದ ಬಸಿಱಿಂ ತೋಱದೆ
ದೇವಕಿಯೆಂದೊಸೆದು ಪರಸೆ ಕುಲದೇವತೆಗಳ್ ೨೭

ಮೊಲೆಯುಂ ಮೊಗಮುಂ ಚಂದ್ರನ
ನಿಲವಂ ಕೊಂಡೆಯ್ದೆ ಪಚ್ಚುಕೊಂಡಂತಿರೆ ಪೆ
ರ್ಮೊಲೆ ಕರ್ಪಂ ನಗೆಯಂ[೪] ಜಲ
ಜಲಿಪ ಮೊಗಂ ಬೆಳುಪನಾಳ್ದುದಾ ದೇವಕಿಯಾ ೨೮

ವ॥ ನವಮಾಸಂ ನೆಱೆವುದುಂ[೫] ಕಂಡು ಕಂಸನವಸ್ತುಭೂತನುಂ ಭೀತನುಮಪ್ಪುದಱಿಂ ಜನರಂ[೬]ಜನಾರ್ಥಮಾಗಿಯಾಕೆಗೆಂದ[೬]ನೇಕ ಮಾಣಿಕ್ಯಮಯ ಮಾಗೆ ಮಾಡಿಸಿದ ಸೂತಿಕಾಸದನದೊಳ್ ಸಿರಿಯನಿರಿಸುವಂತೆ ದೇವಕಿಯಂ ತರಿಸಿ ಕಾಪುವೇಳ್ದಿ[೭]ರಿಸಿ[೭] ಹಿತರುಮಹಿತರುಮಪ್ಪ ಪರಿಚಾರಕಿಯರಂ ಪರಿಕವಿ[೮]ಸಿ ಪುಲಿಯಂತೆ ಪಾರ್ದಿರ್ಪಿನಮೊಂದರ್ಧರಾ[೯]ತ್ರದೊ[೯]ಳ್

ದೇವಕಿಯುಮಳಂ ಪೆತ್ತಳ್
ಜೀವಂಜಸೆ ಪೆಱೆಸೆ ಹರಿಯ ಬೆಸದಿಂದಂ ಮಾ
ಯಾವಿಪರಿತಂದು ನೈಗಮ
ದೇವಂ ತಂದಿಕ್ಕೆ ಮುಂದೆ ಮಾಯಾಶಿಶುವಂ ೨೯

ವ॥ ರಾಹುಮುಖದಿನಮಳ್ವೆ[೧೦]ಱೆಯಂ ತಪ್ಪಿಸಿಕೊಂಡು[೧೧]ಯ್ವಂತಾ[೧೧] ಅಮಳರಂ

೨೭. "ಹೂವನ್ನು ತೋರದೆ ಹಲಸು ಹಣ್ಣು ಬಿಡುವಂತೆ, ಬಸಿರು ತುಂಬಿದುದನ್ನು ತೋರದೆ, ದೇವಕಿ, ಮಕ್ಕಳನ್ನು ಹೆರಲಿ" ಎಂದು ಕುಲದೇವತೆಗಳು ಆಶೀರ್ವದಿಸಿದರು.

೨೮. ಮುಖ ಹಾಗೂ ಮೊಲೆಗಳು ಚಂದ್ರಬಿಂಬವನ್ನು ಹೆಚ್ಚಿ ಹಂಚಿಕೊಂಡಂತೆ ದೇವಕಿಯ ಮೊಲೆಗಳ ತುದಿ ಕಪ್ಪಾದುವು; ಕಾಂತಿಮಯವಾದ ಮುಖ ಬಿಳುಪೇರಿತು.

ವ॥ ಒಂಬತ್ತು ತಿಂಗಳು ತುಂಬುವುದನ್ನು ಕಂಡು, ದುರುದ್ದೇಶಪೂರ್ಣನೂ ಭೀತನೂ ಆದ ಕಂಸನು ಜನರಂಜನಾರ್ಥವಾಗಿ ಮಾಣಿಕ್ಯಮಯವಾದ ಹೆರಿಗೆ ಮನೆಯಲ್ಲಿ ಲಕ್ಷ್ಮಿಯನ್ನಿರಿಸುವಂತೆ ದೇವಕಿಯನ್ನು ತಂದಿರಿಸಿ (ತನಗೆ) ಹಿತರೂ (ಅವಳಿಗೆ) ಅಹಿತರೂ ಆದ ಪರಿಚಾರಿಕೆಯರನ್ನು ನೇಮಿಸಿ, ಹುಲಿಯಂತೆ ಕಾದುಕೊಂಡಿದ್ದನು. ಒಂದು ದಿನ ಮಧ್ಯರಾತ್ರಿಯಲ್ಲಿ -

೨೯. ಜೀವಂಜಸೆಯ ಸಮಕ್ಷದಲ್ಲಿ ದೇವಕಿ ಅವಳಿ ಮಕ್ಕಳನ್ನು ಹೆತ್ತಳು. ಇಂದ್ರನ ಆಜ್ಞೆಯ ಮೇರೆಗೆ ಮಾಯಾವಿಯಾದ ನೈಗಮದೇವನು ಬಂದು, ಆ ಶಿಶುಗಳನ್ನೆತ್ತಿಕೊಂಡು ಅವುಗಳ ಬದಲಾಗಿ ಮಾಯಾಶಿಶುಗಳನ್ನು ಅಲ್ಲಿ ಇರಿಸಿದನು.

ವ॥ ರಾಹುವಿನ ಬಾಯಿಂದ ತಪ್ಪಿಸಿ ಜೋಡಿ ಚಂದ್ರಬಿಂಬಗಳನ್ನು ಒಯ್ಯುವಂತೆ

---

೧ ತೊಱೆದ (ಕಾ). ೨ + ಸು (ಕಾ). ೩ ದಾ (ಕಾ). ೪ ಯಿಂ (ಕಾ). ೫ ದಂ (ಮ). ೬ ಜನರಂಜನವಾಗೆಂದು ಅ (ಕಾ), ಜನಾರ್ಥವಾಕೆಂದ (ಕ), ಜನಾರ್ಥ ಮಾಕೆಗ (ಪ). ೭ ರೆ (ಮ). ೮ ಯಿ (ಕಾ). ೯ ತ್ರೆಯೊ (ಕಾ). ೧೦ ಳ್ದೆ (ಕ). ೧೧ ಯ್ವ (ಕ, ಮ, ಪ).

ಮಳಯಾಚಳಕ್ಕೆ ಕೊಂಡುಯ್ದನಿತ್ತಂ ಕಂಸನಾ ಕೂಸುಗಳ ಕಾಳ್ಕಾಳೆಂಬ ಧನಿಗೇ[೧]ಳ್ದಿಲಿ[೧]ಯುಲಿಪುಗೇಳ್ದ ಬೆಕ್ಕಿನಂತೆ ಬೊಕ್ಕಳಸೆ ಪಾಱಿ[೨] ಪಾಯ್ದು

ಪಸಿದುಗ್ರವ್ಯಾಘ್ರನೇಣೀಶಿಶುಗಳನೆರ[೩]ಡಂ ಕೊಂಡು ಕೊಲ್ವಂತೆ ಪಲ್ಲಂ
ಮಸೆದತ್ಯುದ್ರೇಕದಿಂ ತನ್ನಯ ಸಿರಿಮನೆಯೊಳ್ಪೊಕ್ಕ ಪೆರ್ಮಾರಿಯಂ ಪೂ
ಜೆಸಿ ಬಾಱಿಪ್ಪಂದಂದಮಂ ದಿಗ್ಬಲಿಗೆದ[೪]ಱಿದ[೪]ವೋಲ್ ಸೂಸೆ[೫] ಮಾಂಸಾಸ್ಥಿ ಮಾಯಾ
ಸಿಸುವಂ ಕೊಂದಿ[೬]ಕ್ಕಿದಂ ಪಾಸಱೆಯೊಳಸಗವೊಯ್ಯೊಯ್ವುಯ್ದು[೭] [೮]ಕಂಸಂ[೮] ನೃಶಂಸಂ ೩೦

ವ॥ ಮತ್ತಮೊರ್ಮೆ

ಆಸುರದೊಳಿಂದ್ರಜಾಲದ
ಕೂಸುಗಳಂ ಕಂಸನೊಗೆದನಱೆಯೊಳ್ನೆತ್ತ
ಸೂಸೆ ದೆಸೆದೆಸೆಗೆ ಕೆಂಪಿನ
ಪಾಸಂ ಪಿಡಿದೊಗೆವ ಪ[೯]ಟ್ಟೆಗಾ[೯]ಱನ ತೆಱದಿಂ ೩೧

ವ॥ ಮತ್ತಮೊರ್ಮೆ

ದೆಸೆದೇವತೆಯ ಕುಸುಂಬೆಯ
ಕುಸುಮಂಗಳಿನಿಂಡೆ[೧೦]ಯಾಡುವಂತಿರೆ ಕೆಂಗ
ಲ್ಮಸಗಿ ಪರಿತಂದು ಮಾಯದ
ಸಿಸುಗಳನೆಳದಱೆಯೊಳೊಗೆದನಱೆ[೧೧]ಗುಲಿ ಕಂಸಂ ೩೨

ನೈಗಮದೇವನು ಆ ಅವಳಿ ಕೂಸುಗಳನ್ನು ಮಲಯಪರ್ವತಕ್ಕೆ ಕೊಂಡೊಯ್ದನು. ಇತ್ತ ಆ ಮಾಯಾ ಶಿಶುಗಳ ಧ್ವನಿಯನ್ನು ಕೇಳಿ, ಇಲಿಯ ದನಿ ಕೇಳಿದ ಬೆಕ್ಕಿನಂತೆ ಕಂಸನು ತಟ್ಟನೆ ಹಾರಿಬಂದು -

೩೦. ಹಸಿದ ಉಗ್ರಹುಲಿ ಜಿಂಕೆ ಮರಿಗಳ ಜೊತೆಯನ್ನು ಹಿಡಿದು ಕೊಲ್ಲುವಂತೆ, ಹಲ್ಲು ಕಡಿದು, ತನ್ನ ಸಿರಿಮನೆಯಲ್ಲಿ ಹೊಕ್ಕ ಹೆಮ್ಮಾರಿಯನ್ನು ಪೂಜಿಸಿ ಅವಳಿಗೆ ದಿಗ್ಬಲಿ ಸೂಸುವಂತೆ ಅಗಸನು ಬಟ್ಟೆ ಒಗೆಯುವ ರೀತಿಯಲ್ಲಿ ಆ ಶಿಶುಗಳನ್ನು ಮೂಳೆ ಮಾಂಸಗಳು ಸಿಡಿದು ಹೋಗುವಂತೆ ಬಂಡೆಗಲ್ಲಿಗೆ ಅಪ್ಪಳಿಸಿ ಕ್ರೂರವಾಗಿ ಕೊಂದನು.

ವ॥ ಇನ್ನೊಂದು ಸಲದ ಹೆರಿಗೆಯಾದಾಗ

೩೧. (ನೈಗಮ ದೇವನು ತಂದಿಟ್ಟ) ಮಾಯಾ ಶಿಶುಗಳನ್ನು ಎತ್ತಿಕೊಂಡು, ನೇಕಾರನು ಕೆಂಪಿನ ರೇಷ್ಮೆ ಹಾಸನ್ನು ಒಗೆಯುವಂತೆ ಧರ್ಮದ್ರೋಹಿಯಾದ ಕಂಸನು ಬಂಡೆಗಲ್ಲಿನ ಮೇಲೆ ಅವುಗಳನ್ನು ಅಪ್ಪಳಿಸಿ, ಅಪ್ಪಳಿಸಿ, ದಿಕ್ಕು ದಿಕ್ಕಿಗೂ ನೆತ್ತರು ಸೂಸಿದನು.

ವ॥ ಇನ್ನೂ ಒಂದು ಸಲ -

೩೨. ದಿಗ್ದೇವತೆಯ ಕುಸುಬೆಹೂಗಳನ್ನು ತೂರಿ ಆಡುವಂತೆ ಧರ್ಮಗೇಡಿಯಾದ ಕಂಸನು ಕೆಕ್ಕಳಗೆರಳಿ ಒಂದು ಮಾಯದ ಶಿಶುಗಳನ್ನು ಬಂಡೆಯ ಮೇಲೆ ಅಪ್ಪಳಿಸಿದನು.

---

೧ ಳ್ದಿಲ್ಲಿ (ಕಾ). ೨ ಕ್ಕನೆ (ಕಾ). ಕ್ಕನೆಪಾಱಿ (ಪ). ೩ ಗ (ಕ, ಪ). ೪ ಱುವ (ಕಾ). ೫ ನ್ಯ (ಮ). ೬ ಡಿ (ಮ, ಪ). ೭ ರೋಲ್ಪೊಯ್ದು (ಕ), ವೋಲ್ಪೊಯ್ದ (ಮ), ನೋಲ್ಪೊಯ್ದು (ಪ). ೮ ಕೊಂದಂ (ಕ, ಪ). ೯ ಟ್ಟುಕಾ (ಕ, ಪ). ಟ್ಟುಗಾ (ಮ). ೧೦ ದೆ (ಕ). ೧೧ ಱು (ಕ, ಪ).

ಮನೆ ಮ[೧]ಱೆ[೧]ಯೊಳ್ಮಾಡಿದ ಕಂ
ಸನ[೨]ಪೊಲ್ಲಮೆ ಮುಟ್ಟಿದತ್ತು ಮುಗಿಲಂ ಪೊಗೆ ಭೋಂ
ಕೆ[೩]ನೆ ಪೊಱಮಡುವವೊಲಡುಗೆಯ
ಮನೆಯಂ ಲೇ[೪]ಸಾಗಿ ಬೆಳಗಿನಂತೊಳಗಿರ್ದುಂ ೩೩

ಪುರುಷರ್ಮಾಡಿದ ಪುಣ್ಯಂ
ಪರೆಯದು ನೀರೊಳಗೆ ಬಿಟ್ಟ ಘೃತಬಿಂದುವಿನಂ
ತಿರೆ [೫]ಪರೆಗುಂ.... ವಿ[೫]
[೬]ಸ್ತರದಿಂ[೬] ಬಿಟ್ಟಂತೆ ತೈಲಬಿಂದುವನದಱೊಳ್ ೩೪

ವ।। ಅಂತು ಮೂಱು ಗೆಯ್ದು[೭] ಋತುಗಳಂ ಪಡೆವ ಪೃಥ್ವಿಯಂತೆ ಋತುಮತಿಯಾಗಿ ದೇವಕಿ ಪೆತ್ತ ಮಕ್ಕಳನತ್ತ ನೈಗಮದೇವನೆತ್ತಿಕೊಂ[೮]ಡುಯ್ದು[೮] ನಿತ್ತ ನಿಃಕರುಣನಾ[೯] ದೇವನಿಕ್ಕಿದ ಮಾಯದ ಮಕ್ಕಳನೆ ಮೊಕ್ಕಳಂ ಮುಳಿದು ಶಿಲೆಯೊಳೊಗೆದಾಱೆ ಪರಪಿ ಕೆಯ್ಯಂ[೧೦] ತೊಡೆದುಕೊಂಡು ಮುನಿಯ ಮಾತಂ ತೊಡೆದೆನೆಂದು ಕೊಲೆ ಪುಸಿಯೆನ್ನದತಿಮುಕ್ತಕನಾದೇಶಮೆ ಪುಸಿಯಾದುವೆಂದವು ತನಗೆ ತ(ಪ್ಪ)[೧೧]ದಪಮೃತ್ಯುಗಳೆಂದಱಿಯದೆಯುಂ [೧೨]ಮೇಗಮೇಗಱಿಯದೆಯುಂ[೧೨] ಕಂಸನತ್ಯಧಿಕಾಂಸನಾಗಿ ನಿಶ್ಚಿಂತಮಿರ್ದನಿತ್ತ ಕೃತಕಾಕ್ರಂದ ಕಂದಳಿತ ಶುಷ್ಕ ಶೋಕಾಕ್ರಾಂತ ಜೀವದ್ಯಶಾವ್ರೀಡಾವಿಷಾದ ಸ್ಚಿವಸೂ[೧೩]ಚಿತ ಪ್ರಸೂತಿಸಮಯ ಸಮುದ್ಭೂತ [೧೪]ಪುತ್ರಾ[೧೪]ವಿದ್ಯಾವ[೧೫]ರಣೆ[೧೫]ಯುಮಶರಣೆಯುಮಂತರ್ನಿ[೧೬]ಗೂಢಗಾಢಶೋಕ[೧೭] ಪಾವ[೧೮]ಕಿಯಪ್ಪ ದೇವಕಿ[೧೯] ತದ್ವೃತ್ತಾಂತಮೆಲ್ಲಮಂ ಜಲಕ್ಕನಱಿದು

೩೩. ಅಡುಗೆಯ ಮನೆಯ ಬೆಂಕಿ ಒಳಗೆ ಉರಿಯುತ್ತಿದ್ದರೂ ಅದರ ಹೊಗೆ ಹೊರಬಿದ್ದು ಹಬ್ಬುವಂತೆ, ಮನೆಯಲ್ಲಿ ಗುಪ್ತವಾಗಿ ಮಾಡಿದ ಕಂಸನ ಪಾಪ ಮುಗಿಲನ್ನು ಮುಟ್ಟಿತು.

೩೪. ಪುರುಷರು ಮಾಡಿದ ಪುಣ್ಯವು ನೀರಲ್ಲಿ ಬಿಟ್ಟ ತುಪ್ಪದ ಹನಿಯಂತೆ ಹರಡಿಕೊಳ್ಳುವುದಿಲ್ಲ. ಆದರೆ (ಅವನ ಪಾಪವು) ನೀರಲ್ಲಿ ಬಿಟ್ಟ ಎಣ್ಣೆಯ ಹನಿಯಂತೆ ಅಗಲವಾಗಿ ಹರಡಿಕೊಳ್ಳುವುದು. (ಮೂರನೆಯ ಚರಣದಲ್ಲಿ ಗ್ರಂಥಪಾತವಾಗಿದೆ. ಪಾಠಾಂತರದಿಂದ ಏನೂ ಸಹಾಯವಾಗದು. ಹಿಂದಿನ ಪದ್ಯದ ಬಲದಿಂದ ಇಲ್ಲಿ ಬಿಲವಾದ ಭಾಗದ ಅರ್ಥವನ್ನು ಊಹಿಸಲಾಗಿದೆ)

ವ।। ಒಂದಾದ ಮೇಲೊಂದರಂತೆ ಪೃಥ್ವಿ ಆರು ಋತುಗಳನ್ನು ಪಡೆಯುವಂತೆ, ದೇವಕಿ ಋತುಮತಿಯಾಗಿ ಹೆತ್ತ ಆರು ಮಕ್ಕಳನ್ನು ನೈಗಮದೇವನು ಎತ್ತಿಕೊಂಡು ಹೋದನು. ಇತ್ತ ನಿರ್ದಯನಾದ ಕಂಸನು ನೈಗಮದೇವನು ಇರಿಸಿಹೋದ ಮಾಯದ ಶಿಶುಗಳನ್ನೇ ಕ್ರೋಧದಿಂದ ಕಲ್ಲಿಗೆ ಅಪ್ಪಳಿಸಿ ಚೂರುಚೂರು ಮಾಡಿ ಒಗೆದು ಕೈತೊಳೆದುಕೊಂಡು, ಮುನಿಯ ಭವಿಷ್ಯವಾಣಿಯನ್ನು ಒರಸಿಬಿಟ್ಟೆನೆಂದುಕೊಂಡನು. ತಾನು ಮಾಡಿದ ಕೊಲೆ

---

೧ ವ (ಕಾ). ೨ ನೆ (ಕ). ೩ ಕ (ಕ, ಪ). ೪ ತೇ (ಮ). ೫ ತೋರ್ಕೆ ನೀರ ಪೊಯ್ಯಲ್ (ಕ), ಪರೆಗುಂ.... (ಮ), ತೋರ್ಕು ನೀರ ಪೊಯ್ಯುಲ್ (ಪ). ೬ ಪರೆಗುಂ (ಕ, ಪ)..... (ಮ). ೭ ಯ್ದ (ಕಾ). ೮ ಡು ಪೋದ (ಮ). ೯ + ನೈಗಮ (ಮ). ೧೦ ಯ್ಯ (ಕ, ಮ, ಪ). ೧೧ ಪ್ಪಿ (ಕ, ಕಾ, ಮ). ೧೨ X (ಕ, ಮ). ೧೩ ಶೆ (ಕ, ಕಾ, ಮ). ೧೪ ಶಂ (ಕಾ). ೧೫ X (ಕಾ). ೧೬ ರೇಣ್ಯ (ಕ, ಮ), ರೇಣ್ಯೆ (ಪ). ೧೭ + ನಯ (ಕಾ). ೧೮ ಪಾಂ (ಕ, ಕಾ, ಮ). ೧೯ + ದೇವಿ (ಕಾ).

ಅಸಕಳಿದಟಿಲುಂ ಬಸಿಱಿ[೧]ೊ
ಳ್ಕುಸುಂಬೆವುರಿವುರಿಯೆ ಸತ್ತಳತ್ತಳ್ಪಸಿಱಿಂ
ಪೊಸೆದಳ್ಜಿ [ನಿ[೧]]ದಳ್ [೨]ನೀಡುಂ[೨]
ಬಿಸುಸುಯ್ದಳ್ ಮ[೩]ಡಿದಂ ಕೆಡೆದು ಬದಿಯಂ ಬಯ್ದಳ್ ೩೫

ವ|| ಬಯ್ಯಾ[೪]ರುಮಿಲ್ಲದ ಪೊೞ್ತು ಪೊಯ್ದುಕೊಂಡ ಬಸಿಱ ಬಾಸುಳ್ಗಳ್ ತಗಡಂ ಪತ್ತಿಸಿದಂತಾಗೆ ಮಾಣದೊಳಗೊಳಗೆ ಮೂಗಟ್ಟಿಯಟ್ಟಟ್ಟು [೫]ಮುಸು[೫]ಡು ಮಡಕೆಯನಿಟ್ಟಂತಾಗೆ ಬೆಂದ ಬಸಿರ್ಪಾೞಾಗೆ ಪೆತ್ತುಂ ಮಕ್ಕಳ ಮೊಗಂ ನೋಡದೆಯುಂ [೬]ಮೊಲೆಯೂಡದೆಯುಂ[೬] ಸತ್ತಕೂಸನಾದೊಡಮೆತ್ತಿಕೊಳ್ಳದೆಯುಂ ಬಳಗಂ ಬಳಸಿ[೭] ಸುತ್ತಿಕೊಳ್ಳದೆಯುಂ ಮೇಲೆ ಪೊರಳ್ದುಟದೆಯುಂ ಕರೆಯದೆಯುಂ ಪೂೞಲ್ಕೊಂಡು ಪೋಗದೆಯುಂ [೮]ಎಂತು ಬಾೞ್ವಿಂ[೮] ಮಕ್ಕಳ್ಪಡೆದುಮಟ್ಟಿವಡೆಯ[೯]ದಿನ್ನುಂ[೯] [೧೦]ಮನೆಯೊಳಿರ್ಪು[೧೦]ದಱಿಂ ಬಂಜೆಯಪ್ಪುದುಂ ಬಿಂಜದೊಳಿರ್ಪುದುಮೊಳ್ಳಿ*ತ್ತೆಂದಿ*ರುಳ್ನಿದ್ರೆಯುಂ ಪಗಲ್ಪಸಿವುಮಿಲ್ಲದೆ ಮಲ್ಮಲಂ ಮಱುಗಿ ಮನ್ಯು ಮಿಕ್ಕು ಗದ್ಗದಕಂಠೆಯಾಗಿರ್ದೊಂದು ದಿವ[೧೧]ಸಮ[೧೧]ತಿಮುಕ್ತಕಮುನಿಯಂ ನಿಲಿಸಿ ಕಣ್ಣ ನೀರೊಳ್ಕಾಲಂ ತೊಳೆ[೧೨]ದೆನಿದಂ[೧೨] ಕೆಯ್ಯೊಳಿಕ್ಕಿ ಮುನಿದಂತೆ ಕಾಲ ಮೇಲೆ ಬಿಬ್ದು[೧೩] ಕಾವ[೧೪]ರೆ ಕಣೆಗೊ[೧೫]ಳ್ವರೆ[೧೫]? ತಾಯೆ ರಕ್ಕಸಿಯಾದಳ್ಕರುಳೆ ಪಾವಾಗಿ ಕೊಱೆದು ತಿಂದಪುದುಣ್ಬಕೂಟಿಕೊಂದಪುದು

ಸುಳ್ಳೆನ್ನದೆ ಅತಿಮುಕ್ತಕನ ಭವಿಷ್ಯ ವಚನವೆ ಸುಳ್ಳಾಯಿತೆಂದು ಭಾವಿಸಿದನು. ಅವು ತನಗೆ ತಪ್ಪದೇ ಅಪಮೃತ್ಯುಗಳೆಂದರಿಯದೆ, ಮುಂದಿನ ಆಗುಹೋಗುಗಳನ್ನು ಅರಿಯದೆ, ಕಂಸನು ಮೈಯುಬ್ಬಿ ನಿಶ್ಚಿಂತನಾಗಿದ್ದನು. ಇತ್ತ ಕೃತಕವಾಗಿ ಅಳುತ್ತ, ಶುಷ್ಕಶೋಕದಿಂದಲೂ ನಾಚಿಕೆ ಹಾಗೂ ವಿಷಾದದಿಂದಲೂ ಪ್ರತಿಯೊಂದು ಹೆರಿಗೆಯ ಕಾಲದಲ್ಲಿ ಸಚಿವರು ಪುತ್ರ ಮರಣದ ವಾರ್ತೆಯನ್ನು ತಿಳಿಸುತ್ತಿದ್ದರು. ಅದರ ಮಾಯೆ ಮುಸುಕಿ ನಿರುಪಾಯಿಗಳಾಗಿ ಒಳಗೊಳಗೇ ಸುಡುತ್ತಿರುವ ಗಾಢಶೋಕದ ಬೆಂಕಿಯಿಂದ ತಳಮಳಿಸುವ ದೇವಕಿ, ಆ ವೃತ್ತಾಂತವನ್ನೆಲ್ಲ ಚೆನ್ನಾಗಿ ಭಾವಿಸಿ -

೩೫. ಮಿತಿಮೀರಿದ ದುಃಖ ಹೊಟ್ಟೆಯಲ್ಲಿ ಕುಸುಬೆಯ ಉರಿಯಂತೆ ಉರಿಯಲಾಗಿ ನೊಂದಳು, ಅತ್ತಳು, ಹೊಟ್ಟೆ ಬಡಿದುಕೊಂಡಳು, ನಿಟ್ಟುಸಿರಿಟ್ಟಳು, ನೆಲಕ್ಕೆ ಬಿದ್ದು ವಿಧಿಯನ್ನು ಬಯ್ದಳು.

ವ|| ಯಾರೂ ಇಲ್ಲದ ಹೊತ್ತಿನಲ್ಲಿ ಬಡಿದುಕೊಂಡಿದ್ದರಿಂದ ಉಂಟಾದ ಬಾಸುಳು ಹೊಟ್ಟೆಯ ಮೇಲೆ ತಗಡು ಹೊಚ್ಚಿದಂತಾಗಲಾಗಿ, ಸಂತಾಪವಾರದೆ ಒಳಗೊಳಗೇ ಮೂಕಳಾಗಿ ಅತ್ತೂ ಅತ್ತೂ ಮುಖ ಮಡಕೆಯಂತೆ ಕಪ್ಪಿಟ್ಟು, ಬೆಂದ ಹೊಟ್ಟೆ ಹಾಳಾಗಿ, "ಹೆತ್ತರೂ ಮಕ್ಕಳ ಮುಖವನ್ನು ನೋಡಲಿಲ್ಲ; ಮೊಲೆಯುಣಿಸಲಿಲ್ಲ; ಸತ್ತಕೂಸಾದರೂ ಅದನ್ನು ಎತ್ತಿಕೊಳ್ಳಲಿಲ್ಲ; ಬಳಗದವರೆಲ್ಲ ಬಂದು ಸುತ್ತಲೂ ನೆರೆಯಲಿಲ್ಲ; ಮೇಲೆ ಬಿದ್ದು ಹೊರಳಾಡಿ ಅಳಲಿಲ್ಲ, ಕರೆಯಲಿಲ್ಲ; ಅದನ್ನು ಮಣ್ಣು ಮಾಡಲು ಎತ್ತಿಕೊಂಡು ಹೋಗಲಿಲ್ಲ,

---

೧ ನಿಸಿ (ಕ, ಕಾ, ಮ). ಗಿ (ಪ). ೨...... (ಕಾ). ೩ ನು (ಪ), ೪ ಯ್ಯೂ (ಕ). ೫ ಮಸು (ಮ), ಮು (ಕಾ). ೬ X (ಕ, ಮ, ಪ) ೭ X (ಕ, ಮ). ೮ ಎಮ್ಮ ಬಾೞ್ವೆಯುಂ (ಕ, ಮ, ಪ). ೯ ದಿನ್ನುಂ (ಪ), ದೆ (ಕಾ). ೧೦ ಬಾೞ್ವ (ಮ). * ತ್ತಿಂತಿ (ಕ, ಮ, ಪ). ೧೧ ಸಂ ಯ (ಕ, ಮ). ೧೨ ದುನಿದಂ (ಮ), ದುನಿಡಂ (ಕ), ದು ನೀರಂ (ಪ). ೧೩ ರ್ದು (ಕ, ಮ, ಪ). ೧೪ ಪ (ಪ). ೧೫ ಯ್ದಪರ್ (ಕಾ).

ಕುಡಿದ[೧] ನೀರ್ನಂ[೨]ಜಾದುದು ಮುಂಜೂರೊಳ್ಕಿರ್ಚೆರ್ದುದು ಕಣ್ಣನೀರ್ಕತ್ತರಿವಾಣಿಯಾದುದಂ ಬಸಿ[೩]ರ್ಬಱಿ[೩]ದಾಗೆ ಪೆತ್ತು ಪುತ್ರಮುಖಂಗಾಣದೆ ಪೋದೆ[೪]ನೊಂಬತ್ತು ತಿಂಗಳು ಬತ್ತಿ ಬಾೞುಕವಾಗಿ ಪೊತ್ತ ಬೇನೆ[೫]ಯುಂ [೬]ಪೆತ್ತ ಬೇನೆಯುಂ[೬] ಸತ್ತ ಬೇನೆಯುಮಂ [೭]ತಿನ[೭]ಲಾಱೆಂ ನೀಮೆನ್ನ[೮] ದುಃಖಮಂ ಪಱ್[೯]ವೊಡೆ ತಲೆಯಂ ಪಱಿಯಿಮೆಂದು [೧೦]ಪಱೆ[೧೦]ದ ತಲೆಯುಮಾಱಿದ ಬಾಯುಂ ಬೆರಸ[೧೧]ಬಿಲ್ಮ[೧೧]ರುಳ್ಗೊಂಡು ಬಾಯುೞಿದಲ್ವಿ ದೇವಕೀ ದೇವಿಯ[೧೨]ನೇೞೀೞದೇ[೧೨]ನುಮಿಲ್ಲ ಶಾಂತಂ ಪಾಪಂ ಪ್ರತಿಹತ (ಮ[೧೩]) ಮಂಗಳಮದೆಂತೆನೆ ನೀಂ[೧೪] ಬೆಸಲೆಯಾಗಲೊಡನೆ [೧೫]ನಿನ್ನ ಮುಂದೆ[೧೫] ಮಾಯಾಶಿಶುವನಿಕ್ಕಿ ಪಲ್ಲಟಿಸಿ ಪೆತ್ತ ಮೂಱುಮಮ[೧೬]ಳುಮನೆತ್ತಿಕೊಂಡು ಪೋಗಿ ನೈಗಮದೇವಂ [೧೭]ದಾದಿಯಾ[೧೭]ಗಮರ್ದನೂಡಿ ನಡಪೆ ಮಂದಮಾರುತಾಂದೋಳಿತ ಚಂದನ ಚಾಮರ ಪ್ರಸೂತ ಶಿಲಾತಳಾಮೋದಮಗ್ನಮಪ್ಪ

ನಾನು ಹೇಗೆ ಬದುಕಲಿ? ಮಕ್ಕಳನ್ನು ಹಡೆದರೂ ಮಕ್ಕಳ ಪ್ರೀತಿಯನ್ನು ಪಡೆಯದೆ ಇನ್ನು ಮನೆಯಲ್ಲಿ ಇರುವುದಕ್ಕಂತ ಬಂಜೆಯಾಗುವುದು ಲೇಸು; ಅಡವಿಯಲ್ಲಿರುವುದು ಲೇಸು" ಎಂದು ಹಲುಬಿ, ಇರುಳು ನಿದ್ದೆಯಿಲ್ಲದೆ, ಹಗಲು ಹಸಿವಿಲ್ಲದೆ ಮಲಮಲಮರುಗಿ, ದುಃಖವೊತ್ತರಿಸಿ ಬಂದು ಗದ್ಗದಕಂಠೆಯಾಗಿದ್ದು ಒಂದು ದಿವಸ ಅತಿಮುಕ್ತಕ ಮುನಿಯನ್ನು ನಿಲ್ಲಿಸಿ, ಕಣ್ಣ ನೀರಿಂದ ಅವರ ಕಾಲು ತೊಳೆದು, ಅವರ ಕಾಲಮೇಲೆ ಬಿದ್ದು "ಕಾಯುವವರೇ ಕೊಲ್ಲಲು ಹೊರಡುವರೆ? ತಾಯಿಯೇ ರಕ್ಕಸಿಯಾದಳು; ಕರುಳೇ ಹಾವಾಗಿ ಕೊರೆದು ತಿನ್ನುತ್ತದೆ? ಉಂಡ ಕೂಳು ಕಚ್ಚಿಕೊಲ್ಲುತ್ತದೆ, ಕುಡಿದ ನೀರು ವಿಷವಾಯಿತು. ಮುಂಜೂರಲ್ಲಿಯ ಕಿಚ್ಚು ಎದ್ದಿತು; ಕಣ್ಣ ನೀರು ಕತ್ತರಿವಾಣಿಯಾಯಿತು. ಬಸಿರು ಬರಿದಾಗುವಂತೆ ಹೆತ್ತು ಮಗನ ಮುಖಕಾಣದೆಹೋದೆನು. ಒಂಬತ್ತು ತಿಂಗಳು ಬತ್ತಿ ಬಾಳುಕವಾಗಿ ಹೊತ್ತ ಬೇನೆಯನ್ನು ಹೆತ್ತ ಬೇನೆಯನ್ನೂ ಸತ್ತ ಬೇನೆಯನ್ನೂ ಇನ್ನು ನಾನು ತಿನ್ನಲಾರೆ. ನೀವಿನ್ನು ನನ್ನ ದುಃಖವನ್ನು ಪರಿಹರಿಸಿ, ಇಲ್ಲವೆ ನನ್ನ ತಲೆಯನ್ನು ಕತ್ತರಿಸಿಬಿಡಿ" ಎಂದು ಕೆದರಿದ ತಲೆಯಿಂದಲೂ ಬತ್ತಿದ ಬಾಯಿಂದಲೂ ಕೂಡಿ ಹುಚ್ಚಿದ್ದು, ಬಾಯ್ತೆರೆದು ಅಳುವ ದೇವಕೀದೇವಿಗೆ ಅವರೆಂದರು - "ಏಳು, ಏಳು ಅಂತಹದೇನೂ ಆಗಿಲ್ಲ, ಶಾಂತಂಪಾಪಂ, ಯಾವ ಕೆಡುಕೂ ಆಗಿಲ್ಲ. ಹೇಗೆಂದರೆ, ಕೇಳು ನೀನು ಹೆತ್ತೊಡನೆ ನಿನ್ನ ಮುಂದೆ ಮಾಯಾಶಿಶುವನ್ನಿಟ್ಟು. ನಿನ್ನ ನಿಜವಾದ ಮೂರು ಅವಳಿಗಳನ್ನು ಎತ್ತಿಕೊಂಡು ಹೋಗಿ ನೈಗಮದೇವನು, ತಾನೇ ದಾದಿಯಾಗಿ ಅಮೃತವನ್ನುಣಿಸಿ, ಸಾಕಿಸಲಹಿರುವನು. ಸುಳಿಗಾಳಿಯಲ್ಲಿ ಅಲುಗಾಡುವ ಚಂದನದ ಚಾಮರದಿಂದ ಸುಗಂಧಮಯವಾದ ಗಿರಿಶಿಖರದಲ್ಲಿ ಉನ್ನತವಾದ ಸೌಧದಲ್ಲಿ, ನಿನ್ನ ಮಕ್ಕಳು ಬಲಿಷ್ಠರಾಗಿ ಬೆಳೆಯುತ್ತಿರುವರು. ಚಾಣೂರನ ಸೊಕ್ಕು ಮುರಿಯುವ, ಮುರರಾಕ್ಷಸನೆಂಬ ಪರ್ವತಕ್ಕೆ ವಜ್ರವಾಗುವ ಕಂಸನನ್ನು ಕೇಶಿಯನ್ನೂ ಕೊಂದುಹಾಕುವ ಜರಾಸಂಧನೆಂಬ ಮದವೇರಿದ ಆನೆಗೆ ಸಿಂಹನಾಗಿ ಬರುವ ಇನ್ನೊಬ್ಬ ಶೂರನಾದ ಮಗನನ್ನು ನೀನು ಹಡೆಯುವೆ. ಹೀಗಿರುವಾಗ ತಾಯೆ,

---

೧ ದ (ಕಾ). ೨ ರ್ಮಂ (ಕ), ೩ ರ್ಪ (ಕಾ). ೪ + ನಲ್ಲಾ (ಮ). ೫ ಗೆ (ಕಾ). ೬ X (ಕ, ಪ), ಪೊತ್ತ ಬೇನೆಯುಂ (ಕಾ). ೭ ನೀಗ (ಕ, ಮ, ಪ). ೮ ನ್ನ (ಕ, ಮ, ಪ). ೯ ರಿ (ಪ). ೧೦ ಪಿಱಿ (ಕಾ). ೧೧ ಲಣ್ಮ (ಕಾ). ೧೨ ಯೆನಲದೆ (ಕ), ಗೆನಲದೇ (ಪ), ಯನದೇ (ಮ). ೧೩ ಮು (ಕ), ಮಂ (ಮ), ಮುಂ (ಕಾ). ೧೪ ನೀನೆ (ಕಾ). ೧೫ ಮುಂದೆ (ಕ, ಪ) X (ಕಾ). ೧೬ ಕ್ಕ (ಕ, ಮ, ಪ). ೧೭ ದಾನಿಯಾಲ (ಕ), ತಾನೆಯಾ ಅ (ಪ).

ಗಿರಿಕೂಟೋನ್ನತ[೧]ಸೌಧದೊಳ್ಬೆಳೆದಪರ್ವಿ[೧]ಶ್ವಂಭರಾಖಂಡದಂ
ತಿರೆ ನಿನ್ನಾತ್ಮಜರಿ[೨]ನ್ನುಮೊರ್ವನದಟಂ ಚಾಣೂರದರ್ಪಾಪಹಂ
[೩]ಮುರ[೩]ಶೈಲಾಶನಿ ಕಂಸಕೇಶಿ[೪]ಮಥನಂ ಮಾದ್ಯಜ್ಜರಾಸಂಧ ಸಿಂ
ಧುರಸಿಂಹಂ ನಿನ[೫]ಗಾದಪಂ ಮಗನಿದರ್ಕೇಕಬ್ಬ[೫]ನಿಮ್ಮುಬ್ಬೆಗಂ ೩೬

ವ|| ಆತನುಂ ತ್ರಿಖಂ[೬]ಡಮಂಡಳಾ[೬]ಧಿಪತಿಯಾದಪನೆಂದು ದೇವಕಿ[೭]ಯ ದುಃಖ ದಹನದ ಮೋಗೆ[೮] ದಯಾರಸಮುಮಂ ವಚನವಾರಿಯುಮನತಿಮುಕ್ತಕಂ[೯] ಪೊಯ್ದು ಪೋದನ[೧೦]ತ್ತ[೧೧]ಮಿತ್ತ[೧೧] ಕೆಲವಾನುಂ [೧೨]ವಾಸರ[೧೨]ಕ್ಕೆ

ಒದವಿದ ಲತೆಗಂಕುರ ಗ
ರ್ಭದ ಚಿಹ್ನಂ ಮೂಡುವಂದದಿಂ ದೇವಕಿಗು
ರ್ವಿದ ಗರ್ಭ[೧೩]ದ ಚಿಹ್ನಂ ಮೂ
ಡಿದುದಾ ಕಂಸಂಗೆ ಮಿಟ್ತು ಮೂಡುವ ತೆಱದಿಂ ೩೭

ಅಸುರರ [೧೪]ಮುಖ[೧೪] [೧೫]ದವೊಲ[೧೫]ಸಿಯಳ
ಮಿಸುಪ ಕುಚದ್ವಯಮುಖಂ ಕಱಂಗಿದುದವಳೊ
ಳ್ವಸಿಱ ವಳಿರೇಖೆಗೆಟ್ಟುವು
ನೊಸಲಕ್ಷರ ರೇಖೆಯೊಡನೆ ಮಧುರಾಧಿಪನಾ ೩೮

ದಿಕ್ಕರಿವೋಲ್ ಕೃಷ್ಣಂ ಮುಱಿ
ದಿಕ್ಕೆ[೧೬] ನೆಲಕ್ಕಾರ್ದು ಬಿಟ್ಟು[೧೭] ಕಂಸಂ ಮಣ್ಣಂ
ಮುಕ್ಕಿದಪನೆಂದು ಪೇೞ್ದಪ
ಳಕ್ಕುಮೆ ವಸುದೇವನರಸಿ ಮಣ್ಣಂ ಮೆಲ್ದಳ್ ೩೯

ಇದಕ್ಕೇಕೆ ಇಷ್ಟು ಉದ್ವೇಗ ನಿನಗೆ ?

ವ|| ಆತನು ತ್ರಿಖಂಡ ಮಂಡಲಕ್ಕೆ ಅಧಿಪತಿಯಾಗುವನು" - ಹೀಗೆಂದು ತಿಳಿಸಿ ದೇವಕಿಯ ದುಃಖಾಗ್ನಿಯಮೇಲೆ ದಯಾರಸವನ್ನು ವಚನರಸವನ್ನುಸುರಿದು ತಾಪವನ್ನು ಆರಿಸಿ ಅತಿಮುಕ್ತಕಮುನಿ ಹೋದನು. ಇತ್ತ ಕೆಲದಿನಗಳಾದ ಮೇಲೆ -

೩೭. ಬಳ್ಳಿಯಲ್ಲಿ ಅಂಕುರದ ಚಿಹ್ನೆ ಮೂಡುವಂತೆ ದೇವಕಿಗೆ ಗರ್ಭಚಿಹ್ನೆ ಮೂಡಿತು. ಅದು ಕಂಸನಿಗೆ ಮೃತ್ಯು ಮೂಡಿದಂತೆಯೆ ಇತ್ತು.

೩೮. ರಾಕ್ಷಸರ ಮುಖಗಳ ಹಾಗೆ ಆ ಚೆಲುವೆಯ ಮೊಲೆದುದಿಗಳು ಕಪ್ಪೇರಿದುವು. ಮಧುರಾಧಿಪನ (ಕಂಸನ) ಹಣೆಬರದೊಡನೆ ಆಕೆಯ ಬಸಿರಮೇಲಿನ ಏಳುರೇಖೆಗಳು ಅಳಿಸಿಹೋದುವು.

೩೯. ದಿಗ್ಗಜನಂತೆ ಕೃಷ್ಣನು ಬಂದು ಮುರಿದಿಡಲಾಗಿ ಕಂಸನು ಮಣ್ಣು

೧ ಮಪ್ಪ ಸೌಧತಳದೊಳ್ವಿ (ಕ, ಪ). ೨ ರು (ಕಾ). ೩ ಮರು (ಕಾ). ೪ ಶಿ (ಕ, ಮ, ಪ). ೫ ಗಾಂ ಪವಂಗನಿನಿದಕ್ಕೇಕಕ್ಕ (ಕ), ಗಾದಪಂ ಮಗನಿದೇಕಕ್ಕ (ಮ), ಗಾದಪಂ ಮಗನಿದಕ್ಕೇಕಕ್ಕ (ಪ). ೬ ಡಾ (ಕಾ). ೭ + ದೇವಿ (ಕಾ). ೮ ಲೆ (ಕ, ಮ, ಪ). ೯ ರುಂ (ಕಾ). ೧೦ ರ (ಕಾ). ೧೧ ಮತ್ತಂ (ಕಾ). ೧೨ ದಿವಸ (ಕಾ). ೧೩ ರ್ವ (ಕ). ೧೪ ಮಾಖ (ಕ). ಮೊಗ (ಪ). ೧೫ ದೊಳ್ಮ(ಮ), ದವೊಲ (ಪ). ೧೬ ಕ್ಕ (ಕಾ). ೧೭ ರ್ದು (ಕ, ಪ), ರ್ದ (ಮ).

ತವಕದೆ ಕಂಸಂ ಕೆಯ್ನೀ
ಡುವನಾದೊಡೆ ನುಂಗಲೆಂದು ಗುರುಗರ್ಭನಿಧಾ
ನವನೇಜೆ ಕಾವ[೧] ಕಾಳಾ
ಹಿವ್ರೊಲಿರ್ದುದು ರೋಮರಾಜಿ ರಾಜಾತ್ಮಜೆಯಾ ೪೦

ಸಿಂಧು ಪರೀತ ಭೂತಳಮನೀಟ್ಟುಕೊ[೨]ಳಲ್ಕರಚಕ್ರದಿಂ ಜರಾ
ಸಂಧನ ಕಂಠಮಂ ಕೆಡೆಯೆ ಕೇಶವನಿಟ್ಟಪನೆಂದು ತೋರ್ಪವೋ
ಲ್ಗಂಧಗಜೇಂದ್ರಯಾನೆ ಕಡುಮೇಳದ ಕುಬ್ಜಕಿರಾತರಾ ನಮ
ತ್ಕಂಧರಮಂ ಕರಂ ತಿರಿಪಿ ಕಂಕಣದಿಂದಿಡುವಳ್ ವಿನೋದದೊಳ್ ೪೧

ವ|| ಆ ಗರ್ಭಶಾಂತಿಕಕ್ಕೆ ಶಾಂತ್ಯುದಕಮಂ ತಳಿವಂತೆ

ಅಲರ್ವಲರ್ಗೊಂಚಲಂತಲುಗೆ ಮಿಂಚು ಪಿಕಂ ನಲಿವಂತೆ ಚಾತಕಂ
ಜಲಕಣಯಷ್ಟಿಯೊಳ್ಕ[೩]ಳಿಕೆಗ[೩]ರ್ಚೆ ಕರಂ ಸೊನೆ ಸೋರ್ವ ಭಂಗಿಯಿಂ
ಬಲವರೆ ಸೋನೆ ಗೊಂ[೪]ದಣಿ[೪]ಸಿ[೫] ಕೆಂದಳಿರೊಳ್ಗಿಳಿವಿಂಡು ಪಾಯ್ದುದಂ
ಸಲಿಸೆ ಸುರೇಂದ್ರಚಾಪಲತೆ ಬಂದುದು ಕಾರೆಳಮಾವಿನಂದದಿಂ ೪೨

ವ|| ಆ ಮೞೆಗಾಲದೊಳಭಿಷೇಕದೊಳಭಿಮತಮಂ ದಾನದೊಳ್ ಧನಮಂ ಪೂಜೆಯೊಳ್ಪೊಟ್ಟಿಂ ಕಟ[೬]ಯುತ್ತುಮಿರ್ದಾ ಪುಣ್ಯಸತಿಯ ಪುಣ್ಯದಂತೆ ಪುಣ್ಯ[೭]ಯತಿಗಳಂ[೮]ತೆಳದಿಂ[೮] ಗಳ್ತೀವೆ ಕಂಸ[೯]ಭಯದಿಂ[೧೦] ಗರ್ಭಂ ಕಲಂಕಿದಂತೆ ಬಸಿರ್ಮ[೧೧]ಸಗೆ[೧೧] ತನ್ನ ತನಯಂ ಭದ್ರಪದನಕ್ಕುಮೆಂಬುದು ಪೇೞ್ವಂತೆ

ಮುಕ್ಕುವನೆಂದು ಹೀಗೆ ಸೂಚಿಸುತ್ತಿರುವಳೊ ಏನೊ ಎಂಬಂತೆ ವಸುದೇವನ ರಾಣಿ ಮಣ್ಣನ್ನು ತಿಂದಳು.

೪೦. ಕಂಸನು ಕೈಚಾಚಿದರೆ ಅವನನ್ನು ನುಂಗುವೆನೆಂದು ಆಕೆಯ ಗರ್ಭನಿಕ್ಷೇಪವನ್ನು ಕಾಯಲುನಿಂತ ಕಾಳಸರ್ಪನೋ ಏನೋ ಎಂಬಂತೆ ರಾಜಪುತ್ರಿಯ ಬಾಸೆಯ ಕೂದಲ ಸಾಲು ಕಂಗೊಳಿಸಿತು.

೪೧. ಸಮುದ್ರಪರ್ಯಂತವಾದ ಭೂಮಿಯನ್ನು ಕಿತ್ತುಕೊಳ್ಳಲು ಜರಾಸಂಧನ ಕೊರಳನ್ನು ಕತ್ತರಿಸುವ ತನ್ನ ಕೈ ಚಕ್ರವನ್ನು ಬೀಸುವನೆಂದು ಬಾಗಿನಿಂತ ಕುಬ್ಜಕಿರಾತರ ಕೊರಳನ್ನು ತನ್ನ ಕೈಕಡಗಗಳಿಂದ ಬಡಿದು ವಿನೋದಪಡುವಳು.

ವ|| ಆ ಗರ್ಭಕ್ಕೆ ಶಾಂತಿ ಮಾಡಲು ಶಾಂತಿ ಜಲವನ್ನು ತಳಿಯುವಂತೆ -

೪೨. ಅರಳು ಹೂಗಳ ಗೊಂಚಲಂತೆ ಮಿಂಚನ್ನು ಜಳಪಿಸುತ್ತ, ಕೋಗಿಲೆಗಳು ಕುಡಿಕಚ್ಚಿ ನಲಿಯುವಂತೆ ಚಾತಕಗಳು ಮಳೆಹನಿಗಳನ್ನು ಕುಟುಕಿ ಸಂತೋಷಪಡುತ್ತಿರಲಾಗಿ, ಸೊನೆ ತಟಕಿಕ್ಕುವಂತೆ ಸೋನೆ ಮಳೆ ಸುರಿಯುತ್ತಿರಲಾಗಿ, ಕೆಂಪು ತಳಿರೊಳಗೆ ಗಿಳಿ ಹಿಂಡು ಹಾಯ್ದಂತೆ ಕಾಮನಬಿಲ್ಲು ತೋರುತ್ತಿರಲಾಗಿ ಎಳೆಯ ಮಾವಿನ ಮರವೊ ಏನೊ ಎಂಬಂತೆ ಮಳೆಗಾಲ ಒದಗಿ ಬಂದಿತು.

---

೧ ಮ (ಕಾ). ೨ ಬಿ (ಕಾ). ೩ ಳಿಗಳ (ಕ). ೪ ಚಲಿ (ಕ, ಮ, ಪ). ೫ + ದಣ್ಣಿಸಿ (ಕ, ಮ). ೬ ಳೆ (ಕಾ). ೭ + ಮುಂ (ಕಾ). ೮ ಕಳೆದಿಂ (ಕ), ಕೇಳೆ ತಿಂ (ಪ). ೯ ಸಂ (ಕ). ಸನ (ಮ). ೧೦ ದೆ (ಕ, ಪ). ೧೧ ಸೆಗೆ (ಕ). ಸಗಿ (ಕಾ).

ಭಾದ್ರಪದದೊಳ್ [೧]ಮುಳಿ[೧]ಯಿಸಿದರ್ಗೆ ಪ್ರಳಯಕಾಳನಕ್ಕುಮೆಂಬುದನಱಿಪು ವಂತೆ ಕಾಳದೊಳ್ ದುಷ್ಟಚತುಷ್ಟಯಕ್ಕಷ್ಟಮ[೨]ಚಂದ್ರ[೩]ನಂತಕ್ಕುಮೆಂಬುದಂ ನಿವೇದಿಸುವಂತಷ್ಟಮಿಯೊಳರ್ಧ ಚಕ್ರವರ್ತಿಯಕ್ಕುಮೆಂಬುದಂ ಸೂಚಿಸುವಂತರ್ಧರಾತ್ರದೊಳ್

ಅಳಿಯಂ ಪದ್ಮಿನಿ ವಾರ್ಧಿವೇಳೆ ವಿಷಮಂ ಕಸ್ತೂರಿಯಂ ಪುಲ್ಲೆ ಕ
ಜ್ಜಳಮಂ ದೀಪಿಕೆ ಕಾಳರಾತ್ರಿ ತಮಮಂ ನೀಲಾಶ್ಮಮಂ[೪]ರೋಹಣ
ಸ್ಥಳಿ ಭೂದೇವಿ ತಮಾಳಮಂ ಪಡೆದವೋಲ್ನಾನಾಹಿ[೫]ತಾಂಕೂಗಳರ ಕಂ
ದಳನಂ ದೇವಕಿ ಲೀಲೆಯಿಂದೆ ಪಡೆದಳ್ಕಂಸೋಷ್ಣ[೬]ನಂ ಕೃಷ್ಣನಂ ೪೩

ವ|| ಆ ಪ್ರಸ್ತಾವದೊಳ್ ಕಂಸನ[೭]ಜಿಗುಮೇಂ[೭] ಬದ್ದೆವೆಂ[೮]ದು ಬದ್ದವಣಂ ಬಾಜಿಸುವ ದೇವದುಂದುಭಿಧ್ವನಿಗಳೊಳ್ ಘನಾಘನಧನಿಗಳ್[೯]ಡಂಗಲಿ[೧೦]ಸೆ ದೇವಕಾಂತೆಯರ್ನಿವ[೧೧]ಳಿಸುವ ಮಂಗಳದೀಪಮಂಜರೀಮರೀಚಿಗಳೊಳ್ ಮಿಂಚಿನ ಗೊಂಚಲ್ಗಳೊಡಗಲಿ[೧೨]ಸೆ ಸೂಸುವ ಮುತ್ತಿನ ಸೇಸೆಗಳೊಳಾಲಿಕಲ್ಗಳ್ಕಾರೆಗ[೧೩]ಲಿಸೆ[೧೩] ಕೊಳ್ವ ಮಟಿಯೊಳಾನಂದಬಾಷ್ಪವರ್ಷಮಡಂಗಿ ಪೋಗೆ ಸಮಸ್ತ ತ್ರೈಲೋಕ್ಯಕ್ಕಮಧಿಕೋತ್ಸವಂ ಪುಟ್ಟೆ[೧೪]

ವ|| ಆ ಮಳೆಗಾಲದಲ್ಲಿ ಅಭಿಷೇಕದಲ್ಲಿ ಆಸಕ್ತಳಾಗಿ ದಾನದಲ್ಲಿ ಧನವನ್ನೂ ಪೂಜೆಯಲ್ಲಿ ಹೊತ್ತನ್ನೂ ಕಳೆಯುತ್ತಲಿದ್ದ ಆ ಪುಣ್ಯಸ್ತ್ರೀಯ ಪುಣ್ಯದಂತೆ ತಿಂಗಳು ತುಂಬಲಾಗಿ, ಭಯದಿಂದ ಕಂಸನ ಗರ್ಭ ಕಲಕುವಂತೆ ಬಸಿರು ವಿಜೃಂಭಿಸಿ,ತನ್ನ ಮಗನು "ಭದ್ರಪದ" (ಸ್ಥಿರವಾದ ನೆಲೆಯುಳ್ಳವ)ನೆಂಬುದನ್ನು ತಿಳಿಸುವಂತೆ ಭಾದ್ರಪದದಲ್ಲಿ, ಕೆರಳಿಸಿದವರಿಗೆ ಪ್ರಳಯರುದ್ರನಾಗುವನೆಂಬುದನ್ನು ತೋರುವಂತೆ ರಾತ್ರಿಯಲ್ಲಿ, ದುಷ್ಟಸಮೂಹಕ್ಕೆ ಅಷ್ಟಮೀಚಂದ್ರನಂತಾಗುವನೆಂದು ಹೇಳುವಂತೆ ಅಷ್ಟಮೀ ತಿಥಿಯಲ್ಲಿ, ಅರ್ಧಚಕ್ರವರ್ತಿಯಾಗುವನೆಂಬುದನ್ನು ಸೂಚಿಸುವಂತೆ ಅರ್ಧರಾತ್ರಿಯಲ್ಲಿ -

೪೩. ತಾವರೆ ದುಂಬಿಯನ್ನು, ಕಡಲು ತಾವರೆನಾಳವನ್ನೂ (ಕಸ್ತೂರಿ) ಮೃಗವು ಕಸ್ತೂರಿಯನ್ನೂ ದೀವಿಗೆ ಕಾಡಗೆಯನ್ನೂ ಕಾಳರಾತ್ರಿ ಕತ್ತಲೆಯನ್ನೂ ರೋಹಣಗಿರಿ ಕೀಲರತ್ನವನ್ನೂ, ಭೂದೇವಿ ಹೊಂಗೆಮರವನ್ನೂ ಪಡೆಯುವಂತೆ, ಅನೇಕವೈರಿಗಳ ಶಿರಚ್ಛೇದಕನೂ ಕಂಸನಿಗೂ ಕ್ರೂರನೆನಿಸುವನೂ ಎನಿಸಿದ ಕೃಷ್ಣನನ್ನು ದೇವಕಿ ಸಂತೋಷದಿಂದ ಹೆತ್ತಳು.

ವ|| ಆ ಸಮಯದಲ್ಲಿ ಕಂಸನಿಗೆ ತಿಳಿಯಬಾರದೆಂದು ಉತ್ಸವಕ್ಕಾಗಿ ನುಡಿಯುವ ದೇವದುಂದುಭಿ ಧ್ವನಿಗಳಲ್ಲಿ ಮೋಡಗಳ ಗುಡುಗಿನ ಧ್ವನಿ ಸಮಸಮನಾಗಿ ಕೂಡಿಕೊಂಡಿತು; ದೇವತಾಸ್ತ್ರೀಯರು ನಿವಾಳಿಸುವ ಮಂಗಳ ದೀಪಮಾಲೆಗಳಲ್ಲಿ ಮಳೆಗಾಲದ ಮಿಂಚುಗಳ ಗೊಂಚಲುಗಳೂ ಸೇರಿಕೊಂಡುವು; ಸೂಸುವ ಮುತ್ತಿನ ಸೇಸಗಳಲ್ಲಿ ಆಲಿಕಲ್ಲುಗಳು

---

೧ ವುಳಿ (ಮ), ಮುಳು (ಕಾ). ೨ ಮೀ (ಮ). ೩ + ಮ (ಕ, ಮ). ೪ ಮಾ (ಕಾ). ೫ ತಂ ಕ್ರೂ (ಮ). ೬ ಷ (ಕಾ). ೭..... (ಕಾ). ೮ ಮೆಂ (ಕಾ). ೯ ಳ (ಕ). ೧೦ ರಿ (ಕ). ೧೧ ವಾ (ಮ). ೧೨ ರಿ (ಕ). ೧೩ ಲಸಿ (ಕ, ಪ), ಲಸೆ (ಮ). ೧೪ + ಕಂಡು (ಮ).

ಸೊಡರ್ವೆಳಗಂ ಮುಸುಕಿದನಾ
ಗಡೆ ತನ್ನಯ ತನು ತಮಾಳರುಚಿಯಿಂದಂ ಮೇ
ಲ್ಗಿಡೆದೆತ್ತಾನುಮ[1]ವೇಟ್ಟಿಂ
ದೊಡೆ ಕಂಸಂ ಕಾಣ್ಗುಮೆಂಬ ತೆಱದಿಂ ಕೃಷ್ಣಂ ೪೪

ವ॥ ಆತಂ ಕಾರಣಪುರುಷನಪ್ಪ ಕಾರಣದಿಂ ಸಹಜಘನಸಂಹನನನಾಗಿ ಸಾಮಾನ್ಯ ಶಿಶುವಿನಂತೆ ಕಲಲಚ್ಛಾಯನಾಗದೆ ಪರಿಣತಚ್ಛಾಯೆ [2]ನಿಟ್ಟು[2] ನಿಲೆ ನೀಲಶಲಾಕೆಗೆ ಜೀವಂಬೊ[3]ಯ್ದಂತಿರ್ದ ಕೃಷ್ಣ[4]ಮೂರ್ತಿಯಂ ಕಣ್ತೀವಿ ಕಾಣಲ್ಪಡೆದು ಕುರುಡಂ ಕಣ್ಬಡೆದಂತಾಗಿ[5] ನಿಧಾನಮನೆತ್ತಿಕೊಳ್ವ[6]ವೋಲಿರುಳು ಮೆಯ್ಯೊಳ್ ಬೇಗಮೆತ್ತಿಕೊಂಡು ಕೆಯ್ಯಿಂ[7] ಪಿಡಿವಂತೆ ಪದುಳಮಾಗಿ[8] ಪಿಡಿದು ವಸುದೇವಂ ವಾಸುದೇವನಂ[10] ಪೊಱಮಡಿಸಿ ಕಾಳಿಂದಿಯೊಳೋಲಾಡಲ್ಕಲಿಸುವಂತೆ ಕಾಳದ ಕಟ್ಟಲೆಯೊಳ್ ತಳಂಗಳೊಳ್ತಳೆದು[11] ತಳರ್ವಾಗಳ್ ಮುಕುಂದನ ಮೇಲೆ[12] ನಾಗಂ[13]ಸಹಜಸ್ನೇಹ ಸಂಭ್ರಮದಿನೇಟ್ಟಿಂದು ನೀಲವಸನಮಂ ಮುಸುಂಕಿಕೊಂಡೇಕಕುಂಡಳನೋ[14]ಲೆಯ ಕೊಡೆವಿಡಿದು ತಾಳಧ್ವಜನಾಗಿ ತೋಱೆ ಪುರುಷೋತ್ತಮನ ಪುಣ್ಯಪ್ರೇರಣೆಯಿಂ ತನ್ನ ಮೇಲೆ ಕಾಲೂಱಲಂ[15]ಜಿದಂತೆ ಜೀಮೂತವ್ರಾತವಾಸಾರಮನುಡುಗಿ ಕಟ್ಟ[16] ಕು[17]ಡುಮಿಂಚಿನ ಕೆಯ್ದೀವಿಗೆವಿಡಿದು ಮುಗಿಲ್ಗಳ್ ಮುಂದುಱು[18]ವರಿಯೆ ಹರಿವ ಪೊನಲ್ಗಳ್ ಪಡಿಯಱರಾಗಿ[19] ಮಾರ್ಗಂಬಿಡಿದು ನಡೆಯಿಸೆ[20] ತಮ್ಮೊಡವೆಗೆ ತಾವೆ ಕಳ್ಳರಾಗಿ ಗಳಗಳಿಸಿ ಪೋಗಿ ಪೆರ್ವಾಗಿಲಂ ತಾಗೆವಂ[21]ದು ಬಿಯ[22]ಗಮಿಕ್ಕಿ

ಬೆರಸಿಕೊಂಡು ಸುರಿದುವು; ಸುರಿಯುತ್ತಿರುವ ಮಳೆಯಲ್ಲಿ ಆನಂದಬಾಷ್ಪಗಳು ಅಡಗಿ ಹೋದುವು; ಹೀಗೆ ಮೂರು ಲೋಕಗಳಿಗೆ ಅತ್ಯಧಿಕವಾದ ಉತ್ಸವವಾಗಲಾಗಿ.

೪೪. ಎಲ್ಲಿಯಾದರೂ ಕಂಸನು ಬಂದು ಕಾಣಬಾರದೆಂದೋ ಏನೊ ಕೃಷ್ಣನು ತನ್ನ ದೇಹದ ನೀಲಕಾಂತಿಯಿಂದ ದೀಪದ ಬೆಳಕನ್ನು ಮುಸುಕಿಬಿಟ್ಟನು.

ವ॥ ಆತನು ಕಾರಣಪುರುಷನಾದುದರಿಂದ ಸಹಜವಾದ ದೃಢದೇಹಬಂಧವುಳ್ಳವನಾಗಿದ್ದು, ಸಾಮಾನ್ಯಶಿಶುವಿನಂತೆ ಮಾಸಲು ವರ್ಣವಾಗಿರದೆ, ಸಹಜವಾದ ಸ್ಥಿರಕಾಂತಿಯನ್ನು ಹೊಂದಿದವನಾಗಿದ್ದನು. ನೀಲರತ್ನದ ಶಲಾಕೆಗೆ ಜೀವ ತುಂಬಿದಂತಿದ್ದ ಆ ಕೃಷ್ಣಮೂರ್ತಿಯನ್ನು ಕಣ್ತುಂಬ ನೋಡುವ ಭಾಗ್ಯವನ್ನು ಪಡೆದ ವಸುದೇವನು, ದೃಷ್ಟಿಶಕ್ತಿಯನನು ಪಡೆದ ಕುರುಡನಂತೆ (ಹಿಗ್ಗಿ), (ನೆಲದಲ್ಲಿ ದೊರೆತ) ನಿಧಿಯನ್ನು ಎತ್ತಿಕೊಳ್ಳುವಂತೆ, ರಾತ್ರಿಯಲ್ಲಿಯೆ ಜಾಗ್ರತೆಯಾಗಿ ಆ ಕೂಸನ್ನು ಎತ್ತಿಕೊಂಡು, ಮೃದುವಾಗಿ ಹಿಡಿದುಕೊಂಡು ಹೊರಗೆ ತಂದು, ಯಮುನಾನದಿಯಲ್ಲಿ ಈಜಾಡುವುದನ್ನು ಕಲಿಸುವಂತೆ ಕಗ್ಗತ್ತಲೆಯಲ್ಲಿ ಅಂಗೈಯಲ್ಲಿಟ್ಟುಕೊಂಡು ನಡೆಯುತ್ತಿರುವಾಗ ಬಲರಾಮನು ಓಲೆ ಕೊಡೆ ಹಿಡಿದುಕೊಂಡು 'ತಾಳಧ್ವಜ' (೧. ತಾಳೆಗರಿಯ ಕೊಡೆ ಹಿಡಿದವನು, ೨. ತಾಳವೃಕ್ಷ ಚಿಹ್ನೆಯ ಧ್ವಜವುಳ್ಳವನು)ನಾಗಿ ತೋರಿದನು. ಪುರುಷೋತ್ತಮ (ಕೃಷ್ಣ)ನ ಪುಣ್ಯ ಪ್ರಭಾವದಿಂದ, ಅವನ ಮೇಲೆ ಕಾಲೂರಲು ಅಂಜಿದಂತೆ ಮೋಡಗಳು ಮಳೆ ಸುರಿವುದನ್ನು ನಿಲ್ಲಿಸಿ, ಕುಡಿಮಿಂಚಿನ ಕೈದೀವಿಗೆ ಹಿಡಿದು ಆಳಿನಂತೆ ಮುಂದೆ ನಡೆದುವು. ಹರಿಯುತ್ತಿರುವ ಪ್ರವಾಹಗಳೆ ಪ್ರತೀಹಾರಿಗಳಾಗಿ, ಹಾದಿಹಿಡಿದು ನಡೆಯಿಸಿದುವು. ವಸುದೇವ ಹಾಗೂ ಬಲರಾಮ ಇಬ್ಬರೂ ತಮ್ಮ ಒಡವೆಗೆ

---

೧ ಮೆ (ಕಾ). ೨ ನಟ್ಟ (ಕ, ಮ). ನಟ್ಟು (ಪ). ೩ ಪೊ (ಕ). ೪ + ನ (ಕಾ). ೫ ಗೆ (ಮ). ೬ ಳ್ವಾಕೆ (ಕಾ). ೭ ಯ್ಯಿಂ (ಕಾ, ಮ). ೮ ಗೆ (ಕಾ). ೯ ವ (ಕಾ). ೧೦ ನ (ಕಾ). ೧೧ ದಂ (ಕ, ಪ). ೧೨ ಗೆ (ಕಾ). ೧೩ ಗಂ (ಪ). ೧೪ ಮೋ (ಕಾ). ೧೫ ಲಂ (ಕಾ). ೧೬ ಟ್ಟೆ (ಕಾ). ೧೭ ಕ (ಕ). ೧೮ ರು (ಪ). ೧೯ ಗೆ (ಕಾ). ೨೦ ಸಿ (ಕ, ಪ). ೨೧ ಪೊಂ (ಕ, ಪ). ೨೨ ಯ್ಯ (ಕ, ಪ).

[೧]ಚಿಕ್ಕುಟುಂ[೧] ನುಸುಳಲ್ಬಾರದಂತಾಗಿ ಬಿಗಿಯೆ ಕೆತ್ತಿರ್ದ[೨] ಕರ್ಬುನದ [೩]ಪೆರ್ವ[೩]ಡಿಗಳಂ ಕಂಡಿರ್ವರುಮಿನ್ನೇ [೪]ವೆಮೆಂ[೪]ದುಮ್ಮ[೫]ಳಿಸಿ ಮಮ್ಮಲಿಗೊಳುತ್ತುಮಿರ್ಪನ್ನೆಗಂ ಸ್ವರ್ಗೌಕಸರ ಸಯ್ಪಿನಿಂ ಸಗ್ಗದ ಪಡಿಗಳ್ತೆಱೆ[೬]ವ ತೆಱದಿನಾ ಶಕಟಘರ[೭]ಟ್ಟನುಂಗಷ್ಠಂ[೭] ಮುಟ್ಟ ಮುಟ್ಟಲೊಡನೆ [೮]ಕೆತ್ತ[೮] ಪಡಿಗಳ್ತಮಗೆ ತಾಮೆ ತೆಱೆ[೬]ಯೆ ಬೆಱ[೯]ಗಾಂತ್[೯] ಬಾಗಿಲ್ಗಾಪಿನ ಜಾವದುಕ್ಕಡದ ಘರವ ಟ[೧೦]ಗೆಯ ಠಾಣಾಂತರದವರೆಲ್ಲಮೆರಡು ಕೆಯ್ಯನೆತ್ತಿ ಪುಂಡರೀಕಾಕ್ಷಂಗೆ ಪೊಡೆವಟ್ಟು ಮಾಟದ ಮಾನ[೧೧]ಸರಂತೆ ಮಿಳುಮಿಳುನೆ ನೋಡು[೧೨]ತ್ತುಮಿರೆ[೧೨] ಮಾರಿಯ ಬಾಯಂ ಪೊಱಮಡುವಂತೆ ಮಧುರೆಯ ಬಾಗಿಲಂ ಪೊಱಮಟ್ಟು ಬಟ್ಟೆಗಾಣದೆ ದಿಗ್ಮೂಢರಾಗಿ ನಿಲಲುಂ ಸರಸರಿಸಿ ಪೋಗ [[೧೩]ಲುಮ[೧೩]] ಱಿಯದೆ ಕುಱುಕುಱು ಮೆಟ್ಟುತ್ತುಮಿರ್ಪಿನಂ

ಪೆಡೆವಣಿಯ ಫಣಿಗಳಂತಿರೆ
ಸೊಡರಂ ಪೊತ್ತೆರಡು ಕೋಡು ಕೆ[೧೪]ಲೆದೇಂ[೧೪] ಮುಂದಂ
ನಡೆದುದು ಧವಳ [೧೫]ವೃಷಂ[೧೫] ಮಾ
ರ್ಗಡೆಯಂತಿರೆ ನಾಲ್ಕು ಕಾಲ ಫಣಿಭೀಷಣಮಂ ೪೫

ವ॥ ಆ ಜ[೧೬]ಲದುಜ್ವಲದೀಪಕಳಿಕಾಂಕುರಿತ ವಿಷಾಣನಪ್ಪ ವೃಷಭನ ಬೆನ್ನನೆ ಪತ್ತಿ ಪೋಗೆವೋಗೆ

ಇದು ನೀಲಾಂಭೋದಜಾಳಂ ಪರಿದಪುದೊ ಮಹೀಭಾಗದೊಳ್ ವಾಮನೋದ್ಯ

ತಾವೇ ಕಳ್ಳರಾಗಿ ಗಡಬಡಿಸಿ ಹೋಗಿ ಹೆಬ್ಬಾಗಲ ಬಳಿಗೆ ಬಂದರು. ಬೀಗ ಜಡಿದು ಬಂದು ಚಿಕ್ಕಾಡು ಕೂಡ ನುಸುಳಲಾಗದಂತೆ ಬಿಗಿಯಾಗಿ ಮುಚ್ಚಿದ ಕಬ್ಬಿಣದ ಘನವಾದ ಬಾಗಿಲ ಪಡಿಗಳನ್ನು ಕಂಡು ಇಬ್ಬರೂ, ಇನ್ನೇನು ಗತಿಯೆಂದು ಮರುಗುತ್ತಿರುವಾಗ ದೇವತೆಗಳ ಪುಣ್ಯದಿಂದ ಸ್ವರ್ಗದ ಬಾಗಿಲು ತೆರೆಯುವಂತೆ ಆ ಕೃಷ್ಣನ ಪಾದದ ಉಂಗುಟ ಮುಟ್ಟಿದೊಡನೆ ಮುಚ್ಚಿದ ಪಡಿಗಳು ತಂತಾವೇ ತೆರೆದುಕೊಂಡುವು. ಬೆರಗಾದ ದ್ವಾರರಕ್ಷಕರೂ ಜಾವದ ಉಕ್ಕಡದ ಪಹರೆಯ ಠಾಣ್ಯದವರೆಲ್ಲರೂ ಎರಡೂ ಕೈಗಳನ್ನೆತ್ತಿ ಕೃಷ್ಣನಿಗೆ ನಮಸ್ಕರಿಸಿ ಮಂತ್ರಮುಗ್ಧರಂತೆ ಪಿಳಿ ಪಿಳಿ ನೋಡುತ್ತಿರಲಾಗಿ ಮಾರಿಯ ಬಾಯಿಂದ ಹೊರಬರುವಂತೆ ಮಧುರಾಪುರದ ಬಾಗಿಲಿಂದ ಹೊರಬಂದು, ವಸುದೇವ ಬಲರಾಮನು ಹಾದಿಗಾಣದಾಗಿ ದಿಕ್ಕುಗೆಟ್ಟು, ನಿಲ್ಲಲೂ ಆರದೆ ವೇಗವಾಗಿ ಮುಂದುರಿಯಲೂ ಆಗದೆ ನಿಧಾನವಾಗಿ ಹೆಜ್ಜೆಯಿಡುತ್ತಿದ್ದರು. ಆಗ -

೪೫. ಹೆಡೆಯಲ್ಲಿ ರತ್ನವುಳ್ಳ ಹಾವುಗಳಂತೆ, ತನ್ನ ಕೊಂಬುಗಳೆರಡರ ಮೇಲೆಯೂ ದೀಪಗಳನ್ನು ಇಟ್ಟುಕೊಂಡ ಒಂದು ಬಿಳಿಯ ಎತ್ತು, ನಾಲ್ಕು ಕಾಲಿನ ಮುಂಚೂಣಿಭಟನಂತೆ ಅವರ ಮುಂದೆ ಕಾಣಿಸಿಕೊಂಡು ನಡೆಯತೊಡಗಿತು.

ವ॥ ದೀಪದಕೋಡುಳ್ಳ ಆ ಎತ್ತಿನ ಬೆನ್ನಹಿಂದೆಯೆ ಹೋಗಲಾಗಿ -

---

೧ ಚಿಕ್ಕಡುಂ (ಕಾ), ಚಿಕ್ಕಟುಂ (ಮ), ಚಿಕ್ಕುಟಂ (ಪ), ೨ ದ (ಕ, ಪ). ೩ ಪ (ಕ, ಪ). ೪ ವಮೆಂ (ಕಾ). ೫ X (ಮ). ೬ X (ಕಾ). ೭ ಟ್ಟಂ (ಕಾ). ೮ ಕೆಳ್ತ (ಕ, ಮ). ಕಿಟ್ಟಿ (ಪ). ೯ ಗಾಂತ (ಪ). ೧೦ ಟ್ಟಿ (ಕ, ಪ). ೧೧ ನಿ (ಕಾ). ೧೨ ತ್ತಿರೆ (ಕ, ಪ). ೧೩ ಲ್ಮ (ಕ, ಕಾ, ಮ). ೧೪ ಲದಿಂ (ಮ), ಲದೇಂ (ಪ), ೧೫ ದೃಶಂ (ಕಾ). ೧೬ ಜ್ವ (ಪ).

ನ್ಮದಪೂರಂ ಧಾ[1]ತ್ರಿಗೇೞ್ತಂದುದೊ ಕವಿದು ವಿಹಾಯೋಮೃಗಂ ಭೂಮಿಗೇನಿ
ೞ್ಕಿದುದೋ ಕಸ್ತೂರಿಕಾಸ್ರೋತಮನೆನಗೆ ತೊಡಂಕಾಯ್ತು ಪೇೞೆಂಬಿನಂ ಬಂ
ದುದು ಭೋರೆಂದಂದು ಕಾಳೋರಗತರಳತರಂಗಾಳಿ ಕಾಳಿಂದಿ ಮುಂದಂ ೪೬

ಓಲೆಗಱೆವೊಯ್ದು ಜ[2]ಲಕ
ಲ್ಲೋಲಂಗಳಿನಬ್ಧಿಯೆಂಬ ಬಾಸಿಗದತ್ತಲ್
ಕಾಲಿಂದಿ ಮೊರೆವ ತುಂಬಿಯ
ಮಾಲೆಯವೋಲ್ ಮೊರೆದು ಪರಿವುತಿರ್ದತ್ತಾಗಳ್ ೪೭

ವ|| ಅದಂ ಕಂಡಹೋವಿಘ್ನಪರಂಪರಾಯೆನುತ್ತುಮಿರ್ವರುಮು[3]ಬ್ಬೆಗಂ ಬಡುತ್ತೆಯ್ದೆವರೆ ಮುಂದಾ ಬಸವಂ ಪಸಲೆಯಂ ಪುಗುವಂತೆ ಜಗುನೆಯಂ [4]ಪೊಕ್ಕು[4] ಪಾಯ್ದು ಪೋಗೆ

ಬಾಲಕನ ಮಹಿಮೆಯಿಂದಂ
ಕಾಲಿಂದಿಯ ನೀರ ಮೇಲೆ ನಡೆವುದು ಮುದದಿಂ
ನೀಲದ ಪೊಸ ನೆಲ[5]ಗಟ್ಟಿನ
ಮೇಲೊಯ್ಯನೆ ನಡೆವ ತೆಱದೆ ಹರಿಕುಲತಿಲಕಂ ೪೮

೪೬. ಇದೇನು ಕಪ್ಪುಮೋಡಗಳ ಸಮೂಹವೇ ಭೂಮಿಯ ಮೇಲೆ ಹರಿಯುತ್ತಿರುವುದೋ, ದಕ್ಷಿಣ ದಿಗ್ಗಜವಾದ ವಾಮನನ ಕುಂಭಸ್ಥಳದಿಂದ ಉಕ್ಕಿ ಹರಿವ ಮದಜಲ ಪ್ರವಾಹವೆ ಭೂಮಿಗೆ ಇಳಿದು ಬಂದೀತೊ, ಆಕಾಶವೆಂಬ (ಕಸ್ತೂರಿ) ಮೃಗವು ಭೂಮಿಯ ಮೇಲೆ ಕಸ್ತೂರಿಯ ಪ್ರವಾಹವನ್ನೇ ಇಳಿಬಿಟ್ಟಿತೋ, ತಿಳಿಯದಾಯಿತೆಂಬಂತೆ ಕಾಳಸರ್ಪಸಾದೃಶವಾದ ತೆರೆಗಳನ್ನು ಹೊಮ್ಮಿಸುತ್ತ, ಭೋರೆಂದು ಹರಿಯುವ ಯಮುನಾನದಿ ಅವರಿಗೆ ಅಡ್ಡವಾಯಿತು.

೪೭. ನೀರಿನ ತೆರೆಗಳೆಂಬ 'ಓಲೆ'(?) ರೆಕ್ಕೆಗಳನ್ನು ಬೀಸುತ್ತ ಸಮುದ್ರವೆಂಬ ಬಾಸಿಗದೆಡೆಗೆ ಮೊರೆಯುತ್ತ ಹೊರಟ ದುಂಬಿಗಳ ಮಾಲೆಯೊ ಏನೊ ಎಂಬಂತೆ ಯಮುನಾನದಿ ಭೋರ್ಗರೆಯುತ್ತ ಹರಿಯುತ್ತಿತ್ತು.

ವ|| ಅದನ್ನು ಕಂಡು "ಇದೇನು ವಿಘ್ನಗಳು ಸಾಲುಗಟ್ಟಿವೆ ನಮಗೆ?" ಎಂದು ಇಬ್ಬರೂ ಚಿಂತಿಸುತ್ತ ಬರಲಾಗಿ ಅವರ ಮುಂದಿದ್ದ ಎತ್ತು ಹುಲ್ಲಿನ ಮೈದಾನವನ್ನೂ ಹೊಗುವಂತೆ ಯಮುನಾನದಿಯಲ್ಲಿ ಹೊಕ್ಕು ದಾಟಿ ಹೋಯಿತು.

೪೮. ಹರಿವಂಶ ಶ್ರೇಷ್ಠನಾದ ಆ ಬಾಲಕನು ನೀಲರತ್ನಗಳ ನೆಲಗಟ್ಟಿನ ಮೇಲೆ ಹಗುರಾಗಿ ನಡೆದು ಹೋಗುವಂತೆ, ಕೂಸಿನ ಪುಣ್ಯದಿಂದ ಎತ್ತು ನೀರ ಮೇಲೆ ನಡೆದುಹೋಯಿತು.

---

೧ ರಾ (ಕಾ). ೨ ಚ (ಕಾ). ೩ X (ಕಾ). ೪ X (ಕಾ). ೫ ಲೆ (ಮ, ಪ).

ತರಳ ತರಂಗಮುಂ [೧]ತರಳ[೧]ದಂತೆವೊಲಿಬ್ಬಗಿಯಾಗಿ ಬೇಗದಿಂ
ಪರಿಯುಡುಗಿರ್ದ[೨] ಪೂರ್ಣ ಯಮುನಾನದಿಯಂ[೩] ಪವನಾಭಿಘಾತದಿಂ
ಪರಿವ ಪಯೋದಮಾಲೆ ಪಜೆದೊಂದೆಡೆಯಿಂದಡಿವಿಟ್ಟು ಪೋಪ ಖೇ
ಚರರೆನೆ ಪಾಯ್ದು ಪೋದರೊ ಹಲಾಯುಧನಂ ವಸುದೇವಭೂಪನುಂ ೪೯

ವ|| ಎಂಬಿನಮೆಂ[೪]ತಕ್ಕೆ ಪಾಯ್ದುದುಮಾ ತೊಱೆಯ [೫]ತಡಿಯ[೫] ತುಱುಪಟ್ಟಿಯಂ ತೋಱಿ ಗೋ[೬]ಪತಿ ಗೋಕುಲಮಂ ತೋಱುವುದುಚಿತಮೆನಿಸಿ ಬಸವನದೃಶ್ಯಮಪ್ಪುದುಮವರ ಪುಣ್ಯದೇವತಾಯತ[೭]ನದಂತೆ ಮುಂದೊಂದು ದೇವಾಯತನಮಿರ್ದುದದನವರ್ಪೊಕ್ಕು ಪೊಱಗಂ ನೋೞ್ಪಾಗಳಲ್ಲಿಗೆ ಮತ್ತೊರ್ವಂ ದೀವಿಗೆವೆರಸು ತೇರಯಿಸಿ ಬರ್ಪುದಂ ಕಂಡು ತಮ್ಮ[೮] ಪಜ್ಜೆ ವಿಡಿದು ಬೆನ್ನಟ್ಟಿ ಬಂದ ಕಂಸನೆಂದೆ ಬಗೆದು ಭಯಂಗೊಂಡು ಮೆಯ್ಗರೆದಿರ್ಪಿನ ಮಾತನಾ ತುಱುಪಟ್ಟಿಗೆಱೆಯನಪ್ಪ ನಂದನಾದನವನುಂ ತಮ್ಮ ತೆಱದಿನಾಗಳೆ ಪುಟ್ಟಿದೊಂ[೧೦]ದು ಪೆಣ್ಗೂಸಂ ಪಿಡಿದುಬಂದು ದೇವತೆಗಿಂತೆಂದಂ

ಕಿತ[೧೧] ದೇವತೆಗೇಕೆ[೧೨]ಪೇೞ್[೧೨]ರಸಿ ಗಂಡಂ ಬೇಡಿಕೊಂಡೆನ್ನ ಪೆಂ
ಡತಿಗಿತ್ತೆ ಪುಟಿತೊಂದು ಪೆಣ್ಣನಿದನೊಲ್ಲಳ್ನೀನೆ ಕೊಳ್ಳಾದದಾ
ವತಿಯಕ್ಕುಂ[೧೩] ತುಱುಗಾಱರೇಂ[೧೪] ಪಡಸಿಕೊಂಡುಂಡಪ್ಪರೇಯೊಳ್ಳಿತೊ
ಳ್ಳಿತು ಪೆಣ್ಗೂಸಿದು ಕಾಯಲೋ [೧೫]ಕಱಿ[೧೫]ಯಲೋ ಬೆನ್ನಟ್ಟಲೋ ಕಟ್ಟಲೋ ೫೦

೪೯. ಒಂದು ಚಿಕ್ಕ ಅಲೆಯೂ ಮಿಸುಕದಂತೆ ಯಮುನಾನದಿ ಇಬ್ಭಾಗವಾಗಿ ತನ್ನ ಪ್ರವಾಹವನ್ನು ಪೂರ್ತಿಯಾಗಿ ನಿಲ್ಲಿಸಲಾಗಿ, ಗಾಳಿ ಹೊಡೆತಕ್ಕೆ ಸೀಳಿದ ಮೋಡದ ಮಾಲೆಯಮೇಲೆ ಒಂದು ಸೀಳಿನಿಂದ ಇನ್ನೊಂದಕ್ಕೆ ಹೆಜ್ಜೆಯಿಟ್ಟು ದಾಟಿ ಹೋಗುವ ಖೇಚರರಂತೆ ಬಲರಾಮನೂ ವಸುದೇವನೂ ಆ ನದಿಯನ್ನು ಹಾಯ್ದು ಹೋದರು.

ವ|| ಹೀಗೆ ದಾಟಿಹೋದ ಮೇಲೆ ಆಚೆಯ ದಂಡೆಯಲ್ಲಿದ್ದ ಗೋವಳರ ಹಟ್ಟಿಯನ್ನು ತೋರಿ, "ಗೋಪತಿ (ವೃಷಭ) ಗೋಕುಲವನ್ನು ತೋರುವುದು ಯೋಗ್ಯ"ವೆನಿಸಿ ಮಾಯವಾಯಿತು. ತಮ್ಮ ಪುಣ್ಯದೇವತೆಯ ನಿಲಯದಂತೆ ಮುಂದೆ ಬಂದು ದೇವಸ್ಥಾನವಿದ್ದುದನ್ನು ಕಂಡು ಅವರಿಬ್ಬರೂ ಅದರಲ್ಲಿ ಹೊಕ್ಕು ಹೊರಗೆ ನೋಡುತ್ತಿದ್ದಾಗ ಅಲ್ಲಿಗೆ ಮತ್ತೊಬ್ಬನು ದೀವಿಗೆ ಹಿಡಿದುಕೊಂಡು ರಭಸದಿಂದ ಬರುವುದನ್ನು ಕಂಡರು. ತಮ್ಮ ಹೆಜ್ಜೆಗುರುತು ಹಿಡಿದು ಕಂಸನೇ ಬಂದನೆಂದು ಗಾಬರಿಯಾಗಿ ಅವರು ಅಡಗಿಕೊಂಡರು. ಹಾಗೆ ಬಂದಾತನು ಆ ತುರುಪಟ್ಟಿಯ ಒಡೆಯನಾದ ನಂದನೆಂಬವನು. ತಮ್ಮ ಹಾಗೆಯೆ ಆಗಲೆ ಹುಟ್ಟಿದ ಹೆಣ್ಣು ಕೂಸೊಂದನ್ನು ಹಿಡಿದುಕೊಂಡು ಬಂದು ದೇವತೆಗೆ ಹೀಗೆಂದನು -

೫೦. "ದೇವತೆಗೆ ಮೋಸಗಾರಿಕೆಯೇಕೆ? ಹೇಳು, ಹರಕೆಹೊತ್ತು, ಗಂಡುಮಗುವನ್ನು ಕೊಡೆಂದು ಬೇಡಿಕೊಂಡ ನನ್ನ ಹೆಂಡತಿಗೆ ಈ ಹುಳಿತ ಹೆಣ್ಣು ಕೊಟ್ಟೆ, ಅವಳಿಗೆ ಇದು ಬೇಕಾಗಿಲ್ಲ. ನೀನೇ ಇಟ್ಟುಕೋ. ಆದ ಧಾವತಿಯಾಗಲಿ, ಗೋವಳಿಗರೇನು "ಪಡಸಿ

---

೧ ದೆ ತರ (ಕ, ಮ), ದೆ ತೆಱ (ಪ). ೨ ರ್ದು (ಕ, ಮ). ೩ ಯುಂ (ಮ). ೪ ಮಂ (ಕಾ). ೫ X (ಮ) ೬ X (ಕಾ). ೭ X (ಮ). ೮ ನ್ನ (ಕಾ). ೯ + ನೆಂಬ (ಮ). ೧೦ ದ (ಕ). ೧೧ ವಂ (ಮ). ೧೨ ಕೇಳ್ದ (ಕಾ). ೧೩ ಕ್ಕಂ (ಕಾ). ೧೪ ರಿಂ (ಕಾ). ೧೫ ಕೊಱಿ (ಕಾ), ಕರೆ (ಪ).

ವ॥ [೧]ನಚ್ಚನೆಮ್ಮ ಕೋ[೨]ಣನನೀ[೨]ದಂತಾದುದು ನೀನುಂ ಪೆಣ್ಣಪ್ಪುದಱಿಂ ಪೆಣ್ಣನೀವೆಯಲ್ಲದೆ ಗಂಡಂ ಕಟ್ಟಿ[೩] ತರ್ಪಾ ನಿನ್ನ ಪೆಣ್ಣಂ[೪] ನೀನೆ ಕೊಳ್ಳೆನ್ನ ಪೆಂಡತಿ ನೋಂತುಂ ಪಸಿದುಂ ಪಾಟಿಂ[೫]ಬಟ್ಟುಂ ಕೊಟ್ಟ ಪರಕೆಯಂ ಮಗುಳೆ ಕುಡು ಕುಡದಂದು ನಿನ್ನನ್ನೀ ಮನೆಯೊಳಗೆ ದಿಟದ ದೇವತೆಯಂತೆ ಮಲಗಿ ಮಲ್ಲಂತಿಗಿಱಿದು ಕುಳ್ಳಿರಲೀಯೆಂ ವಿಷ್ಣುಗುಪ್ತಂ ಲಿಂಗದ[೬] ನೆತ್ತಿಯೊಳಕ್ಕಿದಂತೆ ಪಿರಿಯ ಕರಿಯ ಕಲ್ಲನೆತ್ತಿ ತಂದು ನಿನ್ನ ನೆತ್ತಿಯೊಳಿಕ್ಕಿ ತುಱುಕಾ[೭]ರ್ತಿಯರನಾಳಿಗೊಂಡು ನುಣ್ಣನೆ ನುಂಗಿದುದೆಲ್ಲಮಂ ಮೂಗಿಂ ಬಾಯಿಂಕಾಱಿಸುವೆನೆಂದು ಮೀಸೆಯಂ ಕಡಿದು ಕೂಸನೀಡಾಡಿ ನಂದಂ ಮಗುಟ್ಟಿ ಪೋ[೮]ಪುದುಮ[೮]ವರ್ಕಂಡಱಸುವ ಬಳ್ಳಿ ಕಾಲ್ತೊಡರ್ದು[೯]ದೆಂದು[೯] ದೇವತೆಯ ಮುಂದೆ ಮಗನಂ[೧೦] ನಿಟೆ[೧೦]ಸಿ ಮಗಳಂ ಕಳೆದುಕೊಂಡು ವಸುದೇವಂ ಕಾರ್ಯವಶಕ್ಕೆ ಕಟ್ಟೆಯ ಕಾಲ್ವಿಡಿದನೆಂಬಂತೆ ಕಾಲ್ವಿಡಿದೆಂ ಕನಲ್ದು ಪೋಗದೆ ಬಾ ಗಂಡುಗೂ[೧೧]ಸನೆ[೧೧] ಕೊಟ್ಟಪೆನೆಂದು ಕರೆಯೆ ತನಗಂಜಿ ದೇವತೆ ಕರೆದಳೆ ಗೆತ್ತು ಮತ್ತೆ ಬಂ[೧೨]ದು ನಂದನಾ[೧೩]ನಂದನನಾ[೧೪]ನಂದದಿಂ ಕಂಡ[೧೫]ಳಿಗೆ ಮಾಣಿಕಮಂ ಕೊಳ್ವಂತೆ ತಳೆದುಕೊಂಡು

ಕೊಂಡು"(?) ಉಣ್ಣುವರೆ? ಚೆನ್ನಾಯಿತು. ಈ ಹೆಣ್ಣು ಕೂಸೇನು ಕಾಯುವುದಕ್ಕೋ ಕರೆಯುವುದ್ಕಕೋ, ಬೆನ್ನಟ್ಟುವುದಕ್ಕೋ, ಕಟ್ಟುವುದಕ್ಕೋ?

ವ॥ ನೆಚ್ಚಿದ ಎಮ್ಮೆ ಕೋಣವನ್ನೀಯುವಂತಾಯಿತು. ನೀನೂ ಹೆಣ್ಣೇ ಆಗಿರುವುದರಿಂದ, ಹೆಣ್ಣನ್ನು ಕೊಡುವೆಯಲ್ಲದೆ, ಗಂಡನ್ನೇನು ಕದ್ದು ತರುವೆಯೊ? ನಿನ್ನ ಹೆಣ್ಣನ್ನು ನೀನೇ ತೆಗೆದುಕೋ, ನನ್ನ ಹೆಂಡತಿ ಉಪವಾಸದಿಂದ ವ್ರತಮಾಡಿ, ಕಷ್ಟಪಟ್ಟು ಸಲ್ಲಿಸಿದ ಹರಕೆಯನ್ನು ಮರಳಿ ಕೊಡು, ಕೊಡದೆ ಹೋದರೆ ನಿನ್ನನ್ನು ಈ ದೇವಸ್ಥಾನದಲ್ಲಿ ನಿಜವಾದ ದೇವತೆಯಂತೆ ಆಸನದಲ್ಲಿ ಹಸನಾಗಿ ಕುಳ್ಳಿರಗೊಡೆನು. ವಿಷ್ಣುಗುಪ್ತನು ಲಿಂಗದ ನೆತ್ತಿಯಲ್ಲಿ ಇಕ್ಕಿದಂತೆ ದೊಡ್ಡದೊಂದು ಕರಿಯ ಕಲ್ಲನ್ನು ಎತ್ತಿತಂದು ನಿನ್ನ ನೆತ್ತಿಯಲ್ಲಿ ಕುಕ್ಕಿ, ನೀನು ಗೋವಳಿತಿಯರನ್ನು ಕಾಡಿ, ನುಣ್ಣನೆ ನುಂಗಿಕೊಂಡುದನ್ನೆಲ್ಲ ಮೂಗಿನಿಂದಲೂ ಬಾಯಿಯಿಂದಲೂ ಕಕ್ಕಿಸಿ ಬಿಡುವೆನು" ಎಂದು ಮೀಸೆಯನ್ನು ಕಡಿದು ಕೂಸನ್ನು ದೇವತೆಯ ಮುಂದೆ ಬಿಸಾಡಿ ನಂದನು ಮರಳಿ ಹೊರಟನು. ಅದನ್ನು ಕಂಡು ಅವರಿಬ್ಬರೂ ಹುಡುಕುವ ಬಳ್ಳಿ ಕಾಲಿಗೆ ತೊಡರಿದಂತಾಯಿತೆಂದು, ದೇವತೆಯ ಮುಂದೆ ತಾವು ತಂದಿದ್ದ ಮಗುವನ್ನು ಇರಿಸಿ (ನಂದನ) ಹೆಣ್ಣು ಮಗುವನ್ನು ಎತ್ತಿಕೊಂಡರು. ಬಳಿಕ ವಸುದೇವನು ಹೊತ್ತು ಬಂದಾಗ ಕತ್ತೆಯ ಕಾಲುಹಿಡಿದರೆಂಬಂತೆ, "ನಿನ್ನ ಕಾಲಿಗೆ ಬಿದ್ದೇನು. ಮುನಿಸಿಕೊಂಡು ಹೋಗಬೇಡ, ಬಾ, ಗಂಡುಕೂಸನ್ನೆ ಕೊಡುವೆನು" ಎಂದು ಕರೆಯಲಾಗಿ, ನಂದನು ತನಗೆ ಅಂಜಿ ದೇವತೆಯೆ ಕರೆದಳೆಂದು ಬಂದು (ಗಂಡು ಕೂಸನ್ನು) ಕಂಡು, ಮಜ್ಜಿಗೆಕೊಟ್ಟು ಮಾಣಿಕವನ್ನು ಕೊಂಡವನಂತೆ, ಆತುರದಿಂದ ಅದನ್ನು ಎತ್ತಿಕೊಂಡು -

---

೧ + ಎಂದು (ಮ). ೨ ಣಂಗೀ (ಪ). ೩ ದುರ್ಜ (ಕ, ಮ, ಪ). ೪ + ಕಳ್ಳೆ (ಕ, ಮ, ಪ). ೫ ಟುಂ (ಪ). ೬ X (ಕ, ಮ). ೭ ಗಾ (ಮ). ೮ ಪಲ್ಲಿಮ (ಕ, ಮ), ಪಲ್ಲಿಯ (ಪ). ೯ X (ಕಾ). ೧೦ ನ (ಕ, ಕಾ). ೧೧ ರಿ (ಪ) ೧೨ ಸಂ (ಕ, ಮ, ಪ) ೧೩ ಎಂ (ಪ) ೧೪ X (ಕ, ಪ). ೧೫ ಡೆ (ಕ).

ಕಣ್ಬಡೆದ ಕುರುಡನಂತಿರೆ
ಪಣ್ಬಡೆ[1]ದೆಳ[2]ವಕ್ಕಿಯಂತೆ ಪುಣ್ಯದ ಫಲದಿಂ
ಪೆಣ್ಬಡೆದ ಸೂಳೆಯಂತಿರೆ
ಜಾಣ್ಬಡೆದೊಕ್ಕಲಿಗನಂತೆ ನಲಿದಂ ನಂದಂ ೫೧

ವ॥ ಇಂತಾದೊಡೆ ನೀನೆ ದೇವತೆಯೆಂಬು ಪೊಡೆವಟ್ಟು ಪೋಗಿ ಯಶೋದೆಗೆ ಕೊಟ್ಟನಿತ್ತಲಾ ಬಾಲಕಿಯಂ ದೇವಕಿಯ ಮುಂದೆ ತಂದಿಕ್ಕಿ ತಮ್ಮಿರ್ವರುಂ ತಾಮಱಿಯದಂತಿರೆ ಕಂಸಂ ತನ್ನ ತಂಗೆ ಬೆಸಲೆಯಾದುದನಱಿದಾ ಬಯ್ಗಿ[3]ರುಳೆ ಬಂದನುಜೆಯ ಮುಂದಣ ತನುಜೆಯಂ ಕಂಡು ಕೊಲಲೊಲ್ಲದಿವಳೊರ್ವಳ[4]ಣ್ಮಳಾ[5]ಣ್ಮನೆ ತಾನುಮಪ್ಪೊನಾದೊ[6]ಡೆಯಾತನೆನಗೆ ಮಾರಿಯಪ್ಪನೆಂದಾಕೆಯ ಮೂಗನಡಂಗೊತ್ತಿ ಪೋದನಾಕೆಯುಂ ತನ್ನಂ ತಾನಱಿದಿಂ ಬಟಿಕ್ಕೆ ಮೊಗಮಂ ನೋೞ್ಪರ ಮೊಗಕ್ಕೆ ನಾಣ್ಚಿ ವಿಂಧ್ಯಮಂ ಪೊಕ್ಕು ವಿಂಧ್ಯಮಾನಸೆಯೆಂಬ ದೇವತೆಯಾದಳ್[9]ತ್ತಲಂದಾ ನಂದನ ಮಂದಿರದೊಳ್ ಮಹೋತ್ಸವಂ[10]ಮಾಡಿ

ಕುಟಿಯೊಳ್ ನಾಟಿಸಿ ನೀರಂ
ಗಟಿಗಟಿನೆಱೆವಂತೆ ಫಳಿತ ಲತೆಗಚ್ಯುತನಂ
ಕುಟಿವೊಕ್ಕು ಕೊಂಡ ಜಸ[11]ದೆಗೆ
ನೆಟಿಲೊಳ್ಗೋಪಿಯರೆ ಮೀಯಲೊಲವಿಂದೆಱೆದರ್ ೫೨

೫೧. ಕಣ್ಣು ಪಡೆದ ಕುರುಡನಂತೆ, ಹಣ್ಣು ದೊರೆತ ಹಕ್ಕಿಮರಿಯಂತೆ ಪುಣ್ಯಫಲದಿಂದ ಹೆಣ್ಣು ಹಡೆದ ಸೂಳೆಯಂತೆ, ಜಾಣತನವನ್ನು ಪಡೆದ ಒಕ್ಕಲಿಗನಂತೆ ಸಂತೋಷಪಟ್ಟನು.

ವ॥ "ಈಗಾದರೆ ಸರಿ, ನೀನೇ ನಿಜವಾದ ದೇವತೆ" ಎಂದು ನಮಸ್ಕಾರ ಮಾಡಿ ಹೋಗಿ ನಂದನು ಆ ಮಗುವನ್ನು ಯಶೋದೆಗೆ ಕೊಟ್ಟನು. ಇತ್ತ ಆ ಹೆಣ್ಣು ಕೂಸನ್ನು ದೇವಕಿಯ ಮುಂದೆ ತಂದಿಟ್ಟು ವಸುದೇವ - ಬಲರಾಮರು ತಾವೇನೂ ಅರಿಯದವರಂತೆ ಇದ್ದುಬಿಟ್ಟರು. ತನ್ನ ತಂಗಿ ಹೆತ್ತಳೆಂಬುದನ್ನು ತಿಳಿದು, ಕಂಸನು ಆ ರಾತ್ರಿಯಲ್ಲಿಯೆ ಬಂದು, ತಂಗೆಯ ಮುಂದಿದ್ದ ಕೂಸನ್ನು ಕಂಡು, ಕೊಲ್ಲಲೊಲ್ಲದೆ "ಇವಳೊಬ್ಬಳೇ ನನಗೇನನ್ನೂ ಮಾಡಲಾರಳು, ಗಂಡಾದರೆ ಆತನು ನನಗೆ ಮಾರಿಯಾಗುವನು" ಎಂದು ಆಕೆಯ ಮೂಗನ್ನು ಅಡಗಿಹೋಗುವಂತೆ ಅಮುಕಿ ಹೋದನು. ಆಕೆ ತನ್ನ ಸ್ವರೂಪವನ್ನು ತಿಳಿದುಕೊಂಡ ಬಳಿಕ ನೋಡುವವರ ಕಣ್ಣಿಗೆ ತನ್ನ ಮುಖವನ್ನು ತೋರಿಸಲು ನಾಚಿಕೊಂಡು ವಿಂಧ್ಯ ಪ್ರದೇಶಕ್ಕೆ ಹೋಗಿ ವಿಂಧ್ಯಮಾನಸೆಯೆಂಬ ದೇವತೆಯಾದಳು. ಅತ್ತ ನಂದನ ಮನೆಯಲ್ಲಿ ಮಹೋತ್ಸವವನ್ನು ಮಾಡಿ -

೫೨. ಪಾತಿಯಲ್ಲಿ ನಾಟಿದ ಫಲ ಬಿಟ್ಟ ಬಳ್ಳಿಗೆ ನೀರೆರೆವಂತೆ, ಕುಳಿ ಹೊಕ್ಕು ಕೃಷ್ಣನನ್ನು ಪಡೆದ ಯಶೋದೆಗೆ ಗೋಪಿಯರು ನೆಳಲಲ್ಲಿ ನೀರೆರೆದರು.

---

೧ ದೊಳ (ಕಾ). ೨ ಬ (ಕಾ). ೩. ಯ್ಗ (ಕಾ). ೪ ಳ (ಪ) ೫ ನಾ (ಕಾ) ೬ ಡಾ (ಕಾ). ೭. ದು (ಕಾ). ೮ ನುಡಿದೊಡಂ (ಕಾ). ೯ ೞಿ (ಕ, ಪ), ೞಿತ್ತಲ (ಮ). ೧೦ ವಮಂ (ಕಾ). ೧೧ ಸೆ (ಕಾ)

ಅರಸಿನದಂಬೆಯನಿನಿಸೋ
ಸರಿಸ[1]ಲುಮೀ[1]ಯದೆ ಯಶೋದೆಯಿತ್ತಂ[2] ಪೀತಾಂ
ಬರನೆಂದು ಧರೆಗೆ ಪೇಳ್ವಂ
ತಿರೆ ಪೊಕ್ಕುೞೊಳಿಕ್ಕಿದಳ್ಪಯೋಜೋದರನಾ[3] ೫೩

ನಲಿದೊಡವುಟ್ಟಿದ ಮುಂಗೆ
ಯ್ವಲಮೆಂಬೆಳಗೂಸು ಕೂಡೆ ಕಣ್ದೆಱೆದವೊಲಾ
ಜಲಜಾಕ್ಷನ ಮುಂಗೆಯ್ಯೊಳ್
ಜಲಜಲಿಸೆ ಯಶೋದೆ ಕಟ್ಟಿದಳ್ಕವಡಿಕೆಯಂ ೫೪

ನಳಿನಿಯ ಬಿರಿಮುಗುಳೊಳ್ಬಾ
ಯ್ದಳಿಕಳಭಂ ಬೆಂ[4]ಡು ನೆಗೆದು ಬಂಡುಣ್ಬವೊಲಂ
ದಲೆದಲವಲಿಸಿ ಯಶೋದೆಯ
ಮೊಲೆ[5]ಯುಂಡಂ[5] ನವತಮಾಳಕೃಷ್ಣಂ ಕೃಷ್ಣಂ ೫೫

ಮೃಗದಂತಿರೆ ಮಗಮಗಿಸುವ
ಸುಗಂಧ ವರತೈಲತೃಣದ ಮೇಪಿನ ಸೊ[6]ಡರ್ವ[6]
ಕ್ಕು[7]ಗಳಿಂದೆ ಬೊಟ್ಟನಿಟ್ಟಳ್
ಮೊಗದೊಳ್ಕತ್ತುರಿಯ ತಿಲಕದಂತಿರೆ ಹರಿಯಾ ೫೬

ಪಿಡಿದಡಸಿ ಕಂಸನಿದಿರೊಡ
ಲೊಡೆವಿನಮೊದೆದೊದೆದು ಗುರ್ದಿ ಗುರ್ದಿಯೆ ಕೊಲಲೆಂ
ದಡ[8]ಹಡಿಸುವಂತಿರಿರ್ದುವು
ಪಿಡಿಕೆಯ್ಸಿದ [9]ಕೆಯ್ಸು[9]ಮೊದೆವ ಕಾಲುಂ ಹರಿಯಾ ೫೭

೫೩. ಇವನು ಪೀತಾಂಬರ (೧. ಹಳದಿ ಬಟ್ಟೆ ಉಡುವವನು ೨. ಪೀತಾಂಬರಧಾರಿಯಾದ ವಿಷ್ಣು)ನೆಂದು ಲೋಕಕ್ಕೆಲ್ಲ ತಿಳಿಸುವಳೊ ಏನೊ ಎಂಬಂತೆ ಯಶೋದೆ ಕೃಷ್ಣನ ಹೊಕ್ಕುಳಿಗೆ ಸರಿಸಲು ಬಾರದಂತೆ ಅರಿಸಿನದ ಬಟ್ಟೆಯನ್ನು ಹೊಚ್ಚಿದಳು.

೫೪. ಕೂಸಿನೊಡನೆ ಹುಟ್ಟಿದ ಅದರ ಮುಂಗೈಬಲವೆಂಬ ಎಳಗೂಸು ಕಣ್ಣು ತೆರೆಯಿತೆಂಬಂತೆ ಯಶೋದೆ ಕೃಷ್ಣನ ಕೈಯಲ್ಲಿ ಕವಡೆಯನ್ನು ಕಟ್ಟಿದಳು.

೫೫. ತಾವರೆಯ ಬಿರಿ ಮೊಗ್ಗಿನ ಮೇಲೆ ಬಿದ್ದು, ಹಗುರಾಗಿ ಅದರೊಳಗಿನ ಮಕರಂದವನ್ನು ಕುಡಿಯುವ ಮರಿದುಂಬಿಯಂತೆ ಕೋಮಲವಾದ ಹೊಂಗೆಯ ಸಸಿಯಂತಿದ್ದ ಕೃಷ್ಣನು ಹಾತೊರೆದು ಯಶೋದೆಯ ಮೊಲೆಯುಂಡನು.

೫೬. ಕಸ್ತೂರಿಯಂತೆ ಗಮಗಮಿಸುವ ಸುಗಂಧದ ಎಣ್ಣೆ ದೀಪದ ಕಾಡಗೆಯಿಂದ ಕೃಷ್ಣನ ಹಣೆಗೆ ಆಕೆ ಬೊಟ್ಟಿಟ್ಟಳು.

೫೭. ಕಂಸನನ್ನು ಹಿಡಿದು ಒದೆದೊದೆದು, ಗುದ್ದಿ ಗುದ್ದಿ ಕೊಲ್ಲುವುದಕ್ಕೆ ಈಗಲೆ

---

೧. ಲ್ಕೀ (ಕಾ) ೨ ತ್ತಲ್ (ಪ). ೩ ನಂ (ಕ, ಮ, ಪ). ೪ ಚೆಂ (ಕ). ೫ ಯಂ ತಂ (ಕಾ). ೬ ವಡು (ಕಾ). ೭ ರ್ಗ (ಕಾ). ೮ ಡಿ (ಕ, ಪ). ೯ ಕಾಯ್ದು (ಕಾ),

ಅರಗಿಳಿಯಂ ಮಾಣಿಕವಂ[1]
ಜರದೊಳಗಿರಿಸುವವೊಲಿರಿಸಿ ಮಣಿದೊಟ್ಟಿಲೊಳಾ
ಮರಕತವರ್ಣನನುತ್ಸವ
ಭರದಿಂದೆ ಯಶೋದೆ ಪಾಡಿದಳ್ ಜೋಗು[2]ಳಮಂ ೫೮

ಜೋ ನಳಿನಾಕ್ಷ ಜೋ ಭುವನವಲ್ಲಭ ಜೋ ನಯನಾಭಿರಾಮ ಜೋ
ಜಾನಕಿಯಾಣ್ಮ ಜೋ ಜನಮನೋಹರ ಜೋ ಜಗದೀಶ ಕೃಷ್ಣ ಜೋ
ಜೋ ನರಸಿಂಹ ಬೇಡಟಬಿದಿರಾ[3] ಮೊಲೆಯಂ ಪಿಡಿ ಹೋಯಿ[4]ಯೆಂದು ಚಂ
ದ್ರಾನನೆ ತೊಟ್ಟಲಂ ತೊನೆದು ತೂಗುತುಮಾಡಿ ಯಶೋದೆ ಪಾಡಿದಳ್ ೫೯

ಎಳವೆಯ ಮುದ್ದುಂ ರೂಪುಂ
ಬಳೆಯಿಸೆ ಮೋಹನಮನವರ[5] ಮನದೊಳ್ಮದನಂ
ಬಳೆವಂ[6]ತೆ ಬಳೆದು ಕೃಷ್ಣಂ
ಬಳೆದಂ ಗೋಪಿಯರ ತೋಳೊಳಂ ತೊಟ್ಟಿಲೊಳಂ ೬೦

ಚೆಣ್ಣಂ ಪೊಸವೆಂಡಿರ ಕಡೆ
ಗಣ್ಣಲಸದೆ ತೊಡರ್ದ ತಮ್ಮ ಕಡೆಗಳ ಕರ್ಪಿಂ
ನುಣ್ಣನಿರೆ ಕರಿಯ ನೆಯ್ದಿಲ
ಬಣ್ಣಂ[7]ಬೊಯ್ದಂ[7]ತೆ ಕರಿಯ ರೂಪಿನೊಳೆಸೆದಂ ೬೧

ಹಾತೊರೆಯುತ್ತಿರುವುವೊ ಏನೊ ಎಂಬಂತೆ ಕೃಷ್ಣನ ಬಿಗಿದ ಮುಷ್ಟಿಗಳೂ ಒದೆಯುವ ಕಾಲುಗಳೂ ಕಂಗೊಳಿಸಿದುವು.

೫೮. ಮಾಣಿಕದ ಪಂಜರದಲ್ಲಿ ಅರಗಿಳಿಯನ್ನು ಇಡುವಂತೆ, ರತ್ನದ ತೊಟ್ಟಿಲಲ್ಲಿ 'ಮರಕತ' (೧. ಪಚ್ಚೆ ೨. ಕವಿಸಮಯದ ಮೋರೆಗೆ ಕಪ್ಪು) ವರ್ಣದ ಕೃಷ್ಣನನ್ನು ಮಲಗಿಸಿ ಯಶೋದೆ ಜೋಗುಳ ಹಾಡಿದಳು.

೫೯. "ಜೋ ಕಮಲಾಕ್ಷ, ಜೋ ಲೋಕವಲ್ಲಭ, ಜೋ ನೇತ್ರಾನಂದಕರ, ಜೋ ಜಾನಕೀಪತಿ, ಜೋ ಜನಮನೋಹರ, ಜೋ ಜಗತ್ಪತಿ, ಕೃಷ್ಣ ಜೋ, ಜೋ ನರಸಿಂಹ, ಅಳಬೇಡಪ್ಪಾ, ಮೊಲೆಯನ್ನು ಹಿಡಿ ಹೋಯಿ" ಎಂದು ತೊಟ್ಟಿಲನ್ನು ಹಿಡಿದು ತೂಗುತ್ತ ಆಡುತ್ತ ಚಂದ್ರಮುಖಿಯಾದ ಯಶೋದೆ ಹಾಡಿದಳು.

೬೦. ಆ ಶಿಶುತನದ ಮುದ್ದೂ ರೂಪವು ತಮ್ಮ ಮೋಹವನ್ನು ಬೆಳೆಯುತ್ತಿರಲಾಗಿ, ಮನಸ್ಸಿನಲ್ಲಿ ಮನ್ಮಥನು ಬೆಳೆಯುವಂತೆ ಕೃಷ್ಣನು ಗೋಪಿಯರ ತೋಳಲ್ಲಿಯೂ ತೊಟ್ಟಿಲಲ್ಲಿಯೂ ಬೆಳೆದನು.

೬೧. ನವಯುವತಿಯರ ಕಡೆಗಣ್ಣ ಕಪ್ಪು ನಿರಂತರವಾಗಿ ನುಣ್ಣಗೆ ತನ್ನ ಮೈಮೇಲೆ ನೆಲಸಿರಲಾಗಿ, ಕನ್ನೈದಿಲೆಯ ಬಣ್ಣವನ್ನು ತೊಡೆದಂತೆ ಕೃಷ್ಣನು ನೀಲವರ್ಣದ ಕಾಂತಿಯಿಂದ ಶೋಭಿಸಿದನು.

---

೧ ಪಂ (ಮ). ೨ ಗು (ಪ). ೩ ರಾಂ (ಕಾ). ೪ ಯಿ (ಕ, ಮ, ಪ). ೫ ಗ (ಕ, ಪ). ೬ ದಂ (ಕ, ಪ) ೭ ಬಾಯ್ದಂ (ಕಾ).

ಯುವತಿಯರನೊಲಿಸಿದಂ ಶೈ
ಶವದೊಳ್ಕೇಶವನ [ದೊಂ[೧]]ದೆ ಪೂಗಣೆಯಪ್ಪ
ನ್ನೆವರಂ ನಿಂದುದು[೨] ಬಗೆ ಬೆದ
ಱುವಿನಂ ನನೆಗಣೆಯೆ ತಾಗಿ ತಾನಟಲಿಸದೇ ೬೨

ವ॥ ಮತ್ತಿತ್ತ ಮಧುರಾಪುರದೊಳ್

ಪಗಲುಳ್ಕಂ ಬಿರ್ದುವು[೩]ವೀರುಹಮೊಳಱಿದುವಳ್ಳಾಡಿದತ್ತದ್ರಿಜಾಲಂ
ಪೊಗೆದತ್ತಾ[೪]ಶಾಮುಖಂ[೪] ಮೇದಿನಿ ಮೊಱಗಿದುದಾಕಸ್ಮಿಕಂ ಭಸ್ಮಮಾಯ್ತಾ
ವಗವಹ್ನಿಭ್ರಾತಮೆಟ್ಟಾರ್ದುದು ಮರುಳಿರುಳೋರಂತಿರಿಕ್ಕಿತ್ತು ಬಾಷ್ಪಾಂ
ಬುಗಳಂ[೫] ಭೋರೆಂದು ದೇವಪ್ರತಿಮೆಗಳಪರಿಶ್ರಾಂತ ನೇತ್ರಪ್ರತಾನಂ ೬೩

ಉಡಿದತ್ತುಗ್ರಾಸಿ ಬೆಂದತ್ತರಮನೆಯುರಿದತ್ತಾತಪತ್ರಂ ತದಶ್ವಂ
ಮಡಿದ[೬]ತ್ತೋವೋವೊ ಬಿಟ್ಟಿ[೬]ತ್ತವನ ಕರಿಯುರುಳ್ದತ್ತು ಸಿಂಹಾಸನಂ ಗೋ
ಳ್ಗೆಡೆದತ್ತಾಳಾನಮುರ್ಕಿತ್ತೆಸೆವ ಕಸವರಂ ಕಂಸನಿಟ್ಟುಂಬ ತಟ್ಟೊ
ಗುರ್ಡಿಸಿತ್ತಟ್ಟೆಗಿತ್ತು ಮಂಚಂ ನಡನಡ ನಡುಗಿತ್ತಾತನೇಱಿರ್ದ ಮಾಡಂ ೬೪

ಅೞ್ತುವು ಗೃಹದೇವತೆಗಳ್
ಮುೞ್ತುವು ಕಿವಿಯೋಲೆ ಬಱಿದೆ ಬಾಷ್ಪಾಂಜಲಿಗಳ್
ಬೀೞ್ತಿಂದುವು [೭]ಕಣ್ಗೆಯ್ವುದು
ಮೆೞ್ತಿಂದುವು[೭] ಪೊಲ್ಲಗನಸು ಜೀವಂಜಸೆಯಾ ೬೫

೬೨. ಶಿಶುವಾಗಿದ್ದಾಗಲೆ ತಾನೊಂದು ಪುಷ್ಪಬಾಣವೆಂಬಂತೆ ಕೃಷ್ಣನು ತರುಣಿಯರನ್ನೂ ಒಲಿಸಿದನು. ಇನ್ನು ಹೂಬಾಣವೇ ನಾಟುವಂತಾದ ಮೇಲೆ ಮನಸ್ಸನ್ನೂ ನೋಯಿಸದೆ ಇರುವನೆ?

ವ॥ ಇತ್ತ ಮಧುರಾಪುರದಲ್ಲಿ -

೬೩. ಹಗಲಲ್ಲಿ ಉಲ್ಕೆ ಬಿದ್ದುವು; ಮರಗಳು ಕೂಗಿದುವು; ಪರ್ವತಗಳು ನಡುಗಿದುವು; ದಿಗಂತದಲ್ಲಿ ಹೊಗೆಯೆದ್ದಿತು; ಭೂಮಿ ಗುಡುಗಿತು; ಭೂತಗಳು ಎದ್ದು ಕುಣಿದಾಡಿದುವು; ಕತ್ತಲೆ ಮುಸುಕಿತು; ದೇವತಾವಿಗ್ರಹಗಳ ಕಣ್ಣಿಂದ ಭೋರೆಂದು ನೀರುಸುರಿಯಿತು.

೬೪. ಉಗ್ರವಾದ ಖಡ್ಗ ಮುರಿದು ಬಿದ್ದಿತು; ಅರಮನೆ ಬೆಂದಿತು; ಛತ್ರರಿಗೆ ಉರಿಯಿತು; ಪಟ್ಟದ ಕುದುರೆ ಸತ್ತಿತು; ಅಯ್ಯೊ! ಅವನ ಆನೆಯೂ ಬಿದ್ದಿತು; ಸಿಂಹಾಸನ ಉರುಳಿತು; ಆನೆಗಂಬ ಕಿತ್ತು ಬಿದ್ದಿತು; ಚಿನ್ನ ಕರಗಿ ಹರಿಯಿತು; ಕಂಸನು ಉಣ್ಣುವ ತಟ್ಟೆ ಓರೆಯಾಗಿ ಹೊರಳಿತು; ಮಂಚ ಕುಸಿದುಬಿದ್ದಿತು; ಅವನು ಏರಿನಿಂತ ಉಪ್ಪರಿಗೆ ಗಡಗಡ ನಡುಗಿತು.

೬೫. ಗೃಹದೇವತೆಗಳು ಅತ್ತುವು; ಜೀವಂಜಸೆಯ ಕಿವಿಯೋಲೆಗಳು

---

೧ ನೊಂ (ಕ, ಕಾ, ಮ). ೨ ದೆ (ಕಾ, ಮ). ೩ ವು (ಕಾ). ೪ ಕಾಶಮುಂ (ಕ, ಪ), ಶೋಕಮುಂ (ಮ). ೫ ಳಿಂ (ಕಾ, ಮ). ೬ ತ್ತಾದೋವೊವಿರ್ದ (ಕ),. ತ್ತಾವೊಲಿರ್ದ (ಪ). ೭ ..... (ಕಾ).

ಪೇಟಿಲ್ಲಾರದ ಮನದೊ
ಳ್ಳೊ[೧]ಟಿಲ್ಲಾರದ ಬರುಂಟೆ[೨] ಕೇಳ್ದವರಾರುಂ
ಬಾಟಿಲ್ಲಾರದ ಕನಸಂ
ಬೀಟಿಲ್ಬಳೆವಂತೆ ಬಳೆಯೆ ಕಂಸಂ ಕಂಡಂ ೬೬*

ವ॥ ಕಂಡೇವಯ್ಸಿ ವರುಣನೆಂಬ ನೈಮಿತ್ತಿಕನಂ ಕರೆದು ಬೆಸಗೊಳ್ವುದುಮಾತಂ ಕಿವಿಗೆ ಮಾತಿಕ್ಕ[೩]ದ ಮುನ್ನಮೆ ಕಣ್ಬನಿಯನಿಕ್ಕಿ ದೇವಕಿಯ ಮಗನೊರ್ವಂ ಪೆಱವುಳಿದು ಬಳೆದಪನೆಂದು ಬಗೆಯೊಳ್ಪಗೆಯನಿಕ್ಕಿ ಪೋಗೆ ಪೊ[೪]ಯಿಲ್ವ[೫]ಡೆದಂತಾಗಿ" ತನ್ನೊಳಿಂತೆಂದಂ

ನರನೆಚ್ಚಂಬುಂ ಕವಿಶೇ
ಖರದೇವಂ ಪೇಟ್ದ ಕಬ್ಬಮುಂ ಬಿದಿ ನೊಸಲೊ
ಳ್ಬರೆದಕ್ಕರಮುಂ ಪರಿಕಿಸೆ
ಪರಮ ತಪೋಧನರ ವಾಕ್ಯಮುಂ[೬] ತಪ್ಪುವುದೇ ೬೭

ಆವೊಂಗಮಾದೊಡಂ ಮ
ತ್ತಾವುದುಮಂ ಕಟಿವುಪಾಯಮುಂಟೇ[೭] ಜಗದೊಳ್
ದೇವಂಗಂ ದೈತ್ಯಂಗಂ
ಸಾವಂ ತಪ್ಪಿಸುವುಪಾಯಮಾವುದುಮುಂಟೇ ೬೮

ಮುರುಟಿದುವು(?) ಸುಮ್ಮಸುಮ್ಮನೆ ಕಣ್ಣೀರು ಸುರಿದುವು; ಕಣ್ಣು ಮುಚ್ಚಿದೊಡನೆ ಕೆಟ್ಟ ಕನಸು ಬಿದ್ದುವು.

೬೬. ಹೇಳಬಾರದ, ಮನದಲ್ಲಿ ಹೂಳಲೂ ಬಾರದ ಒತ್ತಾಯಿಸಿ ಕೇಳಿದವರು ಬಾಳಲು ಬಾರದಂತಹ ಕನಸುಗಳು ಬೀಳಲುಗಳಂತೆ ಬೆಳೆಯುವುದನ್ನು ಕಂಸನು ಕಂಡನು.

ವ॥ ಇಂತಹ ಸ್ವಪ್ನಗಳಿಂದ ಜುಗುಪ್ಸೆಗೊಂಡು ಕಂಸನು ನಿಮಿತ್ತಜ್ಞನನ್ನು ಕರೆದು ಇವುಗಳ ಅರ್ಥವೇನೆಂದು ಕೇಳಿದನು. ಆ ನೈಮಿತ್ತಿಕನು ಮಾತಿಗಿಂತ ಮುಂಚೆಯೆ ಕಣ್ಣೀರಿಟ್ಟು, "ದೇವಕಿಯ ಮಗನೊಬ್ಬನು ಬದುಕಿ ಉಳಿದಿದ್ದು, ಹೊರಗೆಲ್ಲೋ ಬೆಳೆಯುತ್ತಿರುವನು" ಎಂದು ತಿಳಿಸಿ ಈತನ ಮನಸ್ಸಿನಲ್ಲಿ ದ್ವೇಷವನ್ನು ಕೆರಳಿಸಿ ಹೊರಟುಹೋದನು. ಆಘಾತವಾದಂತಾಗಿ ಕಂಸನು ತನ್ನೊಳಗೇ ಹೀಗೆಂದುಕೊಂಡನು -

೬೭. ಅರ್ಜುನನು ಬಿಟ್ಟ ಬಾಣವೂ ಕವಿಶೇಖರದೇವನು ರಚಿಸಿದ ಕಾವ್ಯವೂ ವಿಧಿ ಹಣೆಯಲ್ಲಿ ಬರೆದ ಅಕ್ಷರಗಳೂ ಪರಮ ತಪಸ್ವಿಗಳ ಭವಿಷ್ಯವಾಣಿಯೂ ಎಂದಾದರೂ ತಪ್ಪುವುದುಂಟೆ?

೬೮. ಯಾವನಿಗಾದರೂ ಇನ್ನಾವುದೇನನ್ನಾದರೂ ನಿವಾರಿಸುವ ಉಪಾಯ ಈ ಜಗತ್ತಿನಲ್ಲಿ ಉಂಟು, ಆದರೆ ದೇವನಿಗಾಗಲಿ ದೈತ್ಯನಿಗಾಗಲಿ ಸಾವನ್ನು ತಪ್ಪಿಸುವ ಉಪಾಯ ಯಾವುದಾದರೂ ಉಂಟೆ?

* ಮ ಪ್ರತಿಯಲ್ಲಿ ಈ ಪದ್ಯವಿಲ್ಲ ೧ ಳ್ದಾ (ಕಾ). ೨ ಟೆ (ಕ). ೩ ಕ್ಕಿ (ಕ). ೪ ಯ್ದೊ (ಕಾ). ೫ ಗೆ (ಕಾ). ೬ ಮೇಂ (ಕಾ). ೭ ಟೇ (ಕ).

ವ॥ ಆಶೌಚಮುಂ ಗೋವಧೆಯುಮುಟಿದುದೆಂಬಂತೆನ[೧]ಗೆ ಪಾಪಮುಂ ಪೈಶೂನ್ಯಮುಮುಟಿದುದಿಲ್ಲೆಂದುಮ್ಮಳಿಸಿ ಪಟ್ಟಿರೆ ಪೂರ್ವಭವದೆಣ್ಬರ್ದೇವತೆಯರ್ ಬೇಱೆವೇಱೆವಂದು

ಆರಂ ಬಾರಿಪ್ಪೆನಾರಂ ನಿನಗೆಱಗಿಪೆನಾರಂ ಕೊಲಲ್ಕಾಯ್ವೆನಾರಂ
ಬೇರಿಂದಂ ಕಿಟ್ವೆನಾರಂ ನಿ[೨]ರಿದು ನೊಣೆವೆನಾರಂ ತಿನಲ್ಪೋಪೆನಾಟಂ[೩]
ದಾರಂ ಪೊ[೪]ಯ್ವಾರ್ವೆ[೫]ನಾರಂ ಪಿಡಿದು ಪೊಸೆವೆನಾರಂ ಕರಂ ಪೋಟಿಪ್ನೆನಾರಂ
ನಾರಂ ಸೀಳ್ವಂತೆ ಸೀಟಿಪ್ವೆಂ ಬೆಸಸು ಬೆಸಸೆಲೇ ಕಂಸ ರಾಜಾವತಂಸಾ ೧೯

ವ॥ ನೀನುಮ್ಮಳಿಸುವಲ್ಲಿವರಮೇನೆನೆ ಕಂಸಂ ದೇವಕಿಯ ಮಗನೊರ್ವನೆಲ್ಲಿರ್ದಪನೆಂಬುದುಂ ಭೇದಿಸಿ ಕೊಲ್ಲಿಮೆಂಬುದುಮವರವನಿರ್ದ ಭಂಗಿಯುಂ ವಿಭಂಗಬೋಧದಿನಱಿದು ರಾಕ್ಷಸಪ್ರಕೃತಿಯಪ್ಪ ದೇವತೆ ನಂದಗೋಪಿ ನಂದನನಂ ತೊಟ್ಟಿಲೊಳಿರಿಸಿ ನೀರಂ ತರಲ್ಪೋದ ಪೆಱಗೆ

ಪೆಱ[೬]ನೊಸಲಾಗೆ ನೆ[೭]ಕ್ಕ ನೊಸಲೊಳ್ನಿಲೆಯಪ್ಪೊಡಲಾಗೆ[೭] ನಿಟ್ಟೊಡ
ಲ್ನಿಱಿದಲೆಯೊಗೆಯೊಪ್ಪು [೮]ದಲೆಯೊಪ್ಪುವ ತೋಳ್ತ[೮]ನಗಾಗೆ ಪೊಲ್ಲದೋಳ್
ತುಱುಗೆಮೆಗಣ್ಗಳಾಗೆ ಬಿಡುಗಣ್ಗಳೆ ತೆಳ್ವಸಿಱಾಗೆ ಪಾಲ್ವಿಸಿ
ಜ್ಞಱಿ[೯]ಮೊಲೆಯಾಗೆ ಬಿಟ್ಟಿ ಮೊಲೆ ಪೂತ[೧೦]ನಿ [೧೧]ಗೋಪಿ[೧೧]ವೊಲಾಗೆ ಬೇಗದಿಂ ೨೦

ವ॥ ಅಶೌಚ ಮತ್ತು ಗೋವಧೆ - ಇವೆರಡರ ಹೊರತಾಗಿ ನಾನು ಮಾಡದಿರುವ ಪಾಪ ಯಾವುದೂ ಇಲ್ಲ ಎಂದು ಮರುಗಿ ಮಲಗಿರಲಾಗಿ, ಪೂರ್ವಜನ್ಮದ (ಮಿತ್ರರಾದ) ಎಂಟು ಜನ ದೇವತೆಗಳು ಬೇರೆ ಬೇರೆಯಾಗಿ ಬಂದು -

೧೯. "ಯಾರನ್ನು ತಳ್ಳಲಿ? ಯಾರನ್ನು ನಿನಗೆ ಎರಗಿಸಲಿ? ಯಾರ ಕೊಲೆಯನ್ನು ತಪ್ಪಿಸಲಿ? ಯಾರನ್ನು ಬೇರುಸಹಿತವಾಗಿ ಕೀಳಲಿ? ಯಾರನ್ನು ಹಿಡಿದು ನುಂಗಲಿ? ಯಾರನ್ನು ತಿನ್ನಲು ಹೋಗಲಿ? ಯಾರನ್ನು ಆಕ್ರಮಿಸಿ ಹೊಡೆಯಲಿ? ಯಾರನ್ನು ಹಿಡಿದು ಹೊಸಕಲಿ? ಯಾರನ್ನು ಹೋಳುಮಾಡಲಿ? ಯಾರನ್ನು ನಾರಿನಂತೆ ಸೀಳಲಿ? ಆಜ್ಞಾಪಿಸು ಕಂಸರಾಜಾ, ಆಜ್ಞಾಪಿಸು.

ವ॥ ನೀನು ಚಿಂತಿಸಿ ಖೇದಪಡುವಂತಹುದೇನಾಗಿದೆ? ಹೇಳು" ಎಂದು ಕೇಳಲಾಗಿ "ದೇವಕಿಯ ಮಗನೊಬ್ಬನು ಉಳಿದುರುವನಂತೆ ಎಲ್ಲಿರುವನೋ ಪತ್ತೆ ಹಚ್ಚಿ ಕೊಂದುಬಿಡಿ" ಎಂದು ಕಂಸನು ಹೇಳಿದನು. ಕೃಷ್ಣನೆಲ್ಲಿರುವನೆಂಬುದನ್ನು ಅವರು ವಿಭಂಗಜ್ಞಾನದಿಂದ ಅರಿತುಕೊಂಡರು. ಅವರಲ್ಲಿ ರಾಕ್ಷಸ ಪ್ರಕೃತಿಯಾದ ದೇವತೆಯೊಬ್ಬಳಿದ್ದಳು. ನಂದಗೋಪಿ ಮಗನನ್ನು ತೊಟ್ಟಿಲ್ಲಲ್ಲಿ ಮಲಗಿಸಿ ನೀರು ತರಲೆಂದು ಹೊರಗೆ ಹೋದಾಗ ಈ ದೇವತೆಯು (ಅಲ್ಲಿಗೆ ಹೋದಳು) -

೨೦. ತನ್ನ ನಗ್ಗಿದ ಹಣೆ ಚಂದ್ರನಂತೆ ಚೆಲುವಾದ ಹಣೆಯಾಗಿ ರಾಕ್ಷಸಾಕಾರದ ದೇಹ ಚೆಲುವಿನ ಮೈಯಾಗಿ, ಕೆದರುದಲೆ ಉಂಗುರುಗೂದಲಿನ ತಲೆಯಾಗಿ ಕೊಳೆಯಾದ ತೋಳು ಒಪ್ಪುವ ತೋಳಾಗಿ, ಬಿರಿಗಣ್ಣು ದಟ್ಟವಾದ ಎವೆಹೊಚ್ಚಿದ ಕಣ್ಣುಗಳಾಗಿ,

---

೧ ಮ (ಕ, ಪ). ೨ ಪು (ಕಾ). ೩ ವಿ (ಕ), ತಿ (ಪ). ೪ ರಂ (ಕಾ). ೫ ಯ್ದೊರ್ವೆ (ಕ). ಯ್ವೊಯ್ವೆ (ಪ). ೬ ನೊ (ಕಾ). ೭ ಗಿ (ಕ, ಮ). ೮ ತೋಳ್ತ (ಕ, ಮ), ದಲೆ ತೋಳ್ತ (ಪ), ... ದಲೆಯೊಪ್ಪುವ ತೋಳ್ತ (ಕಾ). ೯ ಟಿ (ಕಾ). ೧೦ ತ (ಪ). ೧೧ ಗೊಪ್ಪ (ಕ, ಪ), ಗೊಪ್ಪು (ಮ).

ವ|| ಬಂದು ನೀರನಿೞಿಪಿಯೆತ್ತು[೧]ವರಿಲ್ಲದೆ ಮಾಯದ ಮಗನೆಂ[೨] ತ[೩]ಳ್ವಿದೆ[೩]ನೆನ್ನ ಹೋರಿ ಹಸಿದನೆ ಬಾಬಾಯೆಂದು ಪಾಪಿಯ[೪]ಕೂಸನೆತ್ತಿಕೊಳ್ವಂತಟುವ ಕೂಸನೆತ್ತಿಕೊಂಡು

ಮುನಿಸಿಂ ನಂಜೂಡಿ [೫]ಕಾಯ್ದೂ[೫]ಡಿದ ಮೊಲೆಗಳನಾ ನಂಜಿನಂತಪ್ಪ ನೀಳಾಂ
ಜನವರ್ಣಂ ಮುನ್ನೆ ಕನ್ನೆತ್ತರನೆ ಜಿಗುೞ್ ಪೀರ್ವಂದದಿಂ ಪೀರ್ದು ಹಾಹಾ
ಯೆನುತುಂ ಪುಯ್ಯಲ್ಚಿ ಬಾಯಂ ಬಿಡಿಸೆ ಬಿಡದೆ [೬]ಭಲ್ಲೂ[೬]ಕ ಬಾಲಂಬೊಲಾ[೭] ಪೂ
ತನಿಯಂ ಕಾಳಾಹಿ ಪೀರ್ವಂತಸುವನಸದಳಂ ಪೀರ್ದು ಕೊಂದಂ ಮುಕುಂದಂ ೭೧

ವ|| ಮತ್ತಮೊರ್ವಳತಿ ಪ್ರಚಂಡೆ ಚಾಂಡಾಳ ಪ್ರಕೃತಿಯಪ್ಪ ದೇವತೆ ಕಾಕಾಕೃತಿಯನಪ್ಪುಕೆಯ್ದು

ಕಾಕಂ ಪಂಜರದೊಳಗಣ
ಕೋಕಿಳಮಂ ನೋಡಲೆಂದುಬರ್ಪಂತಿರೆ ಬಂ
ದಾ ಕೃಷ್ಣನ ಮಣಿದೊಟ್ಟಿಲ
ನೇಕಾಕಿಯ ಕಣ್ಣನಿಱಿವೆನೆಂದೆಱಗಲೊಡಂ ೭೨

ಅಡರ್ದು ಕಮಂಡಲುಜಲಮಂ
ತುಡುಂಕೆ ಕಂಡೊಳಗ[೮]ಣೆಸಡಿ[೮] ಕಾಗೆಯ ಮೂಗಂ
ಪಿಡಿದುಱಿದಿಱಿಂಕಿ ಮುಱಿದವೊ
ಲೆಡಗೆಯ್ವಿಡಿದೊ[೯]ತ್ತಿ ಮುಱಿಯೆ ಮೂಗಂ ಬೇಗಂ ೭೩

ಹಾಳುಹೊಟ್ಟೆ ತೆಳುವಾದ ಹೊಟ್ಟೆಯಾಗಿ ಬಿದ್ದ ಮೊಲೆ, ಬಿಗಿದ ಮೊಲೆಯಾಗಿ ಪರಿವರ್ತನೆ ಹೊಂದಲಾಗಿ ಪೂತನಿಯೆಂಬ ಆ ರಕ್ಕಸಿ ಗೋಪಿಯ ವೇಷದಿಂದ ಬೇಗಬೇಗನೆ -

ವ|| ಬಂದು, ನೀರನ್ನು ಇಳಿಸಿ, "ಈ ಪ್ರೀತಿಯ ಮಗನನ್ನು ಎತ್ತಿಕೊಳ್ಳುವವರಿಲ್ಲವೆ? ನಾನೇಕೆ ತಡಮಾಡಿದೆ? ನನ್ನ ಹೋರೀ, ಹಸಿದ ಮಗನೇ, ಬಾ ಬಾ" ಎಂದ ಪಾಪಿಯ ಕೂಸನ್ನು* ಎತ್ತಿಕೊಳ್ಳುವಂತೆ ಆ ಕೂಸನ್ನು ಎತ್ತಿಕೊಂಡು -

೭೧. ಕ್ರೋಧದಿಂದ ತನ್ನ ವಿಷತುಂಬಿದ ಮೊಲೆಯನ್ನು ಉಣಿಸಲಾಗಿ, ವಿಷದಂತಿದ್ದ ಆ ನೀಲಾಂಜನವರ್ಣದ ಕೃಷ್ಣನು, ಜೀಗುಳೆ ಹೀರುವಂತೆ ಅವಳ ಕೆನ್ನೆತ್ತರನ್ನು ಹೀರಿದನು. ಹಾಯ್ ಹಾಯೆಂದು ಚೀರಿಕೊಳ್ಳುತ್ತಾ ಆಕೆ ಅವನ ಬಾಯಿಂದ ಬಿಡಿಸಿಕೊಳ್ಳಲು ಹೆಣಗಿದರೂ ಬಿಡದೆ ಕರಡಿಯಂತೆ ಕಚ್ಚಿ ಹಿಡಿದು ಕಾಳಸರ್ಪದಂತೆ ಪೂತನಿಯ ಜೀವವನ್ನೂ ಹೀರಿ ಕೃಷ್ಣನು ಕೊಂದನು.

ವ|| ಬಳಿಕ ಅತಿಪ್ರಚಂಡೆಯಾದ ಚಾಂಡಾಲ ಪ್ರಕೃತಿಯ ಇನ್ನೊಬ್ಬ ದೇವತೆ ಕಾಗೆಯ ಆಕಾರವನ್ನು ತಾಳಿ -

೭೨. ಪಂಜರದೊಳಗಿರುವ ಕೋಗಿಲೆಯನ್ನು ನೋಡಲೆಂದು ಕಾಗೆ ಬರುವಂತೆ ಬಂದು, ರತ್ನದ ತೊಟ್ಟಿಲಲ್ಲಿ ಏಕಾಕಿಯಾಗಿ ಮಲಗಿರುವ ಕೃಷ್ಣನ ಕಣ್ಣನ್ನು ಕುಕ್ಕುವೆನೆಂದು ಆತನ ಮೇಲೆ ಎರಗಿತು.

೭೩. ಕಾಗೆಯೊಂದು ಕಮಂಡಲುವಿನ ಮೇಲೆರಗಿ ಅದರೊಳಗಿನ ನೀರಿಗೆ

---

೧ ಟ್ಟು (ಕಾ). ೨ ಳೆಂ (ಕ, ಮ). ಳೀಂ (ಪ). ೩ ಳ್ವಿದ (ಕ, ಮ, ಪ). ೪ ಯಾ (ಕಾ). ೫ ಕಾಯ್ದೂ (ಕ), ಕಾಯ್ದಾ (ಕಾ), ತಾಯೂ (ಪ). ೬ ಬಲ್ಲೂ (ಕ, ಮ, ಪ). ೭ ಗಲ್ (ಕ, ಮ, ಪ). ೮ ನೆಸಡಿ (ಪ), ಳೆಸದಿ (ಕ). ೯ ದೆ (ಕ, ಪ). * ಇದು ಎತ್ತಿಕೊಂಡವರನ್ನೆ ನಾಶಮಾಡುವ ಒಂದು ಮಾಯದ ಕೂಸೆಂದು ಪ್ರತೀತಿಯಿದೆ. (ಬಸವಣ್ಣನವರ ವಚನ ೬೬೭, ಸಿದ್ಧರಾಮಚರಿತ್ರೆ ೨-೮. ರೇವಣ ೧೧೯-೨೩ ನೋ.)

ಪೊಡೆದಗ್ರಾಂಗುಳಿ ಪಕ್ಷದಿಂದುಡಿವಿಂ ಪಕ್ಷದ್ವಯಂ ಕುತ್ತಿ ಕ
ಣ್ಣೊಡೆವನ್ನಂ ನಖಚಂಚುವಿಂದೆಱಗಿ ಮತ್ತಂ ಪೊಯ್ದು [೧]ಪೆಣ್ಗಾ[೧]ಗೆವೊಂ
ದೊಡಲಂದೊಂದ[೨]ಡಗಾಗೆ ಮೇ[೩]ಗೆ ಕರೆಯುತ್ತಾ ಕಾಗೆ ಬೀೞ್ತಿಪ್ಪಿನಂ
[೪]ಗಿಡಿಗಂ ಕೊಂಡವೊಲಟ್ಟಿ[೪]ಕೊಂದು[೫]ದು ಕರಂ ವಾಮೇತರಂ ಕೃಷ್ಣನಾ ೭೪

ವ|| ಅಂತಾ ಕಾಗೆಯಂತಕನ ಬೋನಕ್ಕೇಱೆ ಮತ್ತಂ ಕೆಲವಾನುಂ ದಿವಸದೊಳ್

ಇೞಿದುದು ನೆಲನಂ ಹಸ್ತದ
ತೆಱದಿಂ ಮುಂದಲೆಯ ನಿಡಿಯ ಜೆಡೆ[೬]ನುಣ್ಗ[೬]ರ್ಪಿಂ
ಮಿಱುಗಿದುದು ಬಣ್ಣಮಾನೆಯ
ಮಱಿಯಂತೆವೊಲಂಬೆ[೭]ಗಲಿ[೮]ಸಿ ನಡೆದಂ ಕೃಷ್ಣಂ ೭೫

ಮೊಳೆದಂತೆವೊಲೆಳೆಯ ಮುಗಿ
ಲ್ಗೆಳೆ ಮುತ್ತುಗಳಂತೆ ಬಳೆವ ಕೃಷ್ಣಂಗೆ ತಳ
ತ್ತಳಿಸಿ ಬೆ[೧೦]ಳಗಿದುವು ಪನೆ[೧೧]ಗಳ್[೧೨]
[೧೩]ಮೊಳೆಗಳಿ[೧೩]ವೆನೆ ಮಂದಹಾಸ ಬಿಸವಲ್ಲರಿಯಾ ೭೬

ವ|| ಆ ಪ್ರಾಯದೊಳ್ ಮ[೧೪]ತ್ತಮೊ[೧೪]ರ್ವ ದೇವತೆ ಲೋಯಿಸರದ ಮೆಲೆ ಭಂಡಿ

ಬಾಯಿಡಲಾಗಿ, ಒಳಗಿದ್ದ ಏಡಿ ಕಾಗೆಯ ಚಂಚು ಹಿಡಿದು ಇರುಕಿ ಮುರಿದ ಹಾಗೆ, ಕೃಷ್ಣನು ಎಡಗೈಯಿಂದ ಹಿಡಿದೊತ್ತಿ ಕಾಗೆಯ ಚಂಚನ್ನು ಮುರಿದನು.

೭೪. ಅವನ ಬೆರಳನ್ನು ಮುರಿಯಲೆಂದು ರೆಕ್ಕೆ ಮುರಿಯುವಂತೆ ಹೊಡೆದು, ಕಾಲುಗುರುಗಳಿಂದ ಎರಗಿ ಮತ್ತೆ ಹೊಡೆದು ಹೊಡೆದು ಆ ಹೆಣ್ಣು ಕಾಗೆಯ ದೇಹವು ನುಗ್ಗಾಗಿ ಒಂದು ಮಾಂಸದ ಮುದ್ದೆಯಂತಾಗಿ ಚೀರುತ್ತಾ ಬೀಳುತ್ತಿರಲಾಗಿ, ಗಿಡುಗನು ಹಿಡಿಯುವಂತೆ ರಭಸದಿಂದ ಕೃಷ್ಣನ ಬಲಗೈ ಅದನ್ನು ಹಿಸುಕಿ ಕೊಂದಿತು.

ವ|| ಹೀಗೆ ಆ ಕಾಗೆ ಯಮನಿಗೆ ಆಹಾರವಾಗಲಾಗಿ, ಮತ್ತು ಕೆಲ ದಿನಗಳಾದ ಮೇಲೆ -

೭೫. ಮುಂದಲೆಯ ನೀಳವಾದ ಜಡೆ ಸೊಂಡಿಲಂತೆ ನೆಲವನ್ನು ತಾಕುತ್ತಿರಲಾಗಿ ನುಣುಪಾದ ಕಪ್ಪುವರ್ಣದವರಿಂದ ಮಿರುಗುತ್ತ ಆನೆಯ ಮರಿಯಂತೆ ಕೃಷ್ಣನು ಅಂಬೆಗಾಲಿಕ್ಕಿ ನಡೆದನು.

೭೬. ಚಿಕ್ಕ ಮೋಡದಲ್ಲಿ ಎಳೆಯ ಮುತ್ತುಗಳು ಮೂಡುವಂತೆ ಮಂದಹಾಸವೆಂಬ ತಾವರೆ ಬಳ್ಳಿಗೆ ಒಡೆದ ಮೊಗ್ಗುಗಳೂ ಏನೊ ಎಂಬಂತೆ ಬೆಳೆಯುತ್ತಿರುವ ಬಾಲಕೃಷ್ಣನಿಗೆ ಮೊಳೆಹಲ್ಲುಗಳು ಮೂಡಿದುವು.

ವ|| ಆ ಸಮಯದಲ್ಲಿ ಮತ್ತೊಬ್ಬ ದೇವತೆಯ ಲೋಳಸರದಮೇಲೆ ಬಂಡಿ

---

೧ ಪೆಂಗಾ (ಮ), ಪಂಗಾ (ಕಾ). ೨ ಡ (ಕ). ೩ ಕಾ (ಕಾ). ೪ ನಿಡಿಗಣ್ಣಳ್ವವೊಳಲ್ವಿ (ಕ). ಗಿಡಿಗಂಗೊಳ್ವವೊಳಲ್ವಿ (ಮ). ೫ ಡು (ಕಾ, ಮ). ೬ ನುಂಗಿ (ಕ, ಮ), ನುಂಗ (ಪ). ೭ ಚೆ (ಕ, ಮ). ೮ ಲ (ಕ, ಪ). ೯ ತು (ಕಾ). ೧೦ ತೊ (ಕಾ, ಮ). ೧೧ ವಿ (ಕ, ಪ), ೧೨ ಳ (ಪ), ಳೆ (ಕಾ). ೧೩ ಗಳಗಳ (ಕಾ). ೧೪ ತ್ತೊ (ಕ, ಮ, ಪ).

ಪರಿದಂತು ಮಾಟ್ವಿನೆಂದಂಗಣದೊಳ್ತ್[೧]ಮಳಾ[೧]ಡುವ ಮಗನ ಮೇಲೆ ಶಕಟಮಾಗಿ ಪರಿ[೨]ತರೆ[೨] ಪರಿವ ಭಂಡಿಯೊಳ್ಕಾಲ್ಗೋವ ಗೋವನೆನಿಸಿ

ಕುಣಿಕಿಲ್ಗಾ[೩]ಲಿ ನೊ[೪]ಗಂ ಪ
ಲ್ಗುಣಿಯಚ್ಚೀ[೫]ಸೊಂದನೊಂದು ನೆ[೬]ರೆಯದ ತೆಱದಿಂ
ಗಣಕೆ[೭]ಯ ಬಂಡಿಯನೊದೆವವೊ
ಲಣಿಯರಮೊದೆದಂ ಪ್ರತಾಪಿ ಕೃಷ್ಣಕುಮಾರಂ ೭೭

ವ|| ಆ ರಥಮುಂ ಕಂಸನ ಮನೋರಥಮುಂ ಭಗ್ನಮಾಗೆ ಮ[೮]ತ್ತಮೊ[೮]ರ್ವ ದೇವತೆ ಕಿಶೋರವಾಗಿ ಕೇಶವಂಗೆ [೯]ಕಿಳಿಱ[೯] ಕಿವಿಯುಂ ಬಾಯುಮಂ ತೆಱೆದುಕೊಂಡು

ಬೆದಱದೆ ಬಂದು ಬಾಳಕನ ಕೆಯ್ಯನೆ ಕಾಯ್ದು ಕಡಂಗಿ ಕರ್ಚೆ ಕೊ
ರ್ವಿದ ಕುಱೆ ಕೊ[೧೦]ಯ್ಲೆಯಂ[೧೦] ಮಸಗಿ ಮೇವವೊಲಾತನುಮೇಱೆನೂಂಕಿ ಕು
ತ್ತಿದೊಡದು ನೆತ್ತಿಯಿಂದೊಡೆದು ಮೂಡುವುದುಂ ತೊಳಗಿತ್ತು ಕೆಂ[೧೧]ದಳಂ
ಕುದುರೆಗೆ[೧೨] ಮತ್ತಮೊಂದು ಕಿವಿ ಮೂಡಿದುದೆಂಬಿನಮಂಬುಜಾಕ್ಷನಾ ೭೮

ವ|| ಅಂತಾ ಗೂಂಟ[೧೩]ಸ ಬಾಯೊಳ್ಗೂಂಟಮಂ ಬೆಟ್ಟಿದಂತಿ[೧೪]ರ್ದ ಕೆಯ್ಯನುರ್ಚಿಕೊಂಡು [೧೫]ಕೋಡ[೧೫]ದ ಕಿಚ್ಚನಂತಿರ್ದ ಕೋಪದೊಳಾ ದುಷ್ಟಾಶ್ವಮನಿಕ್ಕಿ[೧೬]ಕೊಂದು ಮಾಧವನ[೧೭]ಶ್ವಮೇಧಮಂ ಮಾಡಿ ತುಱುಪಟ್ಟಿಯ ಪಾಲುಂ ಮೊಸರುಂ ಬೆಣ್ಣೆಯುಮಂ ಸೂಱೆಗೊಂಡು ಸಹಪಾಂಶುಕ್ರೀಡಿತರಪ್ಪ ಗೋಪಕುಮಾರಕರ್ಗೆ ದಕ್ಷಿಣೆಗು[೧೮]ಡುವಂತೆ ಕೊಟ್ಟು ಪೊರೆಯುತ್ತುಮಿರೆ

ಹಾಯ್ದಂತೆ ಇವನನ್ನು ಗಿಜಿ ಗಿಜಿಯಾಗಿ ಅರೆದು ಬಿಡುವೆನೆಂದು ಬಂದು, ಅಂಗಳದಲ್ಲಿ ಅಂಬೆಗಾಲಿಡುತ್ತಿದ್ದ ಆ ಮಗುವಿನ ಮೇಲೆ ಬಂಡಿಯಾಗಿ ಏರಿಬಂದಳು. ತಾನು ಬಂಡಿಯೇರುವ ಗೋವಳಿಗನೆನಿಸಿ -

೭೭. ಕುಣಿಕಿಲು, ಗಾಲ, ನೊಗ, ಚಕ್ರದ ಗಡ್ಡೆ, ಹಲ್ಲು, ಅಚ್ಚು, ಈಸು - ಇವು ಚೆಲ್ಲಾಪಿಲ್ಲಿಯಾಗಿ ಸಿಡಿಯುವಂತೆ ಪ್ರತಾಪಿಯಾದ ಕೃಷ್ಣನು ಅದೊಂದು ಚೆಂಡಿನ ಬಂಡಿಯೆಂಬಂತೆ ಜಾಡಿಸಿ ಒದೆದು ಬಿಟ್ಟನು.

ವ|| ಆ ರಥವೂ ಅದರೊಡನೆ ಕಂಸನ ಮನೋರಥವೂ ಮುರಿದು ಬೀಳಲಾಗಿ ಮತ್ತೊಂದು ದೇವತೆ ಕುದುರೆಯಾಗಿ, ಹೇಕರಿಸುತ್ತ ಕಿವಿಬಾಯಿಗಳನ್ನು ತೆರೆದುಕೊಂಡು -

೭೮. ಬೆದರದೆ ಬಂದು, ಕೊಬ್ಬಿದ ಕುರಿ ಕೊಯ್ಲಿಗೆ ಬಂದ ಹೊಲವನ್ನು ಹೊಕ್ಕು ಮೇಯುವಂತೆ, ಬಾಲಕನ ಕೈಯನ್ನು ರಭಸದಿಂದ ಕಚ್ಚಲಾಗಿ, ಆತನು ಅವರ ಕೊರಳಿಗೆ ಗುದ್ದಿದನು. ಅವನ ಮುಷ್ಟಿ ಒಳನಟ್ಟು ಅದರ ನೆತ್ತಿಯನ್ನೊಡೆದು ಹೊರ ಬೀಳಲಾಗಿ ಆ ಕುದುರೆಗೆ ಮತ್ತೊಂದು ಕಿವಿ ಮೂಡಿತೆಂಬಂತೆ ಕೃಷ್ಣನ ಕೆಂಪಾದ ಕೈ ಶೋಭಿಸಿತು.

ವ|| ಆ ಕುದುರೆಯ ಬಾಯಿಯಲ್ಲಿ ಗೂಟವನ್ನು ಜಡಿದಂತಿದ್ದ ತನ್ನ ಕೈಯನ್ನು ಎಳೆದುಕೊಂಡು ಆರದ ಕಿಚ್ಚಿನಂತಿದ್ದ ಕೋಪದಿಂದ ಆ ದುಷ್ಟ ಕುದುರೆಯ್ನು ಕೊಂದು

೧ ಮಾಳ್ತ (ಕ), ವಳ್ದಾ (ಮ). ೨ X (ಮ). ೩ ಲ್ಗೋ (ಕಾ), ಲ್ಕಾ (ಕ). ೪ ಮೊ (ಕ). ೫ ಚ್ಚಿನ (ಪ). ೬ ತೆ (ಕ). ೭ ಕಿ (ಕ, ಮ), ೮ ತ್ತೊ (ಕ, ಮ, ಪ). ೯ ಕೇಗಿ (ಕ, ಮ). ಕೇಗಿರಿ (ಪ). ೧ ಯ್ಯೆಯೇಂ (ಕ, ಪ). ೨ ಕಂ (ಮ). ೩ ಗ (ಕ, ಪ). ೪ ಟ (ಪ). ೫ ತೆ (ಕಾ). ೬ ಕೊಂ (ಕಾ, ಪ). ೭ ನ (ಕ), ಅ (ಪ). ೮ ಯಂ ಕು (ಮ).

ಆಡುವ ಮಕ್ಕಳ್[1]ನೊಳ್[1]ಕೊಂ
ಡೂಡಿಯುಮೊಳಗಿರ್ದ ಬೆಣ್ಣೆಯಂ ಮತ್ತಮದಂ
ಬೇಡಿದಪಂ ಕಾಡಿದಪಂ
ಬೇಡೆಂದು ಯಶೋದೆ ನಿನ್ನ ಮಗನಂ ಕರೆಯಾ ೭೯

ಸಲೆ ಕಾಯ್ದ ಪಾಲ್ ಬರ್ದುಂಕದು
ನೆಲಹಿನ ಪಾಲುಂ ಬರ್ದುಂಕದೆಲೆ ಕಱೆವೀ ಕಂ
ದಲ ಪಾಲುಂ ಮುಂ ಬರ್ದುಕದು
ಮೊಲೆಯೂಡ ಯಶೋದೆ ಕರೆದು ನಿನ್ನಯೆ ಮಗನಂ ೮೦

ಕಱೆಯಲಣಮಣ್ಮದಿರ್ದೊಡ
ಮಿಱುಂ[2]ಕಿ ತೊಡೆಯಿಂದ ಕಾಲನಾಕಳನಾಡಂ[3]
ಕಱೆವವೊಲೆಲ್ಲರ ಬಾಯೊಳ್
ಕಱೆದಪನೆಲೆ ಕರೆ ಯಶೋದೆ ನಿನ್ನಾತ್ಮಜನಂ ೮೧

ವ॥ ಆರ್ಗೆ ಪುಟ್ಟಿಯಾರ್ಗೆ ಮುದ್ದಾದನೆಂದು ಗೋಪಿಯರಿಕ್ಕುವ[4] ರಕ್ಕಸಗಾರ[5]ಣ್ಕಿರಲಾಱದೆ ಯಶೋದೆ ಕರೆದು ಕಡೆವ ಕಂಭದೊಳ್ಪಿಡಿದು ಕಟ್ಟಿದೊಡಾ ಕೆಚ್ಚಿನ ಕಂಭಮನಂಗಜ ಗಜಮಾಳ್[6]ಕೆಯಂ ಮುಱಿವಂತೆ ಮುಱಿದು ಪೊಱಮಟ್ಟು ಪೋಪ ಕೃಷ್ಣನಂ ಕಂಡು ಕಡುನುಡಿದು ಜಡಿದು

ಹಾಕಿದನು. ಹೀಗೆ 'ಅಶ್ವಮೇಧ' (ಕುದುರೆಯ ಸಂಹಾರ)ವನ್ನು ನೆರವೇರಿಸಿ ಕೃಷ್ಣನು ಆ ಹಟ್ಟಿಯ ಹಾಲುಮೊಸರುಗಳನ್ನೂ ಬೆಣ್ಣೆಯನ್ನೂ ಸೂರೆಗೊಂಡು ತನ್ನ ಒಡನಾಡಿಗಳಾದ ಗೋಪಬಾಲಕರಿಗೆ ದಕ್ಷಿಣೆ ಕೊಡುವಂತೆ ಕೊಟ್ಟು ಸಲಹುತ್ತಿರಲಾಗಿ—

೭೯. "ಆಡುವ ಮಕ್ಕಳನ್ನೊಡಗೊಂಡು ಬಂದು ಇದ್ದ ಬೆಣ್ಣೆಯನ್ನೆಲ್ಲ ತಿಂದು ಮುಗಿಸಿ ಮತ್ತೆ ಇನ್ನೂ ಕೊಡೆಂದು ಬೇಡುತ್ತಾನೆ, ಕಾಡುತ್ತಾನೆ. ಯಶೋದೆ, ಬೇಡವೆಂದು ಹೇಳಿ ನಿನ್ನ ಮಗನನ್ನು ಕರೆದುಕೊಳ್ಳೇ.

೮೦. (ನಮ್ಮ ಮನೆಗಳಲ್ಲಿ) ಕಾಸಿದ ಹಾಲು ಉಳಿಯದು, ನೆಲವಿನ ಹಾಲೂ ಉಳಿಯದು, ಕರೆಯುತ್ತಿರುವ ಈ ಗಿಂಡಿಯ ಹಾಲಂತೂ ಮೊದಲೆ ಉಳಿಯಲಾರದು, ಯಶೋದಾ ನಿನ್ನ ಮಗನನ್ನು ಕರೆದು ಮೊಲೆಯುಣಿಸು.

೮೧. ಹಾಲು ಕರೆಯಲಾರನಾದರೂ ಈತನು ಆಕಳ ಕಾಲನ್ನು ತೊಡೆಯಿಂದ ಇರುಕಿ ಹಿಡಿದು ಆಡನ್ನು ಕರೆವಹಾಗೆ ಎಲ್ಲರ ಬಾಯಲ್ಲಿಯೂ ಹಾಲನ್ನು ಕರೆಯುವನು. ಯಶೋದಾ, ನಿನ್ನ ಮಗನನ್ನು ಕರೆದುಕೋ.

ವ॥ ಯಾರಿಗೆ ಹುಟ್ಟಿ ಯಾರಿಗೆ ಮುದ್ದಾದನೆಂದು ಗೋಪಿಯರು ಮಾಡುವ ದೂರುಗಳನ್ನು ಕೇಳಿ ಸೈರಿಸಲಾರದೆ ಯಶೋದೆ ಕೃಷ್ಣನನ್ನು ಕರೆತಂದು, ಹಿಡಿದು ಕಡೆಯುವ ಕಂಬಕ್ಕೆ ಕಟ್ಟಿದಳು. ಮನ್ಮಥನ ಆನೆ ತನ್ನ ಕಟ್ಟುಗಂಬವನ್ನು ಮುರಿಯುವಂತೆ ಆ ಕೆಚ್ಚಿನ ಕಂಬವನ್ನು ಮುರಿದು ಹೊರಬಿದ್ದುಹೋಗುವ ಕೃಷ್ಣನನ್ನು ಕಂಡು ಗದರಿಸಿ—

---

೧ ನೆಳ (ಕ, ಮ), ನೆಟಿ (ಪ). ೨ ಱೆಂ (ಕ). ೩ ತಂ (ಕ, ಪ). ೪ + ರಕ್ಕ (ಕ, ಮ, ಪ). ೫ ಕಾರ (ಕ, ಮ, ಪ). ೬ ಳಾ (ಮ).

ದಾವಿನೊ[೧]ಳಡಸಿ ಯಶೋದಾ
ದೇವಿ [೨]ಕರಂ[೨] ಕಟ್ಟಿ[೩]ದುದರದೊರಲುಡೆಗಿಟೆತಂ
ದೇವೇಟ್ಟಿನೂ ದಾಮೋದರ
ದೇವಂಗುಡೆವಣಿವೊಲಾಯ್ತು ಬಿ[೪]ಣ್ಪೆತ್ತಾ[೪]ಯ್ತೇ ೮೨

ವ॥ ಆನೆಯನೆತ್ತುವಂ[೫]ಗಾಡು ಚಿಕ್ಕಾಡೆಂಬಂತೆ ಗೋವರ್ಧನಾಚಲ ಮನೆ[೬]ತ್ತಲಿ[೬]ರ್ದಂಗುಲೂಖಲಮೆಂಬುದಾವ ಲೆಕ್ಕಮೆಂದಜೆವರೆಲ್ಲರುಮೊಂದೆ ಕೊರಲಿಂ ಪೊಗಟೆ ಪೇರೊರಲನೆಟೆದು ಪರಿದಾಡಿದಂ ಮತ್ತಮೊರ್ಮೆ ಮಟ್ಟಿ[೭]ಯ ಮರಂಗಳಾಗಿ ಮರುಳ್ದೇವತೆಗಳಾಡುತ್ತುಮಿರ್ದ ಕೃಷ್ಣನಂ[೮] ಕರಿಯ ಕುರುಳೆಂದು [೯]ಬಗೆದು[೯] ನೀಲಮಂ ಕತ್ತುರಿಯಿಱುಂಕುವಂತಿಱುಂಕಲೊಡನೆ

ಅಮಿತಬಳಂ ಕಿಟ್ತಿಕ್ಕಿದ
ನ[೧೦]ಮುಂಕಿ[೧೦] ಮಾಂ[೧೧]ಕರಿಸಿ ಕಂಭಯುಗಮಂ ಪುರುಷೋ
ತ್ತಮನಾ ಕಂಸನ ಭುಜಯುಗ
ಳಮನವಯವದಿಂದೆ ಕಿಟ್ಟುದಂ ಗುಣಿಯಿಪವೋಲ್ ೮೩

ವ॥ ಮತ್ತಮಾತನದಟಂ ಪೇಟಿಟ್ಟೊಡೆ

ಅಡೆವಂ ಗೋಣ್ಮುರಿಗೊಂಡು ಬೋಟದಲೆಯಂ [೧೨]ಮುಂಗೆಯ್ಗಂ[೧೨] ಮೂರಿ[೧೩]ಗೊಂ
ಡಿಡುವಂ ಕೂಂಕಿ ಕೊಡಂಕೆಯಂ ಮುಗ್ಗು[೧೪]ವನಗ್ಗು[೧೫]ತ್ತಳ್ಳಿ[೧೬]ಯಂ ಗಲ್ಲಮಂ
ಮಿಡಿವಂ ಮಿಂಡರ ಮೀಸೆಯಂ ಸೆಟೆದು ಮೂಗಿಟ್ಟೇಱುವಂ ಮಕ್ಕಳ
ಟಿಟ್ರೊಡೆ ಬಾಯ್ವಾಯನೆ ಪೊಯ್ವನೇಂ ಸಿತಗನೋ ಕಾಳಾಹಿ ಕೋಳಾಹಳಂ ೮೪

೮೨. ಯಶೋದಾದೇವಿಯು ಆತನನ್ನು ಹಗ್ಗದಿಂದ ಒರಳಿಗೆ ಕಟ್ಟಿ ಹಾಕಿದಳು. ಹೊಟ್ಟೆಗೆ ಕಟ್ಟಿದ ಆ ಒರಳು ಜರಿದು ಸೊಂಟಕ್ಕೆ ಬರಲಾಗಿ ನಾನೇನು ಹೇಳಲಿ? ದಾಮೋದರ (ಕೃಷ್ಣ) ನಿಗೆ ಅದೊಂದು ಉಡಿದಾರ ಗೆಜ್ಜೆಯಂತಾಯಿತಲ್ಲದೆ ಭಾರವಾಯಿತೆ?

ವ॥ ಆನೆಯನ್ನೇ ಎತ್ತುವವನಿಗೆ ಆಡು ಚಿಕ್ಕುಟಕ್ಕೆ ಸಮಾನ ಎಂಬಂತೆ ಗೋವರ್ಧನ ಗಿರಿಯನ್ನು ಎತ್ತಲಿರುವವನಿಗೆ ಒರಳುಕಲ್ಲು ಯಾವಲೆಕ್ಕ? ಹೀಗೆಂದು ಬಲ್ಲವರೆಲ್ಲರೂ ಒಕ್ಕೊರಲಾಗಿ ಹೊಗಳುತ್ತಿರಲಾಗಿ ಆ ದೊಡ್ಡ ಒರಳುಕಲ್ಲನ್ನು ಎಳೆದುಕೊಂಡೆ ಅವನು ಓಡಾಡುತ್ತಿದ್ದನು. ಹೀಗಿರುತ್ತ ಒಮ್ಮೆ ಮತ್ತಿಯ ಮರಗಳಾಗಿದ್ದ ದೇವತೆಗಳಿಬ್ಬರು ಆಡುತ್ತ ಬಂದ ಕೃಷ್ಣನನ್ನು ಕರಿಯ ಕುರುಳೆಂದು ಭಾವಿಸಿ, ನೀಲವನ್ನು ಕಸ್ತೂರಿ ಇರುಕುವಂತೆ (?) ಇರುಕಿಸಿ ಅದುಮಲಾಗಿ—

೮೩. ಕಂಸನ ಎರಡೂ ತೋಳುಗಳನ್ನು ಸುಲಭವಾಗಿ ಕಿತ್ತೊಗೆಯುವುದನ್ನು ಸೂಚಿಸುವಂತೆ ಅಮುಕಿದ ಕಂಬಗಳಂತಿದ್ದ ಅವೆರಡೂ ಮರಗಳನ್ನು ತಿರಸ್ಕಾರದಿಂದ ಕಿತ್ತು ಬಿಸಾಕಿದನು.

ವ॥ ಆತನ ತುಂಟತನವೆಂತಹುದೆಂದರೆ—

೮೪. ಕತ್ತನ್ನು ತಿರುಚುವನು ಬೋಳದೆಲೆಯನ್ನು ಮುಂಗೈಗಳಿಂದ ಬಲವಾಗಿ

---

೧ ಯೊ (ಕ, ಪ). ೨ ಯು (ಕ) ಯ (ಮ, ಪ). ೩ + ದ್ದು (ಕ, ಪ). ೪ ಣ್ಬಂ ತಾ (ಕ, ಪ), ಣ್ಮೆತ್ತಾ (ಕಾ). ೫ ವಾತಂ (ಕಾ). ೬ ತ್ತಿ (ಕ, ಪ), ತ್ತಲೆಂದಿ (ಕಾ). ೭ ತ್ತಿ (ಕ, ಮ, ಪ). ೮ + ಕಂಡು (ಮ). ೯ X (ಕ, ಮ, ಪ). ೧೦ ಮುಕಿಲ (ಕ, ಮ, ಪ). ೧೧ ಮಾ (ಕ, ಮ). ೧೨ ಮುಯ್ಗಳಂ (ಕಾ). ೧೩ ಗಿ (ಮ). ೧೪ ಜೆ (ಪ) ೧೫ ಗ್ಗು (ಕಾ). ೧೬ ಕ್ಕೆ (ಮ)

ಇಡುವಂ ಗುರ್ದುವನುರ್ದುವಂ ಕೆಡಪುವಂ [1]ಮಲ್ಲಿ[1]ಕ್ಕುವಂ ಕುಕ್ಕುವಂ
ಬಡಿವಂ ಬಯ್ದು [2]ಚಿವುಂ[2]ಟುವಂ ಕಿನಿಸುವಂ ಪಾಯ್ದೊತ್ತುವಂ ಕುತ್ತುವಂ
ಜಡಿವಂ ಜತ್ತಕು[3]ಱಾಡುವಂ ಬಳಸುವಂ ಬೆನ್ನಟ್ಟುವಂ ಮುಟ್ಟುವಂ
ಪಿಡಿವಂ ಮಕ್ಕಳನೇಂ ಕರಂ ವಿಕರಿಯೋ ಕೂಸಾಟದೊಳ್ಕೇಶವಂ ೮೫

ವ॥ ಅಂತಾ ತುಱುಪಟ್ಟಿಯ ಕಿಱುಮಕ್ಕಳಂ[4] [5]ಬಲಮ್ಕ್ಕಳಂ[5] ಮಿಂಡ[6] ಮಕ್ಕ[7]ಳುಮ[7]ನೊಂದೆ ಕೋ[8]ಲೋಳ್ ತಂದು ಪುಯ್ಯಲಿಡಿ[9]ಸುವ ಕೃಷ್ಣನಂ ತುಱು[10]ಕಾರ್ತಿ[10]ಯರೆಲ್ಲರ[11]ಱುತ್ತುಂ ಕರೆಯುತ್ತುಂ ಬಂದು ತಂತಂಮ ಮಕ್ಕಳ ತಱಿದ ಮೆಯ್ಯುಮಂ ಮುಱಿದ ಕೆಯ್ಯುಮಂ ಪಱಿದ ಕಿವಿಯುಮಂ ಒಡೆದ ಮೂಗುಮನ[12]ಡೆದ ನೆತ್ತಿ[13]ಯ ಬುಗುಟು[13]ಮಂಡೆಯುಮಂ ಯಶೋದೆಗೆ ತೋಱಿ ದೂಱಿ ಗೋಪಿಯಿಂತೆಂದಳ್

ಏಗೆಯ್ವೆಂ ಕೊಂದೊಡಮೆನ
ಗಾಗಂ ಬಸಮಲ್ಲನೆನಗೆ ಕಿಚ್ಚಿಲ್ಲದೆ ತಾ
ನೇಗಂಡುರಿದಪನಱಿಯೆಂ
ಪೋಗಿಂ ನೀ ಮೆಚ್ಚೆ[14] ಮೆಚ್ಚುಕೆ[15]ಯ್ಯಂ ಪೊಯ್ಯಂ[15] ೮೬

ಕುಟ್ಟುವನು; ಕುಕ್ಕಿ ಕಿವಿಗಳನ್ನು ಹಿಂಡುವನು; ಮೇಲೇರಿ ಒಂದು ಪಕ್ಕೆಯನ್ನೂ ಗಲ್ಲವನ್ನೂ ತಿವಿಯುವನು; ಮಿಂಡರೆಂಬವರ ಮೀಸೆಯನ್ನು ಹಿಡಿದೆಳೆದು, ಮೂಗು ಹಿಡಿದು ಮೇಲೇರುವನು; ಮಕ್ಕಳು ಅತ್ತರೆ ಬಾಯ ಮೇಲೆ ಬಡಿಯುವನು. ಕಾಲಸರ್ಪವನ್ನು ಕೋಲಾಹಲಕ್ಕೀಡುಮಾಡಿದ ಕೃಷ್ಣನು ಎಂತಹ ತುಂಟನೋ!

೮೫. ಮಕ್ಕಳೊಡನೆ ಆಡುವಾಗ ಅವರನ್ನು ಹೊಡೆಯುವನು, ಗುದ್ದುವನು, ತಿಕ್ಕುವನು, ಕೆಡಹುವನು, ಮಲ್ಲನಂತೆ ಹಿಡಿದಾಡುವನು, ಕುಕ್ಕುವನು, ಬಡಿಯುವನು, ಬಯ್ದು ಚಿವುಟುವನು, ಕೋಪಗೊಳ್ಳುವನು, ಮೇಲೆಬಿದ್ದು ಒತ್ತುವನು, ಕುಟ್ಟುವನು, ಜಡಿಯುವನು, ಚೇಷ್ಟೆ ಮಾಡುವನು. ಆಕ್ರಮಿಸುವನು, ಬೆನ್ನಟ್ಟುವನು, ಮುಟ್ಟುವನು, ಹಿಡಿಯುವನು, ಮಕ್ಕಳಾಟದಲ್ಲಿ ಕೃಷ್ಣನು ಅದೆಂತಹ ಮಹಾದುಷ್ಟನಾಗಿರುವನು!

ವ॥ ಹೀಗೆ ಆ ಹಟ್ಟಿಯ ಚಿಕ್ಕ ಮಕ್ಕಳು, ಬಲಿತ ಮಕ್ಕಳು, ಪಡ್ಡೆ ಹುಡುಗರು ಎಲ್ಲರನ್ನೂ ಕೃಷ್ಣನು ಏಕಪ್ರಕಾರವಾಗಿ ಗೋಳಾಡಿಸುವುದನ್ನು ನೋಡಿ ನೋಡಿ ಸಾಕಾಗಿ, ಗೋಪಿಯರೆಲ್ಲರೂ ಅಳುತ್ತಲೂ ಕರೆಯುತ್ತಲೂ ಬಂದು, ತಂತಮ್ಮ ಮಕ್ಕಳ ತರಚಿದ ಮೈಯನ್ನೂ, ಮುರಿದ ಕೈಯನ್ನೂ ಹರಿದ ಕಿವಿಯನ್ನೂ ಒಡೆದ ಮೂಗನ್ನೂ ಬಡಿದ ನೆತ್ತಿಯನ್ನೂ ಬುಗುಟೆದ್ದ ತಲೆಯನ್ನೂ ಯಶೋದೆಗೆ ತೋರಿಸಿ ದೂರಲಾಗಿ ಆಕೆ ಹೀಗೆಂದಳು-

೮೬. ನಾನೇನು ಮಾಡಲಿ? ಕೊಂದರೂ ನನಗೆ ಕೈವಶವಾಗುವವನಲ್ಲ ಇವನು, ಕಿಚ್ಚಿಲ್ಲದೆ ಉರಿಯುತ್ತಾನೆ. ಅದೇಕೋ ನಾನು ಕಾಣೆ. ಹೋಗಿ, ನಿಮ್ಮ ಮನದಣಿಯೆ ಹಣಿಯಿರಿ ಅವನನ್ನು"

---

೧ ಮೇಲಿ (ಕ, ಪ). ೨ ಬಿರು (ಮ). ೩ ಕ (ಕಾ) ೪ ಳುಂ (ಕಾ). ೫ X (ಕ, ಪ). ಬಲಮ್ಕ್ಕಳುಂ (ಕಾ). ೬ ಡು (ಮ). ೭ ಳ (ಕಾ). ೮ ಕೊರ (ಕ). ೯ ಡು (ಕಾ, ಕ). ೧೦ ಪಟ್ಟಿ (ಮ). ೧೧ ಮ (ಕಾ). ೧೨ ನೆ (ಕಾ). ೧೩ ಯಂ ಬುಗೆಯಿಂ (ಕಾ). ೧೪ ಚ್ಚು (ಕ, ಮ, ಪ). ೧೫ ಯ್ಯಂ ಮುಗಿದಳ್ (ಕ, ಪ).

ವ॥ ಎನೆ ಗೋಪಿಯರ್ದೂಱಲೆವೇ[೧]ಟ್ಟುಮೆಂ[೧]ದು ದೂಱಿದೆವಲ್ಲದೆ[೨] [೩]ತರುವ[೩]ಲಿಗೆ ನೆಱ[೩]ಯು ಪೋ[೪]ಱದೆ ಬಂದೆವಲ್ಲೆವು ನೋಡಿನ್ನು ನಿನ್ನ ಮಗನ ಕೇಡನೆಂದು ಪೋಗಿ ಮಕ್ಕಳೋಪಾದಿಯ ಮ[೫]ಗವೆಂ[೫]ದೆ ಬಗೆದು ಸೆಳಕೆಯಂ ಕೊಂಡು ಕಿಱುಮುಗಿಲಂ[೬] ಬೆನ್ನಟ್ಟುವ ಕುಡುಮಿಂಚುಗಳಂತೆ ಗೋಪಿಯರೆಲ್ಲಮೊ[೭]ಲ್ಲನುಲಿದು ಮಲೆದು ಬೆನ್ನಟ್ಟೆ ಕೃಷ್ಣನುಂ ಕಿಱುನಗೆ ನಗುತ್ತುಂ ಕಿಱಿದೆಡೆಯನೋಡಿಯೋಡಲಾಱದೆ[೮] ಅಂ[೮]ತೆ ಮಗುಟ್ದು

ಬಡಿಯಿಂ ಮಕ್ಕ[೯]ಳೊಳಿ[೯]ನ್ನೊಡ
ನುಡಿದೊಡ [ಮೆ[೧೦]]ಂದಂ[೧೧]ಜಿದಂತೆ[೧೧] ಕಂಜಾಕ್ಷಂ ಕಾ
ಲ್ವಿಡಿದೆತ್ತಿ ಕೆಡಪಿ ಕಾಲಂ
ಪಿಡಿದೆಱೆದೆಱೆದಱೆಸಿ ಬಿಟ್ಟನಾ ಗೋಪಿಯರಂ ೮೭

ವ॥ ಮತ್ತಮೊರ್ವ[೧೨] ದೇವತಾವತಾರಮಪ್ಪ

ತಾಳತರು ಪಣ್ಗಳಂ ಬೇ
ತಾಳಂ ಕಲ್ಗೊಂಡು ಕಱೆವವೋಲ್ಕಱೆದುದು ಗೋ
ಪಾಳರ ತಲೆಯೊಡವಿನಮಾ
ತಾಳಂ ಬಳಿಗಳೆದನೊಂದೆ ಪೊಯ್ಲಿಂ[೧೩] ಕೃಷ್ಣಂ ೮೮

ವ॥ ಇವಂ ಮನೆಯೊಳಿರ್ದೊಡೆ[೧೪]ಲ್ಲಿಲ್ಲದ ದೂಱುಂ[೧೫] ದುರ್ಯಶಮು[೧೬]ಮಂ

ವ॥ ಈ ಮಾತಿಗೆ ಗೋಪಿಯರೆಂದರು - "ನಿನಗೆ ಮೊದಲು ದೂರು ಹೇಳಬೇಕೆಂದು ಬಂದೆವಲ್ಲದೆ, ಹುಡುಗ ನಮ್ಮ ಕೈಮರಿದವನೆಂದು ನಾವು ಬರಲಿಲ್ಲ. ಇನ್ನು ನೋಡು, ನಿನ್ನ ಮಗನ ಪಾಡನ್ನು" ಹೀಗೆ ನುಡಿದು ಹೋದ ಗೋಪಿಯರು ಈತನೂ ಕೂಡ ತಮ್ಮ ಮಕ್ಕಳಂತೆ ಇರುವ ಬಂದು (ಸಾಮಾನ್ಯ) ಮಗುವೆಂದು ಭಾವಿಸಿ, ಬೆತ್ತದ ಸೆಳೆಯನ್ನೆತ್ತಿಕೊಂಡು ಕಿರಿಮೋಡವನ್ನು ಬೆನ್ನಟ್ಟುವ ಕುಡಿಮಿಂಚುಗಳಂತೆ ಎಲ್ಲರೂ ಒಟ್ಟಾಗಿ, ರಭಸದಿಂದ ಬೆನ್ನಟ್ಟಲಾಗಿ ಕೃಷ್ಣನೂ ಮುಗುಳ್ನಗುತ್ತ ಸ್ವಲ್ಪದೂರ ಓಡಿ, ಮುಂದೆ ಓಡಲಾರದೆ, ಹಾಗೆಯೆ ಮರಳಿ ಬಂದು -

೮೭. "ಇನ್ನು (ನಿಮ್ಮ) ಮಕ್ಕಳನ್ನು ಮಾತಾಡಿಸಿದರೆ ನನ್ನನ್ನು ಬಡಿಯಿರಿ" ಎಂದು ಅಂಜಿದಂತೆ ನುಡಿಯುತ್ತ, ಕಾಲು ಓಡಿದೆತ್ತಿ ಕೆಡಹಿ, ಹಿಡಿದು ಎಳೆದೆಳೆದು ಆ ಗೋಪಿಯರನ್ನು ಅಳಿಸಿ ಬಿಟ್ಟನು.

ವ॥ ಆಮೇಲೆ ಇನ್ನೊಂದು ದೇವತೆಯ ಅವತಾರವಾದ -

೮೮. ತಾಳವೃಕ್ಷವು, ಕಲ್ಲುಬೀಸುವ ಬೇತಾಳನಂತೆ ತನ್ನ ಹಣ್ಣುಗಳನ್ನು ಒಂದೇ ಸಮನೆ ಗೋಪಾಲರ ತಲೆಯೊಡೆಯುವಂತೆ ಸುರಿಸಿತು. ಕೃಷ್ಣನು ಒಂದೇ ಹೊಡೆತದಿಂದ ಆ ಮರದ ಅವತಾರವನ್ನು ಮುಗಿಸಿ ಬಿಟ್ಟನು.

ವ॥ "ಇವನು ಮನೆಯಲ್ಲಿದ್ದರೆ ಎಲ್ಲಿಯೂ ಇಲ್ಲದ ದೂರುಗಳನ್ನು

೧ ಟ್ಟಿಂ (ಕ, ಮ, ಪ). ೨ ಲೆ (ಕ, ಪ). ೩ ತುರುವತಿ (ಕ), ತುಱುವತಿ (ಪ), ತುಱುವರಿ (ಮ). ೪ ಲಾ (ಕಾ). ೫ ಗುವೆಂ (ಪ), ಕ್ಕಳೆಂ (ಮ). ೬ ಲ (ಕ, ಮ, ಪ). ೭ ಮೆ (ಕ, ಪ). ೮ ದಂ (ಕ, ಮ, ಪ). ೯ ಳಳಿ (ಕ), ಳನಿ (ಪ). ೧೦ ವೆ (ಕ, ಕಾ, ಮ, ಪ). ೧೧ ತೆಯಾಗ (ಕ, ಪ). ೧೨ ರ್ವ (ಕಾ). ೧೩ ಯ್ದಂ (ಕಾ). ೧೪ ಡಮೆ (ಕಾ). ೧೫ ಱು (ಪ). ೧೬ X (ಮ),

[೧]ತಂದಪ[೧]ನೆಂದು ನಂದಗೋಪಂ ಗೋವಳ ವ[೨]ಸದನಂಗೊಳಿಸಿ ಗೋವಿಂದನಂ ಗೋಕುಳಮಂ ಕಾಯವೇೞ್ದು ಕಾಡನೋ[೩]ಡಿ ಕಾ[೪]ಡೆಱೆ[೪]ಯಂಗೆಱಗಿ ಗೋಪಾಳವೃಂದದೊಡನೆ ವೃಂದಾ[೫]ರ[೫]ವನಕ್ಕೆ ಕಳುಪೆ

ಉರಗಾನೀಕಮನೆತ್ತಿ ತರ್ಪನಿದು ಬಲ್ಳೇಣೆಂದು ತನ್ನಂದಸುಂ
ದರಿವೋ[೬]ವೋ ಎ[೭]ನುತೋಡೆ ಕಾಡ ಪುಲಿಯಂ ಬೆಕ್ಕೆಂದು ತರ್ಪಂ ಮಹಾ
ಕರಿಯಂ ಕೊರ್ವಿದ ದಂಷ್ಟ್ರಿಯೆಂದು ಪಿಡಿತರ್ಪಂ ನೋಡ ನಾಯೆಂದು ಕೇ
ಸರಿಯಂ ಪಾಸ[೮]ದೊಳಿಕ್ಕಿ ತರ್ಪನಿದು ಬಾಲಕ್ರೀಡೆ ಗೋಪಾಲನಾ ೮೯

ವ|| ಮತ್ತಮೊಂದು ದಿವಸಂ

ಬಸನಕ್ಕೆತ್ತಿದ ಬಾಲಮೊತ್ತಿದ ರವಂ ಬಳ್ಕಿರ್ದ ಬೆನ್ ಬಿಟ್ಟ ರ
ಕ್ಕಸಗಣ್ಬಾಯ್ದೆಱೆದಂತೆ ತೋರ್ಪ ಕಿವಿಗಳ್ಗೋವೃಂದಮಂ ಕೂಡಿ[೯] ಬೆ
ರ್ಚಿಸೆ [[೧೦]ಕು]ದ್ದಾ[೧೦]ಳ ವಿಶಾಳ ದೀರ್ಘದಶನಂ ವ್ಯಾ[೧೧]ದಾನವಕ್ತ್ರಂ ಮಳೀ
ಮಸ ವರ್ಣಂ ಪರಿತಂದುದೊಂದು ನವದೂ[೧೨]ರ್ವಾಕರ್ದಭಂ ಗರ್ದಭಂ ೯೦

ಪೇಱೆಕ್ಕಿದಂತೆ ಬೆನ್ನೊ
ಳ್ತೋ[೧೩]ಱೆ [೧೪]ಪೆಣಂ[೧೪] ಕಟ್ಟಿ ಕರ್ಚಿ [೧೫]ಬಿಟ್ಟುದು[೧೫] ಪೆಱಗ
[೧೬]ಣ್ಗೇಱೆ[೧೬] ಪಿತೃಪತಿಗೆ ಪೆಣನಂ
ಪೇಱುವ ಪೆರ್ಗಟ್ಟೆಯಂತೆ ಖರಸಂಕುಳಮಂ ೯೧

ಅಪಕೀರ್ತಿಯನ್ನೂ ತಂದಿಡುವನೆಂ"ದು ನಂದಗೋಪನು ಗೋವಳವೇಷವನ್ನು ತೊಡಿಸಿ ಕೃಷ್ಣನನ್ನು ಗೋವುಗಳನ್ನು ಕಾಯಲು ನಿಯಮಿಸಿ, ಕಾಡಿನ ಅಧಿಪತಿಗೆ ನಮಸ್ಕರಿಸಿ, ಗೋಪಾಲಕ ರೊಡನೆ ಅವನನ್ನು ವೃಂದಾವನಕ್ಕೆ ಕಳಿಸಿದನು.

೮೯. (ಹೀಗೆ ಕಾಡಿಗೆ ಕಳಿಸಲಾಗಿ) ಹಾವುಗಳನ್ನು ಹಿಡಿದುಕೊಂಡು ಬಂದು, ಒಳ್ಳೆಯ ಚೆನ್ನಾದ ಹಗ್ಗಗಳಿವೆ ಹಿಡಿ ಎಂದು ತೋರಿ ಯಶೋದೆ ಗಾಬರಿಯಾಗಿ ಓಡುವಂತೆ ಮಾಡುವನು. ಕಾಡ ಹುಲಿಯನ್ನು "ಇದೋ! ಬೆಕ್ಕು" ಎಂದು ತರುವನು; ಕೊಬ್ಬಿದ ಹಂದಿಯೆಂದು ಆನೆಯನ್ನು ಹಿಡಿತರುವನು; "ಈ ನಾಯಿಯನ್ನು ನೋಡು" ಎಂದು ಸಿಂಹವನ್ನು ಕೊರಳಿಗೆ ಹಗ್ಗ ಕಟ್ಟಿ ಎಳೆತರುವನು, ಇದು ಆ ಗೋಪಾಲನ ಬಾಲಕ್ರೀಡೆ.

ವ|| ಮತ್ತೊಂದು ದಿವಸ -

೯೦. ಸೊಕ್ಕಿನಿಂದ ಉಗ್ರವಾಗಿ ಬಾಲವನ್ನೆತ್ತಿಕೊಂಡು, ಘೋರವಾಗಿ ಧ್ವನಿಮಾಡುತ್ತ, ಬಾಗಿದ ಬೆನ್ನೂ ರಾಕ್ಷಸನಂತಹ ಕಣ್ಣೂ ಬಾಯಿ ತೆರೆದಂತೆ ತೋರುವ ಕಿವಿಗಳೂ ಗುದ್ದಲಿಯಂತಹ ತೋರ ಹಲ್ಲುಗಳೂ ಅಗಲವಾಗಿ ಹಿರಿದುಕೊಂಡ ಬಾಯಿಯೂ ಉಳ್ಳ ಕರಿಯ ಕತ್ತೆಯೊಂದು ಹಸುಗಳನ್ನೆಲ್ಲ ಬೆದರಿಸುತ್ತ ಬಂದಿತು.

೯೧. ಆ ಕತ್ತೆಯು ಕಚ್ಚಿ ಕಚ್ಚಿ ಬಿಸುಟ (ಕತ್ತೆಗಳ) ಹೆಣಗಳು ಅದರ ಬೆನ್ನ ಮೇಲೆ

---

೧ ತಪ್ಪ (ಕಾ). ೨ ರಂ ವ (ಕ, ಮ). ರಂ ಪ (ಪ). ೩ ನೂ (ಕ, ಮ, ಪ). ೪ ದೊಡೆ (ಕ, ಮ, ಪ). ೫ X (ಕ, ಮ, ಪ). ೬ ಯೋ (ಪ). ೭ ವೆ (ಕ, ಮ, ಪ). ೮ ಶ (ಕಾ). ೯ ಡೆ (ಕ, ಮ). ೧೦ ಕೂಳ್ವಾ (ಕಾ), ಕೂದ್ದಾ (ಮ), ಪದ್ದಾ (ಕ, ಪ). ೧೧ ವೋ (ಮ). ೧೨ ದು (ಕ, ಮ). ೧೩ ಳ್ತಾ (ಕ, ಮ, ಪ). ೧೪ ಯಪಣ್ (ಪ). ೧೫ ಬಿಸುಟುದು (ಕಾ). ೧೬ ಣ್ಗೇಱೆ (ಕಾ).

ವ॥ ಅಂತು [1]ಪೆಂಟೆಗಳಂ[1] ದಾಂಟಿ ಕೆಡಪುತ್ತುಂ ಕಡವಂಗಳಂ ಕರ್ಚಿ ಕೆಡಪುತ್ತುಂ ಬೆಗಡುಗೊಂಡೋಡುವ ಗುಂಡನುರುಳೆವಾಯ್ದು ಕೆಡುಪುತ್ತುಂ ತಾನೆ ತನ್ನ ಬೀರ[2]ಕ್ಕೆಣ್ಬ[2]ರೇಱಿದ ಕಟ್ತೆಯಂತೆ ಬೆಬ್ಬಸ ಬೆಸೆದು [3]ಬ್ರಹ್ಮ[3]ನಂ ಕೂರಿಸಿದ ಕಟ್ತೆಯಂತಾರುಮಂ ಕೈಕೊಳ್ಳದಿದಱ ಬಾಯ್ಗೆ ಬ್ರಹ್ಮಾಂಡಮೆಯ್ದದೆಂಬಂತೆ ಬಾಯಂ ತೆಱೆದು ಕೇಳ್ದರೆರ್ದೆ ತೆಱೆವಿನಮೊಳಱಿ [4]ಪೆಂಟೆಯ[4] ಪೊಟ್ಟೆಯಂ ಕರ್ಚಿ ಸೆಳೆಯೆ ಬಾಯೊಳೆಟಿಲ್ದ ಕರುಳಿಂ [5]ಕೆಯ್ಯ[5] ನೇಣಂ ಕರ್ಚಿ ಪರಿವ ಕುದುರೆಯಂತೆ ಬೀದಿವರಿದು ಮಾಮುಸಕಂ ಮುಸಗಿ ತುಱುಪಳ್ಳಿಯೆಲ್ಲಮನೊಕ್ಕ[6]ಲಿಕ್ಕಿ ಕೊಲ್ವ ಕಟ್ತೆಯ ಕೋಳಾಹಳಕ್ಕಂತೆ ಕುಣಿವಂಗೆಱೆಯಪ[7]ನಾದಂತೆ ಗೋವಳರ್ಗಾವಳಿಗೊಂಡು ಗೋವಳ ಗೋಲನೆತ್ತಿಕೊಂಡೊದ[8] ಱಧೀರನದಿರದೆ[8] ಬರ್ಪು[9]ದಬ್ಬೆಯ[9] ಬೇಟ್ಪುದವರೆವಿ[10]ಟ್ಟೆಂಬಂತೆನ್ನ ಬೇಟ್ಪಾತನುಮೀತನೆಂದು ಕಟ್ತೆ ಮೇಲ್ವಾಯಲೊಡನೆ

ಹರಿ ಹರ್ಯಕ್ಷನ ಬಾಯಂ
ತಿರೆ ಕಟ್ತೆಯ ತೆಱೆದ ಬಾಯನೊಱಹಾಯ್ತೆನಗೆಂ
ದೆರಡುಂ ಕೆಯ್ಯಿಂ[11] ಪಿಡಿದಾ
ಸುರಮಾಗಿರೆ ಸೀೞ್ದು ಬಿಸುಟನೆರಡುಂ ದೆಸೆಗಂ ೯೨

ಹೇರನ್ನು ಅಳವಡಿಸಿದಂತೆ ತೋರಲಾಗಿ, ಅದು ಯಮನಿಗೆ ಹೆಣಗಳನ್ನು ಹೊತ್ತು ಮುಟ್ಟಿಸುವ ಕತ್ತೆಯೆಂಬಂತೆ ಕಂಗೊಳಿಸಿತು.

ವ॥ ಹೆಣ್ಕತ್ತೆಗಳನ್ನು ದಾಟಿ ಕೆಡಹುತ್ತಲೂ, ಗಂಡುಗತ್ತೆಗಳನ್ನು ಕಚ್ಚಿ ಕೆಡಹುತ್ತಲೂ, ಗಾಬರಿಯಾಗಿ ಓಡುವ ಹಿಂಡನ್ನು ಉರುಳುವಂತೆ ಹಾಯ್ದು ಕೆಡಹುತ್ತಲೂ ಎಂಟು ಜನ ಏರಿದ ಕತ್ತೆಯಂತೆ ಬಿಂಕದಿಂದ ಅಬ್ಬರಿಸುತ್ತಲೂ ಬರಮನನ್ನು ಕೂರಿಸಿಕೊಂಡ ಕತ್ತೆಯಂತೆ, ಯಾರನ್ನೂ ಲೆಕ್ಕಿಸದೆ, ತನ್ನ ಬಾಯಿಗೆ ಬ್ರಹ್ಮಾಂಡವೂ ಸಾಲದೆಂಬಂತೆ ಬಾಯ್ತೆರೆದು, ಕೇಳಿದವರ ಎದೆಯೊಡೆಯುವಂತೆ ಹೇಕರಿಸಿ, ಹೆಣ್ಣು ಕತ್ತೆಯ ಹೊಟ್ಟೆಯನ್ನು ಕಚ್ಚಿ ಸೆಳೆಯಲಾಗಿ ಅದರ ಬಾಯಿಂದ ಇಳಿಬಿದ್ದ ಕರುಳನ್ನು ನೋಡಿದರೆ ಇದೇನು ಹಗ್ಗವನ್ನು ಕಚ್ಚಿಕೊಂಡು ಓಡುವ ಕುದುರೆಯೋ ಎಂಬಂತೆ ಸಿಕ್ಕಿಸಿಕ್ಕಿದಂತೆ ಹರಿದಾಡಿ, ಕ್ರೋಧಾವೇಶದಿಂದ ತುರುಕಾರರ ಆ ಹಳ್ಳಿಯನ್ನೆಲ್ಲ ಚೆಲ್ಲಾಪಿಲ್ಲಿ ಮಾಡಿತು. ಸುಮ್ಮನೆ ಕುಣಿಯುವವನಿಗೆ ಎರೆಯಪ್ಪನನ್ನು ತಿನಿಸಿದಂತೆ ಅಬ್ಬರಿಸುವ ಆ ಕತ್ತೆಯ ಕೋಲಾಹಲಕ್ಕೆ ಗೋವಳಿಗರು ಗುಂಪುಗೂಡಿ ಕೋಲೆತ್ತಿಕೊಂಡು ಬಂದು ಗದರಿಸುತ್ತಿರಲಾಗಿ ದಿಟ್ಟನಾದ ಕೃಷ್ಣನು ಅಂಜದೆ ಅಲ್ಲಿಗೆ ಬಂದನು. ಅಬ್ಬೆಬೇಡುವುದು ಅವರೆಯ ಹಿಟ್ಟೆಂಬಂತೆ ತನಗೆ ಬೇಕಾದದ್ದೇ ಈತನೇ ಎಂದು ಉತ್ಸಾಹದಿಂದ ಆ ಕತ್ತೆಯು ಅವನ ಮೇಲೆ ನುಗ್ಗಿತು.

೯೨. ಸಿಂಹದ ಬಾಯಿಯಂತೆ ತೆರೆದ ಅದರ ಬಾಯನ್ನು ನೋಡಿ ಕೃಷ್ಣನು ಇದೊಂದು ನನಗೆ ಅನುಕೂಲವೇ ಆಯಿತೆಂದು ಎರಡೂ ಕೈಗಳಿಂದ ಹಿಡಿದು (ಬಾಯಿಯಿಂದ ಬಾಲದವರೆಗೆ) ಆ ಕತ್ತೆಯನ್ನು ಭೀಕರವಾಗಿ ಸೀಳಿ ಇಕ್ಕೆಲಕ್ಕೂ ಅದರ ಎರಡೂ ಹೋಳುಗಳನ್ನು ಬಿಸಾಕಿದನು.

---

೧ ಪಟ್ಟೆ (ಕ, ಮ, ಪ), ಪೆಟ್ಟೆ (ಕಾ). ೨ ಕ್ಕೆಟ್ಟ (ಕ, ಪ), ಕ್ಕೆಬ್ಬ (ಮ). ೩ ಬರ್ಮ (ಮ) ದುರ್ಮ (ಕಾ). ೪ ಪೆಟ್ಟೆ (ಮ), ಪೆಟ್ಟೆ (ಕ, ಪ). ೫ ಕಪ್ಪೆಯ (ಕ, ಮ, ಪ). ೬ ಕ್ಕಿ (ಕಾ, ಮ). ೭ ಪ್ಪ (ಪ). ೮ ಜೆ ಧೀರನಂಧೀರನದೆ (ಕಾ). ೯ ದಂಬೆಯ (ಮ). ದಬ್ಬೆಯು (ಕಾ). ೧೦ ಯಲಿ (ಕ). ೧೧ ಯ್ಯಂ (ಪ).

ವ|| ಆಗಳ್ ಕೃಷ್ಣನ ಕೆಯ್ಯ ಕೋಲಿಂ[೧]ದು[೨]ದಿರ್ದ[೨] ಪಲ್ಗಳಾ ಕಟ್ಟಿಯ ನೆಗಟ್ಟಿಯಂ ಕಟ್ಟಿಯೊ[೩]ಳುಟ್ಟು[೩] ಕವಡಿಕೆಯಂ ಬಿತ್ತಿದಂತೆಸೆಯೆ ಮುರಾರಿಯ ವೀರವೃತ್ತಿ [೪]ದೆಸೆ[೪]ದೆಸೆಗೆ ಬೆಸೆಯೆ ಮೂಗಿನ ಮೇಲೆ[೫]ಕೆಯ್ಯನಿಟ್ಟು [೬]ಜನಮೆಲ್ಲಂ[೬] ಚೋದ್ಯಂಬಡೆ ತಾಯುಂ ತಂದೆಯುಂ ಸಂತೋಷಂಬಡೆ

ನಿಯತಾಹಂಕೃತಿ ಪೂತನಾಪ್ರತಿಭಯಂ ಲೋ[೭]ಲಾತ್ಮ[೭]ಕಾಕಾಂತಕಂ
ಲಯಶಂಕಾಶಕಟಾಪಕಾರಿ ಖರತಾ ಚಕ್ರೀವಜೀವಾಪಹಂ
ಭಯಲೋಭಾರ್ಜುನಭಂಜನಂ ನುತಯಶೋದಾನಪ್ರಿಯಾತ್ಮೋದ್ಭವಂ[೮]
ಜಯಮಂ ತಾಳ್ದಿದುದಾತ್ತಸನ್ನಿಭಗುಣಂ ಶ್ರೀಗಂಡ[೯]ಗೋಪಾಳನಾ[೧೦] ೯೩

ಗದ್ಯ|| ಇದು ಮೃದುಪದಬಂಧ ಬಂಧುರ ಸರಸ್ವತೀ ಸೌಭಾಗ್ಯಭ್ರಂಗ ಭಂಗಿನೀ ನಿಧಾನ ದೀಪವರ್ತಿ ಚತುರ್ಭಾಷಾಕವಿಚಕ್ರವರ್ತಿ ನೇಮಿಚಂದ್ರಕೃತಮುಂ ಶ್ರೀಮತ್ಪ್ರತಾಪಚಕ್ರವರ್ತಿ ಶ್ರೀ ವೀರಬಲ್ಲಾಳದೇವಪ್ರಸಾದಾಸಾದಿತ ಮಹಾಪ್ರಧಾನಪದವೀವಿರಾಜಿತ ಸೆಜ್ಜೆವಳ್ಳ ಪದ್ಮನಾಭದೇವ ಕಾರಿತಮುಮಪ್ಪ ನೇಮಿನಾಥ ಪುರಾಣದೊಳ್ ಹರಿಬಾಲಕ್ರೀಡಾವರ್ಣನಂ ಸಪ್ತಮಾಶ್ವಾಸಂ.

ವ|| ಕೃಷ್ಣನ ಕೈಯಿಂದ ಉದಿರಿದ ಅದರ ಹಲ್ಲುಗಳು, ಕತ್ತೆಯಲ್ಲಿ ಬಿತ್ತಿ ಬೆಳೆದು ಕೊಂಡ ಕವಡೆಗಳಂತೆ ತೋರಿದುವು. ಕೃಷ್ಣನ ಪರಾಕ್ರಮವು ದಿಕ್ಕುದಿಕ್ಕಿಗೆ ಹೆಚ್ಚಲಾಗಿ, ಜನವೆಲ್ಲ ಮೂಗಿನ ಮೇಲೆ ಕೈಯಿಟ್ಟುಕೊಂಡು ವಿಸ್ಮಯಬಿಟ್ಟರು; ತಾಯ್ತಂದೆಗಳು ಸಂತೋಷಪಟ್ಟರು.

೯೩. ಅಹಂಕಾರದಿಂದ ಬಂದಿದ್ದ ಪೂತನೆ, ಚಂಚಲ ಮನಸ್ಕನಾದ ಕಾಕಾಸುರ, ಪ್ರಳಯ ಭ್ರಮೆಯುಂಟು ಮಾಡಿದ್ದ ಶಕಟಾಸುರ, ಪ್ರಚಂಡನಾದ ಖರಾಸುರ, ಭಯಾನಕ ಮತ್ತಿಮರಗಳು, - ಇವರೆಲ್ಲರನ್ನು ಸಂಪೂರ್ಣವಾಗಿ ನಾಶಮಾಡಿ, ಯಶೋದೆಯ ಮುದ್ದಿನ ಮಗನೂ, ಗಂಡಗೋಪಾಳನೂ ಆದ ಕೃಷ್ಣನು ಜಯವಂತನಾಗಿದ್ದನು.

---

೧ ಳಿಂ (ಕಾ, ಮ). ೨ ದಿರ್ದ (ಕಾ). ೩ ಳ್ (ಕಾ). ೪ X (ಕ, ಕಾ, ಪ). ೫ ಗೆ (ಕಾ). ೬ X (ಕಾ). ೭ ಲಾತ್ಮ (ಕ), ಲೋತ್ಮ (ಪ). ೮ ಯಂ (ಮ). ೯ ಧ (ಕ, ಪ). ೧೦ ಕಂ (ಕ, ಮ, ಪ)

ಶ್ರೀ

ಅಷ್ಟಮಾಶ್ವಾಸಂ

ಶ್ರೀಯಂ ಪಡೆದಂ ವಿಬುಧ
ಗ್ರೀಯಲ್ಪಡೆದಂ ಪ್ರತಾಪಮಂ ಧಾರಿಣಿಯಂ
ಕಾಯಲ್ಪಡೆದಂ ಪ್ರತಿಭೆಯ
ನಾಯಮನಱಿಯಲ್ ಯಶೋರ್ಥಿಮೂರ್ತಿ ಮುಕುಂದಂ ೧

ವ॥ ಆ ಗಂಡಗೋಪಾಳನ ಗೋಕುಳಕ್ಕೆ ಪುಲ್ಲುಂ ನೀರುಮಂ ಸಲಿಸಿ[1] ಬೆರ್ಚಿ ಬೆಸಕೆಯ್ಯಲೆಂದು

ನೀರಂ ನೀರಂಧ್ರಮೇಘಂ ಸುರಿಯೆ ಮೊರೆಯೆ ಭೀಮಾರುತಂ ಮಾರುತಂ ಕೋ[2]
ಳ್ಗಾ [3]ರಂ ಗಾರಂಬೊಲಾಯ್ತೆಂದಗಿಯೆ ಪಥಿಕಳರುಚ್ಚಾ[4] ತಕಂ ಚಾ[5]ತಕಂ ಕಾ
ಸಾರಾಸಾ[6]ರಾರ್ಥಿ[6] [7]ಗೋಲಂಗು[7]ಡಿಯೆ ನಲಿವಿ[8]ನೋಜಂಬುವಂ ಜಂ[9]ಬುವಂ ಸೋ[10]
ಕೀರಂ ಕೀರಂ ಕರ್ದುಂಕುತ್ತಿರೆ ಕೆರಳಿಸಿದತ್ತೋವಿ ಕಾರಂ ವಿಕಾರಂ ೨

ಎಳಮಿಂಚಂ ತಳಿಯಿಕ್ಕಿ ಚಾದಗೆಗಳಂ ಬಿಟ್ಟೊ[11]ಡಿ ಬಲ್ಗೆಚ್ಚಲಿ[12]
ಟ್ಟಳಿನೀಳಾಂಬುದದಿಂ ಬಟಿಲ್ವ[13] ಗಗನಶ್ರೀ[14]ಧೇನುವಂ[14] ಕೋಮಳಾ
ಮಳ ಧೀರ್ಘಾಮೃತಧಾರೆಗಳ್ಸುರಿಯೆ ಭೋರ್ಭೋರೆಂಬಿನಂ ಶಕ್ರಚಾ
ಪಳತಾದಾಮಕದಿಂದೆ ಕಟ್ಟಿ ಕಱ[15]ದಂ ಕಾರೆಂಬ ಗೋಪಾಳಕಂ ೩

೧. ವಿದ್ವಾಂಸರಿಗೆ ಕೊಡಲೆಂದು ಧನವನ್ನೂ, ಭೂಮಿಯನ್ನು ರಕ್ಷಿಸಲೆಂದು ಪರಾಕ್ರಮವನ್ನೂ ರಹಸ್ಯವನ್ನು ತಿಳಿಯಲೆಂದು ಪ್ರತಿಭೆಯನ್ನೂ ಯಶೋಮೂರ್ತಿಯಾದ ಕೃಷ್ಣನು ಪಡೆದನು.

ವ॥ ಆ ಗಂಡಗೋಪಾಳನ ಗೋವುಗಳಿಗೆ ಹುಲ್ಲನ್ನೂ ನೀರನ್ನೂ ಒದಗಿಸಿ, ಭಯಭಕ್ತಿಯಿಂದ ಸೇವೆ ಮಾಡಲೆಂದು -

೨. ದಟ್ಟವಾಗಿ ಕವಿದ ಮೋಡಗಳು ನೀರನ್ನು ಸುರಿದುವು; ಭೀಕರವಾಗಿ ಭೋರ್ಗರೆಯುತ್ತ ಬಿರುಗಾಳಿ ಬೀಸಿತು; ತಂಪಾಗಿರಬೇಕಾದ ಮಳೆಗಾಲ ಬೆಂಕಿಯಂತಾಯಿತೆಂದು (ವಿರಹಿಗಳಾದ) ಪಥಿಕರು ಗಾಬರಿಯಾದರು; ಚಾತಕ ಪಕ್ಷಿ ಉತ್ಕಂಠೆಯಿಂದ ಮುಖವೆತ್ತಿ ಮಳೆನೀರನ್ನು ಗಟಗಟನೆ ಕುಡಿಯಿತು; ನೇರಿಳೆಯ ಮೇಲೆ ಕುಳಿತು ಅದರ ಸಾರವತ್ತಾದ ರಸವನ್ನು ಕುಕ್ಕಿ ಕುಕ್ಕಿ ಗಿಳಿಯು ಹೀರತೊಡಗಿತು. ಹೀಗೆ ಮಳೆಗಾಲವು ವಿಕಾರವನ್ನು ಕೆರಳಿಸಿತು.

೩. ಎಳೆಮಿಂಚೆಂಬ ತಳಿಯನ್ನು ತೊಡರಿಸಿ, ಚಾದಗೆಗಳೆಂಬ ಕರುವನ್ನು ಬಿಟ್ಟು ಉಣಿಸಿ, ದುಂಬಿಗಳಂತೆ ನೀಲವರ್ಣವುಳ್ಳ ಮೋಡಗಳೆಂಬ ತೋರವಾದ ಕೆಚ್ಚಲಿನ

೧ ಸೆ (ಕ, ಮ, ಪ). ೨ ಕೊ (ಪ). ೩ ಳ್ಗಾ (ಪ), ೪ ರಂ ಚಾ (ಮ). ೫ ಜಾ (ಕ). ೬ ರಾರ್ದಿ (ಕಾ), ರರ್ದಿ (ಮ). ೭ ಗೊಲ್ಲಂ ನು (ಕಾ). ೮ ವೆ (ಕ, ಮ, ಪ). ೯ ನಿಂ (ಕ). ೧೦ ಸೊಂ (ಮ). ೧೧ ಟ್ಟೋ (ಕ, ಪ). ೧೨ ನಿ (ಕಾ), ವಿ (ಮ). ೧೩ ಲ್ದ (ಕ, ಮ, ಪ). ೧೪ ದೇವನುಂ (ಕ)

ವ॥ ಅಂತುಮಲ್ಲದೆ

ಕಳ ಕೇಕಾರುತಿ ಪೋಲೆ[೧] ವೇಣುರುತಿಯಂ ಬೀಸುತ್ತೆ ಮಿಂಚೆಂಬ ಗೋ
ವಳಿ[೨]ಗೋಲಿಂ ಪೊಡೆಸೆಂಡುವೊಯ್ದು ಸಿಡಿಲಂ ಗೀರ್ವಾಣಬಾಣಾಸನ
ಚ್ಛಳದಿಂ ಕತ್ತರಿವೀಲಿಯೊಂದು ಪಣೆಗ[೩]ಟ್ಟಂ ಕಟ್ಟಿಕೊಂಡಭ್ರಕಂ
ಬಳಮಂ ಗೋವನವುಂಕಿ ಬಂದೊದವಿ[೪]ದಂ ಕಾರೆಂಬ ಗೋಪಾಳಕಂ ೪

ವ॥ ಅಂತು ಬಂದ ಕಾರ್ಗಾಲಮಂ ಕಂಡು ಮನಂಗೊಂಡು [೫]ಮತ್ತ[೫]ಮಾ ದೇವತೆಯರ್ಬೇತಾಳನ ಪೆಣದಂತೆ ತನ್ನ ಕೆಯ್ಯ[೬]ಂ ಬಿಡದೆ ಕೊ[೭]ಂದ ಕೋಲೆಯಂ[೮] ತಲೆಪಮನುಟೆಯದುದಕಮೂರ್ಮಿಕದಿಂ ಕೆ[೯]ಟ್ಟುಂ ಕೆ[೯]ಡದಂತೆ ತಮ್ಮಗುರ್ವಿನಗುರ್ವಣೆಯ ಕಾಕಾದಿ[೧೦] ವಿಕಾರದಿಂ ಸತ್ತುಂ ಸಾಯದೊಂದೆ[೧೧]ಡೆಗೆ[೧೧]ವಂದು ಪರಿವ ನೀರಂ ಪಱಿಯೆ ಪೊಯ್ಕಲ್ ಮುರಿಯನಿಱಿದೇರ್ಪಡಿಸಲುಂ ರಸಮಂ ಸೋಯಿಸಲುಂ ನೋಯಿಸಲುಂ ಇನ್ನುಮೊರ್ವಂ ಪುಟ್ಟುವನುಂಟಕ್ಕುಮೆ[೧೨]ಯೆಂದೋರೊರ್ವರ[೧೨] ಕೆಯ್ಯಂ ಪೊಯ್ದು ಕಹಕ[೧೩]ಹಾಟ್ಟಹಾಸದಿಂ ಕರುಳ್ಪಱಿಯೆ ನಕ್ಕು

ಭಾರದಿಂದ ಬಳಲುವ ಆಕಾಶವೆಂಬ ಉತ್ತಮವಾದ ಹಸುವನ್ನು ಇಂದ್ರಧನುವೆಂಬ ಹಗ್ಗದಿಂದ ಕಟ್ಟಿಹಾಕಿ ದೀರ್ಘವಾದ ಅಮೃತಧಾರೆಗಳು ಸುರಿಯುವಂತೆ ಮಳೆಗಾಲವೆಂಬ ಗೋವಳನು (ಹಾಲು) ಕರೆದನು.

೪. ನವಿಲುಗಳ ಕೂಗು ಕೊಳಲ ನಾದವನ್ನು ಹೋಲುತ್ತಿರಲಾಗಿ, ಮಿಂಚೆಂಬ ಕೋಲಿಂದ ಬೀಸಿ ಸಿಡಿಲನ್ನು ಹೊಡೆಚೆಂಡಾಡುತ್ತ, ಇಂದ್ರಧನುವೆಂಬ ನವಿಲ್ಗರಿಯ ಕತ್ತರಿ ಹಣೆಗಟ್ಟನ್ನು ಕಟ್ಟಿಕೊಂಡು, ಮೋಡಗಳೆಂಬ ಕರಿಯ ಕಂಬಳಿಯನ್ನು ಅವುಕಿಕೊಳ್ಳುತ್ತ ಮಳೆಗಾಲವೆಂಬ ಗೋವಳಿಗನು ಬಂದು ಗದರಿದನು.

ವ॥ ಹೀಗೆ ಬಂದ ಮಳೆಗಾಲವನ್ನು ಕಂಡು ಉತ್ಸಾಹಿತರಾಗಿ (ಕಂಸನು ಕಳಿಸಿದ್ದ) ಆ ದೇವತೆಗಳು ಬೇತಾಳನ ಹೆಣದಂತೆ ಬೆನ್ನು ಬಿಡದೆ ಕೋಲೆಯನ್ನೂ ಹಿಂಸೆಯನ್ನೂ ತೊರೆಯದೆ, ತೆರೆಯಿಂದ ಕದಡಿದರೂ ಕೆಡದೆ ಉಳಿಯುವ ನೀರಿನಂತೆ, ತಮ್ಮ ಅತ್ಯುಗ್ರವಾದ ಕಾಗೆಯೆ ಮೊದಲಾದ ವಿಕೃತ ರೂಪಗಳಿಂದ ಸತ್ತೂ ಸಾಯದೆ ಒಂದೆಡೆಗೆ ಒಟ್ಟು ಗೂಡಿ. "ಹರಿವ ನೀರನ್ನು ಕತ್ತರಿಸಲೂ ಸುಳಿಯನ್ನು ಬಡಿದು ನೇರಗೊಳಿಸಲೂ 'ರಸ' (ವಿಷ?)ವನ್ನು ನಿಸ್ಸತ್ವಗೊಳಿಸಲೂ ನಮ್ಮನ್ನು ನೋಯಿಸಲೂ ಇನ್ನೊಬ್ಬನು ಹುಟ್ಟಿ ಬರುವುದುಂಟೆ?" ಎಂದು ಒಬ್ಬರ ಕೈಮೇಲೊಬ್ಬರು ಕೈತಟ್ಟಿ, ಗಹಗಹಿಸಿ, ಕರುಳು ಹರಿಯುವಂತೆ ನಕ್ಕು—

---

೧ ಗೆ (ಕ, ಮ). ೨ ಳ (ಕಾ). ೩ ಕ (ಕ, ಮ, ಪ). ೪ ಜೆ (ಕ, ಮ, ಪ). ೫ X (ಕಾ). ೬ ಯ್ಯಿಂ (ಕ, ಮ, ಪ). ೭ ಕೋ (ಕಾ). ೮ ಯಿಂ (ಮ). ೯ ಟ್ಟಂಗಿ (ಕಾ). ೧೦ X (ಕ, ಮ, ಪ) ೧೧ ಡೆರೆ (ಕ), ಡರೆ (ಪ). ೧೨ ಯ್ಯದೊರ್ವರೊರ್ವರಂ (ಕ, ಮ, ಪ). ೧೩ + ಹ (ಕ).

ಅದಟಂ ಮಂಡೆಯ ಮಾಸಾ[೧]
ಱದ ತರುವ[೨]ರಿಯೆ[೨]ಮಗಮರಿಯನಾದನವಂ ಪೆ
ರ್ಚಿದೊಡಾ[೩] ಭವನುಂ [೪]ಜವನುಂ[೪]
ಕದನದೊಳಾನಲ್ಕೆ ನೆಱೆಯರೆಂಬನಿತಕ್ಕುಂ[೫] ೫

ವ॥ ಅದೊಡವಿನ್ನುಮೊರ್ಮೆಯೆ[೬]ಮ್ಮೊಳಪ್ಪುದು ಮಲ್ಲನಂತೆ ಮೆ [೭]ಯ್ವುತ್ತದೆ[೭] ಧನುರ್ಧರನಂತೆ[೮] ದೂರದಿನೆಚ್ಚುನೋಟ್ಪ[೯]ಮೆಂದು ಕೃಷ್ಣಂ ತುಱುಗಾಯಲೆಂದು ಪೊಲಕ್ಕೆ ಪೋದಲ್ಲಿ

ಪಡೆದರ್ದೇವತೆಯರ್ಮಿಗೆ
ಕಡುಮುಳಿ[೧೦]ಸಿಂದುರಿದು ದಹನಶಿಖಿಗಳ ಪೊಗೆಯಂ[೧೧]
ಪ[೧೨]ಡೆವಂತೆ ಪತ್ತು ದೆಸೆಗಂ
ಗುಡಿಗಿ[೧೩]ಱಿದಂತಾಗೆ ನೀಳಮೇಘಾವಳಿಯಂ ೬

ಕಡಲೊಳ್ಪಟ್ಟಿರ್ದವಂ ಪ[೧೪]ಟ್ಟಿರದಿರೆ ಬನದೊಳ್ಬಂದ[೧೫] ಸಪ್ತಾರ್ಣವಂ ಮೇ
ಗೊಡೆವಿರ್ದಂತಾಗೆ ಮಿಂಚೆಂ[೧೬]ಬುರಿ ಮಿಗೆ ನಭಮಾಶಾಮುಖಶ್ರೇಣಿಯಿಂ[೧೭] ಗೋ
ಳಿಡುವಂತೋರಂದದಿಂದಂ ಮೊಟಗಿ[೧೮] ಮುಸುಱಿ ಮೇಘೌಘಮಬ್ಜಾಕ್ಷನಂ ಬ
ಲ್ಪಿಡಿಲಿಂದಿಟ್ಟಾಲಿಕಲ್ಲಿಂದೆಱಗಿ ಕಱಿದುದಾ ಗೋಕುಲಂ ತೇಂಕುವನ್ನಂ ೭

೫. "ಇನ್ನೂ ತಲೆಯ ಮಾಸಾರದ ಚಿಕ್ಕ ಮಗುವೆ ನಮಗೆ ಅಸಾಧ್ಯನಾದನು; ಬಲಿತನೆಂದರೆ ರುದ್ರನಾಗಲಿ, ಯಮದೇವನೇ ಆಗಲಿ ಅವನನ್ನು ಎದುರಿಸಿ ಹೋರಾಡಲಾರರು.

ವ॥ ಆದರೂ ನಾವು ಇನ್ನೊಂದು ಕೈ ನೋಡೋಣ, ಜಟ್ಟಿಯಂತೆ ಮೈಮೇಲೆ ಏರಿ ಹೋಗದೆ, ಬಿಲ್ಗಾರನಂತೆ ದೂರದಿಂದಲೆ ಹೊಡೆದು ನೋಡೋಣ" ಹೀಗೆಂದುಕೊಂಡು ಅವನು ಗೋವುಗಳು ಕಾಯಲೆಂದು ಹೋದ ಪ್ರದೇಶದಲ್ಲಿ -

೬. ಪ್ರಚಂಡವಾಗಿ ಉರಿಯುತ್ತಿರುವ ಅಗ್ನಿ ಕಾರುವ ಹೊಗೆಯಂತೆ, ಹತ್ತೂ ದಿಕ್ಕುಗಳಿಗೆ ಮುಸುಕಿಡುವ ಕಪ್ಪು ಮೋಡಗಳನ್ನು ಕವಿಸಿದರು.

೭. ಕಡಲ ಮೇಲೆ ಮಲಗಿರಬೇಕಾದ ವಿಷ್ಣು ಅವನ್ನು ಬಿಟ್ಟು ಬಂದನೆಂದು (ಹುಡುಕುತ್ತ) ಆ ಪ್ರದೇಶಕ್ಕೆ ನುಗ್ಗಿ ಬಂದ ಏಳೂ ಸಮುದ್ರಗಳೂ ಒಟ್ಟಾಗಿ ಮೇಲಿಂದ ಬಿದ್ದಂತಾಗಲು, ಮಿಂಚಿಂಬ ಉರಿ ಪ್ರಖರವಾಗಲು, (ತಡೆಯಲಾರದೆ) ಆಕಾಶವು ದಿಕ್ಕುಗಳ ಮುಖಾಂತರವಾಗಿ ಗೋಳಿಡುತ್ತಿದೆಯೊ ಏನೊ ಎಂಬಂತೆ ಗುಡುಗುತ್ತ ಮೋಡಗಳು ಹಿಂಡು

---

೧ ನಾ (ಕ, ಮ, ಪ) ೨ ಲಿನ (ಪ), ರಿನ (ಕ, ಮ). ೩ + ... (ಕಾ). ೪ X (ಕಾ). ೫ ಕ್ಕು (ಕ, ಪ). ೬ ನ (ಕ, ಮ, ಪ). ೭ ಯ್ವಿತ್ತದೆ (ಮ), ಯ್ವೆತ್ತರೆ (ಕ), ಯ್ವಿತ್ತಿರೆ (ಪ). ೮ ತು (ಮ). ೯ ಟ್ಟಿ (ಕಾ). ೧೦ ನಿ (ಕಾ). ೧೧ ಯಿಂ (ಕಾ). ೧೨ ಪೊ (ಕಾ). ೧೩ ಯಿ (ಕಾ). ೧೪ ಪು (ಕಾ). ೧೫ ದು (ಕಾ). ೧೬ ಚಿಂ (ಕಾ). ೧೭ ಯಂ (ಕ, ಮ, ಪ). ೧೮ ಗೆ (ಕ, ಪ).

[೧]ತ್ರಿಪದಿ[೧] ||

ಮೊಱಗಿ ಮಿಂಚ[೨] [೩]ಮುಂಚ[೩]ಕೊಳ್ವ
ಮಱೆ[೪]ಗಳಂಬುರಾಶಿ[೪]ಯಲ್ಲಿ[೫]
ಕಱೆಯೆ ನೀರನುಂಡು ಮೇಘ
ಮೊಱಜೆ ಕಾಱುವಂತುಟಾಯ್ತು ೮

ಪೊಡೆವ ಸಿಡಿಲ್ಗಳನೆ[೬]ಳೆಯೊಳ್
ಕೆಡೆದೇಱಿಂ[೭]ಟಣುಕು ನೆಗೆದು ನುರ್ಗ[೭]ಪ್ಪಿನೆಗಂ
ಪೊಡೆದಂ[೮] ಗೋವಳ್[೯]ಗೋಲಿಂ[೧೦]
ಪೊಡೆಸೆಂಡಾಡುವವೊಲೇಂ ಬಲಸ್ಥನೊ ಕೃಷ್ಣಂ ೯

ಕರಗದ ಮುಗಿಲಂ ಪರೆಯದ
ಸುರಧನುವಂ ಮಿಂ[೧೧]ಚುಗಿ[೧೧]ಡದ ಮಿಂಚು ಪೊಡೆದೋ
ಸರಿಸದ ಸಿಡಿಲಂ ಸಮೆಯದ
ಸರಿವಱೆಯಂ ಕಂಡು ಬೆಗಡು[೧೨]ವಟ್ಟಗೋವರ್[೧೨] ೧೦

ವ|| ಆಗಳಂ[೧೩]ಜಲಿವಾಂ[೧೩]ಜಲಿಯೆಂದು [೧೪]ಬೆಗಡು[೧೪]ಗೊಂಡ ಗೋವ[೧೫]ಳಿಗರನೊಡಗೊಂಡು ದೊಮ್ಮ[೧೬]ಳಿಸಿ ಮಮ್ಮಱಿಗೊಳ್ವ ಗೋವುಗಳನಟ್ಟಿಕೊಂಡು ಕಿಱಿದಂತರದೊಳಿರ್ದ ಗೋವರ್ಧನ ಗಿರಿಯ ಮಱೆಗೆ ಪೋಗೆ ಅದೊಂದೆ ಸಱೆಯಪ್ಪುದಱಿಂ ಪಶುಶಿಶುಪ್ರವೇಶಕ್ಕಂ ಕ[೧೭]ಕ್ಕಂ ಗುಹೆ[೧೭]ಯುಂ ನಾಱದ

ಹಿಂಡಾಗಿ ಕಾಯುತ್ತಿದ್ದ ಆ (ಎಂಟೂ ದುಷ್ಟ) ದೇವತೆಗಳು ಆಲಿಕಲ್ಲುಗಳಿಂದಲೂ ಸಿಡಿಲಿಂದಲೂ ಕೃಷ್ಣನನ್ನು ಗುರಿಯಿಟ್ಟು ಬೀಸುತ್ತ ನಿರಂತರವಾಗ ಮಳೆ ಸುರಿಸಿದುವು.

೮. ಗುಡುಗಿ, ಮಿಂಚಿ, ಸುರಿಯುವ ಮಳೆಗಳು ಸಮುದ್ರದಲ್ಲಿ ಕರಗಿಹೋಗಲಾಗಿ, ಆ ನೀರನ್ನುಂಡ ಮೋಡಗಳು, ಚೀರಿ ಚೀರಿ ಕಾರಿಕೊಳ್ಳುತ್ತಿವೆಯೊ ಏನೊ ಎಂಬಂತಾಯಿತು.

೯. ರಭಸದಿಂದ ಸಿಡಿಲುಗಳು ಬಂದೆರಗಲಾಗಿ, ಕೃಷ್ಣನು ಲಘುವಾಗಿ ನೆಗೆದು (ತಪ್ಪಿಸಿಕೊಂಡು) ಹೊಡೆಚೆಂಡಾಡುವಂತೆ ಕೈಗೋಲಿನಿಂದ ಆ ಸಿಡಿಲುಗಳನ್ನು ಹೊಡೆದು ನುಚ್ಚುನೂರು ಮಾಡಿದನು. ಅವನೆಂತಹ ಬಲಶಾಲಿಯೊ!

೧೦. ಕರಗದ ಮೋಡಗಳನ್ನೂ ಅಡಗದ ಇಂದ್ರಧನುವನ್ನೂ ಬಿಟ್ಟೂ ಬಿಡದೆ ಕುಕ್ಕುವ ಮಿಂಚುಗಳನ್ನೂ ಒಂದೇ ಸಮನೆ ಎರಗುವ ಸಿಡಿಲುಗಳನ್ನು ನಿಲ್ಲದೆ ಸುರಿಯುವ ಮಳೆಯನ್ನೂ ಕಂಡು ಗೋವಳರು ಬೆರಗಾದರು.

ವ|| ಆಗ "ಅಂಜದಿರಿ ಅಂಜದಿರಿ" ಎಂದು ಕೃಷ್ಣನು ಗಾಬರಿಗೊಂಡ ಗೋವಳಿಗರನ್ನು ಒಡಗೊಂಡು, ಭಯದಿಂದ ತತ್ತರಿಸುತ್ತಿದ್ದ ಗೋವುಗಳನ್ನು ಅಟ್ಟಿಕೊಂಡು, ಸಮೀಪದಲ್ಲಿದ್ದ ಗೋವರ್ಧನನ ಪರ್ವತದ ಮರೆಗೆ ಹೋದನು. ಅದು ಏಕಾಕಾರವಾದ ಕಲ್ಲಿನಂತಿದ್ದು

---

೧ ತ್ರಿಪದಿ (ಪ), ತ್ರಿ (ಕಾ). ೨ ಚೆ (ಮ). ೩ ನಂತೆ (ಕಾ), ಮುಂಚೆ (ಮ). ೪ ಯೊಳ್ (ಕ, ಮ, ಪ). ೫ ನಿ (ಕಾ). ೬ ಳಂ (ಕ). ೭ ಗುರ್ (ಕ). ೮ ದೆಂ (ಕ, ಮ). ೯ ಳಿ (ಕ, ಮ, ಪ). ೧೦ ಲಂ (ಕ, ಮ). ೧೧ ಚಿಕಿ (ಕ, ಮ). ೧೨ ಗೊಂಡಗೋರ್ವರ್ (ಕ, ಪ). ಗೊಂಡಂ ಗೋವಂ (ಮ). ೧೩ ಜೆಯಂ (ಕ, ಪ). ೧೪ X (ಕಾ). ೧೫ ವು (ಕಾ). ೧೬ ಮ (ಕಾ). ೧೭ ಕ್ಕ ಮಹಿ (ಕ, ಮ, ಪ).

ಪರಲಂ ಬಾರ್ತೆಗೆ ಮೀಂಟುವಂತೆ ಚರಣಾಂಗುಷ್ಠಾಗ್ರದಿಂ ಮೀಂಟಿ ಝು
ಲ್ಲರಿವೋಲ್ಲ[1]ಸೆ ಸೂಸಿ[2] ನಿರ್ಝರಜಲಂ ಬೀಳ್ತಿರ್ಪಿನಂ ಕಾವಿನಂ
ತಿರೆ ಕೊಂಡೆತ್ತಿದ ಕೇಳಿ[3] ಮುರಾರಿ ಕೊಡೆಯಂ ಕ್ರೀಡಾರಸಕ್ಕೆಱ್ತವಂ
ತಿರೆ ಕಿೞ್ತೆತ್ತಿದನೊಂದೆ ಕೆಯ್ಯೊಳೆ ಮಹಾ ಗೋವರ್ಧನಾದ್ರೀಂದ್ರಮಂ ೧೧

ಪೊಲೆಲೆ ಬಲಗೆಯ್ಯ ಗೋಪಳ[4]
[illegible] ಗೋ
[illegible]
ಶೈಲಂ ಸೆಂಡಿನವೊಲಿರ್ದುದೇನಚ್ಚರಿಯೋ ೧೨

ಹರಿ ಗಿರಿಯ ಪರ[5]ಲ್ಮೆಗುಗು[6]
ತ[7]ರೆ ತಲೆಯಿಂ[8] ತೆಗೆದು ಕಮಠನಂ ಕಮಠಂ ಪೊ
ತ್ತುರಗನನಾತನ ನಳಿತೋ
ಳುರಗಂ [9]ಪೊತ್ತ[9]ಳೆಯನದಿ, ಪೋಲ್ತಿರೆ ಪೋಲ್ತಂ ೧೩

ಕರಿಕಳಭಪತಿ ಬಯಲ್ತಾ
ವರೆಯಂ ಕಿೞ್ತೆತ್ತುವಂತೆ ಕಿೞ್ತೆತ್ತಿದನಾ
ಹರಿ ತರುಣಂ ಗೋವರ್ಧನ
ಗಿರಿಯಂ ಗೈರಿಕರಜೋವಿರಾಜಿತ [10]ದರಿಯಂ[10] ೧೪

ಪಶುಗಳಿಗಾಗಲಿ ಶಿಶುಗಳಿಗಾಗಲಿ ಹೋಗುವುದಕ್ಕೆ ಒಂದು ಗವಿ ಕೂಡ ಅದರಲ್ಲಿ ಕಾಣದೆ ಹೋದುದರಿಂದ -

೧೧. ಒಂದು ಹರಳನ್ನು ಮೀಟುವಂತೆ ಕಾಲುಂಗುಟದಿಂದ ಆ ಬೆಟ್ಟವನ್ನು ಮೀಟಿ ಎಬ್ಬಿಸಿ ಅದರ ಮೇಲಿನ ನಿರ್ಝರಗಳ ನೀರು ಜಲ್ಲರಿಯಂತೆ ಸೂಸಲಾಗಿ, ತನ್ನ ಕೈಯೆ ಕಾವಾಗಿ ಬೆಟ್ಟವೆ ಕೊಡೆಯಂತಾಗಿ, ಆ ವಿನೋದಕ್ಕಾಗಿ ಕೊಡೆಯೆತ್ತಿ ನಿಂತನೋ ಏನೊ ಎಂಬಂತೆ ಆ ಗೋವರ್ಧನ ಗಿರಿಯನ್ನು ಕೃಷ್ಣನು ಒಂದೇ ಕೈಯಲ್ಲಿ ಕಿತ್ತು ಎತ್ತಿ ಹಿಡಿದನು.

೧೨. ಬಲಗೈಯಲ್ಲಿದ್ದ ಗೋವಳಗೋಲು ಹೊಡೆಯುವ ಕೋಲಂತಿರಲಾಗಿ, ಎಡಗೈಯಲ್ಲಿದ್ದ ಪರ್ವತವು (ಅದರಿಂದ ಹೊಡೆಯಬೇಕಾದ) ಚೆಂಡಿನಂತೆ ತೋರಿತು. ಎಂತಹ ಆಶ್ಚರ್ಯಕರವಾದ ನೋಟ!

೧೩. ಬೆಟ್ಟದ ಮೇಲಿನ ಹರಳುಗಳು ಸೂಸುತ್ತಿರಲಾಗಿ ತನ್ನ ತಲೆಯ ಮೇಲಿನ ಕಮಠನನ್ನು ತೆಗೆದು ಭೂಮಿಯನ್ನು ಹೊತ್ತ ಶೇಷನಂತೆ ಆತನ ತೋಳು ಕಂಗೊಳಿಸಿತು; ಶೇಷನ ತಲೆಯ ಮೇಲಿದ್ದ ಭೂಮಿಯೆಂಬಂತೆ ಆ ಬೆಟ್ಟ ಕಂಗೊಳಿಸಿತು.

೧೪. ನೆಲದಾವರೆಯನ್ನು ಮರಿಯಾನೆ ಕಿತ್ತೆತ್ತುವಂತೆ, ಗೈರಿಕದ ಧೂಳಿನಿಂದ ಕೆಂಪಾದ ಆ ಬೆಟ್ಟವನ್ನು ಬಾಲಕನಾದ ಕೃಷ್ಣನು ಕಿತ್ತೆತ್ತಿದನು.

---

೧ ಲ್ಲ (ಕ, ಮ, ಪ). ೨ ಸೆ (ಕಾ). ೩ ಳಿ (ಕ, ಮ, ಪ), ೪ ರ್ದವಾಗ (ಕ), ರ್ಧಮಾಗ (ಕಾ), ವದ್ದವಾಗ (ಪ). ೫ ಲ್ಮಿನುಗು (ಪ). ೬ ತ್ತಿ (ಪ). ೭ ಯಂ (ಕಾ, ಮ). ೮ ಪೊಲ್ತೆ (ಕ, ಪ). ೯ ಧೈರ್ಯಂ (ಕ, ಮ, ಪ). ೧೦ ನೊ (ಕ, ಪ).

ಶೈಳಮನೆ[೧]ತ್ತುವುದುಂ ಗೋ
ಪಾಳಂ ಫಣಮಣಿಗಳೆಸೆಯೆ ಮಣ್ಮೆ[೨]ಸುವ ಪಾ
ತಾ[೩]ಳದ[೩]ಹಿ ವಿತತಿ ಪಾವಿನ
ಪೇ[೪]ಳಿಗೆಯಂ ತೆಱೆದ ತೆಱದಿನೇಂ ತೋಱೆದುವೋ[೫] ೧೫

ಕೆಂಡದ ಮೞೆಗಳ್ತಂಡ[೬]ದೆ
ಕೊಂಡಪುವೆನೆ ಪುಟ್ಟಿ ಪಾಱೆ ಕಿಡಿಗಳ್ ಕೃಷ್ಣಂ
ಕೊಂಡೆತ್ತಿದಗದ ಮೇಗಾ
ಚಂಡಿಕೆಯರ್ಮುಳಿದು ಕಲ್ಲ ಮೞೆಯಂ ಕಱೆದರ್ ೧೬

ವ|| ಅಂತೆಣ್ಬರುಂ[೭] ದೇವತೆಯರೇೞು ದಿವಸಮಾವರ್ತನ ಪರಿವರ್ತನಂ ಬಂದು ನಿರ್ವರ್ತಿಸಿದ ಸಂವರ್ತನಸಮಯಪರಿವರ್ತಿತ ಪುಷ್ಕಳಾವರ್ತಂಗಳಂತೆ ಕಗ್ಗನೆ ಗ[೮]ನಿತು ನೆಗೆದ[೯]ನೀಳ್ ಜಳಧರಂಗಳ್ ನೀಳ ಮಹೀಧರಂಗಳೆ ವಿಪುಳ ಪಾಷಾಣ [೧೦]ಜರ್ಝನಿರ್ಝರಂಗಳಂ[೧೦] ಕಱೆವಂತೆ[೧೧] [೧೨]ಪೆರ್ಮೞೆಗಳಂ[೧೨] [[೧೩]ಕಱೆಯೆ[೧೩]] ಗೋವರ್ಧನಂ ಗೋವರ್ಧನ [೧೪]ಗಿರಿಯಂ[೧೪] ಗಿರಿಯನೆತ್ತುವಂತೆತ್ತಿ ಗೋಕುಳಮಂ ಕಾದುದಂ ಕಂಡು ಗೋವರುಂ ಸೀವರುಂ ಜಕ್ಕರುಂ ಮಕ್ಕಳುಂ ಮಱೆಗಳುಂ ಬೆಕ್ಕಸಂಬ[೧೫]ಟ್ಟವಂ[೧೬] ದೇ[೧೭]ವನುಂ[೧೭] ದಾನವನುಮಲ್ಲೆಂದು ಪೊಗೞ್ದು ಪುರುಷೋತ್ತಮನನೆಮೆಯಿ[೧೮]ಕ್ಕದೆ ನೋಡಿ ಪರಮಾನಂದಾಮೃತಮನೊಂದೆ ಮೆಯ್ಯೊಳೆ ಪೀರ್ದ

೧೫. ಕೃಷ್ಣನು ಬೆಟ್ಟವನ್ನು ಎತ್ತಿದೊಡನೆ ಹಾವಿನ ಪೆಟ್ಟಿಗೆಯ ಮುಚ್ಚಳವನ್ನು ತೆಗೆದಂತಾಗಿ ಈತ ಹೆಡೆಯಲ್ಲಿ ರತ್ನಕಾಂತಿಯನ್ನು ಚಿಮ್ಮಿಸುತ್ತ ಪಾತಾಳದ ಹಾವುಗಳೆಲ್ಲ ಗೋಚರವಾದುವು.

೧೬. ಕೃಷ್ಣನು ಹಿಡಿದೆತ್ತಿದ ಬೆಟ್ಟದ ಮೇಲೆ ಆ ಚಂಡದೇವತೆಯರು ಕೋಪದಿಂದ ಕಲ್ಲಿನ ಮಳೆ ಸುರಿಸಿದರು. ಆ ಕಲ್ಲುಗಳ ಹೊಡೆತಕ್ಕೆ ಹುಟ್ಟಿ ಸಿಡಿಯುವ ಕಿಡಿಗಳಿಂದಾಗಿ ಕೆಂಡದ ಮಳೆಯೇ ಸುರಿಯುತ್ತಿದೆಯೊ ಏನೋ ಎಂದೆನಿಸಿತು.

ವ|| ಹೀಗೆ ಎಂಟು ದೇವತೆಗಳೂ ಏಳು ದಿನಗಳವರೆಗೆ ತಿರುತಿರುಗಿ ಬಂದು, ಮಳೆಜಡಿವ ಪುಷ್ಕಳಾವರ್ತಮೇಘಗಳಂತೆ, ಕಡುಗಪ್ಪಾಗಿ ಏರಿಬರುವ ಮೋಡಗಳಿಂದ, ನೀಲಪರ್ವತಗಳೆ ಕಲ್ಲಿನ ಮಳೆಗರೆಯುತ್ತಿವೆಯೊ ಏನೋ ಎಂಬಂತೆ ಅಬ್ಬರದ ಮಳೆಯನ್ನು ಸುರಿಸುತ್ತಿದ್ದುವು. ಕೃಷ್ಣನು ಗೋವರ್ಧನ ಗಿರಿಯನ್ನು ಎತ್ತಿ ಹಿಡಿದು ಗೋವುಗಳನ್ನು ರಕ್ಷಿಸಿದ್ದನ್ನು ಕಂಡು, ಗೋವಳರೂ 'ಸೀವ'ರೂ (ಸ್ವಕೀಯರು ?), ಮಕ್ಕಳು ಮರಿಗಳೂ ಬೆಕ್ಕಸ ಬೆರಗಾಗಿ "ಇವನು ದೇವರು; ದಾನವನಲ್ಲ" ಎಂದು ಹೊಗಳಿದರು; ಪುರುಷೋತ್ತಮನಾದ ಕೃಷ್ಣನನ್ನು ಎವೆಯಿಕ್ಕದೆ ನೋಡಿ. ಪರಮಾನಂದಾಮೃತವನ್ನು ಒಂದೇ ಜನ್ಮದಲ್ಲಿ ಹೀಗೆ ಕುಡಿದ ನಂದನನ್ನೂ ಯಶೋದೆಯನ್ನೂ ದೇವರೆಂದು ಪೂಜಿಸಿ, ನಮಸ್ಕರಿಸಿ ಹೋದರು; ನಾಡು

೧ ಳಿ (ಕಾ). ೨ ಳಾ (ಕ, ಮ, ಪ). ೩ ಪೀ (ಕ). ೪ ದೋ (ಕಾ). ೫ ದ (ಕಾ). ೬ ರ್ (ಕ, ಮ, ಪ). ೭ ಕ (ಪ). ೮ ನಿಜ (ಕ, ಪ). ೯ ಜಾಲಜರ್ಝುಂ (ಕ), ಜಾಲಜರ್ಝರಂ (ಮ, ಪ). ೧೦ + ಕಱೆವ ಕಲ್ಮೞೆಗಳಂ (ಕ, ಮ, ಪ). ೧೧ X (ಮ). ೧೨ X (ಕ, ಕಾ, ಮ, ಪ). ೧೩ X (ಕ, ಮ, ಪ). ೧೪ ಬೆ (ಕಾ). ೧೫ ರೆ ಇವನುಂ (ಮ). ೧೬ ಮಂ (ಕ, ಪ). ೧೭ ನೆ (ಕಾ). ೧೮ ಯ್ಯಿ (ಮ).

ನಂದ[1]ನುಮಂ ಯಶೋದೆಯುಮಂ ದೇವನುಂ ದೇವಿಯುಮೆಂದು ಪೂಜಿಸಿ ಪೊಡೆವಟ್ಟು ಪೋಗೆ ನಾಡುಂ ಬೀಡುಂ ಜಾತ್ರೆವೋಗೆ[2] ಕೇಳ್ದು ಕಂಸನಾಶಂಕೆಗೊಂಡೆನಗೆ ಬಂದ ಮಾರಿಯಾಗದೆ ಮಾಣದೆಂದು ಮನದೊಳೆವಯಿಸುತ್ತುಮಿರ್ಪ[3]ನ್ನೆಗಮಾ ದೇವತೆಗಳ್ ಪಾೞ್ದೇಗುಲದ ದೇವತೆಗಳಂತೆ ಭಿನ್ನ[ವಾ]ಗಿ[4] ಬನ್ನಂಬೆತ್ತು ಬಂದು "ನಿನ್ನ[5] ಪಗೆಯೆಮ್ಮ ಪವಣಲ್ತೆಂದು ಪೋಪುದುಂ ಪಲ್ಪೋದ ಪಾವಿನಂತಾಗಿ ತಲೆಯಂ ತೂಗಿ

ಮೊ[6]ಳೆಯೊಳೆ ಪೆರ್ಗೊಡಲಿಗಳುಂ
ಕೊಳಲಾಱದೆ ಮುಕ್ಕುವೋದುವೆಂದೊಡೆ ಮುಂದಿಂ
ಬಳೆದು ಮರನಾದ ಕಾಲಂ
ಕೊಳಲುಂ ಕಡಿಯ [ಲ್ಕ[7]]ಮಾರ್ಪುದಾವುದುಮುಂಟೇ ೧೭

ವ॥ ತನಗಿಷ್ಟನಪ್ಪರಿಷ್ಟನೆಂಬ ದಾನವನ ನಡುವಣಕ್ಕರವಿಲ್ಲದ ದಾನವನಂ ಪ್ರತ್ಯನೀಕದವನನೆಂ[8]ದು ಬರಿಸಿ 'ಯಾವದಸ್ತಿ ಪ್ರತೀಕಾರಸ್ತಾವತ್ಕುರ್ಯಾತ್ಪ್ರತಿಕ್ರಿಯಾಂ' ಎಂದೋದಿ ವಿರೋಧಿಯುಮಂ ವ್ಯಾಧಿಯುಮಂ ಬಳೆಯದ ಮುನ್ನಮೆ ಕಿಱಿದೆಂದು ಕಡೆಗ[9]ಣಿಸದೆ ಕಿಡಿಸುವುದು ಕಜ್ಜಮೆಂದು ಕೃಷ್ಣನ ಮೇಲೆ ಪೇೞಲೆಂದಿರ್ದನನ್ನೆಗ[10]ಮತ್ತ[10] ಗೋಕುಲದೊಳ್

ಬೀಡುಗಳಿಂದ ಜನ ಜಾತ್ರೆಯಾಯಿತು. ಇದನ್ನೆಲ್ಲ ಕೇಳಿದ ಕಂಸನು "ಇದು ನನಗೆಂದು ಹುಟ್ಟಿದ ಮೃತ್ಯುವಲ್ಲದೆ ಬೇರೆ ಅಲ್ಲ" ಎಂದು ಮನದಲ್ಲಿಯೆ ಸಿಡಿಮಿಡಿಗೊಳ್ಳುತ್ತಿರುವಾಗ ಆ ದೇವತೆಗಳು ಹಾಳು ದೇಗುಲದ ಮೂರ್ತಿಗಳಂತೆ ಭಿನ್ನವಾಗಿ, ಸೋತು ಬಂದು "ನಿನ್ನ ಶತ್ರು ನಮಗೆ ಮೀರಿದವನು" ಎಂದು ಹೇಳಿ ಹೋದುವು. ಕಂಸನು ಹಲ್ಲು ಹೋದ ಹಾವಿನಂತಾಗಿ, ತಲೆದೂಗಿ -

೧೭. ಮೊಳಕೆಯಾಗಿರುವಾಗಲೆ ಕಡಿಯಹೋದ ಹೆಗ್ಗೊಡಲಿಗಳು ಮುಕ್ಕಾದುವೆಂದ ಮೇಲೆ, ಮುಂದೆ ಇದು ಬಲಿತು ಮರವಾದಾಗ ಇದನ್ನು ಕಡಿಯುವುದೇನಾದರೂ ಸಾಧ್ಯವಾದೀತೆ?

ವ॥ ಎಂದುಕೊಂಡು, ತನಗೆ ಇಷ್ಟನಾದ ಅರಿಷ್ಟನೆಂಬ ದಾನವನನ್ನು ಶತ್ರು ದಮನನೆಂದು ಕರೆಯಿಸಿಕೊಂಡು, "ಎಲ್ಲಿಯವರೆಗೆ ಪ್ರತೀಕಾರ ಮಾಡುವುದು ಸಾಧ್ಯವೊ ಅಲ್ಲಿಯವರೆಗೆ ಪ್ರತೀಕಾರ ಮಾಡತಕ್ಕುದು" ಎಂದು ತಿಳಿಸಿ ಶತ್ರುವನ್ನೂ ರೋಗವನ್ನೂ ಬಲಿಯದ ಮುನ್ನವೇ, ಚಿಕ್ಕದೆಂದು ಕಡೆಗಣಿಸದೆ ನಾಶಮಾಡತಕ್ಕುದು ಎಂದು ಹೇಳುವವನಿದ್ದನು; ಅಷ್ಟರಲ್ಲಿಯೆ ಗೋಕುಲದಲ್ಲಿ —

---

೧ + ನ (ಕ). ೨ ಗಿ (ಕಾ). ೩ ರ್ಪನ (ಕಾ). ೪ + ರೆ (ಕ, ಪ). ೫ ನಿಂದಾ (ಕ, ಮ, ಪ). ೬ ಮ (ಕ). ೭ ಲ್ಕೆ (ಕ, ಕಾ, ಮ). ೮ ಕ್ಕೆಂ (ಕ, ಕಾ, ಪ). ೯ ಗೆ (ಕಾ). ೧೦ ಗಂ (ಕ, ಮ, ಪ).

ಅಡೆಯಂ [1]ಕೋ…ತುತುಂ ಮಾರ್ದನಿಗೆ ಮುಸಗುತುಂ ದರ್ಪ…ದಿಂ ಛಾಯೆಯೊಳ್ ಕೋಡಿಡುತುಂ ಪೋರ್ದಲ್ಲಿ ಪು[2]ಣ್ಚೆತ್ತಿ[3]ಣಿಗೆಜಿಗೆ ನೊಣಂ ಶೀರ್ಣ ಶೃಂಗಾಗ್ರದಿಂ ಮಾದೊಡೆಯುತ್ತುಂ ಪಾಯ್ದು ಪಿಂಡಂ ಕಲಕಿ ಕೆಲೆಯುತಂ ಬರ್ಚಿ ಬಲ್ಲೂಟಿಗಳ್ಬೆಂಗುಡೆ ಗಂಡಂ ಸೂಸುತುಂ ಬಂದುದು ಮದವಿದಳತ್ಪಿಂಗಳಾಕ್ಷಂ ಮಹೋಕ್ಷಂ ೧೮

ಅರಣಿಗೊಂಡು ಮುರಾರಿಯ
ನೀರದ ಸನ್ನಿಭನ ವಿಷಮತ ವೀರರಸಾ
ಸಾರಕ್ಕಿದಿರಂ ನಡೆದತಿ
ವಾರಣವೃಷಮಿಱಿವ ಕೋಡನೇಂ ತೋಱಿದುದೋ[4] ೧೯

ವ॥ ತೋಱಲೊಡನೆ

ದಿಟ್ಟ ಪೊಱಪಾಯೆ ಗುಱುಗುಱು
ಗುಟ್ಟ ವೃಷಂ ಮಡಿದು ಕೆಡೆಯೆ ಗೋಣ್ಮು[5]ರಿಗೊಂಡಂ
ತೊಟ್ಟಱೆಯಿಂದಮೆ ಸು[6]ಟ್ಟಿಪ
ಬೊಟ್ಟಿಂದಮೆ ಮೂಗನೂಱೆ ಬಿಟ್ಟಂ ಕೃಷ್ಣಂ ೨೦

ವ॥ ಅಂತು ಶಾಕ್ವರವರನಾಗಿ ಕೆಕ್ಕಳಿಸಿ ಕೆಳರ್ದಟ್ಟಿಕೊಂಡು ಬಂದ ಕಂಸ ನಟ್ಟಿದ ರಿಷ್ಟನಂ [6]ಅಂದಿ[6]ನರಿಷ್ಟನಂ ಕೊಂದಂತೆ ಕೊಲ್ಲದೆ ಪಶುವೆಂದು ಪೇಸಿ ಪಶುಪಾಲನಪ್ಪ ಕಾರಣದಿಂ

೧೮. ಸಗಣಿಯನ್ನು ಚುಚ್ಚಿ ಎತ್ತುತ್ತ, ಪ್ರತಿಧ್ವನಿಗೆ ಮುನಿಸುಗೊಳ್ಳುತ್ತ ದರ್ಪದಿಂದ … ನೆರಳನ್ನೆ ಇರಿಯಲು ಕೂಡಿಡುತ್ತ, ಹೋರಾಟದಲ್ಲಿ ಹುಣ್ಣಾದ ಹುಣ್ಣಿಗೆ ನೊಣಗಳು …ಲಾಗಿ, ಹದಸಾದ ತುದಿಗೋಡಿನಿಂದ ತಿವಿದುಕೊಂಡು, ಮಾಂಸಪಿಂಡವನ್ನು ಕಲಕಿಕೊಳ್ಳುತ್ತ, ಗುಟುರು ಹಾಕುತ್ತ, ಬಲವಾದ ಗೂಳಿಗಳನ್ನು ಹೆದರಿಸಿ ಓಡಿಸುತ್ತ ತನ್ನ ಗಡುಸನ್ನು ಬೀರುತ್ತ ಮದವೇರಿದ ಕೆಂಗಣ್ಣಿನಿಂದ ಮಹಾಗೂಳಿಯೊಂದು ಬಂದಿತು.

೧೯. ಮೋಡದಂತಿರುವ ಕೃಷ್ಣನ ವೀರರಸದ ಮಳೆಯನ್ನು ಎದುರಿಸಲೆಂದು ಹೊರಟ ದರ್ಪದ ಗೂಳಿ ತನ್ನ ಇರಿಯುವ ಕೋಡನ್ನು ಹೇಗೆ ಉಗ್ರವಾಗಿ ತೋರಿತು!

ವ॥ ಹಾಗೆ ತೋರಿದೊಡನೆ -

೨೦. ಕಣ್ಣುಗುಡ್ಡೆ ಹೊ…ಹಾಯ್ದು, ಗೊರಗುಟ್ಟಿ ಬೀಳುವಂತೆ, ಕೃಷ್ಣನು ಅದರ ಗೋಣನ್ನು ಮುರಿದನು; ತೋರು ಬೆರಳಿನಿಂದ ಅದರ ಮೂಗನ್ನು ಅದುಮಿ ಬಿಟ್ಟನು.

ವ॥ ಹೀಗೆ ಕಂಸನಪ್ಪಣೆಯಿಂದ ಹೆಗ್ಗೂಳಿ…ಗಿ ಕೆಕ್ಕರಿಸಿ ಕೆರಳಿ ಅಟ್ಟಿಕೊಂಡು ಬಂದಿದ್ದ ಅರಿಷ್ಟನನ್ನು ಹಿಂದಿನ 'ಅರಿಷ್ಟ' (ಕಾಕಾಸುರ)ನನ್ನು ಕೊಂದಂತೆ ಕೊಲ್ಲ…, ತಾನು ಪಶುಪಾಲಕನಾದುದರಿಂದ ಅದೊಂದು ಪಶುವೆಂದು ಕನಿಕರದಿಂದ ಕೃಗಾ…, ಅಟ್ಟಿ

---

೧ ಕೊಂದೆ (ಕ), ಕೋಡೆ (ಮ). ೨ ಣ್ಬೆತ್ತ (ಕ), ಣ್ಬೆತ್ತ (ಪ). ೩ ವೋ (ಕ, ಮ). ೪ ಳ್ಳು (ಮ). ೫ ಪು (ಮ). ೬ ಅದಿ (ಕ, ಮ), ಅಧೀ (ಪ).

ಕರುಣಿಸಿ ಕಾದು ಸೋದು[೧] ಕಳೆದನದೆಲ್ಲಮಂ ಕೇಳ್ದು ಮೂಱುಂ ಲೋಕಮನಾಳ್ದನಿತು ಸಂತೋಷಂಬಟ್ಟು[೨] ನೋಡಲೆಂದಟ್ಟೆವಟ್ಟು ಗೋಮುಖಿಯೆಂಬ ನೋಂಪಿಯ ನೆವದಿಂ ದೇವಕಿಯುಂ ವಸುದೇವನುಂ ಬಲದೇವನುಂ ವಾಸುದೇವನ್[೩] ತುಱುಪಟ್ಟಿಗೆ ಪಿರಿದಪ್ಪ ವಿಭವಂಬೆರಸು ಬಂದು ಸೌಖ್ಯದ ಸೀಮೆಗಾಣ್ಬಂತೆ ಕೃಷ್ಣನಂ ಕಂಡು ತೆಗೆದು ತಳ್ಕೈಯ್ಸಿಕೊಂಡು

ಕಡುದೊರೆದ ಮೊಲೆಯಿನಂ ಬಿರಿ
ವಿಡು[೪] ತಂದುವು ಪಾಲ ಧಾರೆ ಪಲಕಾಲಮಗ
ಲ್ದೊಡಮೇ[೫]ನಮೃತ ಕಳಾಳಿಗ
ಳೊಡರಿಸೆ[೬] ಶಶಿಕಾಂತಮೊಸರ್ವುದೊಂದಚ್ಚರಿಯೇ ೨೧

ವ|| ದೇವಕಿ ಕ[೭]ಡುಗಂ[೮]ದಿಯಪ್ಪುದಱಿಂ ತೊರೆದೆಚ್ಚು ಪಾಯ್ವ ಮೊಲೆವಾಲಿಂ[೯] ಮಗನಂ ಮಜ್ಜನಂಬುಗಿಸಿ ಮುಗುಳ್ನಗೆಯುಂ[೧೦] ಮುತ್ತುಮಂ ಬೆರಸಿ[೧೧] ಸೇಸೆಯನಿಕ್ಕಿ ಯಕ್ಷ ಕರ್ದಮದೊಣ್ಪನಿಕ್ಕಿ ಕಣ್ಣೆಂ[೧೨]ಜಲಕ್ಕುಮೆಂದು ಸೊಡ[೧೩]ರ್ವಕ್ಕನಿಡು[೧೪]ವಂತೆ ಗಾಳಿ ಸೋಂಕದ ಸೊಡರಂತಿರ್ದ ಪೊನ್ನ ಸಿಪ್ಪಿನ ಕತ್ತುರಿಯಂ ಕೊಂಡು ಬೊಟ್ಟನಿಟ್ಟು ಬೆಲೆಗೆ ಬಣ್ಪಿ[೧೫]ದುವುಂ ಮೆಯ್ಗನೊ[೧೬]ಚ್ಚಿದವು ಮಪ್ಪ ದೇವಾಂಗಮನುಡಿಸಿ ಮಾಣಿಕದೊಡಿಗೆಯಂ ತೊಡಿಸಿಯಮೃತಾನ್ನಮನೂಡಿ ತನಯನ

ಓಡಿಸಿಬಿಟ್ಟನು. ಈ ಸಂಗತಿಯೆಲ್ಲವನ್ನೂ ಕೇಳಿ, ಮೂರೂ ಲೋಕಗಳಿಗೆ ತಾವು ಒಡೆಯರಾದಂತೆ ಸಂತೋಷಬಟ್ಟು, ನೋಡಬೇಕೆಂದು ಹಂಬಲಿಸಿ, ಗೋಮುಖಿಯೆಂಬ ವ್ರತದ ನೆವದಿಂದ ದೇವಕಿಯೂ ವಸುದೇವನೂ ಬಲರಾಮನೂ ಅತ್ಯಂತ ವೈಭವದಿಂದ ಕೃಷ್ಣನಿರುವ ಹಟ್ಟಿಗೆ ಬಂದರು. ಸೌಖ್ಯದ ಪರಮಾವಧಿಯನ್ನು ಕಾಣುವಂತೆ ಕೃಷ್ಣನನ್ನು ಕಂಡು, ಬಾಚಿ ತಬ್ಬಿಕೊಂಡಾಗ -

೨೧. (ದೇವಕಿಯ) ಮೊಲೆಗಳಿಂದ ಧಾರಾಕಾರವಾಗಿ ಹಾಲು ಸುರಿಯಿತು. ಹಲವಾರು ಕಾಲ ಅಗಲಿದ್ದರೇನು? ಚಂದ್ರಕಲೆಗಳನ್ನು ಕಂಡಾಗ ಚಂದ್ರಕಾಂತಶಿಲೆ ಒಸರುವುದು ಸೋಜಿಗವೇ?

ವ|| ದೇವಕಿ ಅತ್ಯಂತ ಪುತ್ರವತ್ಸಲೆಯಾದುದರಿಂದ ತೊರೆದು ಸೂಸಿ ಹರಿಯುವ ಮೊಲೆಹಾಲಿನಿಂದ ಮಗನಿಗೆ ಸ್ನಾನ ಮಾಡಿಸಿ, ಮುಗುಳ್ನಗೆಯೊಡನೆ ಮುತ್ತುಗಳನ್ನು ಬೆರಸಿ ಸೇಸಿಯಿಕ್ಕಿ, ಅಗಿಲು - ಕರ್ಪೂರ ಮೊದಲಾದುವುಗಳನ್ನು ಮಿಶ್ರ ಸುಗಂಧವನ್ನು ಲೇಪಿಸಿ, ದೃಷ್ಟಿದೋಷವಾದೀತೆಂದು ಕಾಡಗೆ ಬೊಟ್ಟಿಡುವಂತೆ ಗಾಳಿ ತಾಕದ ದೀಪದಂತಿದ್ದ ಚಿನ್ನದ ಬಟ್ಟಲಿನಿಂದ ಕಸ್ತೂರಿಯನ್ನು ತೆಗೆದುಕೊಂಡು ಬೊಟ್ಟಿಟ್ಟು, ಬೆಲೆಗೆ ಭಾರಿಯಾದರೂ ಮೈಗೆ ಹಗುರಾಗಿರುವ ರೇಷ್ಮೆ ವಸ್ತ್ರವನ್ನು ಉಡಿಸಿ, ಮಾಣಿಕ್ಯದ ಆಭರಣಗಳನ್ನು ತೊಡಿಸಿ,

---

೧ ದುರ್ (ಕ, ಮ, ಪ). ೨ + ಬನಮಂ (ಕಾ). ೩ ನುಮಿರ್ದ (ಕ, ಮ, ಪ). ೪ ವೈ (ಮ). ೫ ಯ (ಕ, ಮ, ಪ). ೬ ಡಿ (ಕ, ಪ). ಡು (ಮ). ೭ ಮೆಯ (ಕ, ಮ, ಪ). ೮ ಸಿ (ಕ, ಮ, ಪ). ೯ ಗ (ಕಾ). ೧೦ ಗ (ಕಾ). ೧೧ ನಿಂ (ಕಾ). ೧೨ ಯ (ಕಾ). ೧೩ ಸೆ (ಕ, ಪ). ೧೪ ಣ್ಣಿಂ (ಕ). ೧೫ ರಕ್ಕನಿಕ್ಕು (ಮ), ರಕ್ಕೆನಿಡು (ಕ), ರಕ್ಕೆನೀಡು (ಪ). ೧೬ ಣ್ಮೆ (ಕಾ).

ಪಂತಿ[೧]ಯೊಳ್ ಗೋಪಕುಮಾರಕ[೨]ರ್ಗೆಯುಡಲುಂ ತುಡಲುಮುಣಲಿತ್ತು ಯಶೋದೆ ಮೊದಲಾದ ಗೋಪಿ[೩]ಯರ್ಗೆಲ್ಲಂ[೪] ಪೊನ್ನ ರನ್ನದ ಬಾಯಿನಂಗಳಂ[೫] ಕೊಟ್ಟು ನೋಂಪಿಯ ನೋಂಪ ವಿಧಾನಮಿಂತುಟೆಂದು ತನ್ನ ಮಗನಿದಾರ ಮಗನೀತಂ ಪೊಂ[೬]ಗವಮಾದಿತ್ಯಂಗಂ ದೇವಂಗಂ ದೇವಿಗಂ ಪುಟ್ಟಿದಂತಿರ್ದಪ[೭]ನೆಂದು[೭] ತೊಡೆಯನೇಱಿಸಿಕೊಂಡು ನೋಡುವಾಗಳ್

ಉಡುಗಣದ ನಡುವೆ ಮೃಗಧರ
ನೆಡೆಗೊಂಡಿರ್ಪಂತೆ ಕಮಳನಯನಂ ಸಲೆ ತ
ನ್ನೊಡನಾಡುವ ಗೋವರ್ಕಳ
ನಡುವೆ ಕರಂ ತನ್ನ ಬೆಳಗೆ ಬೆಳಗಾಗಿರ್ದಂ ೨೨

ವ॥ ಅನ್ನೆಗಮತ್ತಂ[೮] ನಂದಗೋಪಂ ಗೋಪವೃ[ದ್ಧೆ[೯]]ಯುರ್ವೆರಸು ವಸುದೇವ ಬಲದೇವರ[೧೦]ನೊಡ[೧೦]ಗೊಂಡು ಪೋಗಿ ಪಂಕಜಾಕ್ಷ[೧೧]ನಮುಂಕಿ[೧೧] ಗೊಂಕೆಯಂ[೧೨] ನುಲಿದ ಕಾಗೆಯ ಕನ್ನೆತ್ತರನುಂಡ ನೆಲನೆಲ್ಲಂ ಕೆಮ್ಮಣ್ಣ ನೆಲನಾಗಿ [೧೩]ವಾಸಿ[೧೩]ಸಿದೊಡೆ ನೆತ್ತರ್ನಾಱುವ[೧೪] [೧೫]ತಗುಳ್ದಗುಳ್ದೊಡೆ ಕಾಗೆಗಳೆ ಪೊಱಮಟ್ಟು ಪಾಱುವ ಕಾಕಗರ್ಭೆಯೆಂಬ[೧೬] [೧೭]ಪೆಸರಂ[೧೭] ಪಡೆದುರ್ವಿಯುಮಂ ದೇವಕೀಪುತ್ರಂ ಪೀರ್ದ ಪೂತನಿಯ [೧೮]ಪೆತ್ತ[೧೮] ನೆತ್ತರ ಪಲ್ಗೆ[೧೯]ಗಳಿಂ ಜಾದುಕಲ್ಲ ಕಣಿಯಂದಮಂ ಮೆ[೨೦]ಱಿದು ಮೆಟ್ಟೆ ಬಾಣತಿಯ ಮೊಲೆವಾಲ್ ನಂಜಪ್ಪ ವಿಷಮೃತ್ತಿಕೆ[೨೧]ಯೆಂಬ[೨೧]

ಸವಿಯಾದ ಆಹಾರವನ್ನು ಉಣಿಸಿ, ಮಗನ ಪಂತಿಯಲ್ಲಿ ಗೋಪ ಬಾಲಕರಿಗೆಲ್ಲರಿಗೂ ವಸ್ತ್ರಾಭರಣಗಳನ್ನು ಕೊಟ್ಟು, ಯಶೋದೆ ಮೊದಲಾದ ಎಲ್ಲ ಗೋಪಿಯರಿಗೆ ಚಿನ್ನದ ಹಾಗು ರತ್ನದ ಬಾಗಿನಗಳನ್ನು ಕೊಟ್ಟು, ವ್ರತವನ್ನು ಆಚರಿಸುವ ರೀತಿ ಹೀಗೆಂದು ಹೇಳಿ ತನ್ನ ಮಗನನ್ನು "ಇದಾರ ಮಗು ? ಚಿನ್ನದ ಮಗು, ಸೂರ್ಯನ ಮಗು, ದೇವದೇವಿಯರ ಮಗು ಇದ್ದಂತೆ ಇರುವನು" ಎಂದು ತೊಡೆಯ ಮೇಲೆ ಇರಿಸಿಕೊಂಡು ನೋಡುತ್ತಿರುವಾಗ -

೨೨. ನಕ್ಷತ್ರಗಣದ ನಡುವೆ ಶೋಭಿಸುವ ಚಂದ್ರನಂತೆ, ತನ್ನ ಒಡನಾಡಿಗಳಾದ ಗೋಪಕುಮಾರರ ನಡುವೆ ಕೃಷ್ಣನು ತನ್ನ ಅತಿಶಯವಾದ ಕಾಂತಿಯಿಂದ ಒಪ್ಪುತ್ತಿದ್ದನು.

ವ॥ ಅಷ್ಟರಲ್ಲಿ ಅತ್ತ ನಂದಗೋಪನು ಗೋಪವೃದ್ಧೆಯರೊಡನೆ ಬಂದು, ವಸುದೇವ ಬಲರಾಮರನ್ನೊಡಗೊಂಡು ಹೋಗಿ, ಕೃಷ್ಣನು ಗೋಣು ಮುರಿದು ಕೊಂದ ಕಾಗೆಯ ಕರಿಯ ನೆತ್ತರನ್ನುಂಡ ನೆಲವೆಲ್ಲ ಕೆಮ್ಮಣ್ಣ ನೆಲವಾಗಿ, ನೆತ್ತರಂತೆ ನಾರುವ, ಅಗೆದರೆ ಕಾಗೆಗಳೆ ಹೊರಬೀಳುವ ಕಾಕಗರ್ಭೆಯೆಂದು ಹೆಸರಾದ ಭೂಮಿಯನ್ನೂ ಕೃಷ್ಣನು ಪ್ರಾಣ ಹೀರಿದ ಪೂತನೆಯ ನೆತ್ತರಿನ ಕಲೆಗಳಿಂದ ಕೇವೆ ಕಲ್ಲಿನ ಕಣಿಯಂತಾಗಿದ್ದು, ಅದರ ಮೇಲೆ ಕಾಲಿಟ್ಟರೆ ಬಾಣಂತಿಯ ಮೊಲೆಹಾಲನ್ನು ನಂಜಾಗಿ ಮಾರ್ಪಡಿಸುವ ವಿಷಮೃತ್ತಿಕೆಯೆಂದು ಹೆಸರು

೧ ನೆ (ಮ). ೨ ಕ್ತಿ (ಕಾ, ಮ). ೩ X (ಕ, ಪ). ೪ ಪಸ್ತೀ (ಮ). ೫ X (ಮ). ೬ ನಮಂ (ಮ). ೭ ಪೆಂ (ಕಾ). ೮ ನೆನೆ (ಮ). ೯ ತ್ವಾ (ಕ, ಮ, ಪ). ೧೦ ದ್ಧಿ (ಕ, ಕಾ, ಮ). ೧೧ X (ಕಾ). ೧೨ ನುಮನೌಂಕಿ (ಕ, ಪ). ೧೩ ಯ (ಕ). ೧೪ ರಾಗಿ (ಕಾ). ೧೫ ಮಾಗಿ (ಕಾ). ೧೬ X (ಕ, ಮ, ಪ). ೧೭ ಪೇಸಂ (ಕ, ಮ, ಪ). ೧೮ ಸತ್ತ (ಕ, ಮ, ಪ). ೧೯ ಳಳಿಂ (ಕ, ಪ), ಳರಿಂ (ಮ). ೨೦ ಕ (ಕ, ಮ, ಪ). ೨೧ ಯೆಂಬಿವಂ ತಗುಳ್ದಗುಳ್ದೊಡೆ ಕಾಗೆಗಳೆ ಪೊರಮಟ್ಟು ಪಾಱುವ ಕಾಕಗರ್ಭೆಯೆಂಬ (ಪ).

ನಾಮಮನಾಳ್ದ ಭೂಮಿಭಾಗಮುಮಂ ಶಕಟ ಕುಠಾರನ ಕಾಲ[೧]ಬಟೆಯಿಂ[೧] ನುರ್ಚುನೂಱಾಗಿ [೨]ಪಾಱೆ[೨] ಕೆಡೆದ ಕಠಿನ ಶಕಟದೀಶಾ ದಂಡಹತಿಯಿಂ ಪೃಥ್ವೀತಳಂ ಪಾತಾಳಕ್ಕೆ ತೂಂ[೩]ತುವೋಗೆ ಬಾಗಿ ನೋಡಿದರ್ಗೆ ಛಾಯಾಭಗವತಿಯಂತೆ ಶಕಟಚ್ಛಾಯೆ[೪] ತೋಱುವ ಶಕಟದ್ವಾರಮೆಂಬ ಬಿಲದ್ವಾರಮುಮಂ ಯಮಳಾರ್ಜುನಭಂಜನಂ ಕಾಕೇಭಕುಂಜಂ[೫]ಗಳಂ ಕಿೞ್ತೀ ಡಾಡೆ ಕೂ[೬]ಪದನಿತು ಕುೞಿಯಾಗೆ ನೆಲದನಿತು ಮಣ್ಣನಡಕಿ ಪೊಯ್ದೊಡಮಾಶಾಗರ್ತದಂತೆ ಪೂೞದರ್ಜುನಗರ್ತಮೆಂಬ ನೆಗೞ್ತೆವಡೆದ ಗರ್ತಮುಮಂ ಮುಂಜಕೇಶಿ ಕಿಶೋರನ ಬಾಯಂ ಸೀೞ[೭] ಸುರಿದ ರುಧಿರದಿಂ ಧರಣೀರೇಣು ಸಿಂ[೮]ದುರಂ ಬರ್ದಿದು[೯] ಪುಸಿಯೆಂದು ಮೆಟ್ಟಿದ ಮೊಗಂಗಳ್ಮಾವಿ[೧೦]ನ ಮೊಗದಂತೆ ಕುದುರೆಮೊಗ[೧೧]ವಾಗೆ ತುರಗಮುಖಿಯೆಂಬಾಖ್ಯಾನಮನಾಂತ ಭೂತಳಮುಮಂ ಮುರಾರಿ ಮುಂ ಖರನಂ ಸಜ್ಜನೆ ಸೀೞ್ದಾರಿದ ಮುನಿಸಿಂದೊಗೆದಾಱೆ [೧೨]ಪರಪಿ[೧೨] ಧಾತು ನಿರ್ಝರದಂತಶ್ರು[೧೩]ಕಂಜ[೧೪]ಳಮೊಱೆತು ಬುಜೀ[೧೫]ಯುತ್ತು ಮಿರ್ಪ ಧಾತ್ರಿಯಪ್ಪುದುಂ ಕೞ್ತೆಗರೆವ ಕೞ್ತೆಗಲ್ಲೆಂಬಂಕದ ಕಲ್ಲುಮಂ ನಗಧ [ರಂ[೧೬]]ಕೆಟ್ಟಿಕ್ಕೆ[೧೭] ಮುನ್ನಿರ್ದಿರವಲ್ಲದೊರ್ಗುಡಿಸಿ ಕೆಡೆದು ಗೋವರ್ಧನಮೆಂಬಭಿಧಾನಮಂ ತಳೆದ ಗಿರಿಯುಮಂ ತೋಱುತ್ತುಂ ಬರ್ಪುದುಮವರ ಪೆಱಪೆಱಗೆ ಗೋಪೀಜನಪರಿವೃತೆಯಾಗಿ

ಪಡೆದ ಭೂ ಪ್ರದೇಶವನ್ನು ಬಾಲಕೃಷ್ಣನ ಒದೆತಕ್ಕೆ ನುಚ್ಚುನೂರಾಗಿ ಹಾರಿಬಿದ್ದ ಮಾಯದ ಬಂಡಿಯ ಈಸಿನಿಂದ ಪಾತಾಳಕ್ಕೆ ತೂತುಬಿದ್ದು, ಬಾಗಿನೋಡಿದವರಿಗೆ ಬಂಡಿಯ ಆಕಾರ ತೋರುವ ಶಕಟದ್ವಾರವೆಂಬ ಬಿಲದ್ವಾರವನ್ನೂ, ಬಾಲಮುಕುಂದನು ಆನೆಗಾತ್ರದ ಮತ್ತಿಮರಗಳೆರಡನ್ನು ಕಿತ್ತು ಬಿಸಾಡಿದಾಗ ಬಾವಿಯಷ್ಟು ಆಳವಾದ ಕುಳಿಯಾಗಿದ್ದು ನೆಲವಿದ್ದಷ್ಟು ಮಣ್ಣನ್ನು ತಂದು ತುಂಬಿದರೂ ಆಸೆಯಂತೆ ಹೂಳಲಾಗದ ಅರ್ಜುನಗರ್ತವೆಂಬ ಹೆಸರನ್ನು ಪಡೆದ ಕುಳಿಯನ್ನೂ ತುರಗಾಸುರನ ಬಾಯನ್ನು ಸೀಳಿದಾಗ ಸುರಿದ ರಕ್ತದಿಂದ ನೆಲದ ಧೂಳೆಲ್ಲ ಕೆಂಪಾಗಿದ್ದು, ಅದರ ಮೇಲೆ ಕಾಲಿಟ್ಟವರ ಮುಖ ಕುದುರೆಯ ಮುಖವಾಗುತ್ತಿದ್ದುದರಿಂದ ತುರಗಮುಖಿಯೆಂದು ಹೆಸರಾದ ಭೂಭಾಗವನ್ನೂ ಕೃಷ್ಣನು ಗರ್ದಭಾಸುರನನ್ನು ಸರ್ರನೆ ಸೀಳಿ ಒಗೆದಾಗ ಕೇವೆಯ ನೀರಿನಂತೆ ಆ ರಾಕ್ಷಸನ ಕಣ್ಣೀರು ಸುರಿಯುತ್ತಿರುವ ಭೂಮಿಯಾಗಿ, ಕತ್ತೆಯಂತೆ ಧ್ವನಿಮಾಡುವ ಕತ್ತೆಗಲ್ಲೆಂದು ಹೆಸರಾದ ಕಲ್ಲನ್ನೂ ಕೃಷ್ಣನು ಕಿತ್ತಿಟ್ಟುದರಿಂದ ಮುಂಚಿನ ಸ್ಥಿತಿಯನ್ನು ಕಳೆದುಕೊಂಡು ಓರೆಯಾಗಿ ಬಿದ್ದು ಗೋವರ್ಧನವೆಂಬ ಹೆಸರು ಪಡೆದ ಪರ್ವತವನ್ನು ತೋರಿಸುತ್ತ ಬಂದನು. ಅವರ ಹಿಂದಿನಿಂದ ಗೋಪಿಯರನ್ನೊಡಗೊಂಡು ಬರುತ್ತ —

---

೧ ಕೋಳಿಂ (ಕ, ಮ, ಪ). ೨ X (ಕಾ), ೩ ತೂ (ಕ, ಕಾ, ಪ). ೪ ತೋಯೆ (ಕ, ಪ). ೫ ಭಂ (ಕ, ಕಾ, ಪ). ೬ ಕೋ (ಕ). ೭ ಸೆಂ (ಪ) ೮ ದುರ್ (ಮ) ೯ ಮು (ಕಾ) ೧೦ ಲಿ (ಕ, ಪ). ೧೧ + ಮಾಗ (ಕಾ). ೧೨ X (ಕಾ, ಮ). ೧೩ X (ಕಾ). ೧೪ ಕಜ್ಜ (ಪ). ೧೫ ಜೆ (ಕಾ). ೧೬ ರ (ಕ, ಕಾ, ಮ). ೧೭ ಕ್ಕಿ (ಕಾ).

ಕಡುಪಿಂದಾ ಕಾಕ[1]ನಂ ಕು[2]ಪ್ಪಳಿಸಿದೆಡೆಯಿದಾ ಪೂ[3]ತನಾ[3]ರಕ್ತಮಂ ಪೀ
ರ್ದೆಡೆಯಾ ತೇರಯ್ದು ತೇರಂ ಪರಪಿದೆಡೆಯಿದಾಮತ್ತಿ[4]ಯಂ ಲೀಲೆಯಿಂ ಕಿ
ೞ್ತೆಡೆಯಾ ತಾೞಿಂ ಕುಮಾರಂ ಕೆಡಪಿದೆಡೆಯಿದಾ ಗರ್ದಭಾಶ್ವಂಗಳಂ ಸೀ
ೞ್ದೆಡೆಯೆಂದಾ ದೇವಕೀದೇವಿ[5]ಗಮು[5]ನಿತೆಡೆಯಂ ತೋಱಿದಳ್ಗೋಪಿಯಾಗಳ್ ೨೩

ನೀಂ ಬೆಸಗೊಳ್ವುದದೇನಾ
ಣಂಬಿಯನವಯವದೆ ಕೀಳ್ವ ತೆಱದಿಂ ಕಿೞ್ತೀ
ಯಂಬುಜಲೋಚನನೇೞು ದಿ
ನಂಬರಮೆತ್ತಿರ್ದ ಗಿರಿಯಿ[6]ದಂಬುಜವದನೇ ೨೪*

ವ॥ ತೋಱೆ ತನ್ನ ಸುತನ ಶಕ್ತಿಗಂ ಸಾಹಸಕ್ಕಂ ವಿಸ್ಮಯಂಬಟ್ಟು ಮನದೊಳ್ ಕಂಸಂ ಮುನಿದ[8]ನೆಂದೊಡೆ ಮುನಿಯಬೇಡಾಯೆಂದುಪ್ಪಂ[7] ನಿವಾಳಿಸಿ ತೂಪಿಱಿದು ಮಗನಂ ಬಿಟ್ಟು ಬರಲಾಱದ[8] ದೇವಕಿಯನೆಂತಾನುಮೆೞೆದುಕೊಂಡು

ನಂದನ ವಿಕಸಿತ ಮುಖಮಕ
ರಂದ[9]ಮುಮು[9]ಗುೞಿಸೆಯುಮಗಿವ ದೃ[10]ಗ್ವ್ಯಂ[10]ದಮನಾ
ನಂದದೊಳಾನಕ ದುಂದುಭಿ
[11]ದುಂದುಭಿಯಂ[11] ಪೊಯ್ಸುಳತಂದು ಪೊೞಲಂ ಪೊಕ್ಕಂ[12] ೨೫

೨೩. ರಭಸದಿಂದ ಕಾಕಾಸುರನನ್ನು ಎತ್ತಿ ಕುಕ್ಕಿದ ಸ್ಥಳ ಇದು, ಪೂತನೆಯ ರಕ್ತವನ್ನು ಹೀರಿದ ಸ್ಥಳ ಇದು, ಮೇಲೇರಿ ಬಂದ ಬಂಡಿಯನ್ನು ಚೆಲ್ಲಾಪಿಲ್ಲಿಯಾಗಿ ಮುರಿದೊಗೆದ ಸ್ಥಳ ಇದು, ಮತ್ತಿಮರವನ್ನು ಕಿತ್ತ ಸ್ಥಳ ಇದು, ತಾಳಮರವನ್ನು ಕುಮಾರನು ಕೆಡಹಿದ ಸ್ಥಳ ಇದು, ಗರ್ಧಭಾಸುರ, ಅಶ್ವಾಸುರರನ್ನು ಸೀಳಿದ ಸ್ಥಳ ಇದು - ಎಂದು ಎಲ್ಲಾ ಸ್ಥಳಗಳನ್ನು ದೇವಕೀದೇವಿಗೆ ಗೋಪಿ ತೋರಿದಳು.

೨೪. "ಅದನ್ನೇನು ಕೇಳುತ್ತೀಯೆ? ಅಣಬೆಯನ್ನು ಕೀಳುವಷ್ಟೆ ಸುಲಭವಾಗಿ ಕಿತ್ತು ಏಳು ದಿನಗಳವರೆಗೆ ಕೃಷ್ಣನು ಎತ್ತಿ ಹಿಡಿದಿದ್ದ ಪರ್ವತ ಇದೇ ನೋಡು"

ವ॥ ಎಂದು ತೋರಿಸಲಾಗಿ, ತನ್ನ ಮಗನ ಶಕ್ತಿಗೂ ಸಾಹಸಕ್ಕೂ ಬೆರಗಾಗಿ, ಮನಸ್ಸಿನಲ್ಲಿಯೆ, "ಕಂಸನು ಮುನಿಯುವನೆಂದರೆ, ಮುನಿಯುವುದು ಬೇಡ" ಎಂದು ಉಪ್ಪನ್ನು ನಿವಾಳಿಸಿ, ವಾತ್ಸಲ್ಯದಿಂದ ನೆತ್ತಿಯಲ್ಲಿ ತೂಪಿರಿದು ಮಗನನ್ನು ಬಿಟ್ಟು ಬರಲಾರದೆ ಚಡಪಡಿಸುವ ದೇವಕಿಯನ್ನು ಕಷ್ಟದಿಂದ ಎಳೆದುಕೊಂಡು -

೨೫. ಮಗನ ಮುಖಕಮಲವು ಸೂಸುತ್ತಿರುವ ಆನಂದವೆಂಬ ಮಕರಂದವನ್ನು ಕಂಡು (ತನ್ನ ಕಣ್ಣಿಂದ ಪುತ್ರಮೋಹವೆಲ್ಲಾದರೂ ಪ್ರಕಟವಾದೀತೊ ಏನೊ ಎಂದು)

೧ ನ (ಕ, ಪ). ೨ ಕು (ಕ, ಪ). ೩ ತನಾ (ಕಾ). ೪ ತ್ತಿ (ಕ, ಮ, ಪ). ೫ ಗೆಯ (ಕಾ). * ಕಾ ಪ್ರತಿಯಲ್ಲಿ ಈ ಪದ್ಯವಿಲ್ಲ. ೬ಯ (ಮ). ೭ ಪ್ಪಾ (ಕ). ೮ ದೊಡೆ (ಮ). ೯ ಮುಮ (ಕ), ಮನು (ಪ). ೧೦ ಗುಂ ವಂ (ಮ). ೧೧ ಯಂ.... (ಕಾ). ೧೨ ಯ್ಸಿ (ಕಾ). ೫ ಕ್ಕರ್ (ಕಾ).

ವ|| ಆ ಪ್ರಸ್ತಾವದೊಳಾ ಪೊಬಿಲ್ಗೆ ಕಾರಣಭೂತಮಪ್ಪ ʻಮೂ[೧]ಲʼ ಚೈತ್ಯಾಲಯದ ಮುಂದಣ ದೇವತಾಯತನಮಪ್ಪ ಬಿಲದ್ವಾರದೊಳ್

ಸುಚಿರರುಚಿಗಳ್ ಜಯಶ್ರೀ
[ಸ[೨]]ಚಿವಂಗಳ್ ಹರಿಯದೊಂದು ಪುಣ್ಯೋದಯದಿಂ
ಶುಚಿನಾಗಶಯ್ಯೆಯುಂ ಶಾ
ರ್ಙ್ಗಚಾಪಮುಂ ಪಾಂಚಜನ್ಯಮುಂ ಪುಟ್ಟುವುದುಂ ೨೬

ಸುರದುಂದುಭಿರವಮೆಸೆದುದು
ಸುರತರುವಿಂ ಸುರಿದುದಲರ ಸರಿ ಸೂಸಿದುದಾ
ಸುರಮುಖ ಸರಸಿಜದಿನಹೋ
ಪುರುಷೋತ್ತಮಪುಣ್ಯಮೆಂಬ ನಾಣಾಮೋದಂ ೨೭

ಭೂವಿವರದಿನೊಗೆತಂದಾ
ಪಾವೆಸೆದುದು ಸಪ್ತಫಣ[೩]ಮಣಿಪ್ರಭೆಯಿಂ ಭೂ
ದೇವಿ ಫಣಿರಾಜ ಸಂಭೋ
ಗಾವಸ್ಥಿತೆ ಬೆ[೪]ಸಲೆಯಾದ ಪಾವೆಂಬಿನೆಗಂ ೨೮

ಪಸರಿಸಿ[೫]ಮೌರ್ವೀ[೫] ವಿದ್ಯು
ದ್ವಿಸಿತಮನದು ತನಗೆ ತಾನೆ ಶಾರ್ಙ್ಗಂ ಸಿಂಗಂ[೬]
ಮುಸಕದಿನಯ್ವಾಯಿಂ ಗ
ರ್ಜಿಸುವವೊಲಯ್ವಾಯ ಶಂಖಮೇಂ ಗರ್ಜಿಸಿತೋ ೨೯

ಅಂಜುತ್ತಿದ್ದ ವಸುದೇವನು ದುಂದುಭಿಗಳನಾದದೊಡನೆ ಆನಂದದಿಂದ ತನ್ನ ಪಟ್ಟಣವನ್ನು ಸೇರಿದನು.

ವ|| ಆ ಸಮಯದಲ್ಲಿ ಆ ಪಟ್ಟಣಕ್ಕೆ ಕಾರಣೀಭೂತವಾದ ಮೂಲ ಚೈತ್ಯಾಲಯದ ಮುಂದಿನ ದೇವಾಲಯದ ಬಿಲದ್ವಾರದಲ್ಲಿ -

೨೬. ಉಜ್ವಲವಾದ ಕಾಂತಿಯುಳ್ಳ, ಜಯಶ್ರೀಗೆ ಸಚಿವರೆನಿಸಿಕೊಳ್ಳುವ ಶುಭ್ರವಾದ ನಾಗಶಯ್ಯೆಯೂ, ಶಾರ್ಙ್ಗಧನುವೂ ಪಾಂಚಜನ್ಯವೆಂಬ ಶಂಖವೂ ಕೃಷ್ಣನ ಪುಣ್ಯೋದಯದಿಂದ ಉದ್ಭವಿಸಿತು.

೨೭. ಆಗ ದೇವ ದುಂದುಭಿಧ್ವನಿ ಮೊಳಗಿತು. ದೇವವೃಕ್ಷಗಳಿಂದ ಹೂಮಳೆ ಕರೆಯಿತು; "ಅಹೋ! ಪುರುಷೋತ್ತಮನ ಪುಣ್ಯವೇ!" ಎಂಬ ಮಧುರವಾದ ಉದ್ಗಾರ ದೇವತೆಗಳ ಮುಖಗಳಿಂದ ಹೊಮ್ಮಿತು.

೨೮. ಭೂದೇವಿಗೆ ಸರ್ಪರಾಜನಿಂದ ಹುಟ್ಟಿದ ಹಾವೋ ಏನೋ ಎಂಬಂತೆ ಭೂಮಿಯಿಂದ ಎದ್ದು ಬಂದ ಆ ಏಳು ಹೆಡೆಯರತ್ನ ಪ್ರಭೆಯ ಸರ್ಪವು ಶೋಭಿಸಿತು.

೨೯. ಶಾರ್ಙ್ಗವೆಂಬ ಬಿಲ್ಲು ಮಿಂಚಿನ ನಾಲಗೆಯಂತೆ ತನ್ನ ಹೆದೆಯನ್ನು ಚಾಚಿಕೊಂಡಿತ್ತು. ಸಿಂಹವು ತನ್ನ ಅಗಲವಾದ ಬಾಯಿಂದ ಗರ್ಜಿಸುವಂತೆ ಪಾಂಚಜನ್ಯವು ತಂತಾನೆ ಗುಡುಗಿನ ಧ್ವನಿಯನ್ನು ಹೊಮ್ಮಿಸಿತು.

೧ X (ಕ, ಪ). ೨ ಶ (ಕ, ಮ, ಕಾ). ೩ ಣೆ (ಕಾ). ೪ ಬ (ಕಾ). ೫ ದ ಮೂರ್ಮಿ (ಕ, ಮ, ಪ). ೬ ಹಂ (ಕಾ, ಮ).

ಭುಜಂಗಪ್ರಯಾತ ॥

ಅವಂ ಕಂಡು ಕಂಸಂ ಭಯಂಗೊಂಡು ಪೋತಂ
ದ[೧]ವಂ ಮೂಲ ಚೈತ್ಯಾಲಯಕ್ಕಲ್ಲಿ ಪಾದಾ
ರವಿಂದಂಗಳೊಳ್ಮೊಟ್ಟಿ ಯೋಗೀಶ್ವರರ್ಗಿಂ[೨]
ದಿವಾದೊಂದು ವೃತ್ತಾಂತಮಂ ಪೇಟಿಮೆಂದಂ[೩] ೩೦

ವ॥ ಅವರಿಂತೆಂದರಿವು ಮೂಱುಂ[೪] ಮಹಾರತ್ನಂಗಳ್ ಪರಮಪುರುಷ ಪುಣ್ಯಪ್ರೇರಣೆಯಿಂ ಪುಟ್ಟಿದುವಲ್ಲದುತ್ಪಾತಂಗಳಲ್ಲಮಾವ[೫]ನಾನುಮೊ[೬]ರ್ವ ಮಹಾಭಾಗನೀ ನಾಗಶಯ್ಯೆಯನೇಱುವನೀ ಶಾ[೬]ರ್ಙ್ಗಧನುವ[೬]ನೇ[೭]ಱಿಸು[೭]ವನೀ ಪಾಂಚಜನ್ಯಮಂ ಪೂರೈಸುವ[೮]ನಾತ[೮]ನರ್ಧಚಕ್ರವರ್ತಿಯಾಗಿ ಪೃಥ್ವೀರಾಜ್ಯಂ ಗೆಯ್ಗುಮೆನೆ ಕಂಸನಿದನೀಗಳೆ ನೋೞ್ಪೆನೆಂದಾ ನಾಗಶಯ್ಯೆಯನೇಱಿದಂಗೆ ಪಾವಿನ [೯]ಪಾಸೆ[೯] ಪಸೆಯಾಗಲರಸಂ ತನ್ನ ಮಗಳನಿತ್ತಪ[೧೦]ನೆಂದು ಸಾಱಿಮೆನೆ ಮಹಾಪ್ರಸಾದಮೆಂದು ಪೆರ್ಗಡೆಗಳ್ ಪೋಗಿ ಗೋಸಣೆಯಂ ಮಾಡೆ

ಪಾವೆಂದೊಡೆ[೧೧]ಪಡೆ[೧೧] ನಡುಗುವ್ರ
ದೇವೆಯೊ ಪಸೆಯಲ್ಲಿ ಪಾವು ಕೊಳ್ವೊಸಗೆಯನೋ
ವೋವೊ ಪುಸಿ ಮದುವೆ ಮೊದಲೊಳ್
ಸಾವು [೧೨]ದಿಟಂ[೧೨] ಸತ್ತು ಮದುವೆಯಪ್ಪರುಮೊಳರೇ ೩೧

೩೦. ಅವುಗಳನ್ನು ಕಂಡು ಅಂಜಿ ಹೋದ ಕಂಸನು ಮೂಲಚೈತ್ಯಾಲಯಕ್ಕೆ ಬಂದು ಅಲ್ಲಿದ್ದ ಯೋಗೀಶ್ವರ ಪಾದಕಮಲಗಳಿಗೆ ಬಾಗಿ, "ಸ್ವಾಮಿ, ಇವುಗಳ ವೃತ್ತಾಂತವೇನೆಂದು ತಿಳಿಸಿ" ಎಂದನು.

ವ॥ ಅವರು ಹೀಗೆಂದರು - "ಇವು ಮೂರೂ ಮಹಾರತ್ನಗಳು. ಪುರುಷೋತ್ತಮನ ಪ್ರೇರಣೆಯಿಂದ ಉದ್ಭವಿಸಿದುವಲ್ಲದೆ (ಅನಿಷ್ಟ ಸೂಚಕ) ಉತ್ಪಾತಗಳಲ್ಲ, ಯಾವ ಮಹಾನುಭಾವನು ಈ ನಾಗಶಯ್ಯೆಯನ್ನು ಏರಿ, ಶಾರ್ಙ್ಗಧನುವನ್ನು ಏರಿಸಿ, ಈ ಪಾಂಚಜನ್ಯವನ್ನು ಊದುವನೋ ಆತನು ಅರ್ಧಚಕ್ರಿಯಾಗಿ ಪೃಥ್ವಿಯನ್ನಾಳುವನು" ಹೀಗೆಂದೊಡನೆ ಇದನ್ನೀಗಲೇ ನೋಡಿ ಬಿಡುವೆನೆಂದು, "ನಾಗಶಯ್ಯೆಯನ್ನು ಯಾವನು ಏರುವನೊ ಅವನಿಗೆ ಈ ಹಾವಿನ ಪೀಠವೇ ಹಸೆಯಾಗಲಾಗಿ ಅರಸನು ತನ್ನ ಮಗಳನ್ನು ಧಾರೆಯೆರೆಯುವನು" ಎಂದು ಡಂಗುರ ಸಾರಲು ಅಪ್ಪಣೆಯಿತ್ತನು. ಅದರ ಮೇರೆಗೆ ಹೆಗ್ಗಡೆಗಳು ಹೋಗಿ ಡಂಗುರವಿಟ್ಟು ಸಾರಿದರು.

೩೧. "ಹಾವೆಂದರೆ ಜನ ನಡುಗುವುದು. ಹಸೆಯಲ್ಲಿ ಕುಳಿತು ಹಾವಿನಿಂದ ಕಚ್ಚಿಸಿಕೊಳ್ಳುವ ಉತ್ಸವ ಏತಕ್ಕೆ? ಅಯ್ಯೊ, ಮದುವೆ ಹು, ಮೊದಲೇ ಸಾವು ನಿಶ್ಚಿತ, ಸತ್ತು ಮದುವೆಯಾಗುವವರೂ ಉಂಟೆ?

---

೧ ತ (ಕ, ಮ). ೨ ರ್ಗಿಂ (ಕ, ಪ) ೩ ದು (ಕ). ೪ ಱು (ಕಾ). ೫ ನೊ (ಮ). ೬ ಜ್ಞಾರ್ಗ್ಗಯುಧಮ (ಕಾ), ರ್ಙ್ಗಯುಧಧರ್ಮವ (ಮ), ರ್ಙ್ಗಧರ್ಮವ (ಪ). ೭ ಱು (ಮ). ೮ X (ಮ). ೯ ಪಸೆ (ಮ), X (ಕಾ). ೧೦ ಪೆ (ಮ). ೧೧ X (ಕಾ). ೧೨ ದುಧಿರಂ (ಕ)

ವ॥ ನಿಮ್ಮರಸನ [೧]ಕನ್ಯೆ[೧] ವಿಷಕನ್ನಿಕೆ[೨]ಯಾವಾ[೨]ಕೆಗಂಜುವೆವಿಲ್ಲಿ ಸೂಲಮನೇಱಿ ಪಾಲ್ಗುಡಿವರಿಲ್ಲೆಂದು ಬೀರರುಂ ಶೂರರುಮಪ್ಪ ರಾಜಪುತ್ರರ್ಕಿವಿಯಂ ಮುಚ್ಚಿಕೊಂಡು ಪೋದರಾ [೩]ಘೋಷ[೩]ಣೆಯಂ ಘೋಷದೊಳಿರ್ದ ಕೃಷ್ಣಂ ಕೇಳ್ದು

ಏನಿಂ ಪಾಸುರಗನೆ ಬಿ
ಲ್ಲಾ[೪]ನ[೫]ದೃಶಂ[೫] ಗಜಮೆ ಶಂಖಮಯ್ಯಾಯದೆಪೋ
ಗಾನೇಱುವೆನಾನೆತ್ತುವೆ
ನಾನೊತ್ತುವೆನೆಂದು ಪಿಡಿಸಿದಂ ಡಂಗುರಮಂ ೩೨

ವ॥ ಪಿಡಿಸಿ ಮನೆಗೆ ಪೋ[೬]ಗದೆ ಗಱಿವಱಿಯ ಪಾವಿನಂತೆ ಗೋಸಣೆಯ ಬೞಿಯನರಮನೆಗೆ ಪೋಪುದುಂ ಕಂಸಂ ಕಂಡಿದೆನ್ನ ಪಗೆಯುಂ ಬಗೆಯುಂ ಸಾಧ್ಯಮಾದುದು ನೋಂತರ ಪಗೆಯನೆಟ್ಟೆಱಿದಂತೆ ಮಾಱ್ಪೆನೆಂದು ಚೈತ್ಯಾಲಯದ ಮುಂದೆ ಮಹಾಸ್ಥಾನಮಂ ಮಾಡಿ ವಸುದೇವ ಬಲದೇವ ಮಂಡಳಿಕ ಮಕುಟಬದ್ಧ ಸಾಮಂತಮಂತ್ರಿ ಸಮೇತನಾಗಿ [೭]ಕುಳ್ಳಿರ್ದು[೭] ಮಂತ್ರವಾದಿಗಳಿನವನಾಹ್ವಾನಂ ಮಾಡಲೊಡನೆ

ಮೊದಲೊಳ್ಕಾಳಾಹಿಯಂ ಕಾಱುವವೊಲೊಗೆಯೆ ಧೂಮಾಳಿ ಫೂತ್ಕಾರದಿಂದಂ
ತಿದಿಯಂ ಕೊಂಡೊ[೮]ತ್ತಿದಂತುಚ್ಚಳಿಸೆ[೯] ಬೞಿ ವಿಷಜ್ವಾಳೆ ವಕ್ತ್ರಂಗಳಿಂ ಪಾ
ಱಿದ ಕೆಂಡಂ ನೆತ್ತಿಯೊಳ್ಬಿಟ್ಟವೊಲಿರೆ ಫಣಿಮಾಣಿಕ್ಯಸಂದೋಹದಿಂ ತಂ
ದುದೊ ಕೋಪಾಟೋಪದಿಂ ವಾಸುಗಿಗೆ ವಿಷಯಶಃಶೋಷಮಂ ಲೇಲಿಹಾನಂ ೩೩

ವ॥ ನಿಮ್ಮ ಅರಸನ ಮಗಳು ವಿಷಕನ್ನಿಕೆ ನಾವು ಆಕೆಗೆ ಅಂಜುವೆವು. ಶೂಲವನ್ನೇರಿ ಹಾಲು ಕುಡಿಯುವವರು ಇಲ್ಲಿ ಯಾರೂ ಇಲ್ಲ" ಎಂದು ಶೂರರೂ ವೀರರಾದ ರಾಜಪುತ್ರರೂ ಕಿವಿ ಮುಚ್ಚಿಕೊಂಡು ಹೋದರು. ತುರುಪಟ್ಟಿಯಲ್ಲಿದ್ದ ಕೃಷ್ಣನು ಆ ಡಂಗುರವನ್ನು ಕೇಳಿ -

೩೨. "ಏನದು? ಹಾಸುಗೆಯ ಹಾವೆ" ಅಸಾಧ್ಯವಾದ ಬಿಲ್ಲೆ? ಸಿಂಹಮುಖದ ಶಂಖವೆ? ಅವುಗಳನ್ನು ನಾನು ಏರುವೆನು, ಎತ್ತುವೆನು, ಊದುವೆನು" ಎಂದು ಡಂಗುರದ ಆಹ್ವಾನವನ್ನು ಸ್ವೀಕರಿಸಿದನು.

ಹೀಗೆ ಸ್ವೀಕರಿಸಿ, ಗಳೆಯ ಬಳಿಯ ಹಾವಿನಂತೆ ಸರಸರನೆ ಅರಮನೆಗೆ ಹೋಗಲಾಗಿ, ಕಂಸನು ಕಂಡು, "ಇದೊ! ನನ್ನ ಮನೋರಥವೂ ತೀರಿತು, ಶತ್ರುವೂ ತೀರಿದನು. ಪುಣ್ಯವಂತರ ವೈರಿಯನ್ನು ಎತ್ತು ಬಂದು ಇರಿದಂತೆ ಮಾಡುವೆನು" ಎಂದುಕೊಂಡು ಚೈತ್ಯಾಲಯದ ಮುಂದೆ ದೊಡ್ಡ ಮಂಡಪವನ್ನು ನಿರ್ಮಿಸಿ ವಸುದೇವ, ಬಲರಾಮ, ಮಂಡಳಿಕರು, ಮಕುಟಬದ್ಧರು, ಸಾಮಂತರು, ಮಂತ್ರಿಗಳು ಇವರೆಲ್ಲರೊಡನೆ ಕುಳಿತು ಮಂತ್ರವಾದಿಗಳಿಂದ (ನಾಗಶಯ್ಯೆ ಮೊದಲಾದುವನ್ನು) ಆಹ್ವಾನ ಮಾಡಿಸಿದೊಡನೆ -

೩೩. ಮೊದಲು ಫೂತ್ಕಾರದಿಂದ ಕಾಳಸರ್ಪವನ್ನು ಕಾರುವಂತೆ ಹೊಗೆಯುರುಳಿಯನ್ನು ಉಗುಳಿ, ತನ್ನ ಅನೇಕ ಬಾಯಿಗಳಿಂದ ತಿದಿಯೊತ್ತಿದಂತೆ ವಿಷದ ಜ್ವಾಲೆಗಳನ್ನು

೧ ಕಯ್ಯಾಲಂ ನ್ಯಾ (ಕಾ). ೨ ಗಾ (ಕಾ). ೩ ಗೋಸ (ಕ, ಮ, ಪ). ೪ ಲ್ಲಾ (ಕ, ಮ, ಪ). ೫ ದು ಶ್ಯಂ (ಕ, ಪ), ಡು ಶ್ಯಂ (ಮ). ೬ + ಗಿ (ಕ, ಪ). ೭ X (ಕಾ). ೮ ಡೆ (ಕಾ). ೯ ಸಿ (ಕ, ಕಾ).

ವ|| ಆ ಕುಂಭೀನಸವಿಜೃಂಭಣಕ್ಕೆ ನೆರೆದ ನೆರವಿಯೆಲ್ಲಮೊಲ್ಲನೊಲ್ಲನುಲಿದೋಡೆ ಕಂಸನೊಳಂಗುಂದು ನೋಡಿ ಗದಗಂಪಂಗೊಂಡು ಮಹಾಮಂತ್ರವಾದಿಗಳಪ್ಪ ಮುನಿಮುಖ್ಯರ ಮಱೆಗೊಂಡು ಪಂಚನಮಸ್ಕಾರಮಂ ಜಪಿಯಿಸುತ್ತುಮಿದನೇಱುವೆನೆಂದು ಬಂದ ಕಲಿಯಂ ಕರೆಯಿಮೆಂಬುದುಮಾ ಮಾತಿಂ ಮುನ್ನಮೆ

ಗರುಡಧ್ವಜನೇಱಿರ್ಪುದು
ಮುರಿವುರಿ ನಂಜುರಿಯ ಮೇಲೆ ನೀರ್ವೊಯ್ದವೊಲಾ
ಯ್ತುರಗಂಗಂ ನವಿಲಂ ಕಂ
ಡುರಗನ ತೆಱನಾಯ್ತು ನೆರವಿಗಾಯ್ತಿ ಚೋದ್ಯಂ ೩೪

ಸೂಸೆ ಮಗಮಗಿಪ ಕಂಪಿನ
ವಾಸನೆ ಪಾಯ್ಲೇಱಿದಂ ಉರಗೇಂದ್ರನ ತ
ಣ್ಣಾಸರೆವಿರಿದ ಜಾಜಿಯ
ಬಾಸಿಗದೊಳೆ ಪಾಯ್ದ ತುಂಬಿಯಂತಿರೆ ಕೃಷ್ಣಂ ೩೫

ಮಂಡಳಿಸಿದ ಮುಕ್ತಾಫಲ
ಪಾಂಡುರ ಫಣಿಪತಿಯ ಮೇಲೆ ಶರದದ ಹಿಮಕ್ರ
ನ್ಮಂಡಲದ ಮೇಲೆ ಚೆಲ್ವಂ
ಕೊಂಡೆಸೆವ ಕಳಂಕದಂತಿರೆಸೆದಂ ಕೃಷ್ಣಂ ೩೬

ಹೊಮ್ಮಿತ್ತು, ಹಾರಿದ ಕೆಂಡಗಳು ನೆತ್ತಿಯ ಮೇಲೆ ಬಂದು ಬಿದ್ದುವೆಂಬಂತೆ ಹೆಡೆಯ ರತ್ನಗಳು ತೋರಲಾಗಿ, ಆ ಸರ್ಪವು ತನ್ನ ಕೋಪಾಟೋಪದಿಂದ ಆದಿಶೇಷನಿಗೆ ವಿಷಸಂಪತ್ತು ಒಳಗೇ ಇಂಗಿ ಹೋಗುವಂತೆ ಮಾಡಿತು.

ವ|| ಆ ಸರ್ಪದ ಅಬ್ಬರಕ್ಕೆ ನೆರೆದ ಜನವೆಲ್ಲ ಗುಜುಗುಟ್ಟಿ ಓಡಿ ಹೋಗಲಾಗಿ, ಕಂಸನು ಹೆದರಿ, ಗದಗದ ನಡುಗಿ ಮಹಾಮಂತ್ರವಾದಿಗಳಾದ ಮುನೀಂದ್ರರ ಮರೆಗೆ ನಿಂತು ಪಂಚನಮಸ್ಕಾರವನ್ನು ಜಪಿಸುತ್ತ "ಇದನ್ನೇರುವೆನೆಬ ಪರಾಕ್ರಮಿಯನ್ನು ಕರೆತನ್ನಿ" ಎಂದು ಹೇಳಿದನು. ಅವನ ಮಾತು ಮುಗಿಯುವುದರೊಳಗಾಗಿ -

೩೪. 'ಗರುಡಧ್ವಜನು (ಕೃಷ್ಣನು) ಬಂದನು. ಧಗಧಗಿಸುತ್ತಿದ್ದ ವಿಷದ ಉರಿಯ ಮೇಲೆ ನೀರು ಹೊಯ್ದಂತಾಯಿತು. ಆ ಸರ್ಪನಿಗೊ - ನವಿಲನ್ನು ಕಂಡ ಹಾವಿನಂತಾಯಿತು. ನೆರೆದ ಜನಕ್ಕೆ ಸೋಜಿಗವಾಯಿತು.

೩೫. ಗಮಗಮಿಸುವ ಸುಗಂಧ ಸೂಸುತ್ತಿರಲಾಗಿ ಕೃಷ್ಣನು ಆ ಹಾವಿನ ತಂಪಾದ ಹಾಸುಗೆಯನ್ನು ಏರಿದನು. ಅರೆಬಿರಿದ ಜಾಜಿಹೂವಿನ ಬಾಸಿಗದಲ್ಲಿ ಹೊಕ್ಕ ದುಂಬಿಯಂತೆ ಕೃಷ್ಣನು ಆ ನಾಗಶಯ್ಯೆಯಲ್ಲಿ ಶೋಭಿಸಿದನು.

೩೬. ಚಂದ್ರಮಂಡಲದಲ್ಲಿ ತೋರುವ ಕಪ್ಪುಕಲೆಯಂತೆ ಮುತ್ತಿನಂತೆ ಬಿಳಿಯ ವರ್ಣವಾಗಿ ತೆಕ್ಕೆ ಗಟ್ಟಿಕೊಂಡ ಆ ಸರ್ಪದ ಮೇಲೆ (ಶ್ಯಾಮವರ್ಣದ) ಕೃಷ್ಣನು ಶೋಭಿಸಿದನು.

೧ ಬಿನೀಸ (ಕ). ಫಿವಿಷಪಿ (ಕಾ). ೨ X (ಕಾ). ೩ ಪಶಿ (ಕ). ೪ ಗಂಧ (ಕ). ೫ ಗ (ಕಾ). ೬ ಯಿತು (ಕಾ). ೭ ತಂಪಿನ (ಕ), ಕಂಪಿನ (ಮ), ಕಂಪಿನ (ಪ). ೮ ಜ (ಕ). ೯ ದ (ಕಾ). ೧೦ ಯ್ದು (ಕ, ಪ).

ಆ ಜಳಜಲೋಚನಂಗೆ ವಿ
ರಾಜಿಸೆ ಜಯಲಕ್ಷ್ಮಿ ತನ್ನದೊಂದೊಲವಿಂ ನೀ
ರಾಜಿಸುವಂತೆಸೆದುವು ಫಣಿ
ರಾಜನ ಬಿಡದೊಲೆವ ಪೆಡೆಯ ಮಣಿದೀಪಿಕೆ[೧]ಗಳ್[೨] ೩೭

ಒಡೆವಂತಾಗಿರೆ ಭೂತಧಾತ್ರಿಯೆರ್ದೆ ಕಾಲ್ಮೇಲಾಗಿ ದಿಗ್ದಂತಿಗ
ಳ್ಕೆಡೆವಂತಾಗಿರೆ ಲೋಕಪಾಲಿವರಲೆಂ[೩]ದಾರಯ್ದುಮಾಕಾಶದಿಂ
ಬಿಡುವಂತಾಗಿರೆ ತಾರಕಾನಿಕರವೀ ಬ್ರಹ್ಮಾಂಡಭಾಂಡಂ ಸಿಡಿ
ಲ್ದೊಡೆವಂತಾಗಿರೆ ಪಾಂಚಜನ್ಯನಿನದಂ ಪರ್ವಿತ್ತು ದಿ[೪]ಗ್ಭಾಗಮಂ[೫] ೩೮

ವ॥ ಈ ಶಂಖಮನಿನ್ನುಂ ಪಿಡಿದೊಡೆ ಜಗಂ ಪಿಡಿಗಿ[೬]ಡುಗುಮೆಂದು ಕರುಣಿಸಿದಂತೆ ಮುನಿದ[೭]ರ್ಮನಮಿಟಿಪೆ [೮]ಶಾರ್ಙ್ಗಶಂಖಮನಿಟಿಪಿ[೯] ನಾಗಶಯ್ಯೆಯಿಂದಿಟಿದು ಪೋಪುದುಂ ಕಂಡು ಕ[೧೦]ರೆದು ಕಂಸನಿಂತೆಂದಂ

ತೊದಳೇನೊ ಮೆಚ್ಚಿದೆಂ ನಿ
ನ್ನದಟಂಗೆಲೆ ಗೋಪ ತರ್ಪುದೀ ಬಸದಿಗೆ ನೀ
ನುದಯಕ್ಕೆ ಮುಂಚೆ ನಾಗ
ಹ್ರದದೊಳಗಣ ಸಾವಿ[೧೧]ರೆಸಳ ತಾವರೆಯಲರಂ ೩೯

೩೭. ಕಮಲಾಕ್ಷನಿಗೆ ಜಯಲಕ್ಷ್ಮಿಯು ಒಲವಿನಿಂದ ಎತ್ತಿದ ನೀರಾಜನ ದೀಪಗಳೆಂಬಂತೆ ಆ ಸರ್ಪರಾಜನ ಹೆಡೆಯ ರತ್ನಗಳು ಕಂಗೊಳಿಸಿದುವು.

೩೮. ಭೂದೇವತೆಯ ಎದೆ ಒಡೆಯುವಂತೆ, ದಿಗ್ಗಜಗಳು ಕಾಲು ಮೇಲಾಗಿ ಬೀಳುವಂತೆ ಆಲಿಗಕಲ್ಲುಗಳ ಹಾಗೆ ನಕ್ಷತ್ರಗಳು ಉದುರಿಬೀಳುವಂತೆ, ಬ್ರಹ್ಮಾಂಡವು ಸಿಡಿದು ಒಡೆಯುವಂತೆ (ಕೃಷ್ಣನು ಊದಲಾಗಿ) ಪಾಂಚಜನ್ಯದ ಧ್ವನಿ ದಿಕ್ಕುಗಳೆಲ್ಲೆಲ್ಲ ಹಬ್ಬಿತು.

ವ॥ ಆ ಶಂಖವನ್ನು ಇನ್ನೂ ಹಿಡಿದುಕೊಂಡಿದ್ದರೆ ಜಗತ್ತು ನಾಶವಾದೀತೆಂದು ಕನಿಕರಿಸಿದಂತೆ, ಶತ್ರುಗಳ ಮನ ಶಾಂತವಾಗುವಂತೆ ಶಾರ್ಙ್ಗ ಶಂಖವನ್ನು ಇಳಿಸಿ ನಾಗಶಯ್ಯೆಯಿಂದ ಇಳಿದು ಹೋಗುವ ಕೃಷ್ಣನನ್ನು ಕರೆದು ಕಂಸನು ಹೀಗೆಂದನು -

೩೯. "ಎಲೈ ಗೋಪನೇ, ನಿನ್ನ ಪರಾಕ್ರಮಕ್ಕೆ ಮೆಚ್ಚಿದೆನು. ಇದರಲ್ಲಿ ಅನುಮಾನವೇ ಇಲ್ಲ. ಸೂರ್ಯೋದಯಕ್ಕೆ ಮುಂಚಿತವಾಗಿ ನಾಗಸರೋವರದೊಳಗಿರುವ ಸಾವಿರ ದಳದ ತಾವರೆ ಹೂರನ್ನು ಈ ಬಸದಿಗೆ ತೆಗೆದುಕೊಂಡು ಬಾ.

---

೧ ಪೊಲ್ (ಮ). ೨ ಲ್ಗಂ (ಕ, ಪ).ಯ ೩ ದಂ (ಕ). ೪ ಕ್ಷೂರವಂ (ಕ), ಕ್ಷಾರವಂ (ಕಾ), ಕ್ಷಾರಮಂ (ಪ). ೫ ಗೆ (ಕಾ). ೬ ವ (ಕ, ಮ, ಪ). ೭ X (ಕಾ). ೮ ನೆ (ಕಾ). ೯ ರಾ (ಕಾ). ೧೦ ಯಿ (ಕಾ).

ವ|| [1]ತಂದು ದೇವರ ಶ್ರೀಪಾದಪದ್ಮದೊಳೇಱಿಸಿದೊಡೆ ನಿನ್ನ ನಾ[2]ನೆಯೇ[2]ಱಿಸುವೆನೆಂಬುದು[3]ಮದಕೊರ್ಂಡು ಕೆಯ್ಯನೆ[3] ತಂದಪೆನೆಂ[4]ದಾ ಕೆಯ್ಯೊಳೆ ಕೃಷ್ಣನಾ ಯಮುನಾನದಿಯ ನಾಗಹ್ರದಕ್ಕೆ ಪೋದನದೆಂತಿರ್ದುದೆಂದೊಡೆ

ಬಳಿದು ವಿಷಾಗ್ನಿಯಗ್ಗಿವಳ[5]ದೆಣ್ಣೆಯೊ[6]ಳೆಟ್ಟು[6]ರಿವಗ್ನಿಯಂತೆ ನೀ
ರೊಳಗುರಿದೇಱಿ ಪರ್ವಿ ಬಡವಾಗ್ನಿವೊಲಾ ಮಥನಾದ್ರಿಪೀಡೆಗು
ಮ್ಮಳಿಸಿ ಲಯಾಗ್ನಿ ಘೋರ ಗರಳಾಗ್ನಿಯನೀ ಭುವನತ್ರಯಂ ಭಯಂ
ಗೊಳೆ ಕೆಳರ್ದಾಸು[7]ರಕ್ಕು[7]ಗುಟ್ಟಿ ವಾರ್ಧಿವೊಲಿರ್ದುದು ಕಾಳಿಯ ಹ್ರದಂ ೪೦

ಮಿಗೆ ನಂಜು ತಾಗೆ ನೀರ್ಗಂ[8]
ಪುಗುಗೊ[9]ಗೆದವೊಲೊಗೆಯೆ ಬುದ್ಬುದಾವಳಿ ಕಾಳೋ
ರಗ ನಿಶ್ವಾಸಾನಿಳನಿಂ
ಜಗುನೆಯ ಮಡು [10]ತೆರ್ಕು[10]ತೆರ್ಕೆಸುರ್ಕುತ್ತಿರ್ಕುಂ ೪೧

ಕಾಳಿಯನ ವಿಷದ ಪೊಗೆ ಮಿಗೆ
ಕಾಳಿಂದಿ ಕಱಂಗಿ ಕೂಡಿ ಕಾಡಿಗೆಗೊಂಡೀ
ಭೂಲಲನೆಯ ಬಾಸೆವೊಲಾ
ಯ್ತಾಲೋಕಿಗೆ ಕಱಿಯ ತೊ[11]ಱಿಯ ಪರಿದೆಡೆಯುಂಟೇ ೪೨

ವ|| ಅದನ್ನು ತಂದು ದೇವರ ಪೂಜ್ಯವಾದ ಪಾದಕಮಲಕ್ಕೆ ನೀನು ಏರಿಸಿದರೆ ನಿನ್ನನ್ನು ನಾನು ಆನೆಯ ಮೇಲೆ ಮೆರೆಯಿಸುವೆನು" ಅದಕ್ಕುತ್ತರವಾಗಿ ಕೃಷ್ಣನು, ಈಗಲೇ ತರುವೆನು" ಎಂದು ನುಡಿದು, ಆ ಕ್ಷಣವೆ ಯಮುನಾನದಿಯ ನಾಗನ ಮಡುವಿಗೆ ಹೋದನು. ಅದು ಹೇಗಿತ್ತೆಂದರೆ -

೪೦. ಕಾಯ್ದ ಎಣ್ಣೆಯಲ್ಲಿ ಭುಗಿಲೆದ್ದು ಉರಿಯುವ ಬೆಂಕಿಯಂತೆ, ವಿಷದ ಬೆಂಕಿ ನೀರೊಳಗಿಂದ ಉರಿದೆದ್ದು ವಡವಾಗ್ನಿಯಂತೆ ಹಬ್ಬಲಾಗಿ, ಮಂಥನ ಮಾಡುವ ಮೇರುಪರ್ವತದ ಹಿಂಸೆಗೆ ಉಮ್ಮಳಿಸಿ, ಸಮುದ್ರವು ಮೂಲೋಕಕ್ಕೆ ಭಯಪ್ರದವಾದ ಪ್ರಳಯಾಗ್ನಿ ಸದೃಶವಾದ ಈ ವಿಷಾಗ್ನಿಯನ್ನು ಕಾರುತ್ತಿರುವುದೇನೊ ಏನೊ ಎಂಬಂತೆ ಆ ಕಾಳಿಯನ ಮಡು ಕಂಗೊಳಿಸಿತು.

೪೧. ವಿಷದ ತಾಪದಿಂದ ನೀರಿನ ಮೈಗೂ ಹುಗುಳೊಡೆದುವೆಂಬಂತೆ ನೀರ್ಗುಳ್ಳೆಗಳೇಳಲಾಗಿ, ಆ ಕಾಳಸರ್ಪದ ಉಸಿರಿನಿಂದ ಯಮುನೆಯ ಮಡು ಅಲ್ಲೋಲ ಕಲ್ಲೋಲವಾಗುತ್ತಿರುವುದು.

೪೨. ಕಾಳಿಯ ಸರ್ಪವುಗುಳಿದ ವಿಷದ ಹೊಗೆಯಿಂದ ಯಮುನಾನದಿಯ ನೀರು ಕಂದಿ, ಕಾಡಿಗೆ ಬೆರೆತು ಕಪ್ಪಾಗಿ ಭೂದೇವಿಯ ಹೊಕ್ಕುಳ ಮೇಲಿನ ಕೂದಲು ಸಾಲೆಂಬಂತೆ ಕಂಗೊಳಿಸಿತು. ಹಾಗಲ್ಲದೆ ಹೋದರೆ ಕರಿಯ ಹೊಳೆ ಎಲ್ಲಾದರೂ ಹರಿದುದುಂಟೆ?

---

೧ + ಅದಂ (ಮ). ೨ ನೆಱೆಯಲೇ (ಕಾ). ೩ ಮದಂ ಮಾರ್ಕೊಂಡು ಕೆಯ್ಯೊಡನೆ (ಮ). ೪ ನೆಯೆಂ (ಕ, ಕಾ). ೫ ಳೆ (ಪ). ೬ ಳಿರ್ದು (ಕ, ಮ, ಪ). ೭ ರಂ ಕು (ಕಾ). ೮ ರ್ಗಳ್ (ಕ, ಮ, ಪ). ೯ ಲೊ (ಕ, ಮ, ಪ). ೧೦ ತೆರ್ಕೆ (ಕ), ವೆರ್ಕೆ (ಮ), ತೆತ್ಕ (ಪ). ೧೧ ದೊ (ಕ, ಪ).

ಅನಿಲಂ ಮೇಗನೆ ಪೋಗಲಣ್ಮನಿವನಿಂ[೧]ತಂದಾ[೨]ದೊಡಾ ಶಂಖಚೂ
ಳನ[೩]ನೇಂ ಕಾಯ[೪]ನೆ ಸರ್ಪವೈರಿ[೫]ವೆಸರಂ[೫]ಕೊಂಡಂದು[೬]ಗುಳ್ಕೆಂ[೬]ದು ನುಂ[೭]
ಗ[೮]ನೆ [೯]ದಂಭೋ[೯]ಳಿಯನೆತ್ತಿ ತು[೧೦]ತ್ತನೆ ಲಯೋಗ್ರಜ್ವಾಳಿ[೧೧]ಯಂ ತಿಂದು ತೇ
ಗನೆ ಮಾಕಾಳಿಯನುರ್ಚಿ ಮುಕ್ಕನೆ ವಿಯನ್ನಾಕಾಳಿಯಂ ಕಾಳಿಯಂ ೪೩

ಬಿಸಮಂ ನುಂಗಿದನೆಂದು ಕೇಳ್ದಿನದು ಮುನ್ನೀರ್ಗುಂಟೆ ಮುನ್ನಾ ವಿಷಂ
ಪುಸಿ ಪೋಗಾನುಗುಟ್ಟಿಪ್ಪೆನೆನ್ನ ವಿಷಮಂ ತಾ[ಂ]ನುಂಗಿ ನೋಟ್ಕೆಂದು ಗ
ರ್ಜಿಸಿ [ಬೊ]ತಟ್ಟಿದ ತನ್ನ ಪಾವುಗಳನೀಶಂ ಭೂಷಣಂ ಮಾಡಿ ಮ
ನ್ನಿಸಿದಂ ಪೇಟುಟಿದೆಂದು ತೀರ್ಚನೆ ಕನಲ್ದಾ ಶೂಲಿಯಂ ಕಾಳಿಯಂ ೪೪*

ವ|| ಎನಿಪ ದಂದಶೂಕನ ದಾಡೆಗಳಿನೊಸರ್ತ ವಿಷದ ಮಡುವಿನಂತಿರ್ದ ಜಗುನೆಯ ಮಡುವಂ ಕ್ರೀಡಾಸರೋವರಮಂ ಪುಗುವಂತೆ ಪೊಕ್ಕು

ಅಟಲೆ ಫಣಿ ಕಳಲೆ ಕೇಸರ
ವೆಟಲೆ ರುವನಮ್ಧುಪಮಾಳೆ ಹರಿ ತನ್ನಯೆ ಪೊ
ಕ್ಕುಟ ಕಮಳದಂತೆ ಜಗುನೆಯ
ಸುಟಿಯೊಳ್ ಸೊಗಯಿಸುವ ಕಮಳದಲರಂ ಕೊಯ್ದಂ ೪೫

೪೩. ವಾಯು ಇವನಮೇಲೆ ಹಾದು ಹೋಗಲಾರನು. ಪೂರ್ವಕಾಲದಲ್ಲಿಯೆ ಈ ಕಾಳಿಯನು ಇದ್ದಿದ್ದರೆ ಗರುಡನಿಂದ ಇವನು ಶಂಖಚೂಡನನ್ನು ರಕ್ಷಿಸುತ್ತಿರಲಿಲ್ಲವೆ? ವಜ್ರಾಯುಧವನ್ನು ಗುಳುಂ ಎಂದು ನುಂಗದಿರುತ್ತಿದ್ದನೆ? ಪ್ರಳಯೋಗ್ರವಾದ ಅಗ್ನಿಜ್ವಾಲೆಗಳನ್ನು ಕಬಳಿಸುತ್ತಿರಲಿಲ್ಲವೆ? ಮಹಾಕಾಳಿಯನ್ನು ತಿಂದು ತೇಗನೆ? ಆಕಾಶದಲ್ಲಿರುವ ಸ್ವರ್ಗಗಳನ್ನೆಲ್ಲ ಕಿತ್ತು ಮುಕ್ಕದಿರುತ್ತಿದ್ದನೆ?

೪೪. "ಆ ಶಿವನೇನೋ ವಿಷವನ್ನು ನುಂಗಿದನೆಂದು ಕೇಳಿದೆ. ಸಮುದ್ರದಲ್ಲಿ ಅಂತಹ ವಿಷವಿತ್ತೆ? ಅದೆಲ್ಲ ಸುಳ್ಳು, ಬಿಡು. ಈಗ ನಾನು ವಿಷವನ್ನು ಉಗುಳುತ್ತೇನೆ; ಅವನು ನುಂಗಿ ನೋಡಲಿ" ಎಂದು ಗರ್ಜಿಸಿ, ಅದನ್ನು ತಿಳಿಸಲು ತನ್ನ ಹಾವುಗಳನ್ನು ದೂತರೆಂದು ಕಳಿಸಲಾಗಿ ಶಿವನು ಆ ಹಾವುಗಳನ್ನು ತನ್ನ ಅಲಂಕಾರವೆಂದು ಧರಿಸಿ ಗೌರವಿಸಿದನು. ಹಾಗೆ ಮಾಡದೆ ಇದ್ದಿದ್ದರೆ ಕೋಪದಿಂದ ಈ ಕಾಳಿಯನು ಅಂದೇ ಆ ಶಿಶುವನ್ನು ಮುಗಿಸಿಬಿಡುತ್ತಿರಲಿಲ್ಲವೆ?

ವ|| ಇಂತಹ ಸರ್ಪದ ಕೋರೆ ಹಲ್ಲುಗಳಿಂದ ಒಸರಿದ ವಿಷದ ಮಡುವೆ ಎಂಬಂತಿದ್ದ ಯಮುನೆಯ ಮಡುವನ್ನು ಕೃಷ್ಣನು ಅದೊಂದು ಕ್ರೀಡಾಸರೋವರವೆಂಬಂತೆ ಹೊಕ್ಕನು.

೪೫. ಸರ್ಪಕ್ಕೆ ಸಂತಾಪವಾಗಿ, ಹೂವಿನ ಪರಾಗ ಕದಡಿ, ಗುರಿಯಿಡುವ ದುಂಬಿಗಳ ಹಿಂಡು ಮೇಲೆರಗುತ್ತಿರಲಾಗಿ ಕೃಷ್ಣನು ತನ್ನ ಹೊಕ್ಕುಳ ಕಮಲದಂತೆ ಶೋಭಿಸುವ ಯಮುನೆಯ ಸುಳಿಯ ಕಮಲವನ್ನು ಕೊಯ್ದನು.

೧ನೇ (ಮ). ೨ ದೊಂ (ಕಾ). ೩ ನ (ಮ, ಪ). ೪ ವ (ಪ), ೫ ವೆಸರಿಂ (ಕಾ), ಸರಂ (ಕ), ಸರಮಂ (ಪ). ೬ ಘಣ್ಮೆಂ (ಕಾ). ೭ ನು (ಕಾ). ೮ ಣ್ಗ (ಕಾ). ೯ ದಳ್ಪೋ (ಕ), ದಲ್ಪೋ (ಪ), ೧೦ ಕು (ಪ). ೧೧ ಲೆ (ಕಾ). * ಕಾ ಪ್ರತಿಯಲ್ಲಿ ಮಾತ್ರ ಇದೆ.

ವ॥ *ಕೊಯ್ದು ಗೋವ[೧]ರ ಕೆಯ್ಯೊಳ್ಕೊಟ್ಟು ಮಗುಳೆ ಕಾಳಿಯಾನ್ವೇ ಷಣದಿಂ ಪೊಕ್ಕು

ಕಾಳಿಂದಿಯ ಮಡುವಂ ಹರಿ
ತೋಳಿಂ ತು[೨]ಳ್ಕಾಡಿ ಮೊರೆದು ಮೇಲ್ವಾಯ್ದ[೩] ಮಹಾ
ಸ್ಥೂಳ ತರಂಗಾವಳಿಯಂ
ಕಾಳಿಯನೆಂದಡಸಿ ಪಿಡಿದು ಪೊಡೆದಂ[೪] ತಳದಿಂ ೪೬

ಅಡಗಿದ ಪಾವಂ ಜಗುನೆಯ
ಮಡುವಿನೊಳಅಿಸುವನ ಕರನಖಾರುಣರುಚಿಗಳ್
[೫]ಕಡುಗ[೫]ಟ್ಟಿಲೆಯೊಳ್ ಪಲವುಂ
ಸೊಡರಂ ಕೊಂಡಅಿಸುವಂತಿರೇಂ ತೊಳಗಿದುವೋ ೪೭

ಫಣಾ[೬]ರತ್ನಜ್ಯೋತಿಯಿಂ ಕಾಳಿಯ[೭]ನನ[೭]ಅಿಸಿ ಕಂಡೆಯ್ದಿ ಗೋಪಾಳಚೂಡಾ
ಮಣಿ ಜೀವಂಬೆತ್ತ ಗಾರುತ್ಮತ ಮಣಿಯವೊಲಂಗಪ್ರಭಾಮಾಲೆ ದುರ್ವಾ
ಗೃಹಮಂ ಕಾಳಿಂದಿಯೊಳ್ ಪುಟ್ಟಿಸಿ[೮] ಪಿಡಿಯಲೊಡಂ ಕೃಷ್ಣನಂ ಕಾಳಿ [ಯಾಂ[೯]]
ಪೆಣೆ[೧೦]ದತ್ತಾಪಾದಮಸ್ತಂ ಲತೆ[೧೧]ಯೆಳ[೧೧]ವಿ[೧೨]ದಿರಂ ಪರ್ವುವಂತೊಂದಗುರ್ವಂ ೪೮

ವ॥ ಆ ಹೂವನ್ನು ಗೋವಳರ ಕೈಯಲ್ಲಿ ಕೊಟ್ಟು, ಕಾಳಿಯನ್ನು ಹುಡುಕಲೆಂದು ಮರಳಿ ಮಡುವನ್ನು ಹೊಕ್ಕನು -

೪೬. ಆ ಮಡುವನ್ನು ತನ್ನ ತೋಳುಗಳಿಂದ ಕದಡಲಾಗಿ, ಭೋರ್ಗರೆಯುತ್ತ ಮೇಲೆದ್ದ ಮಹಾಗಾತ್ರದ ತರಂಗವನ್ನು ಕಾಳಿಯಸರ್ಪವೆಂದು ಭ್ರಮಿಸಿ, ಕೃಷ್ಣನು ಅಂಗೈಯಿಂದ ಅಪ್ಪಳಿಸಿ ಹೊಡೆದನು.

೪೭. ಕಗ್ಗತ್ತಲೆಯಲ್ಲಿ ಹಲವಾರು ದೀಪಗಳನ್ನು ಹಿಡಿದು ಹುಡುಕುತ್ತಿರುವಂತೆ ಅಡಗಿಕೊಂಡಿರುವ ಹಾವನ್ನು ಯಮುನೆಯ ಮಡುವಿನಲ್ಲಿ ಹುಡುಕಾಡುತ್ತಿರುವ ಅವನ ಬೆರಳುಗುರಿನ ಕಾಂತಿಗಳು, ಥಳಥಳಿಸಿದುವು.

೪೮. ಹೆಡೆಯಲ್ಲಿರುವ ರತ್ನದ ಬೆಳಗಿನಿಂದ ಕಾಳಿಯುನ್ನು ಕಂಡು ಗೋಪಾಲಶ್ರೇಷ್ಠನಾದ ಕೃಷ್ಣನು, ಸಜೀವವಾದ ಪಚ್ಚೆಯ ರತ್ನದಂತಿರುವ ತನ್ನ ದೇಹಕಾಂತಿಯಿಂದ ಕಾಳಿಂದಿಯಲ್ಲೊಂದು ಹಸಿರು ಹುಲ್ಲಿನ ಮನೆಯನ್ನೆ ನಿರ್ಮಿಸಿ ಹಾವನ್ನು ಹಿಡಿದೊಡನೆ ಎಳೆಯ ಬಿದಿರನ್ನು ಬಳ್ಳಿ ಆವರಿಸಿಕೊಳ್ಳುವಂತೆ ಅದು ಕೃಷ್ಣನ ದೇಹವನ್ನು ಸಮಗ್ರವಾಗಿ ಸುತ್ತಿಕೊಂಡಿತು.

X ಈ ವಚನವು ಕಾ ಪ್ರತಿಯಲ್ಲಿಲ್ಲ. ೧ ಪ (ಪ). ೨ ತೂ (ಕಾ). ೩ ಯ್ವ (ಮ). ೪ ದುಂ (ಮ). ೫ ಗಡ ಕ (ಪ). ೬ ಣೆ (ಕ). ೭ ನೆಯ (ಕಾ). ೮ ಸೆ (ಕಾ). ೯ ಯಂ (ಕ, ಕಾ, ಮ). ೧೦ ಳೆ (ಕಾ). ೧೧ ಯೊಳೆ (ಕ, ಮ, ಪ). ೧೨ ಬಿ (ಪ).

ಬಿಸುಸು[೧]ಯ್ದೀಕ್ಷಿಸೆ[೨] ನುಂಗುವಂತೆ ಮೊಗಮಂ, ಪ್ರೋದ್ಯತ್ಫಣಾಹಸ್ತದಿಂ
ಮುಸಕಂಗುಂದದೆ ಪೊಯ್ದು ಮುಂದಲೆಯನಂಗೋಪಾಂಗಮಂ ಕೂಡೆ ಬಂ
ಚಿ[೩]ಸಿ ಮೆಯ್ವೇಱೆರಡಿಲ್ಲೆನಲ್ಸಮರತತ್ತ್ವಾಟೋಪದಿಂ ತಬ್ಬಿ ಪು
ಟ್ಟಿಸಿದಂ ಪಂಕಜಲೋಚನಂಗೆ ವಿಜಯಶ್ರೀಕೇಳಿಯಂ ಕಾಳಿಯಂ ೪೯

ಮತ್ತಮಯೂರಗರ್ಜನೆಗೆ ಚಂದನಮಂ ಬಳಸಿರ್ದ ಪನ್ನಗಂ
ಸುತ್ತ[೪]ಟಿವಂತೆ ತನ್ನ ಗಳಗರ್ಜನೆಗಂಜಿ ನಿಜಾಂಗಯಷ್ಟಿಯಿಂ[೫]
ಸುತ್ತಟಿದಿರ್ದ ಪನ್ನಗನ ಗಂಟಲನೊತ್ತಿದನೊತ್ತಿದೊಂದು ಕೆ
ಯ್ಯತ್ತಮದೊಂದು ಕಾಳಭುಜಗಂ ಪಿಡಿದಂತಿರೆ ಕಾಳಿಯಾಹಿಯಂ ೫೦

ವ॥ ಅಂತು ಕಾಳಿಯಂ[೬] ಗಾಳಿಯುಂ[೭] ಗರಳಮುಮನೊಳಗಾಗಿ ಕಾಱೆ ಕಾಳಿಂದಿಯ ಸೋರ್ಮುಡಿಯಂ ಪಿಡಿ[೮]ತಪ್ಪಂತೆ ಪಿಡಿ[೯] ತಂದು[೧೦] ಗೋಪಾಲ ಬಾಲಕರ ಕೆಯ್ಯೊಳ್ ಕೊಟ್ಟು ಕಂಸನಲ್ಲಿಗೆ ಕಮಳದೊಡನೆ ಕಳಿ[೧೧]ಪಿ ಕೃಷ್ಣಂ ಗೋಕುಳಕ್ಕೆ[೧೨]ಮಗುಳ್ವಾ[೧೨]ಗಳ್

ಅಯನಯ ನಿಧಾನ ತೇಜೋ
ಮಯ, ಕೆಂಡಮನೊಱಲೆ ಪತ್ತಲಾರ್ಕುಮೆ ಜಗತೀ
ಜಯಿಯೆನಿಪ ಕಂಸ[೧೩]ನೆಸ[೧೩]ಗುವ
ಕುಯಕಂ ಕೊಳ್ಗು[೧೪]ಮೆ ಪರಾಕ್ರಮೋನ್ನತ ನಿನ್ನಂ ೫೧

೪೯. ಬಿಸಿಯಾದ ಉಸಿರು ಬಿಟ್ಟು ನುಂಗುವಂತೆ ಮುಖವನ್ನು ನೋಡುತ್ತ, ಹೆಡೆಯೆಂಬ ಅಂಗೈಯನ್ನೆತ್ತಿ ಕೃಷ್ಣನ ಮುಂದಲೆಯನ್ನೂ ಅಂಗೋಪಾಂಗಗಳನ್ನೂ ಬಡಿದು, (ತನ್ನ ಹಾಗೂ ಕೃಷ್ಣನ) ಮೈ ಬೇರೆಯಲ್ಲವೆಂಬಂತೆ "ಸಮರತತ್ವ (೧. ಹೋರಾಟ ೩. ಸಮರತಿ) ರಭಸದಿಂದ ಒತ್ತಾಗಿ ತಬ್ಬಿಕೊಂಡು, ಇದೇನು ಕಮಲಾಕ್ಷನೊಡನೆ ವಿಜಯಲಕ್ಷ್ಮಿಯ ಕ್ರೀಡೆಯೋ ಏನೊ ಎಂಬ ಭಾವವನ್ನು ಕಾಳಿಯನು ಹುಟ್ಟಿಸಿದನು.

೫೦. ಮದವೇರಿದ ನವಿಲಿನ ಧ್ವನಿಗೆ ಹೆದರಿ, ಚಂದನಕ್ಕೆ ಸುತ್ತಿಕೊಂಡ ಹಾವು ತನ್ನ ಬಿಗಿತವನ್ನು ಬಿಟ್ಟುಬಿಡುವಂತೆ, ಕೃಷ್ಣನ ಗರ್ಜನೆಗೆ ಅಂಜಿ ಮೈ ಸಡಿಲಿಸಿದ ಕಾಳಿಯ ಸರ್ಪವನ್ನು ಕಾಲಸರ್ಪದಂತಹ ತನ್ನ ಒಂದು ಕೈಯಲ್ಲಿ ಹಿಡಿದು, ಕೃಷ್ಣನು ಇನ್ನೊಂದು ಕೈಯಿಂದ ಅದರ ಗಂಟಲನ್ನು ಹಿಸುಕಿದನು.

ವ॥ ಹೀಗೆ ಕಾಳಿಯ ಸರ್ಪವು ಪ್ರಾಣವನ್ನು ವಿಷವನ್ನೂ ಜೊತೆಯಾಗಿ ಕಾರಿತು. ಕಾಳಿಂದ (ಯಮುನೆ)ಯ ಬಿಡುಜಡೆಯನ್ನು ಹಿಡಿದು ಎಳೆತರುವಂತೆ, ಆ ಸರ್ಪನನ್ನು ಎಳೆತಂದು ಗೋಪಾಲ ಬಾಲಕರ ಕೈಯಲ್ಲಿ ಕೊಟ್ಟು, ಕಮಲದೊಡನೆ ಕಂಸನ ಬಳಿಗೆ ಕಳಿಸಿ ಕೃಷ್ಣನು ಗೋಕುಲಕ್ಕೆ ಮರಳಿ ಬಂದಾಗ -

೫೧. "ಶುಭ ಸದ್ಗುಣಗಳಿಗೆ ಆಶ್ರಯನಾದ, ಪ್ರತಾಪಶಾಲಿಯೆ, ಕೆಂಡಕ್ಕೆ ಇರುವೆ ಮುತ್ತುವುದುಂಟೆ? ಮಹಾವೀರನಾದ ನಿನಗೆ ಕಂಸನ ಕುಹಕದಿಂದ ಕೇಡಾಗಬಲ್ಲುದೆ?"

---

೧ ಸ (ಕಾ). ೨ ಸಿ (ಕಾ). ೩ ಜಿ (ಕ). ೪ ತ್ತು (ಕಾ). ೫ ಯಂ (ಕ, ಮ). ೬ ಯುಂ (ಕ, ಕಾ). ೭ ಯಂ (ಪ). ೮ + ದು (ಕ, ಮ, ಪ). ೯ + ದು (ಕ, ಮ, ಪ). ೧೦ X (ಮ). ೧೧ ಳು (ಕಾ). ೧೨ ಬಪ್ಪಾ (ಕಾ). ೧೩ ನುಂ (ಕ, ಪ), ನಂ (ಮ). ೧೪ ಲ್ಗು (ಮ).

ವ|| ಎಂದಶರೀರ ವಾಕ್ಯಮಂ ಕೇಳ್ದು ಪೂತನೆ ಮೊದಲಾಗಿ ಕಾಳೀಯಂ-ಬರಂ ಮಾಡಿದ[1]ಪಚಾರಮೆಲ್ಲಮವನ ಮಾಟಮೆಂದು ನಿಶ್ಚಯಿಸಿ ಪಲವು ಮುನಿಸುಮನೊಂದೆಮುನಿಸು ಮಾಡಿ ಮುನಿದು ಕಂಸಂ ಮಾಡುವು[2]ಪಾಂಸ ಮೆಲ್ಲಮನಱಿ[3]ದುಮಿ[3]ರ್ದನ[4]ತ್ತ ಸಹಸ್ರಪತ್ರದೊಡನೆ ಕಾವುವೆರಸಿದ ಕರಿಯ ನೈದಿಲನಟ್ಟುವಂತೆ ನಾರಾಯಣನಟ್ಟಿದ ಪಾವುಮಂ ಪೂವುಮಂ ಕಂಸಂ ಕಂಡು ಪಾವಡರ್ದ ಪಂದೆಯಂತೆ ಕಿಱಿದು ಬೇಗಮಿರ್ದು ತನ್ನೊಳಿಂತೆಂದಂ

ಬಲಯುತನಾದಂ ಪ[5]ಗೆವಂ
ಕೊಲಲಾಱಂ ಕಾಳಿಯಂ ಗಡಿನ್ನಾರ್ಪವರಾರ್
ಸಲೆ ಕೊಲಬಾರದ ಪಗೆಯಂ[6]
ಗೆಲಬಾರದದೆಂದುಮೆಂತುಮೆಂಬುದು ಪದನೇ ೫೨

ವ|| ಎಂದು ಮಂತ್ರಶಾಲೆಗೆ ಪೋಗಿ ಮಂತ್ರಿಗಳಂ [7]ಬರಿಸಿ[7] ಬೆಸಗೊಂಡೊಡವರಿಂತೆದರ್

ಪಗೆವಂ ಬಲ್ಲಿದನಾದನಾದರಸದ ಪ್ರಚ್ಛನ್ನ [8]ತೀಕ್ಷ್ಣ[8]ದಿ ಬಾ
ಧೆಗಳಂ ಗೆಲ್ದನದೇಕೆ ಮುಚ್ಚುಮಱೆ[9]ಯಿ[9]ನ್ನುರ್ವೀಶ್ವರರ್ತಮ್ಮ ವೈ
ರಿಗಳಲ್ಲಾರು[10]ಮನಿಕ್ಕೆ[11] ಬಾರಿಸುವರಾರ್ಕೇಳ್ಮಂತ್ರಮಂ ಮಲ್ಲಗಾ
ಳೆಗಮಂ ಮಾಡಿಸಿ ಕೊಲ್ವುದುಳ್ಳೊಡರಿಯಂ ಕಂಸಾವನೀವಲ್ಲಭಾ ೫೩

ವ|| ಎಂಬ ಅಶರೀರ ವಾಣಿಯನ್ನು ಕೇಳಿದನು. ಪೂತನೆಯಿಂದ ಮೊದಲಾಗಿ ಈ ಕಾಳಿಯನವರೆಗೆ ಮಾಡಿದ ಅಪಚಾರವೆಲ್ಲ ಕಂಸನ ಮಾಟವೇ ಎಂದು ನಿಶ್ಚಯಿಸಿ, ಕಂಸನ ಕಪಟತಂತ್ರವನ್ನೆಲ್ಲ ಅರಿತು, ಕೃಷ್ಣನು ಅತ್ಯಂತ ಕ್ರುದ್ಧನಾದನು. ಅತ್ತ ದೇಟು ಸಹಿತವಾದ ಕರಿಯ ನೈದಿಲೆಯನ್ನು ಕಳಿಸುವಂತೆ ಕೃಷ್ಣನು ಕಳಿಸಿದ ಹಾವನ್ನೂ ಹೂವನ್ನು ಕಂಡು ಕಂಸನು, ಹಾವಡರಿದ ಹೆದರುಪುಕ್ಕನಂತೆ ಸ್ವಲ್ಪ ಹೊತ್ತು ಇದ್ದು, ತನ್ನಲ್ಲಿಯೆ ಹೀಗೆಂದುಕೊಂಡನು -

೫೨. "ಶತ್ರು ಬಲಿಷ್ಠನಾದನು, ಕಾಳಿಯನೂ ಇವನನ್ನು ಕೊಲ್ಲಲು ಸಮರ್ಥನಾಗಲಿಲ್ಲ ಎಂದಮೇಲೆ ಇನ್ನು ಅವನನ್ನು ಕೊಲ್ಲ ಬಲ್ಲವರು ಯಾರು? ಕೊಲ್ಲಲಾಗದು, ಗೆಲ್ಲಲಾಗದು ಎಂಬ ಈ ವೈರಿಗೆ ಏನು ಮಾಡುವುದು? ಏನು ಹಾದಿ?"

ವ|| ಹೀಗೆಂದು ಮಂತ್ರಶಾಲೆಗೆ ಹೋಗಿ ಮಂತ್ರಿಗಳನ್ನು ಕರೆಸಿಕೊಂಡು, ಕೇಳಲಾಗಿ ಅವರು ಹೀಗೆ ತಿಳಿಸಿದರು -

೫೩. "ಶತ್ರು ಬಲಿಷ್ಠನಾದನು. ಗುಪ್ತವಾದ ವಿಷ ಮೊದಲಾದ ಬಾಧೆಗಳನ್ನು ಗೆದ್ದನು. ಇನ್ನು ಮುಚ್ಚುಮರೆಯೇಕೆ? ಅರಸರು ತಮ್ಮ ವೈರಿಗಳಲ್ಲದೆ ಯಾರನ್ನಾದರೂ ಕೊಲ್ಲಿಸಿದರೆ ತಡೆಯುವವರಾರು? ನಮ್ಮ ಉಪಾಯವನ್ನಿನ್ನು ಕೇಳು. ಕಂಸರಾಜನೇ, ಮಲ್ಲಯುದ್ಧವನ್ನೇರ್ಪಡಿಸಿ ನಿನ್ನ ವೈರಿಯನ್ನು ಕೊಲ್ಲಿಸು.

೧ ದು (ಕಾ). ೨ ವ (ಕಾ). ೩ ದಿ (ಕಾ). ೪ ನಿ (ಮ). ೫ ಬ (ಕ, ಪ). ೬ ಯಾಂ (ಕ, ಪ). ೭ X (ಮ). ೮ ತೀಕ್ಷ್ಣ (ಕಾ). ೯ ಯ (ಕ, ಮ). ೧೦ ಗು (ಕಾ). ೧೧ ಕೈ (ಕ, ಮ, ಪ).

ಜಗಮೆಲ್ಲಮಱಿಯೆ ತಂಗೆಯ
ಮಗನನದೆಂತಿಱಿವೆಮೆಂ[1]ಬೊಡನುಜರ್ತನುಜಾ
ದಿಗಳಲ್ಲದೆ ಭೂಪಾಳರ
ಪಗೆವರ್ಮತ್ತೊಂದು [2]ದೀಪ[2]ದಿಂ ಬಂದಪರೇ ೫೪

ಮೊದಲೊಳ್ಮಲ್ಲನೆ ಮಲ್ಲರಿಂ ಮುಱಿಸು ಮಲ್ಲರ್ ಸೋಲ್ತೊಡಾ ಬೇಗದೊಳ್
ಮದವದ್ದಂತಿಯನೊ[3]ಕ್ಕಲೊ[3]ಕ್ಕಿಸು ಮದೇಭವ್ರಾತಮುಂ[4] ಸೋಲ್ತೊಡೊ
ಟ್ಟಿದ ಕಿರ್ಚಿರ್ಪವೊಲಿರ್ದ ಖಟ್ಗಿಬಲಮಂ ಪೇಟ್ಟಿಟ್ಟಿಗಳ್ ಸೋಲ್ತೊಡೋ
ವದೆ ನೀ[5]ನೊರ್ವನೆ[5] ಕಾದಿ ಕೊಲ್ವಗೆವನಂ ಕಾಳಾಂತಕಂ ಕೊಲ್ವವೋಲ್ ೫೫

ವ॥ ಎಂಬುದುಮಿದೇ ಮಂತ್ರಮೆಂದು[6] ನಿಶ್ಚೈಸಿರ್ದನಾ ಪ್ರಸ್ತಾವದೊಳ್ಪಡಿಯಱಂ ಪೊಡೆವಟ್ಟು ಮಹಾಮಾತ್ರಂ ಬಾಗಿಲೊಳ್ಬಂದಿರ್ದಪ[7]ನೆನೆ[7] ಕಂಸಂ ಬರ[8]ವೇಟಿಂ[8] ಬುದುಮಾ[9]ರೋಹಕಂ ಬಂದು ಕಂಡು ಸಾಷ್ಟಾಂಗವೆಱಗಿ ಮುಂದೆ ನಿಂದು

ಕರಿಕೊಲೆಯೊಳ್ಜವಂಗೆ ಪುದು ಕಾಯ್ಪಿನೊಳಗ್ನಿಗೆ ದಾಯಿಗಂ ಸಹೋ
ದರ[10]ವಳವಿಂ[10] ಸಿಡಿಲ್ಗೆ ಮದದೊ[11]ಳ್ಕೆಳೆ ಕಾ[12]ಳಿಗೆ ಕಾಲ ತಕ್ಕಿನೊ
ಳ್ಗುರು ಗರುಡಂಗೆ ಮಾರಿ[13]ಗೊವಜಂ ಮುಳಿಸಿಂದೆನೆ ನಿನ್ನ ಗಂಧ[14] ಸಿಂ
ಧುರಪತಿಯಗ್ಗದಗ್ಗಳಿಕೆಯಗ್ಗಳಮಾದುದಿ[15]ಳಾಧಿ[15]ನಾಯಕಾ ೫೬

೫೪. ಜಗತ್ತಿನಲ್ಲಿ ತಿಳಿದಿರುವಂತೆ ತಂಗಿಯ ಮಗನನ್ನು ಕೊಲ್ಲುವುದು ಹೇಗೆಂದು ಯೋಚಿಸುವೆಯಾ? ಅರಸರಿಗೆ ವೈರಿಗಳಾಗುವರು ಅವರ ತಮ್ಮಂದಿರು, ಮಕ್ಕಳು ಮುಂತಾದವರೇ ಅಲ್ಲದೆ ಬೇರೆ ದ್ವೀಪದಿಂದೇನಾದರೂ ಯಾರಾದರೂ ಬರುವರೆ?

೫೫. ಮೊದಲು ಸುಲಭವಾಗಿ ಜಟ್ಟಿಗಳಿಂದ ಅವನನ್ನು ಕೊಲ್ಲಿಸು; ಒಂದು ವೇಳೆ ಜಟ್ಟಿಗಳೇ ಸೋತರೆ ಆ ಕೂಡಲೆ ಮದದಾನೆಗಳಿಂದ ತುಳಿಸಿಬಿಡು; ಮದದಾನೆಗಳೂ ಸೋತರೆ, ಒಟ್ಟಿದ ಕಿಚ್ಚಿನಂತಿರುವ ಖಡ್ಗಧಾರಿಗಳ ಪಡೆಯನ್ನು ಅವನ ಮೇಲೆ ನುಗ್ಗಿಸು; ಅವರೂ ಸೋತುಹೋದರೆ, ನಿಷ್ಕರುಣನಾಗಿ ನೀನೇ ಏಕಾಂಗವೀರನಾಗಿ ಪ್ರಳಯಾಂತಕನಂತೆ ಏರಿಹೋಗಿ ಶತ್ರುವನ್ನು ಸಂಹರಿಸಿಬಿಡು"

ವ॥ ಹಾಗಾದರೆ ಇದೇ ಉಪಾಯವೆಂದು ಕಂಸನು ನಿರ್ಧರಿಸಿದನು. ಆ ಸಮಯದಲ್ಲಿ ಪ್ರತೀಹಾರಿಯು ನಮಸ್ಕರಿಸಿ, "ಬಾಗಿಲಲ್ಲಿ ಮಾವುತನು ಒಂದು ನಿಂತಿರುವನು" ಎಂದು ಅರಿಕೆ ಮಾಡಿದನು. ಒಳಗೆ ಕರೆಯಿಸಲಾಗಿ, ಮಾವುತನು ಬಂದು ಸಾಷ್ಟಾಂಗವೆರಗಿ ಮುಂದೆ ನಿಂತು ಬಿನ್ನವಿಸಿದನು -

೫೬. "ಭೂಪತಿಯೆ, ಕೊಲೆಯಲ್ಲಿ ಯಮನಿಗೆ ಸರಿಯಾದ ಜೊತೆ, ಉಗ್ರತೆಯಲ್ಲಿ ಅಗ್ನಿಗೆ ಅಣ್ಣ, ಶಕ್ತಿಯಲ್ಲಿ ಸಿಡಿಲಿಗೆ ಸಹೋದರ, ಮದದಲ್ಲಿ ಕಾಳಿಗೆ ಸ್ನೇಹಿತ, ಕಾಲಿನ

೧ ನೆಂ (ಕಾ). ೨ ದೀವ (ಪ),.. ೩ ಕ್ಕಲಿ (ಕ, ಪ), ಕ್ಕಲಿ (ಮ). ೪ ಮಂ (ಕ), ಮಾ (ಪ). ೫ ನಾತನ (ಕ, ಮ, ಪ). ೬ ಬುದುಂ (ಮ). ೭ ನೆಂಬುದುಂ (ಮ). ೮ ಲಿಮೆಂ (ಕ), ೯ ಮ (ಕ, ಪ). ೧೦ ದಳಲಿಂ (ಕ), ವಟಿಲಿ (ಪ). ೧೧ ಜೊ (ಕಾ). ೧೨ ಗಾ (ಕಾ, ಮ). ೧೩ ಗಿ (ಮ). ೧೪ ಡ (ಕಾ). ೧೫ ನಾಧಿ (ಕ) ನಾದಿ (ಮ).

*ಗಿರಿ ಪರಮಾಣುವಾಗೆ ಕಡಲೆಯ್ದೆ ಲಯಾನಳನೆಯ್ದೆ ಲೋಕಮಂ
ಧರಿಯಿಸಿ ನಿಂದ ವಾಯುಚಯಮೆಯ್ದೆ ವಿಹಾಯಸಮೆಯ್ದೆ ಕಾರಣಂ
ಕರಿಗುಳಿದಂತು ದಂತಿಗಳೊಳೀ ಬಲಮೀ ಮದಮೀ ಪ್ರತಾಪಮೀ
ಭರಸಹಸತ್ವಮೀ ಸ್ಥಿರಮಹೋದಯಮಕ್ಕುಮೆ ಕಂಸ ಭೂಪತೀ ೫೭

ವ।। ಎಂದು ಬಿನ್ನವಿಸಿ ತನ್ನ ಮನದ ವಿಷಾದವಂ ಕಳೆದ ನಿಷಾದಿಗೆ ಚಿತ್ತಮುಮ[೧]ನಂಗಚಿತ್ತಮುಮ[೧]ನಿತ್ತೆನ್ನ ಪಗೆ[೨]ಯುಂ ಬಗೆ[೨]ಯುಮಿಂದು ಸಾಧ್ಯಮಾದುದು ಮಧುಸೂದನನಂ[೩] ಮುನ್ನಂ[೪]ಕೊಲ್ಲೆನಿನ್ನು[೪] [೫]ಕೊಂದಪೆ[೫]ನೆಂದು ತೊಡೆಯಂ ಪೊಯ್ದು ತಡೆಯದೆ ಚಾಣೂರಮಲ್ಲನಂ ಕರೆಯಲ್ಕಳಿಪಿ ವೀರಾ[೬]ವೇಶದಿಂ ಮೆಯ್ಯಱಿಯದೆ ಕಂಸನಿಂತೆಂದನೆಂದಾನು ಮೊರ್ಮೆ ಗಂಡಗರ್ವದ ದೆಸೆಯಿಂ ಕೈಟಭನೆಂಬ ದಾನವಂಗಾಂ ಪ್ರಾಣದಾನಂಗೆಯ್ದೊಡಾತಂ ವಿನೀತನಾಗಿ ನೀ[೭]ನೆನಗೆ ಪರೋಪಕಾರಿಯೆಯ್[೮] ನಿನಗೀ ಭವದೊಳ್ಬೆಸಕೆ[೯]ಯ್ದಪ್ಪೆನಲ್ಲದೆ ಬೆಸದಿರ್ಪೆ[೯]ನಲ್ಲೆನೆನಗೆ ಬೆಸನೇನೆಂದೊಡಾನಾ ದಾನವನಳವಂ ಕಡುಪುಮಂ ಕಾಯ್ಪುಮಂ ಕಂಡೀ ರಕ್ಕಸನಾನೆಯಾಗಲ್ ತಕ್ಕನೆಂದು ಬಗೆದು ನೋಡಿ ನೀನೆನಗಯ್ ಸಾಂ[೧೦]ಗ್ರಾಮಿಕನ[೧೧]ಪ್ಪ ನಾಗನಾಗಿರೆಂದೊಡಾಗೆ[೧೨] ನಿಜಗಲಿಯಪ್ಪಜಿತನೆಂಬ ಗಜಮಂ[೧೩] ಪರಾಜಿತಂಮಾಡಿಯಜಿತಂಜಯನೆಂಬ ಪೆಸರುಮಂ

ಸಾಮರ್ಥ್ಯದಲ್ಲಿ ಗರುಡನಿಗೆ ಗುರು, ಕೋಪದಲ್ಲಿ ಮಾರಿಗೆ ಉಪಾಧ್ಯಾಯ - ಎಂಬಂತೆ ನಿನ್ನ ಗಂಧಗಜದ ಸಾಮರ್ಥ್ಯ ಅತ್ಯದ್ಭುತವಾಗಿದೆ.

೫೭. ಈ ಆನೆಯು ಬೆಟ್ಟದ ಪರಮಾಣುಗಳಿಂದಲೆ ರಚಿತವಾಗಿದ್ದು, ಅದರಲ್ಲಿ ಸಮುದ್ರದ, ಪ್ರಳಯಾಗ್ನಿಯ (ಲೋಕಗಳನ್ನು ಧರಿಸಿ ನಿಂತ) ವಾಯುತ್ರಯದ, ಆಕಾಶದ ಪರಮಾಣುಗಳೂ ಸೇರಿಕೊಂಡಿರಬೇಕು. ಹಾಗಲ್ಲದಿದ್ದರೆ ಸಾಮಾನ್ಯವಾದ ಆನೆಗಳಲ್ಲಿ ಈ ಬಲ, ಈ ಮದ, ಈ ಶೌರ್ಯ, ಈ ಸತ್ವಗಳು ಎಂದಾದರೂ ಇರುವುದುಂಟೆ?

ವ।। ಹೀಗೆ ಭಿನ್ನವಿಸಿ ತನ್ನ ಮನದ ವಿಷಾದವನ್ನು ನಿವಾರಿಸಿದ ಮಾವುತನಿಗೆ ತನ್ನ ಮನವನ್ನು ಬಹುಮಾನವಾಗಿ ತೆತ್ತು, "ಇಂದು ನನ್ನ ವೈರಿ ಕೈವಶವಾದನು, ಮನೋರಥ ಈಡೇರಿತು. ಕೃಷ್ಣನನ್ನು ಈ ಮೊದಲು ಕೊಲ್ಲಲಾಗಲಿಲ್ಲ. ಇನ್ನು ಕೊಲ್ಲುವೆನು" ಎಂದು ತೊಡೆ ತಟ್ಟಿಕೊಂಡು, ತಡಮಾಡದೆ ಚಾಣೂರನೆಂಬ ಜಟ್ಟಿಯನ್ನು ಕರೆಕಳಿಸಿಕೊಂಡು ವೀರಾವೇಶದಿಂದ ಮೈಮರೆತು ಕಂಸನು ಹೀಗೆಂದನು - "ಎಂದೊ ಒಮ್ಮೆ ಪರಾಕ್ರಮದ ಗರ್ವದಿಂದ ಕೈಟಭನೆಂಬ ರಾಕ್ಷಸನಿಗೆ ನಾನು ಪ್ರಾಣದಾನ ಮಾಡಿದ್ದರಿಂದ ಆತನು ವಿನಯದಿಂದ ನೀನು ನನಗೆ ಉಪಕಾರ ಮಾಡಿರುವೆ. ನಿನಗೆ ಈ ಜನ್ಮದಲ್ಲಿ ಆಜ್ಞಾಧಾರಕನಾಗಿ ಇರುವೆನಲ್ಲದೆ ಎಂದೂ ವಿರೋಧಿಸುವುದಿಲ್ಲ. ನನಗೆ ಏನಪ್ಪಣೆ ಹೇಳಿ - ಎಂದನು. ಆ ರಾಕ್ಷಸನ ಸಾಮರ್ಥ್ಯವನ್ನು, ಉತ್ಸಾಹವನ್ನು ಉಗ್ರತೆಯನ್ನು ಕಂಡು ಈ ರಾಕ್ಷಸನು ಆನೆಯಾಗಲು ತಕ್ಕವನೆಂದು ನಿರ್ಧರಿಸಿ ನೀನು ನನಗೆ ಯುದ್ಧದಾನೆಯಾಗಿರೆಂದು ನಾನು ಹೇಳಿದೆನು. ಆ

---

* ಇದನಾನೆ ಮಾಡುವಾಗಳ್ ಬಿದಿ ಗಿರಿಗಳ್ ನೆರೆದ ರೂಪ ಪರಮಾಣುಗಳಂದದಿನಿರ್ದುವಕ್ಕುಂ (ಆದಿ ಪು. ೧೩-೫೬)

೧ X (ಮ). ೨ X (ಮ). ೩ ನುಂ (ಕ). ೪.... (ಕಾ). ೫ ಂಕೊಂದಪೆ (ಕಾ). ೬ ತಾ (ಕಾ, ಮ). ೭ X (ಕ, ಮ, ಪ). ೮ X (ಕಾ). ೯ ಯ್ದಿರ್ಪ (ಕಾ). ೧೦ ಸಾಲ (ಕ, ಪ). ೧೧ ಮ (ಕ, ಮ, ಪ). ೧೨ ಗಿ (ಕಾ). ೧೩ ಮಾಂ (ಕ, ಮ, ಪ).

ವಿಕಾಸಿತಾನೇಕ ಕುಸುಮಕಾಸಾರ ಸರಿತ್ಸರೋವರಂಗಳೊಳಪೊಕ್ಕು ಕುವಳಯ ಮನೆ[೧]ಕಿಟ್ಟು ಮಸ್ತಕ ಪಿಂಡದೊಳೊಟ್ಟಿಕೊಂಡು ಕುವಳಯಾಪೀಡ[೨]ನೆಂಬ[೨] ಪೆಸರುಮಂ ಪಡೆದುದೆಂದದಱ ಪೂ[೩]ರ್ವಾಂತ[೩]ರಮಂ ತಿಳಿಪಿ ಮಾವಂತನಂ ಕರೆದು ಕಿವಿಯೊಳ್ [೪]ನಾಳೆ[೪] ನೀನುಂ ನಿನ್ನಾನೆಯುಂ ಗೋಪುರದೊಳ್ಕಟ್ಟು ಗೊಂಡಿರ್ದು ಪುರಮಂ ಪುಗುವ ನಂದನ ಮಗನಂ ಯಮಪುರಮಂ ಪುಗಿಸಿ ನೋಂತರ ಪಗೆಯನೆತ್ತಿಱಿದಂತೆ ಮಾಡೆಂದು ಕಳುಪಿದನನ್ನೆಗಂ ಚಾಣೂರಂ ಬಂದು ಭುಜಾಸ್ಫಾಳನಪುರಃಸರಂ [೫]ಬೆಸಸು[೫] ಬೆಸಸೆನೆ ಕಂಸನಿಂತೆಂದಂ

ಮೆಚ್ಚುಂಟು ನಾಳೆ ನಿಮ್ಮೊ[೬]ಳ್
ಮಚ್ಚರಿಸುವ ನಂದಸುತನ ಮೂಗಿಂ ಬಾಯಿಂ
ದುಚ್ಚಳಿಸೆ ರುಧಿರಮೆನಗಾ
ದಚ್ಚಗಮಂ ಮುಱಿವೊಡೊತ್ತಿ ಮುಱಿ ಚಾಣೂರಾ ೫೮

ವ|| ಎಂದ ಕಂಸಂಗೆ ಚಾಣೂರಮಲ್ಲಂ ಮುನಿದು

ಕ್ಷೋಣಿಪ ನೀವೀ ಮಾತಂ
ಮಾಣಕ್ಕಟ ಕೀಡೆಯಂ ಕಿಮುಟ್ಟುವುದಕ್ಕೀ[೭]
ಚಾಣೂರನೇಕೆ ಮುಳಿದಾಂ
ಪೂಣಿಸಿದೊಡೆ ಕೃಷ್ಣನೆಂಬ ಮಾನಸನೊಳನೇ ೫೯

ಮೇರೆಗೆ ಅವನು ಆನೆಯಾಗಿ ಸಹಜ ಶೂರನಾಗಿದ್ದ ಅಜಿತನೆಂಬ ಗಜವನ್ನು ಸೋಲಿಸಿ 'ಅಜಿತಂಜಯ'ವೆಂಬ ಹೆಸರು ಪಡೆದನು ಮತ್ತು ಅನೇಕ ತಾವರೆಗಳ, ನದಿ, ಸರೋವರಗಳನ್ನು ಹೊಕ್ಕು ಕುವಲಯ (ಕನ್ನೈದಿಲೆ)ಗಳನ್ನು ಕಿತ್ತು ಕಿತ್ತು ತಲೆಯ ಮೇಲೊಟ್ಟಿಕೊಂಡು 'ಕುವಲಯಾಪೀಡ' ಎಂಬ ಹೆಸರನ್ನು ಪಡೆದನು. "ಹೀಗೆ ಅದರ ಪೂರ್ವ ವೃತ್ತಾಂತವನ್ನು ತಿಳಿಸಿ ಮಾವುತನನ್ನು ಹತ್ತಿರಕ್ಕೆ ಕರೆದು "ನಾಳೆ ನೀನೂ ನಿನ್ನ ಆನೆಯೂ ಅಗಸೆ ಬಾಗಿಲಲ್ಲಿ ಕಾಯ್ದುಕೊಂಡಿದ್ದು ಪಟ್ಟಣವನ್ನು ಪ್ರವೇಶಿಸುವ ನಂದಕುಮಾರ (ಕೃಷ್ಣ)ನನ್ನು ಯಮಪುರಕ್ಕೆ ಅಟ್ಟಿ, ಆಗದವರನ್ನು ಎತ್ತಿರಿಯಿತೆಂಬಂತೆ ಮಾಡು" ಎಂದು ಕಿವಿಯಲ್ಲಿ ಹೇಳಿ ಕಳಿಸಿದನು. ಅಷ್ಟರಲ್ಲಿ ಚಾಣೂರನು ತೋಳುಗಳನ್ನು ತಟ್ಟಿಕೊಳ್ಳುತ್ತ ಏನಪ್ಪಣೆ? ಹೇಳು, ಹೇಳು" ಎನ್ನಲಾಗಿ ಕಂಸನು ಹೀಗೆಂದನು -

೫೮. "ನಿನಗೆ ಮೆಚ್ಚಿನ ಬಹುಮಾನ ನಾಳೆ ಬರಲಿದೆ. ನನಗಾದ ವ್ಯಥೆಯನ್ನು ಕಳೆಯುವುದಿದ್ದರೆ ನಿನ್ನೊಡನೆ ಸ್ಪರ್ಧಿಸುವ ನಂದಪುತ್ರನನ್ನು ಮೂಗಿನಿಂದಲೂ ಬಾಯಿಂದಲೂ ರಕ್ತ ಕಾರುವಂತೆ ಒತ್ತಿ ಮುರಿದುಬಿಡು."

ವ|| ಹೀಗೆಂದ ಕಂಸನ ನುಡಿಗೆ ಮುನಿದು ಚಾಣೂರನೆಂದನು -

೫೯. "ಅರಸನೇ, ಬಿಡು ಇಂತಹ ಮಾತುಗಳನ್ನು ಅಯ್ಯೋ! ಒಂದು ಕಿರೀಟವನ್ನು ಕಿವುಚಿ ಹಾಕುವುದಕ್ಕೆ ಈ ಚಾಣೂರನೇಕೆ ಬೇಕು? ನಾನು ಮುನಿದೆದ್ದರೆ ಕೃಷ್ಣನೆಂಬ ಮನುಷ್ಯನಿರುವುದುಂಟೆ?

* ಇಷ್ಟು ಭಾಗವು ಕಾ ಪ್ರತಿಯಲ್ಲಿಲ್ಲ. ೧ + ತ್ತಿ (ಮ). ೨ ನುಮೆಂಬ (ಕ). ೩ ರ್ವಾವತಾ (ಕಾ). ೪ X (ಕಾ). ೫ ಬೆರಸು (ಕಾ), ಬೆಸ (ಕ). ೬ ನ್ನೊ (ಕಾ). ೭ ಕ್ಕೇ (ಕ).

ದೆಸೆಯಂ ನುಂಗೆಂಬುದೇಕಾ[1]ಗಸಮನುಡುಗಿ ಕಟ್ಟೆಂಬುದೇಕರ್ಕನಂ ನೀಂ
ಪೊಸೆದೀಡಾಡೆಂಬುದೇಕಾ ದಿಗಿಭದೊಡನೆ ಪೋರೆಂಬುದೇಕೆನ್ನ[2]ನೆಮ್ಮೀ[2]
ಪಸುವಂ ಕಾಯ್ದುಂ[3]ಬ ಪಾಲ್ವಲ್ಗಳ ಪಸುಳೆಯನಿಕ್ಕೆಂದು ಬಾಳರ್ಗೆ ಪೇೞ್ವೀ
ಬೆಸನಂ ಚಾಣೂರಮಲ್ಲಂಗೆನಗ ಬೆಸಸಲೇಂ ತಕ್ಕುದೇ[4] ಕಂಸರಾಜಾ ೬೦

ಭಾವಿಪೊಡಾಂ ಜ[5]ಟ್ಟಿಯವಂ
ಗೋವಳನೆಂದಂದು ದೇವ[6] [ಪೋ]ರ್ದೊಡಮವನೆ[6]
ನ್ನಾವೆಡೆಗೆವರ್ಪನೆನಗಂ
ದೇವಕಿಯ ಸುತಂಗಮಜಗಜಾಂತರಮಲ್ತೇ ೬೧

ವ|| ಆದೊಡಂ ದೇವರಭಿಪ್ರಾಯಮನಱಿದೆಂ ದ್ರೋಹರನಾನೆಗಿಕ್ಕುವುದು ತಕ್ಕುದಲ್ಲದೆ ತಗದೆನಲಾಗ ನಾಳೆ ದೇವಕಿಯಕ್ಕೆಯನೞ್ಬಳದೊಳೆ ದೇವರ ಕಿವಿಗೆಯ್ದಿಸುವೆನಂತುಮಲ್ಲದೆ

ತನತನಗೀ ಜಗತ್ರಯಮುಮಿರ್ಪುದು ತಾಂ ಗಡ ಪೇೞಿದೆಲ್ಲಿದ
ರ್ಮುನಿವರುಮೆಲ್ಲಮಲ್ಲಿರದೆ ಪೂತನಿಯಂ ಖರಕೇಶಿಯಂ ಯಮಾ
ರ್ಜುನರನರಿಷ್ಟನಂ ಶಕಟನಂ ಪಟು ಕಾಳಿಯನಂ ಕಡಂಗಿ ಕೃ
ಷ್ಣನ ಬಸಿಱಿಂದಮಾಂ ತೆಗೆಯದಿರ್ದೊಡೆ ನೀಂ ತೆಗೆಯೆನ್ನ ಜೋಳಮಂ ೬೨

೬೦. ದಿಕ್ಕುಗಳನ್ನು ನುಂಗು, ಆಕಾಶವನ್ನು ಸುತ್ತಿಕಟ್ಟು, ಸೂರ್ಯನನ್ನು ಹೊಸೆದು ಬಿಸಾಡು, ದಿಗ್ಗಜದೊಡನೆ ಹೋರಾಡು ಎಂದು ಯಾರಿಗೆ ಹೇಳಬೇಕೊ ಅಂತಹ ನನಗೆ ಈ ದನಕಾಯುವ ಹಾಲುಹಲ್ಲಿನ ಹಸುಳೆಯನ್ನು ಕೊಲ್ಲೆಂದು, ಹುಡುಗನಿಗೆ ಹೇಳುವಂತೆ ಹೇಳುವುದೆ? ಕಂಸರಾಜಾ ಚಾಣೂರ ಮಲ್ಲನಿಗೆ ಇಂತಹ ಆಜ್ಞೆ ಮಾಡುವುದು ಯೋಗ್ಯವೆ?

೬೧. ವಿಚಾರಿಸಿನೋಡು, ನಾನು ಜಟ್ಟಿ, ಅವನು ಗೋವಳಿಗ, ರಾಜನೇ, ಹೋರಾಟದಲ್ಲಿ ನನಗೆ ಅವನು ಎಷ್ಟರ ಮಟ್ಟಿಗೆ ಯೋಗ್ಯ? ನನಗೂ ದೇವಕಿಯ ಮಗನಿಗೂ ಅಜಗಜಾಂತರವಲ್ಲವೆ?

ವ|| ಹೀಗಿದ್ದರೂ ನಿನ್ನ ಅಭಿಪ್ರಾಯವನ್ನು ಅರ್ಥಮಾಡಿಕೊಂಡಿದ್ದೇನೆ. ದ್ರೋಹಿಗಳನ್ನು ಆನೆಗೆ ಇಕ್ಕುವುದೇ ಸರಿ. ಅದು ಅಯೋಗ್ಯವೆನ್ನ ಕೂಡದು. ನಾಳೆ ದೇವಕಿಯ ವಿಲಾಪವನ್ನು ನಿನ್ನ ಕಿವಿಗೆ ಕುಸ್ತಿಕಣದಲ್ಲಿಯೆ ಕೇಳಿಸುತ್ತೇನೆ. ಅಷ್ಟೆ ಅಲ್ಲದೆ—

೬೨. ಇರುವುದು ಮೂರೇ ಲೋಕ; ಕೃಷ್ಣನ ವೈರಿಗಳಾಗಿ ಹೋದವರು ಈ ಲೋಕಗಳಲ್ಲಿ ಅಲ್ಲದೆ ಬೇರೆ ಎಲ್ಲಿ ಹೋದಾರು? ಪೂತನೆ, ಖರ, ಕೇಶಿ, ಅವಳಿಯಾದ ಮತ್ತಿ ಮರಗಳು, ಅರಿಷ್ಟ, ಶಕಟ, ಕಾಳಿಯ - ಇವರೆಲ್ಲರನ್ನು ಕೃಷ್ಣನ ಹೊಟ್ಟೆಯೊಳಗಿಂದ ನಾನು ಹೊರದೆಗೆಯದಿದ್ದರೆ, ನನ್ನ ಸಂಬಳವನ್ನು ಕಿತ್ತುಕೊಂಡು ಬಿಡು''

---

೧ ನಾ (ಪ). ೨ ನಯ್ಯೋ (ಕ, ಮ, ಪ). ೩ ದು (ಕ, ಮ, ಪ). ೪ ಮೇ (ಕಾ). ೫ ಜೆ (ಕ, ಮ). ೬ ಪೋರ್ತದೊಡವನೆ (ಕ, ಮ, ಪ).

ವ॥ ಎಂದು ಚಾಣೂರಂ ಪೋಗೆ [೧]ಕಂಸಂ[೧] ಗೃಹಮಹತ್ತರನಂ ಕರೆದು ನಾಳೆ ಮಲ್ಲಗಾಳೆಗಮೆಂಬುದುಮವಂ ಮಹಾಪ್ರಸಾದಮೆಂದ [ಖ್ಬ[೨]]ಡಮಂ ಸಮೆಯೆ

ವಿಕಿರನ್ನಾನಾಪತಾಕಾಪಟಳಪಟುಪಟೀಪಕ್ಷ[೩] ವಿಕ್ಷೇಪದಿಂ ಮೇ
ಚಕಿತಂ ರತ್ನಾವಳೀ ತೋರಣಕಿರಣಮರುಚ್ಛಾ[೪]ಪಚಾರಂಗಳಿಂ ಚಂ
ದ್ರಕಿತಂ ಪುಷ್ಪೋಪಹಾರೋಜ್ವಲ ಮುಕುಳಮಿಳತ್ಕೀರ್ಣ ಕರ್ಪೂರದಿಂ ತಾ
ರಕಿತಂ ತಾನಾಗಿ ಪೋಲ್ತಿರ್ದುದು ವಿಮಳ ನಭೋರಂಗಮಂ ಮಲ್ಲರಂಗಂ ೬೩

ಪಿರಿದುಂ ಪೊತ್ತಿರ್ಪಿನಂ[೫] ಕಟ್ಟಿದ ಪಟ[೬]ಗೆಗಳ[೬] ಕ್ಷೂಣನಕ್ಷತ್ರಮಾಳಾ
ಭರ[೭]ಣಂ ಮುಂ[೮]ದಿರ್ದ ಕಂಭಂ ಕರಮೆನೆ ಕಳಶಂ ಕುಂಭದಂತಾಗೆ ಬೇಗಂ
ಕರೆದತ್ತುತ್ಪಾತಮಂ ನಿರ್ಗತ ವಿಪುಳ ತಳಾಸ್ಥೂಳದಂ[೯]ತಂ ಗವಾಕ್ಷ
ಸ್ಫುರಿತಾಕ್ಷಂ ಪಕ್ಷಕೇತು ಶ್ರುತಿ[೧೦] ಧರಣಿಕರೇಣೂತ್ತಮಾಂಗಂ ತವಂಗಂ ೬೪

ವ॥ ಆ ತವಂಗಮಂ ತೋರ ತುಱುಂಬುಂ[೧೧] ಪೆ[೧೨]ಡೆಯಂ ಪೋಲೆ ಕೊಂಡ [೧೩]ಖೇಟಕಮುಂ[೧೩] ಕಿಱ್ತ ಕರವಾಳುಂ ಭಯಂಕರಾಕಾರಮಾಗೆ ಪೂ[೧೪]ಸಿದ ಸಿರಿ

ವ॥ ಹೀಗೆ ನುಡಿದು ಚಾಣೂರನು ಹೊರಟು ಹೋದನು. ಕಂಸನು ಮನೆ ವೆಗ್ಗಡೆಯನ್ನು ಕರೆದು ನಾಳೆ ಮಲ್ಲಗಾಳಗವೆಂದು ತಿಳಿಸಿದನು. ಆ ಮೇರೆಗೆ ಮಲ್ಲರಂಗವು ಸಿದ್ಧವಾಯಿತು.

೬೩. ಹಾರಾಡುತ್ತಿರುವ ನಾನಾ ಧ್ವಜಗಳ ಪಟವಸ್ತ್ರದ ಅಲುಗಾಟದಿಂದಾಗಿ ಪಕ್ಷಿಗಳಿಂದ ತುಂಬಿದಂತೆ ಕಪ್ಪಾಗಿ, ರತ್ನಮಯವಾದ ತೋರಣಗಳಿಂದ ಇಂದ್ರಚಾಪದ ಸೊಗಸನ್ನು ಹೊಂದಿ, ಪುಷ್ಪಹಾರಗಳಿಂದ ಚಂದ್ರಮಯವಾಗಿ, ಉಜ್ವಲವಾದ ಹೂಗಳೊಡನೆ ಬೆರೆತ ಕಪ್ಪುರದ ಹುಡಿಯಿಂದ ತಾರಕಾಮಯವಾಗಿ, ಆ ಮಲ್ಲರಂಗವು ಆಕಾಶರಂಗದಂತೆ ಕಂಗೊಳಿಸಿತು.

೬೪. ಅತಿಶಯವಾಗಿ ಕಟ್ಟಿದ ಪತಾಕೆಗಳ ಸಮೂಹವೆ ನಕ್ಷತ್ರಮಾಲೆಯೆಂಬ ಕಂಠಾಭರಣವಾಗಿ, ಮುಂದಿದ್ದ ಕಂಬವೆ ಸೊಂಡಿಲಾಗಿ, ಕಲಶಗಳೆ ಕುಂಭಸ್ಥಳಗಳಾಗಿ, ಗವಾಕ್ಷಗಳೆ ತೆರೆದಕಣ್ಣುಗಳಾಗಿ ಪಾರ್ಶ್ವಧ್ವಜಗಳೆ ಕಿವಿಗಳಾಗಲಾಗಿ, ಭೂಮಿಯೆಂಬ ಹೆಣ್ಣಾನೆಯ ತಲೆಯಂತಿರುವ ಆ ಮಲ್ಲರಂಗದ ವೇದಿಕೆ ಕೋರೆಯನ್ನು ಕಳೆದುಕೊಂಡಂತೆ ತೋರಿ ಉತ್ಪಾತವನ್ನು ಸೂಚಿಸಿತು.

ವ॥ ಸ್ಥೂಲವಾದ ತುರುಬು ಹೆಡೆಯಂತಿರಲಾಗಿ ಹಿಡಿದುಕೊಂಡ ಗುರಾಣಿ ಹಾಗೂ ಖಡ್ಗಗಳು ಭಯಾನಕವಾಗಿರಲಾಗಿ, ಲೇಪಿಸಿಕೊಂಡ ಚಂದನದ ಕಂಪೂ, ಮುಡಿದುಕೊಂಡ

---

೧ X (ಮ). ೨ ಖ್ಬ (ಪ). ೩ ಕ್ಷಿ (ಕ, ಕಾ),. ೪ ಚ್ಬಾ (ಕಾ). ೫ ನಿಂ (ಪ). ೬ ಯಿಗೆಗಳನ (ಮ, ಪ). ೭ ಣಂ ಮುಂ (ಕಾ). ೮ ದಂ (ಕಾ). ೯ ತ (ಪ). ೧೦ ಬು (ಕಾ). ೧೧ ಟೆ (ಕ), ಪಿ (ಪ). ೧೨ ಬೇಟಮಂ (ಕಾ). ಖೇಟಕಮಂ (ಕ). ೧೩+ ಜಿ (ಕಾ).

ಖಂಡದ ಕಂಪುಂ [1]ಸೂಡಿದ[1] ಕೇದಗೆಯ ಸೊವಡುಂ ದೆಸೆದೆಸೆಗೆ ಸುಟ್ಟುರೆವೋಗೆ ಗರುಡಧ್ವಜನೆಂಬ ಗರುಡನ ಬಾರಿಗೆ ವಧ್ಯಶಿಲೆಯನೇಱುವ ನಾಗಕುಮಾರನಂತೆ ವಿಷಮುಖನ[2]ಪ್ಪ ಕಂ[2]ಸಂ ಬಂದೇಱಲೊಡನೆ

ಕೊನರಿಸೆ ಕೇಶಪಾಶರುಚಿ ಕಟ್ಟಿಲೆಯಂ[3] ಮಣಿಭೂಷಣಾಂಶುಗ
ಳ್ಗನಕುಚಕೋಕಮಂ ಬಿಸಿಲನಾ[5]ಗಿಸೆ[5] ಚಂದ್ರಿಕೆಯಂ ತುಳುಂಕೆ ಲೋ
ಚನಮೊಡನೇಱೆ ನೂಪುರಝುಣಕ್ಕೃತಿ ನೆತ್ತರಪಾನಗೋಷ್ಠಿಗಾ
ತನ ಬೞಿಸಲ್ವ ಯೋಗಿನಿಯರಂತೆವೊಲೇಱಿದುದಂಗನಾಜನಂ ೬೫

ಪೊಳೆದು ಪಳಂಚಿ ಮಿಂಚಿ ಮಣಿಮಂಡ[4]ಳ ದೀಧಿತಿ [6]ಮಲ್ಲು [ವೋ]ರೆ[6] ಬಾ
ಳ್ಪೆಳಗಿನ ಬಂಬಲೊಳ್ಸಕಳ ನಾಯಕ ದಾಯಕ ದಂಡನಾಥ ಮಂ
ಡಳಿಕ ಮಹಾಪ್ರಧಾನ ಮಹಿಪಾಳಕುಮಾರಕರೋ[7]ಳಿಗೊಂಡು ಚೌ
ಪಳಿಗೆಯನೇಱಿದರ್ಮುಗಿಲನೇಱುವ ಖೇಚರರಾಜರಂದದಿಂ ೬೬

ಅನಿಮೇಷ...
..... ಗೆಡೆಯಿಲ್ಲದಂತು ಗಗನಂ ಬಂದಿರ್ದನಿಂದ್ರಂ ಮಹಾ
ಧ್ವನಿಯಿಂ[8] ನಾರದನಾರೆ ತನ್ನ ತನುವಂ ತೀವಿರ್ದ[9] ಕಣ್ಣಾರೆ ಕೃ
ಷ್ಣನ ಚಾಣೂರನ ಮಲ್ಲಗಾಳೆಗವನಾಗಳ್ನೋಡುವಾನಂದದಿಂ ೬೭

ಕೇದಗೆಯ ಸುಗಂಧವೂ ದಿಕ್ಕುದಿಕ್ಕಿಗೆ ವ್ಯಾಪಿಸುತ್ತಿರಲಾಗಿ, ಗರುಡಧ್ವಜ (ಕೃಷ್ಣ)ನೆಂಬ ಗರುಡನ ಬಾಯಿಗೆ ತುತ್ತಾಗಲೆಂದು ಸರದಿಯ ಮೇರೆಗೆ ಮಧ್ಯಶಿಲೆಯನ್ನೇರುವ ನಾಗಕುಮಾರನಂತೆ ವಿಷಮುಖನಾದ ಕಂಸನು ಬಂದು ಆ ವೇದಿಕೆಯನ್ನು ಏರಿದನು. ಕೂಡಲೆ -

೬೫. ಕೇಶಪಾಶದ ಕಪ್ಪು ಛಾಯೆಯಿಂದ ಕತ್ತಲೆಯನ್ನು ಕವಿಸುತ್ತ, ರತ್ನಾಭರಣಗಳ ಕಾಂತಿಯಿಂದ ಸ್ತನಗಳೆಂಬ ಚಕ್ರವಾಕಗಳಿಗೆ ಬಿಸಿಲನ್ನೊದಗಿಸುತ್ತ ಕಣ್ಣುಗಳಿಂದ ಬೆಳ್ದಿಂಗಳನ್ನು ಸೂಸುತ್ತ ಅಂದುಗೆಗಳ ಧ್ವನಿಯನ್ನು ಹೊಮ್ಮಿಸುತ್ತ ಆ ವೇದಿಕೆಯನ್ನೇರುವ ಅಂಗನೆಯರು ರಕ್ತಪಾನದ ಗೋಷ್ಠಿಗೆಂದು ಕಂಸನ ಬಳಿಗೆ ಬರುವ ಯೋಗಿನಿಯರಂತೆ ತೋರಿದರು.

೬೬. ರತ್ನಾಭರಣಗಳ ಕಾಂತಿ ಖಡ್ಗಕಾಂತಿಯೊಡನೆ ಸ್ಪರ್ಧಿಸುತ್ತಿರಲಾಗಿ ಸಮಸ್ತ ನಾಯಕರು, ದಂಡಾಧಿಪತಿಗಳು, ಮಂಡಳಿಕರು, ಮಹಾಪ್ರಧಾನರು, ರಾಜಕುಮಾರರು, ಸಾಲು ಸಾಲಾಗಿ ಬಂದು, ಮೋಡವನ್ನು ಏರುವ ಖೇಚರರಾಜರಂತೆ ಆ ವೇದಿಕೆಯನ್ನು ಏರಿದರು.

೬೭. ಆಕಾಶವು ತುಂಬಿಹೋಗುವಂತೆ (ಕಿಕ್ಕಿರಿದ ದೇವತೆಗಳೊಡನೆ) ನಾರದನು ಉಬ್ಬಿ ಕೂಗುತ್ತಿರಲಾಗಿ ತನ್ನ ಮೈತುಂಬ ಇರುವ ಕಣ್ಣುಗಳೆಲ್ಲವನ್ನೂ ತೆರೆದು, ಆ ಮಲ್ಲಗಾಳಗವನ್ನು ಮನಃಪೂರ್ತಿಯಾಗಿ ನೋಡುವ ಉತ್ಸಾಹದಿಂದ ಇಂದ್ರನು ಬಂದಿದ್ದನು.

---

೧ X (ಕಾ). ೨ ಷ್ಪಂ ತಂ (ಕಾ). ೩ ಯಿಂ (ಕಾ). ೪ ಳಿಸಿ (ಕಾ). ೫ ಗ (ಕ, ಮ, ಪ). ೬ ಮಲ್ಲು ವಾರೆ (ಕಾ), ಮಲ್ಲುತ್ತಾರೆ (ಕ, ಮ). ಯಲ್ಲುತ್ತಾರೆ (ಪ). ೭ ರಾ (ಕಾ) ೮ ಯಂ (ಕಾ). ೯ ರ್ದು (ಕ, ಮ).

ವ|| ಅನ್ನೆಗಂ ನೆಲಕ್ಕಮಾಗಸಕ್ಕಂ ಕೀ[೧]ಲ್ಗೊಂಡಂ[೧]ತಪ್ಪ ದೀರ್ಘಾಕಾರಮುಮೇೞೆಂಟಾನೆಯನೊಂದು ಮಾಡಿದಂತಪ್ಪ ತೋರಮುಂ ಎರಡು ತೊಡೆಯುಂ ತೋಱೆ ತೆಮಳ್ದಿ ಬಿಗಿದುಟ್ಟ ನೇತ್ರಾವಳಿಯ ಚಲ್ಲಣಮುಂ ತಲೆಗೆ ಮೂದಲೆಯಾದ ಭೂರಿಭು[೨]ಜಶಿಖರಂಗಳ್ಗೆ ದಿಟ್ಟಿಯಾಗದಂತಿ[೩]ಟ್ಟ ಕತ್ತುರಿಯ ಬೊಟ್ಟುಂ ನೆಲನಂ ತರ್ಕೈಸಲ್ತಕ್ಕಂತಪ್ಪ ತೋಳ್ಗಳುಂ ಮಿಡಿದ ಬೆರಲೊಡೆವಂತಪ್ಪ ಮು[illegible]ಯುನುರ್ಕಿಂ[೪]ಕಿಮುಟ್ಟಿ[೪]ಲ್ನೆಱಿವಂತಪ್ಪ ಮುಷ್ಟಿಯುಂ ಸಱೆಯನುರ್ಚಿ [೫]ಪೋಗಲ್[೫] ಸಾಲ್ವಂತಪ್ಪ ತಿಣ್ಪುಂ ಮಿಂಚಿಂ ಮಾಡಿದಂತಪ್ಪ ನುಣ್ಪುಮ[೬]ನೆ ನೇರಿತ್ತಾ[೭]ಗಿ ಚೂರಿಸಿದ ಸಿರಿಖಂಡದ ತಿಮಿರು[೮]ಮಿಕ್ಕಿದ [೯]ಜವಿ[೯]ಯ ದಂಡೆಯುಂ ಸೊಕ್ಕಾನೆಯ ಕೆಯ್ಯ ಕರಿಯ ಪಿರಿಯ ಪಿಲ್ಲಣಿಗೆಯು[೧೦]ಮಗುರ್ವುಮದ್ಭುತಮಾಗೆ

ಕಡೆ[೧೧]ದಂತಪ್ಪಂಗಮುಂ ಕಂಡರಸಿ ಬೆಸಿದಂತಪ್ಪಪಾಂಗಗಳುಂ ಮುಂ
ಡಿಡೆ ಬಲ್ಪಂ[೧೨] ತುಂಬಿ ಬೀ[೧೩]ಳ್ಕೊಟ್ಟಿದ ಮಳಯಜದೊಳ್ಪುಳ್ಗೆ ನೀಳಾಳಕಂಬೋ
ಲ್ಕುಡೆ ಚೆಲ್ವಂ ಚಲ್ಲಣಂ ಚೆಂಡಿಕೆ ಮಿಳಿರೆ ಭುಜಾಸ್ಫಾಳನಂಗೆಯ್ವುತುಂ ಬೊ[೧೪]
ಬ್ಬಿಡುತುಂ ಗಂಡೇಱಿ ಬಂದಂ ಮದಗಜಗತಿಯಿಂದುರ್ವಿ ಚಾಣೂರಮಲ್ಲಂ ೬೮

(ಪದ್ಯದ ಮೊದಲ ಚರಣದಿಂದ ಎರಡನೆಯ ಚರಣದ ಆರಂಭದವರೆಗೆ ತ್ರುಟಿತವಾಗಿದೆ)

ವ|| ಅಷ್ಟರಲ್ಲಿ ನೆಲಕ್ಕೂ ಆಕಾಶಕ್ಕೂ ಕೀಲು ಕೂಡಿಸಿದಂತಿರುವ ಉನ್ನತವಾದ ಆಕಾರವೂ ಏಳೆಂಟು ಆನೆಗಳನ್ನು ಕೂಡಿಸಿ ಬಂದು ಆಕೃತಿಮಾಡಿದಂತಿರುವ ಸ್ಥೂಲವಾದ ಎರಡು ತೊಡೆಗಳೂ ಬಿಗಿದುಟ್ಟ ನೇತ್ರಾವಳಿಯ ಚಡ್ಡಿಯೂ ತಲೆಯೊಡನೆ ಸ್ಪರ್ಧಿಸುತ್ತಿರುವ ಭುಜಶಿಖರಗಳಿಗೆ ದೃಷ್ಟಿಯಾಗದಂತೆ ಇಟ್ಟ ಕಸ್ತೂರಿಯ ಬೊಟ್ಟೂ ನೆಲವನ್ನು ಉಕ್ಕನ್ನು ಕಿವುಚಿ ಹಾಕಬಲ್ಲಂತಹ ಮುಷ್ಟಿಗಳೂ ಬಂಡೆಗಲ್ಲನ್ನು ಸೀಳಿ ಹೋಗಬಲ್ಲಂತಹ ದೇಹದಾರ್ಢ್ಯವೂ ಮಿಂಚಿನಿಂದ ಮಾಡಿದಂತಹ ನುಣುಪೂ ಚೆನ್ನಾಗಿ ಅರೆದ ಚಂದನದ ಲೇಪವೂ ಧರಿಸಿದ ಜವಿಯ (ಕೂದಲಿನ) ದಂಡೆಯೂ ಮದದಾನೆಯ ಸೊಂಡಿಲಂತಿರುವ ಕರಿಯ ದೊಣ್ಣೆಯೂ ಭೀಕರತೆಯನ್ನೂ ಅದ್ಭುತವನ್ನು ಬೀರುತ್ತಿರಲಾಗಿ -

೬೮. ಕಡೆದು ಮಾಡಿದಂತಿರುವ ಮೈಕಟ್ಟೂ ಕಂಡರಿಸಿ ಕೂಡಿಸಿದಂತಿರುವ ಅವಯವಗಳೂ ಸಾಮರ್ಥ್ಯವನ್ನು ತೋರುತ್ತಿರಲಾಗಿ, ಮೈತುಂಬ ಚಂದನಗಂಧವನ್ನು ಲೇಪಿಸಿಕೊಂಡು ಕರಿಯ ಕೂದಲೂ ಚಲ್ಲಣವೂ ಚೆಲುವಾಗಿರಲು, ಚಂಡಿಕೆ ನಡುಗುವಂತೆ ತೋಳುಗಳನ್ನು ಚಪ್ಪರಿಸಿಕೊಳ್ಳುತ್ತಲೂ ಗರ್ಜಿಸುತ್ತಲೂ ಮದದಾನೆಯಂತೆ ಚಾಣೂರಮಲ್ಲನು ಮಂದಗತಿಯಿಂದ ಬಂದನು.

---

೧ ಲ್ಗೊಟ್ಟಂ (ಕಾ). ೨ ಭೂ (ಕಾ). ೩ ದದಿನಿ (ಮ). ೪ ಗೆ ಮೆಚ್ಚ (ಕ, ಪ). ಗೆ ಮುಚ್ಚ (ಮ). ೫ X (ಕ, ಪ). ೬ ಮೆ (ಕಾ). ೭ ತಾ (ಕ, ಮ, ಪ). ೮ ರು (ಕ, ಕಾ, ಪ). ೯ ವಿಜ (ಪ). ೧೦ ಯ (ಕ, ಕಾ, ಪ). ೧೧ ಡಿ (ಕ, ಮ, ಪ). ೧೨ ಲ್ವಿಂ (ಪ). ೧೩ ಬೆ (ಕಾ). ೧೪ ಬಿ (ಕಾ).

ಮಲ್ಲನ ಗಂಡಸ್ಥಳಿಗಳ
ವಲ್ಲದೆ ಕವಿದತ್ತು ಕಿವಿಯ ಕತ್ತುರಿಮದವೊಂ[೧]
ದಲ್ಲು[೧]ಗುವಂತಿರೆ ತನ್ನೊ
ಳ್ಪಲ್ಲಟಿಸಿ ಕರೀಂದ್ರ ಕಾಯ [೨]ಬಲ[೨]ಮುಂ ಚಲ[೩]ಮುಂ ೧೯

ನಗಮೆಂದೆ ಮೊಗಸಿ[೪] ಮುತ್ತುವ
ಮುಗಿಲಂತಿರೆ ಮಲ್ಲನಿಕ್ಕಿದಣ್ಪಿನ ಕಂಪಿಂ
ಗ[೫]ಗಿದಗಿದು ಮುಸುಱಿ ಮುತ್ತಿದು
ವಗಣಿತಮತಿ ಬಹಳ ಮದಮಧುವ್ರತ ಪಟ[೬]ಳಂ ೨೦

ಐರಾವಣದಯೆ ಪೆಱದನೆ
ವಾರಣಗಣವಾಸೆಯಿಂದೆ ಬರ್ಪಂತಿರೆ ಚಾ
ಣೂರನ ಪೆಱಗನೆ ಮುಷ್ಟಿಕ
ಧೀರೋದ್ಧತ ಮುಖ್ಯರಪ್ಪ ಮಲ್ಲರ್ಬಂ[೭]ದರ್ ೨೧

ವ|| ಬಂದು ಕಡಿತಮುಂ[೮] ಬಳಸಿಕೊಂಡಿರ್ಪ [೯]ಜೂದು[೯]ಗಾಱರಂ[೧೦]ತೆಯ [ಖ್ಬ]ಳಮಂ[೧೦] ಬಳಸಿಕೊಂಡು ಕುಳ್ಳಿರಲೊಡನೆ

ಎಡೆವಿಡದೆ ಮಲ್ಲಗಳನಂ
ಕುಡಿ[೧೧]ಮಿಂಚಿನ ತಟ್ಟಿ ಸುತ್ತಿದಂತಿರೆ ಬಾಳುಂ
ಕಡಿತಲೆಯುಂ ಹಲಗೆಯುಮವು
ಕಿಡಿಗುಟ್ಟೆ[೧೨] ಪಳಂಚೆ[೧೩] ಸುತ್ತಿದರ್ಕೂರಾಳ್ಗಳ್ ೨೨

೧೯. ಮಹಾಗಜದ ದೇಹಬಲವನ್ನೂ ಚಲವನ್ನೂ ಪಲ್ಲಟಿಸಿ ತೋರುವಂತೆ, ಆ ಜಟ್ಟಿಯ ಕಿವಿಯ ಕಸ್ತೂರಿ ಮದವು ಆತನ ಗಂಡಸ್ಥಲವನ್ನು ಅತಿಶಯವಾಗಿ ಕವಿದಿತ್ತು.

೨೦. ಇದೊಂದು ಬೆಟ್ಟವೆಂದು ಬಂದು ಮುತ್ತುವ ಮೋಡಗಳೋ ಏನೊ ಎಂಬಂತೆ ಆ ಜಟ್ಟಿ ಲೇಪಿಸಿಕೊಂಡ ಗಂಧದ ಕಂಪಿಗೆ ಮೋಹಿಸಿ ಅಸಂಖ್ಯಾತವಾದ ದುಂಬಿಗಳ ಹಿಂಡುಗಳು ಬಂದು ಬಂದು ಮುಸುರಿದುವು.

೨೧. ಐರಾವತವನ್ನು ಅನುಸರಿಸಿ ಆನೆಗಳ ಹಿಂಡು ಬರುವಂತೆ, ಚಾಣೂರನನ್ನು ಅನುಸರಿಸಿ ಮುಷ್ಟಿಕನೆ ಮೊದಲಾದ ಧೀರೋದ್ಧತ ಜಟ್ಟಿಗಳು ಬಂದರು.

ವ|| ಹಾಗೆ ಬಂದು, ಪಗಡೆ ಹಾಸನ್ನು ಸುತ್ತುವರಿದಿರುವ ಜೂಜುಗಾರರಂತೆ ಮಲ್ಲಯುದ್ಧದ ಅಖ್ಖಾಡವನ್ನು ಸುತ್ತುವರಿದು ಕುಳ್ಳಿರಲಾಗಿ -

೨೨. ಮಲ್ಲರಂಗವನ್ನು ಕುಡಿಮಿಂಚಿನ ಬೇಲಿ ಸುತ್ತಿಕೊಂಡಿರುವುದೊ ಏನೊ ಎಂಬಂತೆ ಖಡ್ಗ, ಕಡಿತಲೆ, ಗುರಾಣಿಗಳು ಕಿಡಿಗುಟ್ಟುತ್ತಿರಲಾಗಿ ಶಸ್ತ್ರಧಾರಿಗಳಾದ ಬಂಟರು ಸುತ್ತುವರಿದರು.

---

೧ ಮೊದಲಲ್ಲು (ಕ, ಪ). ಮೊದಲ್ಗು (ಮ). ೨ ಜಲ (ಮ). X (ಕ, ಪ). ೩ + ಕರ (ಕ, ಪ). ೪ ಸೆ (ಕಾ). ೫ ದ (ಕಾ, ಪ). ನ (ಕ). ೬ ಯ (ಕಾ). ೭ ರ್ವಂ (ಕ, ಮ, ಪ). ೮ ಮು (ಕ, ಪ). ೯ ಜೂಜು (ಮ), ಜಾದು (ಕ). ೧೦ ತಖಳನಂ (ಕಾ), ತೆಯಸ್ಟಳಮಂ (ಕ, ಮ). ೧೧ ಡು (ಕಾ, ಮ). ೧೨ ಟ್ಟಿ (ಕ, ಮ, ಪ). ೧೩ ಚಿ (ಪ).

ಶರನಿಧಿಯ ತೆರೆಗಳುಂ ದಿ
ಕ್ಕರಿಕುಳಮುಂ[೧] ಬಳಸಿದಂತೆ ನೆಲನಂ ನೆಲೆಯೊಳ್
ತುರಗದಳಮುಂ ಮದೇಭೋ
ತ್ಕರಮುಂ ಬಳಸಿದುವು ಮಲ್ಲರಂಗಮನಾಗಳ್ ೭೩

ವ|| ಅಂತು ಕಂಸಂ ಕೃಷ್ಣಂಗೆ [೨]ಕಿಡೆ[೨]ವಂದುದಂ ಕಂಡು ವಸುದೇವಂ ಬಲದೇವಂಬೆರಸು ಚಾತುರ್ದಂತಬಲಮಂ ಕೂಡಿಕೊಂಡು ನಿಯುದ್ಧರಂಗದ ಕೆಲದೊಳ್ ಯುದ್ಧಸನ್ನದ್ಧರಾಗಿ ರ್ದಾಗಳುದ್ಧತನಾಗಿರ್ದ ಕಂಸಂ ಪ[೩]ಡಿಯಜನಂ ಕರೆದು ಕಿವಿಯೊಳ್ ಪಚ್ಚುವುದುಮಾತನಂತೆ ಗೆಯ್ವೆನೆಂದು [೪]ಪೋಗಿ[೪] ಯಶೋದೆಗೆಂ[೫]ದಂ ನಿಮ್ಮ[೬] ಮಗನನೆಲ್ಲಿಗಾದೊಡಂ ಕಾಳೆಗವೆಂದೊಡೆ ಪೂಣಿಗನಾಗಿ ಪಜಿವಜೆಯಪ್ಪನಭ್ಯ[೭]ಸನಮುಂ ಬೆ[೮]ಸನಮುಳ್ಳೊಡೆ ಬಂದು ಚಾಣೂರಮಲ್ಲನೊಳ್ ಮಲ್ಲ್[೯]ವೋರ್ದು ಪರ್ವಕ್ಕೆ ನೆರೆದರಸುಮಕ್ಕಳ ಕಣ್ಗೆ ಪರ್ವಮಂ ಮಾಟ್ಕೆಂದು ಕಂಸಮಹಾರಾಜಂ ಬೆಸಸಿಯಟ್ಟಿ[೧೦]ದನಿವೆ[೧೦] ತಿವುರುಂ ತಿಳಕಮುಂ ಬೆರಸುತ್ತೂ[೧೧]ರಿಸಿಕೊಂಡು ಬರ್ಕೆ ಕೊಳ್ಳಿಮಾತನೆಲ್ಲಿದ[೧೨]ನೆಂಬುದುಂ ಯಶೋದೆ ಮುಗುಳ್ನಗೆ[೧೩] ನಗುತಿಂತೆಂದಳ್

ಎನ್ನ ಮಗನಾವ ತಿವುರಿಂ
ಮುನ್ನಿಕ್ಕಿದನಣ್ಣ ಶಕಟನಂ ಪೂ[೧೪]ತನಿ[೧೪]ಯಂ
ಪನ್ನಗನಂ ಯಮಳಾರ್ಜುನ
ರನ್ನರಕ [ನ[೧೫]]ನವನಿನ[೧೬]ಧಿಕನೇ ಚಾಣೂರಂ ೭೪

೭೩. ಭೂಮಿಯನ್ನು ಸಮುದ್ರದ ತೆರೆಗಳೂ ದಿಗ್ಗಜಗಳೂ ಬಳಸಿದಂತೆ ಆ ಮಲ್ಲರಂಗವನ್ನು ಅಶ್ವದಳಗಳೂ ಮದದಾನೆ ಪಡೆಗಳೂ ಬಳಸಿ ನಿಂತುವು.

ವ|| ಹೀಗೆ ಕಂಸನು ಕೃಷ್ಣನಿಗೆ ಕೇಡು ಬಗೆಯುವುದನ್ನು ಕಂಡು ವಸುದೇವನು ಬಲರಾಮನೊಡನೆ ಗಜಸೈನ್ಯ ಸಹಿತನಾಗಿ ಬಂದು, ಮಲ್ಲರಂಗದ ಪಕ್ಕದಲ್ಲಿ ಯುದ್ಧಕ್ಕೆ ಸಿದ್ಧನಾಗಿದ್ದನು. ಆಗ ಸೊಕ್ಕಿದ ಕಂಸನು ಪ್ರತೀಹಾರಿಯನ್ನು ಕರೆದು ಆತನ ಕಿವಿಯಲ್ಲೇನೊ ಪಿಸುಗುಟ್ಟಿದನು. ಆತನು "ಹಾಗೆಯೆ ಮಾಡುವನು" ಎಂದು ಹೋಗಿ ಯಶೋದೆಗೆ ಹೀಗೆಂದನು - "ನಿಮ್ಮ ಮಗನು ಎಲ್ಲಿಯಾದರೂ ಕಾಳಗವುಂಟೆಂದರೆ ಉತ್ಸುಕನಾಗಿ ಹೊರಡುವನು. ಕಾಳಗದ ಅಭ್ಯಾಸವೂ, ಆಸಕ್ತಿಯೂ ಇದ್ದ ಪಕ್ಷದಲ್ಲಿ ಬಂದು, ಚಾಣೂರಮಲ್ಲನೊಡನೆ ಮಲ್ಲಗಾಳಗ ಮಾಡಿ ಹಬ್ಬಕ್ಕೆ ನೆರೆದಿರುವ ಅರಸುಮಕ್ಕಳ ಕಣ್ಣಿಗೆ ಹಬ್ಬವನ್ನುಂಟುಮಾಡಲಿಯೆಂದು ಕಂಸಮಹಾರಾಜನು ಆಜ್ಞಾಪಿಸಿ ಕಳಿಸಿರುವನು. ಇಗೋ, ಈ ಗಂಧಲೇಪನವನ್ನೂ ತಿಲಕವನ್ನೂ ಚೆನ್ನಾಗಿ ಧರಿಸಿಕೊಂಡು ಬರಲಿ. ತೆಗೆದುಕೊಳ್ಳಿ. ಆತನು ಎಲ್ಲಿರುವನು?" ಈ ಮಾತಿಗೆ ಯಶೋದೆ ಮುಗುಳ್ನಗುತ್ತ ಹೀಗೆಂದಳು—

೭೪. "ಶಕಟಾಸುರ, ಪೂತನೆ, ಕಾಳಿಯಸರ್ಪ, ಮತ್ತಿಯ ಮರಗಳಾಗಿದ್ದ ಅಸುರರು, ನರಕಾಸುರ - ಇವರನ್ನೆಲ್ಲ ಮುರಿದೊಗೆಯುವಾಗ ನನ್ನ ಮಗನು ಯಾವ ತಿಗುರು ಇಟ್ಟುಕೊಂಡಿದ್ದನು, ಹೇಳು? ಈ ಚಾಣೂರನೆಂಬುವನೇನು ಅವರೆಲ್ಲರಿಗಿಂತ ಹೆಚ್ಚಿನವನೆ?

---

೧ ಮಂ (ಕ, ಕಾ, ಪ). ೨ ಕಿಡಿ (ಕ, ಮ). ಕಡಿ (ಪ). ೩ ಪಿ (ಕ). ೪ X (ಮ). ೫ ಗಿಂತೆಂ (ಮ). ೬ ನ್ನ (ಕ, ಮ, ಪ). ೭ ವ್ಯ (ಕ, ಪ). ವೆ (ಮ). ೮ ಬ್ಯ (ಕ), ವ್ಯ (ಪ), ಬ (ಮ). ೯ ಲ್ಲು (ಕಾ). ೧೦ ದಂ ನೀವೆ (ಪ), ದಪನಿವೆ (ಮ). ೧೧ ದ್ದೂ (ಕಾ), ತ್ತೂ (ಮ). ೧೨ ರ್ದ (ಮ). ೧೩ + ಯಂ (ಕಾ). ೧೪ ತನೆ (ಕಾ). ತಿನೆ (ಮ). ೧೫ ಲಿ (ಕ), ರಿ (ಕಾ, ಮ). ೧೬ ಗ (ಕ).

ವ॥ ನಿಜದಿಂ ಕೂರ್ಪು[೧]ಳ್ಳುದು[೧]ಮಂ ಕತ್ತರಿವಾಣಿಯುಮಂ ಮಸೆಯಲೇಕೆ ಸಿಂಗಮಾನೆಯಂ ಮುಱಿವಲ್ಲಿಗಾವಭ್ಯಾಸಮಂ ಮಾಡಿದುದು ಮುರಾಂತಕನುಂ ಅಂ[೨]ತಕನುಂ ಕೊಲ್ವುದನಿನ್ನು ಕಲ್ತಪರೆ ಕೇಳಿಮೆನ್ನ ಮಗಂ ನೀರೊ[೩]ಳ್ನಾನಂ[೩] ಬಿಸಿಲೊಳ್ಬಾಡಂ ಬೆಂಕೆಯೊಳ್ಬೆಯ್ಯಂ ಜವನ ಕೆಯ್ಯೊಳ್ ಸಾಯನೇನುಂ ಬೇಡೊಡಗೊಂಡು ಪೋಗಿ[೪]ಮೆಂಬ[೪]ನಿತಕ್ಕೆ ಅಂಬುಜೋದರಂ ಬಂದಬ್ಬ[೫] ಪಸಿದೆನೆಂಬುದುಂ ಯಶೋದೆಯಿಂತೆಂದಳ್

ಸಮೆದೆಂ[೬] ಮೊಸರಂ ಬಾಳ್ಕೊ[೭]ಸ
ರುಮನಾಂ ಘನವಾಗಿ ತಂ[೮]ದೆನಿ[೯]ಕ್ಕಿದಪೆಂ ಲಂ
ಚಮನೆನ್ನ ಮಲ್ಲ ಚಾಣೂ
ರಮಲ್ಲನಂ ಮುಱಿದು ಬಂದು ಹಸಿವಂ ಮುಱಿಯಾ ೭೫

ವ॥ ಅನಿತರ್ಕೆ ನಿನ್ನ ಪೊಡರ್ಪುಂ ಪಸಿವುಂ[೧೦] ಕೂರಿತಕ್ಕುಮೆಂಬುದು ಮಕ್ಕಟಾ ಸಗ್ಗಮೆ ಕಾಳೆಗಮುಳ್ಳೊ[೧೧]ಡೆ ಕೂಟೇವುದೆಂದು ಪಡಿಯಱರನೀ[೧೧] ಬಂದೆನೆ[೧೨] ನಡೆಯಿಮೆಂದು ಮುಂದೆ ಕಳಿಪಿತಾನುಱೆಯೆ ತನ್ನೋರಗೆಯ ಗೋವರೆಲ್ಲರಂ ಮಲ್ಲವಸದನಂಗೊಳಿಸಿ ತಾಯಿಗೆಱಗಿ ಪೊಡೆವ[೧೩]ಟ್ಟನಂ[೧೩] ಯಶೋದೆ ವೀರಶ್ರೀಗಾಣ್ಮನಾಗೆಂದು ಪರಸೆ[೧೪] ಪರಕೆಯನಾಂತು ಗೋವ[೧೪]

ಹುಟ್ಟಿನಿಂದಲೆ ಹರಿತವಾಗಿರುವುದನ್ನೂ ಕತ್ತರಿವಾಣಿಯನ್ನೂ ಮಸೆಯುವ ಅಗತ್ಯವಿದೆಯೆ? ಆನೆಯನ್ನು ಕೊಲ್ಲುವ ಸಿಂಹಕ್ಕೆ ಯಾರು ಮೊದಲು ಅಭ್ಯಾಸ ಮಾಡಿಸುವರು? ಮುರಾಂತಕನೂ (ಕೃಷ್ಣನೂ), ಯಮದೇವನೂ ಕೊಲ್ಲುವುದನ್ನು ಇನ್ನು ಕಲಿತುಕೊಳ್ಳುವುದುಂಟೆ? ಕೇಳು. ನನ್ನ ಮಗನು ನೀರಲ್ಲಿ ನೆನೆಯುವುದಿಲ್ಲ, ಬಿಸಿಲಲ್ಲಿ ಬಾಡುವುದಿಲ್ಲ, ಬೆಂಕಿಯಲ್ಲಿ ಬೇಯುವುದಿಲ್ಲ, ಯಮನ ಕೈಯಲ್ಲಿಯೂ ಸಾಯುವವನಲ್ಲ, ನಿನ್ನದೇನೂ ಬೇಡ - ಮರಳಿ ತೆಗೆದುಕೊಂಡು ಹೋಗು" ಹೀಗೆ ಅವಳು ಹೇಳುವಷ್ಟರಲ್ಲಿ ಕೃಷ್ಣನು ಬಂದು "ಅಮ್ಮ ಹಸಿವಾಗಿದೆ" ಎಂದನು. ಆಗ ಯಶೋದೆಯೆಂದಳು -

೭೫. "ಮಗು, ಮೊಸರನ್ನು ಮಾಡಿಟ್ಟಿದ್ದೇನೆ. 'ಬಾಳ್ಕೊಸರ'(?)ನ್ನೂ ತಂದಿದ್ದೇನೆ. ಮಲ್ಲನನ್ನು ನಿನಗೆ ಲಂಚವಾಗಿ ಕೊಡುವೆನು. ಚಾಣೂರಮಲ್ಲನನ್ನು ಮುರಿದು ಬಂದು ನಿನ್ನ ಹಸಿವನ್ನು ಮುರಿ.

ವ॥ ಅಷ್ಟು ಹೊತ್ತಿಗೆ ನಿನ್ನ ಸಾಮರ್ಥ್ಯ ಹಾಗೂ ಹಸಿವು ಎರಡೂ ತೀಕ್ಷ್ಣವಾಗುವುವು" ಈ ಮಾತನ್ನು ಕೇಳಿದೊಡನೆ ಕೃಷ್ಣನು, "ಓಹೋ ಸ್ವರ್ಗವೇ ಬಂದಂತಾಯಿತು. ಕಾಳೆಗವಿರುವಾಗ ಊಟವೇತಕ್ಕೆ?" ಎಂದು ನುಡಿದು, "ನಾನು ಈಗಲೆ ಬಂದೆ ನೀನು ನಡೆ"ಯೆಂದು ಪ್ರತೀಹಾರನನ್ನು ಮುಂದೆ ಕಳಿಸಿ, ತನ್ನ ಓರಗೆಯ ಗೋಪಕುಮಾರರೆಲ್ಲರನ್ನೂ ಕೂಡಿಸಿಕೊಂಡು ಅವರಿಗೆ ಜಟ್ಟಿಗಳಂತೆ ವೇಷ ತೊಡಿಸಿ ತಾಯಿಗೆ ತಲೆಬಾಗಿ, "ಜಯಲಕ್ಷ್ಮಿಗೆ

---

೧ ಳ್ಪನು (ಕ, ಕಾ, ಪ). ೨ X (ಕಾ) ೩ ಳ್ನಾದಂ (ಕಾ). ಳ್ನನೆಯಂ (ಮ). ೪ ಯೆಂಬ (ಮ), ಯೆಂಬಿ (ಕ). ೫ ಬ್ಬ (ಕಾ) ೬ ದಿಂ (ಕಾ). ೭ ರ್ಮ್ೂ (ಕಾ). ೮ ದಿ (ಕಾ). ೯ ಮಿಂ (ಕ). ೧೦ ಳ್ಗ (ಕಾ). ೧೧ ನಿಂ (ಕಾ). ನೀಗವೆ (ಮ). ೧೨ X (ಮ). ೧೩ ಟ್ಟೊಡೆ (ಮ) ೧೪ ಸಿ (ಕ, ಕಾ). ೧೫ + ೪ (ಕಾ).

ರೊತ್ತುವ ತಿತ್ತಿರಿಗಾಳೆಯ ತೂತ್ಕಾರಮುಮೂದುವ ಕೊಳಲ ಸರಮುಂ ಪಿಡಿವ ಕೊಂಬಿನ ನಿನ[೧]ದಮುಂ ಪೊಯ್ವೆಕ್ಕವದ್ದಳೆಯ ದ[೨]ನಿಯುಂ ಉದ್ದುವ ಜುಂಜೆ[೩]ಯ ರವಮುಂ ಬಾರಿಪ ಜಂ[೪]ಕರದ ಜಂಕರಮುಂ ರ[೫]ವಳಿಯಂ ನೆರಪೆ ನರಪತಿಯ ಪುರಕ್ಕಾಗಿ ನರಕಮಥನಂ ಮಸಗಿ ಬರ್ಪನನ್ನೆಗಂ [೬]ಮುಂದೆ[೬] ಕಂಸಱನಿಂ ಮುಂದೊಂದು[೭] ಕಾಲಮುಪಕೃತನಾದ ಮಧುವೆಂಬ ದಾನವನವನ ಬೆಸ[೮]ದಿವಸ[೮]ಗನಾಗಿ ವಿಸರುಹೋದರನನಸಗವೊಯ್ಲು ವೊಯ್ವನೆಂದು ಬಂದೊಗೆಯುತ್ತುಮಿರ್ಪ ಮಡಿವಳನ ಮುಂದಣ ಮಡಿಯುಮಂ ತನ್ನೊಡನೆಯ ಗೋವಳಿಗರುಟ್ಟ ಮೈಲಗೆಯುಮಂ ಮಧುಸೂದನಂ ಕಂಡು ಸಮೀಪಕ್ಕೆ ವಂದು

ಒಗೆದೊಗೆದು ಮುರಿದು [೯]ಮುರಿದಾ[೯]
ಜಗುನೆಯೊಳಳೊಲೆದೊಲೆದು[೧೦] ಪಿಂಡುತಿರ್ಪ[೧೧]ನನೀ ಸೀ
ರೆಗಳನುಡಲೀವುದೆಮಗೆನೆ
ಜಗಳಂ ಜಕ್ಕುಲಿಸಿದಂತೆ ನಕ್ಕಂ ರಜಕಂ ೭೬

ವ॥ ನಕ್ಕು [೧೨]ಕೇಳೀ[೧೨] ಸೀರೆಗಳಂ ಕಂಸದೇವನುಡುಗುವೆಂ[೧೩]ದಾತನ ಬೀಱುಡೆಯುವರುಮುಡುಗುವುಲ್ಲದೆಡೆಯು ಕಡೆಯು ಬಡವರುಡಬಾರದೆನೆ ಮುಕುಂದನಿವನಂದಮಕ್ಕುಮೆಂದು ಮತ್ತಂ ಕೀಱೆ ಬೇಡೆ

ಒಡೆಯನಾಗು" ಎಂಬ ಯಶೋದೆಯ ಹರಕೆಯನ್ನು ಪಡೆದು, ಗೋವಳಿಗರು ಊದುವ ತಿತ್ತಿರಿ ಗಾಳೆಯ, ಕೊಳಲುಗಳ, ಕೊಂಬುಗಳ, ಬಾರಿಸುವ ಎಕ್ಕ ಮದ್ದಳೆಯ, ರುಂಜೆಯ, ಜಂಕರವಾದ್ಯದ ಧ್ವನಿಗಳೆಲ್ಲ ಸೇರಿ ರಣಘೋಷವನ್ನುಂಟುಮಾಡಲಾಗಿ ಕಂಸರಾಜನ ಪಟ್ಟಣಕ್ಕೆಂದು ಕೃಷ್ಣನು ರಭಸದಿಂದ ಬರುತ್ತಿದ್ದನು. ಪೂರ್ವದಲ್ಲೊಮ್ಮೆ ಕಂಸನಿಂದ ಉಪಕೃತನಾಗಿದ್ದ ಮಧುವೆಂಬ ರಾಕ್ಷಸನು ಕಂಸನ ಅಪ್ಪಣೆಯಮೇರೆಗೆ ಅಗಸನಾಗಿ, ಕೃಷ್ಣನನ್ನು ಬಟ್ಟೆಯಂತೆ ಕಲ್ಲಮೇಲೆ ಎತ್ತಿ ಕುಕ್ಕುವ ಬಯಕೆಯಿಂದ ಬಂದು ಊರಮುಂದೆ ಬಟ್ಟೆಗಳನ್ನು ಒಗೆಯುತ್ತಿದ್ದನು. ಆ ಅಗಸನು ಮುಂದಿದ್ದ ಮಡಿ ಬಟ್ಟೆಗಳನ್ನೂ ತನ್ನ ಸಂಗಡದ ಗೋಪರು ಉಟ್ಟಿದ್ದ ಮೈಲಗೆ ಬಟ್ಟೆಗಳನ್ನೂ ನೋಡಿ ಕೃಷ್ಣನು ಅಗಸನ ಬಳಿಗೆ ಬಂದು -

೭೬. ಒಗೆದು ಒಗೆದು, ಯಮುನಾನದಿಯಲ್ಲಿ ಬಟ್ಟೆಗಳನ್ನು ಹಿಂಡುತ್ತಿದ್ದವನನ್ನು ಕುರಿತು, "ಈ ವಸ್ತ್ರಗಳನ್ನು ನಮಗೆ ಉಡಲು ಕೊಡು" ಎಂದೊಡನೆ ಜಗಳಕ್ಕೆ ಎಳೆಯುವಂತೆ ಅಪಹಾಸದಿಂದ ಆ ಅಗಸನು ನಕ್ಕನು.

ವ॥ ಹಾಗೆ ನಕ್ಕು "ಈ ವಸ್ತ್ರಗಳನ್ನು ಕಂಸ ಮಹಾರಾಜನು ಉಡುವನು; ಅವನು ಉಟ್ಟುಬಿಟ್ಟಮೇಲೆ ಪರಿಚಾರಕರು ಉಡುವರು. ಎಲ್ಲಿಯವೋ ಲೆಕ್ಕಕ್ಕೆ ಬಾರದ ಬಡವುಗಳು ಇವುಗಳನ್ನು ಉಡಬಾರದು" ಎಂದನು. ಕೃಷ್ಣನು ಇವನ ಅಂದವನ್ನು ನೋಡೋಣವೆಂದು ಮತ್ತೆ ಒತ್ತಾಯ ಪಡಿಸಿ ಬೇಡಲಾಗಿ—

೧ ನಾ (ಮ). ೨ ಧ್ವ (ಕ, ಮ). ೩ ಚೆ (ಕ, ಪ), ೪ ಚೀಂ (ಕ, ಪ). ಜಿಂ (ಮ). ೫ ತ (ಮ). ೬ X (ಕ, ಪ). ೭ ನ ಬೆಸದಿಂ ಮುಂದೊಂದೆಡೆಯೊಳ್ (ಮ). ೮ ದಿಂದ (ಮ). ೯ X (ಕ, ಮ, ಪ). ೧೦ ಳಗಲೊಗೆದುಂ (ಕ, ಮ, ಪ). ೧೧ + ರಜಕ (ಕ, ಮ, ಪ). ೧೨ ರಜಕಂ (ಕ, ಪ). ೧೩ ಮೊಂ (ಕಾ).

ಅಣ್ಣಿಪೆಯದರಸರುಡುವೀ
ಬಣ್ಣಂಗಳನುಡಲೆ ಬಯಸಿದಣ್ಣನ ನೊಸಲೊ
ಳ್ಕಣ್ಣುಂಟೆ ತೋಱಿ[1] ನೊಸಲೊಳ್
ಕಣ್ಣುಳ್ಳನುಮಾಱಮಾರ್ಪೊಡುಡುವನೆ ತೊವಲಂ ೭೭

ವ|| ಎನೆ ವನಮಾಳಿ ಮಾಳಾಪ್ರಪಂಚಂ ಬೇಡ ಬಿಡು ಬಿಡೆಂದು ರಣ ರಂಗಾರ್ಥಿಯಾಗಿ ರಂಗಕಾಱನ ಕೆಯ್ಯ ಸೀರೆಯಂ ಸೆಳೆಯ[2]ಲನುಗೆಯ್ಯ[2]ಲೊಡನೆ

ಕಟ್ಟಣ್ಮಕಾಱನಿವನಿ
ನ್ನುಟ್ಟಲ್ಲದೆ ಮಾಣನುಡಿಸುವೆಂ ಗಡಮಿವನಾ
ನುಟ್ಟಪೆನೆಂಬನ ಮುನ್ನ
ಳ್ಳುಟ್ಟುದುಮಂ ಸುಲಿದು ದೇಸೆಯಂ[3] ಕಾಸೆಯುಮಂ ೭೮

ವ|| ಇವಂ ಮುಟ್ಟಿದೊಡೆ ಕಂಸದೇವನಾಣೆಯೆನೆ ನೀಂ ಕುಡದೊಡೆ ಕಂಸದೇವನಾಣೆಯೆಂದ ಪೀ[4]ತಾಂಬರಂ[5]ಗಳಂ[5]ಬರನೇ ರಜಕನಂಬರಂಬರಂ ತುಂಬುರ[6]ಕೊಳ್ಳಿ[6]ಯಂತೆ ಸಿಡಿದಿಂತಪ್ಪ ಸಿತಗನನೆಲ್ಲಿಯುಂ ಕಾಣೆನಾಣೆಗೆ ಮಾಱಾಣೆಯಿಟ್ಟಪಂ ನಾಯ ಬಾಯ ಸೀರೆಯಪ್ಪೊಡೀ[7] ಸೀರೆಯತ್ತ ಸಾರೆಂದು ಮುಂದೀ[8]ಡಾಡಿ

೭೭. “ಅರಸರು ಉಡಬೇಕಾದ ಅಚ್ಚಳಿಯದ ಈ ಬೆಲೆಯುಳ್ಳ ಬಟ್ಟೆಗಳಿವು. ಇವುಗಳನ್ನು ಉಡಬಯಸಿದ ಅಣ್ಣನಿಗೇನು ಹಣೆಯಲ್ಲಿ ಕಣ್ಣುಂಟೆ? ಹಣೆಗಣ್ಣನಿಗೂ ಇವುಗಳನ್ನು ಉಡುವ ಯೋಗ್ಯತೆಯಿಲ್ಲ; ಇದ್ದರೆ ತೊಗಲನ್ನೇಕೆ ಉಡುವನು, ಹೇಳು”?

